Notes

## ಬ್ಲಾಕ್–1 ಭಾರತದಲ್ಲಿ ಪ್ರಾಥಮಿಕ ಶಿಕ್ಷಣ: ಪೂರ್ವಾನುದರ್ಶನ

**ಬ್ಲಾಕಿನ ಘಟಕಗಳು**

ಘಟಕ 1 ಭಾರತದ ಶಿಕ್ಷಣ ವ್ಯವಸ್ಥೆ –1
ಘಟಕ 2 ಭಾರತದ ಶಿಕ್ಷಣ ವ್ಯವಸ್ಥೆ – 2
ಘಟಕ 3 ಮೂಲಭೂತ ಹಕ್ಕಾಗಿ ಶಿಕ್ಷಣ
ಘಟಕ 4 UEE ನ ಸಂಘಟನೆ ಸ್ವರೂಪ

**ಘಟಕ –1 ಭಾರತದ ಶಿಕ್ಷಣ ವ್ಯವಸ್ಥೆ –1**

ಸ್ವರೂಪ

**1.0 ಪೀಠಿಕೆ**

1.1 ಕಲಿಕೆಯ ಉದ್ದೇಶಗಳು
1.2 ಪ್ರಾಚೀನ ಭಾರತದ ಶಿಕ್ಷಣ – ಒಂದು ಸಂಕ್ಷಿಪ್ತ ಅವಲೋಕನ
1.2.1 ಗತಕಾಲದಲ್ಲಿನ ಗುರು ಪರಿಭಾವನೆ
1.2.2 ಗುರುವಿನ ಪಾತ್ರ ಮತ್ತು ಜವಾಬ್ದಾರಿಗಳು
1.2.3 ಇಂದಿನ ಶಿಕ್ಷಕ ಉದ್ಯೋಗಿಯಾಗಿ
1.2.4 ಶಿಕ್ಷಕನ ಲಕ್ಷಣಗಳು, ಪಾತ್ರಗಳು ಮತ್ತು ಜವಾಬ್ದಾರಿಗಳು
1.3 ಇಂದಿನ ಭಾರತದ ಶಿಕ್ಷಣದ ಆರಂಭ : ಸ್ವಾತಂತ್ರ್ಯ ಪೂರ್ವ ಅವಧಿ
1.3.1 ಮೆಕಾಲೆಯವರ ಟಿಪ್ಪಣಿ
1.3.2 ವುಡ್ಸ್‌ರ ಸರಕಾರಿ ವರದಿ
1.3.3 ಹಂಟರ್ ಆಯೋಗ
1.3.4 ವಿಶ್ವವಿದ್ಯಾನಿಲಯಗಳ ಆಯೋಗ
1.3.5 ಸ್ಯಾಡ್ಲಾರ್ ಆಯೋಗ
1.3.6 ಹರ್ಟಾಗ್ ಸಮಿತಿ
1.3.7 ಸಪ್ರು ಸಮಿತಿ
1.3.8 ಅಬ್ಬಾಟ್ □ ವುಡ್‌ಸಮಿತಿ
1.3.9 ಜಾಕೀರ್ ಹುಸೇನ್ ಸಮಿತಿ ವರದಿ
1.3.10 ಸರ್‌ಜಿಯಾಂಟ್ ವರದಿ
1.4 ಈ ಘಟಕದ ಸಾರಾಂಶ
1.5 ಹೆಚ್ಚಿನ ಮಾಹಿತಿಗಾಗಿ ಗ್ರಂಥಗಳು ಮತ್ತು ಪರಮಾರ್ಶನ ಗ್ರಂಥಗಳು
1.6 ಘಟಕ ಅಂತ್ಯ ಪ್ರಶ್ನೆಗಳು

**ಪೀಠಿಕೆ :**

ಇಂದು ಪ್ರಾಥಮಿಕ ಶಿಕ್ಷಣದ ಸಾರ್ವತ್ರಿಕರಣವು (**UEE**) ಜಾಗತಿಕ ಅಂಶವಾಗಿ ಪರಿಣಮಿಸಿರುವುದನ್ನು ನೀವು ತಿಳಿದುಕೊಂಡಿರುವಿರಿ. **UEE** ಯನ್ನು ಒಂದು ಪ್ರಮುಖ ಮಿಲೆನಿಯಂ ಗುರಿಯನ್ನಾಗಿ ನಿಗಧಿಪಡಿಸಲಾಗಿದೆ. ಹಾಗೂ ಇದನ್ನು ಎರಡನೆ ಜೀವನಾಧಾರ

ಅನಕ್ಷರತೆಯನ್ನು ನಿರ್ಮೂಲನೆ ಮಾಡಲು ಹಾಗೂ **UEE** ಯನ್ನು ಸಾಧಿಸಲು ಕಳೆದ ಅರ್ಧ ಶತಮಾನದಲ್ಲಿ ನಿರಂತರವಾಗಿ ಮಾಡಿದ ಪ್ರಯತ್ನಗಳು ಇಂದು ಫಲ ಕೊಡಲಾರಂಬಿಸಿವೆ. ಸುಧಾರಿತ ದಾಖಲಾತಿ, ಶಾಲೆಯಲ್ಲಿ ಹಿಡಿದಿಟ್ಟುಕೊಳ್ಳುವಿಕೆ ಶಿಕ್ಷಕ ವಿದ್ಯಾರ್ಥಿ ಅನುಪಾತ, ಹೆಚ್ಚಿನ ಸಾಕ್ಷರತೆ ದರ, ಉತ್ತಮ ಮೂಲಸೌಲಭ್ಯಗಳು ಮತ್ತು ಅವುಗಳ ಬೆಳವಣಿಗೆಯೊಂದಿಗೆ ನಾವು ಬೃಹತ್ ಶಿಕ್ಷಣ ವ್ಯವಸ್ಥೆಯನ್ನು ನಿರ್ಮಿಸಿದ್ದೇವೆ. ಆದಾಗ್ಯೂ ಸಾಕ್ಷರತೆಯ ಚಟಳುವಳಿಗಳಾದ **NAEP, DPEP, SSA, RTE** ಮುಂತಾದ ರಾಷ್ಟ್ರೀಯ ಮೂಲ ಚಳುವಳಿಗಳಾದಾಗ್ಯೂ ದಶಲಕ್ಷಗಟ್ಟಲೆ ಮಕ್ಕಳು ಇಂದಿಗೂ ಶಾಲೆಯಿಂದ ಹೊರಗುಳಿದಿದ್ದಾರೆ. ಸಾವಿರಾರು ಶಿಕ್ಷಕರನ್ನು ನೇಮಕ ಮಾಡಿಕೊಳ್ಳಬೇಕಾಗಿದೆ ಹಾಗೂ 2015 ರೊಳಗಾಗಿ ಸುಮಾರು 10 ಲಕ್ಷ ತರಬೇತಿ ಹೊಂದಿಲ್ಲದ ಶಿಕ್ಷಕರಿಗೆ ತರಬೇತಿ ನೀಡಬೇಕಾಗಿದೆ. ಆದ್ದರಿಂದ ಶಿಕ್ಷಕ ಶಿಕ್ಷಣ ಕಾರ್ಯಕ್ರಮದ ರಾಷ್ಟ್ರೀಯ ಮುಕ್ತ ಶಾಲೆಯ ಪ್ರಾಥಮಿಕ ಶಿಕ್ಷಣದ ಡಿಪ್ಲಮೋ (**DEIEd**) ಪ್ರಾಮುಖ್ಯತೆ ಪಡೆದಿದೆ.

ನಾವು ಈ ಕಾರ್ಯಕ್ರಮದ ಮೊದಲ ಕೋರ್ಸಿನ ಪ್ರಾರಂಭದಲ್ಲಿದ್ದೇವೆ. ಈ ಕೋರ್ಸಿನ ಮೊದಲ ಘಟಕ ಇದು. ಈ ಘಟಕವು ಪ್ರಾಚೀನ ಸಮಯದಿಂದ ಸ್ವಾತಂತ್ರ್ಯ ಪೂರ್ವ ಅವಧಿಯವರೆಗಿನ ಭಾರತದ ಶಿಕ್ಷಣದ ಐತಿಹಾಸಿಕ ಸಿಂಹಾವಲೋಕನವನ್ನು ನೀಡುತ್ತದೆ.

ವಿಶ್ವದಲ್ಲೇ ಭಾರತೀಯ ಸಂಸ್ಕೃತಿ ಒಂದು ಹಳೆಯ ಸಂಸ್ಕೃತಿ ಎನ್ನುವುದನ್ನು ನೀವು ತಿಳಿದುಕೊಂಡಿರುವಿರಿ. ಯಾವುದೇ ನಾಗರೀಕತೆಯ ಸಾಂಸ್ಕೃತಿಕ ಜೀವನ ಮತ್ತು ರಾಷ್ಟ್ರದ ಆದರ್ಶಗಳು ಅವುಗಳ ಶಿಕ್ಷಣ ಸಂಸ್ಥೆಗಳು ಅನುಸರಿಸುತ್ತಿರುವ ಆಚರಣೆಗಳ ಮೂಲಕ ಪ್ರತಿಬಿಂಬಿಸಲ್ಪಡುತ್ತವೆ. ವಾಸ್ತವವಾಗಿ ನಿಮಗೆ ತಿಳಿದಿರುವಂತೆ ನಾಗರೀಕ ಸಮಾಜದಲ್ಲಿ ಶಾಲೆ ಎನ್ನುವ ಸಂಸ್ಥೆ ಮತ್ತು ಶಿಕ್ಷಣದ ಪ್ರಕ್ರಿಯೆಗಳು ಸಮಾಜದ ಸೃಷ್ಟಿ, ಅಭಿವೃದ್ಧಿ, ಸಂರಕ್ಷಣೆ ಮತ್ತು ಸಮುದಾಯದ ಸಂಸ್ಕೃತಿಗಾಗಿ ಪ್ರಾರಂಭವಾಗಿವೆ. ಇದು ನಮ್ಮ ದೇಶದಲ್ಲಿ ಸಂಭವಿಸಿದೆ. ಭಾರತೀಯ ಶಿಕ್ಷಣ ವ್ಯವಸ್ಥೆಯಲ್ಲಿ ಶ್ರೀಮಂತ ಸಾಂಸ್ಕೃತಿಕ ಹಿರಿಮೆಯನ್ನು ಅಡಕಗೊಳಿಸಲಾಗಿದೆ. ಅನೇಕ ನ್ಯೂನತೆಗಳ ನಡುವೆಯೂ ಸಾಮಾಜಿಕ ಪುನರ್‌ನಿರ್ಮಾಣ ಮತ್ತು ಅಭಿವೃದ್ಧಿಗೆ ಶಿಕ್ಷಣ ಶಕ್ತಿದಾಯಕ ಪರಿಕರವಾಗಿ ಉಳಿದುಕೊಂಡಿದೆ.

ಪ್ರಾಚೀನ ಭಾರತದ ಶೈಕ್ಷಣಿಕ ಆಚರಣೆಯನ್ನು ಸಂಕ್ಷಿಪ್ತವಾಗಿ ವಿಮರ್ಶಿಸಿದಾಗ ಹಾಗೂ ಅಂದಿನ ಐತಿಹಾಸಿಕ ಅವಧಿಯಲ್ಲಿ ಹೇಗೆ ಶಿಕ್ಷಕ ಮತ್ತು ಶೈಕ್ಷಣಿಕ ಸಂಸ್ಥೆಗಳು ಮುದ್ರಣದ ಸೌಲಭ್ಯವಿಲ್ಲದಿರುವಾಗ ಅಥವಾ ಯಾವುದೇ ಮಾಹಿತಿ ಮತ್ತು ಸಂಪರ್ಕದ ತಂತ್ರಜ್ಞಾನ (**ICT**) ಇಲ್ಲದಿರುವಾಗಲೂ ಜನ ಸಮುದಾಯಕ್ಕೆ ಶಿಕ್ಷಣವನ್ನು ಹೇಗೆ ತಲುಪಿಸುತ್ತಿದ್ದರು ಎನ್ನುವುದು ಆಸಕ್ತಿದಾಯಕ ಅಂಶವಾಗಿ ಕಂಡುಬರುತ್ತದೆ. ನೀವು ಹಿಂದಿನ ಭಾರತದ ಶಿಕ್ಷಣದ ಬೇರುಗಳನ್ನು ಹುಡುಕಬಹುದು ಹಾಗೂ ಇಂದಿಗೆ ಅವುಗಳ ಸಮಂಜಸತೆಯು ಆಸಕ್ತಿದಾಯಕವಾಗಿ ನಿಮಗೆ ಕಾಣಬಹುದು.

ಈ ಘಟಕದಲ್ಲಿ ಪ್ರಾಚೀನ ಭಾರತದ ಶೈಕ್ಷಣಿಕ ಆಚರಣೆಗಳನ್ನು ಸಂಕ್ಷಿಪ್ತವಾಗಿ ವಿಮರ್ಶೆ ಮಾಡಲಾಗಿದೆ. ನಾವು 'ಗುರು' ಶಿಕ್ಷಕನ ಬದಲಾಗುತ್ತಿರುವ ಪಾತ್ರ ಮತ್ತು ಜವಾಬ್ದಾರಿಗಳನ್ನು ತಿಳಿದುಕೊಳ್ಳುತ್ತೇವೆ. ಇವಲ್ಲದೇ ಬ್ರಿಟಿಷ್‌ರಾಜ್ ಅವಧಿಯಲ್ಲಿ ಭಾರತದ ಶಿಕ್ಷಣದ ಬೆಳವಣಿಗೆಗೆ ವಿವಿಧ ಆಯೋಗಗಳು ಮತ್ತು ಸಮಿತಿಗಳ ಮುಖ್ಯ ಶಿಫಾರಸ್ಸುಗಳನ್ನೂ ವಿಮರ್ಶೆ ಮಾಡಲಾಗಿದೆ. 1947 ರ ತನಕ ನಾವು ಮುಕ್ತ ಸ್ವತಂತ್ರ ರಾಷ್ಟ್ರವಾಗುವ ತನಕ ಈ ದೇಶದಲ್ಲಿ ಯಾವ ರೀತಿ ಪ್ರಾಥಮಿಕ ಶಿಕ್ಷಣ ಅಭಿವೃದ್ಧಿ ಹೊಂದಿದೆ ಎನ್ನುವುದನ್ನು ನಾವು ಕಾಣುತ್ತೇವೆ.

## 1.1 ಕಲಿಕೆಯ ಉದ್ದೇಶಗಳು

ಈ ಘಟಕವನ್ನು ಓದಿದ ನಂತರ ನೀವು ಈ ಕೆಳಗಿನವುಗಳನ್ನು ಅರ್ಥಮಾಡಿಕೊಳ್ಳಲು ನೀವು ಸಮರ್ಥರಾಗುವಿರಿ.

- ಪ್ರಾಚೀನ ಭಾರತದ ಶೈಕ್ಷಣಿಕ ಆಚರಣೆಗಳನ್ನು ಚರ್ಚಿಸುವುದು.
- ಪ್ರಾಚೀನ ಭಾರತೀಯ ಸಂಸ್ಕೃತಿಯಲ್ಲಿ ಗುರುವಿನ ಪಾತ್ರ ಮತ್ತು ಸ್ಥಾನಮಾನದ ಮೌಲ್ಯಮಾಪನ

Notes

Notes

- ಐತಿಹಾಸಿಕ ಅವಧಿಗಳಲ್ಲಿ ಶಿಕ್ಷಣದ ಪ್ರವೃತ್ತಿಗಳು, ಸಮಸ್ಯೆಗಳು ಮತ್ತು ಎದುರಿಸಿದ ಸವಾಲುಗಳನ್ನು ಗುರುತಿಸುವುದು.
- ಪ್ರಾಥಮಿಕ ಶಿಕ್ಷಣದ ಮೇಲಿನ ವಿವಿಧ ಆಯೋಗಗಳು ಮತ್ತು ಸಮಿತಿಗಳ ಶಿಫಾರಸ್ಸುಗಳ ಪ್ರಭಾವಗಳನ್ನು ಚರ್ಚಿಸುವುದು.

## 1.2 ಪ್ರಾಚೀನ ಭಾರತೀಯ ಶಿಕ್ಷಣ–ಒಂದು ಸಂಕ್ಷಿಪ್ತ ಅವಲೋಕನ

ಭಾರತದಲ್ಲಿ ದೀರ್ಘಾವಧಿಯಿಂದಲೂ ಶೈಕ್ಷಣಿಕ ಆಚರಣೆಗಳಿದ್ದಾಗೂ 17ನೇ ಶತಮಾನದ ತನಕ ಶೈಕ್ಷಣಿಕ ಸಿದ್ಧಾಂತಗಳನ್ನು ಮತ್ತು ಆಚರಣೆಗಳನ್ನು ವಿವರಿಸುವ ಪುಸ್ತಕಗಳನ್ನು ನೀವು ಕಾಣಲಾರಿರಿ. ಪ್ರಾಚೀನ ಧರ್ಮಗಳಲ್ಲಿ ಸೂತ್ರಗಳು ಮತ್ತು ಸ್ಮೃತಿಗಳ ರೂಪದಲ್ಲಿ ಪ್ರೌಢ ಶಿಕ್ಷಣ ಮತ್ತು ಉನ್ನತ ಶಿಕ್ಷಣಕ್ಕೆ ಸಂಬಂಧಿಸಿದಂತ ಮುಖ್ಯ ಲಕ್ಷಣಗಳ ಒಂದು ವಿವರಣಾತ್ಮಕ ರೂಪ ದೊರೆತಿತ್ತು. ಆದರೆ ನೀವು ಪ್ರಾಥಮಿಕ ಶಿಕ್ಷಣಕ್ಕೆ ಸಂಬಂಧಿಸಿದಂತೆ ಪ್ರತ್ಯೇಕವಾಗಿ ಏನನ್ನು ಕಾಣಲಾರಿರಿ. ಪ್ರಾಚೀನ ಸಮಯದಲ್ಲಿ ಶಿಕ್ಷಣವನ್ನು ಸ್ವ–ಸುಧಾರಣೆಯ ಪ್ರಕ್ರಿಯೆಯನ್ನಾಗಿ ಪರಿಗಣಿಸಲಾಗಿತ್ತು ಹಾಗೂ ಅದು ಹುಟ್ಟಿನಿಂದ ಸಾವಿನವರೆಗೆ ಮುಂದುವರೆಯುತ್ತಿತ್ತು. ಪ್ರಾಥಮಿಕ ಹಂತದಲ್ಲಿ ಶಿಕ್ಷಣವೆನ್ನುವುದು ಜೀವನದ ಮಾರ್ಗವಾಗಿ ದಿನನಿತ್ಯದ ಚಟುವಟಿಕೆಗಳನ್ನು ನಿರ್ವಹಿಸುವುದನ್ನು ಕಲಿಯುವುದಾಗಿದೆ. ಆದ್ದರಿಂದ ಇದನ್ನು ಔಪಚಾರಿಕ ಶಿಕ್ಷಣದ ಪ್ರತ್ಯೇಕ ಹಂತವೆಂದು ಯೋಚಿಸಲಾಗಿರಲಿಲ್ಲ. ಇದು ಜೀವನ ನಡೆಸಲು ತಯಾರಿಯಾಗಿದೆ.

ಪ್ರಾಚೀನ ಸಾಹಿತ್ಯದಲ್ಲಿ ಜ್ಞಾನವನ್ನು ಮೂರನೇ ಕಣ್ಣು ಎಂದು ಪರಿಗಣಿಸಿರುವುದನ್ನು ಜೀವನದ ಎಲ್ಲಾ ವಿಷಯಗಳಲ್ಲಿ ಒಳನೋಟವನ್ನು ನೀಡುತ್ತದೆ ಎನ್ನುವುದನ್ನು ನೀವು ಕಾಣಬಹುದು.

1. ನಮ್ಮ ಪ್ರಾಚೀನರು ಶಿಕ್ಷಣದಿಂದ ಸೂಕ್ತ ಒಳನೋಟಗಳನ್ನು ಅಭಿವೃದ್ಧಿ ಪಡಿಸಿದಾಗ ಬುದ್ಧಿಶಕ್ತಿ ಹೆಚ್ಚಾಗುತ್ತದೆ ಹಾಗೂ ಇದನ್ನು ದಕ್ಷತೆಯ ಸಾಮರ್ಥ್ಯವೆಂದು ಪರಿಗಣಿಸಿದರು.
2. ದೂರವಾಗಿ ಸರ್ವಾಂಗೀಣ ಪ್ರಗತಿ, ಸಮೃದ್ಧಿ ಮತ್ತು ಜೀವನದ ಕಷ್ಟಗಳಿಂದ ಸ್ವತಂತ್ರವಾಗಲು ದಾರಿ ತೋರಿಸುತ್ತದೆ.
3. ಶಿಕ್ಷಣವನ್ನು ಮಾನವನ ಸಂತೋಷಕ್ಕೆ ಬೇರು ಎಂದು ಪರಿಣಿಸಲಾಗಿದೆ. ನಿಮ್ಮ ದಕ್ಷತೆಯನ್ನು ಹೆಚ್ಚಿಸಲು, ಪ್ರಖ್ಯಾತಿ, ಗೌರವ ಮತ್ತು ಸಂಪತ್ತು ಪಡೆಯಲು ಶಿಕ್ಷಣ ಸಹಾಯ ಮಾಡುತ್ತದೆ. ಸಂಪತ್ತು ನಮ್ಮನ್ನು ಸಂತೋಷದಾಯಕವಾಗಿಡುವುದರ ಜೊತೆಗೆ ನಮ್ಮ ಧಾರ್ಮಿಕ, ಕೌಟುಂಬಿಕ ಮತ್ತು ಸಾಮಾಜಿಕ ಕರ್ತವ್ಯಗಳನ್ನು ನಿರ್ವಹಿಸಲು ಅವಕಾಶ ಮಾಡಿಕೊಡುತ್ತದೆ. ಇದು ಅಂತಿಮವಾಗಿ ನಮಗೆ ಮೋಕ್ಷಕ್ಕೆ ದಾರಿ ಮಾಡಿಕೊಡುತ್ತದೆ.
4. ನೀತಿ ಶತಕದಲ್ಲಿನ ಭತ್ರಿಹಾರಿ "ಶಿಕ್ಷಣವಿಲ್ಲದಿದ್ದರೆ ನಾವು ಮೃಗಗಳು" ಎನ್ನುವುದನ್ನು ಹೇಳುತ್ತದೆ.
5. ವ್ಯಕ್ತಿ ಮತ್ತು ಸಮಾಜದಲ್ಲಿ ಶಿಕ್ಷಣ ದೊಡ್ಡ ಬದಲಾವಣೆಯನ್ನು ತರುತ್ತದೆ ಎಂದು ನಂಬಲಾಗಿತ್ತು.
    a. ಶಿಕ್ಷಣವು ವ್ಯಕ್ತಿಯ ಮೂರನೇ ಕಣ್ಣಾಗಿದೆ.
    b. ಶಿಕ್ಷಣ ಅಥವಾ ಜ್ಞಾನವು ಮಾನವನ್ನು ಸಮತೂಕಗೊಳಿಸುತ್ತದೆ.
    c. ಶಿಕ್ಷಣ ನಮ್ರತೆಯನ್ನು ತಂದು ಕೊಡುತ್ತದೆ.

d. ವಿದ್ಯಾದದಾತಿ ವಿನಯಂ ವಿನಯದ್ಯಾತಿ ಪತ್ರತಾದರ್ ಪತ್ರಾವ ಧನ ಮಾಪನೊಟಿ ಧನ ಧರ್ಮಮ್ ತತಾಹ ಸುಖಮ್

e. ವಿದ್ಯಾ ವಿಹಿನಃ ಪಶು (ಭತ್ರಿಹಾರಿ ನೀತಿಶತಕ 16)

ಶಿಕ್ಷಣವಿಲ್ಲದಿದ್ದರೆ ಯಾರೂ ಪ್ರಾಣಿಗಿಂತ ಉತ್ತಮರಲ್ಲ.

ಶಿಕ್ಷಣವನ್ನು ಉಪನಯನ ಸಂಸ್ಕಾರದಿಂದ ಪ್ರಾರಂಭಿಸಲಾಗುತ್ತದೆ. ಬಾಲಕ ಬಾಲಕಿಯರಿಬ್ಬರೂ ಶಿಕ್ಷಣಕ್ಕೆ ಅರ್ಹರಾಗಿದ್ದಾರೆ. ಗಾರ್ಗಿ, ಆತ್ರೇಯ, ಕೌಶಲ್ಯ, ತಾರಾ, ದ್ರೌಪದಿ ಮುಂತಾದ ಅನೇಕ ವಿದ್ವಾಂಸರ ಉದಾಹರಣೆಗಳು ಇವೆ. ಕೆಳಮಟ್ಟದ ಶಿಕ್ಷಣವು ಎಲ್ಲಾ ಸಾಂಸಾರಿಕ ಜೀವನ ಚಟುವಟಿಕೆಗಳಿಗೆ ಹಾಗೂ ಸಾಮಾಜಿಕ ಪರಸ್ಪರ ವರ್ತಿಸುವುದನ್ನು ತಮ್ಮ ಶೀಘ್ರ ಅಗತ್ಯತೆಗಳನ್ನು ಪೂರೈಸಲು ಕುಟುಂಬ ವೃತ್ತಿಗೆ ವ್ಯಕ್ತಿಗಳನ್ನು ತಯಾರು ಮಾಡುವ ಉದ್ದೇಶವನ್ನೊಂದಿದೆ. ಉನ್ನತ ಶಿಕ್ಷಣವು ವ್ಯಾಕರಣ, ಇತಿಹಾಸ, ಪುರಾಣಶಾಸ್ತ್ರ, ಗಣಿತ, ವೇದಗಳು, ತರ್ಕಶಾಸ್ತ್ರ, ರಾಜ್ಯಪದ್ಧತಿ, ಯುದ್ಧ ಮತ್ತು ಪೂಜಿಸುವ ಶಾಸ್ತ್ರ, ಲಲಿತಕಲೆಗಳು ಮುಂತಾದ ಪಾಂಡಿತ್ಯದ ಅಧ್ಯಯನಕ್ಕೆ ಅಗತ್ಯವಾಗಿತ್ತು. ಆಚರಣೆ ಮೂಲಕ ಪ್ರಾಯೋಗಿಕ ಚಟುವಟಿಕೆಗಳಿಗೆ ತರಭೇತಿ, ಸುಧಾರಿತ ಜೀವನಕ್ಕೆ ಮಗನಾಗಿ , ಗಂಡನಾಗಿ, ತಂದೆಯಾಗಿ ಜೀವನದ ನಾಲ್ಕು ಹಂತಗಳಲ್ಲಿ ಬ್ರಹ್ಮಚರ್ಯಾಶ್ರಮ, ಗೃಹಸ್ತಾಶ್ರಮ, ವಾನಪ್ರಸ್ತಾಶ್ರಮ ಮತ್ತು ಸನ್ಯಾಸಾಶ್ರಮಗಳನ್ನು ಭೋದಿಸಲಾಗುತ್ತಿತ್ತು. ವಿದ್ಯಾರ್ಥಿ ತನ್ನ ವಂಶದ ಸಂಸ್ಕೃತಿಯ ಬೆಳಕು ನೀಡುವವನು ಹಾಗೂ ಅದನ್ನು ಕಾಪಾಡುವ ರೀತಿಯ ಜ್ಞಾನ ನೀಡಲಾಗುತ್ತಿತ್ತು. ಅವನಿಗೆ ಘಟಿಕೋತ್ಸವದ ವೇಳೆ ಅವನ ಸಾಮಾಜಿಕ ಜವಾಬ್ದಾರಿಗಳು, ಕರ್ತವ್ಯಗಳು ಮತ್ತು ಜೀವನದಲ್ಲಿ ಅವುಗಳ ಆಚರಣೆ ಬಗ್ಗೆ ತಿಳಿಸಲಾಗುತ್ತಿತ್ತು. ಹಾಗೂ ಸಮಾಜದ ಉತ್ಪಾದಕ ಸದಸ್ಯನಾಗುವಂತೆಯೂ ತಿಳಿಸಲಾಗುತ್ತಿತ್ತು.

ಆದ್ದರಿಂದ ಆಧ್ಯಾತ್ಮಿಕತೆ, ನಡತೆ ರೂಢಿಸಿಕೊಳ್ಳುವುದು, ವ್ಯಕ್ತಿತ್ವ ಅಭಿವೃದ್ಧಿ, ನಾಗರೀಕ ಪ್ರಜ್ಞೆ, ದಕ್ಷತೆಯನ್ನು ಪ್ರೋತ್ಸಾಹಿಸುವುದು, ಸಂಸ್ಕೃತಿಯ ರಕ್ಷಣೆ ಮತ್ತು ಉದ್ಧಾರ ಮಾಡುವುದು ಮುಂತಾದವುಗಳು ಶಿಕ್ಷಣದ ನಿಗಧಿತ ಗುರಿಗಳು ಮತ್ತು ಉದ್ದೇಶಗಳಾಗಿವೆ. ಈ ಉದ್ದೇಶಗಳ ಸಾಧನೆಗೆ ವಿವಿಧ ಧಾರ್ಮಿಕ ವಿಧಿವಿಧಾನಗಳಾದ (ವ್ರತ) ಪ್ರಾರ್ಥನೆ, ಹಬ್ಬಗಳ ಆಚರಣೆ, ನೈತಿಕ ನಡತೆಯ ಆಚರಣೆ, ಮನಸ್ಸು, ಯೋಚನೆ ಮತ್ತು ಹವ್ಯಾಸಗಳ ಪರಿಶುದ್ಧ ಹುಟ್ಟುಗುಣವನ್ನು ನಿಯಂತ್ರಿಸುವುದು. ಸಭ್ಯಾಚಾರಕ್ಕೆ ಸಂಬಂಧಿಸಿದ ಕಾನೂನುಗಳು, ಹಿರಿಯರು, ಸಮಾನರು, ಕಿರಿಯವರೊಂದಿಗೆ ಸಂಬಂಧ ಬೋಧನೆ – ಕಲಿಕಾ ಆಚರಣೆ ಮುಂತಾದವುಗಳನ್ನು ಆಜ್ಞಾಪಿಸುತ್ತದೆ. ಅಧ್ಯಯನಕ್ಕೆ ವಿದ್ಯಾರ್ಥಿಗಳು ತಮ್ಮ ಇಚ್ಛೆಗನುಸಾರ ವಿಷಯಗಳನ್ನು ಆಯ್ಕೆ ಮಾಡಿಕೊಳ್ಳಬಹುದಾಗಿತ್ತು. ಸರಳತೆ ಮತ್ತು ಸ್ವ–ಶಿಸ್ತು ವಿದ್ಯಾರ್ಥಿ ಜೀವನದ ಭಾಗವಾಗಿದ್ದು, ಸ್ವ ನಂಬಿಕೆ ಮತ್ತು ಸ್ವ ನಿಗ್ರಹ ಕಲಿಕೆಗಳು ಪ್ರಾಚೀನ ಭಾರತೀಯ ಶಿಕ್ಷಣದ ಮುಖ್ಯಾಂಶಗಳಾಗಿದ್ದವು. ತರ್ಕಶಾಸ್ತ್ರ, ತತ್ವಶಾಸ್ತ್ರ, ಕಾನೂನು, ಸಾಹಿತ್ಯ ಮುಂತಾದ ವಿಷಯಗಳನ್ನು ಅಧ್ಯಯನ ಮಾಡುವ ವಿದ್ಯಾರ್ಥಿಗಳಲ್ಲಿ ವಿವೇಕ ಮತ್ತು ತೀರ್ಮಾನ ಮತ್ತಿತರ ವ್ಯಕ್ತಿತ್ವದ ಅಂಶಗಳನ್ನು ಅಭಿವೃದ್ಧಿಪಡಿಸಲಾಗುತ್ತಿತ್ತು. ಸಮಸ್ಯೆಯ ಎರಡು ಮುಖಗಳನ್ನು ಅರ್ಥಮಾಡಿಕೊಂಡು ವಿದ್ಯಾರ್ಥಿ ಪಾಂಡಿತ್ಯ ಪೂರ್ಣ ಚರ್ಚೆಗಳಲ್ಲಿ ತೊಡಗಲು ತರಭೇತಿ ನೀಡಲಾಗುತ್ತಿತ್ತು. ಇದು ಪ್ರಜಾತಾಂತ್ರಿಕ ಮೌಲ್ಯಗಳನ್ನು ಅಂತರ್ಗತ ಮಾಡಿಕೊಂಡು ವ್ಯಕ್ತಿಯನ್ನು ಇತರರ ದೃಷ್ಟಿಕೋನದಲ್ಲೂ ಸಕಾರಣವಾಗಿರುವಂತೆ, ವಿವೇಕವುಳ್ಳವನಂತೆ ಮಾಡುತ್ತಿತ್ತು.

ವೇದಗಳನ್ನು ಅಧ್ಯಯನ ಮಾಡುವ ವಿದ್ಯಾರ್ಥಿಗಳಿಗೆ ಮಾತ್ರ ಶಿಕ್ಷಣವು ಬಾಯಿಪಾಠದ ಯಾಂತ್ರಿಕ ತರಭೇತಿಯಾಗಿತ್ತು. ಅವರು ಆ ವೇದಗಳನ್ನು ಸುರಕ್ಷಿತವಾಗಿಟ್ಟುಕೊಂಡು ಬೇರೆಯವರಿಗೆ ಕಲಿಸಬೇಕಾಗಿತ್ತು. ತಲೆಮಾರುಗಳಿಗೆ ಪೂರ್ಣ ಸಾಕ್ಷರತೆಯನ್ನು, ಸಾಂಸ್ಕೃತಿಕ ಹಾಗೂ ಉದ್ಯೋಗ ಹಿರಿಮೆಗಳನ್ನು

Notes

Notes

ಪರಿಶುದ್ಧವಾಗಿ, ಕರಾರುವಕ್ಕಾಗಿ ಬಾಯಿಪಾಠದ ಮೂಲಕವೇ ನೆನಪಿನಲ್ಲಿಟ್ಟುಕೊಳ್ಳಬೇಕಿತ್ತು. ಏಕೆಂದರೆ ಆಗ ಕಾಗದ, ಮುದ್ರಣ ಮುಂತಾದವು ಇರದಿದ್ದರಿಂದ ಜ್ಞಾನವನ್ನು ಸಂರಕ್ಷಿಸಲು ಯಾವುದೇ ಮಾಧ್ಯಮಗಳಿರಲಿಲ್ಲ.

ಒಟ್ಟಿನಲ್ಲಿ ಆ ದಿನಗಳಲ್ಲಿ ಶಿಕ್ಷಣವು ಜೀವನ ಪರ್ಯಂತ – ನಿರಂತರ ಕಲಿಕೆಯ ಸ್ವ–ಸುಧಾರಣೆಯ, ವಿದ್ಯಾರ್ಥಿಗಳ ಭೌತಿಕ, ಮಾನಸಿಕ, ಭೌದ್ಧಿಕ ಮತ್ತು ಆಧ್ಯಾತ್ಮಿಕ ಸಾಮರ್ಥ್ಯಗಳ ಸಾಮರಸ್ಯ ಮತ್ತು ಪ್ರಗತಿಯುಕ್ತ ಅಭಿವೃದ್ಧಿಗೆ ಮೂಲವಾಗಿತ್ತು. ಇದರಿಂದ ವಿದ್ಯಾರ್ಥಿಯು ಉಪಯುಕ್ತ ಪ್ರಜೆಯಾಗಿ ಬಾಳಲು ಹಾಗೂ ಪ್ರಸ್ತು ತ ಮತ್ತು ಭವಿಷ್ಯದ ಜೀವನದಲ್ಲಿ ಪ್ರಗತಿ ಸಾಧಿಸಲು ಅನುಕೂಲವಾಗುತ್ತಿತ್ತು.

**ನಿಮ್ಮ ಪ್ರಗತಿಯನ್ನು ಪರೀಕ್ಷಿಸಿ – 1**

ಎ) ಪ್ರಾಚೀನ ಭಾರತದಲ್ಲಿ ಶಿಕ್ಷಣದ ಅಂತಿಮ ಗುರಿ ಏನಾಗಿತ್ತು ?

..........................................................................................................

..........................................................................................................

..........................................................................................................

ಬಿ) ಮುದ್ರಣದ ಕಲೆ ಇಲ್ಲದಿರುವಾಗ ಜ್ಞಾನವನ್ನು ಯಾವ ರೀತಿ ಸಂರಕ್ಷಿಸಲಾಗುತ್ತಿತ್ತು ?

..........................................................................................................

..........................................................................................................

..........................................................................................................

### 1.2.1 ಗತಕಾಲದ 'ಗುರು'ವಿನ ಪರಿಭಾವನೆ

ಪ್ರಾಚೀನ ಭಾರತದಲ್ಲಿ ಗುರುಕುಲ ವ್ಯವಸ್ಥೆ ಜಾರಿಯಲ್ಲಿತ್ತು. ಅಧ್ಯಯನದ ನಿಗದಿಪಡಿಸಿದ ಅವಧಿಯಲ್ಲಿ ವಿದ್ಯಾರ್ಥಿ ಗುರುವಿನೊಂದಿಗೆ ಇರಬೇಕಾಗಿತ್ತು. ಗುರುಗಳ ಆಶ್ರಮವು ಒಂದು ವಸತಿ ಶಾಲೆಯಾಗಿತ್ತು. ಪ್ರತಿಯೊಬ್ಬರು ಶ್ರೀಮಂತರಾಗಲಿ, ಮೇಲ್ಮಟ್ಟದವರಾಗಲಿ ಜೊತೆಜೊತೆಗೆ ಇರಬೇಕಾಗಿತ್ತು. ಎಲ್ಲರನ್ನೂ ಸಮಾನವಾಗಿ ಕಾಣಲಾಗುತ್ತಿತ್ತು. ರಾಜಕುಮಾರರು ಬಡವರೊಂದಿಗೆ ಈ ಗುರುಕುಲದಲ್ಲಿ ಇರುತ್ತಿದ್ದರು. ಗುರುಕುಲದಲ್ಲಿ ಶಿಕ್ಷಣ ಉಚಿತವಾಗಿತ್ತು. ಆದರೆ ಗುರುಕುಲವನ್ನು ಬೆಂಬಲಿಸಲು ಪ್ರತಿಯೊಬ್ಬರೂ ಬಿಕ್ಷೆ ಬೇಡಬೇಕಾಗಿತ್ತು. (ಮಧುಕರಿ) ಇದು ಅವರಿಗೆ ನಮ್ರತೆ ಹಾಗೂ ಸಮಾಜದ ಋಣದಲ್ಲಿದ್ದೇವೆ ಎನ್ನುವುದನ್ನು ಕಲಿಸುತ್ತಿತ್ತು. ಅಲ್ಲದೇ ಜಾತಿಯ ಪುರೋಹಿತ ಪ್ರಭುತ್ವವನ್ನು ಕನಿಷ್ಠಗೊಳಿಸಿ ಎಲ್ಲಾ ವಿದ್ಯಾರ್ಥಿಗಳು ಸಮಾನರು ಎನ್ನುವುದನ್ನು ತಿಳಿಸುತ್ತಿತ್ತು.

ಗುರು ಗುರುಕುಲದ ಮುಖ್ಯಸ್ಥನಾಗಿದ್ದು ಗುರುಕುಲದಲ್ಲಿರುವವರಿಗೆ ತಂದೆ, ಪೋಷಕರಾಗಿರುತ್ತಿದ್ದರು. ಯಾವುದೇ ಶುಲ್ಕವನ್ನು ವಿಧಿಸದೇ ಗುರು ವಿದ್ಯಾರ್ಥಿಗಳಿಗೆ ಶಿಕ್ಷಣ ನೀಡುತ್ತಿದ್ದರು. ಶುಲ್ಕವನ್ನು ವಿಧಿಸುವ ಗುರುವನ್ನು ಬಹಿಷ್ಕರಿಸಲಾಗುತ್ತಿತ್ತು. ಅವನು ವಿದ್ಯಾದಾನವನ್ನು ಪವಿತ್ರದಾನವೆಂದು ಪರಿಗಣಿಸಿ ಜ್ಞಾನವನ್ನು ಮಾರಾಟ ಮಾಡುವುದನ್ನು ತಪ್ಪೆಂದು ಸಾಕುತ್ತಿದ್ದನು. ಗುರುಕುಲಗಳು, ರಾಜರಿಂದ, ದಾನಿಗಳಿಂದ, ಸಮಾಜದ ಶ್ರೀಮಂತರಿಂದ ದಾನ ಪಡೆಯುತ್ತಿದ್ದವು. ಅದೇ ರೀತಿ ಗುರುದಕ್ಷಿಣೆ (ಅಧ್ಯಯನದ ಕೊನೆಗೆ ಗುರುವಿಗೆ ನೀಡುವ ಕಾಣಿಕೆ) ಮೂಲಕವೂ ಆದಾಯ ಪಡೆಯುತ್ತಿದ್ದರು. ಇದು ಆಶ್ರಮವನ್ನು ನಡೆಸಲು ಹಾಗೂ ಆಶ್ರಮವಾಸಿಗಳು ತಪಶ್ಚರ್ಯದ ಜೀವನ ನಡೆಸುತ್ತಿದ್ದುದರಿಂದ ಸಾಕಾಗುತ್ತಿತ್ತು. ಸಂಪತ್ತಿನ ಸಂಗ್ರಹಕ್ಕೆ ಅವಕಾಶವಿರುತ್ತಿರಲಿಲ್ಲ.

Notes

ನೈಜ ವಿದ್ವಾಂಸ ದೃಢ ಪಡಿಸಿದ ಶಿಕ್ಷಕ ಆಧ್ಯಾತ್ಮಿಕವಾಗಿ ಜ್ಞಾನೋದಯವಾದ ವ್ಯಕ್ತಿಯನ್ನು ಗುರುತಿಸಲಾಗುತ್ತಿತ್ತು. ಹಾಗೂ ಅವರನ್ನು ಗುರು ಎಂದು ನೇಮಕ ಮಾಡಲಾಗುತ್ತಿತ್ತು ಮತ್ತು ಗೌರವಿಸಲಾಗುತ್ತಿತ್ತು. ನಿಮಗೆ ತಿಳಿದಿರುವಂತೆ ಭಾರತದಲ್ಲಿ ತುಂಬಾ ಹಳೆಯದಾದ ಗುರು ಶಿಷ್ಯ ಸಂಬಂಧವಿದೆ. ಅವನ ನಿಸ್ವಾರ್ಥ ಸೇವೆಗಾಗಿ ಶಿಕ್ಷಕ ಗುರು ಶಿಕ್ಷಕನಾಗಿ ತುಂಬಾ ಉತ್ತಮವಾಗಿ ಬೋಧಿಸುತ್ತಿದ್ದನು. ಅವನನ್ನು ರಾಜಮಹಾರಾಜರೂ ಗೌರವಿಸುತ್ತಿದ್ದರು. ಅವನನ್ನು ತಂದೆತಾಯಿಗಳಿಗಿಂತ ಹೆಚ್ಚಾಗಿ ಗೌರವಿಸುತ್ತಿದ್ದರು ಹಾಗೂ ಗುರುಗಳು ದೇವರಿಗಿಂತ ಹೆಚ್ಚಿನ ವಿಶಿಷ್ಠ ಸ್ಥಾನಮಾನವನ್ನು ಹೊಂದಿದ್ದರು.

ಗುರುಬ್ರಹ್ಮ ಗುರುವಿಷ್ಣು ಗುರುದೇವ್ರೋ ಮಹೇಶ್ವರ
ಗುರು ಸಾಕ್ಷಾತ್ ಪರಬ್ರಹ್ಮ ತಸ್ಮೈಶ್ರೀ ಗುರುವೇ ನಮಃ

ಗುರು ಉತ್ತಮ ಗುಣ ಲಕ್ಷಣಗಳ ಆಧ್ಯಾತ್ಮಿಕ ಸಾರವೇ ಆಗಿರುತ್ತದೆ. ನೈಜ ಶಿಕ್ಷಕ ತನ್ನ ಜೀವನದ ಅಂತ್ಯದವರೆಗೂ ವಿದ್ಯಾಥಿಯಾಗಿಯೇ ಇರಬೇಕಾಗಿತ್ತು. ಇದು **L3** ಶಿಕ್ಷಕ ಪರಿಭಾವನೆಯಂತಿದೆ. ಜೀವನ ಪೂರ್ತಿ ಕಲಿಕಾರದಾರ **(Life long learner)** ಅವನು ಮಾರ್ಗದರ್ಶಿ ಜೊತೆಗೆ ವೇದಿಕೆಯ ಮೇಲೆ ಋಷಿ ಅಲ್ಲ.

ಗುರುಗಳು ತಮ್ಮಷ್ಟಕ್ಕೆ ತಾವೇ ಸಂಸ್ಥೆಯಾಗಿದ್ದರು. ತಮ್ಮ ಪಾಂಡಿತ್ಯ ಮತ್ತು ತ್ಯಾಗಗಳಿಗಾಗಿ ಪ್ರಸಿದ್ಧರಾಗಿದ್ದರು. ಭಾರತದಲ್ಲಿ ವಿಶ್ವದಾದ್ಯಂತ ಪ್ರಸಿದ್ಧ ಗುರುಗಳಿಂದ ಆಕರ್ಷಿತರಾಗುತ್ತಿದ್ದರು. ವಿದ್ಯಾರ್ಥಿಗಳ ಸಂಖ್ಯೆ ಹೆಚ್ಚಾಗಿರುವಾಗ ಗುರುವು ಹಿರಿಯ ಅಥವಾ ಬುದ್ಧಿವಂತ ವಿದ್ಯಾರ್ಥಿಗಳನ್ನು ಬೋಧನೆ, ಕಲಿಕಾ ಪ್ರಕ್ರಿಯೆಯು ನಿರ್ವಹಣೆಗಾಗಿ ಬಳಸಿಕೊಳ್ಳುತ್ತಿದ್ದರು. ಇದು ಹೆಚ್ಚು ಅಗತ್ಯವಾದ ನೆರವನ್ನು ಅವನ ಕೆಲಸದಲ್ಲಿ ಹಾಗೂ ಶಿಕ್ಷಕ ತರಭೇತಿಯನ್ನು ಒದಗಿಸುತ್ತದೆ. ಸಂಭವನೀಯ ಶಿಕ್ಷಕರಿಗೆ ಬೋಧನಾ ಕಲೆಯಲ್ಲಿ ಗುರುವಿನ ನೇರ ಮಾರ್ಗದರ್ಶನದಲ್ಲಿ ಶಿಕ್ಷಕ ತರಭೇತಿ ಅವಕಾಶಗಳನ್ನು ಒದಗಿಸುತ್ತದೆ.

ಸ್ನೇಹ್ ವಿದ್ಯಾರ್ಥಿಗಳನ್ನು ಸೇರಿಸಿಕೊಳ್ಳಲು, ಮಗ ಅಥವಾ ಹಿರಿಯ ಸಮರ್ಥ ವಿದ್ಯಾರ್ಥಿಯನ್ನು ಶಿಕ್ಷಕನನ್ನಾಗಿ ನೇಮಕ ಮಾಡಿಕೊಳ್ಳಲು ಉಪದೇಶಕ್ ವ್ಯವಸ್ಥೆಯು ಪ್ರಾಚೀನ ಭಾರತೀಯ ಶಿಕ್ಷಣ ವ್ಯವಸ್ಥೆಗೆ ಉತ್ತಮ ಕೊಡುಗೆಯಾಗಿದೆ.

ಅನಂತರ ಮಗುವಿನ ಅವಧಿಯಲ್ಲಿ ಚಾತುರ್ವರ್ಣ ಸಾಮಾಜಿಕ ಕ್ರಮ ಆಗಿರುವಾಗ ಬ್ರಾಹ್ಮಣನಾಗಿ ಹುಟ್ಟಿದ ಯಾರಾದರೂ ಅವರು ಪಾಂಡಿತ್ಯ ಹೊಂದಿರಲಿ ಹೊಂದಿರದಿರಲಿ ಗುರುಗಳಾಗುತ್ತಿದ್ದರು. ತಂದೆ ತನ್ನ ಮಗನಿಗೆ ಶಿಕ್ಷಕನಾಗಿ ಬೋಧಿಸುತ್ತಿದ್ದ ಹಾಗೂ ತರಬೇತಿ ನೀಡುತ್ತಿದ್ದನು. ಬ್ರಾಹ್ಮಣರಿಗೆ ಮಾತ್ರ ಶಿಕ್ಷಕ ವೃತ್ತಿ ಕೌಟುಂಬಿಕ ಉದ್ಯೋಗವಾಗಿತ್ತು.

### 1.2.2 ಗುರುವಿನ ಪಾತ್ರ ಮತ್ತು ಜವಾಬ್ದಾರಿಗಳು

ಆ ದಿನಗಳಲ್ಲಿ ಗುರು ವಿದ್ಯಾರ್ಥಿಗಳಿಗೆ ತಂದೆ ತಾಯಿಯಾಗಿ, ಶಿಕ್ಷಕನಾಗಿ, ಪಂಡಿತನಾಗಿ, ದಾರ್ಶನಿಕನಾಗಿ, ಸ್ನೇಹಿತ ತತ್ವಜ್ಞಾನಿಯಾಗಿ ಮಾರ್ಗದರ್ಶಕನಾಗಿ ವೈವಿಧ್ಯಮಯ ಪಾತ್ರಗಳನ್ನು ನಿರ್ವಹಿಸಬೇಕಾಗಿತ್ತು. ವಿದ್ಯಾರ್ಥಿಗಳ ಅಗತ್ಯತೆಗಾಗಿ ಅವನು ವೈಯಕ್ತಿಕ ಗಮನ ನೀಡುತ್ತಿದ್ದನು. ತನ್ನ ವಿದ್ಯಾರ್ಥಿಗಳು ಅಭಿವೃದ್ಧಿಯಾಗಲು, ಶಿಕ್ಷಕರ ತೃಪ್ತಿಗನುಗುಣವಾಗಿ ಪ್ರಗತಿ ಸಾಧಿಸುವಂತೆ ಮಾಡುವುದು ಗುರುವಿನ ಜವಾಬ್ದಾರಿಯಾಗಿತ್ತು. ಶಿಕ್ಷಕ ತಂದೆ ಮತ್ತು ಮಗನ ರೀತಿಯಲ್ಲಿ ಬೋಧನೆ ಮಾಡುತ್ತಿದ್ದು ಉತ್ತಮ ಸಂಪರ್ಕ ಹೊಂದಿರುತ್ತಿದ್ದದು.

ಬೋಧನಾ ವಿಧಾನವು ಶಿಕ್ಷಕ ಮತ್ತು ಬೋಧನೆ ನಡುವೆ ವರ್ತಿಸುವ ಸಂವಾದ ಉಪನ್ಯಾಸಗಳು ಪ್ರವಚನಗಳು, ಚರ್ಚೆಗಳು, ಪಠಣಗಳು ವಿದ್ಯಾರ್ಥಿಯ ದೈನಂದಿನ ಜೀವನದ ಭಾಗಗಳಾಗಿದ್ದವು. ಮೌಲ್ಯಮಾಪನವು ನಿರಂತರ, ಸಮರ್ಪಕವಾಗಿದ್ದು ಇದನ್ನು ಗುರುವೇ ನಿರ್ವಹಿಸುತ್ತಿದ್ದನು.

Notes

ವರ್ಷಾಂತ್ಯದ ಪರೀಕ್ಷೆಗಳಿರುತ್ತಿರಲಿಲ್ಲ. ಪದವಿ ಪ್ರಮಾಣ ಪತ್ರಗಳಿರುತ್ತಿರಲಿಲ್ಲ. ಆದರೆ ನಿಗದಿತ ಅಧ್ಯಯನವನ್ನು ಮುಗಿಸಿದ ನಂತರ ಗುರು ಪದವಿ ಪ್ರಧಾನ ಸಮಾರಂಭದಲ್ಲಿ ವಿದ್ಯಾರ್ಥಿ ಪದವೀಧರನಾಗಿರುವನು ಎಂದು ಘೋಷಿಸುತ್ತಿದ್ದನು. ಗುರು ತನ್ನಿಂದ ವಿದ್ಯಾಭ್ಯಾಸ ಪಡೆದ ಶಿಷ್ಯನನ್ನು ವಿದ್ವಾಂಸರೆನಿಸಿಕೊಂಡಿರುವ ಜನರ ಗುಂಪಿನ ಮುಂದೆ ಹಾಜರುಪಡಿಸುತ್ತಿದ್ದನು. ಅವರು ಆ ಚರ್ಚೆಯಲ್ಲಿ ಯಶಸ್ವಿಯಾಗಿ ಹೊರ ಬಂದಾಗ ಅವನನ್ನು ವಿಷಯದಲ್ಲಿ ಶ್ರೇಷ್ಠತೆ ಹೊಂದಿದ್ದಾನೆ ಎಂದು ಕಂಡು ಬಂದಾಗ ಪಾಂಡಿತ್ಯಪಡೆದ ವ್ಯಕ್ತಿ ಎಂದು ಒಪ್ಪಿಕೊಳ್ಳುತ್ತಿದ್ದರು.

ಕಲಿಕಾದಾರರ ಸ್ವಯತ್ತತೆಯನ್ನು ಗೌರವಿಸಲಾಗುತ್ತಿತ್ತು. ವಿದ್ಯಾರ್ಥಿಯು ತನ್ನ ಗುರುವನ್ನು ಮತ್ತು ಅಧ್ಯಯನ ವಿಷಯವನ್ನು ಆಯ್ಕೆ ಮಾಡಿಕೊಳ್ಳುವಲ್ಲಿ ಸ್ವತಂತ್ರನಾಗಿರುತ್ತಿದ್ದನು. ಶಿಷ್ಯನನ್ನು ಒಪ್ಪಿಕೊಳ್ಳೂವುದೋ ಅಥವಾ ಬಿಡುವುದೋ ಎನ್ನುವುದೋ ಗುರುವಿನ ವಿಶೇಷ ಅಧಿಕಾರ ಆಗಿರುತ್ತಿತ್ತು.

ಬೌದ್ಧಯುಗದಲ್ಲಿ ಆಶ್ರಮಗಳು ಮತ್ತು ದೇವಸ್ಥಾನಗಳಲ್ಲಿ ಶೈಕ್ಷಣಿಕ ಸಂಸ್ಥೆಗಳನ್ನು ಔಪಚಾರಿಕವಾಗಿ ಉನ್ನತ ಕಲಿಕೆಯ ಕೇಂದ್ರಗಳನ್ನಾಗಿ ಸ್ಥಾಪನೆ ಮಾಡಲಾಗುತ್ತಿತ್ತು ಎನ್ನುವುದನ್ನು ನೀವು ತಿಳಿದಿರುವಿರಿ. ಈ ಸ್ಥಳಗಳು ರಾಜ ಅಶೋಕನ ಕಾಲದಲ್ಲಿ ದೊಡ್ಡ ಸಂಸ್ಥೆ ಹಿಂದೂ ಗುರುಕುಲದ ಪ್ರತಿರೂಪ ಆಗಿ ಅಭಿವೃದ್ದಿಗೊಂಡವು. ಅವು ವಸತಿ ವಿಶ್ವವಿದ್ಯಾನಿಲಯಗಳಾದವು, ಜ್ಞಾನದ ಹೂಡುವಿಕೆಗಾಗಿ ಶಿಕ್ಷಕರ ಕ್ಲಸ್ಟರ್ ಗುರುಗಳು ಮತ್ತು ವಿದ್ಯಾರ್ಥಿಗಳು ಜೊತೆಜೊತೆಯಾಗಿ ಜೀವನ ಮಾಡುತ್ತಿದ್ದರು ಮತ್ತು ಕೆಲಸ ಮಾಡುತ್ತಿದ್ದರು. ಅವರು ತಮ್ಮಷ್ಟಕ್ಕೆ ತಾವೇ ಸೃಷ್ಠಿ, ರಕ್ಷಣೆ ಮತ್ತು ಜ್ಞಾನದ ಪ್ರಸಾರದಲ್ಲಿ ನಿರತರಾಗಿರುತ್ತಿದ್ದರು. ಇವರು ಆಧುನಿಕ ವಿಶ್ವವಿದ್ಯಾನಿಲಯಗಳ ಮೂರು ಕಾರ್ಯಗಳಾದ ಬೋಧನೆ, ಸಂಶೋಧನೆ ಮತ್ತು ವಿಸ್ತರಣೆಗಳನ್ನು ನಿರ್ವಹಿಸಿದ್ದರು. ತಕ್ಷಶಿಲೆ, ನಳಂದ, ವಿಕ್ರಮಶೀಲ, ವಲ್ಲಭಿ, ನಾಡಿಯ ಕಾಂಚಿ, ಬನಾರಸ್ ಮುಂತಾದ ಉನ್ನತ ಶಿಕ್ಷಣ ನೀಡುವ ಕೇಂದ್ರಗಳಲ್ಲಿ ಪ್ರವೇಶಾತಿಯನ್ನು ಪ್ರವೇಶ ಪರೀಕ್ಷೆ ಮೂಲಕ ನೆರವೇರಿಸಲಾಗುತ್ತಿತ್ತು. ಭಾರತದ ಎಲ್ಲಾ ಪ್ರದೇಶಗಳಿಂದ ಮತ್ತು ವಿದೇಶಗಳಿಂದಲೂ ಈ ಕೇಂದ್ರಗಳು ವಿದ್ಯಾರ್ಥಿಗಳನ್ನು ಆಕರ್ಷಿಸುತ್ತಿದ್ದವು.

ಗುರುಕುಲಗಳು ಸಂಸ್ಥೆಯಾಗಿ ಅಲ್ಲ ವೈಯಕ್ತಿಕ ಸಾಮರ್ಥ್ಯದಲ್ಲಿ ಶಿಕ್ಷಣ ನೀಡುವುದನ್ನು ಮುಂದುವರೆಸಿದವು. ಮಧ್ಯಯುಗೀಯ ಅವಧಿಯಲ್ಲಿನ ಪಾಠಶಾಲೆಗಳಂತೆ ಕೆಳಹಂತದ ಶಿಕ್ಷಣ , ಉನ್ನತ ಶಿಕ್ಷಣಕ್ಕಾಗಿ ಮದ್ರಾಸಸ್‌ಗಳನ್ನು ಸ್ಥಾಪಿಸಿದರು. ಇವು ಧಾರ್ಮಿಕ ಇಸ್ಲಾಮಿಕ್ ಶಿಕ್ಷಣವನ್ನು ಅಂದರೆ ಪವಿತ್ರ ಕುರಾನ್‌ನನ್ನು ಮುಸ್ಲಿಂ ಮಕ್ಕಳಿಗೆ ಮುಲ್ಲಾಸ್ ಮತ್ತು ಮೌಲ್ವಿಸ್ ಅವರಿಂದ ನೀಡುತ್ತಿದ್ದವು. ಈ ವ್ಯವಸ್ಥೆ ಭಾರತಕ್ಕೆ ಈಸ್ಟ್ ಇಂಡಿಯಾ ಕಂಪನಿ ಪ್ರವೇಶ ಮಾಡುವ ತನಕ ಹಾಗೂ ಅನೇಕ ಪ್ರದೇಶಗಳಲ್ಲಿ ನಿಯಂತ್ರಿಕ ಪ್ರಾಧಿಕಾರವಾಗಿ ಸ್ಥಾಪನೆಯಾಗುವವರೆಗೆ ಮುಂದುವರೆಯಿತು.

### 1.2.3 ಇಂದಿನ ಶಿಕ್ಷಕ ಉದ್ಯೋಗಿಯಾಗಿ

ಇಂದಿನ ಆಧುನಿಕ ಶಿಕ್ಷಣದಲ್ಲಿ ಪ್ರಾಚೀನ ಭಾರತೀಯ ಶಿಕ್ಷಣದ ಅನೇಕ ಅಂಶಗಳನ್ನು ಅಳವಡಿಕೊಂಡಿದ್ದಾಗ್ಯೂ ಒಂದು ವೇಳೆ ನೀವು ಶಿಕ್ಷಕ ಉದ್ಯೋಗವನ್ನು ಬಯಸಿದರೆ ನೀವು ಅನೇಕ ಕುಶಲತೆಗಳನ್ನು ಕಲಿತು ಅದರಲ್ಲಿ ವಿವಿಧ ಗುಣಗಳನ್ನು ಅಳವಡಿಸಿಕೊಂಡು ಬೇರೆಯವರೊಂದಿಗೆ ಪ್ರತಿಕ್ರಿಯಿಸುವಾಗ ಅವುಗಳನ್ನು ಪ್ರದರ್ಶಿಸಬೇಕು. ಶಿಕ್ಷಕ ಇಂದು ಪಡೆದುಕೊಳ್ಳಬೇಕಾದ ಮತ್ತು ಅಭಿವೃದ್ಧಿ ಪಡಿಸಿಕೊಳ್ಳಬೇಕಾದ ಲಕ್ಷಣಗಳು ಈ ಕೆಳಗಿನಂತಿವೆ.

- ಮುಕ್ತ ಮತ್ತು ಧನಾತ್ಮಕ – ಧನಾತ್ಮವಾಗಿ ಚಿಂತಿಸಿ – ಬೇರೆಯವರೂ ಧನಾತ್ಮಕವಾಗಿರಲು ಪ್ರೋತ್ಸಾಹಿಸಿ
- ಸಂಪರ್ಕ – ಬೇರೆಯವರೊಂದಿಗೆ ಅಭಿಪ್ರಾಯಗಳನ್ನು ಹಂಚಿಕೊಳ್ಳಿ ಇದರಿಂದ ಪರಿಣಾಮಕಾರಿ ಸಂವಹನ ಸಾಧ್ಯವಾಗುತ್ತದೆ.
- ಕೇಳುಗ – ವಿದ್ಯಾರ್ಥಿಗಳಿಗೆ ಅನುಭೂತಿ ರೀತಿಯಲ್ಲಿರಬೇಕು.
- ಅವಲಂಭಿತ – ಬೇರೆಯವರೊಂದಿಗೆ ಕೆಲಸ ಮಾಡುವಾಗ ಪ್ರಾಮಾಣಿಕವಾಗಿರಬೇಕು. ಪ್ರಾಮಾಣಿಕ, ಮುಕ್ತ ಮತ್ತು ವೈಯಕ್ತಿಕ ಪ್ರತಿಕ್ರಿಯೆ ಮತ್ತು ಒಳಗೊಳ್ಳುವಿಕೆ ಮೂಲಕ ನಂಬಿಕೆಯನ್ನು ಕಟ್ಟಲು ಮತ್ತು ಪ್ರಶಂಶೆ ಮಾಡುವಾಗ ಧನಾತ್ಮಕ ಪರಸ್ಪರ ಕೆಲಸದ ಸಂಬಂಧವನ್ನು ಸ್ಥಾಪಿಸಬೇಕು ಮತ್ತು ಕಾಯ್ದುಕೊಳ್ಳಬೇಕು.

Notes

- ಸಂಘಟಿತವಾಗಿರಬೇಕು – ವ್ಯವಸ್ಥಿತ ಯೋಜಿತ ರೀತಿಯಲ್ಲಿ ಕಾರ್ಯ ನಿರ್ವಹಿಸಬೇಕು.
- ಸ್ವನಂಬಿಕೆ ಮತ್ತು ಸಮತೋಲನ ವಿದ್ಯಾರ್ಥಿಗಳು ಸ್ವ ಪರಿಭಾವನೆ ಬೆಳಸಿಕೊಳ್ಳಲು ಪ್ರೋತ್ಸಾಯಿಸಬೇಕು.
- ಬದ್ಧತೆ ಇರಬೇಕು – ಪ್ರಮಾಣ ಮತ್ತು ನಿರೀಕ್ಷೆಗಳೊಂದಿಗೆ ಉತ್ಸಾಹಭರಿನಾಗಿರಬೇಕು.
- ದಯೆತೋರುವಂತಿರಬೇಕು – ಕಾಳಜಿ ವಹಿಸಬೇಕು, ಅನುಭೂತಿ ಶಕ್ತಿ ಹೊಂದಿರಬೇಕು. ಸ್ಪರ್ಷಜ್ಞಾನ ಮಟ್ಟದಲ್ಲಿ ಜನರಿಗೆ ಸ್ಪಂದಿಸುವಂತಿರಬೇಕು. ವೈಯುಕ್ತಿಕ ಯೋಚನೆಗಳು ಮತ್ತು ಭಾವನೆಗಳಿಂದ ಮುಕ್ತವಾಗಿರಬೇಕು ಹಾಗೂ ಬೇರೆಯವರನ್ನು ಪ್ರೋತ್ಸಾಹಿಸಬೇಕು.
- ಮೌಲ್ಯ ಆಧಾರಿತ – ಮಾನವನ ಗುಣಗಳು ಮತ್ತು ಘನತೆಯನ್ನು ಬಿಂಬಿಸಬೇಕು.
- ಸಮುದಾಯದ ಮೌಲ್ಯಗಳಿಗೆ ಪ್ರತಿಕ್ರಿಯಿಸಬೇಕು.
- ಜ್ಞಾನಭರಿತನಾಗಿರಬೇಕು – ಜ್ಞಾನ ಸಂಪಾದಿಸಲು ನಿರಂತರ ಪ್ರಯತ್ನಿಸುತ್ತಿರಬೇಕು.
- ಸೃಜನಾತ್ಮಕ – ಹೊಸ ಅಭಿಪ್ರಾಯಗಳಿಗೆ ಮುಕ್ತವಾಗಿರಬೇಕು.
- ಚಾತುರ್ಯವುಳ್ಳವನಾಗಿರಬೇಕು, ಹಾಗೇ ಆವಿಷ್ಕಾರ ಮಾಡುವಂತಿರಬೇಕು.
- ತಾಳ್ಮೆ– ನ್ಯಾಯಯುತವಾಗಿರಬೇಕು ಮತ್ತು ಉದ್ದೇಶ ತಿಳಿದುಕೊಂಡಿರಬೇಕು.
- ವಚನಬದ್ಧತೆ – ವಿದ್ಯಾರ್ಥಿಗಳಿಗೆ ಮತ್ತು ಉದ್ಯೋಗಕ್ಕೆ ಶಿಕ್ಷಕ ಉದ್ಯೋಗಿಯಾಗಿ ದುರಹಂಕಾರಿಗಳೊಂದಿಗೆ ನಂಬಿಕೆಯಿಂದ ವರ್ತಿಸುವುದು ಅಗತ್ಯವಾಗಿದೆ. ಗುಂಪಿನೊಂದಿಗೆ ಸಮಾಲೋಚಿಸುವಾಗ ವರ್ತನೆಯು ಉದ್ಯೋಗ ಪ್ರಮಾಣ ಅಗತ್ಯವಾಗಿದೆ. ರಾಜಧರ್ಮ, ಉದ್ಯಮ ಮತ್ತು ಜಾತಿ ಉದ್ಯೋಗಕ್ಕೆ ಸೂಕ್ತ ತಯಾರಿ ಮತ್ತೊಂದು ಅಗತ್ಯ ಅಂಶವಾಗಿದೆ. ನೀವು ಶಾಲಾ ಕೊಠಡಿಯೊಳಗೆ ಪ್ರವೇಶ ಮಾಡಿದಾಗ ನೀವು ಅಗತ್ಯ ಸಾಮಗ್ರಿಗಳನ್ನು ಮತ್ತು ಪಾಠದ ಯೋಜನೆಯನ್ನು ತಯಾರಾಗಿಟ್ಟುಕೊಳ್ಳಬೇಕು.

### 1.2.4 ಇಂದಿನ ಸಮಾಜದ ಬದಲಾಗುತ್ತಿರುವ ಸ್ವರೂಪ ಮತ್ತು ಅದಕ್ಕನುಗುಣವಾಗಿ ಶಿಕ್ಷಕನ ಪಾತ್ರ ಮತ್ತು ಜವಾಬ್ದಾರಿ.

- ಇಂದಿನ ಸಮಾಜದ ಬದಲಾಗುತ್ತಿರುವ ಸ್ವರೂಪ : **ಐಸಿಟಿ** ಆಗಮನದಿಂದಾಗಿ ಜಾಗತಿಕ ಸಮಾಜದಲ್ಲಿ ತೀವ್ರ ರೀತಿಯ ಬದಲಾವಣೆಗಳಂಟಾಗುತ್ತಿರುವುದನ್ನು ನೀವು ತಿಳಿದುಕೊಂಡಿರಬಹುದು. ನಮ್ಮ ಜೀವನದ ಎಲ್ಲಾ ಭಾಗಗಳಲ್ಲೂ ಐಸಿಟಿ ಪ್ರಭಾವವಿದೆ. ಕಳೆದ ಕೆಲವು ದಶಕಗಳಲ್ಲಿ ಸಂಪೂರ್ಣವಾಗಿ ಹೊಸ ಸಾಮಾಜಿಕ ವರ್ಗ ಹೊರಹೊಮ್ಮುತ್ತಿದೆ. ಇಂದಿನ ಹೊರಹೊಮ್ಮುತ್ತಿರುವ ಸಮಾಜದಲ್ಲಿ ತಾಂತ್ರಿಕ ಅಭಿವೃದ್ಧಿ ಮತ್ತು ಪ್ರಗತಿಗಳು ಎಷ್ಟು ತೀವ್ರ ತರನಾಗಿವೆ ಎಂದರೆ ಬರುವ ಇನ್ನು ನೂರು ವರ್ಷಗಳ ನಂತರ ಜೀವನವನ್ನು ಊಹಿಸಿಕೊಳ್ಳುವುದು ಕಷ್ಟವಾಗುತ್ತದೆ. ಆದರೆ ಮುಂದಿನ 10– 20 ವರ್ಷಗಳಲ್ಲಿನ ಜೀವನವನ್ನು ನಾವು ಊಹಿಸಿಕೊಳ್ಳಬಹುದು ನಾವು ನಾಳೆಯ ಯಾವ ರೀತಿಯ ಸಮಾಜವನ್ನು ಊಹಿಸಿಕೊಂಡಿದ್ದೇವೆ? ಈ ಸಾಮಾಜಿಕ ಬದಲಾವಣೆಯಿಂದಾಗಿ ಶಿಕ್ಷಣದ ಪರಿಭಾವನಾತ್ಮಕ ಚೌಕಟ್ಟಿನಲ್ಲಿನ ಉದ್ದೇಶಗಳಲ್ಲಿ ಯಾವ ರೀತಿಯ ಬದಲಾವಣೆಗಳು ಸಂಭವಿಸುತ್ತವೆ? ವಿಲೇವಾರಿ ವಿಧಾನಗಳು ಹೇಗೆ ಬದಲಾಗುತ್ತವೆ? ಇಂದಿನ ಶಿಕ್ಷಣ ನಾಳೆಗೆ ಸಮಂಜಸವಾಗಿರುತ್ತದೆಯೇ ಅಥವಾ ಸನ್ನಿವೇಶಕ್ಕೆ ಹೊಂದಿಕೊಂಡಿರುವ ವ್ಯಕ್ತಿಗಳನ್ನು ನಾವು ಉತ್ಪಾದಿಸುತ್ತೇವೆಯೆ? ಈ ಬದಲಾದ ಸಮಾಜಕ್ಕೆ ಶೀಘ್ರವೇ ಕಾರ್ಯಯೋಜನೆ ಬೇಕಾಗಿದೆ. ಈ ಕಾರ್ಯ ಯೋಜನೆಯ ಹೊಸ ಸಾಮಾಜಿಕ ಸ್ವರೂಪ ಮತ್ತು ಅದರ ಹಿಂದಿನ ಅಗತ್ಯತೆಗಳೊಂದಿಗೆ ಮುಂದುವರೆಯಬೇಕಾಗಿದೆ.

Notes

- ಸಂಪರ್ಕಿಸಿದ ಮತ್ತು ಜ್ಞಾನ ಆಧಾರಿತ ಸಮಾಜ : ಐಸಿಟಿಯ ಪ್ರಭಾವ ನಮ್ಮನ್ನು ದಿಗ್ಭ್ರಮೆಗೊಳಿಸುತ್ತದೆ. ಕಳೆದ ಎರಡು ದಶಕಗಳಲ್ಲಿ ವಿಶ್ವದಲ್ಲಿ ತುಂಬಾ ವೇಗವಾಗಿ ಬದಲಾವಣೆಗಳಾಗುತ್ತಿವೆ. ಶಿಕ್ಷಣವನ್ನು ಒಳಗೊಂಡಂತೆ ಐಸಿಟಿ ಪರಿಕರಗಳು ಮತ್ತು ತಂತ್ರಗಳು ಅನ್ವಯವಾಗಿ ಕ್ರಾಂತಿಕಾರಕ ಬದಲಾವಣೆಗಳನ್ನುಂಟಾಗಿವೆ. ಮೊಬೈಲ್, ದೂರದರ್ಶನ, ಕಂಪ್ಯೂಟರ್ ಮುಂತಾದ ಅದ್ಭುತಗಳಿಂದ ಒಬ್ಬನು ಏನು ಮಾಡಬಹುದು ಎಂಬುದನ್ನು ನಂಬಲಿಕ್ಕಾಗುವುದಿಲ್ಲ. ಒಂದು ಕಡೆ ಈ ಅನ್ವಯಗಳು ಸಂಖ್ಯೆಯಲ್ಲಿ ಹೆಚ್ಚಾಗುತ್ತವೆ ಹಾಗೂ ಪ್ರತಿದಿನ ಹೊಸ ಕ್ಷೇತ್ರಕ್ಕೆ ವಿಸ್ತರಿಸಲ್ಪಡುತ್ತಿವೆ. ಮತ್ತೊಂದು ಕಡೆ ಸಮಾಜದ ಅಶಕ್ತ ವಲಯಕ್ಕೂ ಇವು ನಿತ್ಯ ಉಪಯೋಗಿಸಲು ಸೋವಿಯಾಗಿವೆ. ಹಾಗೂ ಅವರಿಗೆ ನಿಲುಕುತ್ತಿವೆ. ಭಾರತದ ಹೆಚ್ಚಿನ ಸಂಖ್ಯೆಯಲ್ಲಿ ಕೋಟ್ಯಾಂತರ ಜನರು ಮೊಬೈಲ್ ಪೋನ್, ಟೆಲಿಪೋನ್, ಅಂತರ್ಜಾಲ ಮತ್ತು ಕಂಪ್ಯೂಟರ್‌ಗಳಲ್ಲಿ ಸಾಮಾಜಿಕ ಜಾಲದ ಜೊತೆ ಸಂಪರ್ಕಕ್ಕೊಳಗಾಗಿದ್ದಾರೆ. ಹಾಗೂ ಇವರ ಸಂಖ್ಯೆ ಗಣನೀಯವಾಗಿ ಹೆಚ್ಚಾಗುತ್ತಿದೆ.

ಟಿಆರ್‌ಎಐ ನ ವೆಬ್ಸೈಟ್‌ನಿಂದ ದಿನಾಂಕ 7.10.2011 ರಂದು ಪುನಃ ಪಡೆದುಕೊಳ್ಳಲಾದ ಅಂಕಿಅಂಶಗಳು ಡಿಸೆಂಬರ್ 2010ಕ್ಕೆ ಭಾರತದಲ್ಲಿ 100 ದಶಲಕ್ಷಕ್ಕಿಂತ ಹೆಚ್ಚು ಅಂತರ್ಜಾಲ (ಅದರಲ್ಲಿ ಸುಮಾರು 40 ದಶಲಕ್ಷ ಮೊಬೈಲ್ ಪೋನಿನಲ್ಲಿ ಅಂತರ್ಜಾಲ ಹೊಂದಿದ್ದಾರೆ.) ಭಾರತದಲ್ಲಿ 2011 ರ ಜೂನ್ ಅಂತ್ಯಕ್ಕೆ 851.70 ದಶಲಕ್ಷ ಮೊಬೈಲ್ ಪೋನ್ ವಂತಿಕೆದಾರರಿದ್ದಾರೆ. ಪ್ರತಿ ತಿಂಗಳಿಗೆ 11.4 ದಶಲಕ್ಷ ವಂತಿಕೆದಾರರು ಮೊಬೈಲ್ ಪೋನ್‌ಗೆ ಹೆಚ್ಚಾಗುತ್ತಿದ್ದಾರೆ.

ಜಾಗತಿಕ ಆರ್ಥಿಕತೆಯಲ್ಲಿ ಎಲ್ಲವೂ ತುಟ್ಟಿಯಾಗುತ್ತಿರುವಾಗ ಒಂದೇ ಒಂದು ವಸ್ತು ದಿನದಿಂದ ದಿನಕ್ಕೆ ಸೋವಿಯಾಗುತ್ತದೆ. ಅದು ಐಸಿಟಿ ಅದರ ಪ್ರವೇಶ, ಉಪಯುಕ್ತತೆ, ಗುಣಮಟ್ಟ ಖರ್ಚುಮಾಡುವ ಶಕ್ತತೆಗಳು ಪ್ರತಿ ನಿಮಿಷಕ್ಕೂ ಸುಧಾರಿಸುತ್ತಿವೆ. ಇಂದಿಗೂ ಅಂತರ್ಜಾಲದೊಂದಿಗೆ ಕಂಪ್ಯೂಟರ್‌ಗಳ ನುಸುಳುವಿಕೆ ಕಲಿಕೆಯ ಪ್ರಕ್ರಿಯೆಯಲ್ಲಿ ಪಾಲುದಾರರಾಗಿ ಹಾಗೂ ಮುಖ್ಯ ಕೊಡುಗೆದಾರರಾಗಿ ತುಂಬಾ ನಿಧಾನವಾಗಿದೆ. ಇಡೀ ವಿಶ್ವವೇ ಸಂಪಕಿಸಲ್ಪಟ್ಟಿರುವಾಗ ನಾವಿನ್ನೂ ಸಂಪರ್ಕವಿಲ್ಲದ ರೀತಿಯಲ್ಲಿ ಬೋಧಿಸುತ್ತಿದ್ದೇವೆ. ಪಠ್ಯದ ಭಾಗ, ಪ್ರತ್ಯೇಕವಾದ ಶಿಸ್ತು ಜೀವನದೊಂದಿಗೆ ಸಮಗ್ರವಾಗಿದೆ.

- ಶೈಕ್ಷಣಿಕ ಪ್ರಕ್ರಿಯೆಯಲ್ಲಿ ಐಸಿಟಿ ಅನ್ವಯ :

ಇಂದಿನ ಶೈಕ್ಷಣಿಕ ಪ್ರಕ್ರಿಯೆಗಳು ಐಸಿಟಿ ಅನ್ವಯದಿಂದಲೂ ಪ್ರಭಾವಕ್ಕೊಳಗಾಗಿವೆ. ICTಯು ಪಠ್ಯಕ್ರಮ ಅಭಿವೃದ್ಧಿ ಮತ್ತು ವಿಲೇವಾರಿ ICT ಯು ಕಲಿಕಾ ಪ್ರಕ್ರಿಯೆಯಲ್ಲಿ, ಮೌಲ್ಯಮಾಪನ ಆನ್‌ಲೈನ್ ಪರೀಕ್ಷೆ (ಹೆಚ್ಚು ಜನರಿಗೆ) ಆನ್ ಡಿಮಾಂಡ್ ಪರೀಕ್ಷೆ (ವ್ಯಕ್ತಿಗಳಿಗೆ) ಪಠ್ಯಕ್ರಮ ವ್ಯವಹಾರ ಮತ್ತು ಸಹಭಾಗಿತ್ವದ ಕೆಲಸ, ಕಲಿಯುವಿಕೆ ಮತ್ತು ಅಭಿವೃದ್ಧಿಯಾಗುವಿಕೆ, ಸ್ವ ಅಭ್ಯಾಸ, ಮುಕ್ತ ಶಿಕ್ಷಣ ಸಂಪನ್ಮೂಲಗಳು L3 ಗುಂಪುಗಳು ಆನ್‌ಲೈನ್ ಕಲಿಕೆ ಮುಂತಾದ ಹೊಸ ಕಲಿಯುವಿಕೆ ಪ್ರಕ್ರಿಯೆಗಳು

- ಶಿಕ್ಷಕರು ಇಂದು ಈ ಹೊಸ ಕಲಿಕಾ ಪ್ರಕ್ರಿಯೆಗಳಿಗೆ ಮತ್ತು ಹೊಸ ಕಲಿಕಾ ಪರಿಸರಕ್ಕೆ ಸಂಬಂಧಿಸಿದಂತೆ ವಿಷಯಗಳನ್ನು ಸಂಭೋಧಿಸಬೇಕಾಗುತ್ತದೆ. ಅವರು ಕಲಿಕೆಯನ್ನು ಹೇಗೆ ಸುಗಮಗೊಳಿಸಬೇಕು ಮತ್ತು ಬದಲಾವಣೆ ಪ್ರಕ್ರಿಯೆಯನ್ನು ಹೇಗೆ ಸುಗಮಗೊಳಿಸಬೇಕು ಮತ್ತು ಬದಲಾವಣೆ ಪ್ರಕ್ರಿಯೆಯನ್ನು ಹೇಗೆ ಹೆಚ್ಚಿಸಬೇಕು ಎನ್ನುವುದನ್ನು ಅವರು ಕಂಡುಕೊಳ್ಳಬೇಕು. ಇಂದಿನ ವಿದ್ಯಾರ್ಥಿಗಳು ಈ ಸಂಪರ್ಕಿಸಲ್ಪಟ್ಟ ಸಮಾಜದಲ್ಲಿ ಅರ್ಧ ಶತಮಾನ ಕ್ರಿಯಾತ್ಮಕವಾಗಿ ಜೀವಿಸಬಹುದು. ಅವರಿಗೆ ಹೊಸ ಕಾರ್ಯಕ್ಷಮತೆ, ಸಂಭವನೀಯತೆಗಳು, ದಕ್ಷತೆಗಾಗಿ ಕೌಶಲ್ಯಗಳು ಮತ್ತು ಈ ಜಾಗತಿಕ ಸಮಾಜದ ಉತ್ಪಾದಕ ನಾಗರೀಕತೆಗಳು ಅಗತ್ಯವಾಗಿದೆ. ಶಿಕ್ಷಣ ಸಾಮಾಜಿಕ ಬದಲಾವಣೆಯ ಅಸ್ತ್ರವಾಗಿ ಹೊರಹೊಮ್ಮುತ್ತಿರುವ ಸಮಾಜದ ಅಗತ್ಯತೆಗಳನ್ನು ಪೂರೈಸುತ್ತದೆ. ಈ ಜ್ಞಾನಾಧಾರಿತ

Notes

ಸಮಾಜದಲ್ಲಿ ಶಿಕ್ಷಣವು ಸಾರಾಂಶ ಆಧಾರಿತ ಮತ್ತು ಶಿಕ್ಷಕ ಕೇಂದ್ರಿತ ಆಧಾರಿತ 3 ರೂಪಾಯಿಯ ಸಾಕ್ಷರತೆಯ / ಓದುವುದು / ಬರೆಯುವುದು/ ಅಂಕಗಣಿತ ಆದರೆ ಕಲಿಕಾದಾರರ ಕೇಂದ್ರಿತವಾಗಿದೆ. ನಮ್ಮ ಸಂಸ್ಕೃತಿಯ ಮೌಲ್ಯಕ್ಕೆ ಅಷ್ಟೇ ಅಲ್ಲ ಆದರೆ ಜಾಗತಿಕ ಮೌಲ್ಯಗಳಿಗಾಗಿ ಕೆಲಸ ಆಧಾರಿತ ಕಂಪ್ಯೂಟರ್ ಸಾಕ್ಷರತೆ ಮತ್ತು ಕಲಿಕೆಗಾಗಿ ಸುಗಮತೆಗಾಗಿ ನಿಪುಣತೆ.

ಪಠ್ಯಕ್ರಮ ವಿಲೇವಾರಿ ಚಟುವಟಿಕೆಗಳು ಶಿಕ್ಷಕ ಬೋಧನೆ ಮುಖಾಮುಖಿ ಪರಸ್ಪರ ಚರ್ಚೆಯಂತಹ ಸಾಂಪ್ರದಾಯಿಕ ತರಗತಿಗಳಿಗೆ ಮಾತ್ರ ಸೀಮಿತವಾಗಿ ರಜೆ ಸ್ವಕಲಿಕೆ ಚರ್ಚೆ, ಫೇಸ್‌ಬುಕ್, ಟ್ವಿಟರ್, ಚರ್ಚಾಗುಂಪುಗಳು L3 ಗುಂಪುಗಳು ಸಾಮಾಜಿಕ ಜಾಲದ ಮೂಲಕ ವಿತರಿಸಲ್ಪಟ್ಟು ತರಗತಿಗಳ ಮೂಲಕವೂ ವಿಲೇವಾರಿ ಮಾಡಲಾಗುತ್ತದೆ. (WWW.add this .com /bookmoolo)

ಸಾಂಪ್ರದಾಯಿಕ ಅರ್ಥದಲ್ಲಿ ಬೋಧನೆ ಮತ್ತು ಕಲಿಯುವಿಕೆಗಳು ಮುಖ್ಯವಾಗಿವೆ. ಆದರೆ ಅನೇಕ ಹೊಸ ಆವಿಷ್ಕಾರಿ ವಿಧಾನಗಳಾದ ಸ್ವಕಲಿಕೆ ಗುಂಪು, ಸಹಕಾರ ಸಹಭಾಗಿತ್ವ ಕಾರ್ಯನಿರ್ವಹಣೆಗೆ ಮೆಂಟರ್‌ಗಳು ಮತ್ತು ಜೊತೆಯಲ್ಲಿ ಕೆಲಸಮಾಡುವಾಗ ತಂತ್ರಜ್ಞಾನ ಬೆಂಬಲ ಸುಗಮಗೊಳಿಸುತ್ತದೆ.

- **ಕಲಿಕಾದಾರನ ಸ್ವಾಯತ್ತತೆ :** ಕಲಿಕಾದಾರನ ಸ್ವಾಯತ್ತತೆಯನ್ನು ಗೌರವಿಸಲು ಸೂಚನಾತ್ಮಕ ಪ್ರಕ್ರಿಯೆಗಳು ಬದಲಾಗುತ್ತವೆ. ಕಲಿಕಾದಾರನೇ ಮುಖ್ಯವಾಗಿದ್ದು ಲಭ್ಯವಿರುವ ಕಲಿಕಾ ತಂತ್ರಗಳಲ್ಲಿ ತನಗಿಷ್ಟವಾದ ತಂತ್ರವನ್ನು ಆಯ್ಕೆ ಮಾಡಿಕೊಳ್ಳಬಹುದು. ಸ್ವ ಅಭ್ಯಾಸ, ಸಹಕಾರಿ ಮತ್ತು ಸಹಭಾಗಿತ್ವ ಅಧ್ಯಯನ, ಇ – ಕಲಿಯುವಿಕೆ ಮತ್ತು ಮಿಶ್ರಣ ಕಲಿಕೆ, ಗುಂಪುಕಲಿಕೆ ಜೊತೆಜೊತೆಗೆ ಕೆಲಸಮಾಡುವುದು ಮತ್ತು ಅಭಿವೃದ್ಧಿ ಹೊಂದುವುದು 1.3 ಶಿಕ್ಷಕ ಕಲಿಕಾದಾರರ ಗುಂಪುಗಳು, ಸಾಮಾಜಿಕ ಜಾಲಗಳಾದ ಬ್ಲಾಗ್ಸ್/ಫೇಸ್‌ಬುಕ್/ಟ್ವಿಟ್ಟರ್/ವೆಬ್ ಪೇಜಸ್ ಮುಂತಾದವುಗಳು ಹೊಸ ಕಲಿಕಾ ಪ್ರಕ್ರಿಯೆಗಳಾಗಿದ್ದು ಇವುಗಳನ್ನು ಅಭಿಪ್ರಾಯ ಮುಕ್ತ ಅನುಭವಗಳನ್ನು ಹಂಚಿಕೊಳ್ಳಲು ಚರ್ಚೆಯಲ್ಲಿ ಮತ್ತು ಕಲಿಯುವಿಕೆಯಲ್ಲಿ ಇವು ನಿರಂತರವಾಗಿ ಹೆಚ್ಚಾಗುತ್ತಿವೆ. ಓಇಆರ್‌ಗಳ ಬೆಳವಣಿಗೆ ಮತ್ತು ತಂತ್ರಗಳು, ಪಠ್ಯಕ್ರಮ ಅಭಿವೃದ್ಧಿ ತಂತ್ರಗಳು ಮತ್ತು ವಿಲೇವಾರಿಗಳಲ್ಲಿ ಜ್ಞಾನದ ಸೃಷ್ಠಿ ಮತ್ತು ಹಂಚುವಿಕೆ, ಸೃಜನಾತ್ಮಕ ಶಿಕ್ಷಣಶಾಸ್ತ್ರದಂತ ಹೊಸ ಶಿಕ್ಷಣ ಶಾಸ್ತ್ರವು ಸಾಂಪ್ರದಾಯಿಕ ಶಿಕ್ಷಣ ಶಾಸ್ತ್ರಕ್ಕಿಂತ ಹೆಚ್ಚು ಪರಿಣಾಮಕಾರಿಯಾಗಿದೆ.

- **ಹೊರಹೊಮ್ಮುತ್ತಿರುವ ಸಮಾಜದಲ್ಲಿ ಶಿಕ್ಷಕನ ಪಾತ್ರ :** ತಂತ್ರಜ್ಞಾನದ ಸವಾಲುಗಳು ಶಿಕ್ಷಕರಿಗೆ ಹೊಸಪಾತ್ರವನ್ನು ಸೃಷ್ಟಿಸಿವೆ. 'ಲಾರಿಲ್ಲಾರ್ಡ್ ಸಂಭಾಷಣೆ ಶಿಕ್ಷಕರಿಗೆ ನಾಲ್ಕು ರೀತಿ ಪಾತ್ರವನ್ನು ವಿವರಿಸಿದೆ. ಅವುಗಳೆಂದರೆ ತಾರ್ಕಿಕ, ಹೊಂದಿಕೆ ಮಾಡಿಕೊಳ್ಳುವಿಕೆ, ಪರಸ್ಪರ ಸಮಲೋಚಿಸುವಿಕೆ, ಪ್ರತಿಬಿಂಬಿಸುವಿಕೆ.

ಹೊಸ ಪ್ರಪಂಚದಲ್ಲಿ ಶಿಕ್ಷಕ ಇನ್ನು ಅನೇಕ ಪಾತ್ರಗಳನ್ನು ನಿರ್ವಹಿಸುವಂತೆ ನಿರೀಕ್ಷಿಸಲಾಗಿದೆ. ಅಂತಹ ಪಾತ್ರಗಳು ಇವುಗಳನ್ನೊಳಗೊಂಡಿವೆ.

- ಇ–ಸಂಸ್ಕೃತಿಯ ಅಭಿವೃದ್ಧಿಕಾರ ಮತ್ತು ಘೋಷಣೆ ಮಾಡುವುದು.
- ಜಾಲ ನಿರ್ಮಿಸುವವನು ಮತ್ತು ಏಜೆಂಟ್ ಬದಲಾವಣೆ
- ಕಲಿಕೆಯ ವೃತ್ತಿ ಮಾಡುವವನು ಮತ್ತು ಸುಗಮಗೊಳಿಸುವವನು.
- ಕಲಿಕಾ ಸಂಪನ್ಮೂಲ ಅಭಿವೃದ್ಧಿ ಪಡಿಸುವವನು
- ತಾಂತ್ರಿಕ ಶಿಕ್ಷಣಶಾಸ್ತ್ರ
- ಮೌಲ್ಯಮಾಪಕ
- ಕ್ರಿಯಾತ್ಮಕ ಸಂಶೋದನಾಕಾರ

Notes

- ನಡವಳಿಕೆ ವಿಜ್ಞಾನಿ
- ಪಠ್ಯಕ್ರಮ ವಿನ್ಯಾಸಗಾರ ಮತ್ತು ನೇರವೇರಿಸುವವರು
- ಸೂಚನಾತ್ಮಕ ವ್ಯವಸ್ಥೆ ವಿನ್ಯಾಸಗಾರ

ಆದರೆ ಇಂಥ ಶಿಕ್ಷಕರನ್ನು ನಮ್ಮ ಶಿಕ್ಷಣ ವ್ಯವಸ್ಥೆ ರೂಪಿಸುತ್ತಿದೆಯೇ? ಗತಕಾಲದ ಶಿಕ್ಷಕ ಮತ್ತು 21ನೇ ಶತಮಾನದಲ್ಲಿ ಶಿಕ್ಷಕ ವೃತ್ತಿಯಲ್ಲಿರುವವರ ನಡುವೆ ಕೆಲವು ಸಮಾನ ಲಕ್ಷಣಗಳಿವೆ. ಆದರೆ ಪರಿಸ್ಥಿತಿ ಸಂಪೂರ್ಣ ಭಿನ್ನವಾಗಿದೆ. ಆದ್ದರಿಂದ ಅವರನ್ನು ಹೋಲಿಕೆ ಮಾಡುವ ಮುನ್ನ ಶಿಕ್ಷಣ ಯಾವ ಸ್ಥಿತಿಗಳು ಮತ್ತು ವಿದ್ಯಮಾನಗಳಲ್ಲಿ ನಡೆದು ಬಂದಿದೆ ಮತ್ತು ಹೇಗೆ ಆಧುನಿಕ ಶಿಕ್ಷಣ ಹೊರಹೊಮ್ಮಿದೆ. ಮತ್ತು ಶಿಕ್ಷಕ ಪಾತ್ರ ಗೋಚರ ಯಾವ ರೀತಿ ಬದಲಾಗಿದೆ ವಿಶೇಷವಾಗಿ ಪ್ರಾಥಮಿಕ ಶಾಲೆಗಳಲ್ಲಿ ಎನ್ನುವುದನ್ನು ನೋಡುವುದರ ಅಗತ್ಯತೆ ಇದೆ. RTE ಶಿಕ್ಷಕನ ಪಾತ್ರ ಮತ್ತು ಜವಾಬ್ದಾರಿಗಳನ್ನು ಆಜ್ಞಾಪಿಸುತ್ತದೆ. ಅವುಗಳನ್ನು ಮುಂದಿನ ಘಟಕದಲ್ಲಿ ವಿವರಿಸಲಾಗಿದೆ.

## 1.3 ಇಂದಿನ ಭಾರತದ ಶಿಕ್ಷಣ ಆರಂಭ : ಸ್ವಾತಂತ್ರ್ಯ ಪೂರ್ವ ಅವಧಿ

ವೇದಿಕ್ ಅವಧಿಯ ಅಂತ್ಯಕ್ಕೆ ಮತ್ತು ಮಧ್ಯಯುಗೀಯ ಅವಧಿಯಲ್ಲಿ ಧರ್ಮ ಪ್ರಚಾರಕರು ಮತ್ತು ವಿವಿಧ ಧಾರ್ಮಿಕ ಗುಂಪುಗಳು ಭಾರತೀಯರಿಗೆ ಮೂಲ ಶಿಕ್ಷಣವನ್ನು ಇಂಗ್ಲೀಷ್‌ನಲ್ಲಿ ಚರ್ಚುಗಳ ಮೂಲಕ ಸಂಸ್ಕೃತದಲ್ಲಿ ಸ್ಥಳೀಯ ದೇವಸ್ಥಾನ ಶಾಲೆಗಳಲ್ಲಿ ಪರ್ಶಿಯ ಮತ್ತು ಅರೇಬಿಕ್ ಬಳಸಿಕೊಂಡು ಮದ್ರಾಸಸ್‌ಗಳಲ್ಲಿ ಅಲ್ಲಿನ ರಾಜಮಹಾರಾಜರ ಮತ್ತು ಶ್ರೀಮಂತರು ನೀಡುವ ದಾನದಿಂದ ಈಸ್ಟ್ ಇಂಡಿಯ ಕಂಪನಿ ಭಾರತ ಪ್ರವೇಶ ಮಾಡುವ ತನಕ ಕೆಲವು ಮಕ್ಕಳಿಗೆ ಶಿಕ್ಷಣ ನೀಡುತ್ತಿದ್ದರು. ಆದಾಗ್ಯೂ ಈ ದೇಶದ ಪ್ರಸ್ತುತ ಶಿಕ್ಷಣ ವ್ಯವಸ್ಥೆಯ ಉಗಮವನ್ನು 19ನೇ ಶತಮಾನದ ಪ್ರಾರಂಭದಲ್ಲಿ ಗುರುತಿಸಬಹುದು.

### 1.3.1 ಮೆಕಾಲೆಯುವರ ಟಿಪ್ಪಣಿ

ಲಾರ್ಡ್ ಮೆಕಾಲೆ (ಥಾಮಸ್ ಬಾಬಿಂಗ್‌ಟನ್ ಮೆಕಾಲೆ) 10.06.1934 ರಂದು ಇಂಡಿಯಾದ ಸುಪ್ರೀಮ್ ಕೌನ್ಸಿಲ್ ಸದಸ್ಯರಾಗಿ ಭಾರತಕ್ಕೆ ಬಂದರು. ಆಗ ವಿಲಿಯಂ ಬೆಂಟಿಕ್ ಗೌವರ್ನರ್ ಜನರಲ್ ಆಗಿದ್ದರು. ಅವನು 1838 ರಲ್ಲಿ ಇಂಗ್ಲೆಂಡಿಗೆ ಹಿಂತಿರುಗಿ ಹೋಗಿ ಅಲ್ಲಿ ತನ್ನ ಬರವಣಿಗೆಯನ್ನು ಮುಂದುವರೆಸಿದನು. ಮೆಕಾಲೆ ಭಾರತದಲ್ಲಿದ್ದುದು ಕೇವಲ ನಾಲ್ಕು ವರ್ಷ ಮಾತ್ರ. ಆದರೆ ಅವನು ಭಾರತದ ಕೋಟ್ಯಾಂತರ ಜನರ ಜೀವನದ ಮೇಲೆ ಪ್ರಭಾವ ಬೀರಲು ಯೋಚಿಸಿದ್ದನು.

Notes

## ಇಂಗ್ಲೀಷಿನ ಸಾರ್ವಭೌಮತ್ವ :

ಸಾರ್ವಜನಿಕ ಶಿಕ್ಷಣದ ಸಾಮಾನ್ಯ ಸಮಿತಿಯ ಅಧ್ಯಕ್ಷನಾಗಿದ್ದ ಲಾರ್ಡ್ ಮೆಕಾಲೆಯವರು ಚರ್ಚೆಯಲ್ಲಿ ಭಾಗವಹಿಸಿ 1935 ರ ಜನವರಿಯಲ್ಲಿ ಈ ವಿಷಯದ ಬಗ್ಗೆ ಜ್ಞಾಪಕ ಪತ್ರವನ್ನು ತಯಾರಿಸಿ ಪ್ರಚಾರ ಮಾಡಿದನು. ಅವನು ಸ್ವದೇಶಿ ಜ್ಞಾನಗಳಾದ ಸಂಸ್ಕೃತ, ಅರೇಬಿಕ್ ಮತ್ತು ಪರ್ಶಿಯನ್ ಮತ್ತು ಸ್ವದೇಶಿ ಸಂಸ್ಕೃತಿ ಬಗ್ಗೆ ನಿರ್ಣಾಯಕ ಧೋರಣೆ ತೆಗೆದುಕೊಂಡನು. ಹಾಗೂ ಪಾಶ್ಚಾತ್ಯ ವಿಜ್ಞಾನಗಳನ್ನು ಇಂಗ್ಲೀಷ್ ಭಾಷೆಯಲ್ಲೇ ಬೋಧಿಸಬೇಕೆನ್ನುವ ನಿರ್ಧಾರ ತೆಗೆದುಕೊಂಡನು. ಅವನ ಅಭಿಪ್ರಾಯಗಳು ಮೆಕಾಲೆಯವರ ಭಾರತದ ಶಿಕ್ಷಣದಲ್ಲಿ ಟಿಪ್ಪಣಿ ಎಂದು ಪ್ರಸಿದ್ದಿಯಾಗಿವೆ. ಅವನು ಎಷ್ಟು ಪ್ರಭಾವಶಾಲಿಯಾಗಿದ್ದ ಎನ್ನುವುದನ್ನು ನಾವು ನೋಡಬಹುದು ಮಹಾತ್ಮಾಗಾಂಧಿ ವಾರ್ದಾದ ದೇಶೀಯ ಶಿಕ್ಷಣ ವ್ಯವಸ್ಥೆ ಅಂದರೆ ಮೂಲ ಶಿಕ್ಷಣದ ಬಗ್ಗೆ ಚಿಂತಿಸಲು 100 ವರ್ಷಗಳೇ ಬೇಕಾದವು. ಮೇಕಾಲೆಯ ನಂತರ ಸುಮಾರು ಎರಡು ನೂರು ವರ್ಷಗಳು ಕಳೆದಿದ್ದರೂ ಇಂದಿಗೂ ಮೆಕಾಲೆಯ ಪಿಶಾಚಿ ಅನೇಕ ರೂಪದಲ್ಲಿ ಭಾರತೀಯ ಶಿಕ್ಷಣ ವ್ಯವಸ್ಥೆಯಲ್ಲಿ ಒಳನುಸುಳಿದೆ. ಉದಾಹರಣೆಗೆ ಭಾರತದಲ್ಲಿ ಪೋಷಕರು ತಮ್ಮ ಮಕ್ಕಳಿಗೆ ಶಿಕ್ಷಣ ನೀಡುವಾಗ ಇಂಗ್ಲೀಷ್ ಮಾಧ್ಯಮದ ಶಾಲೆಯನ್ನು ಬಯಸುವುದು.

ಅವನು ಇನ್ನು ಮುಂದುವರೆದು ನಮ್ಮ ಮಿತ ಸಂಪನ್ಮೂಲಗಳಿಂದ ಜನರಿಗೆ ಶಿಕ್ಷಣ ನೀಡಲು ಪ್ರಯತ್ನಿಸುವುದು ನಮಗೆ ಅಸಾಧ್ಯ ಎಂದು ತಿಳಿಸುತ್ತಾನೆ. ನಾವು ಈಗ ಒಂದು ವರ್ಗವನ್ನು ರೂಪಿಸಲೇಬೇಕು. ಅವರು ನಮ್ಮ ಮತ್ತು ಆಳ್ವಿಕೆಗೊಳಪಟ್ಟಿರುವ ಕೋಟ್ಯಾಂತರ ಜನರ ನಡುವೆ ವ್ಯಾಖ್ಯಾನಕಾರರಾಗಿ ಕಾರ್ಯ ನಿರ್ವಹಿಸಬೇಕು. ಆ ವರ್ಗದ ಜನರು ಭಾರತೀಯ ರಕ್ತ ಮತ್ತು ವರ್ಣದವರಾಗಿರಬೇಕು. ಆದರೆ ನೀತಿ ಅಭಿರುಚಿ ಮತ್ತು ವಿವೇಕದಲ್ಲಿ ಇಂಗ್ಲೀಷ್‌ನಂತಿರಬೇಕು. ಆ ವರ್ಗಕ್ಕೆ ದೇಶದ ಪ್ರಾಂತ ಭಾಷೆ ಮಾತೃಭಾಷೆಯನ್ನು ಸುಧಾರಣೆ ಮಾಡುವ ಕೆಲಸವನ್ನು ನಾವು ನೀಡಬಹುದು. ಪಾಶ್ಚಾತ್ಯರ ಹೆಸರಿನೊಂದಿಗೆ ತಂದಿರುವ ವಿಜ್ಞಾನ ಸಂಬಂಧ ನಾಡಭಾಷೆಯನ್ನು ಶ್ರೀಮಂತಗೊಳಿಸಲು ಮತ್ತು ದೊಡ್ಡ ಜನ ಸಮೂಹಕ್ಕೆ ಜ್ಞಾನವನ್ನು ತಲುಪಿಸಲು ಸೂಕ್ತ ವಿಧಾನಗಳ ಬಳಕೆ ಅಗತ್ಯ.

ಮೆಕಾಲೆಯವರ ಟಿಪ್ಪಣಿ ಮತ್ತು ನೀತಿಯಿಂದ ಡೌನ್‌ವರ್ಡ್ ಫಿಲ್ಟ್ರೇಷಿನ್ ಸಿದ್ದಾಂತವನ್ನು ಗೌರ್ನರ್ ಜನರಲ್ ಆದ ಲಾರ್ಡ್ ಬೆಂಟಿಕ್ ಬ್ರಿಟಿಷ್ ಆಳ್ವಿಕೆ ಪರವಾಗಿ ಒಪ್ಪಿಕೊಳ್ಳುತ್ತಾನೆ. ಮತ್ತು ಭಾರತದ ಶಿಕ್ಷಣ ವ್ಯವಸ್ಥೆಯಲ್ಲಿ ಇಂಗ್ಲೀಷ್ ಭಾಷೆ ಶಿಕ್ಷಣದ ಮಾಧ್ಯಮ ಎಂದು ಒಪ್ಪಿಕೊಳ್ಳುವಂತೆ ಆದೇಶ ನೀಡುತ್ತಾನೆ. ಅಂದಿನಿಂದ ಮೆಕಾಲೆ ಟಿಪ್ಪಣಿ ಕೆಲವು ಶತಮಾನಗಳ ಕಾಲ ಭಾರತದ ಶಿಕ್ಷಣದ ಆಧಾರವಾಗಿದೆ. ಭಾರತೀಯ ಶಿಕ್ಷಣ ಮೆಕಾಲೆಯವರ ಆ ಅಭಿಪ್ರಾಯಕ್ಕೊಳಗಾಗಿಯೇ ಉಳಿದಿದೆ. ಸ್ವಾತಂತ್ರ್ಯ ನಂತರವೂ ನಾವು ಇಂಗ್ಲೀಷ್‌ನ್ನು ಶಿಕ್ಷಣದ ಮಾಧ್ಯಮವನ್ನಾಗಿ ಮುಂದುವರೆಸಿದ್ದೇವೆ.

ಮೆಕಾಲೆ ಎರಡು ನಾಡ ಭಾಷೆಗಳಾದ ಅರೇಬಿಕ್ ಮತ್ತು ಸಂಸ್ಕೃತವನ್ನು ಇಂಗ್ಲೀಷ್‌ಗೆ ವಿರುದ್ದವಾಗಿ ತಿರಸ್ಕರಿಸಿದನು. ಏಕೆಂದರೆ ಇಂಗ್ಲೀಷ್ ಈ ಎರಡು ಭಾಷೆಗಳಿಗಿಂತ ಉತ್ತಮ ಎಂದು ಪರಿಗಣಿಸಿದ್ದನು. ಭಾರತದ ನಾಡ ಸಾಹಿತ್ಯಗಳು ಮತ್ತು ಅರೇಬಿಯಕ್ಕಿಂತ ಯುರೋಪಿಯನ್ ಗ್ರಂಥಾಲಯ ಯೋಗ್ಯ ಎಂದು ಭಾವಿಸುತ್ತಾನೆ. ಪಾಶ್ಚಾತ್ಯ ಸಾಹಿತ್ಯದ ಸಹಜ ಹೆಚ್ಚುಗಾರಿಕೆಯನ್ನು ಪೂರ್ಣವಾಗಿ ಒಪ್ಪಿಕೊಳ್ಳಲಾಗಿತ್ತು. 3 ಭಾರತದಲ್ಲಿ ಆಳುವವರ್ಗದವರು ಇಂಗ್ಲೀಷ್ ಭಾಷೆಯಲ್ಲಿ ಮಾತನಾಡುತ್ತಾರೆ. ಸರ್ಕಾರದ ಅಡಿಯಲ್ಲಿ ಕೆಲಸ ಮಾಡುವ ಸ್ವದೇಶ ಮೇಲ್ವರ್ಗದವರು ಇಂಗ್ಲೀಷ್‌ನಲ್ಲಿ ಮಾತನಾಡುತ್ತಾರೆ ಎಂದು ಅವಲೋಕನ ಮಾಡಿದ್ದಾನೆ. (4) ಅವನಿಗೆ ನಾವು ಅರೇಬಿಕ್ ಮತ್ತು ಸಂಸ್ಕೃತ ಕಾಲೇಜುಗಳಿಗೆ ವೆಚ್ಚ ಮಾಡುವುದು ಸತ್ಯದ ಕಾರಣಕ್ಕಾಗಿ ಪೂರ್ಣ ನಷ್ಟ. ತಪ್ಪುಗಳ ಚಾಂಪಿಯನ್ ಬೆಳೆಯಲು ಹೆಚ್ಚು ಹಣ ಪಾವತಿ ಮಾಡಿದಂತೆ

ಭಾರತದ ಇತಿಹಾಸದಲ್ಲಿ ಶಿಕ್ಷಣ ರಾಜ್ಯ ವ್ಯವಸ್ಥೆ ಅಧಿಕೃತವಾಗಿ ಚಾರ್ಟರ್ ಕಾಯಿದೆ ಮೂಲಕ ಜಾರಿಗೊಳಿಸಿದೆ. ಈಸ್ಟ್ ಇಂಡಿಯಾ ಕಂಪನಿಯ ಚಾರ್ಟರ್‌ನ್ನು ಬ್ರಿಟಿಷ್ ಪಾರ್ಲಿಮೆಂಟ್ ಪ್ರತಿ 20 ವರ್ಷಗಳಿಗೊಮ್ಮೆ ಮುಂದುವರೆಸುತ್ತಿತ್ತು. 1813 ರ ಚಾರ್ಟರ್‌ನ್ನು ಮುಂದುವರೆಸುವಂತೆ

Notes

ಬೇಡಿಕೆ ಬಂದಾಗ ಬ್ರಿಟಿಷ್ ಪಾರ್ಲಿಮೆಂಟ್ ಈಸ್ಟ್ ಇಂಡಿಯಾ ಕಂಪನಿಗೆ ಸಾಹಿತ್ಯದ ಪುನಶ್ಚೇತನ ಮತ್ತು ಅಭಿವೃದ್ಧಿಗಾಗಿ ಪ್ರತಿ ವರ್ಷಕ್ಕೆ 1 ಲಕ್ಷ ಮತ್ತು ಕಲಿತ ಭಾರತ ದೇಶದ ವಾಸಿಗಳಿಗೆ ಪ್ರೋತ್ಸಾಹಿಸಲು ಹಾಗೂ ಬ್ರಿಟಿಷ್ ಭಾಗದ ವಾಸಿಗಳಿಗೆ ವಿಜ್ಞಾನದ ಜ್ಞಾನಕ್ಕಾಗಿ ದರ ನಿಗಧಿ ಪಡಿಸಿತು.

ಹೀಗೆ ಮೊದಲ ಬಾರಿಗೆ ಹಣಕಾಸು ಏರ್ಪಾಡನ್ನು ಅಧಿಕೃತವಾಗಿ ಮಾಡಿದರು. ಹಾಗೂ ಈಸ್ಟ್ ಇಂಡಿಯ ಕಂಪನಿಯನ್ನು ದೇಶವಾಸಿಗಳ ಶಿಕ್ಷಣಕ್ಕೆ ಜವಾಬ್ದಾರನ್ನಾಗಿಸಿತು.

**ನಿಮ್ಮ ಪ್ರಗತಿಯನ್ನು ಪರೀಕ್ಷಿಸಿ ಕೊಳ್ಳಿ –2**

ಎ) ಡೌನ್‌ವರ್ಡ್ ಫಿಲ್ಟ್ರೇಶನ್ ಸಿದ್ಧಾಂತವನ್ನು ವಿವರಿಸಿ.

. ................................................................................................

................................................................................................

................................................................................................

ಬ) ಸರ್ಕಾರದ ಹಣವನ್ನು ಸ್ವದೇಶಿ ಭಾಷೆಗಳಿಗೆ ಬದಲಾಗಿ ಇಂಗ್ಲೀಷಿನ ಸುಧಾರಣೆಗೆ ವೆಚ್ಚ ಮಾಡಲು ಮೆಕಾಲೆಯವರು ಏಕೆ ಪ್ರಸ್ತಾಪಿಸಿದರು?

................................................................................................

................................................................................................

................................................................................................

### 1.3.2 ವುಡ್ಸ್‌ರ ಸರ್ಕಾರಿ ವರದಿ ;

ಸಮಗ್ರ ಶಿಕ್ಷಣ ಮತ್ತು ಸಂಘಟನಾತ್ಮಕ ಸ್ವರೂಪ ; ಲಾರ್ಡ್ ವಿಲಿಯಂ ಬೆಂಟಿಂಕ್‌ನ ಶೈಕ್ಷಣಿಕ ನೀತಿಯನ್ನು ಮುಂದಿನ 40 ವರ್ಷಗಳವರೆಗೆ ಮೆಕಾಲೆಯವರ ಟಿಪ್ಪಣಿ ಯಾವ ರೀತಿ ಪ್ರಭಾವಕ್ಕೊಳಪಡಿಸಿತು ಎನ್ನುವುದನ್ನು ನೀವು ನೋಡಿರುವಿರಿ. ಕಂಪನಿ ಚಾರ್ಟ್‌ರನ್ನು ಮುಂದುವರೆಸುವುದು ಬಂದಾಗ ಬ್ರಿಟಿಷ್ ಪಾರ್ಲಿಮೆಂಟ್ ಭಾರತದಲ್ಲಿನ ಶಿಕ್ಷಣ ಪ್ರಗತಿಯನ್ನು ಪರಿಶೀಲಿಸಲಾಯಿತು. ಅಭಿಪ್ರಾಯಗಳು ಹಾಗೂ ಸಲಹೆ ಮಾಡಲಾದ ಸುಧಾರಣೆಗಳನ್ನು ಶಿಕ್ಷಣ ಚಾರ್ಟರ್‌ನ ರೂಪದಲ್ಲಿ ಹೊರಡಿಸಲಾಯಿತು. ಇದನ್ನು 1854ರ ವುಡ್ಸ್ ಸರ್ಕಾರಿ ವರದಿ ಎಂದು ಕರೆಯಲಾಯಿತು. ಭಾರತದಲ್ಲಿ ಇದು ಶಿಕ್ಷಣದ ಇಂಗ್ಲೀಷರು ಪಡೆದುಕೊಂಡ ಸ್ವಾತಂತ್ರ್ಯದ ಮಹಾಶಾಸನದ ಹಕ್ಕು ಎಂದು ಪರಿಗಣಿಸಲ್ಪಟ್ಟಿದೆ.

ಸರ್ಕಾರಿ ವರದಿ ಸಮಗ್ರ ಮುಖ್ಯ ಶೈಕ್ಷಣಿಕ ದಾಖಲೆಯಾಗಿದೆ ಹಾಗೂ ಭಾರತದ ಶಿಕ್ಷಣದ ಇತಿಹಾಸದಲ್ಲಿ ವಿಶಿಷ್ಟ ಸ್ಥಾನವನ್ನು ಪಡೆದುಕೊಂಡಿದೆ. ಇದು ಭಾರತದ ಜನರ ಶಿಕ್ಷಣದ ಜವಾಬ್ದಾರಿಯನ್ನು ಪೂರ್ಣವಾಗಿ ನೇಮಿಸುತ್ತದೆ. ಹಾಗೂ ಇದನ್ನು ಯಾವಾಗಲೂ ಕಡೆಗಾಣಿಸಬಾರದು ಎನ್ನುವುದನ್ನು ಸ್ಪಷ್ಟಪಡಿಸುತ್ತದೆ. ಸರ್ಕಾರಿ ವರದಿ ಭಾರತದಲ್ಲಿ ಶಿಕ್ಷಣಕ್ಕೆ ಹೊಸ ದಿಕ್ಕನ್ನು ನೀಡಿದೆ ಹಾಗೂ ದೇಶದ ಇಂದಿನ ಶಿಕ್ಷಣದಲ್ಲಿ ಅದರ ಪ್ರಭಾವವಿದೆ.

ಐರೋಪ್ಯ ಕಲೆ, ವಿಜ್ಞಾನ, ತತ್ವಶಾಸ್ತ್ರ ಮತ್ತು ಇಂಗ್ಲೀಷ್ ಮೂಲಕ ಸಾಹಿತ್ಯದ ಹರಡುವಿಕೆಯೇ ಶಿಕ್ಷಣದ ಗುರಿ. ಭಾರತೀಯ ಭಾಷೆಗಳನ್ನು ಪ್ರೋತ್ಸಾಹಿಸಲಾಯಿತು. ಸಾರ್ವಜನಿಕ ಸೇವಕರ ಒಂದು ವರ್ಗದ ಸೃಷ್ಟಿಯು ಒಂದು ಮುಖ್ಯ ಉದ್ದೇಶವಾಗಿದೆ. ಈ ಉದ್ದೇಶಕ್ಕಾಗಿ ಸಾಮೂಹಿಕ ಶಿಕ್ಷಣದ ವಿಸ್ತರಣೆಗೆ ಆದ್ಯತೆ ನೀಡಲಾಯಿತು.

Notes

ವುಡ್ಸ್ ಸರ್ಕಾರಿ ವರದಿಯು ಮೊದಲ ಬಾರಿಗೆ ಬೆಂಗಾಲ್, ಬಾಂಬೆ, ಮದ್ರಾಸ್, ಪಂಜಾಬ್ ಮತ್ತು ವಾಯುವ್ಯದ ರಾಜ್ಯಗಳು ಈ ಐದು ರಾಜ್ಯಗಳಲ್ಲಿ ಸಾರ್ವಜನಿಕ ಶಿಕ್ಷಣ ಇಲಾಖೆಯ ಸೃಷ್ಠಿಗೆ ಶಿಫಾರಸ್ಸು ಮಾಡಿತು. ಉನ್ನತ ಶಿಕ್ಷಣಕ್ಕಾಗಿ ವಿಶ್ವವಿದ್ಯಾನಿಲಯಗಳನ್ನು ಸ್ಥಾಪಿಸುವ ಸಮಗ್ರ ಸಂಘಟನಾತ್ಮಕ ಸ್ಕೀಂನ್ನು ಪ್ರಾರಂಭಿಸಿತು. ಅವರು ವಿವಿಧ ವಿಷಯಗಳಲ್ಲಿ ಪರೀಕ್ಷೆ ನಡೆಸಿ ಪದವಿ ನೀಡುತ್ತಿದ್ದವು. ಇದು 1857 ರಲ್ಲಿ ಕಲ್ಕತ್ತಾ, ಬಾಂಬೆ ಮತ್ತು ಮದ್ರಾಸ್‌ಗಳಲ್ಲಿ ಮೊದಲ ಬಾರಿಗೆ ಮೂರು ವಿಶ್ವವಿದ್ಯಾನಿಲಯಗಳ ಸ್ಥಾಪನೆ ಕಾರಣವಾಯಿತು.

ಭಾರತದಲ್ಲಿ ಭವಿಷ್ಯದ ಶಿಕ್ಷಣದ ಅಭಿವೃದ್ಧಿಗೆ ಸಂಬಂಧಿಸಿದಂತೆ ವುಡ್ಸ್ ಸರ್ಕಾರಿ ವರದಿ ಅನೇಕ ಮೌಲ್ಯಯುತ ಮತ್ತು ಮೂಲಭೂತ ಶಿಫಾರಸ್ಸುಗಳನ್ನು ಮಾಡಿದೆ. ಇದು ಶಿಕ್ಷಣದ ವರ್ಗೀಕರಣ, ಶಿಕ್ಷಣದ ಮಾಧ್ಯಮ ಮತ್ತು ಭಾರತದ ಭವಿಷ್ಯದಲ್ಲಿ ಶೈಕ್ಷಣಿಕ ಬೆಳವಣಿಗೆಗಳ ಕ್ರಮಗಳಿಗೆ ಸಂಬಂಧಿಸಿದಂತೆ ಹೊಸ ದಿಕ್ಕನ್ನು ನೀಡಿದೆ.

ಡಾಕ್ಯುಮೆಂಟ್‌ನ ಮುಖ್ಯ ಅವಕಾಶಗಳು ಹೆಚ್ಚು ಐತಿಹಾಸಿಕ ಪ್ರಾಮುಖ್ಯತೆ ಪಡೆದುಕೊಂಡಿವೆ. ಇದು ಪ್ರೌಢ ಶಿಕ್ಷಣ ಮತ್ತು ಸ್ವಲ್ಪಮಟ್ಟಿಗೆ ಪ್ರಾಥಮಿಕ ಶಿಕ್ಷಣವನ್ನು ಮೇಲಕ್ಕೆ ಎತ್ತಿದೆ. ಆದಾಗ್ಯೂ ಸರ್ಕಾರದ ವರದಿಯ ಕೆಲವು ಮುಖ್ಯ ಶಿಫಾರಸ್ಸುಗಳನ್ನು ಬಹಳ ದೀರ್ಘಾವಧಿಯವರೆಗೂ ಅನುಷ್ಠಾನಗೊಳಿಸಲಿಲ್ಲ. ಹಾಗೂ ಇನ್ನು ಕೆಲವಕ್ಕೆ ತಪ್ಪು ಅಭಿಪ್ರಾಯ ಕೊಡುವ ರೀತಿ ಇದ್ದವು. ಸರ್ಕಾರಿ ವರದಿಯ ನಂತರದ ಮೂವತ್ತು ವರ್ಷಗಳಲ್ಲಿ ಸರ್ಕಾರಿ ಸಂಸ್ಥೆಗಳು ಕ್ರಮೇಣವಾಗಿ ಹೆಚ್ಚಾದವು. ಆದರೆ ಮೊದಲು ಕ್ರೈಸ್ತ ದರ್ಮ ಪ್ರಚಾರಕರಿಗೆ ಮತ್ತು ಇತರ ಖಾಸಗಿ ಪ್ರಯತ್ನಗಳಿಗೆ ಪ್ರೋತ್ಸಾಹ ನೀಡಲಿಲ್ಲ.

ಸಾಮೂಹಿಕ ಶಿಕ್ಷಣವನ್ನು ಹರಡುವ ಯೋಜನೆಗಳು ಕಾರ್ಯಗತಗೊಳ್ಳಲಿಲ್ಲ. ಅಲ್ಲದೇ ಮಾತೃಭಾಷೆಯ ಪ್ರೌಢಶಾಲೆಗಳು ಸ್ಥಾಪನೆಯಾಗಲಿಲ್ಲ. ಇದು ಸಾರ್ವತ್ರಿಕ ಸಾಕ್ಷರತೆಯನ್ನು ಪ್ರಾಮಾಣಿಕವಾಗಿ ಪ್ರೋತ್ಸಾಹಿಸಲಿಲ್ಲ. ಒಂದು ಶತಮಾನದ ನಂತರವೂ ಸರ್ಕಾರಿ ವರದಿ ಭಾರತೀಯರ ಆಶೋತ್ತರಗಳನ್ನು ಪೂರೈಸಲಿಲ್ಲ. ನಿಮಗೆ ತಿಳಿದಿರುವಂತೆ 1857 ರ ದಂಗೆಯ ನಂತರ ಈಸ್ಟ್ ಇಂಡಿಯ ಕಂಪನಿ ವಿಸರ್ಜನೆಗೊಂಡಿತು. ಹಾಗೂ ಸರ್ಕಾರ ನೇರವಾಗಿ ಬ್ರಿಟಿಷ್ ರಾಜರ ಆಡಳಿತಕ್ಕೊಳಪಟ್ಟಿತು. ಇದರ ಪರಿಣಾಮವಾಗಿ ಸಾಮ್ರಾಜ್ಯ ಮತ್ತು ಶಿಕ್ಷಣವನ್ನು ಒಂದುಗೂಡಿಸಲು ಮಾಡಲಾಗುವ ಪ್ರಯತ್ನಗಳನ್ನು ಸ್ವಲ್ಪಮಟ್ಟಿಗೆ ಕೈಬಿಟ್ಟಿತು.

**ನಿಮ್ಮ ಪ್ರಗತಿಯನ್ನು ಪರೀಕ್ಷಿಸಿ**

ಎ) ವುಡ್ಸ್‌ರ ಸರ್ಕಾರಿ ವರದಿಯ ಎರಡು ಮುಖ್ಯ ಶಿಫಾರಸ್ಸುಗಳನ್ನು ತಿಳಿಸಿ.

..........................................................................................................

..........................................................................................................

..........................................................................................................

ಬಿ) ವುಡ್ಸ್ ಸರ್ಕಾರಿ ವರದಿಯಿಂದ ಪ್ರಸ್ತುತ ಶಿಕ್ಷಣ ವ್ಯವಸ್ಥೆಯ ಯಾವ ಅಂಶ ಬಹುಮಟ್ಟಿಗೆ ಪ್ರಭಾವಕ್ಕೊಳಗಾಗಿದೆ.

..........................................................................................................

..........................................................................................................

..........................................................................................................

Notes

### 1.3.3 ಹಂಟರ್ ಆಯೋಗ

ಶಿಕ್ಷಣದ ವೃತ್ತೀಕರಣ 1882 ರಲ್ಲಿ 1854ರ ಸರ್ಕಾರಿ ವರದಿಯ ಅನುಷ್ಠಾನವನ್ನು ಪರಿಶೀಲಿಸಲು ಹಂಟರ್ ನಿಯೋಗವನ್ನು ನೇಮಕ ಮಾಡಲಾಯಿತು. ಇದು ಶಾಲಾ ಶಿಕ್ಷಣವನ್ನು ಎರಡು ರೀತಿಯಲ್ಲಿ ಅಂದರೆ ಗಳ ಪ್ರೌಢ ಶಿಕ್ಷಣ ಒಂದು ವಿಶ್ವವಿದ್ಯಾನಿಲಯ ಶಿಕ್ಷಣಕ್ಕೆ ಹಾದಿಮಾಡಿಕೊಟ್ಟರೆ ಮತ್ತೊಂದು ವಾಣಿಜ್ಯ, ವೃತ್ತಿಪರ ಮತ್ತು ತಾಂತ್ರಿಕ ಶಿಕ್ಷಣಕ್ಕೆ ದಾರಿ ಮಾಡಿಕೊಡುತ್ತದೆ. ಇದು ಶಾಲಾ ಪಠ್ಯಕ್ರಮವನ್ನು ವೈವಿಧ್ಯಮಯವನ್ನಾಗಿ ಮಾಡಲು ಮುಕ್ತ ವೃತ್ತಿಪರ ಶಿಕ್ಷಣವನ್ನು ಜಾರಿಗೊಳಿಸಲು ಮಾಡಿದ ಪ್ರಥಮ ಪ್ರಯತ್ನವಾಗಿದೆ. ವಾಣಿಜ್ಯ ವೃತ್ತಿಪರ ಅಥವಾ ಸಾಕ್ಷರತೆ ರಹಿತ ಶಿಕ್ಷಣದ ಬಗ್ಗೆ ಹಂಟರ್ ಆಯೋಗ ನಿರ್ದಿಷ್ಟ ಶಿಫಾರಸ್ಸುಗಳನ್ನು ನೀಡಿದಾಗ್ಯೂ ಅದರ ಪ್ರಭಾವ ಸಾರ್ವನಿಕರ ಮೇಲೆ ಅಥವಾ ಸರ್ಕಾರದ ಪ್ರಶಂಶೆಗೊಳಗಾದರೂ ಈ ಕಾರ್ಯಶೀಲ ಸಲಹೆಯನ್ನು ಮತ್ತು ಶಿಫಾರಸ್ಸುಗಳನ್ನು ಸಂಪೂರ್ಣವಾಗಿ ಕಡೆಗಾಣಿಸಲಾಯಿತು. ಈ ದಿಕ್ಕಿನಲ್ಲಿ ಕಳೆದ 150 ವರ್ಷಗಳಲ್ಲಿ ಮಹತ್ವದಾದದ್ದೇನೂ ಮಾಡಿಲ್ಲ.

### 1.3.4 ವಿಶ್ವವಿದ್ಯಾನಿಲಯಗಳ ಆಯೋಗ

ವಿಶ್ವವಿದ್ಯಾನಿಲಯಗಳ ನಿಯಂತ್ರಣದಲ್ಲಿ ಶಾಲೆಗಳು : ಬ್ರಿಟಿಷ್‌ರಾಜ್‌ನಲ್ಲಿ ಸ್ಥಾಪನೆಯಾದ ವಿಶ್ವವಿದ್ಯಾನಿಲಯಗಳ ಸ್ಥಿತಿಗತಿ ಮತ್ತು ನೋಟವನ್ನು ಪರಿಶೀಲಿಸಲು 1902 ರಲ್ಲಿ ಹೊಸ ಆಯೋಗವನ್ನು ನೇಮಕ ಮಾಡಲಾಯಿತು. ಈ ಆಯೋಗ ವಿಶ್ವವಿದ್ಯಾನಿಲಯದ ಆಡಳಿತವನ್ನು ಸಮ್ಮತಿಸಲು ಶಿಫಾರಸ್ಸುಗಳ್ನು ಮಾಡಿತು. ವಿಶ್ವವಿದ್ಯಾನಿಲಯದಿಂದ ಕಾಲೇಜುಗಳ ಸರಿಯಾದ ಮತ್ತು ವ್ಯವಸ್ಥಿತ ಮೇಲ್ವಿಚಾರಣೆ ಮತ್ತು ಸಂಯೋಜನೆಗೆ ಕಟ್ಟುನಿಟ್ಟಾದ ಸ್ಥಿತಿಗತಿಗಳು ಮತ್ತು ಪಠ್ಯಕ್ರಮ ಮತ್ತು ಪರೀಕ್ಷೆ ದೊಡ್ಡ ಬದಲಾವಣೆ. ಇದು ಶಾಲಾ ಶಿಕ್ಷಣಕ್ಕೆ ಹೆಚ್ಚು ಸಮಂಜಸ ಮತ್ತು ಮುಖ್ಯ. ಆದ್ದರಿಂದ ಶಾಲೆಗಳನ್ನು ವಿಶ್ವವಿದ್ಯಾನಿಲಯಗಳ ವ್ಯಾಪ್ತಿಯೊಳಗಡೆ ತರಲಾಯಿತು. 1904 ರ ಭಾರತೀಯ ವಿಶ್ವವಿದ್ಯಾನಿಲಯಗಳ ಕಾಯಿದೆಯಂತೆ ಶಾಲೆಗಳನ್ನು ವಿಶ್ವವಿದ್ಯಾನಿಲಯ ಮಾನ್ಯ ಮಾಡಬೇಕಾಗಿತ್ತು. ಹಾಗೂ ಈ ಉದ್ದೇಶಕ್ಕಾಗಿ ಕಾನೂನು ಮತ್ತು ನಿಯಮಗಳನ್ನು ರೂಪಿಸಿದೆ.

### 1.3.5 ಸ್ಯಾಡ್ಲಾರ್ ಆಯೋಗ :

ಇಂಟರ್ ಮಿಡಿಯೇಟ್ ಕಾಲೇಜುಗಳು: ಅನಂತರದ ಮುಖ್ಯ ಬೆಳವಣಿಗೆ ಎಂದರೆ ವಿಶ್ವವಿದ್ಯಾನಿಲಯ ಶಿಕ್ಷಣದ ಸುಧಾರಣೆಗೆ ಪ್ರೌಢ ಶಿಕ್ಷಣವನ್ನು ಸುಧಾರಣೆ ಮಾಡುವುದರ ಅಗತ್ಯತೆಯನ್ನು 1917 ರಲ್ಲಿ ಸ್ಯಾಡ್ಲಾರ್ ಆಯೋಗ ಮನಗಂಡಿತು. ಕಾಲೇಜು ಕೋರ್ಸ್‌ಗಳನ್ನು ಎರಡು ಭಾಗಗಳನ್ನಾಗಿ ವಿಂಗಡಿಸುವ ಅಗತ್ಯತೆಯನ್ನು ಇದು ಸೂಚಿಸುತ್ತದೆ. ಉನ್ನತ ಶಿಕ್ಷಣವನ್ನು ಇಂಟರ್‌ಮಿಡಿಯೇಟ್ ಪರೀಕ್ಷೆಯಲ್ಲಿ ಎರಡು ಭಾಗಗಳನ್ನಾಗಿ ಮಾಡಬೇಕೇ ವಿನಃ ಮೆಟ್ರಿಕ್ಯುಲೇಶನ್ ಪರೀಕ್ಷೆಯಲ್ಲಿ ಎನ್ನುವ ಸಲಹೆಯನ್ನು ಸ್ಯಾಡ್ಲಾರ್ ಆಯೋಗ ನೀಡಿದೆ. ಅಲ್ಲದೇ ಕಲೆ, ವಿಜ್ಞಾನ, ವೈದ್ಯಕೀಯ, ಇಂಜಿನಿಯರಿಂಗ್, ಬೋಧನೆ ಮುಂತಾದ ಶಿಕ್ಷಣವನ್ನು ನೀಡಲು ಇಂಟರ್‌ಮಿಡಿಯೇಟ್ ಕಾಲೇಜುಗಳನ್ನು ಸ್ಥಾಪಿಸಬೇಕೆಂದು ಸಲಹೆ ನೀಡಿತು. ಸ್ವತಂತ್ರ ಸಂಸ್ಥೆಗಳಾಗಿ ಅಥವಾ ಕೆಲವು ಆಯ್ದೆ ಪ್ರೌಢಶಾಲೆಗಳಿಗೆ ಇದನ್ನು ವಹಿಸಲಾಯಿತು. ಇದು ಪ್ರೌಢ ಮತ್ತು ಇಂಟರ್‌ಮಿಡಿಯೇಟ್ ಶಿಕ್ಷಣ ಮಂಡಳಿ ಸ್ಥಾಪಿಸಿ ಪ್ರೌಢ ಶಿಕ್ಷಣದ ಪ್ರವೇಶ ಮತ್ತು ನಿಯಂತ್ರಣವನ್ನು ಪ್ರೌಢಶಿಕ್ಷಣಕ್ಕೆ ವಹಿಸುವುದೆಂದು ಸೂಚಿಸಲಾಯಿತು. ಬಹುಶಃ +2 ಪರಿಭಾವನೆ ಅಥವಾ ಇಂದು ಕರೆಯುವ ಕಿರಿಯ ಕಾಲೇಜುಗಳು ಉಗಮ ಸ್ಯಾಡ್ಲಾರ್ ಆಯೋಗದಿಂದಾಯಿತು. ಸ್ಯಾಡ್ಲಾರ್ ಆಯೋಗದ ವರದಿಯು ಸಮಗ್ರವಾಗಿದ್ದು ಅದರ ಆ ಸಲಹೆಗಳನ್ನು ಅನೇಕ ವಿಶ್ವವಿದ್ಯಾನಿಲಯಗಳು ಅನುಷ್ಠಾನಗೊಳಿಸಿದೆವು. ಈ ಆಯೋಗ ಮೊದಲ ಬಾರಿಗೆ ಇಂಟರ್‌ಮಿಡಿಯೇಟ್ ತರಗತಿಗಳನ್ನು ಪ್ರೌಢಶಾಲೆಗಳೊಂದಿಗೆ ಜೋಡಿಸಲು ಶಿಫಾರಸ್ಸು ಮಾಡಲಾಯಿತು. ಪ್ರೌಢಶಾಲೆ ಮತ್ತು ಇಂಟರ್‌ಮಿಡಿಯೇಟ್ ಶಿಕ್ಷಣವನ್ನು ನಿಯಂತ್ರಿಸುವ ಶಿಕ್ಷಣ ಮಂಡಳಿಯನ್ನು ಸ್ಥಾಪಿಸಲಾಯಿತು.

Notes

### 1.3.6 ಹಾರ್ಟಾಗ್ ಸಮಿತಿ :

ದೇಶದ ಶಿಕ್ಷಣದ ಪರಿಸ್ಥಿತಿಯನ್ನು ಪರಿಶೀಲಿಸಲು 1929 ರಲ್ಲಿ ಹಾರ್ಟಾಗ್ ಸಮಿತಿಯನ್ನು ನೇಮಕ ಮಾಡಿತು. ಇಡೀ ಪ್ರೌಢ ಶಿಕ್ಷಣ ಕೋರ್ಸ್‌ನಲ್ಲಿ ವಿಶ್ವವಿದ್ಯಾನಿಲಯದ ಮೆಟ್ರಿಕ್ಯುಲೇಶನ್ ಪ್ರಭಾವಯುತವಾಗಿತ್ತು ಎನ್ನುವುದನ್ನು ಸಾಧಿಸಿತು. ಈ ನ್ಯೂನತೆಯನ್ನು ಸರಿಪಡಿಸಲು ಈ ಸಮಿತಿಯು ಈ ರೀತಿ ಶಿಫಾರಸ್ಸು ಮಾಡುತ್ತದೆ. ಕೆಲವು ವ್ಯಕ್ತಿಗಳನ್ನು ಅನುಸರಿಸಲು ಬಯಸುವ ಹೆಚ್ಚಿನ ಸಂಖ್ಯೆಯ ವಿದ್ಯಾರ್ಥಿಗಳು ಮಾಧ್ಯಮಿಕ ಪಠ್ಯಕ್ರಮವಿರಬೇಕೆಂದು ಸೂಚಿಸಿತು. ಮಾಧ್ಯಮಿಕ ಹಂತದ ಕೊನೆಗೆ ಹೆಚ್ಚು ಬಾಲಕರನ್ನು ವಾಣಿಜ್ಯ ಮತ್ತು ಕೈಗಾರಿಕಾ ಕ್ಷೇತ್ರಗಳಿಗೆ ತಿರುಗಿಸಬೇಕೆಂದು ಸಮಿತಿ ಶಿಫಾರಸ್ಸು ಮಾಡಿದೆ. ಈ ಸಮಿತಿ ಶಿಕ್ಷಕರ ತರಭೇತಿ ಮತ್ತು ಪ್ರೌಢಶಾಲಾ ಶಿಕ್ಷಕರ ಸ್ಥಿತಿಗತಿಗಳಿಗೆ ಸಂಬಂಧಿಸಿ ಸಮಸ್ಯೆಗಳನ್ನು ಪರಿಶೀಲಿಸಿದೆ.

### 1.3.7 ಸಪ್ರು ಸಮಿತಿ :

ವೈವಿಧ್ಯಮಯ ವೃತ್ತಿಕೋರ್ಸ್‌ಗಳು : ಉತ್ತರ ಪ್ರದೇಶದಲ್ಲಿನ ನಿರುದ್ಯೋಗಕ್ಕೆ ಕಾರಣಗಳನ್ನು ಹುಡುಕಲು ಉತ್ತರ ಪ್ರದೇಶ ಸರ್ಕಾರ 1934 ರಲ್ಲಿ ಸಪ್ರು ಸಮಿತಿಯನ್ನು ನೇಮಕ ಮಾಡಿತು. ಈ ಸಮಿತಿ ಶಿಕ್ಷಣ ವ್ಯವಸ್ಥೆ ವಿದ್ಯಾರ್ಥಿಗಳನ್ನು ಕೇವಲ ಪರೀಕ್ಷೆ ಮತ್ತು ಪದವಿಗಳಿಗಾಗಿ ತಯಾರಿಸಲಾಗುತ್ತದೆಯೇ ವಿನಃ ಜೀವನದಲ್ಲಿ ವೃತ್ತಿಗಳಲ್ಲ ಎನ್ನುವ ತೀರ್ಮಾನಕ್ಕೆ ಬಂದಿತು. ಈ ಸಮಿತಿ ಪ್ರೌಢ ಹಂತದಲ್ಲಿ ವೈವಿಧ್ಯಮಯ ಕೋರ್ಸ್‌ಗಳಿರಬೇಕು ಎನ್ನುವುದರ ಅಗತ್ಯತೆಯನ್ನು ಪ್ರತಿಪಾದಿಸಿದೆ. ಇದು ಈ ಸಲಹೆಗಳನ್ನು ನೀಡಿದೆ.

1. ಪ್ರೌಢ ಹಂತದಲ್ಲಿ ವೈವಿಧ್ಯಮಯ ಕೋರ್ಸ್‌ಗಳನ್ನು ಅನುಷ್ಠಾನಗೊಳಿಸಬೇಕು. ಅದರಲ್ಲಿ ಒಂದು ವಿಶ್ವವಿದ್ಯಾನಿಲಯದ ಪದವಿಗೆ ದಾರಿಮಾಡಿಕೊಡಬೇಕು.
2. ಇಂಟರ್ ಮೀಡಿಯೇಟ್ ಹಂತವನ್ನು ತೊಡೆದು ಹಾಕಬೇಕು ಮತ್ತು ಪ್ರೌಢ ಹಂತವನ್ನು ಇನ್ನೊಂದು ವರ್ಷಕ್ಕೆ ವಿಸ್ತರಿಸಬೇಕು.
3. ವೃತ್ತಿ ತರಭೇತಿ ಮತ್ತು ಶಿಕ್ಷಣವನ್ನು ಕೆಳ ಪ್ರೌಢ ಹಂತದಿಂದಲೇ ಪ್ರಾರಂಭಿಸಬೇಕು ಮತ್ತು
4. ವಿಶ್ವವಿದ್ಯಾನಿಲಯದಲ್ಲಿ ಪದವಿ ಕೋರ್ಸ್‌ನ್ನು ಮೂರು ವರ್ಷ ಅವಧಿಗೆ ವಿಸ್ತರಿಸಬೇಕು.

### 1.3.8 ಅಬ್ಬಾಟ್‌ವುಡ್ ವರದಿ

ಪಾಲಿಟೆಕ್ನಿಕ್: 1935 ರ ಶಿಕ್ಷಣದ ಕೇಂದ್ರೀಯ ಸಲಹಾ ಮಂಡಳಿಯ ಅನುಸರಣೆಯಂತೆ ಇಬ್ಬರು ಪರಿಣಿತರಾದ ಅಬ್ಬಾಟ್ ಮತ್ತು ವುಡ್‌ರವರನ್ನು 1936 ರಲ್ಲಿ ಸರ್ಕಾರಕ್ಕೆ ಅದರಲ್ಲೂ ವಿಶೇಷವಾಗಿ ವೃತ್ತಿ ಶಿಕ್ಷಣದ ಸಮಸ್ಯೆಗಳ ಬಗ್ಗೆ ಸಲಹೆ ನೀಡಲು ಆಹ್ವಾನಿಸಿತು. 1937 ರಲ್ಲಿ ಅಬ್ಬಾಟ್‌ವುಡ್ ವರದಿಯನ್ನು ಸಲ್ಲಿಸಿತು. ಇದು ಸಾಮಾನ್ಯ ಶಿಕ್ಷಣವನ್ನು ನೀಡುವ ಸಂಸ್ಥೆಗಳ ವ್ಯವಸ್ಥೆ ವೃತ್ತಿಪರ ಸಂಸ್ಥೆಗಳಲ್ಲೂ ಇರಬೇಕು ಎನ್ನುವ ಶಿಫಾರಸ್ಸನ್ನು ಮಾಡಿತು. ಇದರ ಪರಿಣಾಮವಾಗಿ ಹೊಸ ರೀತಿಯ ತಾಂತ್ರಿಕ ಸಂಸ್ಥೆಯಾದ ಪಾಲಿಟೆಕ್ನಿಕ್ ಜಾರಿಗೆ ಬಂದಿತು. ರಾಜ್ಯಗಳೂ ತಾಂತ್ರಿಕ, ವಾಣಿಜ್ಯ ಅಥವಾ ಸಾಕ್ಷರತೆ ರಹಿತ ಕೋರ್ಸ್ ಕೃಷಿ ಪ್ರೌಢಶಾಲೆಗಳನ್ನು ಪ್ರಾರಂಭಿಸಿದವು.

### 1.3.9 ಜಾಕೀರ್ ಹುಸೇನ್ ಸಮಿತಿಯ ವರದಿ

1937 ರ ವಾರ್ಧಾಯೋಜನೆ – ಮೂಲ ಶಿಕ್ಷಣ 1937 ರಲ್ಲಿ 7 ರಾಜ್ಯಗಳಲ್ಲಿ ಪ್ರಾಂತೀಯ ಸರ್ಕಾರಗಳು ತಮ್ಮ ಸ್ವದೇಶಿ ಪ್ರದರ್ಶನದೊಂದಿಗೆ ರೂಪುಗೊಂಡಾಗ ಶೈಕ್ಷಣಿಕ ಸುಧಾರಣೆಗಳ ಬಗ್ಗೆ ಗಮನ ಕೇಂದ್ರೀಕರಿಸಿದರು. 1937 ರ ಅಕ್ಟೋಬರ್‌ನಲ್ಲಿ ಅಖಿಲ ಭಾರತ ರಾಷ್ಟ್ರೀಯ ಶೈಕ್ಷಣಿಕ ಸಮ್ಮೇಳನ ವಾರ್ಧಾದಲ್ಲಿ ನಡೆಯಿತು. ಈ ಸಮ್ಮೇಳನ ಮಹಾತ್ಮಗಾಂಧಿಯವರು ಮಾಡಿದ ರಾಷ್ಟ್ರದಾದ್ಯಂತ ಉಚಿತ ಮತ್ತು ಕಡ್ಡಾಯ ಶಿಕ್ಷಣವನ್ನು ಮಾತೃಭಾಷೆಯಲ್ಲೇ 7 ವರ್ಷಗಳ ಅವಧಿಯವರೆಗೆ ನೀಡಬೇಕೆಂಬ ಪ್ರಸ್ತಾವನೆಯನ್ನು ಒಪ್ಪಿಕೊಳ್ಳಲಾಯಿತು. ಅಲ್ಲದೆ ಶಿಕ್ಷಣದ ಪ್ರಕ್ರಿಯೆ ಈ ಅವಧಿಯಲ್ಲಿ ಶಾರೀರಿಕ ಮತ್ತು

Notes

ಉತ್ಪಾದಕ ಕೆಲಸದ ರೂಪಗಳಿರಬೇಕು ಎನ್ನುವುದನ್ನು ತಿಳಿಸಲಾಯಿತು. ಮಗುವಿನ ಪರಿಸರಕ್ಕೆ ಸಂಬಂಧಿಸಿದಂತೆ ಕೇಂದ್ರೀಯ ಕರಕುಶಲವನ್ನು ಆಯ್ಕೆ ಮಾಡಿ ಅದಕ್ಕೆ ಬೇಕಾದ ಎಲ್ಲಾ ಸಾಮರ್ಥ್ಯವನ್ನು ಅಭಿವೃದ್ಧಿಪಡಿಸಬೇಕು. ಅಥವಾ ತರಬೇತಿಯನ್ನು ನೀಡಬೇಕು. ಈ ಸಮ್ಮೇಳನವು ಈ ಶಿಕ್ಷಣದ ವ್ಯವಸ್ಥೆ ಸ್ವಾವಲಂಬನೆ ಹೊಂದುತ್ತದೆ ಎಂದು ನಿರೀಕ್ಷಿಸಲಾಗಿತ್ತು. ಹಾಗೂ ಕ್ರಮೇಣವಾಗಿ ಶಿಕ್ಷಕರ ಸಂಭಾವನೆಯನ್ನು ಒಳಗೊಳ್ಳುವಂತೆ ಮಾಡಬೇಕು ಎನ್ನುವುದಾಗಿತ್ತು.

ಹೀಗಾಗಿ ಡಾ. ಜಾಕೀರ್ ಹುಸೇನ್‌ರ ಅಧ್ಯಕ್ಷತೆಯಲ್ಲಿ ಸಮಿತಿಯನ್ನು ರಚಿಸಲಾಯಿತು. ಈ ಸಮಿತಿ ಡಿಸೆಂಬರ್, 2 1937 ರಂದು ಮೊದಲ ವಿಸ್ತಾರವಾದ ವರದಿಯನ್ನು ತಯಾರಿಸಿ ನೀಡಿತು. ಇದನ್ನು ವಾರ್ಧಾ ಯೋಜನೆ ಅಥವಾ ಮೂಲ ಶಿಕ್ಷಣ ಎಂದು ಜನಪ್ರಿಯವಾಗಿ ಕರೆಯಲಾಗುತ್ತದೆ. ಈ ಯೋಜನೆಯ ಮುಖ್ಯಾಂಶಗಳು ಈ ಕೆಳಗಿನಂತಿವೆ.

1. ಸಂಪೂರ್ಣ ಶಿಕ್ಷಣವನ್ನು ಕೆಲವು ಕೈಗಾರಿಕೆ ಅಥವಾ ವೃತ್ತಿಗಳಲ್ಲಿ ಮೂಲ ಕಸುಬನ್ನು ಶಿಕ್ಷಣದ ಕೇಂದ್ರ ಬಿಂದುವಾಗಿ ನೀಡಬೇಕು. ಅಂದರೆ ಸರಳ ಶಿಕ್ಷಣದೊಂದಿಗೆ ಕೆಲವು ಕರಕುಶಲ ಕಸುಬುಗಳನ್ನು ಬೋಧಿಸುವುದಿಲ್ಲ. ಆದರೆ ಶಿಕ್ಷಣವನ್ನು ಒಂದುಗೂಡಿಸುವಿಕೆ ವಿಧಾನದ ಸಮನ್ವಯದ ಮೂಲಕ ಶಿಕ್ಷಣವನ್ನು ಕರಕುಶಲ ಕಸುಬಿನೊಂದಿಗೆ ಜೋಡಿಸಬೇಕು.
2. ಶಿಕ್ಷಣವು ಶಿಕ್ಷಕರ ವೇತನವನ್ನು ಒಳಗೊಳ್ಳುವ ಮಟ್ಟಿಗೆ ಸ್ವ ಬೆಂಬಲ ಹೊಂದಿರಬೇಕು. ಹಾಗೂ ವಿದ್ಯಾರ್ಥಿಗಳು ತಮ್ಮ ಕೋರ್ಸ್ ಮುಗಿದ ನಂತರ ಸ್ವ ಬೆಂಬಲ ಹೊಂದಿದಂತವರಾಗಿರಬೇಕು.
3. ಪ್ರತಿಯೊಬ್ಬ ವ್ಯಕ್ತಿಯ ಜೀವನದಲ್ಲಿ ಶಾರೀರಿಕ ಕೆಲಸದ ಮೂಲಕ ತನ್ನ ಜೀವನೋಪಾಯಕ್ಕಾಗಿ ಗಳಿಕೆ ಮಾಡುವುದನ್ನು ಕಲಿಯಬೇಕು. ಆದ್ದರಿಂದ ಶಾರೀರಿಕ ಶ್ರಮದ ಮೂಲಕ ಶಿಕ್ಷಣಕ್ಕೆ ಒತ್ತು ನೀಡಲಾಯಿತು. ಇದು ಒಬ್ಬ ವ್ಯಕ್ತಿ ಮತ್ತೊಬ್ಬರ ಜೀವನವನ್ನು ಕಿತ್ತುಕೊಳ್ಳದಿರುವುದರಿಂದ ಇದನ್ನು ಅಹಿಂಸಾತ್ಮಕ ಮಾರ್ಗ ಎಂದು ಪರಿಗಣಿಸಲಾಗಿದೆ.
4. ಕಲಿಕೆ ಮುಖ್ಯವಾಗಿ ಮನೆ, ಸಮುದಾಯ ಮತ್ತು ಮಗುವಿನ ಜೀವನದ ಚಟುವಟಿಕೆಗಳು ಹಾಗೂ ಗ್ರಾಮೀಣ ಕಸುಬುಗಳು ಮತ್ತು ಉದ್ಯೋಗಗಳ ಜೊತೆ ಸಂಯೋಜಿತವಾಗಿದೆ.

ಈ ತತ್ವ ಶಿಕ್ಷಣ ನೀತಿಗಳನ್ನು ರೂಪಿಸಲು ಪ್ರಬಲ ಪ್ರಭಾವ ಬೀರಿದೆ. ಅದರಲ್ಲೂ ವಿಶೇಷವಾಗಿ ಪ್ರಾಥಮಿಕ ಹಂತದಲ್ಲಿ ಮತ್ತು ಉಚಿತ ಪ್ರಾಥಮಿಕ ಶಿಕ್ಷಣ ಮುಕ್ತ ಭಾರತದ ಸಂವಿಧಾನದಲ್ಲಿ ಜಾಗ ಕಂಡು ಕೊಳ್ಳಲು ಈ ತತ್ವ ಮುಖ್ಯವಾಗಿದೆ.

### 1.3.10 ಸಾರ್ಜೆಂಟ್ ವರದಿ :

ಪ್ರಾಥಮಿಕ ಶಿಕ್ಷಣದ ಸಾರ್ವತ್ರೀಕರಣ : ವಿಶ್ವ ಮಹಾ ಯುದ್ಧದ ನಂತರ ಶಿಕ್ಷಣದ ಅಭಿವೃದ್ಧಿ ಬಗ್ಗೆ ಶಿಕ್ಷಣದ ಮೇಲಿನ ಕೇಂದ್ರೀಯ ಸಲಹಾ ಮಂಡಳಿ ವಿವರವಾದ ವರದಿಯನ್ನು ರೂಪಿಸಿತು. ಇದನ್ನು 1944 ರಲ್ಲಿ ಸಾರ್ಜೆಂಟ್ ವರದಿ ಎಂದು ಕರೆಯಲಾಯಿತು. ಇದು ವಾರ್ಧಾ ಯೋಜನೆಯ ಸಲಹೆಯಂತೆ ಪ್ರಾಥಮಿಕ ಪೂರ್ವ ಶಿಕ್ಷಣವನ್ನು 3 ರಿಂದ 6 ವರ್ಷದೊಳಗಿನ ಮಕ್ಕಳಿಗೆ ಸಾರ್ವತ್ರಿಕ , ಕಡ್ಡಾಯ ಮತ್ತು ಉಚಿತ ಪ್ರಾಥಮಿಕ ಮೂಲ ಶಿಕ್ಷಣ ನೀಡುವುದು; ಹಿರಿಯ ಮೂಲ ಅಥವಾ ಮಾಧ್ಯಮಿಕ ಶಾಲೆಯು ಹೆಚ್ಚಿನ ವಿದ್ಯಾರ್ಥಿಗಳ ಶಾಲಾ ಜೀವನದಲ್ಲಿ ಅಂತಿಮ ಹಂತವಾಗಿದೆ. ಮಾಧ್ಯಮಿಕ ಶಾಲಾ ಹಂತದಲ್ಲಿ ವೈವಿಧ್ಯಮಯ ಕೋರ್ಸ್‌ಗಳಿಗೆ ಅವಕಾಶ ಮಾಡಿಕೊಡಲು ಈ ವರದಿ ಶಿಫಾರಸ್ಸು ಮಾಡಿದೆ. ಈ ಕೋರ್ಸ್‌ಗಳನ್ನು ವಿದ್ಯಾರ್ಥಿಗಳು ಕೈಗಾರಿಕಾ ಮತ್ತು ವಾಣಿಜ್ಯ ಉದ್ಯೋಗಗಳಿಗೆ ಹಾಗೂ ವಿಶ್ವವಿದ್ಯಾನಿಲಯಗಳಿಗೆ ಪ್ರವೇಶ ಪಡೆಯಲು ಸೂಕ್ತವಾಗುವಂತೆ ವಿನ್ಯಾಸ ಮಾಡಲಾಯಿತು. ಪ್ರೌಢ ಶಿಕ್ಷಣ ಕೋರ್ಸ್ 6 ವರ್ಷಗಳನ್ನು ಒಳಗೊಳ್ಳಬೇಕು ಎನ್ನುವುದನ್ನು ಇದು ಶಿಫಾರಸ್ಸು ಮಾಡಿತು. ಪೌಢ ಶಿಕ್ಷಣಕ್ಕೆ ಸಾಮಾನ್ಯ ವಯಸ್ಸು 11 ವರ್ಷಗಳು ಪ್ರೌಢಶಾಲೆಗಳು ಎರಡು ರೀತಿಯಲ್ಲಿರಬೇಕು. (ಎ) ಶೈಕ್ಷಣಿಕ ಮತ್ತು (ಬಿ) ತಾಂತ್ರಿಕ ಆಯ್ಕೆ ವಿದ್ಯಾರ್ಥಿಗಳಿಗೆ ಪದವಿ ಶಿಕ್ಷಣ ಮೂರು ವರ್ಷಗಳದ್ದಾಗಿರಬೇಕು. ಇವೆರಡರ ಉದ್ದೇಶ ವಿದ್ಯಾರ್ಥಿಗಳು ಶಾಲೆ ಬಿಟ್ಟ ನಂತರ ಯಾವುದಾದರೂ ಕಸುಬು ಕೈಗೊಳ್ಳಲು

ಶಕ್ತವಾಗಿರೇಕು ಹೀಗಾಗಿ ಇದು ಶಿಕ್ಷಣದ ಸರ್ವತೋಮುಖ ಅಭಿವೃದ್ಧಿ ಸಾಧಿಸುವುದಾಗಿದೆ. ಎಲ್ಲಾ ಪ್ರೌಢ ಶಾಲೆಗಳಲ್ಲಿ ಶಿಕ್ಷಣದ ಮಾಧ್ಯಮ ಕನ್ನಡವಾಗಿರಬೇಕು.

Notes

ಇಪ್ಪತ್ತು ವರ್ಷಗಳಲ್ಲಿ ವಯಸ್ಕರ ಸಾಕ್ಷರತೆಯನ್ನು ಸಾಧಿಸುವುದು. ಶಿಕ್ಷಕರ ತರಭೇತಿಗೆ ಸೂಕ್ತ ಅವಕಾಶ ಮಾಡಿಕೊಡುವುದು. ದೈಹಿಕವಾಗಿ ಹಾಗೂ ಮಾನಸಿಕವಾಗಿ ವಿಕಲತೆ ಹೊಂದಿರುವವರಿಗೆ ಅವಕಾಶ. ಸಾಮಾಜಿಕ ಮತ್ತು ಮನರಂಜನಾ ಚಟುವಟಿಕೆಗಳಿಗೆ ಅವಕಾಶ ಹಾಗೂ ಕೇಂದ್ರ ಮತ್ತು ರಾಜ್ಯಗಳಲ್ಲಿ ಶಿಕ್ಷಣ ಇಲಾಖೆಯ ಸೃಷ್ಠಿ ಇವುಗಳ ಸಾರ್ಜೆಂಟ್ ವರದಿಯ ಶಿಫಾರಸ್ಸುಗಳಾಗಿವೆ.

ಸಾರ್ಜೆಂಟ್ ವರದಿಯು ಶಿಕ್ಷಣದ ಎಲ್ಲಾ ಹಂತಗಳು– ಪ್ರಾಥಮಿಕ ಪೂರ್ವ, ಪ್ರಾಥಮಿಕ, ಪ್ರೌಢಶಾಲೆ ಮತ್ತು ವಿಶ್ವವಿದ್ಯಾನಿಲಯ ಶಿಕ್ಷಣ ಅಲ್ಲದೇ ತಾಂತ್ರಿಕ, ವೃತ್ತಿಪರ ಮತ್ತು ಉದ್ಯೋಗ ಶಿಕ್ಷಣವನ್ನು ಒಳಗೊಳ್ಳುತ್ತದೆ. ಇದು ಎಲ್ಲಾ ವಿದ್ಯಾರ್ಥಿಗಳಿಗೂ ಸಮಾನ ಅವಕಾಶಗಳನ್ನು ನೀಡಿದೆ. ಬೋಧನಾ ವೃತ್ತಿಗೆ ವಿಶೇಷ ಆಧ್ಯತೆ ನೀಡಿತು. ಶಿಕ್ಷಕರ ವೇತನ ಸ್ಕೀಂ ಮತ್ತು ಸೇವಾ ಸ್ಥಿತಿಗತಿಗಳ ಸುಧಾರಣೆಗಳಿಗೆ ವಿಶೇಷ ಮಹತ್ವ ನೀಡಲಾಯಿತು. ಈ ವರದಿಯ ಉತ್ಪಾದಕ ಶಿಕ್ಷಣಕ್ಕೆ ಪ್ರಾಮುಖ್ಯತೆ ನೀಡಿದೆ. ಇದು ದೇಶದಲ್ಲಿನ ಉದ್ಯೋಗ ಸಮಸ್ಯೆಯನ್ನು ಪ್ರಶಂಶಿಸಿದೆ ಹಾಗೂ ಶಿಕ್ಷಣ ಇದಕ್ಕೆ ಪರಿಹಾರ ನೀಡುತ್ತದೆ ಎಂದು ಹೇಳಿದೆ. ಮುಕ್ತ ಭಾರತದ ಶಿಕ್ಷಣಕ್ಕೆ ಶಿಫಾರಸ್ಸುಗಳು ಭದ್ರಬುನಾದಿ ಹಾಕಿದರು.

## 1.4ಈ ಘಟಕದ ಸಾರಾಂಶ

ಇದು ಈ ಕೋರ್ಸಿನ ಮೊದಲು ಘಟಕ ಭಾರತದಲ್ಲಿ ಪ್ರಾಥಮಿಕ ಶಿಕ್ಷಣ ಸಾಮಾಜಿಕ ಸಾಂಸ್ಕೃತಿಕ ಪೂರ್ವಾನುದರ್ಶನ, ಪ್ರಾಚೀನ ಭಾರತದಿಂದ ಪ್ರಾರಂಭಿಸಿ ಸ್ವಾತಂತ್ರ್ಯ ಪೂರ್ವ ಅವಧಿಯವರೆಗಿನ ಭಾರತೀಯ ಶಿಕ್ಷಣ ವ್ಯವಸ್ಥೆಯನ್ನು ವಿವರಿಸಿದೆ. ವೇದಗಳ ಕಾಲದಲ್ಲಿ ಭಾರತ ಅನುಸಿರಿಸುತ್ತಿದ್ದ ಶೈಕ್ಷಣಿಕ ಆಚರಣೆಗಳನ್ನು ಈ ಘಟಕ ಸಂಕ್ಷಿಪ್ತವಾಗಿ ವಿವರಿಸಿದೆ. ಆ ದಿನಗಳಲ್ಲಿ ಶಿಕ್ಷಣಕ್ಕೆ ಹೆಚ್ಚಿನ ಮಹತ್ವ ನೀಡಲಾಗುತ್ತಿತ್ತು ಮತ್ತು ಶಿಕ್ಷಣವನ್ನು ಮುಂದೆ ಕಣ್ಣು ಎಂದು ಪರಿಗಣಿಸಲಾಗಿತ್ತು. ನಿಸ್ಸಂದೇಹವಾಗಿ ಶಿಕ್ಷಣದ ಅಂತಿಮ ಗುರಿ ಏಪಸಾಸ್ ಮತ್ತು ತ್ರಿಷನಾಸ್‌ನ ಆಸೆಗಳು ಮತ್ತು ಅಪೇಕ್ಷೆ ಗುಲಾಮಗಿರಿಯಿಂದ ಮುಕ್ತಗೊಳಿಸುವುದಾಗಿತ್ತು. ವ್ಯಕ್ತಿಯ ದಕ್ಷತೆಯನ್ನು ಹೆಚ್ಚಿಸುವುದರ ಜೊತೆಗೆ ಸಾಂಸಾರಿಕ ವಿಷಯಗಳನ್ನು ತಿಳಿಸುತ್ತಿತ್ತು. ಪಾಂಡಿತ್ಯಕ್ಕಾಗಿ ಜ್ಞಾನವನ್ನು ಆಧ್ಯಾತ್ಮಿಕತೆಯನ್ನು ಅರ್ಥಮಾಡಿಕೊಳ್ಳಲು, ಉತ್ತಮಗುಣಗಳು ವ್ಯಕ್ತಿತ್ವ ಅಭಿವೃದ್ಧಿ, ಸಂಸ್ಕೃತಿಯ ಸೃಷ್ಠಿ, ರಕ್ಷಣೆ ಮತ್ತು ಪ್ರೋತ್ಸಾಹ ಮುಂತಾದವು ಪ್ರಾಚೀನ ಭಾರತ ಶಿಕ್ಷಣದ ಇತರ ಗುರಿ ಮತ್ತು ಉದ್ದೇಶಗಳಾಗಿವೆ.

ಶಿಕ್ಷಣವನ್ನು ಗುರುಕುಲಗಳಲ್ಲಿ ನೀಡಲಾಗುತ್ತಿತ್ತು. ಇವು ಸಾಮಾನ್ಯವಾಗಿ ಜನವಸತಿ ಪ್ರದೇಶಗಳಿಂದ ಸ್ವಲ್ಪ ದೂರ ಇರುತ್ತಿದ್ದವು. ಸಮಾಜದಲ್ಲಿ ವಿದ್ಯಾರ್ಥಿಯ ಸ್ಥಾನಮಾನ ಏನೇ ಇರಲಿ ಶಿಕ್ಷಕ ಎಲ್ಲರನ್ನೂ ಸಮಾನವಾಗಿ ನೋಡುತ್ತಿದ್ದನು. ಸಮಾಜದಲ್ಲಿ ಗುರುವಿಗೆ ಎತ್ತರದ ಸ್ಥಾನಮಾನವಿತ್ತು. ಗುರುವನ್ನು ಪ್ರತಿ ವಿದ್ಯಾರ್ಥಿಯ ಶೀಕ್ಷಣದ ಪಾಲಕ ಎಂದು ಪರಿಗಣಿಸಲಾಗಿತ್ತು. ಬೋಧನೆ ಮೌಖಿಕವಾಗಿದ್ದು ಶಿಕ್ಷಕ ಮತ್ತು ವಿದ್ಯಾರ್ಥಿಯ ನಡುವೆ ಸಂವಾದದ ರೂಪದಲ್ಲಿತ್ತು. ಉಪನ್ಯಾಸಕರು, ಉಪನ್ಯಾಸಗಳು, ಪಠಣ ಮುಂತಾದವು ವಿದ್ಯಾರ್ಥಿಯ ಜೀವನದ ಭಾಗಗಳಾಗಿದ್ದವು. ಗುರುಕುಲ ವ್ಯವಸ್ಥೆ ಮಧ್ಯಯುಗೀನ ಅವಧಿಯವರೆಗೂ ಮುಂದುವರೆಯಿತು. ಇದರ ಜೊತೆಗೆ ಮಸೀದಿಗಳಲ್ಲಿ ಮುಸ್ಲಿಂ ವಿದ್ಯಾರ್ಥಿಗಳಾಗಿ ಮಕ್ಟಾಬ್ಸ್ ಮತ್ತು ಮದ್ರಾಸಸ್‌ಗಳನ್ನು ಸ್ಥಾಪನೆ ಮಾಡಲಾಯಿತು. ಮುಲ್ಲಾಗಳು ಮತ್ತು ಮೌಲ್ವಿಗಳು ಇಸ್ಲಾಂ ಶಿಕ್ಷಣವನ್ನು ನೀಡುತ್ತಿದ್ದರು.

Notes

ಮಧ್ಯಯುಗೀನ ಅವಧಿಯಲ್ಲಿ ಧರ್ಮಪ್ರಚಾರಕರು ಮತ್ತು ವಿವಿಧ ಧಾರ್ಮಿಕ ಗುಂಪುಗಳು ಇಂಗ್ಲೀಷ್ ಮುಖಾಂತರ ಸ್ವದೇಶಿ ದೇವಸ್ಥಾನ ಶಾಲೆಗಳಲ್ಲಿ ಸಂಸ್ಕೃತದ ಮುಖಾಂತರ ಮತ್ತು ಮದ್ರಾಸಸ್‌ಗಳಲ್ಲಿ ಪರ್ಶಿಯನ್ ಭಾಷೆಯನ್ನು ಬಳಸಿಕೊಂಡು ಈಸ್ಟ್ ಇಂಡಿಯಾ ಕಂಪನಿ ಸ್ಥಾಪನೆಯಾಗುವ ತನಕ ಮತ್ತು ಬ್ರಿಟಿಷ್ ಸಂಸತ್ತು ಬರುವವರೆಗೆ ಮೂಲ ಶಿಕ್ಷಣವನ್ನು ಜಾರಿಗೆ ತಂದಿದ್ದರು. ಆದಾಗ್ಯೂ ಭಾರತದ ಪ್ರಸ್ತುತ ಶಿಕ್ಷಣ ವ್ಯವಸ್ಥೆಯ ಉಗಮ 1935 ರಲ್ಲಿ ಮೆಕಾಲೆಯವರ ಟಿಪ್ಪಣಿಯಿಂದಾಯಿತು ಎಂದು ಹೇಳಬಹುದು. ಮೆಕಾಲೆಯವರು ಇಂಗ್ಲೀಷ್‌ಗೆ ವಿರುದ್ಧವಾಗಿ ದೇಶೀಯ ಭಾಷೆಯನ್ನು ತಿರಸ್ಕರಿಸಿದರು. ಮೆಕಾಲೆಯವರು ಭಾರತದಲ್ಲಿ ಕೇವಲ 4 ವರ್ಷಗಳು ಮಾತ್ರ ಇದ್ದರು. ಆದಾಗ್ಯೂ ಭಾರತದ ಕೋಟ್ಯಾಂತರ ಜನರ ಜೀವನದ ಮೇಲೆ ಎಂದೆಂದಿಗೂ ಉಳಿಯುವ ಪ್ರಭಾವ ಬೀರಿದ್ದಾರೆ.

ಈ ಘಟಕ ಮುಂದುವರೆದು ವುಡ್ಸ್ ಸರ್ಕಾರಿ ವರದಿಯನ್ನು ಚರ್ಚಿಸಿದೆ. ಇದು ಭಾರತದ ಶಿಕ್ಷಣ ವ್ಯವಸ್ಥೆಗೆ ಸಂಘಟನಾತ್ಮಕ ಸ್ವರೂಪ ನೀಡಿದೆ. ವುಡ್ಸ್‌ರವರ ಸರ್ಕಾರಿ ವರದಿಯು ವಿವರವಾದ ಮುಖ್ಯ ಶೈಕ್ಷಣಿಕ ದಾಖಲೆಯಾಗಿದ್ದು, ಭಾರತದ ಶಿಕ್ಷಣದ ಇತಿಹಾಸದಲ್ಲಿ ವಿಶೇಷ ಸ್ಥಾನ ಪಡೆದುಕೊಂಡಿದೆ.

ಈ ಘಟಕದಲ್ಲಿ ಹಂಟರ್ ಆಯೋಗ (1982) ದ ಶಿಫಾರಸ್ಸು ಭಾರತೀಯ ಶಿಕ್ಷಣವನ್ನು ವೃತ್ತಿಪರಗೊಳಿಸಲು ಪ್ರಮುಖ ಕೊಡುಗೆಯನ್ನು ಪ್ರಧಾನವಾಗಿ ವಿವರಿಸಿದೆ. ಅನಂತರ 1902 ರ ವಿಶ್ವವಿದ್ಯಾನಿಲಯಗಳ ಆಯೋಗದ ಬಗ್ಗೆ ಸಂಕ್ಷಿಪ್ತವಾಗಿ ತಿಳಿಸಿದೆ. ಪ್ರೌಢಶಾಲೆಗಳನ್ನು ವಿಶ್ವವಿದ್ಯಾನಿಲಯಗಳ ನಿಯಂತ್ರಣಕ್ಕೆ ತರಲಾಯಿತು. ಈ ಘಟಕದಲ್ಲಿ ಹರ್ಟಾಗ್ ಸಮಿತಿ ಸಪ್ರು ಸಮಿತಿ ಮತ್ತು ವುಡ್ ಸಮಿತಿ, ಜಾಕೀರ್ ಹುಸೇನ್ ಸಮಿತಿ (1937 ರ ವಾರ್ಧಾ ಯೋಜನೆ) ಮತ್ತು ಸಾರ್ಜೆಂಟ್ ವರದಿ (ಪ್ರಾಥಮಿಕ ಶಿಕ್ಷಣದ ಸಾರ್ವತ್ರೀಕರಣ) ಗಳ ಶಿಫಾರಸ್ಸುಗಳನ್ನು ಚರ್ಚಿಸಲಾಗಿದೆ. ಸಾರ್ಜೆಂಟ್ ವರದಿಯು ವಿವರವಾದ ಯೋಜನೆಯಾಗಿದ್ದು, ಶಿಕ್ಷಣದ ಎಲ್ಲಾ ಹಂತ ಮತ್ತು ಆಯಾಮಗಳನ್ನು ವಿವರಿಸಿದೆ ಎನ್ನುವುದು ಆಸಕ್ತಿದಾಯಕ ಅಂಶ. ಈ ಶಿಫಾರಸ್ಸು ಮುಕ್ತ ಭಾರತದಲ್ಲಿ ಶಿಕ್ಷಣಕ್ಕೆ ಭದ್ರಬುನಾದಿಯನ್ನು ಹಾಕಿ ಕೊಟ್ಟಿದೆ.

## 1.5ಹೆಚ್ಚಿನ ಅಧ್ಯಯನಕ್ಕಾಗಿ ಪಾರದರ್ಶನ ಗ್ರಂಥಗಳು

## 1.6 ಘಟಕ ಅಂತ್ಯ ಅಭ್ಯಾಸಗಳು :

1. ಶಿಕ್ಷಕ ಉದ್ಯೋಗಿಯಾಗಿ ಪ್ರಾಚೀನ ಗುರುವಿನ ಯಾವ ಗುಣವನ್ನು ಬಯಸುವಿರಿ? ಯಾಕೆ? 3 ಸಕಾರಣಗಳನ್ನು ನೀಡಿ ನಿಮ್ಮ ಉದ್ಯೋಗದಲ್ಲಿ ಶಿಕ್ಷಕರಾಗಿ ನೀವು ಏನನ್ನು ಅಳವಡಿಸಿಕೊಳ್ಳುವಿರಿ.
2. ನಿಮ್ಮ ಸ್ಥಳದಲ್ಲಿ ಹೊಸ ಪ್ರಾಥಮಿಕ ಶಾಲೆಯ ಅಗತ್ಯತೆಯ ಬಗ್ಗೆ ಸಮೀಕ್ಷೆ ಮಾಡಿ ಹೆಚ್ಚಿನ ಪೋಷಕರು ಯಾವ ರೀತಿಯ ಶಾಲೆಗಳನ್ನು ಇಷ್ಟಪಡುತ್ತಾರೆ? ಅವರ ಆಯ್ಕೆಗೆ ಸಾದ್ಯವಾದ ಕಾರಣಗಳನ್ನು ಕಂಡು ಹಿಡಿಯಿರಿ. ಅಂತಹ ಶಾಲೆಯನ್ನು ಸ್ಥಾಪಿಸಲು ಕ್ರಮಗಳನ್ನು ಸೂಚಿಸಿ.

Notes

## ಘಟಕ–2 ಭಾರತೀಯ ಶಿಕ್ಷಣ ವ್ಯವಸ್ಥೆ–11


**ಸ್ವರೂಪ**


2.0 ಪೀಠಿಕೆ
2.1 ಕಲಿಕೆಯ ಉದ್ದೇಶಗಳು
2.2 ಸ್ವಾತಂತ್ರ್ಯನಂತರ ಶಿಕ್ಷಣ ಆಯೋಗಗಳು / ಸಮಿತಿಗಳ ಶಿಪಾರಸ್ಸುಗಳು
2.2–1 ರಾಧಾಕೃಷ್ಣನ್ ಆಯೋಗ (1948–49)
2.2–2 ಮುದಲಿಯಾರ್ ಆಯೋಗ (1952)
2.2–3 ಮಹಿಳಾಶಿಕ್ಷಣದ ಬಗ್ಗೆ ರಾಷ್ಟ್ರೀಯ ಸಮಿತಿ (1958) ದುರ್ಗಾಬಾಯಿ ದೇಶ್‌ಮುಖ್ ಸಮಿತಿ
2.2–4 ಕೊಟಾರಿ ಆಯೋಗ (1964–66)
2.2–5 ಯಶ್‌ಪಾಲ್ ಸಮಿತಿ (1992)
2.3 ಶಿಕ್ಷಣದ ಮೇಲಿನ ರಾಷ್ಟ್ರೀಯ ನೀತಿಗಳು
2.3–1 NPE 1968
2.3–2 NPE 1986
2.3–3 ಪ್ರಾಥಮಿಕ ಶಿಕ್ಷಣದ ಕಳಕಳಿ
2.4 ಎಂಟು ವರ್ಷಗಳ ಪ್ರಾಥಮಿಕ ಶಿಕ್ಷಣದ ಸ್ವರೂಪ
2.5 ಶಾಲಾ ಪಠ್ಯಕ್ರಮ ಚೌಕಟ್ಟು
2.5–1 ರಾಷ್ಟ್ರೀಯ ಪಠ್ಯಕ್ರಮ ಚೌಕಟ್ಟು (NCF) 2005
2.5–2 ಪ್ರಾಥಮಿಕ ಶಾಲಾ ಪಠ್ಯಕ್ರಮದ ಅರ್ಥ
2.6 ಈ ಘಟಕದ ಸಾರಾಂಶ
2.7 ಓದು ಮತ್ತು ಪರಮಾರ್ಶನ ಗ್ರಂಥಗಳು
2.8 ಘಟಕ ಅಂತ್ಯ ಅಭ್ಯಾಸಗಳು


### 2.0 ಪೀಠಿಕೆ

ಮೊದಲ ಘಟಕದಲ್ಲಿ ಪ್ರಾಚೀನಭಾರತದ ಶಿಕ್ಷಣದ ಪರಿಭಾವನೆ ಮತ್ತು ಆಚರಣೆಯನ್ನು ಹಾಗೂ 'ಗುರು', ಶಿಕ್ಷಕನ ಲಕ್ಷಣಗಳು ಮತ್ತು ಜವಾಬ್ದಾರಿಗಳನ್ನು ನಾವು ನೋಡಿದ್ದೇವೆ. ಸ್ವಾತಂತ್ರ್ಯಾನಂತರ ಮತ್ತು ದೇಶದ ಅಗತ್ಯತೆಗಳಿಗೆ ಸರಿಹೊಂದುವಂತಹ ಶಿಕ್ಷಣ ವ್ಯವಸ್ಥೆಯನ್ನು ವಿನ್ಯಾಸಗೊಳಿಸಲು ಮೊದಲ ಆಧ್ಯತೆ ನೀಡಲಾಯಿತು. ಭಾರತದ ಸಂವಿಧಾನ ಜನವರಿ 26, 1950ರಲ್ಲಿ ಜಾರಿಗೆ ಬಂದಿತು. ಸಂವಿದಾನಾತ್ಮಕ ಪ್ರಸ್ತಾವನೆಗಳಾದ ಆರ್ಟಿಕಲ್ 45 ಈರೀತಿ ಪ್ರಸ್ತಾಪಿಸುತ್ತದೆ. ಎಲ್ಲಾ ಮಕ್ಕಳು 14 ವರ್ಷತಲುಪುವತನಕ ಉಚಿತ ಮತ್ತು ಕಡ್ಡಾಯ ಶಿಕ್ಷಣವನ್ನು ಸಂವಿಧಾನ ಜಾರಿಗೆ ಬಂದ ನಂತರದ 10 ವರ್ಷಗಳಲ್ಲಿ ಒದಗಿಸಬೇಕು.

ಈ ಘಟಕದಲ್ಲಿ ಶಿಕ್ಷಣದ ವಿವಿಧ ಆಯಾಮಗಳನ್ನು ಪರಿಶೀಲಿಸಿ ಶಿಪಾರಸ್ಸು ಮಾಡಲು ಸರ್ಕಾರ ವಿವಿಧ ಆಯೋಗ ಮತ್ತು ಸಮಿತಿಗಳನ್ನು ನೇಮಕಮಾಡಿದೆ. ಶೈಕ್ಷಣಿಕ ಸೌಲಭ್ಯವನ್ನು ಸುಧಾರಿಸಲು ಮತ್ತು ದೇಶದೊಳಗೆ ಪರಿಣಾಮಕಾರಿ ಶಿಕ್ಷಣವನ್ನು ಸ್ಥಾಪಿಸಲು ಅವುಗಳಲ್ಲಿ ಮುಖ್ಯವಾದವುಗಳನ್ನು ಚಿತ್ರ 2.1ರಲ್ಲಿ ನೀಡಲಾಗಿದೆ.




**ಚಿತ್ರ 2.1 ಸ್ವಾತಂತ್ರ್ಯಾನಂತರ ಪ್ರಾಥಮಿಕ ಶಿಕ್ಷಣಕ್ಕೆ ಸಂಬಂದಿಸಿದಂತೆ ಶಿಕ್ಷಣ ಆಯೋಗಗಳು**

ಈ ಆಯೋಗಗಳು ಮತ್ತು ಸಮಿತಿಗಳ ಶಿಫಾರಸ್ಸುಗಳು ಆಧುನಿಕ ಭಾರತದ ಭಾರತೀಯ ಶಿಕ್ಷಣದ ನೀತಿಗಳು, ಸ್ವರೂಪ ಮತ್ತು ಅಭಿವೃದ್ಧಿಯಮೇಲೆ ನೇರವಾದ ಪ್ರಭಾವ ಬೀರಿವೆ. ಈ ಘಟಕದಲ್ಲಿ ಭಾರತೀಯ ಶಿಕ್ಷಣದ ವಿಕಾಸವನ್ನು ವಿಶೇಷವಾಗಿ ಪ್ರಾಥಮಿಕ ಶಿಕ್ಷಣವನ್ನು ಪರಿಶೀಲಿಸಲಾಗಿದೆ.

ಸಮಯದಿಂದ ಸಮಯಕ್ಕೆ ಭಾರತ ಸರ್ಕಾರ ಶಿಕ್ಷಣದ ಪರಿಸ್ಥಿತಿಯನ್ನು ವಿಶೇಷವಾಗಿ ಪ್ರಾಥಮಿಕ ಶಿಕ್ಷಣವನ್ನು ಪರಿಶೀಲಿಸಿ (1968, 1986 ಮತ್ತು 1992 ಇತ್ತೀಚೆಗೆ 2005 NCF) ಶಿಕ್ಷಣಕ್ಕೆ ಸಂಬಂಧಿಸಿದ ನೀತಿಗಳನ್ನು ರೂಪಿಸಿದೆ. ಈ ನೀತಿಗಳು ಪ್ರಾಥಮಿಕ ಶಿಕ್ಷಣವನ್ನು ಪರಿಚಯಿಸುವ ಪ್ರಕ್ರಿಯೆಯಲ್ಲಿ ಮುಖ್ಯ ಪರಿಣಾಮಗಳನ್ನುಂಟು ಮಾಡುತ್ತವೆ. ಈ ಘಟಕದಲ್ಲಿ ಈ ನೀತಿಗಳನ್ನು ಪರಿಶೀಲಿಸೋಣ.

## 2.1 ಕಲಿಕೆಯ ಉದ್ದೇಶಗಳು

ಈ ಘಟಕವನ್ನು ಓದಿದ ನಂತರ ನೀವು ಇವುಗಳನ್ನು ತಿಳಿದುಕೊಳ್ಳಲು ಸಮರ್ಥರಾಗುವಿರಿ.

* ವಿವಿಧ ಶಿಕ್ಷಣ ಆಯೋಗಗಳ ಐತಿಹಾಸಿಕ ಮಹತ್ವದ ವಿಶ್ಲೇಷಣೆ
* ಕೊಟಾರಿ ಆಯೋಗದ ಶಿಫಾರಸ್ಸುಗಳ ವಿಶೇಷ್ಠ ಸ್ವರೂಪದ ವಿವರಣೆ
* ಅವುಗಳ ಪರಿಣಾಮವಾಗಿ ವಿವಿಧ ಆಯೋಗಗಳಿಂದ ಶಿಪಾರಸ್ಸು ಮಾಡಲಾದ ಕಾರ್ಯಕ್ರಮಗಳ ಪರಿಶೀಲನೆ
* ಪ್ರಸ್ತುತ ಶಿಕ್ಷಣ ನೀತಿಯ ಪ್ರಮುಖ ಲಕ್ಷಣಗಳನ್ನು ತಿಳಿಸುವುದು ಮತ್ತು ವಿವರಿಸುವುದು.

Notes

Notes

* ವಿವಿಧ ನೀತಿಗಳು ಅವುಗಳ ಸಮಂಜಸತೆಗಾಗಿ ನಿಗದಿಪಡಿಸಿದ ಶಿಕ್ಷಣದ ಗುರಿಗಳ ಪರಿಶೀಲನೆ
* ರಾಷ್ಟ್ರೀಯ ಶಿಕ್ಷಣ ನೀತಿಗಳ ಕೊಡುಗೆ ಮತ್ತು UEE ಮೇಲೆ ಅವುಗಳ ಪ್ರಭಾವದ ವಿವರಣೆ.
* ರಾಷ್ಟ್ರೀಯ ಪಠ್ಯಕ್ರಮ ಚೌಕಟ್ಟು 2005ರ (NCF) ನ ಮೌಲ್ಯಮಾಪನ.
* 2005 NCF ವಿವರಣೆ ಮತ್ತು ಕ್ರಿಯಾ ಯೋಜನೆಗೆ ಸಲಹೆಗಳು
* 8 ವರ್ಷಗಳಿಗಾಗಿ ರೂಪಿಸಿದ್ದ ಪ್ರಾಥಮಿಕ ಶಿಕ್ಷಣದ ಸ್ವರೂಪದ ವಿಮರ್ಶಾತ್ಮಕ ವಿವರಣೆ (5 ವರ್ಷಗಳು ಪ್ರಾಥಮಿಕ ಮತ್ತು 3 ವರ್ಷಗಳ ಹಿರಿಯ ಪ್ರಾಥಮಿಕ)

## 2.2 ಸ್ವಾತಂತ್ರ್ಯಾನಂತರ ಭಾರತದಲ್ಲಿ ಶಿಕ್ಷಣ ಆಯೋಗಗಳು / ಸಮಿತಿಗಳ ಶಿಫಾರಸ್ಸುಗಳು

ಈ ದೇಶದಲ್ಲಿ ಅನೇಕ ಆಯೋಗಗಳು ಮತ್ತು ಸಮಿತಿಗಳು ಶಿಕ್ಷಣದ ಅಭಿವೃದ್ಧಿಗಾಗಿ ಅನೇಕ ಹಂತಗಳಲ್ಲಿ ಶ್ರಮಿಸಿವೆ. ಅವುಗಳಲ್ಲಿ ಕೆಲವು ವಿಶೇಷವಾಗಿ ಪ್ರಾಥಮಿಕ ಶಿಕ್ಷಣದ ಮೇಲೆ ಪ್ರಭಾವ ಬೀರಿವೆ ಅವುಗಳೆಂದರೆ

1. ರಾಧಾಕೃಷ್ಣನ್ ಆಯೋಗ (1948–49)
2. ಮುದಲಿಯಾರ್ ಆಯೋಗ (1952)
3. ಮಹಿಳಾ ಶಿಕ್ಷಣದ ಮೇಲಿನ ರಾಷ್ಟ್ರೀಯ ಸಮಿತಿ (1958)
4. ಕೊಠಾರಿ ಆಯೋಗ (1964–66)
5. ಯಶಪಾಲ ಸಮಿತಿ (1992)

### 2.2–1 ರಾಧಾಕೃಷ್ಣನ್ ಆಯೋಗ (1948–49)

ವಿಶ್ವವಿದ್ಯಾನಿಲಯದ ಶಿಕ್ಷಣ ಆಯೋಗವನ್ನು ವಿಶ್ವವಿದ್ಯಾನಿಲಯ ಶಿಕ್ಷಣದ ಸಮಸ್ಯೆಗಳನ್ನು ಚರ್ಚಿಸಲು ಭಾರತ ಸರ್ಕಾರ ಡಾ. ಎಸ್. ರಾಧಾಕೃಷ್ಣನ್‌ರವರ ಅಧ್ಯಕ್ಷತೆಯಲ್ಲಿ 1948ರಲ್ಲಿ ನೇಮಕಮಾಡಿತು. ರಾಷ್ಟ್ರಿಯ ಅಭಿವೃದ್ಧಿಗಾಗಿ ವಿವಿಧ ಕ್ಷೇತ್ರಗಳ ಯುವ ಜನರ ಅಗತ್ಯತೆಯನ್ನು ಪರಿಗಣಿಸಿ ಈ ಸಮಿತಿಯನ್ನು ನೇಮಕಮಾಡಿದೆ. ನಾಯಕತ್ವ ವಿದ್ಯಾವಂತ ಯುವಕರಿಂದ ಬರುತ್ತದೆ ಎಂದು ನಿರೀಕ್ಷಿಸಲಾಗಿತ್ತು.

ರಾಧಾಕೃಷ್ಣನ್ ಆಯೋಗವು ವಿಶ್ವವಿದ್ಯಾನಿಲಯ ಶಿಕ್ಷಣ ಮತ್ತು ಸಂಶೋದನೆಯ ಉದ್ದೇಶದಲ್ಲಿ ಅಪೇಕ್ಷಿತ ಮತ್ತು ಅವಶ್ಯಕ ಬದಲಾವಣೆಗಳಿಗೆ ಸಂಬಂಧಿಸಿದಂತೆ ಮಹತ್ವದ ಶಿಫಾರಸ್ಸುಗಳನ್ನು ನೀಡಿತು. ವಿಶ್ವವಿದ್ಯಾನಿಲಯಗಳು ಕೇಂದ್ರ ಮತ್ತು ರಾಜ್ಯ ಸರ್ಕಾರದೊಂದಿಗೆ ಹೊಂದಿರುವ ಸಂಬಂಧ, ಹಣಕಾಸು, ಪ್ರವೇಶ ಪ್ರಮಾಣದಲ್ಲಿ ಸಂರಕ್ಷಣೆ, ಬೋಧನೆ, ಪರೀಕ್ಷೆಗಳು, ಅಧ್ಯಯನದ ಮಾರ್ಗ, ಕೋರ್ಸಿನ ಅವಧಿ, ನ್ಯಾಯಯುತವಲ್ಲದ ಪಕ್ಷಪಾತ, ಶಿಕ್ಷಣದ ಮಾಧ್ಯಮ, ಭಾರತೀಯ ಸಂಸ್ಕೃತಿಯಲ್ಲಿ ಮುಂದುವರೆದ ಅಧ್ಯಯನದ ಪ್ರಸ್ಥಾವನೆ, ಇತಿಹಾಸ, ಭಾಷೆಗಳು, ತತ್ವಶಾಸ್ತ್ರ, ಲಲಿತಕಲೆಗಳು ಇತ್ಯಾದಿ ವಿಶ್ವವಿದ್ಯಾನಿಲಯದ ನಿಯಂತ್ರಣಾ ಕಾರ್ಯಗಳು ಮತ್ತು ವಿಶ್ವವಿದ್ಯಾನಿಲಯದ ವ್ಯಾಪ್ತಿಯನ್ನು ಗೊತ್ತು ಪಡಿಸಿತು. ದೇಶದಲ್ಲಿ ಉನ್ನತ ಶಿಕ್ಷಣವನ್ನು ಸಂಯೋಜಿಸಲು ರಾಧಾಕೃಷ್ಣನ್ ಆಯೋಗದ ವಿಶ್ವವಿದ್ಯಾನಿಲಯ ಧನ ಸಹಾಯ

ಆಯೋಗವನ್ನು ಶಿಫಾರಸ್ಸು ಮಾಡಿತು. ಕೂಡಲೆ ಇದನ್ನು ಸ್ಥಾಪಿಸಲಾಯಿತು ಈ ಶೀಪಾರಸ್ಸುಗಳನ್ನು ಒಪ್ಪಿಕೊಳ್ಳಲಾಯಿತು ಹಾಗೂ ಜಾರಿಗೊಳಿಸಲಾಯಿತು. ಇವು ದೇಶದಲ್ಲಿ ಉನ್ನತ ಶಿಕ್ಷಣಕ್ಕೆ ಸ್ಪಷ್ಟ ದಿಕ್ಕನ್ನು ನೀಡಿದವು.

ಇವು ಪ್ರಾರ್ಥಮಿಕ ಶಿಕ್ಷಣದ ಮೇಲೆ ನೇರ ಪರಿಣಾಮ ಬೀರದಿದ್ದರೂ ಈ ಶಿಫಾರಸ್ಸುಗಳು ಪ್ರೌಢ ಮತ್ತು ಉನ್ನತ ಶಿಕ್ಷಣದ ತಯಾರಿಗಾಗಿ ಪ್ರಾಥಮಿಕ ಶಿಕ್ಷಣಕ್ಕೆ ಭದ್ರ ಬುನಾದಿಯಾಗಿ ಪ್ರಭಾವ ಬೀರಿವೆ.

### 2.2–2 ಮುದಲಿಯಾರ್ ಆಯೋಗ (1952–53)

ಭಾರತದ ಸರ್ಕಾರ ಪ್ರೌಢಶಿಕ್ಷಣ ಆಯೋಗವನ್ನು ದೇಶದಲ್ಲಿ ಅಸ್ತಿತ್ವದಲ್ಲಿರುವ ಪ್ರೌಢಶಿಕ್ಷಣ ವ್ಯವಸ್ಥೆಯನ್ನು ಪರಿಶೀಲಿಸಲು ಡಾ. ಎ. ಲಕ್ಷಣಸ್ವಾಮಿ ಮುದಲಿಯಾರ್ ಅಧ್ಯಕ್ಷತೆಯಲ್ಲಿ ನೇಮಕ ಮಾಡಿತು. ಈ ಆಯೋಗಕ್ಕೆ ಅದರ ಗುರಿಗಳಿಗೆ ಸಂಬಂಧಿಸಿದಂತೆ ಪುನರ್ ಸಂಘಟನೆ ಮತ್ತು ಸುಧಾರಣೆ, ಪ್ರೌಢಶಿಕ್ಷಣದ ಸಂಘಟನೆ ಮತ್ತು ಪಠ್ಯದ ಸಾರಾಂಶ ಪ್ರಾಥಮಿಕ ಮತ್ತು ಉನ್ನತ ಶಿಕ್ಷಣಕ್ಕೆ ಇದರ ಸಂಬಂಧ ಹಾಗೂ ವಿವಿಧ ರೀತಿಯ ಪ್ರೌಢಶಾಲೆಗಳ ಅಂತರ್ ಸಂಬಂಧ ಇತ್ಯಾದಿಗಳನ್ನು ವಹಿಸಿಕೊಡಲಾಯಿತು.

ಮುದಲಿಯಾರ್ ಆಯೋಗ ಶಿಕ್ಷಕ ಮತ್ತು ಶಿಕ್ಷಕ ತರಬೇತಿ ಕಾರ್ಯಕ್ರಮಗಳ ಸಮಸ್ಯೆಯನ್ನು ವಿಶ್ಲೇಷಿಸಿದೆ ಹಾಗೂ ಶಿಕ್ಷಕ ತರಬೇತಿಗೆ ಎರಡು ರೀತಿಯ ಪ್ರೌಢಶಾಲೆಗಳನ್ನು ಶಿಫಾರಸ್ಸು ಮಾಡಿದೆ.

1) ಪ್ರತ್ಯೇಕ ಮಂಡಳಿಯ ನಿಯಂತ್ರಣದಲ್ಲಿ ಪ್ರಾಥಮಿಕ ಶಿಕ್ಷಕ ತರಬೇತಿ ಸಂಸ್ಥೆಗಳು – 2 ವರ್ಷಗಳ ಅವಧಿಗಾಗಿ ಸ್ಕೂಲ್ ಲೀವಿಂಗ್ ಸರ್ಟಿಫಿಕೇಟ್ ಅಥವಾ ಉತ್ನತ ಪ್ರೌಢಶಾಲಾ ಲೀವಿಂಗ್ ಸರ್ಟಿಫಿಕೇಟ್.

2) ಪ್ರೌಢಶಿಕ್ಷಕ ತರಬೇತಿ ಸಂಸ್ಥೆಗಳನ್ನು ಒಂದು ವರ್ಷದ ಶೈಕ್ಷಣಿಕ ಅವಧಿಗೆ ಪದವೀದರರನ್ನು ಗುರುತಿಸಲಾಯಿತು ಮತ್ತು ವಿಶ್ವವಿದ್ಯಾನಿಲಯಗಳಿಗೆ ಸಂಯೋಜನೆ ಮಾಡುವುದು. ಇದನ್ನು 2 ವರ್ಷಗಳಿಗೆ ವಿಸ್ತರಿಸಲು ಯೋಚಿಸಲಾಯಿತು.

ಶಿಕ್ಷಕ ತರಬೇತಿ ಬಯಸುವವನು ಒಂದು ಅಥವಾ ಹೆಚ್ಚು ವಿವಿಧ ಪಠ್ಯತರ ಚಟುವಟಿಕೆಗಳಲ್ಲಿ ತರಬೇತಿ ಪಡೆಯುವುದನ್ನು ನಿರೀಕ್ಷಿಸಲಾಗಿದೆ. ತರಬೇತಿ ಕಾಲೇಜುಗಳು ಪುನರ್ ಮನನ ಕೋರ್ಸ್‌ನ್ನು ಏರ್ಪಡಿಸುವುದು, ವಿಶೇಷ ವಿಷಯಗಳಲ್ಲಿ ಅಲ್ಪಾವಧಿ ತೀವ್ರ ಕೋರ್ಸ್‌ಗಳು, ಕಾರ್ಯಾಗಾರ ಮತ್ತು ಉದ್ಯೋಗ ಆಧಾರಿತ ಸಮ್ಮೇಳನಗಳ ಮೂಲಕ ಪ್ರಾಯೋಗಿಕ ತರಬೇತಿಗಳು ಅವರ ಕೆಲಸದ ಸಾಮನ್ಯ ಭಾಗಗಳಾಗಿವೆ. ತರಬೇತಿಯ ಕಾಲೇಜುಗಳು ಶಿಕ್ಷಣಶಾಸ್ತ್ರದ ವಿವಿಧ ಪ್ರಮುಖ ಆಯಾಮಗಳ ಬಗ್ಗೆ ಸಂಶೋಧನೆ ಕೈಗೊಳ್ಳಬೇಕೆಂದು ನಿರೀಕ್ಷಿಸಲಾಗಿದೆ ಹಾಗೂ ಈ ಉದ್ದೇಶಕ್ಕಾಗಿ ಶಾಲೆಗಳೆ ಪ್ರಯೋಗಾಲಾಯಗಳಾಗಬೇಕು. ಈ ಆಯೋಗ ವಸತಿ ಸೌಲಭ್ಯಗಳೊಂದಿಗೆ ಉಚಿತ ತರಬೇತಿಯನ್ನು ಶಿಫಾರಸ್ಸುಮಾಡಿದೆ.

ಈ ಶಿಫಾರಸ್ಸುಗಳು ಶಿಕ್ಷಕರ ತರಬೇತಿಯಲ್ಲಿ ವಿಶೇಷವಾಗಿ ತರಬೇತಿಗೆ ಬರುವ ಸೇವೆಯಲ್ಲಿರುವ ಶಿಕ್ಷಕರ ಮೇಲೆ ದೂರಗಾಮಿ ಪರಿಣಾಮಗಳನ್ನುಂಟುಮಾಡಿವೆ.

Notes

Notes

### 2.2–3 ಮಹಿಳಾ ಶಿಕ್ಷಣದ ಮೇಲಿನ ರಾಷ್ಟ್ರೀಯ ಸಮಿತಿ 1958 (ದುರ್ಗಾಬಾಯಿ ದೇಶ್‌ಮುಖ್ ಸಮಿತಿ)

ಸ್ವಾತಂತ್ರ್ಯಾನಂತರ ಜನಸಂಖ್ಯೆಯಲ್ಲಿ ಹೆಚ್ಚು ಕಡಿಮೆ ಅರ್ಧದಷ್ಟಿರುವ ಬಾಲಕಿಯವರು ಮತ್ತು ಮಹಿಳೆಯರ ಶಿಕ್ಷಣದ ಸಮಸ್ಯೆಗಳು ಆದ್ಯತೆಯಾಗಿ ಪರಿಣಾಮಿಸಿದವು. ಆದರೆ ನೀವು ತಿಳಿದುಕೊಂಡಿರುವಂತೆ ಸಾಂಪ್ರದಾಯಿಕವಾಗಿ ಭಾರತೀಯ ಸಮಾಜದಲ್ಲಿ ಬಾಲಕಿಯ ಶಿಕ್ಷಣಕ್ಕೆ ಕಡಿಮೆ ಆದ್ಯತೆಯನ್ನು ನೀಡಲಾಗಿತ್ತು. 1957ರಲ್ಲಿ ಯೋಜನಾ ಆಯೋಗದ ಶೈಕ್ಷಣಿಕ ಪ್ಯಾನೆಲ್ ಈ ರೀತಿ ಶಿಫಾರಸ್ಸುಮಾಡಿದೆ. ಪ್ರಾಥಮಿಕ, ಪ್ರೌಢ ಮತ್ತು ವಯಸ್ಕ ಹಂತದ ಬಾಲಕಿಯರ ಶಿಕ್ಷಣದ ಸ್ವರೂಪಕ್ಕೆ ಸಂಬಂಧಿಸಿದಂತೆ ಸೂಕ್ತ ಸಮಿತಿಯನ್ನು ನೇಮಕಮಾಡಬೇಕು. ಈಗಿರುವ ವ್ಯವಸ್ಥೆ ಅವರಿಗೆ ಸಂತೋಷದಾಯಕ ಹಾಗೂ ಹೆಚ್ಚು ಉಪಯುಕ್ತ ಜೀವನಕ್ಕೆ ಹಾದಿಮಾಡಿಕೊಡುತ್ತದೆಯೇ ಎನ್ನುವುದನ್ನು ಪರಿಶೀಲಿಸಬೇಕಾಗಿತ್ತು.

ಇದಕ್ಕನುಗುಣವಾಗಿ ಸರ್ಕಾರ ಮೇ 1958ರಲ್ಲಿ ಶ್ರೀಮತಿ ದುರ್ಗಾಬಾಯಿ ದೇಶ್‌ಮುಖ್ ಅಧ್ಯಕ್ಷತೆಯಲ್ಲಿ ಮಹಿಳಾ ಶಿಕ್ಷಣದ ಮೇಲೆ ರಾಷ್ಟ್ರೀಯ ಸಮಿತಿಯನ್ನು ನೇಮಕ ಮಾಡಿತು. ಈ ಸಮಿತಿಯು 1959ರಲ್ಲಿ ತನ್ನ ವರದಿಯನ್ನು ಪ್ರಕಟಿಸಿತು ಹಾಗೂ ಬಾಲಕರು ಮತ್ತು ಬಾಲಕಿಯರ ಶಿಕ್ಷಣದಲ್ಲಿ ಸಮಾನತೆ ಇರಬೇಕು ಎನ್ನವ ಅಂಶಕ್ಕೆ ವಿಶೇಷ ಪ್ರಾಧಾನ್ಯತೆ ನೀಡಿತು. ಈ ಸಮಸ್ಯೆಯ ಶ್ಲೇಷ್ಟತೆ ಮತ್ತು ಉದ್ದಗಲಗಳನ್ನು ಎದುರಿಸಲು ಕೇಂದ್ರ ಮತ್ತು ರಾಜ್ಯಗಳು ನಿರ್ಣಾಯಕ ಪ್ರಯತ್ನ ಮಾಡಬೇಕು. ಇದು ಮಾಧ್ಯಮಿಕ ಶಾಲಾ ಹಂತದ ತನಕ ಗಂಡು ಮತ್ತು ಹೆಣ್ಣು ಮಕ್ಕಳ ಸಹಶಿಕ್ಷಣವಿರಬೇಕು ಆದರೆ ಪ್ರೌಢಶಾಲಾ ಹಂತದಲ್ಲಿ ಬಾಲಕಿಯರಿಗೆ ಪ್ರತ್ಯೇಕ ಸಂಸ್ಥೆಗಳಿರಬೇಕು ಹಾಗೂ ಈ ಹಂತದಲ್ಲಿ ಅವರಿಗೆ ಸರಿಹೊಂದುವ ಹೆಚ್ಚು ವೈವಿಧ್ಯಮಯವಾದ ಪಠ್ಯಕ್ರಮವನ್ನು ಜಾರಿಗೆ ತರಬೇಕು. ತಾಯಂದಿರಿಗೆ ಶಿಸುಸಂಕ್ಷಣಾಲಯ, ಮಹಿಳಾ ಶಿಕ್ಷಕಿಯರಿಗೆ ತರಬೇತಿ ಮತ್ತು ವಯಸ್ಕ ಮಹಿಳೆಯರಿಗೆ ಉದ್ಯೋಗ ಮುಂತಾದ ಸಂಪರ್ಕ ಸೌಲಭ್ಯಗಳನ್ನು ಮಾಡುವಂತೆ ಸಮಿತಿ ಸೂಚಿಸಿತು. ಇದಕ್ಕನುಗುಣವಾಗಿ ಬಾಲಕಿಯರ ಶಿಕ್ಷಣ ಮತ್ತು ಮಹಿಳಾ ಶಿಕ್ಷಕಿಯರನ್ನು ವಿಶೇಷವಾಗಿ ಪ್ರಾಥಮಿಕ ಹಂತದಲ್ಲಿ ಪ್ರೋತ್ಸಾಹಿಸಲು ನೀತಿಗಳು ಮತ್ತು ಆಚರಣೆಯಲ್ಲಿ ಅನೇಕ ಅವಕಾಶಗಳನ್ನು ಮಾಡಲಾಗಿದೆ.

### 2.2–4 ಕೊಟಾರಿ ಆಯೋಗ (1964–66)

ಅನೇಕ ಸಮಿತಿಗಳು ಮತ್ತು ಆಯೋಗಗಳನ್ನು ಶಿಫಾರಸ್ಸು ನೀಡಿದಾಗ್ಯೂ ಹಾಗೂ ಶಿಕ್ಷಣದಲ್ಲಿ ಬದಲಾವಣೆ ತರಲು ನಿರಂತರ ಪ್ರಯತ್ನ ಮಾಡುತಿದ್ದಾನ್ನು ದೇಶದಲ್ಲಿನ ಶಿಕ್ಷಣದ ಪ್ರಗತಿಯ ಬಗ್ಗೆ ಭಾರತ ಸರ್ಕಾರ ಸಮಾದಾನವಾಗಿರಲಿಲ್ಲ. ಶಿಕ್ಷಣದ ಎಲ್ಲಾ ವಲಯಗಳನ್ನು ಒಳಗೊಳ್ಳುವ ಸಮರ್ಪಕ ಶಿಕ್ಷಣ ನೀತಿಯ ಅವಶ್ಯಕತೆಯನ್ನು ಮನಗಾಣಲಾಯಿತು. ಆದ್ದರಿಂದ ರಾಷ್ಟ್ರೀಯ ಶಿಕ್ಷಣ ನಮೂನೆ (ಮೊದಲ) ಮತ್ತು ಎಲ್ಲಾ ಹಂತಗಳಲ್ಲಿ ಹಾಗೂ ಎಲ್ಲಾ ಆಯಾಮಗಳಲ್ಲಿ ಶಿಕ್ಷಣದ ಅಭಿವೃದ್ಧಿಗಾಗಿ ಸಾಮಾನ್ಯ ತತ್ವಗಳು ಮತ್ತು ನೀತಿಗಳ ಬಗ್ಗೆ ಸರ್ಕಾರಕ್ಕೆ ಸಲಹೆ ನೀಡಲು ಡಾ.ಡಿ.ಎಸ್. ಕೊಟಾರಿ ಅಧ್ಯಕ್ಷತೆಯಲ್ಲಿ ಭಾರತ ಸರ್ಕಾರ ಶಿಕ್ಷಣ ಆಯೋಗವನ್ನು ರಚಿಸಿತು.

ವಿವಿಧ ಶೈಕ್ಷಣಿಕ ವಲಯಗಳಾದ ಶಾಲಾಶಿಕ್ಷಣ, ಉನ್ನತ ಶಿಕ್ಷಣ, ತಾಂತ್ರಿಕ ಶಿಕ್ಷಣ, ಕೃಷಿ ಶಿಕ್ಷಣ, ಇತ್ಯಾದಿಗಳಲ್ಲಿ 12 ಕಾರ್ಯಪಡೆಗಳನ್ನು ಮತ್ತು ಏಳು ವರ್ಕಿಂಗ್ ಗುಂಪುಗಳನ್ನು ಅಧ್ಯಯನ ಮಾಡಲು ಆಯೋಗ ನಿಗದಿಪಡಿಸಿದೆ. ಕಾರ್ಯಪಡೆ ಮತ್ತು ವರ್ಕಿಂಗ್ ಗುಂಪುಗಳ ವರದಿಗಳು ಕೆಲವು ಪ್ರಮುಖ ಅಂಶಗಳನ್ನು ಆಳವಾಗಿ ಮತ್ತು ವಿವರವಾಗಿ ಪರಿಶೀಲಿಸಲು ಆಯೋಗಕ್ಕೆ ಸಹಾಯ ಮಾಡಿದವು.

Notes

ಸಾಮಾಜಿಕ ಪುನರ್ ನಿರ್ಮಾಣಕ್ಕೆ ಪ್ರಮುಖ ಪರಿಕರ ಎನ್ನುವುದನ್ನು ಆಯೋಗ ಗ್ರಹಿಸಿತು ಹಾಗೂ ರಾಷ್ಟ್ರನಿರ್ಮಾಣ ಮತ್ತು ಅಭಿವೃದ್ಧಿಯಲ್ಲೂ ಅದರ ಪಾಲುದಾರಿಕೆಯ ಬಗ್ಗೆ ಜನರಲ್ಲಿ ಜಾಗೃತಿ ಉಂಟುಮಾಡಿತು. ರಾಷ್ಟ್ರೀಯ ಅಭಿವೃದ್ಧಿಯಲ್ಲಿ ಜನರು ಪಾಲ್ಗೊಳ್ಳಬೇಕೆಂದು ಆಯೋಗ ಬಯಸಿತು. ಇದು ಕೊಠಾರಿ ಆಯೋಗದ ವರದಿಯ ಆಧಾರವಾಗಿದೆ.

ಆಯೋಗದ ದೃಷ್ಟಿ ಸಂಬಂದ ನೋಟದಂತೆ ಶಿಕ್ಷಣದ ಪ್ರಮುಖ ಗುರಿಗಳು ಹಾಗೂ ಅವುಗಳನ್ನು ಸಾಧಿಸಲು ಶಿಫಾರಸ್ಸುಗಳು ಈ ಕೆಳಗಿನಂತಿವೆ.

1. **ಉತ್ಪಾದಕತೆಯನ್ನು ಹೆಚ್ಚಿಸಲು ಶಿಕ್ಷಣ**

   ಎ) ವಿಜ್ಞಾನವನ್ನು ಶಿಕ್ಷಣ ಮತ್ತು ಸಂಸ್ಕೃತಿಯ ಮೂಲಭಾಗವಾಗಿ ಮಾಡುವುದು.

   ಬಿ) ಸಾಮಾನ್ಯ ಶಿಕ್ಷಣದ ಸಮಗ್ರಭಾಗವಾಗಿ SUPW ಎನ್ನು ಜಾರಿಗೊಳಿಸುವುದು.

   ಸಿ) ಕೈಗಾರಿಕೆ ಮತ್ತು ಕೃಷಿಯ ಅಗತ್ಯತೆಗಳನ್ನು ಪೂರೈಸಲು ಶಿಕ್ಷಣವನ್ನು ವೃತ್ತಿಕರಣಗೊಳಿಸುವುದು.

   ಡಿ) ವಿಶ್ವವಿದ್ಯಾನಿಲಯಗಳಲ್ಲಿ ಶಿಕ್ಷಣ, ವೈಜ್ಞಾನಿಕ ಮತ್ತು ತಾಂತ್ರಿಕ ಸಂಶೋದನೆಯನ್ನು ಸುಧಾರಿಸುವುದು.

2. **ಆಧುನಿಕರಣ ಪ್ರಕ್ರಿಯೆಯನ್ನು ವೇಗಗೊಳಿಸಲು ಶಿಕ್ಷಣ.**

   ಎ) ಹೊಸ ಬೋಧನಾ ವಿಧಾನವನ್ನು ಅಳವಡಿಸುವುದು.

   ಬಿ) ಮನೋಧೋರಣೆ, ಮೌಲ್ಯಗಳು ಮತ್ತು ಸ್ವ ಅಧ್ಯಯನದಂತ ಅವಶ್ಯಕ ಕೌಶಲ್ಯಗಳ ಅಭಿವೃದ್ಧಿ

   ಸಿ) ಸಮಾಜದ ಎಲ್ಲಾವರ್ಗಗಳ ಜನರನ್ನು ವಿದ್ಯಾವಂತನ್ನಾಗಿಸುವುದು.

   ಡಿ) ವೃತ್ತಿ ವಿಷಯಗಳು ಮತ್ತು ವಿಜ್ಞಾನದ ಬೋದನೆಗೆ ಮಹತ್ವನೀಡುವುದು.

   ಇ) ದೇಶದಲ್ಲಿ ಉತ್ಕೃಷ್ಟತಾ ವಿಶ್ವವಿದ್ಯಾನಿಲಯಗಳನ್ನು ಸ್ಥಾಪಿಸುವುದು.

3. **ಸಾಮಾಜಿಕ ಮತ್ತು ರಾಷ್ಟ್ರೀಯ ಬಾವೈಕ್ಯತೆಯನ್ನು ಪ್ರೋತ್ಸಾಹಿಸಲು ಶಿಕ್ಷಣ.**

   ಎ) ಸಾರ್ವಜನಿಕ ಶಿಕ್ಷಣದ ಸಾಮಾನ್ಯ ಶಾಲಾ ವ್ಯವಸ್ಥೆಯನ್ನು ಜಾರಿಗೊಳಿಸುವುದು.

   ಬಿ) ಎಲ್ಲಾ ಆಧುನಿಕ ಭಾರತೀಯ ಭಾಷೆಗಳನ್ನು ಅಭಿವೃದ್ಧಿಪಡಿಸುವುದು.

   ಸಿ) ಸಾಧ್ಯವಾದಷ್ಟು ಜಾಗ್ರತೆಯಾಗಿ ಹಿಂದಿಯನ್ನು ಶ್ರೀಮಂತಗೊಳಿಸಲು ಕ್ರಮಕೈಗೊಳ್ಳುವುದು.

   ಡಿ) ಸಮುದಾಯ ಜೀವನದಲ್ಲಿ ವಿದ್ಯಾರ್ಥಿಗಳು ಭಾಗವಹಿಸುವಂತೆ ಮಾಡುವುದು ಮತ್ತು ಪ್ರೋತ್ಸಾಹಿಸುವುದು.

4. **ರಾಷ್ಟ್ರೀಯ ಮೌಲ್ಯಗಳನ್ನು ಒಳಗೊಳ್ಳುವಿಕೆಯ ಶಿಕ್ಷಣ**

   ಎ) ನೈತಿಕ, ಸಾಮಾಜಿಕ ಮತ್ತು ಆಧ್ಯಾತ್ಮಕ ಮೌಲ್ಯಗಳನ್ನು ಜಾರಿಗೊಳಿಸುವುದು.

   ಬಿ) ವಿಶ್ವದ ಧರ್ಮಗಳ ಬಗ್ಗೆ ಮಾಹಿತಿ ನೀಡುವಂತಹ ಪಠ್ಯಕ್ರಮ ನೀಡುವುದು

   ಸಿ) ಶಾಂತವಾಗಿ ಧ್ಯಾನಕ್ಕಾಗಿ ಗುಂಪುಗಳಲ್ಲಿ ವಿದ್ಯಾರ್ಥಿಗಳು ಭಾಗವಹಿಸಲು ಪ್ರೋತ್ಸಾಹಿಸುವುದು.

   ಡಿ) ವಿದ್ಯಾರ್ಥಿಗಳ ಮುಂದೆ ಸಾಮಾಜಿಕ ನ್ಯಾಯ ಮತ್ತು ಸಾಮಾಜಿಕ ಸೇವೆಯ ಅಭಿಪ್ರಾಯವನ್ನು ಪ್ರಸ್ತುತ ಪಡಿಸುವುದು.

ಕೊಠಾರಿ ಆಯೋಗವು ಭಾರತೀಯ ಶಿಕ್ಷಣದ ಪಂಡಿತ ಶೋಧಕ ಆಗಿದೆ. ಅರ್ಧಶತಮಾನದ ನಂತರವೂ ಇಂದಿಗೂ ಭಾರತೀಯ ಇತಿಹಾಸದಲ್ಲಿ ಪ್ರಾಥಮಿಕ ಮತ್ತು ಪ್ರೌಢಶಿಕ್ಷಣವು ತುಂಬಾ ಆಳವಾದ ಅಧ್ಯಯನವಾಗಿದೆ.

Notes

ಜಾತಿ, ಧರ್ಮ ಅಥವಾ ಸ್ಥಾನಮಾನದ ಆಧಾರದಲ್ಲಿ ಯಾವುದೇ ಪಕ್ಷಪಾತ ಮಾಡದ ಎಲ್ಲರಿಗೂ ಶಿಕ್ಷಣ ನೀಡುವ ಸಾಮಾನ್ಯಶಾಲಾ ವ್ಯವಸ್ಥೆ (CSS) ಗೆ ಆಯೋಗ ಸಲಹೆ ನೀಡಿತು. ಕೊಟಾರಿ ಆಯೋಗವು CSS ನ್ನು ಪರಿಣಾಮಕಾರಿಯಾಗಿ ಜಾರಿಗೆ ತರಲು ಕೆಲವು ಕ್ರಮಗಳನ್ನು ಸೂಚಿಸಿತು.

* ಗುಣಮಟ್ಟದ ಶಿಕ್ಷಣವನ್ನು ನೀಡುವಮೂಲಕ ಅಗತ್ಯ ಮೂಲಸೌಲಭ್ಯ ನಿರ್ಮಿಸಲು ಪ್ರಾರ್ಥಮಿಕ ಶಿಕ್ಷಣದ ಮೇಲಿನ ವೆಚ್ಚವನ್ನು ಹೆಚ್ಚಿಸುವುದು. ಇದರಿಂದ ಸರ್ಕಾರಿ ಸ್ಥಳೀಯ ಮತ್ತು ಅನುದಾನಿತ ಶಾಲೆಗಳನ್ನು ನೆರೆಹೊರೆಯ ಉತ್ತಮ ಶಾಲೆಗಳಂತೆ ಬದಲಾಯಿಸುವುದು.

* ಪ್ರಾಥಮಿಕ ಮಟ್ಟದಲ್ಲಿ ಉಚಿತ ಶಿಕ್ಷಣವನ್ನು ಎಲ್ಲಾ ಮಾತೃಭಾಷೆಗಳಲ್ಲಿ, ಪ್ರೌಢ ಹಂತದಲ್ಲಿ ಪ್ರಾದೇಶಿಕ ಭಾಷೆಗಳಲ್ಲಿ ಒದಗಿಸುವುದು ಸರ್ಕಾರದ ಅನುದಾನದ ನೆರವಿನಿಂದ ಮಾತೃ ಭಾಷೆ, ಪ್ರಾದೇಶಿಕ ಭಾಷೆಗಳನ್ನು ಬಿಟ್ಟು ಬೇರೆ ಭಾಷೆಗಳಲ್ಲಿ ಶಿಕ್ಷಣ ನೀಡುತ್ತಿರುವ ಶಾಲೆಗಳನ್ನು ಮುಂದುವರೆಸಬಾರದು.

* ಹತ್ತು ವರ್ಷಗಳ ಸಮಯ ಚೌಕಟ್ಟಿನಲ್ಲಿ ಸಾಮಾನ್ಯ ಶಾಲಾ ವ್ಯವಸ್ಥೆಯನ್ನು ಹಂತಹಂತವಾಗಿ ಜಾರಿಗೊಳಿಸುವುದು; ಶೀಘ್ರ ಆಯ್ಕೆ ಪ್ರಕ್ರಿಯೆಗಳು ಟ್ಯೂಷನ್ ಶುಲ್ಕ, ಕ್ಯಾಪಿಟೇಶನ್ ಶುಲ್ಕ ಮುಂತಾದವುಗಳನ್ನು ಗುಣಮಟ್ಟದ ಶಿಕ್ಷಕ ಶಿಕ್ಷಣ ನೀಡಲು ಅವಶ್ಯಕ ಕನಿಷ್ಠ ಕಾನೂನಿನ ಮುಂಖಾಂತರ.

– ಮೂಲಭೂತ ಪರಿಭಾವನೆಗಳ ಸ್ಪಷ್ಟತೆಗಾಗಿ ಸಾರಾಂಶಕೋರ್ಸ್
– ಸಾಮಾನ್ಯ / ವೃತ್ತಿಪರ ಶಿಕ್ಷಣ ಕೋರ್ಸ್‌ಗಳನ್ನು ಸಂಯೋಜಿಸುವುದು
– ವೃತ್ತೀಯ ಅಧ್ಯಯನಗಳನ್ನು ಮತ್ತು ಸಂಶೋದನೆ ಕೈಗೊಳ್ಳುವುದನ್ನು ಪುನರ್ ಮನನ ಮಾಡುವುದು
– ಬೋಧನೆ ಮತ್ತು ಮೌಲ್ಯಮಾಪನದ ಪರಿಣಾಮಕಾರಿ ವಿಧಾನಗಳು
– ಇಂಟರ್ನ್‌ಶಿಫ್ ಪ್ರೋಗ್ರಾಂನ್ನು ಪ್ರಾಯೋಗಿಕ ಬೋಧನೆಯ ಭಾಗವಾಗಿಸುವುದು.

ಕಳೆದ 50 ವರ್ಷಗಳಲ್ಲಿ ಸ್ವಲ್ಪ ಯಶಸ್ಸಿನೊಂದಿಗೆ ಈ ದೇಶ ವಿನ್ಯಾಸಗೊಳಿಸಿರುವ ಶಿಕ್ಷಣಕ್ಕಾಗಿ ಪ್ರಯತ್ನಿಸುತ್ತಿದೆ. ಆದರೆ ಪ್ರಕ್ರಿಯೆ ತುಂಬಾ ನಿಧಾನವಾಗಿದೆ.

### 2.2.5 ಯಶಪಾಲ್ ಸಮಿತಿ (1992)

ಶಾಲಾಮಕ್ಕಳ ಶೈಕ್ಷಣಿಕ ಹೊರೆಯನ್ನು ತಗ್ಗಿಸಲು ಮಾರ್ಗೋಪಾಯಗಳನ್ನು ಕಂಡುಹಿಡಿಯಲು ಭಾರತಸರ್ಕಾರ 1992 ಪ್ರೊ. ಯಶಪಾಲ್ ಶರ್ಮರ ಅಧ್ಯಕ್ಷತೆಯಲ್ಲಿ ರಾಷ್ಟ್ರೀಯ ಸಲಹಾ ಸಮಿತಿಯನ್ನು ನೇಮಕ ಮಾಡಿತು. ಪಠ್ಯಕ್ರಮದ ಒತ್ತಡದ ಸಮಸ್ಯೆಯನ್ನು ವಿವರವಾಗಿ ಅಧ್ಯಯನ ಮಾಡಿದನಂತರ ಯಶಪಾಲಸಮಿತಿ ಈ ತೀರ್ಮಾನಕ್ಕೆ ಬಂದಿತು. ಶಾಲಾ ಮಕ್ಕಳ ಮೇಲಿನ ಒತ್ತಡದ ಸಮಸ್ಯೆ ಕೇವಲ ದೋಷಪೂರಿತ ಪಠ್ಯಕ್ರಮ ವಿನ್ಯಾಸ ಅಥವಾ ಉತ್ತಮ ಗುಣಮಟ್ಟ ಹೊಂದಿರದ ಶಿಕ್ಷಕರು ಅಥವಾ ಶಾಲಾ ಆಡಳಿತ ಅಥವಾ ಪಠ್ಯಪುಸ್ತಕಗಳಿಂದ ಮಾತ್ರ ಸೃಷ್ಟಿಯಾಗಿರದೇ ಉಪಯುಕ್ತ ವಸ್ತುಗಳನ್ನು ಮಾಡಲು ನೈಜ ಕಾರ್ಯಕ್ರಮತೆಗೆ ವಿದ್ಯಾರ್ಹತೆಯನ್ನು ತಪ್ಪಾಗಿ ನಿರ್ಧರಿಸಿರುವುದು ಕೂಡಾ ಕಾರಣವಾಗಿದೆ. ಇದು ಜ್ಞಾನ ಸ್ಫೋಟ ಪರಿಭಾವನೆ ಮತ್ತು ಆಕರ್ಷಕ ಸಿಂ ಡ್ರೊ ಮ್ ಗೆ ಸಂಬಂದಿಸಿದೆ.

ಶಿಕ್ಷಕರು, ಶಿಕ್ಷಣತಜ್ಞರು ಮತ್ತು ಪರಿಣಿತರು ಹೆಚ್ಚಿನ ಸ್ವಾಯತ್ತತೆಯಲ್ಲಿ ಪಠ್ಯಕ್ರಮ ರೂಪಿಸುವಿಕೆ ಮತ್ತು ಪಠ್ಯಕ್ರಮದ ತಯಾರಿಕೆ ಪ್ರಕ್ರಿಯೆ ಬೇಕೆಂದು ಈ ಸಮಿತಿ ಬಯಸಿತು. ವಿವಿಧ ಕ್ಷೇತ್ರದಲ್ಲಿನ ವಿಜ್ಞಾನಿಗಳನ್ನು

Notes

ಮತ್ತು ಪರಿಣಿತರನ್ನು ಪಠ್ಯಪುಸ್ತಕಗಳ ತಯಾರಿಕೆಯಲ್ಲಿ ಸಮಾಲೋಚಕರನ್ನಾಗಿ ಮಾತ್ರ ಬಳಸಿಕೊಳ್ಳಲಾಯಿತು. ಆದರೆ ಇವರನ್ನು ಪುಸ್ತಕ ಬರೆಯಲು ಬಳಸಿಕೊಳ್ಳಲಿಲ್ಲ.

ಈ ಸಮಿತಿ ಪೈಪೋಟಿಯನ್ನು ತಗ್ಗಿಸಿತು. ವೈಯಕ್ತಿಕ ಸಾಧನೆಗೆ ಬಹುಮಾನ ನೀಡುವುದರಿಂದ ಪೈಪೋಟಿಯನ್ನು ಮಕ್ಕಳು ಸಂತೋಷದಾಯಕವಾಗಿ ಸ್ವೀಕರಿಸುವಂತಾಯಿತು. ಸಹಭಾಗಿತ್ವ ಗುಂಪು ಚಟುವಟಿಕೆಗಳನ್ನು ಮತ್ತು ಗುಂಪು ಸಾಧನೆಗಳನ್ನು ಶಾಲೆಯಲ್ಲಿ ಸಹಕಾರಿ ಕಲಿಕೆಗೆ ಪ್ರೋತ್ಸಾಹ ನೀಡಲಾಯಿತು. ಚಿಕ್ಕ ಮಕ್ಕಳ ಶಿಕ್ಷಣ ಸಂಸ್ಥೆಗಳಲ್ಲಿ ಪ್ರವೇಶಕ್ಕಾಗಿ ಯಾವುದೇ ಕಿರುಪರೀಕ್ಷೆ ಅಥವಾ ಸಂದರ್ಶನಗಳನ್ನು ಸಮಿತಿ ಬಯಸಲಿಲ್ಲ.

ಪ್ರತಿದಿನ ಶಾಲೆಗೆ ಚಿಕ್ಕ ಮಕ್ಕಳು ಭಾರವಾದ ಚೀಲವನ್ನು ಹೊತ್ತುಕೊಂಡು ಹೋಗಬಾರದೆಂದು ಸಮಿತಿ ಬಲವಾಗಿ ಪ್ರತಿಪಾದಿಸಿದೆ. ಪಠ್ಯಪುಸ್ತಕಗಳನ್ನು ಶಾಲಾ ಆಸ್ತಿ ಎಂದು ಪರಿಗಣಿಸಬೇಕು. ಹೀಗಾಗಿ ಮಕ್ಕಳು ವೈಯಕ್ತಿಕವಾಗಿ ಪುಸ್ತಕಗಳನ್ನು ಕೊಂಡುಕೊಂಡು ಅವುಗಳನ್ನೇ ಮನೆಗೆ ಪ್ರತಿದಿನವೂ ತೆಗೆದು ಕೊಂಡು ಹೋಗಬೇಕಾಗಿಲ್ಲ. ಮನೆಯ ಪರಿಸರದಲ್ಲಿ ಶೋಧನೆಯ ವಿಸ್ತರಣೆಯನ್ನು ಹೊರತುಪಡಿಸಿ ಪ್ರಾಥಮಿಕ ತರಗತಿಗಳ ಮಕ್ಕಳಿಗೆ ಮನೆಕೆಲಸದ ಒತ್ತಡ ಇರಕೂಡದೆಂದು ಸಮಿತಿ ಅಭಿಪ್ರಾಯ ಪಟ್ಟಿತು. ಹಿರಿಯ ಪ್ರಾಥಮಿಕ ಮತ್ತು ಪ್ರೌಢ ತರಗತಿಗಳಲ್ಲಿ ಅವಶ್ಯಕತೆ ಇರುವಲ್ಲಿ ಮಾತ್ರ ಪಠ್ಯಪುಸ್ತಕಗಳಿಗೆ ಹೊರತಾಗಿ ಬಿಟ್ಟು ಮನೆಕೆಲಸ ನೀಡಬೇಕು. ಇದನ್ನು ಆವರ್ತನ ಆಧಾರದಲ್ಲಿ ಲಭ್ಯವಾಗುವಂತೆ ನೋಡಿಕೊಳ್ಳಬೇಕು.

ಪ್ರಾಥಮಿಕ ತರಗತಿಗಳಲ್ಲಿನ ಎಲ್ಲಾ ವಿಷಯಗಳ ಪಠ್ಯಕ್ರಮ ಮತ್ತು ಪಠ್ಯಪುಸ್ತಕ ಆಧಾರಿತ ಪರಿಭಾವನೆಯನ್ನು ಸಲಹೆಮಾಡಿದೆ. ಪ್ರಾಥಮಿಕ ಶಾಲೆಗಳಲ್ಲಿನ ಎಲ್ಲಾ ವಿಷಯಗಳ ಪಠ್ಯಕ್ರಮ ಮತ್ತು ಪಠ್ಯ ಪುಸ್ತಕಗಳ ಬಗ್ಗೆ ಸಮಿತಿಯು ಅವಲೋಕನ ಮಾಡಿದೆ. ಭಾಷಾ ಪಠ್ಯ ಪುಸ್ತಕಗಳ ಕಲಿಕೆ ಮಾತನಾಡುವ ನುಡಿಗಟ್ಟುಗಳನ್ನು ಸಮರ್ಪಕವಾಗಿ ಪ್ರತಿಬಿಂಬಿಸಬೇಕು ಹಾಗೂ ಮಗುವಿನ ಜೀವನ ನಿರೀಕ್ಷೆಗಳು ಕಲ್ಪನಾಕತೆಗಳು ಮತ್ತು ಪದ್ಯಗಳು ಹಾಗೂ ದೇಶದ ವಿವಿಧ ಭಾಗಗಳಲ್ಲಿನ ಸಾಮಾನ್ಯ ಜನರನ್ನು ಪ್ರತಿಬಿಂಬಿಸುವಂತಹ ಕತೆಗಳಿಗೆ ಸಾಕಷ್ಟು ಪ್ರಾತಿನಿಧ್ಯ ನೀಡಬೇಕೆಂದು ಸಮಿತಿ ನಿರೀಕ್ಷಿಸಿದೆ. ವಿಜ್ಞಾನ ನೈಜ ಜೀವನಸ್ಥಿತಿ ಬಗ್ಗೆ ಪ್ರಯೋಗಾತ್ಮಕ ಮತ್ತು ವಿಶ್ಲೇಷಣಾತ್ಮಕ ಪ್ರತಿಂಬಿಬವನ್ನು ಒದಗಿಸುತ್ತದೆ. ಇದರ ಜೊತೆಗೆ ಇತಿಹಾಸ, ಭೂಗೋಳಶಾಸ್ತ್ರ, ಸಮಾಜವಿಜ್ಞಾನಗಳ ಜ್ಞಾನವನ್ನು ನೀಡುವುದರ ಮೂಲಕ ನಮ್ಮ ಸಾಮಾಜಿಕ ರಾಜಕೀಯ ಮತ್ತು ಆರ್ಥಿಕ ವ್ಯವಸ್ಥೆಗಳ ಕಾರ್ಯಗಳ ತತ್ವಶಾಸ್ತ್ರ ಮತ್ತು ವಿಧಾನಗಳನ್ನು ತಿಳಿಸುತ್ತದೆ. ಇದರಿಂದ ಸಾಮಾಜಿಕ ಆರ್ಥಿಕಾಭಿವೃದ್ಧಿ ಸಮಸ್ಯೆಗಳು ಮತ್ತು ಆದ್ಯತೆಗಳನ್ನು ವಿದ್ಯಾಥಿಗಳು ವಿಶ್ಲೇಷಿಸುವುದನ್ನು ಅರ್ಥಮಾಡಿಕೊಳ್ಳುತ್ತಾರೆ. VI ನೇ VII ತರಗತಿಯ ಪಠ್ಯಕ್ರಮಗಳು ಸ್ವಾತಂತ್ರ್ಯ ಸಂಗ್ರಾಮ ಮತ್ತು ಸ್ವಾತಂತ್ರ್ಯಾನಂತರದ ಅಭಿವೃದ್ಧಿಗಳನ್ನು ತಿಳಿಸುತ್ತದೆ. ಪೌರನೀರಿಯ ಸಾರಾಂಶಗಳನ್ನು ಸಮಕಾಲೀನ ಅಧ್ಯಯನಗಳಿಗೆ ಬದಲಾಯಿಸಲಾಗಿದೆ. ಭೂಗೋಳಶಾಸ್ತ್ರದ ಅಧ್ಯಯನವನ್ನು ಸಮಕಾಲೀನ ನೈಜತೆಯೊಂದಿಗೆ ಸಂಬಂಧ ಕಲ್ಪಸಲಾಗಿದೆ.

ಯಶಪಾಲ್ ಸಮಿತಿಯು ಖಾಸಗಿಶಾಲೆಗಳಲ್ಲಿ ಕಲಿಕೆಯ ಗುಣಮಟ್ಟವನ್ನು ಸುಧಾರಿಸುವುದಕ್ಕಾಗಿ ಮಾನ್ಯತೆನೀಡಲು ಕಟ್ಟುನಿಟ್ಟಾದ ಮಾನದಂಡಗಳನ್ನು ಬಯಸಿದೆ. ಈ ಸಮಿತಿ ಗ್ರಾಮ, ವಿಭಾಗ ಮತ್ತು ಜಿಲ್ಲಾಮಟ್ಟದಲ್ಲಿ ಶಿಕ್ಷಣ ಸಮಿತಿಗಳನ್ನು ಸ್ಥಾಪಿಸುವ ಅಭಿಪ್ರಾಯವನ್ನು ಪ್ರಶಂಸಿಸಿದೆ ಇವು ತಮ್ಮ ವ್ಯಾಪ್ತಿಯಲ್ಲಿ ಶಾಲೆಯ ಯೋಜನೆ ಮತ್ತು ಮೇಲ್ವಿಚಾರಣೆಯನ್ನು ನೋಡಿಕೊಳ್ಳುತ್ತವೆ.

ಯಶಪಾಲ್ ಸಮಿತಿಯು ಈ ಕೆಳಗೆ ತಿಳಿಸಿರುವ ಗುಣಮಟ್ಟದ ಲಕ್ಷಣಗಳನ್ನು ಪ್ರಾಥಮಿಕ ಶಿಕ್ಷಣಕ್ಕೆ ನೀಡಿದೆ

1. ಶಾಲಾ ಗ್ರೇಡಿಂಗ್‌ನಲ್ಲಿ ರ್‍ಯಾಂಕ್ ತಲುಪುವುದು
2. ಸಮಾಜದ ಪಾಲ್ಗೊಳ್ಳುವಿಕೆ

Notes

3. ಹಾಜರಾತಿಯ ಶೇಕಡಾಂಶ

4. ಗುಣಮಟ್ಟ ಪ್ರಮಾಣದ ಶಿಕ್ಷಣವನ್ನು ಈ ಲಕ್ಷಣಗಳ ಆಧಾರದ ಮೇಲೆ ನಿರ್ಧರಿಸಲಾಗುತ್ತದೆ

ಅಧ್ಯಾಪಕ ತಯಾರಿ, ಬೋದನಾವಿಧಾನ, ಶೈಕ್ಷಣಿಕ ಸಾಮಗ್ರಿಗಳ ಬಳಕೆ, ವಿದ್ಯಾರ್ಥಿಗಳ ಕ್ರಿಯೆ ಮತ್ತು ಪಾಲ್ಗೊಳ್ಳುವಿಕೆ, ಶಾಲಾ ಕಿರುಪರೀಕ್ಷೆಯಲ್ಲಿ ವಿದ್ಯಾರ್ಥಿಗಳ ಸಾಧನೆ, ತರಗತಿ ನಿರ್ವಹಣೆ, ಕಲೆ, ಕಾರ್ಯ ಅನುಭವ ಮತ್ತು ಭೌತಿಕ ಶಿಕ್ಷಣದ ಪರಿಸರದ ಅಧ್ಯಯನ ವಿಧ್ಯಾರ್ಥಿಗಳಿಗೆ ನೀಡಿದ ಕೆಲವು ಚಟುವಟಿಕೆಗಳು ಮತ್ತು ಅವಕಾಶಗಳ ಬೋದನೆ ನಡಾವಳಿಗಳು ಇತ್ಯಾದಿ.

ಯಶ್‌ಪಾಲ್ ಸಮಿತಿಯು ಕಠಿಣವಾದ ಮತ್ತು ಪೂರ್ಣವಾದ ಆಳವಾದ ಶಿಕ್ಷಕ ತಯಾರಿಕೆ ಕಾರ್ಯಕ್ರಮವನ್ನು ಅಪೇಕ್ಷಿಸಿದೆ ಇದರಿಂದ ಶಾಲೆಗಳಲ್ಲಿ ತೃಪ್ತಿದಾಯಕ ಗುಣಮಟ್ಟದ ಕಲಿಕೆ ಸಾಧ್ಯವಾಗಿ ತರಬೇತಿ ಪಡೆಯುವ ಶಿಕ್ಷಕರಲ್ಲಿ ಸ್ವ–ಕಲಿಕೆ ಮತ್ತು ಸ್ವತಂತ್ರ ಚಿಂತನೆ ಸಾಮರ್ಥ ಉಂಟಾಗುತ್ತದೆ. ಈ ಪ್ರೋಗ್ರಾಂಮ್ ಅವಧಿ ಪದವಿಯ ನಂತರ ಒಂದು ವರ್ಷ ಅಥವಾ ಉನ್ನತ ಪ್ರೌಢಹಂತದ ನಂತರ ಮೂರು–ನಾಲ್ಕು ವರ್ಷಗಳಾದಾಗಿರುತ್ತದೆ. ಪ್ರೋಗ್ರಾಂನ ಸಾರಾಂಶ ಶಾಲಾ ಶಿಕ್ಷಣದ ಬದಲಾಗುತ್ತಿರುವ ಅಗತ್ಯತೆಗಳ ಸಮಂಜಸತೆಯನ್ನು ಖಚಿತಪಡಿಸಲು ಹೆಚ್ಚು ಪ್ರಾಯೋಗಿಕ ಕೇಂದ್ರಿತವನ್ನಾಗಿ ಮಾಡಲು ಪುನರ್ ರಚಿಸುತ್ತದೆ. ಶಿಕ್ಷಕರಿಗೆ ನಿರಂತರ ಶಿಕ್ಷಣವನ್ನು ವ್ಯವಸ್ಥಿತವಾಗಿ ವಿನ್ಯಾಸಗೊಳಿಸಿದ ಮತ್ತು ಸೇವಾ ಪ್ರೋಗ್ರಾಂನಲ್ಲಿ ಕಲ್ಪನಾಮಯಾವಾಗಿ ಏರ್ಪಡಿಸುವುದಕ್ಕಾಗಿ ಅದನ್ನು ಸಾಂಸ್ಥಿಕರಣಗೊಳಿಸಲೇಬೇಕು.

ಶೈಕ್ಷಣಿಕ ಆಚರಣೆಯ ನಿರ್ಧಾರಗಳ ಮೇಲೆ ಈ ಶಿಫಾರಸ್ಸುಗಳು ಗಂಭೀರ ಪರಿಣಾಮಗಳನ್ನುಂಟುಮಾಡಿವೆ. ಕೆಲವು ಹೊಸ ಆಚರಣೆಗಳನ್ನು ಜಾರಿಗೊಳಿಸಲಾಯಿತು. ಈ ಶಿಫಾರಸ್ಸುಗಳು ವಿಶೇಷವಾಗಿ ಪ್ರಾಥಮಿಕ ಶಿಕ್ಷಣಕ್ಕೆ ಹೆಚ್ಚು ಮಹತ್ವ ನೀಡಿವೆ

## 2.3 ಶಿಕ್ಷಣದ ಮೇಲಿನ ರಾಷ್ಟ್ರೀಯ ನೀತಿಗಳು (NPE)

ಭಾರತೀಯರಲ್ಲಿ ಶಿಕ್ಷಣವನ್ನು ಪ್ರೋತ್ಸಾಹಿಸಲು ಅನೇಕ ಆಯೋಗಗಳು ಮತ್ತು ಸಮಿತಿಗಳು ಶಿಕ್ಷಣ ಪುನರ್ ನಿರ್ಮಾಣದ ಸಮಸ್ಯೆಯನ್ನು ಪರಿಶೀಲಿಸಿರುವುದನ್ನು ನೀವು ಸ್ವಾತಂತ್ರ್ಯಾನಂತರ ಕಾಣುವಿರಿ. ಈ ಆಯೋಗ ಮತ್ತು ಸಮಿತಿಗಳ ವರದಿಗಳು ಮತ್ತು ಶಿಪಾರಸ್ಸುಗಳ ಆಧಾರದ ಮೇಲೆ ಸಮಯದಿಂದ ಸಮಯಕ್ಕೆ ಶಿಕ್ಷಣದ ಮೇಲೆ ರಾಷ್ಟ್ರೀಯ ನೀತಿಗಳನ್ನು (NPE) ರೂಪಿಸಿ ಜಾರಿಗೊಳಿಸಿದೆ. ಎಲ್ಲಾ ಹಂತಗಳಲ್ಲಿ ವಿಶೇಷವಾಗಿ ಪ್ರಾಥಮಿಕ ಹಂತದಲ್ಲಿ ಗ್ರಾಮೀಣ ಮತ್ತು ನಗರ ಭಾಗಗಳಲ್ಲಿ ದೇಶದ ಗಂಭೀರ ಸಮಸ್ಯೆಯನ್ನಾಗಿ ಈ ನೀತಿಗಳು ಶಿಕ್ಷಣವನ್ನು ಪರಿಗಣಿಸಿವೆ.

### 2.3–1 ಶಿಕ್ಷಣದ ಮೇಲಿನ ರಾಷ್ಟ್ರೀಯ ನೀತಿ (NPE) 1968

ಶಿಕ್ಷಣ ಆಯೋಗದ ಶಿಫಾರಸ್ಸಿನಂತೆ ಪ್ರಾರಂಭವಾದ ಮೊದಲ NPE (1964–66) ಇದನ್ನು 1968ರಲ್ಲಿ ಘೋಷಿಸಿದೆ ಹಾಗೂ ರಾಷ್ಟ್ರೀಯ ಭಾವೈಕ್ಯತೆ ಮತ್ತು ಹೆಚ್ಚಿನ ಸಾಂಸ್ಕೃತಿಕ ಹಾಗೂ ಆರ್ಥಿಕ ಬೆಳವಣಿಗೆ ಸಾಧಿಸಲು ಬುಡಮಟ್ಟದಿಂದ ಪುನರ್ ನಿರ್ಮಾಣದ ಮೂಲಕ ಶಿಕ್ಷಣದ ಅವಕಾಶಗಳನ್ನು ಸಮಾನಗೊಳಿಸಲು ಇದನ್ನು ಜಾರಿಗೊಳಿಸಲಾಯಿತು. ಭಾರತದ ಸಂವಿಧಾನ ಹೇಳಿರುವಂತೆ 14 ವರ್ಷದವರೆಗಿನ ಎಲ್ಲಾ ಮಕ್ಕಳಿಗೆ ಶಿಕ್ಷಣವನ್ನು ಕಡ್ಡಾಯವಾಗಿಸುವ ಗುರಿಯನ್ನು ಸಾಧಿಸುವ ಶಿಕ್ಷಣ ಅಭಿವೃದ್ಧಿ ಮಾರ್ಗವನ್ನು ಹಾಗೂ ಶಿಕ್ಷಕರಿಗೆ ಉತ್ತಮ ತರಬೇತಿ ಮತ್ತು ವಿದ್ಯಾರ್ಹತೆಗಳನ್ನು ನಿಗದಿಪಡಿಸಿದೆ.

Notes

**1. ಉಚಿತ ಮತ್ತು ಕಡ್ಡಾಯ ಶಿಕ್ಷಣ**

ಉಚಿತ ಮತ್ತು ಕಡ್ಡಾಯ ಶಿಕ್ಷಣವನ್ನು 14 ವರ್ಷದವರೆಗಿನ ಎಲ್ಲಾ ಮಕ್ಕಳಿಗೆ ಮತ್ತು ಜಾರಿಯಲ್ಲಿರುವ ಪ್ರಬಲವಾಗಿರುವ ವ್ಯರ್ಥತೆ ಶಾಲೆಗಳಲ್ಲಿ ಸ್ಥಗಿತತೆ ಕಡಿಮೆಮಾಡಲು ಹಾಗೂ ಶಾಲೆಗೆ ದಾಖಲಾದ ಎಲ್ಲಾ ಮಕ್ಕಳು ಯಶಸ್ವಿಯಾಗಿ ನೇಮಿಸಿದ ಕೋರ್ಸ್‌ನ ಮುಗಿಸಲು ಮನ ಪೂರ್ವಕ ಪ್ರಯತ್ನಗಳನ್ನು ಮಾಡುವುದು.

**2. ಸ್ಥಾನಮಾನ, ವೇತನಗಳು ಮತ್ತು ಶಿಕ್ಷಕರ ಶಿಕ್ಷಣ**

ಶಿಕ್ಷಕರು ಸಮಾಜದಲ್ಲಿ ಗೌರವ ಸ್ಥಾನವನ್ನು ಹೊಂದಿರುತ್ತಾರೆ. ಅವರ ಶೈಕ್ಷಣಿಕ ಸ್ವಾತಂತ್ರ್ಯ, ತೃಪ್ತಿದಾಯಕ ವೇತನದ ಸಮರ್ಪಕತೆ ಮತ್ತು ತೃಪ್ತಿದಾಯಕ ಸೇವಾಸ್ಥಿತಿಗತಿಗಳು ಹಾಗೂ ಶಿಕ್ಷಕರ ಶಿಕ್ಷಣವನ್ನು ವಿಶೇಷವಾಗಿ ಸೇವೆಯಲ್ಲಿರುವ ಶಿಕ್ಷಣ ಶಿಕ್ಷಕರನ್ನು ರಕ್ಷಿಸಬೇಕು.

**3. ಭಾಷೆಗಳ ಬೆಳವಣಿಗೆ**

ಪ್ರೌಢಶಾಲಾ ಹಂತದಲ್ಲಿ ಮೂರು ಭಾಷೆ ಸೂತ್ರವನ್ನು ಪರಿಣಾಮಕಾರಿಯಾಗಿ ಜಾರಿಗೊಳಿಸಲು ಪ್ರಾದೇಶಿಕ ಭಾಷೆಗಳ ಬೆಳವಣಿಗೆ ಅವಶ್ಯಕ

**4. ಶೈಕ್ಷಣಿಕ ಅವಕಾಶದ ಸಮಾನತೆ**

ಸಾಮಾಜಿಕ ಸಂಬಂಧ ಮತ್ತು ರಾಷ್ಟ್ರೀಯ ಭಾವೈಕ್ಯತೆಯನ್ನು ಪ್ರಾದೇಶಿಕ ಅಸಮತೋಲನವನ್ನು ಸರಿಪಡಿಸುವುದರ ಮೂಲಕ, ವಿದ್ಯಾರ್ಥಿಗಳನ್ನು ಎಲ್ಲಾ ಪಬ್ಲಿಕ್ ಶಾಲೆಗಳಲ್ಲಿ ಮೆರಿಟ್ ಆಧಾರದ ಮೇಲೆ ತೆಗೆದುಕೊಳ್ಳುವುದರ ಮೂಲಕ, ಸಾಮಾಜಿಕವಾಗಿ ವಂಚಿತರಾದವರ ಆಸಕ್ತಿಗಳನ್ನು ಕಾಪಾಡುವುದರ ಮೂಲಕ ಶೈಕ್ಷಣಿಕ ಅವಕಾಶಗಳನ್ನು ಸಮಾನಗೊಳಿಸಲು ಪ್ರೋತ್ಸಾಹಿಸುವುದು.

**5. ಸಾಕ್ಷರತೆ ಮತ್ತು ವಯಸ್ಕರ ಶಿಕ್ಷಣದ ಪ್ರಸಾರ**

ಸಾಮೂಹಿಕ ಅನಕ್ಷರತೆಯನ್ನು ಹೊಗಲಾಡಿಸಲು ಹಾಗೂ ವಾಣಿಜ್ಯ ಮತ್ತು ಕೈಗಾರಿಕಾ ಸಂಸ್ಥೆಗಳ ನೌಕರರಲ್ಲಿ ಕ್ರಿಯಾತ್ಮಕ ಸಾಕ್ಷರತೆಯಲ್ಲಿ ನಿರಂತರವಾಗಿ ಒದಗಿಸುವುದು. ಇಂಥ ಸಂಬಂಧ ಜೋಡಣೆಯ ತಾಂತ್ರಿಕ ಮತ್ತು ವೃತ್ತಿಪರ ಶಿಕ್ಷಣವನ್ನು ಪ್ರೌಢಹಂತದಲ್ಲಿ ಪರಿಣಾಮಕಾರಿಯಾಗಿ ಅಂತ್ಯದಲ್ಲಿ ನಿರ್ವಹಿಸಲು ಅವಶ್ಯವಾಗಿದೆ.

**6. ಪುಸ್ತಕಗಳ ರಚನೆ**

ಮಕ್ಕಳಿಗಾಗಿ ಉತ್ತಮ ಗುಣಮಟ್ಟದ ಪುಸ್ತಕಗಳನ್ನು ರಚಿಸುವುದು– ಶಾಲೆ ಮತ್ತು ವಿಶ್ವ ವಿದ್ಯಾನಿಲಯಗಳಿಗೆ ಕಡಿಮೆ ಬೆಲೆಯ ಪಠ್ಯಪುಸ್ತಕಗಳು

**7. ಆಟಗಳು ಮತ್ತು ಕ್ರೀಡೆಗಳು**

ದೈಹಿಕ ದೃಢತೆ ಮತ್ತು ವಿದ್ಯಾರ್ಥಿಗಳ ಕ್ರೀಡಾ ಮನೋಭಾವನೆಯನ್ನು ಸುಧಾರಿಸುವ ಉದ್ದೇಶದಿಂದ ಆಟಗಳನ್ನು ಮತ್ತು ಕ್ರೀಡೆಗಳನ್ನು ಅಭಿವೃದ್ಧಿ ಪಡಿಸುವುದು.

**8. ಅರೆಕಾಲಿಕ ಶಿಕ್ಷಣ ಮತ್ತು ಅಂಚೆ ಮತ್ತು ತೆರಪಿನ ಕೋರ್ಸ್**

ಪೂರ್ಣಾವಧಿಯ ಕೋರ್ಸ್‌ಗಳಿಗೆ ಸಮಾನವಾಗಿ ಅರೆಕಾಲಿಕ ಮತ್ತು ಅಂಚೆ ತೆರಪಿನ ಶಿಕ್ಷಣವನ್ನು ವಿಶ್ವವಿದ್ಯಾನಿಲಯ ಮತ್ತು ಶಾಲಾ ವಿದ್ಯಾರ್ಥಿಗಳು, ಶಿಕ್ಷಕರು ಮತ್ತು ಕೆಲಸಗಾರರಿಗೆ ಅಭಿವೃದ್ಧಿ ಪಡಿಸುವುದು.

ಈ ದೇಶದಲ್ಲಿ ಶಿಕ್ಷಣವನ್ನು ಈ ನೀತಿ ಸುಮಾರು 2 ದಶಕಗಳಕಾಲ ನಿರ್ದೇಶನ ಮಾಡಿತು.

Notes

ಇದು ತುಂಬಾ ನಿಧಾನವಾಯಿತು ಆದರೆ ಅನೇಕ ಆವಿಷ್ಕಾರ ಪ್ರೋಗ್ರಾಂ ಮತ್ತು ಆಚರಣೆಗಳ ಏಕ ಪ್ರಕಾರವಾದ ಪ್ರಗತಿಯಾಯಿತು. ಇದನ್ನು ರಾಷ್ಟ್ರೀಯ ಭಾವೈಕ್ಯತೆಯ ಸಾರಾಂಶದ ಅನ್ವಯ ಪುನರ್ ಪರಿಶೀಲಿಸಲಾಯಿತು.

### 2.3–2 ಶಿಕ್ಷಣದ ಮೇಲಿನ ರಾಷ್ಟ್ರೀಯ ನೀತಿ (NPE) 1986

ರಾಷ್ಟ್ರೀಯ ಭಾವೈಕ್ಯತೆ ಮತ್ತು ಪಠ್ಯಕ್ರಮದ ಹತ್ತು ಮೂಲಾಂಶಗಳನ್ನು ಒತ್ತಿ ಹೇಳುವುದರ ಮೂಲಕ ಈ ನೀತಿ ವಿಶೇಷತೆ ಪಡೆದಿದೆ. ಇಲ್ಲಿ ಪ್ರಸ್ತಾಪಿಸಿರುವ ಶಿಕ್ಷಣದ ರಾಷ್ಟ್ರೀಯ ವ್ಯವಸ್ಥೆ ರಾಷ್ಟ್ರೀಯ ಪಠ್ಯಕ್ರಮ ಚೌಕಟ್ಟಿನ ಆಧಾರದ ಮೇಲಿದೆ.

ಎಲ್ಲಾ ಶೈಕ್ಷಣಿಕ ಕಾರ್ಯಕ್ರಮಗಳನ್ನು ಜಾತ್ಯಾತೀತ ಮೌಲ್ಯಗಳಿಗನುಗುಣವಾಗಿ ಪ್ರಸ್ತಾಪಿಸಲಾಗಿದೆ. ಸಮಾನತೆಯನ್ನು ಪ್ರೋತ್ಸಾಹಿಸಲು ಎಲ್ಲರಿಗೂ ಸಮಾನವಾದ ಅವಕಾಶಗಳನ್ನು ನೀಡಬೇಕು. ಕೇವಲ ಪ್ರವೇಶದಲ್ಲಿ ಮಾತ್ರವಲ್ಲ ಯಶಸ್ಸಿನ ಸ್ಥಿತಿಯಲ್ಲೂ ಸಮಾನ ಅವಕಾಶಗಳಿರಬೇಕು. ಇದನ್ನು ಮುಖ್ಯ ಪಠ್ಯಕ್ರಮದ ಮೂಲಕ ಸಾಧಿಸಬಹುದು ಎಂದು ನಿರೀಕ್ಷಿಸಿದೆ. ಸಾಮಾಜಿಕ ಪರಿಸರ ಮತ್ತು ಹುಟ್ಟುವ ಆಕಸ್ಮಿಕತೆ ಮೂಲಕ ಉಂಟಾಗಿರುವ ಪಕ್ಷಪಾತ ಮತ್ತು ಸಂಕೀರ್ಣತೆಗಳನ್ನು ನಿರ್ಮೂಲನೆ ಮಾಡುವುದು ಇದರ ಉದ್ದೇಶವಾಗಿದೆ.

***ಈ ನೀತಿಯ ಪ್ರಮುಖ ಲಕ್ಷಣಗಳೆಂದರೆ***

1. ಸಾಮಾನ್ಯ ಶೈಕ್ಷಣಿಕ ಸ್ವರೂಪ
2. ಹತ್ತು ಸಾಮಾನ್ಯ ಪ್ರಮುಖ ಮೂಲಾಂಶಗಳೊಂದಿಗೆ ರಾಷ್ಟ್ರೀಯ ಪಠ್ಯಕ್ರಮ ಚೌಕಟ್ಟು
3. ಎಲ್ಲರಿಗೂ ಸಮಾನ ಶೈಕ್ಷಣಿಕ ಅವಕಾಶಗಳು
4. ವಯಸ್ಕರ ಶಿಕ್ಷಣಕ್ಕೆ ಪ್ರೋತ್ಸಾಹ
5. ಶಿಕ್ಷಣದಲ್ಲಿ ವೈಜ್ಞಾನಿಕ ಮತ್ತು ತಾಂತ್ರಿಕ ಅಭಿವೃದ್ಧಿಗಳ ಬಳಕೆ
6. UEEಗೆ ಕಪ್ಪು ಹಲಗೆಯ ಬಳಕೆ
7. ಕನಿಷ್ಠ ಮಟ್ಟದ ಕಲಿಕೆ
8. ನವೋದಯ ವಿದ್ಯಾಲಯಗಳಿಗೆ ಪ್ರಗತಿಯನಡೆ ನಿರ್ಧಾರ
9. ಶಿಕ್ಷಣದಲ್ಲಿ ವೃತ್ತಿಕರಣ
10. ಶಿಕ್ಷಕರ ಸ್ಥಾನಮಾನವನ್ನು ಹೆಚ್ಚಿಸುವುದು
11. ಸಾಮಾಜಿಕ, ಆರ್ಥಿಕ, ಸಾಂಸ್ಕೃತಿಕ ಮತ್ತು ಪರಿಸರಾತ್ಮಕ ವಿಷಯಗಳಬಗ್ಗೆ ಜಾಗೃತಿ ಮೂಡಿಸುವುದು
12. ಶಿಕ್ಷಣದಲ್ಲಿ ಜವಾಬ್ದಾರಿ

ಈ ನೀತಿಗಳು UEEಗೆ ಭದ್ರ ಬುನಾದಿ ಹಾಕಿವೆ ಹಾಗೂ ರಾಷ್ಟ್ರಿಯ ಪ್ರಾಮುಖ್ಯತೆ ಹೊಂದಿರುವ ಅನೇಕ ಪ್ರೋಗ್ರಾಂಗಳನ್ನು ಪ್ರಾರಂಭಿಸಲಾಗಿದೆ. ಈ ನೀತಿಯನ್ನು1992ರಲ್ಲಿ ಪುನಃ ಮಾರ್ಪಡಿಲಾಯಿತು. ಹಾಗೂ ಹೆಚ್ಚಿನ ಗುರಿ ಸಾಧಿಸಲು ಪುನರ್ ನಿಗದಿ ಮಾಡಿತು

Notes

### 2.3.3 ಪ್ರಾಥಮಿಕ ಶಿಕ್ಷಣದ ಕಳಕಳಿ

ಶೈಕ್ಷಣಿಕ ವಿಷಯಗಳ ಬಗ್ಗೆ ವಿವಿಧ ಕಳಕಳಿಗಳು ವಿಶೇಷವಾಗಿ ಪ್ರಾಥಮಿಕ ಶಿಕ್ಷಣದ ಬಗ್ಗೆ ಕಳಕಳಿಗಳನ್ನು ಆಯೋಗಗಳ ಶಿಫಾರಸ್ಸುಗಳು ಸಂಗ್ರಹಿಸಿವೆ ಮತ್ತು ರಾಷ್ಟ್ರೀಯ ನೀತಿಗಳು ಈ ಕೆಳಗಿನವುಗಳನ್ನು ಒಳಗೊಂಡಿವೆ.

* ಕಡಿಮೆ ದಾಖಲಾತಿ– ಪ್ರಾಥಮಿಕ ಶಾಲೆಯಲ್ಲಿ ಒಟ್ಟಾರೆ ದಾಖಲಾತಿ ತುಂಬಾ ಕಡಿಮೆಯಾಗಿರುವುದು ಕಂಡು ಬರುತ್ತದೆ. ಶಾಲೆ ಬಿಟ್ಟ ಹೆಚ್ಚಿನ ಮಕ್ಕಳು ಶಾಲೆಗಳಿಗೆ ಹೋಗುವುದಿಲ್ಲ. ಏಕೆಂದರೆ ಶಾಲೆಯ ದೂರ ಮತ್ತು ಭೌತಿಕ ಸೌಲಭ್ಯಗಳ ಅಭಾವ ಇತ್ಯಾದಿಗಳಾಗಿವೆ.
* ಶಾಲೆ ಬಿಡುವವರ ದರ ಹೆಚ್ಚು – ಮಕ್ಕಳು ಅನೇಕ ಕಾರಣಗಳಿಂದಾಗಿ ಶಾಲೆ ಬಿಡುತ್ತಿದ್ದಾರೆ. ಬಹುತೇಕ ಕೆಲಸಮಾಡಿ ಹಣಗಳಿಸಲು ಶಾಲೆ ಬಿಡುತ್ತಿದ್ದಾರೆ. ಶಾಲೆ ಬಿಡುವವರಲ್ಲಿ ಬಾಲಕಿಯರ ಶೇಕಡಾಂಶ ಅಧಿಕವಾಗಿದೆ. ಬಾಲಕಿಯರು ಶಾಲೆ ಬಿಡುವಂತೆ ಅವರ ಪೋಷಕರು ಒತ್ತಾಯಿಸುತ್ತಾರೆ ಮತ್ತು ಮನೆಯಲ್ಲಿ ಕುಟುಂಬದ ರಕ್ಷಣೆಗೆ ಅವರನ್ನು ಬಳಸಿಕೊಳ್ಳುತ್ತಾರೆ.
* ಹೆಚ್ಚು ಶಿಕ್ಷಕರನ್ನು ಗ್ರಾಮೀಣ ಪ್ರದೇಶಗಳಲ್ಲಿ ಪಡೆದುಕೊಳ್ಳುವುದು ಕಷ್ಟ ಏಕೆಂದರೆ ಸರ್ಕಾರದ ಮಾರ್ಗಸೂಚಿಗಳು ಹೆಚ್ಚು ವಿದ್ಯಾರ್ಥಿ – ಶಿಕ್ಷಕ ಅನುಪಾತವನ್ನು ಅನುಮತಿಸಿವೆ.
* ಅವರ ಕಡಿಮೆ ವಿದ್ಯಾಹತೆ ಹಾಗೂ ತರಬೇತಿ ಹೊಂದಿರದ ಶಿಕ್ಷಕರಿಂದಾಗಿ ಗ್ರಾಮೀಣ ಪ್ರದೇಶದಲ್ಲಿ ವಾಸಿಸುತ್ತಿರುವ ಮಕ್ಕಳು ಗುಣಮಟ್ಟದ ಶಿಕ್ಷಣದಿಂದ ವಂಚಿತರಾಗಿರುತ್ತಾರೆ. ಸರ್ಕಾರದ ಮತ್ತು ಖಾಸಗಿ ಗುಂಪಿನ ಸಂಸ್ಥೆಗಳಿಂದಾಗಿ ಇತ್ತೀಚಿನ ವರ್ಷಗಳಲ್ಲಿ ವಿದ್ಯಾರ್ಹತೆ ಹೊಂದಿದ ಶಿಕ್ಷಕರ ಸಂಖ್ಯೆ ಹೆಚ್ಚಾಗುತ್ತಿದೆ.
* ಕಲಿಕೆ ಗುಣಮಟ್ಟದ ಶಿಕ್ಷಣ ಯಶಸ್ವಿ ವಿದ್ಯಾರ್ಥಿಯ ತೃಪ್ತಿದಾಯಕವಲ್ಲದ ಗುಣಮಟ್ಟಕ್ಕೆ ಕಾರಣವಾಗುತ್ತದೆ.
* ಪೂರ್ವಪ್ರಾಥಮಿಕ ಮತ್ತ ಪ್ರಾಥಮಿಕ ಶಾಲೆಗಳಲ್ಲಿ ವೃತ್ತಿ ತರಬೇತಿ ಮತ್ತು ಹೆಚ್ಚಿನಜನ ಶಿಕ್ಷಕರಿಗೆ, ಮುಖ್ಯೋಪಾಧ್ಯಯರಿಗೆ ಮತ್ತು ಮೇಲ್ವಿಚಾರಕರಿಗೆ ಪುನರ್ ತರಬೇತಿ ನೀಡುವುದರ ಮೂಲಕ ಅವರ ನಾಯಕತ್ವವನ್ನು ಬಲಪಡಿಸುವುದು ಮತ್ತು ಮೇಲ್ವಿಚಾರಣೆ ಮಾಡುವುದು.
* ಈಗಿರುವ ಪರೀಕ್ಷಾ ವ್ಯವಸ್ಥೆಯನ್ನು ಪರ್ಯಾಯಗಳಾದ CCE ಯಿಂದ ಬದಲಾಯಿಸುವುದು.
* ಅಸಮಾನತೆ – ಲಿಂಗ ಅಸಮಾನತೆ, ನಗರ– ಗ್ರಾಮೀಣ ಅಸಮಾನತೆ ಪ್ರಾದೇಶಿಕ ಅಸಮಾನತೆ.
* ICT ಬಗ್ಗೆ ಶಿಕ್ಷಕರ ಧನಾತ್ಮಕ ಮನಸ್ಥಿತಿಯನ್ನು ಬೆಳಸುವುದು.

## 2.4 ಎಂಟು ವರ್ಷಗಳ ಪ್ರಾಥಮಿಕ ಶಿಕ್ಷಣದ ಸ್ವರೂಪ

**ಶೈಕ್ಷಣಿಕ ಸ್ವರೂಪ**

ದೇಶದ ಎಲ್ಲಾ ಭಾಗಗಳಲ್ಲಿ ವಿಶಾಲವಾಗಿ ಏಕರೂಪದ ಶೈಕ್ಷಣಿಕ ಸ್ವರೂಪವನ್ನು ಜಾರಿಗೆ ತರುವುದು ಅನುಕೂಲ ಎಂದು ಆಲೋಚಿಸಲಾಯಿತು. ಅಂತಿಮ ಉದ್ದೇಶ10+2+3 ವಿಧಾನ ಉನ್ನತ ಪ್ರೌಢಶಾಲೆ ಹಂತದ ಎರಡು ವರ್ಷಗಳನ್ನು ಕಾಲೇಜುಗಳಲ್ಲಿ ಮೂರು ವರ್ಷಗಳ ಶಿಕ್ಷಣ ನೀಡಬೇಕೆಂದಿ ನಿರ್ಧರಿಸಲಾಯಿತು.

Notes

ಕೊಟಾರಿ ಆಯೋಗಸಲಹೆ ನೀಡಿದಂತೆ 10+2+3 ವಿಧಾನವನ್ನು ಸಾಮಾನ್ಯ ಶೈಕ್ಷಣಿಕ ಸ್ವರೂಪವಾಗಿರಬೇಕೆಂದು ರಾಷ್ಟ್ರೀಯ ಶಿಕ್ಷಣ ವ್ಯವಸ್ಥೆಯಲ್ಲಿ ವಿಚಾರಮಾಡಿದೆ. ಈ ಏಕರೂಪಕ ಶಾಲಾ ಶಿಕ್ಷಣ ಸ್ವರೂಪವನ್ನು ದೇಶದಾದ್ಯಂತ ಅಳವಡಿಸಬೇಕು. ಆದಾಗ್ಯೂ ರಾಜ್ಯಗಳಲ್ಲಿ ಪ್ರಾಥಮಿಕ ಹಿರಿಯ ಪ್ರಾಥಮಿಕ, ಉನ್ನತ ಮತ್ತು ಉನ್ನತ ಪ್ರೌಢ ಶಾಲಾ ಹಂತಗಳಲ್ಲಿ ಒಂದನೆ ತರಗತಿಗೆ ಸೇರ್ಪಡೆಯಾಗುವ ವಯಸ್ಸು, ಶಿಕ್ಷಣದ ಮಾಧ್ಯಮ, ಸಾರ್ವಜನಿಕ ಪರೀಕ್ಷೆಗಳು ಹಿಂದಿ ಮತ್ತು ಇಂಗ್ಲಿಷ್ ಬೋಧನೆ, ವರ್ಷದಲ್ಲಿ ಶಾಲೆಕಾರ್ಯ ನಿರ್ವಹಿಸುವ ಅವಧಿ, ಶೈಕ್ಷಣಿಕ ಅವಧಿ, ರಜಾ ಅವಧಿ, ಶುಲ್ಕ, ರಜೆ, ಕಡ್ಡಾಯಶಿಕ್ಷಣ್ಣ ಇತ್ಯಾದಿಗಳಲ್ಲಿ ಬದಲಾವಣೆಗಳಿರುತ್ತವೆ. ಪ್ರಾಥಮಿಕ ಮತ್ತು ಹಿರಿಯ ಪ್ರಾಥಮಿಕ ಅಥವಾ ಮಾಧ್ಯಮಿಕ ಹಂತಗಳೆಲ್ಲಾ ಸೇರಿ ಪ್ರಾಥಮಿಕ ಹಂತವಾಗಿ ಮೊದಲ ಹತ್ತು ವರ್ಷಗಳನ್ನು ಈ ರೀತಿ ವಿಂಗಡಿಸಲಾಗುತ್ತದೆ. ಪ್ರಾಥಮಿಕ ವ್ಯವಸ್ಥೆಯು 5 ವರ್ಷಗಳ ಪ್ರಾಥಮಿಕ ಶಿಕ್ಷಣವನ್ನು ಮತ್ತು ಮೂರು ವರ್ಷಗಳ ಹಿರಿಯ ಪ್ರಾರ್ಥಮಿಕ ನಂತರ ಎರಡು ವರ್ಷಗಳ ಪ್ರೌಢಶಾಲೆಯನ್ನು ನಿಗದಿಪಡಿಸಲಾಗಿದೆ. ಹೆಚ್ಚಿನ ರಾಜ್ಯಗಳಲ್ಲಿ ಶಾಲೆಯ ಅವಧಿಯ ವಿಂಗಡಣೆಯನ್ನು ಈ ಕೆಳಗಿನ ಕೋಷ್ಟಕದಲ್ಲಿ ನೀಡಲಾಗಿದೆ.

**ಕೋಷ್ಟಕ – 1**

ಭಾರತದಲ್ಲಿರುವ ಶಾಲಾ ಶಿಕ್ಷಣ ವ್ಯವಸ್ಥೆಯ ಸ್ವರೂಪ

| ಶಾಲೆಯ ಹಂತಗಳು | ಪೂರ್ವ ಪ್ರಾಥಮಿಕ | ಕಿರಿಯ ಪ್ರಾಥಮಿಕ | ಹಿರಿಯ ಪ್ರಾಥಮಿಕ | ಪ್ರೌಢ | ಉನ್ನತ ಪ್ರೌಢ |
|---|---|---|---|---|---|
| ಗ್ರೇಡ್‌ಗಳು<br>ಪ್ರೋಗ್ರಾಂನ ಅವಧಿ | ನರ್ಸರಿ<br>LKG / UKG<br>3 ವರ್ಷಗಳು | 1 ರಿಂದ 5<br>5 ವರ್ಷಗಳು | 6 ರಿಂದ 8<br>3 ವರ್ಷಗಳು | 9 ಮತ್ತು 10<br>2 ವರ್ಷಗಳು | 11 ಮತ್ತು 12<br>2 ವರ್ಷಗಳು |
| ವಯೋಮಾನ | 3 ರಿಂದ 6 ವರ್ಷಗಳಲ್ಲಿ ಪ್ರವೇಶ | 6 ರಿಂದ 11 ವರ್ಷಗಳು | 11 ರಿಂದ 14 ವರ್ಷಗಳು | 14 ರಿಂದ 16 ವರ್ಷಗಳು | 16 ರಿಂದ 18 ವರ್ಷಗಳು |

**ಪೂರ್ವಪ್ರಾರ್ಥಮಿಕ:** ಭಾರತೀಯ ಶಿಕ್ಷಣದ ಸ್ವರೂಪದಲ್ಲಿ ಪೂರ್ವ ಪ್ರಾಥಮಿಕ ಶಿಕ್ಷಣ ಕಲಿಕೆಗೆ ಆಧಾರವಾಗಿದೆ. ಇದನ್ನು ನರ್ಸರಿ, ಕಿಂಡರ್‌ಗಾಟನ್ LKG ಮತ್ತು ಕಿಂಡರ್‌ಗಾಟನ್ UKG ಎಂದು ವಿಂಗಡಿಸಲಾಗಿದೆ. ಇದು 3 ರಿಂದ 5 ವರ್ಷಗಳ ಮಕ್ಕಳನ್ನು ಒಳಗೊಂಡಿದೆ.

**ಕಿರಿಯ ಪ್ರಾಥಮಿಕ:** ಕಿಂಡರ್ ಗಾಟನ್ UKG ಆದ ನಂತರ ಅಥವಾ ನೇರವಾಗಿ ಮಗು ಒಂದನೇ ತರಗತಿಗೆ ಸೇರಬಹುದು. ಕಿರಿಯ ಪ್ರಾಥಮಿಕ ಮಟ್ಟದಲ್ಲಿ ವಿದ್ಯಾರ್ಥಿಗಳು ವಿವಿಧ ವಿಷಯಗಳ ಬಗ್ಗೆ ಮಾಹಿತಿ ಪಡೆಯುತ್ತಾರೆ. ಪ್ರಾಥಮಿಕ ಶಾಲೆಯ ಪಠ್ಯಕ್ರಮ ಸಾಮನ್ಯ ಶಿಕ್ಷಣವನ್ನು ಒತ್ತಿಹೇಳುತ್ತದೆ ಹಾಗೂ ಓದು, ಬರಹ, ಲೆಕ್ಕ ಇವುಗಳ ಜೊತೆಗೆ ಚರಿತ್ರೆ ಪೌರಶಾಸ್ತ್ರ, ಭೂಗೋಳಶಾಸ್ತ್ರ ಮತ್ತು ಪರಿಸರ ವಿಜ್ಞಾನಗಳನ್ನು ಒಳಗೊಂಡಿರುತ್ತದೆ. 6 ರಿಂದ 11 ವರ್ಷಗಳ ವಯೋಮಾನದ ಗುಂಪಿನವರ 1 ರಿಂದ 5 ತರಗತಿಗಳಲ್ಲಿ ಅಧ್ಯಯನ ಮಾಡುತ್ತಾರೆ. ಆದಾಗ್ಯೂ ಕೆಲವು ರಾಜ್ಯಗಳಲ್ಲಿ ಈ ಹಂತ ಒಂದರಿಂದ ನಾಲ್ಕನೆ ತರಗತಿಗಳನ್ನೊಳಗೊಂಡಿರುತ್ತದೆ ಕಿರಿಯ ಪ್ರಾಥಮಿಕ ಶಾಲಾ ಮಟ್ಟದಲ್ಲಿ ಶಿಕ್ಷಣದ ಭಾಷೆ ಸಾಮಾನ್ಯವಾಗಿ ಮಾತೃಭಾಷೆ ಹಿಂದಿ ಅಥವಾ ಪ್ರಾದೇಶಿಕ ಭಾಷೆಯಾಗಿರುತ್ತದೆ.

**ಹಿರಿಯಪ್ರಾಥಮಿಕ:** ಆರನೆ ತರಗತಿಯಿಂದ ಎಂಟನೆ ತರಗತಿಯ ಮಕ್ಕಳನ್ನು ಒಳಗೊಂಡಿರುತ್ತದೆ. ಹಿರಿಯ ಪ್ರಾಥಮಿಕದಿಂದ ನಂತರ ಇಂಗ್ಲಿಷ್ ಮತ್ತು / ಅಥವಾ ಹಿಂದಿ (ಒಂದು ವೇಳೆ ಹಿಂದಿ ಮಾತೃ ಭಾಷೆಯಾಗಿರದಿದ್ದಲ್ಲಿ) ಯನ್ನು ಜಾರಿಗೊಳಿಸಲಾಗುವುದು.

Notes

## 2.5 ಶಾಲಾ ಪಠ್ಯಕ್ರಮ ಚೌಕಟ್ಟು

ರಾಷ್ಟ್ರೀಯ ಅಗತ್ಯತೆ ಮತ್ತು ಅವಶ್ಯಕತೆಗಳನ್ನು ಗಮನದಲ್ಲಿಟ್ಟುಕೊಂಡು ಸಾಮಾನ್ಯ ಪಠ್ಯಕ್ರಮ ಚೌಕಟ್ಟಿನ ಆಧಾರದಲ್ಲಿ ಯಾವುದೇ ರಾಷ್ಟ್ರೀಯ ಶಿಕ್ಷಣ ವ್ಯವಸ್ಥೆಯನ್ನು ರೂಪಿಸಲಾಗುತ್ತದೆ. ಭಾರತದಲ್ಲೂ ಕೂಡಾ ವಿವಿಧ ನೀತಿಗಳನ್ನು ಗಮನದಲ್ಲಿಟ್ಟುಕೊಂಡು ಸಮಯದಿಂದ ಸಮಯಕ್ಕೆ ರಾಷ್ಟ್ರೀಯ ಪಠ್ಯಕ್ರಮ ಚೌಕಟ್ಟನ್ನು ವಿನ್ಯಾಸಗೊಳಿಸಿ ದೇಶದಾದ್ಯಂತ ಜಾರಿಗೆ ತಂದಿದೆ. ಈ ಚೌಕಟ್ಟನ್ನು ನಂತರ ರಾಷ್ಟ್ರೀಯ ಗುರಿಗಳ ರೂಪದಲ್ಲಿ ಅದರ ಸಾಧನೆಗಳನ್ನು ಪುನರ್ ಪರಿಶೀಲಿಸಿದೆ. ನಾವು ಇತ್ತೀಚಿಗೆ ಜಾರಿಗೊಳಿಸಲಾದ ರಾಷ್ಟ್ರೀಯ ಪಠ್ಯಕ್ರಮ ಚೌಕಟ್ಟನ್ನು ಪರಿಶೀಲಿಸೋಣ.

### 2.5.1 ರಾಷ್ಟ್ರೀಯ ಪಠ್ಯಕ್ರಮ ಚೌಕಟ್ಟು (NCF 2005)

NPE1986–92 ರಾಷ್ಟ್ರೀಯ ಶಿಕ್ಷಣ ವ್ಯವಸ್ಥೆಯನ್ನು ರೂಪಿಸಲು ಪಠ್ಯಕ್ರಮಕ್ಕಾಗಿ ರಾಷ್ಟ್ರೀಯ ಚೌಕಟ್ಟನ್ನು ಪ್ರಸ್ತಾಪಿಸಿದೆ (Programme of Action (POA) ಕ್ರಿಯಾಯೋಜನೆ ಮಕ್ಕಳ ಕೇಂದ್ರೀತ ವಿಧಾನವನ್ನು ಸಾರ್ವತ್ರಿಕ ದಾಖಲಾತಿ ಮತ್ತು 14ನೇ ವರ್ಷದವರೆಗೆ ಶಾಲೆಯಲ್ಲಿ ಮಗು ಇರುವಂತೆ ಮಾಡಲು ಹಾಗೂ ಶಾಲಾ ಶಿಕ್ಷಣದಲ್ಲಿನ ಗುಣಮಟ್ಟದಲ್ಲಿನ ಗಣನೀಯ ಸುದಾರಣೆಯನ್ನು ಪ್ರೋತ್ಸಾಹಿಸುತ್ತದೆ (POA P.77) ರಾಷ್ಟ್ರೀಯ ಪಠ್ಯಕ್ರಮ ಚೌಕಟ್ಟು ಶಿಕ್ಷಣ ವ್ಯವಸ್ಥೆಯ ಚೌಕಟ್ಟು ಮುದಲಿಯಾರ್ ಮತ್ತು ಕೊಟಾರಿ ಆಯೋಗಗಳು, 1975ರ ಪಠ್ಯಕ್ರಮ ಚೌಕಟ್ಟಿನ ಅಭಿವೃದ್ಧಿಯನ್ನು ಪರಿಶೀಲಿಸಿವೆ. ಒತ್ತಡವಿಲ್ಲದ 1993 ಮತ್ತು 1986ರ ಶಿಕ್ಷಣದ ಮೇಲಿನ ರಾಷ್ಟ್ರೀಯ ನೀತಿಗಳ ವರದಿಗಳಿಂದ ಪಠ್ಯಕ್ರಮದ ಹೆಚ್ಚಿನ ಒತ್ತಡದ ಸಮಸ್ಯೆಗಳನ್ನು ಪರಿಶೀಲಿಸಿದೆ.

ಈ ಎಲ್ಲಾ ನೀತಿಗಳನ್ನು ಹಾಗೂ ಯಶಪಾಲ್ ಸಮಿತಿ ವರದಿಯ ಶಿಪಾರಸ್ಸುಗಳನ್ನು ಪರಿಶೀಲಿಸಿದ ನಂತರ 2005ರಲ್ಲಿ ಹೊಸ ಪರಿಷ್ಕೃತ ಪುನರ್ ರೂಪಿಸಿದ ರಾಷ್ಟ್ರೀಯ ಪಠ್ಯಕ್ರಮ ಚೌಕಟ್ಟನ್ನು ತಯಾರಿಸಿ ಅದನ್ನು ಈಗ ದೇಶದಾದ್ಯಂತ ಜಾರಿಗೊಳಿಸಿದೆ. NCF2005 ಮಗುವಿನ ಮೇಲೆ ಪಠ್ಯಕ್ರಮದ (ಒತ್ತಡ)ವನ್ನು ವಿವರವಾಗಿ ಪರಿಶೀಲಿಸಿದೆ ಹಾಗೂ ಕಲಿಕೆ ಅನುಭವವಾದ ಅವರು ಯೋಚಿಸಿದಂತೆ ಉತ್ತಮಕಲಿಕೆಗೆ ಉಪಯುಕ್ತವಾಗಿದೆ ಎನ್ನುವುದನ್ನು ಪ್ರಸ್ತಾಪಿಸಿದೆ. ಶೈಕ್ಷಣಿಕ ಉದ್ದೇಶಗಳನ್ನು ಈಡೇರಿಸಲು ಪಠ್ಯಕ್ರಮ ಸ್ವರೂಪವಾಗಿ ಕಾರ್ಯನಿರ್ವಹಿಸಿ ಅಗತ್ಯವಾದ ಅನುಭವಗಳನ್ನು ನೀಡಲು ಸಹಾಯಮಾಡುತ್ತದೆ. ಮಾದ್ಯಮ ಮತ್ತು ಶೈಕ್ಷಣಿಕ ಶಬ್ಧಕೋಶಗಳು ಪಠ್ಯಕ್ರಮ ವ್ಯವಹಾರಕ್ಕಾಗಿ ಪರಿಣಾಮಕಾರಿ ದಾರಿಯನ್ನು ಒದಗಿಸಿದೆ. ಮಕ್ಕಳು ಕೂಡಾ ಹೇಗೆ ಕಲಿಯಬೇಕು ಎನ್ನುವದನ್ನು ಅರ್ಥಮಾಡಿಕೊಂಡು ತಮ್ಮದೇ ಸ್ವಂತ ಜ್ಞಾನವನ್ನು ಕೊಳ್ಳಬಹುದು. ಇದರಿಂದ ಕಲಿಕೆ ಆರೋಗ್ಯಕರ ಸೃಜನಾತ್ಮಕ ಮತ್ತು ಸಂತೋಷದಾಯಕವಾಗುತ್ತದೆ.

NCFನ ಪ್ರಮುಖ ಲಕ್ಷಣಗಳು ಈ ಕೆಳಗಿನಂತಿವೆ ಮಾರ್ಗದಶನ ಸೂತ್ರಗಳು

ಹಿಂದಿನ ವಿವಿಧ ಆಯೋಗಗಳು ಮಕ್ಕಳನ್ನು ಒಳಗೊಳ್ಳುವಿಕೆ ಮತ್ತು ಅರ್ಥಪೂರ್ಣ ಅನುಭವವನ್ನಾಗಿ ಮಾಡಲು ಪ್ರಯತ್ನಿಸಿವೆ. NCF ಅನೇಕ ಉತ್ತಮ ಭಾವನೆಗಳನ್ನು ಜಾರಿಗೊಳಿಸಲು ಪ್ರಯತ್ನಿಸಿದೆ. NCF ಪಠ್ಯಕ್ರಮ ಅಭಿವೃದ್ಧಿಗಾಗಿ ನಾಲ್ಕು ಮಾರ್ಗದರ್ಶನ ಸೂತ್ರಗಳ ಆಧಾರದ ಮೇಲಿದೆ.

ಎ) ಶಾಲೆಯಹೊರಗಡೆ ಜೀವನಕ್ಕೆ ಜ್ಞಾನವನ್ನು ಸಂಕರ್ಪಿಸುವುದು

ಬಿ) ಬಾಯಿ ಪಾಠ ವಿಧಾನಗಳಿಂದ ಕಲಿಕೆ ಬದಲಾಗಿರುವುದನ್ನು ಖಾತರಿ ಪಡಿಸುವುದು.

Notes

ಸಿ) ಪಠ್ಯಕ್ರಮವನ್ನು ಶ್ರೀಮಂತಗೊಳಿಸುವುದು. ಇದರಿಂದ ಕಲಿಕೆ ಪಠ್ಯಪುಸ್ತಕಗಳನ್ನು ಮೀರಿ ಬೆಳೆಯುತ್ತದೆ

ಡಿ) ಪರೀಕ್ಷೆಗಳನ್ನು ಹೆಚ್ಚು ನಮ್ಯತೆಯನ್ನಾಗಿ ಮಾಡುವುದು.

NCF 2005 ಮಗು ಜ್ಞಾನವನ್ನು ಜಡವಾಗಿ ಪಡೆಯುತ್ತದೆ ಎನ್ನುವ ಗ್ರಹಿಸುವಿಕೆ ವಿಮರ್ಶಾತಕವಾಗಿದೆ ಹಾಗೂ ಮಗುವಿನ ಪ್ರಶ್ನೆಗಳನ್ನು ಕೇಳಲು ಪ್ರೋತ್ಸಾಹಿಸುವುದರ ಮೂಲಕ ಮಗುವನ್ನು ಜ್ಞಾನದ ನಿರ್ಮಾಣದಲ್ಲಿ ಕ್ರಿಯಾತ್ಮಕ ಪಾಲುದಾರರನ್ನಾಗಿ ಮಾಡಬಹುದು. ಶಾಲೆಯೊಳಗೆ ಮಗು ಕಲಿತಿದ್ದನ್ನು ಹೊರಗಿನ ವಿದ್ಯಮಾನಗಳಿಗೆ ಸಂಬಂದಿಸುವುದು, ಕೇವಲ ಉರುಲು ಹೊಡೆಯುವುದರ ಬದಲು ತಮ್ಮ ಅನುಭವಗಳಿಂದ ಮತ್ತು ತಮ್ಮದೇ ಸ್ವಂತ ಪದಗಳಲ್ಲಿ ಉತ್ತರಿಸುವಂತೆ ಪ್ರೋತ್ಸಾಹಿಸುವುದು.

ಸರಿಸಮಾನರು, ಶಿಕ್ಷಕರು ಮತ್ತು ಹಿರಿಯರು ಮತ್ತು ಯುವಕರೊಂದಿಗೆ ಸಮಾಲೋಚಿಸುವುದರಿಂದ ಅನೇಕ ಶ್ರೀಮಂತ ಕಲಿಕೆ ಸಾಧ್ಯತೆಗಳು ಹೊರಬರುತ್ತವೆ ಎನ್ನುವುದನ್ನು ತಿಳಿಸುತ್ತದೆ. ಆದ್ದರಿಂದ ಕಲಿಕಾ ಕೆಲಸಗಳು ಮತ್ತು ಅನುಭವಗಳನ್ನು ಪಠ್ಯಪುಸ್ತಕಗಳಿಂದ ಮಾತ್ರವಲ್ಲದೇ ಇತರ ಮೂಲಗಳಿಂದ ಅಂದರೆ ತಮ್ಮದೇ ಅನುಭವಗಳಿಂದ ಮನೆ, ಸಮುದಾಯ ಮತ್ತು ಗ್ರಂಥಾಲಯಗಳ ಅನುಭವಗಳಿಂದ ಮಗು ಜ್ಞಾನವನ್ನು ಪಡೆದುಕೊಳ್ಳುವಂತಾಗಬೇಕು ಎನ್ನುವುದನ್ನು ಖಚಿತಪಡಿಸುತ್ತದೆ. ಆದರಿಂದ ಪಾಠಗಳ ಯೋಜನಾ ವಿಧಾನ ಹರ್‌ಬರ್‌ಟೇಯಿನ್ ಪಾಠಯೋಜನೆ ಶಿಕ್ಷಣಶಾಸ್ತ್ರ ಯೋಜನ ಚಟುವಟಿಕೆಗಳು ಮಗು ಅವರು ಏನನ್ನು ಕಲಿಯುತ್ತಾರೆ ಎನ್ನುವುದನ್ನು ಯೋಚಿಸುವುದು ಮತ್ತು ಪ್ರಯತ್ನಿಸುವುದು ಸವಾಲಾಗಿ ಪರಿಣಮಿಸಿದೆ.

ಪುಸ್ತಕ ದಿನಕ್ಕೆ ಮತ್ತು ಮಗುವಿನ ಭವಿಷ್ಯದ ಅಗತ್ಯತೆಗಳಿಗೆ ಶಿಕ್ಷಣ ಹೆಚ್ಚು ಸಮಂಜಸವಾಗುವಂತೆ ಮಾಡಲು ಭಾಷೆಗಳು ಗಣಿತ, ನೈಸರ್ಗಿಕ ವಿಜ್ಞಾನಗಳು ಮತ್ತು ಸಮಾಜ ವಿಜ್ಞಾನಗಳಲ್ಲಿ ಕಲಿಕೆಯ ಮಹತ್ವ ಬದಲಾವಣೆಗಳನ್ನು ಇದು ಶಿಫಾರಸ್ಸುಮಾಡಿದೆ. ಭಾಷೆಗಳಲ್ಲಿ ಇದು ಮೂರುಭಾಷೆಗಳ ಸೂತ್ರವನ್ನು ಶಿಕ್ಷಣದ ಮಾಧ್ಯಮ ಮಾತೃಭಾಷೆ ಬೇರೆನ್ನುವುದನ್ನು ತಿಳಿಸುತ್ತದೆ. ಓದು, ಬರಹ, ಕೇಳಿವಿಕೆ ಮತ್ತು ಮಾತುಗಳು ಎಲ್ಲಾ ವಿದ್ಯಾಭ್ಯಾಸ ಕ್ಷೇತ್ರಗಳಲ್ಲೂ ಮಗುವಿನ ಪ್ರಗತಿಗೆ ಕೊಡುಗೆ ನೀಡುವುದರಿಂದ ಭಾಷೆಯನ್ನು ಎಲ್ಲ ವಿಷಯಗಳ ಸಮಗ್ರ ಭಾಗ ಎಂದು ಸ್ಪಷ್ಟಪಡಿಸಿದೆ. ಇದು ಮೂಲ ಕಲಿಕೆಯನ್ನು ಒಳಗೊಂಡಿದೆ.

ಇಂಗ್ಲಿಷ್, ಗಣಿತಶಾಸ್ತ್ರ ಮತ್ತು ವಿಜ್ಞಾನಗಳು ಮೂರು ಮುಖ್ಯವಿಷಯಗಳಾಗಿದ್ದು ಶೇಕಡ 50 ರಷ್ಟು ಮಕ್ಕಳು ನಪಾಸಾಗುತ್ತಿದಾರೆ. ಬಹುಶಃ ಇದು ಪ್ರಾಥಮಿಕ ಶಿಕ್ಷಣ ವ್ಯವಸ್ಥೆಯ ದೊಡ್ಡ ಮಿತಿಯಾಗಿದೆ. ಈ ವಿಷಯವನ್ನು ರಾಷ್ಟ್ರೀಯ ಪಠ್ಯಕ್ರಮ ಚೌಕಟ್ಟು ಸಂಬೋದಿಸಿದೆ ವಿಜ್ಞಾನದಲ್ಲಿ ಬೋಧನೆ ಬಗ್ಗೆ ಕೇಂದ್ರ ಗುಂಪು ಶಾಲೆಯಲ್ಲಿ ವಿಜ್ಞಾನ ಪಠ್ಯಕ್ರಮ ಕಲಿಕೆಯ ಅನುಭವ ಆಧಾರಿತವಾಗಿರುವುದನ್ನು ಒತ್ತಿಹೇಳಿದೆ. ಶಾಲಾಗ್ರಂಥಾಲಯಗಳನ್ನು, ಪ್ರಯೋಗಾಲಯಗಳನ್ನು ಮತ್ತು ಕಾರ್ಯಾಗಾರಗಳನ್ನು ಸುಧಾರಿಸುವುದು ಪ್ರಯೋಗ ಆಧರಿತ ಕಲಿಕೆಯ ಸಂಸ್ಕೃತಿಯನ್ನು ಪ್ರೋತ್ಸಾಹಿಸುವುದು ಅಗತ್ಯ ಕಂಪ್ಯೂಟರ್ ಮುಖಾಮುಖಿ ಅನುಭವಗಳ ಅಗತ್ಯತೆಯನ್ನು ಹಾಗೂ ಮನಗಣಲಾಯಿತು ಹಾಗೂ ಪಬ್ಲಿಕ್ ಡೊಮೈನ್‌ಗಳಲ್ಲಿ ಮಾಹಿತಿ ಉಪಯೋಗಿಸುವ ಯೋಜನೆಗಳನ್ನು ರೂಪಿಸಿದೆ.

ಗಣಿತಶಾಸ್ತ್ರದ ಕಲಿಕೆಯು ಮಕ್ಕಳ ಯೋಚಿಸುವ ಸಾಮರ್ಥ ಮತ್ತು ಸಾಕಾರಣ, ಸಮಸ್ಯೆಗಳನ್ನು ಪರಿಹರಿಸಲು ವಿಜ್ಞಾನದ ಬೋಧನೆಯ ಮಕ್ಕಳು ಪ್ರತಿದಿನದ ಅನುಭವಗಳನ್ನು ವಿಶ್ಲೇಷಿಸಲು ಮತ್ತು ಪರಿಶೀಲಿಸಲು ಸಹಾಯ ಮಾಡುತ್ತದೆ. ಪರಿಸರ ಶಿಕ್ಷಣ ಎಲ್ಲಾ ವಿಷಯಗಳಭಾಗವಾಗಿ ಪರಿಣಮಿಸಿದೆ. ಇದನ್ನು ಲಿಂಗ ಸಮಾನತೆ ಮತ್ತು ಬುಡಕಟ್ಟು ಮತ್ತು ದಲಿತ, ವಿಷಯ ಮತ್ತು ಅಲ್ಪ ಸಂಖ್ಯಾತರಿಗೆ ಶಿಫಾರಸ್ಸುಮಾಡಿದೆ.

ಈ ದಾಖಲಾತಿ ಕೆಲಸ ಮತ್ತು ಶಿಕ್ಷಣಕ್ಕಾಗಿ ಗಮನವನ್ನು ಸೆಳೆದೆ ಕೆಲಸವನ್ನು ಪ್ರಜಾಪ್ರಭುತ್ವದ ವ್ಯವಸ್ಥೆಗೆ

ಜ್ಞಾನದ ಹೊಸ ರೂಪದ ಸೃಷ್ಟಿ ಮತ್ತು ಮೌಲ್ಯಸೇರ್ಪಡೆಯನ್ನು ಗುರುತಿಸಿದೆ. ಕಾರ್ಯ ಶಿಕ್ಷಣವನ್ನು ಪರಂಪರೆ ಕುಶಲಕೆಲಸ ವಿಶೇಷವಾಗಿ ಕ್ರಾಫ್ಟ್ ವಲಯದಲ್ಲಿ ಸಂಪರ್ಕ ಕಲ್ಪಿಸಬೇಕು. ಇದರಿಂದ ಈ ಪ್ರಮುಖ ಮೂಲವಾದ ಸಾಂಸ್ಕೃತಿಕ ಮತ್ತು ಆರ್ಥಿಕ ಸಂಪತ್ತನ್ನು ಉತ್ತಮವಾಗಿ ಶಿಕ್ಷಣದೊಂದಿಗೆ ಸಂಪರ್ಕ ಕಲ್ಪಿಸುವುದರ ಮೂಲಕ ಸಾಧಿಸಬಹುದು.

ಪಠ್ಯಕ್ರಮ ಸೈಟ್‌ಗಳು ಮತ್ತು ಕಲಿಕೆಯ ಸಂಪನ್ಮೂಲಗಳನ್ನು ಪಠ್ಯಪುಸ್ತಕಗಳು, ಗ್ರಂಥಾಲಯ, ಶಿಕ್ಷಣ, ತಂತ್ರಜ್ಞಾನ ಪರಿಕರಗಳು ಮತ್ತು ಪ್ರಯೋಗಾಲಯಗಳು ಇತ್ಯಾದಿಗಳನ್ನೊಳಗೊಂಡಂತೆ ಸಹ ಇದು ಚರ್ಚಿಸುತ್ತದೆ. ಇದು ಅನೇಕ ಸಾಮಗ್ರಿಗಳ ಬಹುತ್ವದ ಅಗತ್ಯತೆ ಶಿಕ್ಷಕರ ಸ್ವಾಯತ್ತತೆಗೆ ಅಗತ್ಯ ಮತ್ತು ಉದ್ಯೋಗ ಸ್ವಾತಂತ್ರ್ಯವನ್ನು ಒತ್ತಿ ಹೇಳುತ್ತದೆ. ಇದು ಶಾಲಾಮಟ್ಟದಲ್ಲಿ ಶೈಕ್ಷಣಿಕ ಯೋಜನೆ ಮತ್ತು ನಾಯಕತ್ವವನ್ನು ಗುಣಮಟ್ಟವನ್ನು ಸುಧಾರಿಸಲು ಮತ್ತು ಮೇಲ್ವಿಚಾರಣೆ ಮಾಡುವುದನ್ನು ಒಳಗೊಂಡಿದೆ.

2000ದ ರಾಷ್ಟ್ರೀಯ ಪಠ್ಯಕ್ರಮ ಚೌಕಟ್ಟಿನ ಪರಿಶೀಲನೆ ವಿಶೇಷವಾಗಿ ಮಕ್ಕಳಮೇಲೆ ಪಠ್ಯಕ್ರಮ / ಒತ್ತಡವನ್ನು ವಿವರಿಸಿದೆ. ಯಶಪಾಲ್ ಸಮಿತಿಯು ಅದರ ಬೇರುಗಳನ್ನು, ಮಾಹಿತಿಯನ್ನು ಜ್ಞಾನವೆಂದು ಪರಿಗಣಿಸುವ ವ್ಯವಸ್ಥೆಗಳ ಪ್ರವೃತ್ತಿಯ ಆಧಾರದಲ್ಲಿ ಈ ಸಮಸ್ಯೆಯನ್ನು ವಿಶ್ಲೇಷಿಸಿತು. ಅದು ತನ್ನ ವರದಿಯಲ್ಲಿ "ಒತ್ತಡವಿಲ್ಲದ ಶಿಕ್ಷಣ"ವನ್ನು ಪ್ರತಿಪಾದಿಸಿತು. ಸಮಿತಿಯು ಪರೀಕ್ಷೆಗೆ ಆಧಾರವಾಗಿ ಪಠ್ಯಪುಸ್ತಕಗಳನ್ನು ಬಳಸುವುದಕ್ಕಿಂತ ರೂಡಿಯ ಮೇಲೆ ಮಗು ಜ್ಞಾನ ಪಡೆಯುವವನಾದಾಗ ಮಾತ್ರ ಶಿಕ್ಷಣ ಸಂತೋಷದಾಯಕವಾಗುತ್ತದೆ. ಎಂದು ಪ್ರತಿಪಾದಿಸಿತು. ಮಗುವಿನ ಸ್ವಂತ ಸೃಜನಾತ್ಮಕ, ಹುಟ್ಟುಗುಣ ಮತ್ತು ತಮ್ಮ ಅನುಭವದಿಂದ ಜ್ಞಾನವನ್ನು ರೂಪಿಸುವ ಸಾಮರ್ಥ್ಯದ ಅಭಾವದಿಂದ ಎಲ್ಲವನ್ನೂ ಭೋದಿಸುವುದಕ್ಕೆ ಪ್ರೇರೇಪಣೆ ದೊರೆಯುತ್ತದೆ.

ಒತ್ತಡ ಇಲ್ಲದ ಕಲಿಕೆಯು ಪಠ್ಯಕ್ರಮ ಮತ್ತು ಪಠ್ಯಪುಸ್ತಕಗಳ ವಿನ್ಯಾಸದಲ್ಲಿ ಬದಲಾವಣೆಯನ್ನು ಶಿಫಾರಸ್ಸಂಯಮಾಡಿದೆ. ಬೋಧನೆಯನ್ನು ಮಗುವಿನ ಸೃಜನಾತ್ಮಕ ಸ್ವರೂಪ, ರಕ್ಷಾಕವಚ ಮಾಡುವ ಮಾರ್ಗವನ್ನು ಮಾಡಬೇಕಾಗಿದೆ. ಶಾಲೆಯ ಪಠ್ಯಕ್ರಮವನ್ನು ಸಂಘಟಿಸುವ ಪರೀಕ್ಷೆ ವ್ಯವಸ್ಥೆಯಲ್ಲಿ ಮೂಲಭೂತ ಬದಲಾವಣೆಗಳನ್ನು ಶಿಪಾರಸ್ಸು ಮಾಡಿದೆ.

**ಪ್ರೊ. ಕೆ.ಎಂ. ವೀರಯ್ಯ**
ನಿರ್ದೇಶಕರು
ಜೆಎಸ್‌ಎಸ್ ಕರ್ನಾಟಕ ಮುಕ್ತ
ವಿದ್ಯಾಲಯ
ಮೈಸೂರು

Notes

Notes

# UNIT-3 ಒಂದು ಮೂಲಭೂತ ಹಕ್ಕಾಗಿ ಶಿಕ್ಷಣ

**ಸಂರಚನೆ :**


**3.0 ಪೀಠಿಕೆ**

**3.1 ಕಲಿಕೆಯ ಉದ್ದೇಶಗಳು**

**3.2 ಪ್ರಾಥಮಿಕ ಶಿಕ್ಷಣದ ಸಾರ್ವತ್ರೀಕರಣದ ಪರಿಕಲ್ಪನೆ ಮತ್ತು ಅಗತ್ಯತೆ.**

3.2.1 ಭಾರತದ ಸಂವಿಧಾನದ 45 ನೇ ವಿಧಿ.

3.2.2. ಸಾರ್ವತ್ರಿಕ ಪ್ರಾಥಮಿಕ ಶಿಕ್ಷಣದ ಗುರಿಗಳನ್ನು ಸಾಧಿಸಲಾಗದ್ದಕ್ಕೆ ಕಾರಣಗಳು.

3.2.3. 86ನೇ ಸಂವಿಧಾನ ತಿದ್ದುಪಡಿ

3.2.4 ಶಿಕ್ಷಣದ ಹಕ್ಕು ಕಾಯ್ದೆ (RTE) 2009

3.2.5. ಮಗುವಿನ ಹಕ್ಕುಗಳು.

**3.3. ಶಿಕ್ಷಕನ ಪಾತ್ರ ಮತ್ತು ಜವಾಬ್ದಾರಿಗಳು.**

**3.4 ಶಾಲಾ ಆಡಳಿತ ಮತ್ತು ನಿರ್ವಹಣೆ.**

**3.5 ಪಠ್ಯಕ್ರಮ ಮತ್ತು ಮೌಲ್ಯಮಾಪನ ಅತ್ಯಗತ್ಯಗಳು.**

**3.6 RTE ಕಾಯ್ದೆ 2009 ರ ನಿಯಮಗಳು.**

3.6.1 ಪ್ರಸ್ತಾವನೆ.

3.6.2. ಮಕ್ಕಳ ಉಚಿತ ಮತ್ತು ಕಡ್ಡಾಯ ಶಿಕ್ಷಣದ ಹಕ್ಕು.

3.6.3 ರಾಜ್ಯಸರ್ಕಾರದ ಕರ್ತವ್ಯಗಳು.

3.6.4 ದಾಖಲಾತಿಗಳ ನಿರ್ವಹಣೆ.

3.6.5 ಶಾಲೆಗಳು ಮತ್ತು ಶಿಕ್ಷಕರ ಜವಾಬ್ದಾರಿಗಳು.

3.6.6. ಶಾಲಾ ನಿರ್ವಹಣಾ ಮಂಡಳಿ.

3.6.7 ಶಿಕ್ಷಕರು.

3.6.8 ಪಠ್ಯಕ್ರಮ ಮತ್ತು ಪ್ರಾಥಮಿಕ ಶಿಕ್ಷಣದ ಸಂಪೂರ್ಣತೆ.

3.6.9 ಮಕ್ಕಳ ಹಕ್ಕುಗಳ ರಕ್ಷಣೆ.

**3.7 ಘಟಕದ ಸಾರಾಂಶ**

3.8 ಓದು ಮತ್ತು ಪರಾಮರ್ಶನ ಸಲಹೆಗಳು.

3.9 ಘಟಕದ – ಅಂತ್ಯ ಅಭ್ಯಾಸಗಳು.

Notes

## 3.0 ಪೀಠಿಕೆ :

ಯಾವುದೇ ದೇಶದ ಪ್ರಗತಿಗೆ ಶಿಕ್ಷಣವು ಒಂದು ಪ್ರಮುಖ ಅಂಶವೆಂಬುದನ್ನು ನೀವು ತಿಳಿದಿದ್ದೀರಿ. ಶಿಕ್ಷಣದ ಪ್ರಮುಖ ಗುರಿ ಮಗುವಿನ ವ್ಯಕ್ತಿತ್ವದ ಸರ್ವತೋಮುಖ ಅಭಿವೃದ್ಧಿಯಾಗಿದೆ. 2011 ರ ಜನಗಣತಿಯ ಪ್ರಕಾರ ಭಾರತದಲ್ಲಿ ಸಾಕ್ಷರತೆಯ ಪ್ರಮಾಣ ಶೇಕಡಾ 74.04 ಆಗಿದೆ. ಕೇರಳದಲ್ಲಿ ಸಾಕ್ಷರತಾ ಪ್ರಮಾಣ ಶೇಕಡಾ 93.9 ಆಗಿದ್ದರೆ ಬಿಹಾರದಲ್ಲಿ ಅದು ಕೇವಲ ಶೇಕಡಾ 63.8.

**ಘಟಕ–1 ಮತ್ತು ಘಟಕ–2** ರಲ್ಲಿ ನೀವು ಶಿಕ್ಷಣಕ್ಕೆ ಸಂಬಂಧಿಸಿದಂತೆ ವಿವಿಧ ಆಯೋಗಗಳು ಮತ್ತು ಸಮಿತಿಗಳ ಶಿಫಾರಸ್ಸುಗಳನ್ನು ಅಧ್ಯಯನ ಮಾಡಿದ್ದೀರಿ. ಇದಲ್ಲದೆ ನೀವು ಪ್ರಾಥಮಿಕ ಶಿಕ್ಷಣ ಪಠ್ಯಕ್ರಮದ ಬೆಳವಣಿಗೆ ಮತ್ತು ರಾಷ್ಟ್ರೀಯ ಪಠ್ಯಕ್ರಮ ಚೌಕಟ್ಟು (NCF) 2005 ರ ಮುಖ್ಯ ಪರಿಣಾಮಗಳನ್ನು ಸಹ ಅಧ್ಯಯನ ಮಾಡಿದ್ದೀರಿ. ಶಿಕ್ಷಣವು ಮಕ್ಕಳ ಮೂಲಭೂತ ಹಕ್ಕು ಹೇಗೆ ಹೊರಹೊಮ್ಮಿತೆಂಬುದನ್ನು ಈ ಘಟಕದಲ್ಲಿ ನಾವು ತಿಳಿದುಕೊಳ್ಳಲಿದ್ದೇವೆ. ಶಿಕ್ಷಣ ಹಕ್ಕು ಕಾಯ್ದೆ 2009 ರ ನಿಬಂಧನೆಗಳನ್ನು ನಾವು ಚರ್ಚಿಸಲಿದ್ದೇವೆ.

ಹಕ್ಕುಗಳಿಗೆ ಸಂಬಂಧಿಸಿದಂತೆ ವಿಶ್ವಸಂಸ್ಥೆಯು ಎರಡು ಮಹತ್ವದ ದಾಖಲೆ ಪತ್ರಗಳನ್ನು ಹೊರಡಿಸಿದೆ. 1948 ರಲ್ಲಿ 'ಮಾನವ ಹಕ್ಕುಗಳ ಘೋಷಣೆ' ಮತ್ತು 1959 ರಲ್ಲಿ 'ಮಗುವಿನ ಹಕ್ಕುಗಳ ಘೋಷಣೆ' ಗಳನ್ನು ವಿಶ್ವಸಂಸ್ಥೆ ಹೊರಡಿಸಿತು. ನಾವು 21 ನೇ ಶತಮಾನದಲ್ಲಿ ಬದುಕುತ್ತಿದ್ದರೂ ಸಹ ಕೋಟ್ಯಾಂತರ ಜನರು ಬಡನತನದ ಹಾಗೂ ಆಧುನಿಕ ಜೀವನದ ಅವಕಾಶಗಳಿಂದ ವಂಚಿತರಾಗಿ ಬದುಕುತ್ತಿರುವುದನ್ನು ಕಾಣುತ್ತಿದ್ದೇವೆ. ಸ್ವಾತಂತ್ರ್ಯಾನಂತರ ಶಿಕ್ಷಣ ಜಾಲದ ವ್ಯಾಪಕ ವಿಸ್ತರಣೆಯ ಹೊರತಾಗಿಯೂ ಲಕ್ಷಾಂತರ ಮಕ್ಕಳು ಶಾಲೆಗಳಲ್ಲಿ ಪ್ರವೇಶ ಪಡೆಯಲಾಗಿಲ್ಲ. ಶಾಲೆ ಬಿಡುವವರ ಸಂಖ್ಯೆ, ವ್ಯರ್ಥತೆ ಮತ್ತು ಅದೇ ತರಗತಿಗಳಲ್ಲಿ ಉಳಿಯುವವರ ಸಂಖ್ಯೆಯೂ ಹೆಚ್ಚಿನ ಮಟ್ಟದಲ್ಲಿದೆ. ಈ ಅಂಶಗಳ ಹಿನ್ನೆಲೆಯಲ್ಲಿ ಭಾರತದ ಸಂಸತ್ತು ಆಗಸ್ಟ್ 2009 ರಲ್ಲಿ ಶಿಕ್ಷಣ ಹಕ್ಕು ಕಾಯ್ದೆಯನ್ನು ಅಂಗೀಕರಿಸಿತು.

ಈ ಘಟಕದಲ್ಲಿ ಈ ಕಾಯ್ದೆಯ ನಿಬಂಧನೆಗಳು ಮತ್ತು ಪ್ರಾಥಮಿಕ ಶಿಕ್ಷಣದ ಸಾರ್ವತ್ರೀಕರಣವನ್ನು ಸಾಧಿಸುವಲ್ಲಿ ಶಿಕ್ಷಕರಾಗಿ ನಮ್ಮ ಪಾತ್ರವೇನು ಎಂಬುದನ್ನು ಅಧ್ಯಯನ ಮಾಡಲಿದ್ದೇವೆ.

## 3.1 "ಕಲಿಕೆಯ ಉದ್ದೇಶಗಳು"

ಈ ಘಟಕವನ್ನು ಅಧ್ಯಯನ ಮಾಡಿದ ನಂತರ ನೀವು ಈ ಕೆಳಗಿನವುಗಳನ್ನು ಅರ್ಥಮಾಡಿಕೊಳ್ಳುವಿರಿ.

- ಪ್ರಾಥಮಿಕ ಶಿಕ್ಷಣದ ಸಾರ್ವತ್ರೀಕರಣದ ಅರ್ಥ ವಿವರಣೆ.
- ಭಾರತದ ಸಂವಿಧಾನದ 45ನೇ ವಿಧಿಯಲ್ಲಿ ತಿಳಿಸಲಾದ ಪ್ರಾಥಮಿಕ ಶಿಕ್ಷಣದ ಸಾರ್ವತ್ರೀಕರಣದ ಗುರಿಗಳನ್ನು ತಲುಪಲು ಸಾಧ್ಯವಾಗದಿರುವ ಕಾರಣಗಳ ಚರ್ಚೆ.
- 86ನೇ ಸಂವಿಧಾನ ತಿದ್ದುಪಡಿ (2002) ಯ ನಿಬಂಧನೆಗಳ ನಿರೂಪಣೆ.
- ವಿಶ್ವ ಸಂಸ್ಥೆಯ ಮಗುವಿನ ಹಕ್ಕುಗಳ ಘೋಷಣೆಯನ್ವಯ ಮಗುವಿನ ಹಕ್ಕುಗಳ ವಿವರಣೆ.
- ಶಿಕ್ಷಣ ಹಕ್ಕು ಕಾಯ್ದೆ 2009 ರ ನಿಬಂಧನೆಗಳು ಮತ್ತು ನಿಯಮಗಳ ಚರ್ಚೆ.
- ಶಿಕ್ಷಣ ಹಕ್ಕು ಕಾಯ್ದೆ 2009 ರ ನಿಬಂಧನೆಗಳ ಅನುಷ್ಠಾನದಲ್ಲಿ ಶಿಕ್ಷಕರ ಪಾತ್ರ ಮತ್ತು ಜವಾಬ್ದಾರಿಗಳ ವಿವರಣೆ.
- RTE ನ ಗುರಿಗಳನ್ನು ಸಾಧಿಸಲು ಸೂಕ್ತವಾದ ಮೌಲ್ಯಮಾಪನ ವಿಧಾನಗಳ ವಿವರಣೆ.
- RTE ಕಾಯ್ದೆಯ ನಿಬಂಧನೆಗಳನ್ನು ಅನುಷ್ಠಾನಗಳಿಸುವಲ್ಲಿ ಸಂಬಂಧಪಟ್ಟ ವ್ಯಕ್ತಿಗಳ ಪಾತ್ರದ ವಿವರಣೆ.

Notes

## 3.2 ಪ್ರಾಥಮಿಕ ಶಿಕ್ಷಣದ ಸಾರ್ವತ್ರೀಕರಣದ ಪರಿಕಲ್ಪನೆ ಮತ್ತು ಅಗತ್ಯತೆ :

ನಿಮಗೆ ತಿಳಿದಿರುವಂತೆ ಪ್ರಾಥಮಿಕ ಶಿಕ್ಷಣವು 6 ರಿಂದ 14 ವರ್ಷಗಳ ವಯಸ್ಸಿನ ಮಕ್ಕಳ ಶಿಕ್ಷಣದ ಅಗತ್ಯತೆಗಳನ್ನು ಪೂರೈಸುತ್ತದೆ. ಸಾಮಾನ್ಯವಾಗಿ ಇದು ಒಂದನೆ ತರಗತಿಯಿಂದ ಎಂಟನೆ ತರಗತಿಯವರೆಗಿನ (1 ರಿಂದ 4ನೇ ತರಗತಿ – ಕಿರಿಯ ಪ್ರಾಥಮಿಕ ಮತ್ತು 5 ರಿಂದ 8ನೇ ತರಗತಿ– ಹಿರಿಯ ಪ್ರಾಥಮಿಕ) ಶಿಕ್ಷಣವನ್ನು ಒಳಗೊಂಡಿದೆ. ಪ್ರಾಥಮಿಕ ಶಿಕ್ಷಣದ ಸಾರ್ವತ್ರೀಕರಣವೆಂದರೆ, ಜಾತಿ, ಧರ್ಮ, ಸಾಂಸ್ಕೃತಿಕ ಕುಲ ಸಮೂಹ, ಲಿಂಗ, ಸಾಮಾಜಿಕ, ಆರ್ಥಿಕ ಅಂತಸ್ತಿನ ಕಟ್ಟುಪಾಡುಗಳಿಲ್ಲದೆ ದೇಶದ ಪ್ರತಿಯೊಬ್ಬ ಮಗುವಿಗೂ ಎಲಿಮೆಂಟರಿ ಶಿಕ್ಷಣವನ್ನು ಲಭ್ಯಗೊಳಿಸುವುದಾಗಿದೆ.

ಶಿಕ್ಷಣವು ಎಲ್ಲಾ ವಿಧದ ಮಾನವ ಅಭಿವೃದ್ಧಿ ಮತ್ತು ಪ್ರಗತಿಯ ಆಧಾರವಾಗಿದೆ. ಶಿಕ್ಷಣವನ್ನು ಮಾನವನ ಎಲ್ಲ ಸಮಸ್ಯೆಗಳನ್ನು ಎದುರಿಸಲು ಅತ್ಯಂತ ಮೊನಚಾದ ಆಯುಧ ಹಾಗೂ ಅತ್ಯಂತ ಬಲಶಾಲಿ ಗುರಾಣಿಯೆಂದು ಪರಿಗಣಿಸಲಾಗಿದೆ. ಶಿಕ್ಷಣವಿಲ್ಲದ ಮಾನವನ ಬದುಕು ಅರ್ಥಹೀನವಾಗಿ ಬಿಡುತ್ತದೆ. ಶಿಕ್ಷಣದ ಮೂಲಕ ನಾವು ಯಶಸ್ವಿ ಜೀವನವನ್ನು ನಡೆಸಲು ಅಗತ್ಯವಿರುವ ಜ್ಞಾನ ಮತ್ತು ಕೌಶಲ್ಯಗಳನ್ನು ಪಡೆದುಕೊಳ್ಳುತ್ತೇವೆ. ಭಾರತವು ಒಂದು ಪ್ರಜಾಪ್ರಭುತ್ವ ರಾಷ್ಟ್ರವಾಗಿದ್ದು, ನ್ಯಾಯ, ಸಮಾನತೆ ಮತ್ತು ಸ್ವಾತಂತ್ರ್ಯ ಇವು ನಮ್ಮ ಸಂವಿಧಾನದ ಮಾರ್ಗದರ್ಶಿ ತತ್ವಗಳಾಗಿವೆ. ಒಬ್ಬ ವ್ಯಕ್ತಿಯನ್ನು ಶಿಕ್ಷಣ ಪಡೆಯುವ ದಿಕ್ಕಿನಿಂದ ವಂಚಿತಗೊಳಿಸುವುದು ಬಹುದೊಡ್ಡ ಅಧ್ಯಾಯವೆಂಬುದನ್ನು ನೀವು ಒಪ್ಪುತ್ತೀರಿ. ಈ ಕಾರಣದಿಂದಾಗಿಯೇ ನಮ್ಮಂತಹ ಪ್ರಜಾಪ್ರಭುತ್ವವಾದಿ ಮತ್ತು ಜಾತ್ಯಾತೀತ ದೇಶದಲ್ಲಿ ಕನಿಷ್ಠ ಪಕ್ಷ ಪ್ರಾಥಮಿಕ ಶಿಕ್ಷಣದ ಸಾರ್ವತ್ರೀಕರಣವು ಅತ್ಯಂತ ಮಹತ್ವಪೂರ್ಣ ವಿಷಯವಾಗಿದೆ.

### 3.2.1 ಭಾರತದ ಸಂವಿಧಾನದ 45ನೇ ವಿಧಿ :

ಭಾರತದ ಸಂವಿಧಾನವು ಮಾನವ ಅಭಿವೃದ್ಧಿಯ ಪ್ರತಿಯೊಂದು ಆಯಾಮವನ್ನು ಪರಿಗಣಿಸುತ್ತದೆ. ಸಂವಿಧಾನದ 45 ನೇ ವಿಧಿಯು 6 ರಿಂದ 14 ವರ್ಷ ವಯಸ್ಸಿನ ಮಕ್ಕಳಿಗೆ ಉಚಿತ ಮತ್ತು ಕಡ್ಡಾಯ ಶಿಕ್ಷಣ ನೀಡಬೇಕೆಂದು ಪ್ರತಿಪಾದಿಸುತ್ತದೆ. ನಿಮಗೆ ತಿಳಿದಿರುವಂತೆ ಎಲಿಮೆಂಟರಿ ಶಿಕ್ಷಣದ ಸಾರ್ವತ್ರೀಕರಣವನ್ನು ಲಭ್ಯಗೊಳಿಸುವುದು ಎಲ್ಲಾ ಪಂಚವಾರ್ಷಿಕ ಯೋಜನೆಗಳ ಭಾಗವಾಗಿದೆ. ಸರ್ಕಾರ, ಸರ್ಕಾರೇತರ ಸಂಸ್ಥೆಗಳು, ಸ್ವಯಂ ಸೇವಾ ಸಂಘಗಳು ಮತ್ತು ಖಾಸಗಿ ಸಂಘಗಳು ಈ ಕಾರ್ಯದಲ್ಲಿ ತೊಡಗಿಕೊಂಡಿವೆ. ಆದಾಗ್ಯೂ ಎಲ್ಲರಿಗೂ ಶಿಕ್ಷಣವನ್ನು ಒದಗಿಸುವ ಗುರಿಯನ್ನು ಸಾಧಿಸಲಾಗಿಲ್ಲ.

### 3.2.2. ಸಾರ್ವತ್ರಿಕ ಪ್ರಾಥಮಿಕ ಶಿಕ್ಷಣದ ಗುರಿಗಳನ್ನು ಸಾಧಿಸದಿದ್ದಕ್ಕೆ ಕಾರಣಗಳು :

ಸಾರ್ವತ್ರಿಕ ಎಲಿಮೆಂಟರಿ ಶಿಕ್ಷಣದ ಗುರಿಗಳನ್ನು ಸಾಧಿಸಲಾಗದಿದ್ದಕ್ಕೆ ಕೆಲವು ಕಾರಣಗಳು ಈ ಕೆಳಕಂಡಂತಿವೆ.

| |
|---|
| ಜನಸಂಖ್ಯಾಸ್ಫೋಟ |
| ಬಡತನ |
| ಕೃಷಿ ಆಧಾರಿತ ಆರ್ಥಿಕತೆ |
| ಸಂವಹನ ಅಂತರ |
| ನಿರುದ್ಯೋಗ |
| ಶಾಲೆ ಬಿಡುವುದು, ವ್ಯರ್ಥತೆ ಅದೇ ತರಗತಿಗಳಲ್ಲಿ ಉಳಿಯುವಿಕೆ |
| ಅರಿವಿನ ಕೊರತೆ |
| ಲಿಂಗ ತಾರತಮ್ಯ |
| ಜೀವನದಲ್ಲಿ ಸ್ಥಿರತೆಯ ಕೊರತೆ |
| ಯುದ್ಧೋಪಾಧಿಯಲ್ಲಿ ಪ್ರಯತ್ನಗಳ ಕೊರತೆ |

Notes

**UEE ಯ ವೈಫಲ್ಯತೆಗೆ ಕಾರಣಗಳು :**

**ಜನಸಂಖ್ಯಾ ಸ್ಫೋಟ :–** ಶಾಲೆಗಳ ಪರಿಮಾಣಾತ್ಮಕ ವಿಸ್ತರಣೆಯ ಹೊರತಾಗಿಯೂ ದೇಶದಲ್ಲಿ ಶಿಕ್ಷಣವು ಪ್ರತಿಯೊಂದು ಮಗುವಿನ ಮನೆಯನ್ನು ತಲುಪಲಾಗಿಲ್ಲ. ಅಭಿವೃದ್ಧಿ ದರವು ಜನಸಂಖ್ಯಾ ಬೆಳವಣಿಯ ದರಕ್ಕಿಂತ ಹಿಂದೆ ಉಳಿದಿದೆ. ನಿಮಗೆ ತಿಳಿದಿರುವಂತೆ ತೀವ್ರಗತಿಯ ಜನಸಂಖ್ಯಾ ಬೆಳವಣಿಗೆಯು ನಮ್ಮ ಜೀವನದ ಎಲ್ಲಾ ಆಯಾಮಗಳಲ್ಲಿ ಹಲವು ಸಮಸ್ಯೆಗಳನ್ನು ಸೃಷ್ಟಿಸಿದೆ.

**ಬಡತನ :–** ಸಾವಿರಾರು ಪೋಷಕರಿಗೆ ತಮ್ಮ ಮಕ್ಕಳನ್ನು ಶಾಲೆಗೆ ಕಳುಹಿಸುವುದು ಒಂದು ಐಷಾರಾಮಿ ವಿಷಯವಾಗಿದ್ದು, ಅದರ ವೆಚ್ಚವನ್ನು ಅವರಿಂದ ಭರಿಸಲಾಗುತ್ತಿಲ್ಲ. ಅವರ ಮಕ್ಕಳು ಜೀವನ ನಿರ್ವಹಣೆಗಾಗಿ ಕಷ್ಟಪಟ್ಟು ದುಡಿಯಬೇಕಿದೆ. ಹೀಗಾಗಿ ಈ ಪೋಷಕರು ತಮ್ಮ ಮಕ್ಕಳನ್ನು ಶಾಲೆಗೆ ಸೇರಿಸುತ್ತಿಲ್ಲ. ಹಲವು ಚಿಕ್ಕ ಮಕ್ಕಳು ವಿವಿಧ ಕೆಲಸಗಳನ್ನು ಮಾಡುತ್ತಿರುವುದನ್ನು ನಾವು ಕಾಣುತ್ತೇವೆ.

**ಕೃಷಿ ಆಧಾರಿತ ಆರ್ಥಿಕತೆ :–** ಬಡತನ ಹಾಗೂ ಆಧುನಿಕ ತಂತ್ರಜ್ಞಾನದ ಕೊರತೆಯ ಕಾರಣದಿಂದಾಗಿ ಪೋಷಕರು ತಮ್ಮ ಮಕ್ಕಳನ್ನು ಶಾಲೆಗೆ ಕಳುಹಿಸುವುದಕ್ಕೆ ಬದಲಾಗಿ ಜಮೀನಿನಲ್ಲಿ ಕೆಲಸ ಮಾಡಲು ಹಚ್ಚುತ್ತಾರೆ. ಮಕ್ಕಳು ತಮ್ಮ ಪೋಷಕರೊಡನೆ ಜಮೀನಿನಲ್ಲಿ ಕೆಲಸ ಮಾಡುವುದನ್ನು ಅಥವಾ ಕಾರ್ಮಿಕರಾಗಿ ಕೆಲಸ ಮಾಡುವುದನ್ನು ನೀವು ನೋಡಿರಬಹುದು.

**ಸಂವಹನ ಅಂತರ :–** ದೂರ ಪ್ರದೇಶಗಳು ಬೆಟ್ಟ–ಗುಡ್ಡಗಳು ಹಾಗೂ ಬುಡಕಟ್ಟು ಪ್ರದೇಶಗಳಲ್ಲಿ ಸರ್ಕಾರದ ಸಂಸ್ಥೆಗಳು ಮತ್ತು ಜನರ ನಡುವೆ ಸಂವಹನದ ಅಂತರವಿದೆ. ಈ ಪ್ರದೇಶಗಳಲ್ಲಿ ವಾಸಿಸುವ ಮಕ್ಕಳಿಗೆ ಶಿಕ್ಷಣ ಸುಲಭವಾಗಿ ಲಭ್ಯವಾಗುವುದಿಲ್ಲ. ಸ್ಥಳೀಯ ಸಂಸ್ಥೆಗಳು ಮತ್ತು ಸರ್ಕಾರೇತರ ಸಂಸ್ಥೆಗಳು (NGOS) ಸಹ ಇಂತಹ ಸಮಸ್ಯಾತ್ಮಕ ಪ್ರದೇಶಗಳಲ್ಲಿ ಶಿಕ್ಷಣ ನೀಡಲು ಸಾಧ್ಯವಾಗುತ್ತಿಲ್ಲ. ಇದರ ಪರಿಣಾಮವಾಗಿ ಮಕ್ಕಳು ಶಿಕ್ಷಣದಿಂದ ವಂಚಿತರಾಗುತ್ತಿದ್ದಾರೆ.

**ನಿರುದ್ಯೋಗ :–** ಶಿಕ್ಷಣ ಪಡೆದ ಯುವಕರೇ ನಿರುದ್ಯೋಗಿಗಳಾಗಿರುವಾಗ ತಮ್ಮ ಮಕ್ಕಳನ್ನು ಶಾಲೆಗೆ ಕಳುಹಿಸುವುದರಲ್ಲಿ ಯಾವುದೇ ಅರ್ಥವಿಲ್ಲವೆಂದು ಅನೇಕ ಪೋಷಕರು ಯೋಚಿಸುತ್ತಾರೆ. ಆದರೆ ಈ ಬಗ್ಗೆಯ ಚಿಂತನೆ ಸರಿಯಲ್ಲವೆಂಬುದು ನಿಮಗೆ ತಿಳಿದಿದೆ. ಈ ರೀತಿಯ ನಕಾರಾತ್ಮಕ ಧೋರಣೆಯನ್ನು ಬದಲಾಯಿಸಲು ಒಬ್ಬ ಶಿಕ್ಷಕನಾಗಿ ನೀವು ಕಷ್ಟಪಟ್ಟು ಕೆಲಸ ಮಾಡಬೇಕಾಗುತ್ತದೆ.

**ಪ್ರೇರಣೆಯ ಕೊರತೆ :–** ಸರ್ಕಾರವು ಶಾಲೆಗೆ ಹೋಗುವ ಮಕ್ಕಳಿಗೆ ಉಚಿತ ಶಿಕ್ಷಣ, ವಿದ್ಯಾರ್ಥಿವೇತನಗಳು ಮತ್ತು ಇತರೆ ಸೌಲಭ್ಯಗಳನ್ನು ನೀಡುತ್ತಿದೆಯಾದರೂ ಪೋಷಕರು ತಮ್ಮ ಮಕ್ಕಳನ್ನು ಶಾಲೆಗೆ ಕಳುಹಿಸುವಂತೆ ಪ್ರೇರೇಪಿಸಲಾಗುತ್ತಿಲ್ಲ. ಪ್ರೇರಣೆಯ ಕೊರತೆಯ ಕಾರಣದಿಂದಾಗಿ ಶಾಲಾ ಪ್ರವೇಶಾತಿಯಲ್ಲಿ ಹೆಚ್ಚಳ ಕಂಡುಬರುತ್ತಿಲ್ಲ.

**ಶಾಲೆ ಬಿಡುವುದು, ವ್ಯರ್ಥತೆ ಮತ್ತು ಅದೇ ತರಗತಿಗಳಲ್ಲಿ ಉಳಿಯುವಿಕೆ :–** ಮಕ್ಕಳು ಶಾಲೆಗೆ ಸೇರಿದರೂ ಸಹ ವಿವಿಧ ಕಾರಣಗಳಿಂದಾಗಿ ಶಾಲೆ ಬಿಡುವುದು (ಡ್ರಾಪ್ ಔಟ್) ನಮ್ಮ ಅನುಭವಕ್ಕೆ ಬಂದಿರುತ್ತದೆ. ಹಾಗೆಯೇ ಮಕ್ಕಳು ಮುಂದಿನ ತರಗತಿಗಳಿಗೆ ಹೋಗದೆ ಅದೇ ತರಗತಿಗಳಲ್ಲಿ ಉಳಿದು ಬಿಡುವುದು (ಸ್ಟ್ಯಾಗ್ನೇಷನ್) ಮಕ್ಕಳು ತಮ್ಮ ಪ್ರಾಥಮಿಕ ಶಿಕ್ಷಣವನ್ನು ಪೂರ್ಣಗೊಳಿಸಲು ಅಡೆತಡೆಗಳಾಗಿವೆ.

**ಅರಿವಿನ ಕೊರತೆ ಮತ್ತು ಅಜ್ಞಾನ :–** ಶಿಕ್ಷಣದ ಮೌಲ್ಯದ ಬಗೆಗಿನ ಅಜ್ಞಾನ ಒಂದು ಶಾಪವಾಗಿದೆ. ನಮ್ಮ ಸಮಾಜದಲ್ಲಿ ಅನೇಕ ಪೋಷಕರು ಮಾನವ ಜೀವನದಲ್ಲಿ ಶಿಕ್ಷಣ ಎಷ್ಟು ಮಹತ್ವಪೂರ್ಣವಾದುದು ಎಂಬುದನ್ನು ಅರ್ಥ ಮಾಡಿಕೊಳ್ಳುತ್ತಿಲ್ಲ. ತಮ್ಮ ಅಜ್ಞಾನದಿಂದಾಗಿ ಪೋಷಕರು ಮಕ್ಕಳನ್ನು ಶಾಲೆಗೆ ಸೇರಿಸುತ್ತಿಲ್ಲ.

**ಲಿಂಗ ತಾರತಮ್ಯ :–** ಅನೇಕ ರಾಜ್ಯಗಳಲ್ಲಿ ಮಹಿಳೆಯರ ಸಾಕ್ಷರತಾ ಪ್ರಮಾಣವು ಪುರುಷರ ಸಾಕ್ಷರತಾ ಪ್ರಮಾಣಕ್ಕಿಂತ ಕಡಿಮೆಯಿದೆ. ಅನೇಕ ಸಮಾಜಗಳಲ್ಲಿ ಲಿಂಗ ತಾರತಮ್ಯವು ಪ್ರಭಲವಾಗಿದೆ. ಗಂಡು ಮಗುವಿಗೆ ಶಿಕ್ಷಣ ನೀಡಿ ಹೆಣ್ಣುಮಗುವಿನ ಶಿಕ್ಷಣವನ್ನು ನಿರ್ಲಕ್ಷಿಸುವುದನ್ನು ನಾವು ಗಮನಿಸಬಹುದು. ಶಾಲೆಗೆ ಹೋಗುವ ಬದಲು ಹೆಣ್ಣು ತನ್ನ ತಾಯಿಗೆ ದೈನಂದಿನ ಕೆಲಸದಲ್ಲಿ ಸಹಾಯ ಮಾಡುವ ತಮ್ಮ ಅಥವಾ ತಂಗಿಯನ್ನು ಪಾಲನೆ ಮಾಡುವ ಕೆಲಸದಲ್ಲಿ ನಿರತಳಾಗಿರುತ್ತಾಳೆ.

Notes

**ಜೀವನದಲ್ಲಿ ಸ್ಥಿರತೆಯ ಕೊರತೆ :–** ಕೆಲವು ಆದಿವಾಸಿಗಳು ಮತ್ತು ಅಲೆಮಾರಿಗಳು ಈಗಲೂ ವಸತಿಹೀನರಾಗಿದ್ದು, ತಮ್ಮ ಜೀವನ ನಿರ್ವಹಣೆಗಾಗಿ ಅಲೆಯುತ್ತಿರುತ್ತಾರೆ. ಕೆಲವು ಕಾರ್ಮಿಕರು ತಮ್ಮ ಜೀವನದಲ್ಲಿ ಸ್ಥಿರತೆಯನ್ನು ಕಂಡುಕೊಂಡಿರುವುದಿಲ್ಲ. ಅನೇಕರು ಅನಾಥರು. ಇಂತಹ ಸನ್ನಿವೇಶಗಳಲ್ಲಿ ಶಿಕ್ಷಣ ಪಡೆಯುವುದು ದೂರದ ಕನಸೆಂಬುದನ್ನು ನಾವು ಕಲ್ಪಿಸಿಕೊಳ್ಳಬಹುದು.

**ಚಟುವಟಿಕೆ –1**

1. ಪ್ರಾಥಮಿಕ ಶಿಕ್ಷಣದ ಸಾರ್ವತ್ರೀಕರಣವನ್ನು ಸಾಧಿಸಲಾಗದಿರುವುದಕ್ಕೆ ಕನಿಷ್ಠ ಇನ್ನೂ ಮೂರು ಕಾರಣಗಳನ್ನಾದರು ಸೇರಿಸಿ

..........................................................................................................

..........................................................................................................

..........................................................................................................

2. ಅಕ್ಷರಸ್ಥರು ಮತ್ತು ಅನಕ್ಷರಸ್ಥರ ಜೀವನ ವಿಧಾನದಲ್ಲಿ ಯಾವುದಾದರೂ ವ್ಯತ್ಯಾಸಗಳನ್ನು ಗಮನಿಸಿರುವಿರಿ?

   ಕೆಳಗಿನ ವಿಷಯಗಳಿಗೆ ಸಂಬಂಧಿಸಿದಂತೆ ಅಕ್ಷರಸ್ಥರು ಮತ್ತು ಅನಕ್ಷರಸ್ಥರ ನಡುವೆ ಯಾವ ರೀತಿಯ ವ್ಯಾತ್ಯಾಸಗಳನ್ನು ನೀವು ಗಮನಿಸಿರುವಿರಿ?
   (ನೀವು ಅವಲೋಕಿಸಿದ್ದನ್ನು ದಾಖಲಿಸಿ)

   - ಜೀವನ ಧೋರಣೆ
   - ಸಾಮಾಜಿಕ ಪ್ರಬುದ್ಧತೆ
   - ಜ್ಞಾನದ ಮಟ್ಟ
   - ಆರ್ಥಿಕ ಸ್ಥಾನಮಾನ
   - ಮಕ್ಕಳ ಶೈಕ್ಷಣಿಕ ಸ್ಥಾನಮಾನ
   - ಕುಟುಂಬದ ಗಾತ್ರ
   - ಜೀವನ ಮಟ್ಟ

..........................................................................................................

..........................................................................................................

..........................................................................................................

**3.2.3 86 ನೇ ಸಂವಿಧಾನ ತಿದ್ದುಪಡಿ :**

ಭಾರತದ ಸಂಸತ್ತು 2002 ರಲ್ಲಿ 86 ನೇ ಸಂವಿಧಾನ ತಿದ್ದುಪಡಿಯನ್ನು ಮಾಡಿತು. ಸಂವಿಧಾನ (ಎಂಭತ್ತಾರನೇ ತಿದ್ದುಪಡಿ) ಕಾಯ್ದೆ 2001

**1. ಸಂಕ್ಷಿಪ್ತ ಶೀರ್ಷಿಕೆ ಮತ್ತು ಪ್ರಾರಂಭ:**

Notes

1. ಈ ಕಾಯ್ದೆಯನ್ನು ಸಂವಿಧಾನ (ಎಂಭತ್ತಾರನೆ ತಿದ್ದುಪಡಿ) ಕಾಯ್ದೆ, 2002 ಎಂದು ಕರೆಯಬಹುದು.

2. ಈ ಕಾಯ್ದೆಯು ಕೇಂದ್ರ ಸರ್ಕಾರವು ತನ್ನ ಸರ್ಕಾರಿ ಗೆಜ್ಜೆಟ್‌ನಲ್ಲಿ ಅಧಿಸೂಚಿಸಿದ ದಿನದಿಂದ ಕಾರ್ಯರೂಪಕ್ಕೆ ಬರಲಿದೆ.

**2. ಹೊಸ ವಿಧಿ 21A ನ ಸೇರ್ಪಡೆ:**

ಸಂವಿಧಾನದ 21A ವಿಧಿಯ ನಂತರ ಈ ಕೆಳಕಂಡ ವಿಧಿಯನ್ನು ಸೇರಿಸುವುದು ಅದೆಂದರೆ, ಶಿಕ್ಷಣದ ಹಕ್ಕು : 21A ಸರ್ಕಾರವು ಕಾನೂನಿನ ಪ್ರಕಾರ ನಿರ್ಧರಿಸಲ್ಪಟ್ಟು, 6 ರಿಂದ 14 ವರ್ಷ ವಯಸ್ಸಿನ ಎಲ್ಲಾ ಮಕ್ಕಳಿಗೆ ಉಚಿತ ಮತ್ತು ಕಡ್ಡಾಯ ಶಿಕ್ಷಣವನ್ನು ಒದಗಿಸಬೇಕು.

**3. 45 ನೇ ವಿಧಿಗೆ ಬದಲಾಗಿ ಹೊಸವಿಧಿ :**

ಸಂವಿಧಾನದ 45 ನೇ ವಿಧಿಗೆ ಬದಲಾಗಿ ಈ ಕೆಳಕಂಡ ವಿಧಿಯನ್ನು ಸೇರಿಸಬೇಕು, ಅದೆಂದರೆ 6 ವರ್ಷದ ಕೆಳಗಿನ ಮಕ್ಕಳ ಮುಂಚಿನ ಬಾಲ್ಯದ ರಕ್ಷಣೆ ಹಾಗೂ ಶಿಕ್ಷಣ 45 ಎಲ್ಲಾ ಮಕ್ಕಳು 6 ವರ್ಷ ಪೂರ್ಣಗೊಳಿಸುವವರೆಗೆ ಅವರ ಮುಂಚಿನ ಬಾಲ್ಯದ ರಕ್ಷಣೆ ಮತ್ತು ಶಿಕ್ಷಣ ಒದಗಿಸಲು ಸರ್ಕಾರವು ಶ್ರಮಿಸಬೇಕು.

ಸಂವಿಧಾನದ 86ನೇ ತಿದ್ದುಪಡಿಯನ್ನು 2002 ರಲ್ಲಿ ಅಂಗೀಕರಿಸಲಾಯಿತು. ಇದರ ಪ್ರಕಾರ 6 ರಿಂದ 14 ವರ್ಷ ವಯಸ್ಸಿನ ಎಲ್ಲಾ ಮಕ್ಕಳಿಗೆ ಉಚಿತ ಮತ್ತು ಕಡ್ಡಾಯ ಶಿಕ್ಷಣವನ್ನು ನೀಡಲು ಅಧಿಸೂಚನೆಯನ್ನು ಹೊರಡಿಸಲಾಯಿತು. ಇದರ ಜೊತೆಗೆ 86ನೇ ಸಂವಿಧಾನ ತಿದ್ದುಪಡಿಯನ್ನು ಅನುಷ್ಠಾನಗೊಳಿಸುವ ಸಲುವಾಗಿ ಸಂಸತ್ತು ಮಕ್ಕಳ ಉಚಿತ ಮತ್ತು ಕಡ್ಡಾಯ ಶಿಕ್ಷಣ ಹಕ್ಕುಗಳ ಕಾಯ್ದೆಯನ್ನು ಸಹ ಅಂಗೀಕರಿಸಿತು. 2002 ರಲ್ಲಿ ಸಂವಿಧಾನದ 86 ನೆ ತಿದ್ದುಪಡಿಯನ್ವಯ 21A ವಿಧಿಯನ್ನು ಸೇರಿಸಲಾಯಿತು. ಇದು ಪ್ರಾಥಮಿಕ ಶಿಕ್ಷಣದ ಹಕ್ಕನ್ನು ಸ್ವಾತಂತ್ರದ ಹಕ್ಕಿನ ಒಂದು ಭಾಗವಾಗಿಸಿತು. ಈ ವಿಧಿಯನ್ವಯ ಸರ್ಕಾರವು 6 ರಿಂದ 14 ವರ್ಷ ವಯಸ್ಸಿನ ಮಕ್ಕಳಿಗೆ ಉಚಿತ ಮತ್ತು ಕಡ್ಡಾಯ ಶಿಕ್ಷಣವನ್ನು ನೀಡಬೇಕಾಗುತ್ತದೆ.

ಸಂವಿಧಾನದ 21ನೇ ವಿಧಿಯು ಜೀವ ಮತ್ತು ವೈಯಕ್ತಿಕ ಸ್ವಾತಂತ್ರವನ್ನು ಸಂರಕ್ಷಿಸುವುದಕ್ಕೆ ಸಂಬಂಧಿಸಿದೆ. 21ನೇ ವಿಧಿಯ ನಂತರ 21ಎ ವಿಧಿಯನ್ನು ಸೇರಿಸಲಾಯಿತು. ಇದರ ಪ್ರಕಾರ 6 ರಿಂದ 14 ವರ್ಷ ವಯಸ್ಸಿನ ಮಕ್ಕಳ ಶಿಕ್ಷಣದ ಹಕ್ಕು ಒಂದು ಮೂಲಭೂತ ಹಕ್ಕಾಯಿತು.

ಸಂವಿಧಾನದ 51A ವಿಧಿಯು ನಾಗರೀಕರ 10 ಮೂಲಭೂತ ಕರ್ತವ್ಯಗಳನ್ನು ಒಳಗೊಂಡಿದೆ. 86 ನೇ ತಿದ್ದುಪಡಿಯ ಅನ್ವಯ 11ನೇ ಮೂಲಭೂತ ಕರ್ತವ್ಯ ಸೇರ್ಪಡೆಯಾದಂತಾಯಿತು. ಇದು ಹೀಗೆ ; 6 ರಿಂದ 14 ವರ್ಷ ವಯಸ್ಸಿನ ತನ್ನ ಮಗುವಿಗೆ ಶಿಕ್ಷಣದ ಅವಕಾಶವನ್ನು ಒದಗಿಸುವುದು. ಹೀಗಾಗಿ ತನ್ನ ಮಕ್ಕಳಿಗೆ ಪ್ರಾಥಮಿಕ ಶಿಕ್ಷಣ ಒದಗಿಸುವುದು ಪ್ರತಿಯೊಬ್ಬ ನಾಗರೀಕನ ಮೂಲಭೂತ ಕರ್ತವ್ಯವಾಗಿದೆ.

**ಚಟುವಟಿಕೆ – 2**

ಭಾರತದ ಸಂವಿಧಾನದ 86ನೇ ತಿದ್ದುಪಡಿ ಶಾಲಾ ವ್ಯವಸ್ಥೆಯಲ್ಲಿ ಯಾವ ರೀತಿಯ ಪರಿಣಾಮವನ್ನು ಉಂಟು ಮಾಡುತ್ತಾರೆಂದು ನೀವು ಭಾವಿಸುತ್ತೀರಿ?

........................................................................................................

........................................................................................................

........................................................................................................

Notes

### 3.2.4 ಶಿಕ್ಷಣ ಹಕ್ಕು ಕಾಯ್ದೆ (RTE )–2009

26ನೇ ಆಗಸ್ಟ್ 2009 ರಂದು ಭಾರತದ ಸಂಸತ್ತು ಶಿಕ್ಷಣಕ್ಕೆ ಸಂಬಂಧಿಸಿದ ಒಂದು ಐತಿಹಾಸಿಕ ಕಾಯ್ದೆ 'ಶಿಕ್ಷಣ ಹಕ್ಕು ಕಾಯ್ದೆ–2009' ನ್ನು ಅಂಗೀಕರಿಸಿತು. ಸಾರ್ವತ್ರಿಕ ಪ್ರಾಥಮಿಕ ಶಿಕ್ಷಣದ ಗುರಿಗಳನ್ನು ತಲುಪುವಲ್ಲಿ ವಿಫಲವಾದ ಹಿನ್ನೆಲೆಯಲ್ಲಿ ಭಾರತ ಸರ್ಕಾರದ ಬಹು ನಿರೀಕ್ಷಿತ ಕ್ರಮ ಇದಾಗಿತ್ತು. ನಿಮಗೆ ಆಶ್ಚರ್ಯವೆನಿಸಬಹುದು. 1902 ರಷ್ಟು ಹಿಂದೆಯೇ ಮಹಾರಾಷ್ಟ್ರದ ಕೊಲ್ಹಾಪುರ ರಾಜ್ಯದ ಛತ್ರಪತಿ ಸಾಹುಮಹಾರಾಜ್ ರವರು 6 ರಿಂದ 14 ವರ್ಷ ವಯಸ್ಸಿನ ಮಕ್ಕಳಿಗೆ ಉಚಿತ ಮತ್ತು ಕಡ್ಡಾಯ ಶಿಕ್ಷಣವನ್ನು ನೀಡುವ ಕಾಯ್ದೆಯನ್ನು ಜಾರಿಗೊಳಿಸಿದ್ದರು. 1918 ರಲ್ಲಿ ವಿಠಲ್ ಬಾಯ್ ಪಟೇಲ್‌ರವರು ಬಾಂಬೆ ರಾಜ್ಯದ ಎಲ್ಲಾ ಮುನಿಸಿಪಲ್ ಕೌನ್ಸಿಲ್‌ಗಳಲ್ಲಿ ಪ್ರಾಥಮಿಕ ಶಿಕ್ಷಣವನ್ನು ಜಾರಿಗೊಳಿಸಿದ್ದರು. ಮಹಾತ್ಮಗಾಂಧಿಯವರ ಪ್ರಾಥಮಿಕ ಶಿಕ್ಷಣ ವ್ಯವಸ್ಥೆ (Basic System of Education) ಅಥವಾ ವಾರ್ಧಾ ಶಿಕ್ಷಣ ಯೋಜನೆ (Wandha Scheme of Education) -1937ಸಹ ಮಕ್ಕಳಿಗೆ ಕಡ್ಡಾಯ ಮತ್ತು ಉಚಿತ ಶಿಕ್ಷಣ ನೀಡಬೇಕೆಂದು ಪ್ರತಿಪಾದಿಸಿತು. ಮಹಾತ್ಮ ಗಾಂಧಿಯವರ ಅಭಿಪ್ರಾಯದಂತೆ ಪ್ರತಿಯೊಬ್ಬ ವ್ಯಕ್ತಿಯು ಉಚಿತ ಗಾಳಿ ಮತ್ತು ನೀರಿನ ಹಕ್ಕನ್ನು ಹೊಂದಿರುತ್ತಾನೆ. ಅದೇ ರೀತಿ ಪ್ರತಿಯೊಂದು ಮಗುವಿಗೂ ಉಚಿತ ಶಿಕ್ಷಣ ಲಭ್ಯವಾಗಬೇಕು. ಮಗುವಿನ ಯೋಗಕ್ಷೇಮವನ್ನು ನೋಡಿಕೊಳ್ಳುವುದು ಸಮಾಜ ಮತ್ತು ಸರ್ಕಾರದ ಕರ್ತವ್ಯವಾಗಿದೆ.

ವಿಶ್ವಸಂಸ್ಥೆಯ 'ಮಗುವಿನ ಹಕ್ಕುಗಳ ಘೋಷಣೆ 1959' ರಲ್ಲಿ ಭಾರತವೂ ಭಾಗಿಯಾಗಿದೆ. ಅದರ ಅನುಸಾರವಾಗಿ ಭಾರತವು ರಾಷ್ಟ್ರೀಯ ಮಕ್ಕಳ ನೀತಿ (National Policy on Children) ಯನ್ನು 1974 ರಲ್ಲಿ ಅಳವಡಿಸಿಕೊಂಡಿತು. 2005 ರ 'ಯುನಿಸೆಫ್' (UNICEF) ವರದಿ 'ಭೀತಿಯಲ್ಲಿ ಬಾಲ್ಯ' (Childhood Under Threat)ದ ಪ್ರಕಾರ ಭಾರತದಲ್ಲಿ 5 ರಿಂದ 14 ವರ್ಷ ವಯಸ್ಸಿನ 72 ದಶಲಕ್ಷ ಮಕ್ಕಳಿಗೆ ಪ್ರಾಥಮಿಕ ಶಿಕ್ಷಣ ಸುಲಭವಾಗಿ ಸಿಗುವಂತಲ್ಲವಾಗಿದೆ. ಮಕ್ಕಳ ಹಕ್ಕುಗಳು ಅವರಿಗೆ ಸಿಗುವಂತೆ ಮಾಡುವ ಹಾಗೂ ವಿಶ್ವಸಂಸ್ಥೆಯ ಮಗುವಿನ ಹಕ್ಕುಗಳ ಘೋಷಣೆಗೆ ತನಗಿರುವ ಬದ್ಧತೆಯನ್ನು ವ್ಯಕ್ತಪಡಿಸುವ ಸಲುವಾಗಿ ಭಾರತ ಸರ್ಕಾರವು 'ರಾಷ್ಟ್ರೀಯ ಮಕ್ಕಳ ಹಕ್ಕುಗಳ ಸಂರಕ್ಷಣಾ ಆಯೋಗ' (National Commission for Protection of Child Rights)ವನ್ನು ನೇಮಿಸಿತು. ಪ್ರತಿಯೊಂದು ಮಗುವೂ ಬದುಕುವ, ಅಭಿವೃದ್ಧಿ ಹೊಂದುವ ಮತ್ತು ಭಾಗವಹಿಸುವ ಹಕ್ಕನ್ನು ಹೊಂದಿದೆ. ಒಬ್ಬ ಜವಾಬ್ದಾರಿಯುತ ನಾಗರೀಕನಾಗಿ ಅದಕ್ಕಿಂತಲೂ ಹೆಚ್ಚಾಗಿ ಒಬ್ಬ ಶಿಕ್ಷಕನಾಗಿ ಮಕ್ಕಳ ಹಕ್ಕುಗಳನ್ನು ರಕ್ಷಿಸುವುದು ನಮ್ಮೆಲ್ಲರ ಪ್ರಮುಖ ಕರ್ತವ್ಯಯವಾಗಿದೆ.

RTE ಕಾಯ್ದೆಯ ಕೆಳಕಂಡ ನಿಬಂಧನೆಗಳನ್ನು ನೀವೀಗ ಅಧ್ಯಯನ ಮಾಡಲಿದ್ದೀರಿ.

- ಮಗುವಿನ ಹಕ್ಕುಗಳು
- ಶಿಕ್ಷಕನ ಪಾತ್ರ ಮತ್ತು ಜವಾಬ್ದಾರಿಗಳು
- ಶಾಲಾ ಆಡಳಿತ ಮತ್ತು ನಿರ್ವಹಣೆ
- ಪಠ್ಯಕ್ರಮ ಮತ್ತು ಮೌಲ್ಯಮಾಪನ ಅತ್ಯಗತ್ಯಗಳು.

### 3.2.5 ಮಗುವಿನ ಹಕ್ಕುಗಳು:

ವಿಶ್ವಸಂಸ್ಥೆಯು ಮಗುವಿನ ಹಕ್ಕುಗಳ ಘೋಷಣೆಯ ಪ್ರಕಾರ ಕೆಲವು ಪ್ರಮುಖ ಹಕ್ಕುಗಳು ಈ ಕೆಳಕಂಡಂತಿವೆ.

Notes

| |
|---|
| ಬದುಕಿ ಉಳಿಯುವ ಹಕ್ಕು |
| ಆರೋಗ್ಯ ಮತ್ತು ಆರೈಕೆಯ ಹಕ್ಕು |
| ರಾಷ್ಟ್ರೀಯತೆ ಹೆಸರಿನ ಹಕ್ಕು |
| ಪೌಷ್ಠಿಕತೆಯ ಹಕ್ಕು |
| ಶೋಷಣೆಯಿಂದ ಸಂರಕ್ಷಣೆಯ ಹಕ್ಕು |
| ಅಭಿವ್ಯಕ್ತಿ ಹಕ್ಕು |
| ನಿರ್ಲಕ್ಷ್ಯದಿಂದ ಸಂರಕ್ಷಣೆಯ ಹಕ್ಕು |
| ಪೋಷಕರೊಡನೆ ಜೀವಿಸುವ ಹಕ್ಕು |
| ಮಾಹಿತಿಯ ಹಕ್ಕು |

ಚಿತ್ರ 2 : ಮಗುವಿನ ಹಕ್ಕುಗಳು.

- 6 ರಿಂದ 14 ವರ್ಷ ವಯಸ್ಸಿನ ಪ್ರತಿಯೊಂದು ಮಗುವೂ ತನ್ನ ಪ್ರಾಥಮಿಕ ಶಿಕ್ಷಣ ಮುಗಿಯುವವರೆಗೆ ತನ್ನ ನೆರೆ ಹೊರೆಯ ಶಾಲೆಯಲ್ಲಿ ಉಚಿತ ಮತ್ತು ಕಡ್ಡಾಯ ಶಿಕ್ಷಣವನ್ನು ಪಡೆಯುವ ಹಕ್ಕನ್ನು ಹೊಂದಿರುತ್ತದೆ.
- ಪ್ರಾಥಮಿಕ ಶಿಕ್ಷಣವನ್ನು ಪೂರ್ಣಗೊಳಿಸಲು ಯಾವುದೇ ಮಗುವು ಯಾವುದೇ ರೀತಿಯ ಶುಲ್ಕವನ್ನು ಪಾವತಿಸಬೇಕಾಗಿಲ್ಲ. ಹಣದ ಕೊರತೆಯಿಂದಾಗಿ ಯಾವುದೇ ಮಗುವಿಗೆ ಪ್ರವೇಶಾತಿ ನಿರಾಕರಿಸದಂತೆ ನಾವು ಆದಷ್ಟೂ ಗಮನ ವಹಿಸಬೇಕು.
- ಯಾವುದೇ ಕಾರಣಕ್ಕೆ 6 ವರ್ಷದ ಮೇಲ್ಪಟ್ಟ ಮಗು ತನ್ನ ಪ್ರಾಥಮಿಕ ಶಿಕ್ಷಣವನ್ನು ಪೂರ್ಣಗೊಳಿಸಲು ಸಾಧ್ಯವಾಗದಿದ್ದಲ್ಲಿ ಆ ಮಗುವಿನ ವಯಸ್ಸಿಗೆ ಅನುಗುಣವಾದ ತರಗತಿ ಪ್ರವೇಶಾತಿಯನ್ನು ಮಾಡಿಕೊಳ್ಳಬೇಕು.
- ಮಗುವು ಪ್ರವೇಶ ಪಡೆದ ಶಾಲೆಯಲ್ಲಿ ಎಲಿಮೆಂಟರಿ ಶಿಕ್ಷಣವನ್ನು ಪೂರ್ಣಗೊಳಿಸುವ ಸೌಲಭ್ಯ ಇಲ್ಲದಿದ್ದಲ್ಲಿ, ಅಂತಹ ಸೌಲಭ್ಯವಿರು ಶಾಲೆಗೆ ವರ್ಗಾವಣೆ ಪಡೆಯುವ ಹಕ್ಕನ್ನು ಮಗು ಹೊಂದಿರುತ್ತದೆ. ವರ್ಗಾವಣೆಗೆ ಅಗತ್ಯವಿರುವ ಎಲ್ಲ ರೀತಿಯ ನೆರವನ್ನು ನಾವು ಮಗುವಿಗೆ ನೀಡಬೇಕು.
- ಯಾವುದೇ ಕಾರಣಕ್ಕೆ ಒಂದು ಮಗು ರಾಜ್ಯದೊಳಗೆ ಅಥವಾ ರಾಜ್ಯದಿಂದ ಹೊರಗೆ ಬಂದು ಶಾಲೆಯಿಂದ ಇನ್ನೊಂದು ಶಾಲೆಗೆ ಹೋಗಬೇಕಾದಂತಹ ಸಂದರ್ಭ ಬಂದಲ್ಲಿ, ಮಗು ತನ್ನ ಇಚ್ಛಾನುಸಾರ ವರ್ಗಾವಣೆಯನ್ನು ಕೋರುವ ಹಕ್ಕನ್ನು ಹೊಂದಿರುತ್ತದೆ. ಈ ಸನ್ನಿವೇಶದಲ್ಲಿ ಒಬ್ಬ ಶಿಕ್ಷಕನಾಗಿ ನಾವು ಆ ಮಗುವಿಗೆ ನೆರವು ನೀಡಬಹುದು.
- ಶಾಲೆಯ ಮುಖ್ಯೋಪಾಧ್ಯಾಯರು ಅಥವಾ ಪ್ರಭಾರಿಯಾದವರು ಮಗುವಿಗೆ ವರ್ಗಾವಣೆ ಪತ್ರವನ್ನು ನೀಡಬೇಕಾಗುತ್ತದೆ. ವರ್ಗಾವಣೆ ಪತ್ರ ನೀಡುವಲ್ಲಿ ವಿಳಂಬ ಮಾಡಿದಲ್ಲಿ ಆ ವ್ಯಕ್ತಿಯು ಸೇವಾ ನಿಯಮಗಳಿಗನುಸಾರವಾಗಿ ಶಿಕ್ಷೆಗೊಳಪಡಬೇಕಾಗುತ್ತದೆ.
- ವಯಸ್ಸಿನ ದೃಢೀಕರಣ ಇಲ್ಲವೆಂಬ ಕಾರಣದಿಂದ ಯಾವುದೇ ಮಗುವಿಗೆ ಶಾಲಾ ಪ್ರವೇಶವನ್ನು ನಿರಾಕರಿಸುವಂತಿಲ್ಲ. ಸಾಧ್ಯವಾದಲ್ಲಿ ಮಗುವು ವಯಸ್ಸಿನ ದೃಢೀಕರಣ ಪತ್ರವನ್ನು ಪಡೆದುಕೊಳ್ಳಲು ನಾವು ಸಹಾಯ ಮಾಡಬೇಕು. ಇದರಿಂದ ಮಗುವಿಗೆ ಭವಿಷ್ಯದಲ್ಲಿಯೂ ಒಳ್ಳೆಯದಾಗಲಿದೆ.

Notes

- ಪ್ರವೇಶಾತಿಯ ಕೊನೆಯ ದಿನದ ನಂತರವೂ ಮಗುವಿಗೆ ಪ್ರವೇಶವನ್ನು ನಿರಾಕರಿಸುವಂತಿಲ್ಲ. ಅಗತ್ಯಕ್ಕನುಗುಣವಾಗಿ ಮಗುವಿನ ಅಧ್ಯಯನವನ್ನು ಪೂರ್ಣಗೊಳಿಸುವುದು ಶಿಕ್ಷಕರಾಗಿ ನಮ್ಮ ಕರ್ತವ್ಯವಾಗಿದೆ.
- ಶಾಲೆಗೆ ಸೇರಿದ ಯಾವುದೇ ಮಗುವನ್ನು ಅದರ ಪ್ರಾಥಮಿಕ ಶಿಕ್ಷಣ ಮುಗಿಯುವವರೆಗೆ ಯಾವುದೇ ತರಗತಿಯಲ್ಲಿ ಉಳಿಸಿಕೊಳ್ಳುವಂತಿಲ್ಲ ಅಥವಾ ಶಾಲೆಯಿಂದ ಹೊರಹಾಕುವಂತಿಲ್ಲ.
- ಯಾವುದೇ ಸಂದರ್ಭದಲ್ಲಿ ಯಾವುದೇ ಮಗುವನ್ನು ದೈಹಿಕ ಶಿಕ್ಷೆಗೆ ಅಥವಾ ಮಾನಸಿಕ ಹಿಂಸೆಗೆ ಒಳಪಡಿಸುವಂತಿಲ್ಲ.

**ಚಟುವಟಿಕೆ – 3**

- ಮಕ್ಕಳ ಈ ಹಕ್ಕುಗಳನ್ನು ಗಮನವಿಟ್ಟು ಅಭ್ಯಾಸ ಮಾಡಿ ನಿಮ್ಮ ಅವಲೋಕನದ/ ನೀವು ಗಮನಿಸಿದ ಪ್ರಕಾರ ಈ ಹಕ್ಕುಗಳನ್ನು ನಿಮ್ಮ ಪ್ರದೇಶ / ಶಾಲೆ / ತರಗತಿಗಳಲ್ಲಿ ಹೇಗೆ ಪಾಲಿಸಲಾಗುತ್ತಿದೆಯೆಂಬುದನ್ನು ತಿಳಿಸಿ.

.............................................................................................................

.............................................................................................................

.............................................................................................................

- ಮಗುವಿನ ಹಕ್ಕುಗಳ ಉಲ್ಲಂಘನೆಗೆ ಕಾರಣಗಳನ್ನು ತಿಳಿಸಿ.

.............................................................................................................

.............................................................................................................

.............................................................................................................

- ನಿಮ್ಮ ಪ್ರದೇಶದಲ್ಲಿ ಉಲ್ಲಂಘನೆಯಾಗುತ್ತಿರುವ ಮಗುವಿನ ಹಕ್ಕುಗಳನ್ನು ಪಟ್ಟಿಮಾಡಿ.

.............................................................................................................

.............................................................................................................

.............................................................................................................

- ಮಗುವಿನ ಹಕ್ಕುಗಳ ಉಲ್ಲಂಘನೆಯಾಗುತ್ತಿರುವ ಹೋಟೆಲ್‌ಗಳು, ಅಂಗಡಿಗಳು, ಕೃಷಿ ಜಮೀನುಗಳು, ಮಾರುಕಟ್ಟೆಗಳು ಮುಂತಾದ ಸ್ಥಳಗಳಿಗೆ ಭೇಟಿ ನೀಡಿ, ಆ ಸ್ಥಳಗಳಲ್ಲಿ ಕೆಲಸ ಮಾಡುತ್ತಿರುವ ಮಕ್ಕಳೊಡನೆ ಮಾತನಾಡಿ ನೀವು ಗಮನಿಸಿದ ಅಂಶಗಳನ್ನು ದಾಖಲಿಸಿ.

.............................................................................................................

.............................................................................................................

.............................................................................................................

Notes

- ಮಗುವಿನ ಹಕ್ಕುಗಳನ್ನು ಕುರಿತಾದ ಬೀದಿನಾಟಕವನ್ನು ರಚಿಸಿ. ನಿಮ್ಮ ವಿದ್ಯಾರ್ಥಿಗಳನ್ನು ಸೇರಿಸಿಕೊಂಡು ಈ ಬೀದಿನಾಟಕವನ್ನು ಆಡಿಸಿ.

.............................................................................................................

.............................................................................................................

.............................................................................................................

## 3.3 ಶಿಕ್ಷಕರ ಪಾತ್ರಗಳು ಮತ್ತು ಜವಾಬ್ದಾರಿಗಳು:

ಶಾಲೆಯ ಸುಗಮ ಆಡಳಿತದಲ್ಲಿ ಶಿಕ್ಷಕರ ಪಾತ್ರ ತುಂಬಾ ಮಹತ್ವವಾದುದೆಂಬುದು ನಿಮಗೆ ತಿಳಿದಿದೆ. ಶಿಕ್ಷಕರಂತೆಯೆ ಶಾಲೆ ಎಂಬುದು ಅನುಭವ ವೇದ್ಯ ಅಂಶವಾಗಿದೆ. RTE ಅಡಿಯಲ್ಲಿ ಒಬ್ಬ ಶಿಕ್ಷಕನ ಪಾತ್ರ ಈ ಕೆಳಕಂಡಂತಿದೆ.

- ಕ್ರಮಬದ್ಧವಾಗಿ ಹಾಗೂ ಸಮಯಕ್ಕೆ ಸರಿಯಾಗಿ ಶಾಲೆಗೆ ಹೋಗಬೇಕು.
- ನಿಗಧಿತ ಸಮಯದೊಳಗೆ ಪಠ್ಯಕ್ರಮವನ್ನು ಸಂಪೂರ್ಣಗೊಳಿಸಬೇಕು.
- ಪ್ರತಿಯೊಂದು ಮಗುವಿನ ಕಲಿಕಾ ಸಾಮರ್ಥ್ಯವನ್ನು ಅರಿತು ಅದಕ್ಕೆ ತಕ್ಕಂತೆ ಆ ಮಗುವಿಗೆ ಕಲಿಕೆಯ ಅವಕಾಶಗಳನ್ನು ನೀಡಬೇಕು.
- ಮಗುವಿನ ತಂದೆ-ತಾಯಿ / ಪೋಷಕರೊಡನೆ ಆಗಿಂದಾಗ್ಗೆ ಸಭೆಯನ್ನು ನಡೆಸಿ ಮಗುವಿನ ಒಟ್ಟಾರೆ ಸಾಧನೆ ಮತ್ತು ಪ್ರಗತಿಯ ಬಗ್ಗೆ ಅವರಿಗೆ ತಿಳಿಸಬೇಕು.
- ಮಗುವು ಭಯ, ನೋವು, ಆತಂಕಗಳಿಂದ ಮುಕ್ತವಾಗಿರಲು ಅಗತ್ಯವಿರುವ ಎಲ್ಲಾ ರೀತಿಯ ನೆರವನ್ನು ನೀಡುವುದು. ಒಬ್ಬ ಶಿಕ್ಷಕನಾಗಿ ನಿಮ್ಮ ಜವಾಬ್ದಾರಿಯಾಗಿದೆ. ವ್ಯಾಪಕ ಮತ್ತು ನಿರಂತರ ಮೌಲ್ಯಮಾಪನ (CCE) ವಿಧಾನವನ್ನು ನೀವು ಎಚ್ಚರಿಕೆಯಿಂದ ಅನುಷ್ಠಾನಗೊಳಿಸಬೇಕು. ಮಗುವಿನ ಜ್ಞಾನ, ಸಾಮರ್ಥ್ಯ ಮತ್ತು ಪ್ರತಿಭೆಯನ್ನು ರೂಪಿಸಲು ಎಲ್ಲಾ ಪ್ರಯತ್ನಗಳನ್ನು ಮಾಡಬೇಕು. ಅಲ್ಲದೆ ಮಗುವಿನ ಭೌತಿಕ ಮತ್ತು ಮಾನಸಿಕ ಸಾಮರ್ಥ್ಯವನ್ನು ಅಭಿವೃದ್ಧಿಪಡಿಸಲು ಕಾರ್ಯೋನ್ಮುಖರಾಗಬೇಕು. ಸಂಕ್ಷಿಪ್ತವಾಗಿ ಹೇಳುವುದಾದರೆ ಮಗುವಿನ ಸರ್ವಾಂಗೀಣ ಅಭಿವೃದ್ಧಿಯನ್ನು ನಿಮ್ಮಿಂದ ನಿರೀಕ್ಷಿಸಲಾಗುತ್ತದೆ.
- ನೀವು ನಿಮ್ಮ ಕರ್ತವ್ಯವನ್ನು ನಿರ್ವಹಿಸುವಲ್ಲಿ ವಿಫಲರಾದಲ್ಲಿ ನಿಮ್ಮನ್ನು ಶಿಸ್ತುಕ್ರಮಕ್ಕೆ ಒಳಪಡಿಸಬಹುದಾಗಿದೆ.
- ನಿಮಗೆ ವಹಿಸಿದ ಕರ್ತವ್ಯವನ್ನು ನಿರ್ವಹಿಸಿದ ಮಾತ್ರಕ್ಕೆ RTE ನ ಒಬ್ಬ ಉತ್ತಮ ಬೆಂಬಲಿಗರಾಗಿ ಹೊರಹೊಮ್ಮಬೇಕು. ಮತ್ತು RTE ಕಾಯ್ದೆ 2009 ರ ನಿಬಂಧನೆಗಳ ಪರಿಣಾಮಕಾರಿ ಅನುಷ್ಠಾನದ ಸಕ್ರಿಯ ಮಧ್ಯವರ್ತಿಯಾಗಿ ಕಾರ್ಯನಿರ್ವಹಿಸಬೇಕು. ನೂರು ಪ್ರತಿಷತ ಸಾಕ್ಷರತೆಯ ಗುರಿಯನ್ನು ಸಾಧಿಸಲು ನಿಮ್ಮ ಉತ್ಕೃಷ್ಟ ಸೇವೆಯನ್ನು ನೀವು ದೇಶಕ್ಕೆ ಸಲ್ಲಿಸಬೇಕು.

Notes

| |
|---|
| ಕ್ರಮಬದ್ಧತೆ ಮತ್ತು ಸಮಯಪಾಲನೆ |
| ಮಕ್ಕಳ ಕಾರ್ಯಕ್ಷೇತ್ರವನ್ನು ಗುರುತಿಸಿ ಪ್ರವೇಶ ಮಡಿಕೊಳ್ಳುವುದು |
| ಮಕ್ಕಳ ಅಗತ್ಯಗಳು ಮತ್ತು ಸಾಮರ್ಥ್ಯಗಳನ್ನು ಗುರುತಿಸುವುದು |
| ಮಕ್ಕಳ ಸೃಜನಶೀಲತೆ ಮತ್ತು ಇತರೆ ಸಾಮರ್ಥ್ಯಗಳನ್ನು ಗುರುತಿಸಿ ಪೋಷಿಸುವುದು |
| ಮಕ್ಕಳನ್ನು ಶಾಲೆಗೆ ಸೇರಿಸುವಂತೆ ಪೋಷಕರನ್ನು ಪ್ರೇರೇಪಿಸುವುದು |
| ಮಕ್ಕಳು ಶಿಕ್ಷಣವನ್ನು ಪೂರ್ಣಗೊಳಿಸಲು ಉತ್ತೇಜಿಸುವುದು |
| ಪಠ್ಯಕ್ರಮವನ್ನು ನಿಗಧಿತ ಸಮಯದೊಳಗೆ ಪೂರ್ಣಗೊಳಿಸುವುದು |
| ವಿಶೇಷ ಅಗತ್ಯವಿರುವ ಮಕ್ಕಳೆಡೆಗೆ ಗಮನ ನೀಡುವುದು |
| ಮಕ್ಕಳಿಗೆ ಎಲ್ಲಾ ಸೌಲಭ್ಯಗಳನ್ನು ಲಭ್ಯಗೊಳಿಸುವುದು |
| ಮಕ್ಕಳ ಹಕ್ಕುಗಳನ್ನು ಸಂರಕ್ಷಿಸುವುದು |
| RTE ನ ಅನುಷ್ಠಾನದಲ್ಲಿ ಅಧಿಕಾರ ವರ್ಗದೊಡನೆ ಸಹಕರಿಸುವುದು |
| ಶಾಲೆಯ ಆಡಳಿತ ಮತ್ತು ನಿರ್ವಹಣೆಯಲ್ಲಿ ಭಾಗವಹಿಸುವುದು |
| ವಿಶ್ವಾಸಹನೀಯ ಸಲಹೆಗಾರ (ಮೆಂಬರ್) ಕಾರ್ಯನಿರ್ವಹಿಸುವುದು ಮತ್ತು ಸಂಪನ್ಮೂಲಗಳನ್ನು ದಕ್ಷತೆಯಿಂದ ಬಳಸಿಕೊಳ್ಳುವುದು |
| ಸಾಮಾಜಿಕ ಪರಿವರ್ತನೆಯ ಕಾರ್ಯಭಾರಿಯಾಗಿ ಕಾರ್ಯನಿರ್ವಹಿಸುವುದು. |

ಚಿತ್ರ 3 : ಶಿಕ್ಷಕನ ಕರ್ತವ್ಯಗಳು

**ಚಟುವಟಿಕೆ –4**

RTI ಕಾಯ್ದೆ 2009 ರಲ್ಲಿ ಶಿಕ್ಷಕರಿಗೆ ನಿಗದಿಪಡಿಸಿರುವ ಕರ್ತವ್ಯಗಳನ್ನು ನೀವು ಅಧ್ಯಯನ ಮಾಡಿದ್ದೀರಿ. ನಿಮ್ಮ ಅಭಿಪ್ರಾಯದಲ್ಲಿ RTE ನ ಗುರಿಗಳನ್ನು ಸಾಧಿಸಲು ಶಿಕ್ಷಕನು ಯಾವ ಕರ್ತವ್ಯಗಳನ್ನು ಅನುಸರಿಸಬೇಕು?

## 3.4 ಶಾಲಾ ಆಡಳಿತ ಮತ್ತು ನಿರ್ವಹಣೆ :

ಶಾಲೆಯ ಆಡಳಿತ ಮತ್ತು ನಿರ್ವಹಣೆಯ ಮಹತ್ವವನ್ನು ನೀವು ಎಂದಿಗೂ ಮರೆಯಬಾರದು. ನಿಮ್ಮ ಶಾಲೆಯು ಸಮರ್ಪಕವಾಗಿ ನಿರ್ವಹಿಸಲ್ಪಡದೆ ಇದ್ದಲ್ಲಿ RTE ನ ಗುರಿಗಳನ್ನು ಸಾಧಿಸುವುದು ನಿಮ್ಮಿಂದ ಸಾಧ್ಯವಾಗುವುದಿಲ್ಲ. RTE ನಲ್ಲಿ ಶಾಲೆಯ ಸಮರ್ಪಕ ಆಡಳಿತ ಮತ್ತು ನಿರ್ವಹಣೆಯ ಬಗ್ಗೆ ಅನೇಕ ನಿಬಂಧನೆಗಳಿವೆ. ಯಾವುದೇ ಶಾಲೆಯು ಶಿಕ್ಷಣವನ್ನು ಪರಿಣಾಮಕಾರಿಯಾಗಿ ನೀಡಲು ಬೇಕಾದ ಎಲ್ಲಾ ನಿಯಮಗಳು ಮತ್ತು ಪ್ರಮಾಣಾದರ್ಶಗಳನ್ನು ಈಡೇರಿಸುವವರೆಗೆ ಅಂತಹ ಶಾಲೆಯನ್ನು ಸ್ಥಾಪಿಸುವುದಾಗಲೀ, ಅದಕ್ಕೆ ಮಾನ್ಯತೆ ನೀಡುವುದಾಗಲಿ ಕೂಡದು ಎಂಬುದನ್ನು ಕಾಯ್ದೆಯಲ್ಲಿ ಸ್ಪಷ್ಟವಾಗಿ ತಿಳಿಸಲಾಗಿದೆ. ಇದರರ್ಥವೇನೆಂದರೆ ಶಾಲೆಯು ಅಗತ್ಯವಿರುವ ಮೂಲಭೂತ ಮತ್ತು ಶೈಕ್ಷಣಿಕ ಸೌಲಭ್ಯಗಳನ್ನು ಹೊಂದಿರಲೇಬೇಕು.

ತಾಯಿಯನ್ನು ಮಗುವಿನ ಮೊದಲ ಗುರು ಎನ್ನಲಾಗುತ್ತದೆ. ಶಾಲೆಯ ನಿರ್ವಹಣ ಸಮಿತಿಯು ಕನಿಷ್ಠ ಶೇಕಡಾ 50 ರಷ್ಟು ಮಹಿಳೆಯರನ್ನು ಒಳಗೊಂಡಿರಬೇಕು ಹಾಗೂ ಈ ಸಮಿತಿಯ ಬಹುತೇಕ ಪದಾಧಿಕಾರಿಗಳು ಮತ್ತು ಸದಸ್ಯರು ಪೋಷಕ ವರ್ಗದವರಾಗಿರಬೇಕೆಂದು ಕಾಯ್ದೆ ತಿಳಿಸುತ್ತದೆ. ನಿರ್ವಹಣ ಸಮಿತಿಯು ಈ ಕೆಳಕಂಡ ಕಾರ್ಯಗಳನ್ನು ಕೈಗೊಳ್ಳಬೇಕೆಂದು ನಿರೀಕ್ಷಿಸಲಾಗಿದೆ.

- ಶಾಲೆಯ ಕಾರ್ಯಾಚರಣೆಯ ಮೇಲೆ ನಿಗಾವಹಿಸುವುದು.

Notes

* ಶಾಲಾ ಅಭಿವೃದ್ಧಿ ಯೋಜನೆಯನ್ನು ಸಿದ್ಧಪಡಿಸಿ ಶಿಫಾರಸ್ಸು ಮಾಡುವುದು.
* ವಿವಿಧ ಮೂಲಗಳಿಂದ ಸ್ವೀಕರಿಸಲ್ಪಡುವ ಅನುದಾನಗಳ ಮೇಲೆ ನಿಗಾವಹಿಸುವುದು.
* RTE ನ ಗುರಿಗಳನ್ನು ಸಾಧಿಸುವ ಧ್ಯೇಯ ಕಾರ್ಯಕ್ಕಾಗಿ ಕಾರ್ಯನಿರ್ವಹಿಸುವುದು.

ಶಾಲೆಯ ನಿರ್ವಹಣೆಗೆ ಸಹಕಾರವನ್ನು ನಿಮ್ಮಿಂದ ನಿರೀಕ್ಷಿಸಲಾಗುತ್ತದೆ. ಎಲ್ಲಾ ಅರ್ಹ ಮಕ್ಕಳು ಶಾಲೆಗೆ ಪ್ರವೇಶ ಪಡೆದು, ಅವರ ಪ್ರಾಥಮಿಕ ಶಿಕ್ಷಣ ಪೂರ್ಣವಾಗುವವರೆಗೆ ಶಾಲೆಯಲ್ಲಿ ಮುಂದುವರಿಯುವಂತೆ ನೋಡಿಕೊಳ್ಳುವುದು ಶಾಲೆಯ ಶಿಕ್ಷಕರು ಮತ್ತು ಆಡಳಿತ ಮಂಡಳಿಯ ಜಂಟಿ ಜವಾಬ್ದಾರಿಯಾಗಿದೆ. ಮಕ್ಕಳು ಶಾಲೆಗೆ ಬರದೆ ತಪ್ಪಿಸಿಕೊಳ್ಳುವುದು ಮತ್ತು ಶಾಲೆ ಬಿಡುವುದನ್ನು ತಡೆಯುವುದು ಒಂದು ದೊಡ್ಡ ಸವಾಲು. ಮಕ್ಕಳು ಮತ್ತು ಪೋಷಕರನ್ನು ಪ್ರೇರೇಪಿಸುವ ಮೂಲಕ ಇದನ್ನು ನೀವು ಮೆಟ್ಟಿ ನಿಲ್ಲಬಹುದು.

## 3.5 ಪಠ್ಯಕ್ರಮ ಮತ್ತು ಮೌಲ್ಯಮಾಪನ ಅತ್ಯಗತ್ಯತೆಗಳು :

ಈ ಹಂತದ ಪಠ್ಯಕ್ರಮವು ಮಕ್ಕಳಲ್ಲಿ ಕನಿಷ್ಠ ಮೂಲಭೂತ ಕೌಶಲ್ಯಗಳು ಮತ್ತು ಧೋರಣೆಗಳನ್ನು ಅಭಿವೃದ್ಧಿ ಪಡಿಸಬೇಕೆಂದು ನಿರೀಕ್ಷಿಸಲಾಗುತ್ತದೆ. ಇದು ಮಗು ಕೇಂದ್ರಿತವಾಗಿದ್ದು ಮಗುವಿನ ಪ್ರತಿದಿನದ ಜೀವನಕ್ಕೆ ಸಂಬಂಧಿಸಿರುತ್ತದೆ. ವಿಭಿನ್ನ ಸಾಮರ್ಥ್ಯಗಳುಳ್ಳ ಹಾಗೂ ವಿವಿಧ ಸಾಮಾಜಿಕ, ಆರ್ಥಿಕ ಸ್ಥಾನಮಾನವನ್ನು ಹೊಂದಿರುವ ಮಕ್ಕಳ ಅಗತ್ಯತೆಗಳಿಗನುಗುಣವಾಗಿ ಬದಲಾಯಿಸಿಕೊಳ್ಳಲು ಸಾಧ್ಯವಿರುವಂತೆ ಈ ಪಠ್ಯಕ್ರಮ ಇರಬೇಕು. ವಿಶೇಷ ಮಕ್ಕಳ ಅಗತ್ಯತೆಗಳನ್ನು ಪೂರೈಸುವ ನಿಟ್ಟಿನಲ್ಲಿ ಒಳಗೊಳ್ಳುವಿಕೆ ಮತ್ತು ನಮ್ಯತೆಯನ್ನು ಈ ಪಠ್ಯಕ್ರಮವು ಹೊಂದಿರಬೇಕು. RTE ಕಾಯ್ದೆಯಲ್ಲಿ ಅಳವಡಿಸಲಾಗಿರುವ ಮೌಲ್ಯಗಳಿಗನುಗುಣವಾಗಿ ಪಠ್ಯಕ್ರಮವನ್ನು ರಚಿಸಬೇಕು. ಮಗುವಿನ ಜ್ಞಾನ, ಸಾಮರ್ಥ್ಯ ಮತ್ತು ಪ್ರತಿಭೆಗಳನ್ನು ನಿರ್ಮಿಸುವಲ್ಲಿ ಇದು ಸಹಾಯ ಮಾಡುವಂತಿರಬೇಕು. ಚಟುವಟಿಕೆಗಳ ಮೂಲಕ ಕಲಿಕೆಯನ್ನು ಪ್ರಚೋದಿಸುವಂತೆ ಪಠ್ಯಕ್ರಮವಿರಬೇಕೆಂಬ ಅಭಿಪ್ರಾಯವನ್ನು ನೀವು ಒಪ್ಪುತ್ತೀರಿ. ಆಟಗಳು ಮತ್ತು ಕ್ರೀಡೆಗಳು ಮತ್ತು ಪಠ್ಯೇತರ ಚಟುವಟಿಕೆಗಳನ್ನು ಸಂಘಟಿಸಲು ಪಠ್ಯಕ್ರಮದಲ್ಲಿ ಸಾಕಷ್ಟು ಅವಕಾಶವಿರಬೇಕು.

ಮಗುವಿನ ಪ್ರಾಥಮಿಕ ಶಿಕ್ಷಣ ಮುಗಿಯುವವರೆಗೆ ಯಾವುದೇ ಬಾಹ್ಯ ಪರೀಕ್ಷೆ ಇರಬಾರದು. ಎಲ್ಲಾ ಮಕ್ಕಳನ್ನು ಉನ್ನತ ತರಗತಿಗಳಿಗೆ ತೇರ್ಗಡೆಗೊಳಿಸಬೇಕು. ಮೌಲ್ಯಮಾಪನ ಭಾಗವನ್ನು ನಿರ್ಲಕ್ಷಿಸಬೇಕೆಂಬುದು ಇದರರ್ಥವಲ್ಲ. ವ್ಯಾಪಕ ಮತ್ತು ನಿರಂತರ ಮೌಲ್ಯಮಾಪನ (CCE)ವನ್ನು ಅನುಷ್ಠಾನಗೊಳಿಸಬೇಕು. ಉತ್ತೀರ್ಣ, ಅನುತ್ತೀರ್ಣ ವ್ಯವಸ್ಥೆ ಇಲ್ಲವಾದರೂ ಶಿಕ್ಷಣದ ಪ್ರಮಾಣಾದರ್ಶವನ್ನು ಕಾಪಾಡಿಗೊಳ್ಳಬೇಕು. ನಿಮಗೆ ತಿಳಿದಿರುವಂತೆ ಶಿಕ್ಷಣದ ಪ್ರಮುಖ ಗುರಿ ಮಗುವಿನ ಸರ್ವಾಂಗೀಣ ಅಭಿವೃದ್ಧಿಯಾಗಿದೆ. ಮಗುವಿನ ಜ್ಞಾನ, ಸಾಮರ್ಥ್ಯ, ಪ್ರತಿಭೆಗಳನ್ನು ನಿರ್ಮಿಸುವುದು ನಮ್ಮ ಜವಾಬ್ದಾರಿಯಾಗಿದೆ. ಮಕ್ಕಳಲ್ಲಿ ಹಿತಕರವಾದ ಧೋರಣೆಗಳು ಮತ್ತು ಜೀವನದ ಸಕಾರಾತ್ಮಕ ಮೌಲ್ಯಗಳನ್ನು ಬೆಳೆಸಲು ನಾವು ಎಲ್ಲ ರೀತಿಯ ಎಚ್ಚರಿಕೆಗಳನ್ನು ತೆಗೆದುಕೊಳ್ಳಬೇಕು. ವಿವಿದ ಕೌಶಲ್ಯಗಳು, ಚಟುವಟಿಕೆಗಳ ಮೂಲಕ ಕಲಿಕೆ ಮತ್ತು ಶೋಧನೆಯ ಮನೋಭಾವವನ್ನು ಉದ್ದೀಪನಗೊಳಿಸಬೇಕು. ಮಕ್ಕಳ ದೈಹಿಕ ಮತ್ತು ಮಾನಸಿಕ ಸಾಮರ್ಥ್ಯದ ಸಂಪೂರ್ಣ ಅಭಿವೃದ್ಧಿಗೆ ನಾವು ಅತೀವ ಪ್ರಯತ್ನವನ್ನು ಮಾಡಬೇಕು.

**ಚಟುವಟಿಕೆ – 5**

1) ನಿಮ್ಮ ಪ್ರದೇಶದಲ್ಲಿರುವ ಪ್ರಾಥಮಿಕ ಶಾಲೆಗೆ ಭೇಟಿ ನೀಡಿ ಅಲ್ಲಿ ಕೆಲಸ ಮಾಡುವವರೊಡನೆ ಒಡನಾಡಿ, ಅವರ ಕಾರ್ಯ ವೈಖರಿಯನ್ನು ಕುರಿತು ನೀವು ಗಮನಿಸಿದ ಅಂಶಗಳನ್ನು ದಾಖಲಿಸಿ.

Notes

2) ಪ್ರಾಥಮಿಕ ಶಿಕ್ಷಣದ ಗುರಿಗಳನ್ನು ಸಾಧಿಸಲು ಎಷ್ಟರಮಟ್ಟಿಗೆ ಪ್ರಯತ್ನಗಳನು ಮಾಡಲಾಗುತ್ತಿದೆ?

3) ವಿದ್ಯಾರ್ಥಿಯ ಪ್ರಗತಿಯ ಮೌಲ್ಯಮಾಪನಕ್ಕೆ ಈಗ ಇರುವ ವ್ಯವಸ್ಥೆಯು ನಿಮಗೆ ತೃಪ್ತಿದಾಯಕವಾಗಿದೆಯೆ? ನಿಮ್ಮ ಅವಲೋಕನಗಳನ್ನು ತಿಳಿಸಿ.

4) ವಿದ್ಯಾರ್ಥಿಯ ಪ್ರಗತಿಯನ್ನು ಮೌಲ್ಯಮಾಪನ ಮಾಡಲು ವ್ಯಾಪಕ ಮತ್ತು ನಿರಂತರ ಮೌಲ್ಯಮಾಪನ (CCE)ವ್ಯವಸ್ಥೆಯು ಸಹಾಯಕವಾಗಿದೆಯೆಂದು ನೀವು ಭಾವಿಸುತ್ತೀರಾ? ನಿಮ್ಮ ಅಭಿಪ್ರಾಯಗಳನ್ನು ತಿಳಿಸಿ.

## 3.6 ಕಾಯ್ದೆಯ ನಿಯಮಗಳು:

RTE ಕಾಯ್ದೆ 2009 ರ ನಿಬಂಧನೆಗಳನ್ನು ನಾವು ಅಧ್ಯಯನ ಮಾಡಿದ್ದೇವೆ. RTE ಕಾಯ್ದೆಯ ವಾಸ್ತವಿಕ ಅನುಷ್ಠಾನಕ್ಕಾಗಿ ಕೆಲವು ನಿಯಮಗಳನ್ನು ರೂಪಿಸಲಾಗಿದೆ. ಇವುಗಳನ್ನು 'ಉಚಿತ ಮತ್ತು ಕಡ್ಡಾಯ ಶಿಕ್ಷಣಕ್ಕಾಗಿ ಮಕ್ಕಳ ಹಕ್ಕುಗಳ ನಿಯಮಗಳು 2009' ಈ ನಿಯಮಗಳು ಒಂದು ರಾಜ್ಯದಿಂದ ಇನ್ನೊಂದು ರಾಜ್ಯದಲ್ಲಿ ಸ್ವಲ್ಪಮಟ್ಟಿಗೆ ಬದಲಾಗಬಹುದು. ಇಲ್ಲಿ ನಾವು ಮಗುವಿನ ಉಚಿತ ಮತ್ತು ಕಡ್ಡಾಯ ಶಿಕ್ಷಣಕ್ಕೆ ಸಂಬಂಧಿಸಿದ ಕೆಲವು ಪ್ರಮುಖ ನಿಯಮಗಳನ್ನು ಅಧ್ಯಯನ ಮಾಡಲು ಪ್ರಯತ್ನಿಸೋಣ. RTI ಕಾಯ್ದೆಯ ನಿಯಮಗಳನ್ನು ಎಂಟು ಭಾಗಗಳಾಗಿ ವರ್ಗೀಕರಿಸಲಾಗಿದೆ.

'ಶಿಕ್ಷಣ ಹಕ್ಕು ಕಾಯ್ದೆಯ ಮಾದರಿ ನಿಯಮಗಳು–2009'ನ್ನು RTE ಕಾಯ್ದೆಯನ್ನು ಕಾರ್ಯಾಚರಣೆಗೊಳಿಸಲು ರೂಪಿಸಲಾಗಿದೆ.

ವಿವಿಧ ರಾಜ್ಯಗಳು ಶಿಕ್ಷಣ ಹಕ್ಕಿಗೆ ಸಂಬಂಧಿಸಿದಂತೆ ತಮ್ಮ RTE ರಾಜ್ಯನಿಯಮಗಳನ್ನು ರೂಪಿಸಲು ಬೇಕಾದ ಚೌಕಟ್ಟನ್ನು ಈ ನಿಯಮಗಳು ನೀಡುತ್ತವೆ. ರಾಜ್ಯಗಳು ತಮ್ಮ RTE ನಿಯಮಗಳು ದೂರು ನಿವಾರಣೆಯ ಎಲ್ಲಾ ಆಯಾಮಗಳನ್ನು ಒಳಗೊಂಡಿರುವುದನ್ನು ಖಾತ್ರಿ ಪಡಿಸಿಕೊಳ್ಳಬೇಕು. ದೂರು ನಿವಾರಣಾ ವ್ಯವಸ್ಥೆಯು ದೂರು ದಾಖಲೆಯ ವಿಧಾನ, ದೂರನ್ನು ದಾಖಲಿಸಬೇಕಾದ ಸಕ್ಷಮ ಪ್ರಾಧಿಕಾರ ಯಾವುದು, ದೂರು ನಿವಾರಣೆಗೆ ಕಾಲಮಿತಿ ಮುಂತಾದವುಗಳನ್ನು ಒಳಗೊಂಡಿರಬೇಕು.

RTE ಮಾದರಿ ನಿಯಮಗಳ ಪ್ರಸ್ತುತ ದಾಖಲೆಯು ಕೆಳಕಂಡ ಅಂಶಗಳ ಬಗ್ಗೆ ವಿವರಗಳನ್ನು ಒಳಗೊಂಡಿದೆ.

- ವಿಶೇಷ ಮಕ್ಕಳ ಕಲಿಕೆಯನ್ನು ಅವರ ಸಹಪಾಠಿಗಳ ಕಲಿಕೆಯ ಮಟ್ಟಕ್ಕೆ ತರಲು ಅಗತ್ಯವಿರುವ ನಿಬಂಧನೆಗಳು ಮತ್ತು ವಿಧಾನಗಳು.
- ನೆರೆಹೊರೆಯ ಶಾಲೆಗಳ ಮಿತಿಗಳು.
- ಶಾಲೆಗಳ ಉನ್ನತೀಕರಣ ಸಾರಿಗೆ ಸೌಲಭ್ಯಗಳು ಅಥವಾ ವಸತಿ ಸೌಲಭ್ಯಗಳನ್ನು ಕಲ್ಪಿಸುವುದು, ಪ್ರಾಥಮಿಕ ಶಿಕ್ಷಣವನ್ನು ಪೂರ್ಣಗೊಳಿಸಲು ಅಂಗವಿಕಲ ಮಕ್ಕಳಿಗೆ ಎಲ್ಲಾ ರೀತಿಯ ಕಲಿಕಾ ನೆರವನ್ನು ನೀಡುವುದು. ಇವುಗಳಿಗೆ ಸಂಬಂಧಿಸಿದಂತೆ ರಾಜ್ಯ ಸರ್ಕಾರಗಳು ಮತ್ತು ಸ್ಥಳೀಯ ಸಂಸ್ಥೆಗಳ ಕರ್ತವ್ಯಗಳು.
- ಸ್ಥಳೀಯ ಸಂಸ್ಥೆಯ ವ್ಯಾಪ್ತಿಯಲ್ಲಿ ಮಕ್ಕಳಿಗೆ ಸಂಬಂಧಿಸಿದಂತೆ ನಿರ್ವಹಿಸಬೇಕಾದ ದಾಖಲೆಗಳ ವಿಧಾನ ಮತ್ತು ವಿವರಗಳು.
- ದುರ್ಬಲ ವರ್ಗದ ಮತ್ತು ಪ್ರತಿಕೂಲಕರ ಗುಂಪುಗಳ ವಿದ್ಯಾರ್ಥಿಗಳ ಶಾಲಾ ಪ್ರವೇಶಾತಿ ಮತ್ತು ತರಗತಿ ಬೋಧನೆಗೆ ಸಂಬಂಧಿಸಿದಂತೆ ಶಾಲೆಗಳು ಮತ್ತು ಶಿಕ್ಷಕರ ಜವಾಬ್ದಾರಿಗಳು.
- ಪ್ರತಿ ವಿದ್ಯಾರ್ಥಿಗೆ ಸಂಬಂಧಿಸಿದಂತೆ ವಯಸ್ಸಿನ ದೃಢೀಕರಣ ದಾಖಲೆಗಳು.
- ರಾಜ್ಯಸರ್ಕಾರ ಅಥವಾ ಸ್ಥಳೀಯ ಪ್ರಾಧಿಕಾರವನ್ನು ಹೊರತುಪಡಿಸಿ ಇತರರಿಂದ ಸ್ಥಾಪಿಸಲ್ಪಟ್ಟಿರುವ, ಸ್ವಾಮ್ಯತೆ ಅಥವಾ ನಿಯಂತ್ರಣಕ್ಕೊಳಪಟ್ಟಿರುವ ಶಾಲೆಗಳು ಕಾಯ್ದೆಯಲ್ಲಿ ತಿಳಿಸಲಾಗಿರುವಂತೆ ಮಾನ್ಯತೆ ಪಡೆಯಲು ಅರ್ಜಿಸಲ್ಲಿಕೆ ಮತ್ತು ಅನುಸರಿಸಬೇಕಾದ ವಿಧಾನಗಳು.

Notes

- ಮಾನ್ಯತೆಯನ್ನು ಹಿಂಪಡೆಯಲು ಷರತ್ತುಗಳು ಮತ್ತು ವಿಧಾನಗಳು.
- ಶಾಲಾ ನಿರ್ವಹಣ ಸಮಿತಿಯ ಸಂಯೋಜನೆ ಮತ್ತು ಕಾರ್ಯಗಳು.
- ಶಾಲಾ ನಿರ್ವಹಣ ಸಮಿತಿಯು ವಿನ್ಯಾಸಗೊಳಿಸಿ, ಮೇಲ್ವಿಚಾರಣೆ ನಡೆಸಬೇಕಾದ ಶಾಲಾ ಅಭಿವೃದ್ಧಿ ಯೋಜನೆಯ ವಿವರಗಳು.
- ಶಿಕ್ಷಕರ ಅರ್ಹತೆಯ ನಿಯಮಗಳು.

## 3.6.1 ಪೂರ್ವಭಾವಿ :

ಪೂರ್ವಭಾವಿ ವಿಭಾಗವು RTE ನಿಯಮಗಳ ಪ್ರಮುಖ ಪದಗಳ ವ್ಯಾಖ್ಯಾನಕ್ಕೆ ಮೀಸಲಾಗಿದೆ.

ಅ) "ಕಾಯ್ದೆ" ಎಂದರೆ 'ಉಚಿತ ಮತ್ತು ಕಡ್ಡಾಯ ಶಿಕ್ಷಣ ಹಕ್ಕುಗಳ ಕಾಯ್ದೆ 2009'.

ಆ) "ಅಂಗನವಾಡಿ" ಎಂದರೆ ಭಾರತ ಸರ್ಕಾರದ ಮಹಿಳಾ ಮತ್ತು ಮಕ್ಕಳ ಅಭಿವೃದ್ಧಿ ಸಚಿವಾಲಯದ ಸಮಗ್ರ ಶಿಶು ಅಭಿವೃದ್ಧಿ ಯೋಜನೆಯಡಿ ಸ್ಥಾಪಿತವಾದ ಅಂಗನವಾಡಿ ಕೇಂದ್ರ.

ಇ) "ನೇಮಕವಾದ ದಿನಾಂಕ" ಎಂದರೆ ಸರ್ಕಾರದ ಗೆಜೆಟ್‌ನಲ್ಲಿ ಸೂಚಿತವಾದಂತೆ ಕಾಯ್ದೆಯು ಜಾರಿಗೆ ಬರುವ ದಿನಾಂಕ.

ಈ) "ಅಧ್ಯಾಯ", "ವಿಭಾಗ" ಮತ್ತು "ಪರಿಚ್ಛೇದ" ಎಂದರೆ ಅನುಕ್ರಮವಾಗಿ ಕಾಯ್ದೆಯ ಅಧ್ಯಾಯ, ವಿಭಾಗ ಮತ್ತು ಪರಿಚ್ಛೇದ.

ಉ) "ಮಗು" ಎಂದರೆ 6 ರಿಂದ 14 ವರ್ಷ ವಯಸ್ಸಿನ ಯಾವುದೇ ಮಗು.

ಊ) "ವಿದ್ಯಾರ್ಥಿಯ ಸಂಚಿತ ದಾಖಲೆ" ಎಂದರೆ ವ್ಯಾಪಕ ಮತ್ತು ನಿರಂತರ ಕಲಿಕೆಯ ಆಧಾರದ ವಿದ್ಯಾಥಿಯ ಪ್ರಗತಿಯ ದಾಖಲೆ.

ಋ) "ಶಾಲಾ ನಕ್ಷೀಕರಣ" ಎಂದರೆ ಸಾಮಾಜಿಕ ಕಟ್ಟುಪಾಡುಗಳು ಮತ್ತು ಭೌಗೋಳಿಕ ದೂರವನ್ನು ನಿವಾರಿಸಲು ಶಾಲೆಯ ಸ್ಥಾನೀಕರಣವನ್ನು ಯೋಜಿಸುವುದು.

## 3.6.2. ಮಕ್ಕಳ ಉಚಿತ ಮತ್ತು ಕಡ್ಡಾಯ ಶಿಕ್ಷಣದ ಹಕ್ಕುಗಳು :

- ವಿಶೇಷ ತರಬೇತಿ: ವಿಶೇಷವಾಗಿ ನೇಮಕಾತಿ ಹೊಂದಿದ ಶಿಕ್ಷಕರಿಂದ ತಡವಾಗಿ ಪ್ರವೇಶ ಪಡೆದ ಮಕ್ಕಳಿಗೆ ವಿಶೇಷ ತರಬೇತಿ ನೀಡಬೇಕು. ಈ ವಿದ್ಯಾರ್ಥಿಗಳು ತರಗತಿಯ ಇತರ ವಿದ್ಯಾರ್ಥಿಗಳೊಡನೆ ಶೈಕ್ಷಣಿಕವಾಗಿ ಮತ್ತು ಭಾವನಾತ್ಮಕವಾಗಿ ಮಿಳಿತವಾಗಲೆಂಬುದು ಈ ತರಭೇತಿಯ ಉದ್ದೇಶವಾಗಿದೆ. ಈ ತರಭೇತಿಯ ಅವಧಿ ಮೂರು ತಿಂಗಳಾಗಿರಬೇಕು. ಹಿಂದೆ ಉಳಿದಿರುವ ಮಕ್ಕಳಿಗೆ ನೆರವಾಗುವುದು ಶಿಕ್ಷಕರಾಗಿ ನಮ್ಮ ಕರ್ತವ್ಯವಾಗಿದೆ.
- ವಿಭಾಗ 4 ರ ಮೊದಲ ನಿಬಂಧನೆಯ ಸಂಬಂಧ ವಿಶೇಷ ತರಭೇತಿ


  ಶಾಲಾ ನಿರ್ವಹಣ ಮಂಡಳಿ / ಸ್ಥಳೀಯ ಸಂಸ್ಥೆ ವಿಶೇಷ ತರಭೇತಿ ಅಗತ್ಯವಿರುವ ಮಕ್ಕಳನ್ನು ಗುರುತಿಸಿ ಅಂತಹ ತರಭೇತಿಯನ್ನು ಕೆಳಕಂಡಂತೆ ಸಂಘಟಿಸಬೇಕು.

  ವಿಭಾಗ 29 (1) ರಲ್ಲಿ ನಿಗಧಿಪಡಿಸಿರುವ ಶೈಕ್ಷಣಿಕ ಪ್ರಾಧಿಕಾರದಿಂದ ಮಾನ್ಯತೆ ಪಡೆದಿರುವ ವಿಶೇಷವಾಗಿ ವಿನ್ಯಾಸಗೊಳಿಸಿರುವ ವಯಸ್ಸಿಗೆ ತಕ್ಕಂತಹ ಕಲಿಕಾ ಸಾಮಗ್ರಿಗಳ ಆಧಾರದ ಮೇಲೆ ತರಭೇತಿ ಇರಬೇಕು.

Notes

ಈ ತರಭೇತಿಯನ್ನು ಶಾಲಾ ಆವರಣದಲ್ಲಿರುವ ತರಗತಿಗಳಲ್ಲಿ ಅಥವಾ ಸುರಕ್ಷಿತ ವಸತಿ ಸೌಲಭ್ಯಗಳಲ್ಲಿನ ತರಗತಿಗಳ ಮೂಲಕ ನೀಡಬೇಕು. ಇದನ್ನು ಶಾಲೆಯಲ್ಲಿ ಕಾರ್ಯನಿರ್ವಹಿಸುತ್ತಿರುವ ಶಿಕ್ಷಕರು ಅಥವಾ ಈ ಉದ್ದೇಶಕ್ಕಾಗಿಯೇ ವಿಶೇಷವಾಗಿ ನೇಮಕವಾಗಿರುವ ಶಿಕ್ಷಕರು ನೀಡಬಹುದು. ತರಭೇತಿಯ ಅವಧಿ ಕನಿಷ್ಠ ಮೂರು ತಿಂಗಳು. ಕಲಿಕೆಯ ಪ್ರಗತಿಯ ನಿಯತಕಾಲಿಕ ಮೌಲ್ಯಮಾಪನದ ಆಧಾರದ ಮೇಲೆ ಗರಿಷ್ಠ ಎರಡು ವರ್ಷಗಳವರೆಗೆ ಇದನ್ನು ವಿಸ್ತರಿಸಬಹುದು. ಮಗುವು ತನ್ನ ವಯಸ್ಸಿಗೆ ಅನುಗುಣವಾದ ತರಗತಿಗೆ ಸೇರಿದ ಮೇಲೆ ವಿಶೇಷ ತರಭೇತಿ ಪಡೆದ ನಂತರವೂ ನಿರಂತರವಾಗಿ ಶಿಕ್ಷಕರು ವಿಶೇಷ ನಿಗಾವಹಿಸಬೇಕು. ತರಗತಿಯ ಇತರ ವಿದ್ಯಾರ್ಥಿಗಳೊಡನೆ ಶೈಕ್ಷಣಿಕವಾಗಿ ಹಾಗೂ ಭಾವನಾತ್ಮಕವಾಗಿ ಮಿಲನವಾಗಲು ಮಗುವಿನ ಬಗ್ಗೆ ವಿಶೇಷ ನಿಗಾವಹಿಸಬೇಕಾಗುತ್ತದೆ.

## 3.6.3. ರಾಜ್ಯ ಸರ್ಕಾರದ ಕರ್ತವ್ಯಗಳು :



ಸ್ಥಳೀಯ ಪ್ರಾಧಿಕಾರ : 1 ರಿಂದ 5 ನೇ ತರಗತಿಯ ವಿದ್ಯಾರ್ಥಿಗಳಿಗೆ ಮಗುವಿನ ಮನೆಯಿಂದ 1 ಕಿಲೋಮೀಟರ್ ಒಳಗಿನ ನಡೆಯುವ ದೂರದಲ್ಲಿ ಹಾಗೂ 6 ರಿಂದ 8ನೇ ತರಗತಿಯ ವಿದ್ಯಾರ್ಥಿಗಳಿಗೆ ಮಗುವಿನ ಮನೆಯಿಂದ 3 ಕಿ.ಮೀ. ನಡಿಗೆಯ ದೂರದೊಳಗೆ ಶಾಲೆಯನ್ನು ರಾಜ್ಯಸರ್ಕಾರವು ಸ್ಥಾಪಿಸಬೇಕು. ಒಂದು ನಿರ್ದಿಷ್ಟ ಪ್ರದೇಶದಲ್ಲಿ ಈಗಾಗಲೇ ಶಾಲೆಗಳು ಇದ್ದಲ್ಲಿ, ಅಗತ್ಯಕ್ಕನುಗುಣವಾಗಿ ಪ್ರಾಥಮಿಕ ಶಾಲೆಗಳ ಜಾಲವನ್ನು ನಿರ್ಮಿಸಲು ನಮ್ಮ ದೇಶದ ಹಲವು ರಾಜ್ಯಗಳಿಗೆ ಸಾಧ್ಯವಾಗಿಲ್ಲವೆಂಬುದು ನಿಮಗೆ ತಿಳಿದಿದೆ. ಅಗತ್ಯಕ್ಕನುಗುಣವಾಗಿ ಸಾರಿಗೆ ಮತ್ತು ವಸತಿ ಸೌಲಭ್ಯಗಳನ್ನು ಸಂಬಂಧಪಟ್ಟ ರಾಜ್ಯ ಸರ್ಕಾರಗಳು ಒದಗಿಸಬೇಕು.

ಈ ವಿಷಯಕ್ಕೆ ಸಂಬಂಧಿಸಿದಂತೆ ಕೆಲವು ರಾಜ್ಯ ಸರ್ಕಾರಗಳು ಮಾಡಿರುವ ಪ್ರಯತ್ನವನ್ನು ನಾವೆಲ್ಲ ಶ್ಲಾಘಿಸಬೇಕು. ಶಾಲೆಗೆ ಬರಲು ಅನುವಾಗುವಂತೆ ಕೆಲವು ರಾಜ್ಯಗಳು ಹೆಣ್ಣು ಮಕ್ಕಳಿಗೆ ಉಚಿತ ಸಾರಿಗೆ ಪಾಸ್‌ಗಳನ್ನು ನೀಡುತ್ತಿದ್ದರೆ, ಇನ್ನು ಕೆಲವು ರಾಜ್ಯಗಳು ಬೈಸಿಕಲ್‌ಗಳನ್ನು ನೀಡುತ್ತಿವೆ. ನೆರೆಹೊರೆಯ ಶಾಲೆಗಳನ್ನು ಸ್ಥಾಪಿಸುವ ಸಲುವಾಗಿ ರಾಜ್ಯಸರ್ಕಾರ / ಸ್ಥಳೀಯ ಸಂಸ್ಥೆ ಶಾಲಾ ನಕ್ಷೀಕರಣವನ್ನು ಕೈಗೊಳ್ಳಲಿದೆ. ವಿಶೇಷ ಅಗತ್ಯವಿರುವ ಮಕ್ಕಳನ್ನು ಒಳಗೊಂಡಂತೆ ಎಲ್ಲಾ ರೀತಿಯ ಮಕ್ಕಳನ್ನು ಪ್ರಾಧಿಕಾರಗಳು ಗುರುತಿಸಬೇಕಾಗಿದೆ.

Notes

### 3.6.4 ದಾಖಲೆಗಳ ನಿರ್ವಹಣೆ :

ಸ್ಥಳೀಯ ಪ್ರಾಧಿಕಾರವು ತನ್ನ ವ್ಯಾಪ್ತಿಯಲ್ಲಿರುವ ಮನೆಗಳ ಸಮೀಕ್ಷೆ ಮಾಡುವ ಮೂಲಕ ಎಲ್ಲಾ ಮಕ್ಕಳು ಹುಟ್ಟಿದಾಗಿನಿಂದ ಅವರಿಗೆ 14 ವರ್ಷ ತುಂಬುವವರೆಗಿನ ದಾಖಲೆಯನ್ನು ನಿರ್ವಹಿಸಬೇಕು ಹಾಗೂ ಈ ದಾಖಲೆಯನ್ನು ಪ್ರತಿವರ್ಷ ಪರಿಷ್ಕರಿಸಬೇಕು. ಇಲ್ಲಿ ಒಬ್ಬ ಶಿಕ್ಷಕನಾಗಿ ನಮ್ಮ ಪಾತ್ರ ತುಂಬಾ ಮುಖ್ಯವಾದುದು. ಮಗುವಿನ ಹಕ್ಕುಗಳಿಗೆ ಸಂಬಂಧಿಸಿದ ಯಾವುದೇ ಉಲ್ಲಂಘನೆಯನ್ನು ಸ್ಥಳೀಯ ಪ್ರಾಧಿಕಾರದ ಗಮನಕ್ಕೆ ತರುವುದು ನಮ್ಮ ಕರ್ತವ್ಯವಾಗಿದೆ. ಅದರಲ್ಲೂ ಮುಖ್ಯವಾಗಿ ಮಕ್ಕಳ ದೈಹಿಕ ಮತ್ತು ಮಾನಸಿಕ ಹಿಂಸೆ, ಪ್ರವೇಶಾತಿ ನಿರಾಕರಣೆ ಮುಂತಾದವುಗಳನ್ನು ಗಮನಕ್ಕೆ ತರಬೇಕು. ಈ ವಿಷಯಕ್ಕೆ ಸಂಬಂಧಿಸಿದಂತೆ ನಾವು ತುಂಬಾ ನಿಗಾ ವಹಿಸಬೇಕು. ಅಗತ್ಯಗಳನ್ನು ಗುರುತಿಸುವುದು, ಯೋಜನೆಯೊಂದನ್ನು ಸಿದ್ಧಪಡಿಸುವುದು ಹಾಗೂ RTE ಕಾಯ್ದೆಯ ನಿಬಂಧನೆಗಳ ಅನುಷ್ಠಾನದ ಮೇಲೆ ನಿಗಾ ಇರಿಸುವುದನ್ನು ನಾವು ಮಾಡಬೇಕು.

ಸ್ಥಳೀಯ ಪ್ರಾಧಿಕಾರವು ಮಧ್ಯಾಹ್ನದ ಬಿಸಿಯೂಟದ ಅನುಷ್ಠಾನದ ಬಗ್ಗೆ ನಿಗಾವಹಿಸಬೇಕಾಗುತ್ತದೆ. ನಿಮಗೆ ತಿಳಿದಿರುವಂತೆ ಈ ಯೋಜನೆಯು ಅನೇಕ ರಾಜ್ಯಗಳಲ್ಲಿ ಈಗಾಗಲೇ ಅಸ್ತಿತ್ವದಲ್ಲಿದೆ. ಈ ಯೋಜನೆಯಲ್ಲಿನ ಅಕ್ರಮಗಳ ಬಗ್ಗೆ ನಾವು ಆಗಿಂದಾಗ್ಗೆ ಪ್ರತಿಕೆಗಳಲ್ಲಿ ಬರುವುದನ್ನು ಓದುತ್ತಿರುತ್ತೇವೆ. ನಮ್ಮ ಮಟ್ಟದಲ್ಲಿ ಈ ರೀತಿಯ ಯಾವುದೇ ಅಕ್ರಮಗಳನ್ನು ತಡೆಯುವುದು ನಮ್ಮ ಕರ್ತವ್ಯವಾಗಿದೆ. ಶಾಲೆಯ ನಿರ್ವಹಣ ಸಮಿತಿಯು ಮೂರು ವರ್ಷಗಳ ಅವಧಿಗೆ ಶಾಲಾ ಅಭಿವೃದ್ಧಿ ಯೋಜನೆಯನ್ನು ಸಿದ್ಧಪಡಿಸಬೇಕು. ಈ ಯೋಜನೆಯು ಮೂಲಭೂತ ಸೌಲಭ್ಯಗಳ ಅಗತ್ಯಗಳು, ಮಾನವ ಸಂಪನ್ಮೂಲ ಅಗತ್ಯಗಳು ಅಂದರೆ, ಮುಖ್ಯೋಪಾಧ್ಯಾಯರು ಮತ್ತು ಶಿಕ್ಷಕರು ಮತ್ತು ಅಗತ್ಯಕ್ಕನುಗುಣವಾಗಿ ಹೆಚ್ಚುವರಿ ಹಣಕಾಸಿನ ಅಗತ್ಯಗಳನ್ನು ಒಳಗೊಂಡಿರಬೇಕು. ಈ ಯೋಜನೆಯನ್ನು ಸಿದ್ಧಪಡಿಸಲು ನಿರ್ವಹಣ ಸಮಿತಿಗೆ ನಾವು ನೆರವಾಗಬಹುದು.

### 3.6.5 ಶಾಲಾ ಶಿಕ್ಷಕರ ಜವಾಬ್ದಾರಿಗಳು:

ರಾಜ್ಯ ಸರ್ಕಾರದಿಂದ ನಿಯಂತ್ರಿಸಲ್ಪಡುವ ಅಥವಾ ಮಾನ್ಯತೆ ಪಡೆದಿರುವ ಪ್ರತಿಯೊಂದು ಶಾಲೆಯು RTE ನಿಬಂಧನೆಗಳನ್ನು ಅನುಷ್ಠಾನಗೊಳಿಸಲು ಸಹಾಯ ಮಾಡಬೇಕು. ಶಾಲೆಯನ್ನು ಯಾವುದೇ ವ್ಯಕ್ತಿ ಅಥವಾ ಗುಂಪು ಅಥವಾ ಸಂಘಟನೆಯ ಲಾಭಕ್ಕಾಗಿ ನಡೆಸುತ್ತಿಲ್ಲವೆಂಬುದನ್ನು ನಾವು ಯಾವಾಗಲೂ ಮರೆಯಬಾರದು. ಜಿಲ್ಲಾ ಶಿಕ್ಷಣಾಧಿಕಾರಿಯ (DEO) ಪಾತ್ರ ತುಂಬಾ ಮುಖ್ಯವಾದುದು. RTE ಕಾಯ್ದೆಯ ನಿಬಂಧನೆಗಳನ್ನು ಪರಿಣಾಮಕಾರಿಯಾಗಿ ಅನುಷ್ಠಾನಗೊಳಿಸುವ ರಕ್ಷಕನಾಗಿ ಅವನು ಪಾತ್ರ ನಿರ್ವಹಿಸಬೇಕಾಗುತ್ತದೆ. ಶಾಲೆಯು DEO ನ ಸೂಚನೆಗಳ ಅನುಸಾರ ಕಾರ್ಯನಿರ್ವಹಿಸಬೇಕಾಗುತ್ತದೆ. ಒಬ್ಬ ಶಿಕ್ಷಕನಾಗಿ ನಾವು ಪ್ರಾಥಮಿಕ ಶಿಕ್ಷಣದ ಸಾರ್ವತ್ರೀಕರಣದಲ್ಲಿ ಪ್ರಮುಖ ಪಾತ್ರ ವಹಿಸಬೇಕಾಗುತ್ತದೆ. ಏಕೆಂದರೆ RTE ಕಾಯ್ದೆಯ ಅನುಷ್ಠಾನದಲ್ಲಿ ನಮ್ಮನ್ನು ಪ್ರಮುಖ ಮಾನವ ಸಂಪನ್ಮೂಲವಾಗಿ ಪರಿಗಣಿಸಲಾಗುತ್ತದೆ.

ನಮಗೆ ಮತ್ತು ನಮ್ಮ ಶಾಲೆಗೆ ವಹಿಸಿದ ಜವಾಬ್ದಾರಿಗಳನ್ನು ಪಾಲಿಸುವಲ್ಲಿ ನಾವು ವಿಫಲರಾದಲ್ಲಿ ನಮ್ಮ ಶಾಲೆಯ ಮಾನ್ಯತೆ ರದ್ದಾಗುವ ಸಾಧ್ಯತೆಯಿರುತ್ತದೆ. ನಾವು ಕೆಲಸ ಮಾಡುವ ಪ್ರದೇಶದಲ್ಲಿರುವ ಎಲ್ಲಾ ಅರ್ಹ ಮಕ್ಕಳನ್ನು ಗುರುತಿಸಿ, ಪಟ್ಟಿಮಾಡಿ ನೆರೆಹೊರೆಯ ಶಾಲೆಯನ್ನು ಗುರುತಿಸಿ, ಆ ಶಾಲೆ ಮಗುವಿಗೆ ಲಭ್ಯವಾಗುವಂತೆ ಮಾಡಬೇಕಾಗುತ್ತದೆ.

### 3.6.6 ಶಾಲಾ ನಿರ್ವಹಣಾ ಸಮಿತಿ :

ನಿಮಗೆ ತಿಳಿದಿರುವಂತೆ ನಿರ್ವಹಣೆಯು ಶಿಕ್ಷಣದ ಒಂದು ಪ್ರಮುಖ ಆಯಾಮವಾಗಿದೆ. ಎಲ್ಲಾ ಮಕ್ಕಳಿಗೆ ಪ್ರಾಥಮಿಕ ಶಿಕ್ಷಣವನ್ನು ನೀಡಬೇಕಾಗದರೆ ನಮ್ಮ ಶಾಲೆಗಳನ್ನು ನಾವು ಇನ್ನೂ ಚೆನ್ನಾಗಿ ನಿರ್ವಹಿಸಬೇಕಾಗುತ್ತದೆ. RTE ಕಾಯ್ದೆಯ ನಿಬಂಧನೆಯ ಪ್ರಕಾರ ಮುಖ್ಯವಾಗಿ ಶಾಲಾ ಮಕ್ಕಳ: ಪೋಷಕರನ್ನು ಒಳಗೊಂಡಿರುವ ಶಾಲಾ ನಿರ್ವಹಣಾ ಸಮಿತಿಯನ್ನು ರಚಿಸಬೇಕು. ಪೋಷಕರ ಬಲ ಶೇ. 75 ರಷ್ಟಿರಬೇಕು. ಸಮಿತಿಯ ಕೆಲವು ಮುಖ್ಯ ಕಾರ್ಯಗಳು ಈ ಕೆಳಕಂಡಂತಿವೆ.

- ಶಿಕ್ಷಕರಿಗೆ ಶೈಕ್ಷಣಿಕೇತರ ಕರ್ತವ್ಯಗಳ ಹೊರೆಯಾಗದಂತೆ ನಿಗಾವಹಿಸಬೇಕು. (ಜನಗಣತಿ ಮತ್ತು ಚುನಾವಣೆ ಕರ್ತವ್ಯಗಳನ್ನು ಹೊರತುಪಡಿಸಿ)

Notes

- ತಮ್ಮ ಸಾಮಾನ್ಯ ಕರ್ತವ್ಯದ ಜೊತೆಗೆ ಶಿಕ್ಷಕರು ಪ್ರತಿ ವಿದ್ಯಾರ್ಥಿಯ ಸಂಚಿತ ದಾಖಲೆಯನ್ನು (Cumulative Record) ಒಳಗೊಂಡ ಫೈಲ್‌ನ್ನು ನಿರ್ವಹಿಸಬೇಕು. ಆ ವರ್ಷದ ಪೂರ್ಣಗೊಳಿಸಿದ ಪ್ರಮಾಣಪತ್ರವನ್ನು ಇದರ ಆಧಾರದ ಮೇಲೆ ನೀಡಲು ಇದರಿಂದ ಸಾಧ್ಯವಾಗುತ್ತದೆ. ತರಭೇತಿ ಕಾರ್ಯಕ್ರಮಗಳು ಪಠ್ಯಕ್ರಮ ರಚನೆ, ತರಭೇತಿ ಮಾದರಿಗಳ ತಯಾರಿ ಮತ್ತು ಪಠ್ಯಪುಸ್ತಕ ಅಭಿವೃದ್ಧಿ ಕಾರ್ಯಗಳಲ್ಲಿ ನಾವು ಭಾಗವಹಿಸಬೇಕಾಗುತ್ತದೆ.
- ಶಿಕ್ಷಕರಿಗಾಗಿ ಒಂದು ದೂರು ನಿವಾರಣಾ ವ್ಯವಸ್ಥೆ ಇರಬೇಕು. ರಾಜ್ಯಸರ್ಕಾರವು ಶಾಲಾ ಟ್ರಿಬ್ಯೂನಲ್‌ಗಳನ್ನು ರಾಜ್ಯ, ಜಿಲ್ಲೆ, ಮತ್ತು ಬ್ಲಾಕ್ ಮಟ್ಟದಲ್ಲಿ ರಚಿಸಬೇಕು.
- ರಾಜ್ಯ ಅಥವಾ ಸ್ಥಳೀಯ ಪ್ರಾಧಿಕಾರವು ವಿದ್ಯಾರ್ಥಿ – ಶಿಕ್ಷಕ ಅನುಪಾತವನ್ನು ನಿರ್ವಹಿಸಬೇಕು.

**ಚಟುವಟಿಕೆ – 6**

1) ನಿಮ್ಮ ಅಭಿಪ್ರಾಯದಲ್ಲಿ ಒಬ್ಬ ಶಿಕ್ಷಕ ಶಾಲೆಯ ಆಡಳಿತ ಮತ್ತು ನಿರ್ವಹಣೆಯಲ್ಲಿ ಸಕ್ರಿಯವಾಗಿ ಹೇಗೆ ಭಾಗವಹಿಸಬಹುದು?

..........................................................................................

..........................................................................................

..........................................................................................

2) ನೀವು ಶಾಲಾ ನಿರ್ವಹಣಾ ಸಮಿತಿಯ ಕಾರ್ಯಗಳನ್ನು ಅಧ್ಯಯನ ಮಾಡಿದ್ದೀರಿ. ಬೇರೆ ಯಾವ ಕಾರ್ಯಗಳನ್ನು ನೀವು ಸಲಹೆ ಮಾಡುತ್ತೀರಾ?

..........................................................................................

..........................................................................................

..........................................................................................

## 3.6.7. ಶಿಕ್ಷಕರು :

ಸಂಬಂಧಪಟ್ಟ ರಾಜ್ಯದ ಶೈಕ್ಷಣಿಕ ಪ್ರಾಧಿಕಾರವು ಶಿಕ್ಷಕರ ವಿದ್ಯಾರ್ಹತೆಯನ್ನು ನಿಗದಿಪಡಿಸುತ್ತದೆ. ಈ ಪ್ರಾಧಿಕಾರವು ನಿಗದಿಪಡಿಸಿದ ಕನಿಷ್ಠ ವಿದ್ಯಾರ್ಹತೆಯು ಎಲ್ಲಾ ಶಾಲೆಗಳಿಗೆ ಅನ್ವಯಿಸುತ್ತದೆ. ತರಭೇತಿ ಹೊಂದಿದ ಶಿಕ್ಷಕರ ಕೊರತೆಯಿರುವ ರಾಜ್ಯದಲ್ಲಿ ನೇಮಕಾತಿಗೆ ಬೇಕಾದ ವಿದ್ಯಾರ್ಹತೆಯನ್ನು ಸಡಿಲಿಸಬಹುದು. ಆದರೆ ಶಿಕ್ಷಕರು ಕನಿಷ್ಠ ಶೈಕ್ಷಣಿಕ ವಿದ್ಯಾರ್ಹತೆಯನ್ನು ಹೊಂದಿರತಕ್ಕದ್ದು. (ಉದಾಹರಣೆ ಹೈಯರ್ ಸೆಕೆಂಡರಿ)

**ಚಟುವಟಿಕೆ–7**

1) ಯಾವುದೇ ಸನ್ನಿವೇಶದಲ್ಲಿ ಶಿಕ್ಷಕರ ವಿದ್ಯಾರ್ಹತೆಯನ್ನು ಸಡಿಲಿಸುವ ಆಲೋಚನೆಯನ್ನು ನೀವು ಒಪ್ಪುವಿರಾ? ಕಾರಣಗಳನ್ನು ನೀಡಿ ಮತ್ತು ನಿಮ್ಮ ಉತ್ತರವನ್ನು ಸಮರ್ಥಿಸಿಕೊಳ್ಳಿ.

..........................................................................................

..........................................................................................

..........................................................................................

Notes

## 3.6.8. ಪಠ್ಯಕ್ರಮ ಮತ್ತು ಪ್ರಾಥಮಿಕ ಶಿಕ್ಷಣವನ್ನು ಪೂರ್ಣಗೊಳಿಸುವಿಕೆ.

ರಾಜ್ಯ ಸರ್ಕಾರವು 'ರಾಜ್ಯ ಶೈಕ್ಷಣಿಕ ಸಂಶೋಧನೆ ಮತ್ತು ತರಬೇತಿ ಪರಿಷತ್' (ಅಥವಾ ಅದಕ್ಕೆ ಸರಿಸಮಾನ) ನ ಸ್ಥಾಪನೆಗೆ ಅಧಿಸೂಚನೆ ಹೊರಡಿಸಬೇಕು. ಈ ಪರಿಷತ್ ಒಂದು ಶೈಕ್ಷಣಿಕ ಪ್ರಾಧಿಕಾರವಾಗಿ ಪಠ್ಯಕ್ರಮ, ಪಠ್ಯಪುಸ್ತಕಗಳು ಮತ್ತು ಇತರೆ ಕಲಿಕಾ ಸಾಮಗ್ರಿಗಳನ್ನು ರೂಪಿಸಬೇಕು. ಸೇವೆಯಲ್ಲಿರುವ ಶಿಕ್ಷಕರುಗಳಿಗೆ ತರಭೇತಿ ಕಾರ್ಯಕ್ರಮಗಳನ್ನು ಇದು ಅಭಿವೃದ್ಧಿ ಪಡಿಸಬೇಕು. ಅಲ್ಲದೆ ಪಠ್ಯಕ್ರಮ ಮತ್ತು ವ್ಯಾಪಕ ಮತ್ತು ನಿರಂತರ ಮೌಲ್ಯಮಾಪನ (CCE) ವನ್ನು ಅನುಷ್ಠಾನಗೊಳಿಸಲು ಸೂಚನೆಗಳನ್ನು ವಿನ್ಯಾಸಗೊಳಿಸಿ, ಸಿದ್ಧಪಡಿಸಬೇಕು.

ಪ್ರಾಥಮಿಕ ಶಿಕ್ಷಣ ಪೂರ್ಣಗೊಂಡ ಒಂದು ತಿಂಗಳೊಳಗಾಗಿ ಎಲಿಮೆಂಟರಿ ಶಿಕ್ಷಣ ಪೂರ್ಣಗೊಂಡ ಪ್ರಮಾಣ ಪತ್ರವನ್ನು ಶಾಲೆ/ಬ್ಲಾಕ್/ಜಿಲ್ಲಾ ಮಟ್ಟದಲ್ಲಿ ನೀಡಬೇಕು.

ಎಲಿಮೆಂಟರಿ ಶಿಕ್ಷಣ ಪೂರ್ಣಗೊಳಿಸಿದ ಪ್ರಮಾಣ ಪತ್ರವು ಮಗುವು ನಿಗದಿತ ಪಠ್ಯಕ್ರಮದ ಪ್ರಕಾರ ಎಲ್ಲಾ ಕೋರ್ಸ್‌ಗಳನ್ನೂ ಪೂರ್ಣಗೊಳಿಸಿದೆಯೆಂದು ದೃಢೀಕರಿಸಬೇಕು. ಇದು ವಿದ್ಯಾರ್ಥಿಯ ಸಂಚಿತ ದಾಖಲೆಯನ್ನು ಸಹ ಪ್ರತಿಬಿಂಬಿಸಬೇಕು. ಇದಲ್ಲದೆ ನಿಗದಿತ ಪಠ್ಯಕ್ರಮದಾಚೆಗೆ ಚಟುವಟಿಕೆಗಳಲ್ಲಿ ಮಗುವಿನ ಸಾಧನೆಯನ್ನು ತಿಳಿಸುವಂತಿರಬೇಕು. ಸಂಗೀತ, ನೃತ್ಯ, ಸಾಹಿತ್ಯ, ಕ್ರೀಡೆ ಮುಂತಾದ ಚಟುವಟಿಕೆಗಳಲ್ಲಿನ ಸಾಧನೆಯನ್ನು ಇದು ಒಳಗೊಂಡಿರಬಹುದು.

**ಚಟುವಟಿಕೆ – 8**

1) 'ಶಿಕ್ಷಣ ಒಂದು ಮೂಲಭೂತ ಹಕ್ಕು' ಈ ಹಿನ್ನಲೆಯಲ್ಲಿ ಸಾಮಾನ್ಯ ಮತ್ತು ವಿಶೇಷ ಮಕ್ಕಳಿಗಾಗಿ ಪಠ್ಯಕ್ರಮದ ಅಗತ್ಯತೆಯನ್ನು ಸಮರ್ಥಿಸಿ.

.......................................................................................................

.......................................................................................................

.......................................................................................................

2) ಪ್ರಸಕ್ತ ಶಾಲಾ ಆಡಳಿತ ವ್ಯವಸ್ಥೆಯಲ್ಲಿ ನಿಮಗೆ ಅನಿಸಿದ ಮಿತಿಗಳು ಯಾವುವು?

.......................................................................................................

.......................................................................................................

.......................................................................................................

3) ಮಕ್ಕಳ ಪ್ರಗತಿಯನ್ನು ಮೌಲ್ಯಮಾಪನ ಮಾಡಲು ವ್ಯಾಪಕ ಮತ್ತು ನಿರಂತರ ಮೌಲ್ಯಮಾಪನ (CCE) ಯೋಜನೆಯ ಅಗತ್ಯತೆಯನ್ನು ಸಮರ್ಥಿಸಿ.

.......................................................................................................

.......................................................................................................

.......................................................................................................

Notes

### 3.6.9 ಮಕ್ಕಳ ಹಕ್ಕುಗಳ ಸಂರಕ್ಷಣೆ:

ದೇಶದ ಅನೇಕ ರಾಜ್ಯಗಳು ಮಕ್ಕಳ ಹಕ್ಕುಗಳ ಸಂರಕ್ಷಣೆಯ ರಾಜ್ಯ ಆಯೋಗಗಳನ್ನು ರಚಿಸಿವೆ. ಈ ಆಯೋಗವನ್ನು ಹೊಂದಿರದ ರಾಜ್ಯಗಳು ಅವುಗಳನ್ನು ಸ್ಥಾಪಿಸಲು ತಕ್ಷಣ ಕ್ರಮಕೈಗೊಳ್ಳಬೇಕು. ಆಯೋಗ ಸ್ಥಾಪನೆಯಾಗುವವರೆಗೆ ಶಿಕ್ಷಣದ ಹಕ್ಕು ಸಂರಕ್ಷಣೆಯ ಪ್ರಾಧಿಕಾರ (Right to Education Protection Authority- REPA)ಎಂಬ ಮಧ್ಯಂತರ ಪ್ರಾಧಿಕರವನ್ನು ಸ್ಥಾಪಿಸಬೇಕು. ಆಯೋಗಗಳು ಹಾಗೂ ಪ್ರಾಧಿಕಾರಗಳ ಸ್ಥಾಪನೆಯ ಹೊರತಾಗಿಯೂ ಎಲ್ಲಾ ಅಂಶಗಳಲ್ಲಿಯೂ ಬದ್ಧತೆ ಮತ್ತು ಸಹಕಾರದ ಕೊರತೆಯಿಂದಾಗಿ ಶಿಕ್ಷಣದ ಹಕ್ಕುಗಳ ಉದ್ದೇಶಗಳನ್ನು ಸಂಪೂರ್ಣವಾಗಿ ಸಾಧಿಸಲಾಗಿಲ್ಲ. ಒಬ್ಬ ಶಿಕ್ಷಕನಾಗಿ RTE ಕಾಯ್ದೆ 2009 ರ ಗುರಿಗಳನ್ನು ಸಾಧಿಸಲು ಪ್ರಾಮಾಣಿಕವಾಗಿ ಕಾರ್ಯನಿರ್ವಹಿಸುವುದು ಹಾಗೂ ಸಹಕರಿಸುವುದು ನಮ್ಮ ಆದ್ಯ ಕರ್ತವ್ಯವಾಗಿದೆ.

**ಹಕ್ಕುಗಳ ವಿಧಗಳು:**

ಮಕ್ಕಳ ಹಕ್ಕುಗಳನ್ನು ಹಲವು ವಿಧಗಳಲ್ಲಿ ವ್ಯಾಖ್ಯಾನಿಸಲಾಗಿದೆ. ಇವು ನಾಗರಿಕ, ಸಾಂಸ್ಕೃತಿಕ, ಆರ್ಥಿಕ, ಸಾಮಾಜಿಕ ಮತ್ತು ರಾಜಕೀಯ ಹೀಗೆ ಹಲವು ಆಯಾಮಗಳನ್ನು ಒಳಗೊಂಡಿವೆ. ಈ ಹಕ್ಕುಗಳನ್ನು ಎರಡು ಸಾಮಾನ್ಯ ರೀತಿಯ ಹಕ್ಕುಗಳಾಗಿ ವರ್ಗೀಕರಿಸಬಹುದು.

1) ಕಾನೂನಡಿಯಲ್ಲಿ ಒಬ್ಬ ಸ್ವಾಯತ್ತ ವ್ಯಕ್ತಿಯಾಗಿ ಮಗುವಿಗಿರುವ ಹಕ್ಕುಗಳು; ಮತ್ತು
2) ಮಕ್ಕಳು ಅವಲಂಬಿತರಾಗಿರುವ ಕಾರಣದಿಂದ ಅವರ ಮೇಲಾಗುವ ಹಾನಿಗಳಿಂದ ಅವರನ್ನು ಸಂರಕ್ಷಿಸಬೇಕಾದ ಸಮಾಜದ ಹೊಣೆ.

ಇವುಗಳನ್ನು 'ಸಬಲೀಕರಣದ ಹಕ್ಕು' ಮತ್ತು 'ಸಂರಕ್ಷಣೆಯ ಹಕ್ಕು' ಎಂದು ಕರೆಯಲಾಗುತ್ತದೆ. ಕೆನಡಾದ ಒಂದು ಸಂಸ್ಥೆ ಮಕ್ಕಳ ಹಕ್ಕುಗಳನ್ನು ಮೂರು ವರ್ಗಗಳಾಗಿ ವರ್ಗೀಕರಿಸುತ್ತದೆ.

- **ನಿಬಂಧನೆ :** ಮಕ್ಕಳು ಒಂದು ಯಥೋಚಿತವಾದ ಜೀವನಮಟ್ಟ, ಆರೋಗ್ಯರಕ್ಷಣೆ, ಶಿಕ್ಷಣ ಮತ್ತು ಸೇವೆಗಳು, ಆಟ ಮತ್ತು ಮನರಂಜನೆಯ ಹಕ್ಕುಗಳನ್ನು ಹೊಂದಿರುತ್ತಾರೆ. ಸಮತೂಕದ ಆಹಾರ, ನಿದ್ರಿಸಲು ಬೆಚ್ಚಗಿರುವ ಹಾಸಿಗೆ, ಶಾಲಾ ಲಭ್ಯತೆ ಇವುಗಳನ್ನು ಇದು ಒಳಗೊಂಡಿದೆ.
- **ಸಂರಕ್ಷಣೆ :** ಮಕ್ಕಳು ದುರುಪಯೋಗ, ನಿರ್ಲಕ್ಷ್ಯ, ಶೋಷಣೆ ಮತ್ತು ತಾರತಮ್ಯಗಳಿಂದ ಸಂರಕ್ಷಣೆಯ ಹಕ್ಕುಗಳನ್ನು ಹೊಂದಿರುತ್ತಾರೆ. ಮಕ್ಕಳು ಆಟವಾಡಲು ಸಂರಕ್ಷಿತ ಪ್ರದೇಶಗಳು, ರಚನಾತ್ಮಕ ಮಕ್ಕಳ ಪಾಲನೆಯ ನಡವಳಿಕೆ , ಮಕ್ಕಳಲ್ಲಿರುವ ಬೆಳವಣಿಗೆಯ ಸಾಮರ್ಥ್ಯವನ್ನು ಒಪ್ಪಿಕೊಳ್ಳುವುದನ್ನು ಇವು ಒಳಗೊಂಡಿವೆ.
- **ಭಾಗವಹಿಸುವಿಕೆ :** ಮಕ್ಕಳು ಸಮಾಜದಲ್ಲಿ ಭಾಗವಹಿಸುವಿಕೆಯು ತಮಗಾಗಿಯೆ ಕಾರ್ಯಕ್ರಮಗಳು ಮತ್ತು ಸೇವೆಗಳನ್ನು ಹೊಂದುವ ಕಾರ್ಯಕ್ರಮಗಳನ್ನು ಹೊಂದಿರುತ್ತಾರೆ. ಗ್ರಂಥಾಲಯಗಳು ಮತ್ತು ಸಾಮಾಜಿಕ ಕಾರ್ಯಕ್ರಮಗಳು, ಯುವ ಧ್ವನಿ ಚಟುವಟಿಕೆಗಳು ಮತ್ತೆ ನಿರ್ಧಾರ ಕೈಗೊಳ್ಳುವಲ್ಲಿ ಮಕ್ಕಳನ್ನು ಒಳಗೊಳ್ಳುವುದನ್ನು ಇವು ಒಳಗೊಂಡಿವೆ.

  ಇದರಂತೆಯೇ ಮಕ್ಕಳ ಹಕ್ಕುಗಳ ಮಾಹಿತಿ ಜಾಲ (Children Rights Information Network- CRIN) ಹಕ್ಕುಗಳನ್ನು ಎರಡು ಗುಂಪುಗಳಲ್ಲಿ ವರ್ಗೀಕರಿಸುತ್ತದೆ.
- **ಆರ್ಥಿಕ, ಸಾಮಾಜಿಕ ಮತ್ತು ಸಾಂಸ್ಕೃತಿ ಹಕ್ಕುಗಳು:** ಈ ಹಕ್ಕುಗಳು ಮಾನವನ ಮೂಲಭೂತ ಅಗತ್ಯತೆಗಳಾದ ಆಹಾರ, ವಸತಿ, ಶಿಕ್ಷಣ, ಆರೋಗ್ಯರಕ್ಷಣೆ, ಉದ್ಯೋಗ, ಮುಂತಾದವುಗಳಿಗೆ ಸಂಬಂಧಿಸಿದೆ. ಶಿಕ್ಷಣದ ಹಕ್ಕು, ಯಥೋಚಿತವಾದ ವಸತಿ, ಆಹಾರ, ನೀರು, ಉತ್ತಮ ಆರೋಗ್ಯ, ಕೆಲಸದ ಹಕ್ಕು, ಕೆಲಸದಲ್ಲಿನ ಹಕ್ಕುಗಳು, ಅಲ್ಲದೆ ಅಲ್ಪಸಂಖ್ಯಾತರು ಮತ್ತು ಸ್ಥಳೀಯ ಜನರ, ಸಾಂಸ್ಕೃತಿಕ ಹಕ್ಕುಗಳನ್ನು ಇದು ಒಳಗೊಂಡಿದೆ.
- **ಪರಿಸರ, ಸಾಂಸ್ಕೃತಿಕ ಮತ್ತು ಅಭಿವೃದ್ಧಿ ಹಕ್ಕುಗಳು :** ಇವುಗಳನ್ನು ಕೆಲವೊಮ್ಮೆ "ಮೂರನೇ ತಲೆಮಾರಿನ ಹಕ್ಕುಗಳು" ಎಂದು ಕರೆಯಲಾಗುತ್ತದೆ.

Notes

ಇವು ಸುರಕ್ಷಿತ ಮತ್ತು ಆರೋಗ್ಯಯುತ ಪರಿಸರದಲ್ಲಿ ಬದುಕುವ ಹಕ್ಕು ಹಾಗೂ ಜನರ ಗುಂಪುಗಳು ಹೊಂದಿರುವ ಸಾಂಸ್ಕೃತಿಕ ರಾಜಕೀಯ ಮತ್ತು ಆರ್ಥಿಕಾಭಿವೃದ್ಧಿಯ ಹಕ್ಕುಗಳನ್ನು ಒಳಗೊಂಡಿದೆ.

ಪಾಂಡಿತ್ಯಪೂರ್ಣ ಅಧ್ಯಯನವು ಸಾಮಾನ್ಯವಾಗಿ ಮಕ್ಕಳ ವೈಯಕ್ತಿಕ ಹಕ್ಕುಗಳನ್ನು ಗುರುತಿಸುವತ್ತ ಕೇಂದ್ರಿಕೃತವಾಗಿರುತ್ತದೆ. ಕೆಳಕಂಡ ಹಕ್ಕುಗಳು ಮಕ್ಕಳು ಆರೋಗ್ಯವಂತರಾಗಿ ಹಾಗೂ ಸ್ವತಂತ್ರವಾಗಿ ಬೆಳೆಯಲು ಅವಕಾಶ ಮಾಡಿಕೊಡುತ್ತವೆ:

- ವಾಕ್ ಸ್ವಾತಂತ್ರ್ಯದ ಹಕ್ಕು
- ಆಲೋಚನೆಯ ಹಕ್ಕು
- ಭಯರಹಿತ ಸ್ವಾತಂತ್ರ್ಯದ ಹಕ್ಕು
- ಆಯ್ಕೆ ಮತ್ತು ನಿರ್ಧಾರ ಕೈಗೊಳ್ಳುವ ಹಕ್ಕು
- ತನ್ನ ದೇಹದ ಮೇಲಿನ ಒಡೆತನದ ಹಕ್ಕು
- ಶಿಕ್ಷಣವು ಸಹವರ್ತಿ ಪಟ್ಟಿಯಲ್ಲಿದೆ. ಶಿಕ್ಷಣ ನೀಡುವುದು ಕೇಂದ್ರ ಮತ್ತು ರಾಜ್ಯ ಸರ್ಕಾರಗಳ ಜಂಟಿ ಹೊಣೆಗಾರಿಕೆಯಾಗಿದೆಯೆಂಬುದು ನಿಮಗೆ ತಿಳಿದಿದೆ. RTE ಕಾಯ್ದೆಯ ನಿಬಂಧನೆಗಳನ್ನು ಅನುಷ್ಠಾನಗೊಳಿಸಲು ಅಗತ್ಯವಿರುವ ಹಣಕಾಸನ್ನು ಒದಗಿಸುವ ಹೊಣೆ ಕೇಂದ್ರ ಮತ್ತು ರಾಜ್ಯ ಸರ್ಕಾರಗಳದ್ದಾಗಿರುತ್ತದೆ.
- RTE ಕಾಯ್ದೆಯನ್ನು ಅನುಷ್ಠಾನಗೊಳಿಸಲು ಅಗತ್ಯವಿರುವ ಬಂಡವಾಳ ವೆಚ್ಚ ಮತ್ತು ಮರುಕಳಿಸುವ ವೆಚ್ಚಗಳ ಅಂದಾಜನ್ನು ಕೇಂದ್ರ ಸರ್ಕಾರವು ಸ್ಥಿರಪಡಿಸಬೇಕು.
- ರಾಜ್ಯ ಸರ್ಕಾರಗಳೊಡನೆ ಸಮಾಲೋಚಿಸಿ, ಕೇಂದ್ರ ಸರ್ಕಾರವು ನಿರ್ಧರಿಸಿದ ಪ್ರಮಾಣದ ಅನುದಾನವನ್ನು ರಾಜ್ಯ ಸರ್ಕಾರಗಳಿಗೆ ಕಾಲಕಾಲಕ್ಕೆ ನೀಡಬೇಕು.
- ಕೇಂದ್ರ ಸರ್ಕಾರದಿಂದ ಪಡೆದ ಹಣ ಮತ್ತು ತನ್ನ ಸ್ವಂತ ಸಂಪನ್ಮೂಲಗಳಿಂದ ಹೊಂದಿಸಿದ ಹಣವನ್ನು ಕೂಡಿಸಿ, RTE ನ ಅನುಷ್ಠಾನಕ್ಕೆ ಅಗತ್ಯವಿರುವ ಹಣವನ್ನು ನೀಡುವುದು ರಾಜ್ಯ ಸರ್ಕಾರದ ಜವಾಬ್ದಾರಿಯಾಗಿರುತ್ತದೆ.
- 6 ರಿಂದ 14 ವರ್ಷ ವಯಸ್ಸಿನ ಮಕ್ಕಳಿಗೆ ಉಚಿತ ಮತ್ತು ಕಡ್ಡಾಯ ಪ್ರಾಥಮಿಕ ಶಿಕ್ಷಣವನ್ನು ನೀಡುವುದು ಕೇಂದ್ರ ಸರ್ಕಾರ ಮತ್ತು ಸಂಬಂಧಿಸಿದ ರಾಜ್ಯ ಸರ್ಕಾರಗಳ ಜಂಟಿ ಹೊಣೆಗಾರಿಕೆಯಾಗಿರುತ್ತದೆ. ಎಲ್ಲರಿಗೂ ಶಿಕ್ಷಣ ನೀಡಲು ತಗಲುವ ಬೃಹತ್ ಪ್ರಮಾಣದ ವೆಚ್ಚವನ್ನು ಭರಿಸುವುದು ಸುಲಭ ಸಾಧ್ಯವಲ್ಲ ಎಂಬುದನ್ನು ನಾವು ಮರೆಯಬಾರದು. ಈ ಕಾರ್ಯಕ್ಕೆ ಸಾವಿರಾರು ಕೋಟಿ ರೂಪಾಯಿಗಳನ್ನು ಒದಗಿಸುವುದು ಒಂದು ದೊಡ್ಡ ಸವಾಲಾಗಿ ಪರಿಣಮಿಸಲಿದೆ. ಸಂಬಂಧಪಟ್ಟ ರಾಜ್ಯ ಸರ್ಕಾರಗಳು ಈ ಕೆಳಕಂಡ ಕಾರ್ಯಗಳನ್ನು ಕೈಗೊಳ್ಳಬೇಕಾಗುತ್ತದೆ.
- ಮೇಲೆ ತಿಳಿಸಿದ ವಯೋಮಾನದ ಪ್ರತಿಯೊಂದು ಮಗುವಿನ ಪ್ರವೇಶಾತಿ ಹಾಜರಾತಿ ಮತ್ತು ಪ್ರಾಥಮಿಕ ಶಿಕ್ಷಣವನ್ನು ಪೂರ್ಣಗೊಳಿಸಿರುವುದನ್ನು ಖಾತ್ರಿ ಪಡಿಸಿಕೊಳ್ಳಬೇಕು. ಈಗಾಗಲೇ ಚರ್ಚಿಸಿದಂತೆ ಈ ವಿಷಯದಲ್ಲಿ ಒಬ್ಬ ಶಿಕ್ಷಕನಾಗಿ ನಮ್ಮ ಪಾತ್ರ ಬಹಳ ಮುಖ್ಯವಾದುದು.
- ನೆರೆಹೊರೆಯ ಶಾಲೆ ಲಭ್ಯವಾಗುವಂತೆ ನೋಡಿಕೊಳ್ಳುವುದು.
- ಪ್ರಾಥಮಿಕ ಶಿಕ್ಷಣವನ್ನು ಪಡೆಯುವ ಸಂದರ್ಭದಲ್ಲಿ ಮಕ್ಕಳ ನಡುವೆ ಯಾವುದೇ ರೀತಿಯ ತಾರತಮ್ಯ ಉಂಟಾಗದಂತೆ ನೋಡಿಕೊಳ್ಳಬೇಕು. ಇಲ್ಲಿಯೂ ಸಹ ನೀವು ತಾರತಮ್ಯವನ್ನು ತಡೆಗಟ್ಟುವ ಕೆಲಸ ಮಾಡಬೇಕು.

Notes

- ಪ್ರಾಥಮಿಕ ಶಿಕ್ಷಣವನ್ನು ಪೂರ್ಣಗೊಳಿಸಲು ಅಗತ್ಯವಿರುವ ಮೂಲಭೂತ ಮತ್ತು ಶೈಕ್ಷಣಿಕ ಸೌಲಭ್ಯಗಳು ಪ್ರತಿಯೊಂದು ಮಗುವಿಗೂ ಲಭ್ಯವಾಗುವಂತೆ ನೋಡಿಕೊಳ್ಳಬೇಕು. ಅನೇಕ ಸಂದರ್ಭಗಳಲ್ಲಿ ಹಣಕಾಸಿನ ಕೊರತೆಯಿಂದ ಉತ್ತಮ ಮೂಲಭೂತ ಸೌಲಭ್ಯಗಳನ್ನು ನೀಡಲಾಗುವುದಿಲ್ಲ. ವಿವಿಧ ಮೂಲಗಳಿಂದ ಹಣವನ್ನು ಪಡೆಯುವುದು ನಮ್ಮ ಕರ್ತವ್ಯವಾಗಿರುತ್ತದೆ.
- ಗುಣಾತ್ಮಕ ಪ್ರಾಥಮಿಕ ಶಿಕ್ಷಣವು ಪ್ರತಿಯೊಂದು ಮಗುವಿಗೆ ಸಿಗುವಂತೆ ನೋಡಿಕೊಳ್ಳಬೇಕು. ಪ್ರಾಥಮಿಕ ಶಿಕ್ಷಣದಲ್ಲಿ ಗುಣಮಟ್ಟವನ್ನು ಕಾಯ್ದುಕೊಳ್ಳುವುದು ಶಿಕ್ಷಕರಾಗಿ ನಮ್ಮೆಲ್ಲರ ಕರ್ತವ್ಯವಾಗಿವೆ.
- ಪ್ರಾಥಮಿಕ ಶಿಕ್ಷಣ ಕ್ಷೇತ್ರದಲ್ಲಿ ಕಾರ್ಯ ನಿರ್ವಹಿಸುತ್ತಿರುವ ಶಿಕ್ಷಕರಿಗೆ ತರಬೇತಿ ಸೌಲಭ್ಯಗಳನ್ನು ಒದಗಿಸಬೇಕು. ಅಗತ್ಯವಿರುವ ಅರ್ಹತೆಗಳನ್ನು (ತರಬೇತಿ) ಪಡೆದುಕೊಳ್ಳುವುದು ಒಂದು ಒಳ್ಳೆಯ ಅವಕಾಶವಾಗಿದೆ. ಇದು ನಾವು ಇನ್ನೂ ಚೆನ್ನಾಗಿ ಬೋಧಿಸಲು ನಮಗೆ ನೆರವಾಗುತ್ತದೆ. ಒಬ್ಬ ಶಿಕ್ಷಕನಿಗೆ ಬೇಕಾದ ಸ್ಥಿರತೆಯನ್ನು ಇದು ನೀಡುತ್ತದೆ.

## 3.7 ಸಾರಾಂಶ :

ಈ ಘಟಕದಲ್ಲಿ ನಾವು ಪ್ರಾಥಮಿಕ ಶಿಕ್ಷಣದ ಸಾರ್ವತ್ರೀಕರಣದ ಪರಿಕಲ್ಪನೆ ಮತ್ತು ಅದರ ಅಗತ್ಯತೆಯಲ್ಲಿ ಅಂದರೆ ಪ್ರಾಥಮಿಕ ಶಿಕ್ಷಣವನ್ನು ಪ್ರತಿಯೊಂದು ಮಗುವಿಗೂ ಲಭ್ಯವಾಗುವಂತೆ ಮಾಡುವುದರ ಬಗ್ಗೆ ಚರ್ಚಿಸಿದೆವು. ಭಾರತದ ಸಂವಿಧಾನದ 45 ನೇ ವಿಧಿಯಲ್ಲಿ 6 ರಿಂದ 14 ವರ್ಷ ವಯಸ್ಸಿನ ಮಕ್ಕಳಿಗೆ ಉಚಿತ ಮತ್ತು ಕಡ್ಡಾಯ ಶಿಕ್ಷಣ ನೀಡಬೇಕೆಂಬುದನ್ನು ಹೇಳಲಾಗಿದೆ. ಈ ವಿಧಿ ಮತ್ತು ಇತರೆ ಸಂವಿಧಾನಿಕ ನಿಬಂಧನೆಗಳನ್ನು ವಿಮರ್ಶಿಸಲಾಯಿತು. 2002 ರಲ್ಲಿ ಭಾರತದ ಸಂಸತ್ತು ಸಂವಿಧಾನದ 86 ನೇ ತಿದ್ದುಪಡಿಯನ್ನು ಕೈಗೊಂಡಿತು. 21ಎ ವಿಧಿಯನ್ನು ಸೇರಿಸುವ ಮೂಲಕ ಶಿಕ್ಷಣದ ಹಕ್ಕನ್ನು 6 ರಿಂದ 14 ವರ್ಷ ವಯಸ್ಸಿನ ಮಕ್ಕಳ ಮೂಲಭೂತ ಹಕ್ಕಾಗಿಸಲಾಯಿತು. ಪ್ರಾಥಮಿಕ ಶಿಕ್ಷಣದ ಸಾರ್ವತ್ರೀಕರಣದ ಗುರಿಗಳನ್ನು ಸಾಧಿಸಲಾಗಲಾಗದಿದ್ದಕ್ಕೆ ಕಾರಣಗಳನ್ನು ಸಹ ನೀವು ಅಧ್ಯಯನ ಮಡಿದ್ದೀರಿ.

1959 ರಲ್ಲಿ ವಿಶ್ವಸಂಸ್ಥೇಯು ಮಕ್ಕಳ ಹಕ್ಕುಗಳನ್ನು ಘೋಷಿಸಿತು. ಬದುಕುಳಿಯುವ ಹಕ್ಕು, ಹೆಸರು ಮತ್ತು ರಾಷ್ಟ್ರೀಯತೆಯ ಹಕ್ಕು, ಪೌಷ್ಠಿಕಾಂಶದ ಹಕ್ಕು, ಅಭಿವ್ಯಕ್ತಿಯ ಹಕ್ಕು, ಆರೋಗ್ಯ ಮತ್ತು ರಕ್ಷಣೆಯ ಹಕ್ಕು, ನಿರ್ಲಕ್ಷ್ಯ ಮತ್ತು ಶೋಷಣೆಯ ವಿರುದ್ಧದ ಹಕ್ಕು, ಶಿಕ್ಷಣದ ಹಕ್ಕು, ಮಾಹಿತಿಯ ಹಕ್ಕು, ದುರುಪಯೋಗದ ವಿರುದ್ಧದ ಹಕ್ಕು ಮತ್ತು ಮನರಂಜನೆಯ ಹಕ್ಕು ಇವು ಮಗುವಿನ ಕೆಲವು ಪ್ರಮುಖ ಹಕ್ಕುಗಳಾಗಿವೆ. 2009 ರಲ್ಲಿ ಭಾರತದ ಸಂಸತ್ತು ಶಿಕ್ಷಣ ಹಕ್ಕು ಕಾಯ್ದೆ (RTE) 2009 ಎಂಬ ಐತಿಹಾಸಿಕ ಕಾಯ್ದೆಯನ್ನು ಅಂಗೀಕರಿಸಿತು. RTE 2009 ರ ನಿಬಂಧನೆಗಳನ್ನು ಮತ್ತು ಈ ಕಾಯ್ದೆಯಡಿ ರೂಪಿಸಲ್ಪಟ್ಟಿರುವ ನಿಯಮಗಳನ್ನು ನಾವು ಅಧ್ಯಯನ ಮಾಡಿದ್ದೇವೆ.

ಶಿಕ್ಷಣವು ಸಹವರ್ತಿ ಪಟ್ಟಿಯಲ್ಲಿರುವ ವಿಷಯವಾಗಿದೆಯೆಂಬ ಹಿನ್ನಲೆಯಲ್ಲಿ ಈ ಘಟಕದ ಕೊನೇ ಭಾಗದಲ್ಲಿ RTE ಕಾಯ್ದೆಗೆ ಸಂಬಂಧಿಸಿದಂತೆ ನಾವು ಕೇಂದ್ರ ಮತ್ತು ರಾಜ್ಯ ಸರ್ಕಾರಗಳ ಜವಾಬ್ದಾರಿಗಳನ್ನು ಸಹ ಚರ್ಚಿಸಿದ್ದೇವೆ.

## 3.8 ಓದು ಮತ್ತು ಪರಾಮರ್ಶನ ಸಲಹೆಗಳು:

- en.wikipedia.org/wiki/Sarva_Shiksha_Abhiyan
- unesdoc.unesco,org/images

- Aggarwal,J.C.:Development of Education System in India.
- www.in.gor.in/schooleducation/contracts.html.


Notes

## 3.9 ಘಟಕದ ಕೊನೆಯ ಅಭ್ಯಾಸಗಳು :

1. UEE ಯನ್ನು ಸಾಧಿಸಲಾಗದಿದ್ದಕ್ಕೆ ಕಾರಣಗಳನ್ನು ವಿವರಿಸಿ.
2. RTE ಕಾಯ್ದೆ 2009 ರ ಐದು ಹಕ್ಕುಗಳನ್ನು ವಿವರಿಸಿ.
3. ಶಿಕ್ಷಕರು ಮತ್ತು ವಿದ್ಯಾರ್ಥಿಗಳ ಅನುಕೂಲಕ್ಕಾಗಿ ನಿಮ್ಮದೇ ಆದ ಕೆಲವು ಸಲಹೆಗಳನ್ನು ನೀಡಿ.

**ಘಟಕ–4:**

## ಪ್ರಾಥಮಿಕ ಶಿಕ್ಷಣದ ಸಾರ್ವತ್ರೀಕರಣ–ಸಾಂಸ್ಥಿಕ ರಚನೆ

**ಸ್ವರೂಪ:**

**4.0** ಪೀಠಿಕೆ

**4.1** ಕಲಿಕಾ ಉದ್ದೇಶಗಳು/ವಸ್ತುಗಳು

**4.2** ರಾಷ್ಟ್ರೀಯಮಟ್ಟದ ಪ್ರಾಥಮಿಕ ಶಿಕ್ಷಣದ ಸಾಂಸ್ಥಿಕ ರಚನೆ (NCERT)

4.2.1 NCERT ಯ ಪಾತ್ರ

4.2.2 NCERT ಕಾರ್ಯಗಳು

**4.3** ರಾಜ್ಯಮಟ್ಟದ ಪ್ರಾಥಮಿಕ ಶಿಕ್ಷಣದ ಸಾಂಸ್ಥಿಕ ರಚನೆ (SCERT)

4.3.1 NCERT

4.3.2 SIEMAT

**4.4** ಜಿಲ್ಲಾ ಮಟ್ಟದ ಪ್ರಾಥಮಿಕ ಶಿಕ್ಷಣದ ಸಾಂಸ್ಥಿಕ ರಚನೆ (DIET)

4.4.1 DIET ಪಾತ್ರ

4.3.2 DIET ಕಾರ್ಯಗಳು

**4.5** ಬ್ಲಾಕ್ ಮಟ್ಟದ ಪ್ರಾಥಮಿಕ ಶಿಕ್ಷಣದ ಸಾಂಸ್ಥಿಕ ರಚನೆ (BRC)

4.5.1 BRC ಯ ಪಾತ್ರ ಮತ್ತು ಕರ್ತವ್ಯಗಳು

**4.6** ಕ್ಲಸ್ಟರ್ ಹಂತದ ಪ್ರಾಥಮಿಕ ಶಿಕ್ಷಣದ ಸಾಂಸ್ಥಿಕ ರಚನೆ (CRC)

4.6.1 CRC ಪಾತ್ರ

4.6.2 CRC ಕಾರ್ಯಗಳು

**4.7** ಕ್ರೂಢೀಕರಣ

**4.8** ಪಾರಿಭಾಷಿಕ ಪದಕೋಶ

**4.9** ಸೂಚಿಸಲಾದ ಓದು ಮತ್ತು ಉಲ್ಲೇಖಗಳು

**4.10** ಘಟಕದ ಕೊನೆಯ ಅಭ್ಯಾಸಗಳು

## 4.0 ಪೀಠಿಕೆ:

ಭಾರತೀಯ ಸಂವಿಧಾನದ ಅಧಿಸೂಚನೆ 51ಎ ನ ಅನ್ವಯ ಭಾರತದ ಪ್ರತಿಯೊಬ್ಬ ಪ್ರಜೆಯ ಮೂಲಭೂತ ಕರ್ತವ್ಯಗಳಲ್ಲಿ –ತಮ್ಮ ಉನ್ನತಿಕೆಗಾಗಿ ಎಲ್ಲ ಮೂಲಗಳಿಂದಲೂ ವೈಯಕ್ತಿಕವಾಗಿ ಮತ್ತು ಸಾಮೂಹಿಕವಾಗಿ ಪ್ರಯತ್ನಿಸುವುದು ಇದರಿಂದ ದೇಶವು ಸತತವಾಗಿ ಉನ್ನತ ಹಂತದ ಬೆಳವಣಿಗೆ ಹೊಂದಲು ಸಾಧ್ಯ. ಇದನ್ನು ಆಧರಿಸಿದ ಪ್ರಯತ್ನಗಳು ಪ್ರಾಥಮಿಕ ಶಿಕ್ಷಣದ ಸುಧಾರಣೆಗೆ ಕಾರಣವಾಗುತ್ತವೆ. ದೇಶದ ಹಲವು ಸಂಸ್ಥೆಗಳು ಈ ಸುಧಾರಣಾ ಕಾರ್ಯದಲ್ಲಿ ಪಾಲ್ಗೊಂಡವು. ಅವುಗಳಲ್ಲಿ ಕೆಲವು ಆಡಳಿತಾತ್ಮಕ ಸಂಸ್ಥೆಗಳಾದರೆ ಮತ್ತೆ ಕೆಲವು ಸ್ವ–ಸೇವಾ ಸಂಸ್ಥೆಗಳು.


ಪ್ರಾಥಮಿಕ ಶಿಕ್ಷಣದಲ್ಲಿ ಉನ್ನತ ಗುಣಮಟ್ಟವನ್ನು ಸಾಧಿಸಲು ಭಾರತ ಸರ್ಕಾರದ ಮಾನವ ಸಂಪನ್ಮೂಲ ಇಲಾಖೆಯು ಅನೇಕ ಸಂಸ್ಥೆಗಳಿಗೆ ಅಧಿಕಾರ ವಿಕೇಂದ್ರೀಕರಣ ಮಾಡುವ ಮೂಲಕ ಪ್ರಾಥಮಿಕ ಶಿಕ್ಷಣದ ಗುಣಮಟ್ಟ ಸುಧಾರಣೆಗೆ ಯತ್ನಿಸಿತು. ಹೀಗಾಗಿ ರಾಷ್ಟ್ರೀಯ ಮಟ್ಟದಲ್ಲಿ NCERT, ರಾಜ್ಯ ಮಟ್ಟದಲ್ಲಿ SCERT, ಜಿಲ್ಲಾ ಮಟ್ಟದಲ್ಲಿ DIET, ಬ್ಲಾಕ್ ಮಟ್ಟದಲ್ಲಿ BRC, CRC, ಗಳು ಮುಖ್ಯ ಆಡಳಿತಾತ್ಮಕ ಸಂಸ್ಥೆಗಳಾಗಿದ್ದು ಪ್ರಾಥಮಿಕ ಶಾಲೆಗಳಿಗೆ ಶೈಕ್ಷಣಿಕ ಸಂಪನ್ಮೂಲದ ನೆರವನ್ನು ಒದಗಿಸುತ್ತವೆ.

ಈ ಘಟಕದಲ್ಲಿ ನಾವು ಈ ಎಲ್ಲ ವಿವಿಧ ಹಂತಗಳ ಸಂಸ್ಥೆಗಳು ನಿರ್ವಹಿಸುವ ಕಾರ್ಯಗಳು ಮತ್ತು ವಹಿಸುವ ಪಾತ್ರಗಳ ಬಗ್ಗೆ ತಿಳಿಯುತ್ತೇವೆ.

ಈ ಸಂಸ್ಥೆಗಳ ಕಾರ್ಯವು ಸಂಪೂರ್ಣವಾಗಿ ಶಿಕ್ಷಕರ ಸಹಕಾರದಿಂದ ನಡೆಯುವುದು. ಶಿಕ್ಷಕರು ಎರಡು ದೃಷ್ಟಿಯಿಂದ ಈ ಸಂಸ್ಥೆಗಳ ಪ್ರಯೋಜನ ಪಡೆಯುವರು.

1) ವಿವಿಧ ಯೋಜನೆಗಳು ಈ ಸಂಸ್ಥೆಗಳಿಂದ ಪ್ರಾಯೋಜಿತಗೊಂಡು ಶಿಕ್ಷಕರ ಕೌಶಲ್ಯ ಅಭಿವೃದ್ಧಿಗೆ ಆ ಸಂಸ್ಥೆಗಳು ನೀಡುವ ತರಬೇತಿಯ ತರಗತಿಗಳು ಸಹಕಾರಿಯಾಗು ವುದು.
2) ಈ ಸಂಸ್ಥೆಗಳು ಹಲವು ವಿನೂತನ ಶಿಕ್ಷಣ ಪದ್ಧತಿಗಳನ್ನು ಪರಿಚಯಿಸುತ್ತವೆ. ಶಿಕ್ಷಣ ತಜ್ಞರ ಹೊಸಬಗೆಯ ಕಲಿಕಾ ವಿಧಾನಗಳು ಶಿಕ್ಷಣದ ಗುಣಮಟ್ಟ ಸುಧಾರಿಸಲು ನೆರವಾಗುವುದು.

ಮುಂದೆ ಹೋಗುವ ಮೊದಲು ಚಿತ್ರ 4.1 ನ್ನು ಗಮನಿಸೋಣ. ಈ ಚಿತ್ರವು ಒಂದು ಘಟಕದ ಹಲವು ಸಂಬಂಧಿತ ಅಂಶಗಳು ಮತ್ತು ವಿಭಿನ್ನ ವಸ್ತು ವಿಷಯಗಳನ್ನು ಕುರಿತಾಗಿದೆ.




ಚಿತ್ರ–4.1

ಈ ಘಟಕದಲ್ಲಿ ಈ ಎಲ್ಲ ಸಂಸ್ಥೆಗಳ ಪಾತ್ರ ಮತು ಕಾರ್ಯಗಳನ್ನು ವಿವರವಾಗಿ ತಿಳಿಯೋಣ.

## 4.1 ಕಲಿಕಾ ಉದ್ದೇಶಗಳು:

ಈ ಘಟಕದ ಅವಲೋಕನದ ಬಳಿಕ ನೀವು ಈ ಕೆಳಕಂಡ ಅಂಶಗಳನ್ನು ತಿಳಿದಿರಬೇಕು.

- ಜಿಲ್ಲೆ, ರಾಜ್ಯ, ರಾಷ್ಟ್ರ ಮಟ್ಟದ ಪ್ರಾಥಮಿಕ ಶಿಕ್ಷಣದ ಸಾಂಸ್ಥಿಕ ರಚನೆಯನ್ನ ಕುರಿತು ವಿವರಿಸಲು ತಿಳಿದಿರಬೇಕು.
- NCERT ಯ ಪಾತ್ರ ಮತ್ತು ಕಾರ್ಯಗಳನ್ನು ಪರಿಶೀಲಿಸಲು ಬಲ್ಲವರಾಗಿರಬೇಕು.
- SCERT & SIEMAT ಯ ಕಾರ್ಯ ಮತ್ತು ಪಾತ್ರಗಳ ತಿಳಿವಳಿಕೆ.
- ಜಿಲ್ಲಾಮಟ್ಟದ ಮತ್ತು ಬ್ಲಾಕ್ ಮಟ್ಟದ ಪ್ರಾಥಮಿಕ ಶಿಕ್ಷಣ ಸಂಸ್ಥೆಗಳ ಪಾತ್ರ, ಕಾರ್ಯಗಳ ತಿಳಿವಳಿಕೆ.
- ರಾಷ್ಟ್ರದಲ್ಲಿನ ಪ್ರಾಥಮಿಕ ಶಿಕ್ಷಣದಲ್ಲಿನ ಗುಣಮಟ್ಟ ಸುಧಾರಣೆಗೆ ಸಲಹೆಗಳು

## 4.2 NCERT ರಾಷ್ಟ್ರಮಟ್ಟದ ಪ್ರಾಥಮಿಕ ಶಿಕ್ಷಣದ ಸಾಂಸ್ಥಿಕ ಸ್ವರೂಪ:

1954 ರಿಂದ NCERT ಯ ಹಲವು ಸಂಸ್ಥೆಗಳು ಭಾರತದಲ್ಲಿ ಆರಂಭಗೊಂಡವು. ಅವುಗಳಲ್ಲಿ–

- ಸೆಂಟ್ರಲ್ ಬ್ಯೂರೋ ಆಫ್ ಟೆಕ್ಸ್ಟ್‌ಬುಕ್ ರಿಸರ್ಚ್–1954
- ಇನ್ಸ್ಟಿಟ್ಯೂಟ್ ಆಫ್ ಎಜುಕೇಷನಲ್ ಅಂಡ್ ವೊಕೇಷನಲ್ ಗೈಡೆನ್ಸ್–1954
- ನ್ಯಾಷನಲ್ ಇನ್ಸ್ಟಿಟ್ಯೂಟ್ ಆಫ್ ಬೇಸಿಕ್ ಎಜುಕೇಷನ್
- ನ್ಯಾಷನಲ್ ಫೌಂಡೇಷನ್ ಎಜುಕೇಷನ್ ಸೆಂಟರ್–1956

- ಆಲ್ ಇಂಡಿಯಾ ಕೌನ್ಸಿಲ್ ಫಾರ್ ಸೆಕೆಂಡರಿ ಎಜುಕೇಷನ್
- (ಡೈರೆಕ್ಟೋರೇಟ್ ಆಫ್ ಎಕ್ಸ್‌ಟೆನ್ಷನ್ ಪ್ರೋಗ್ರಾಂಸ್ ಫಾರ್ ಸೆಕೆಂಡರಿ ಎಜುಕೇಶನ್)–1959
- ನ್ಯಾಯಷನಲ್ ಇನ್ಸ್ಟಿಟ್ಯೂಟ್ ಆಫ್ ಆಡಿಯೋ–ವಿಜುಯಲ್ ಎಜುಕೇಷನ್–1959
  –ಈ ಸಂಸ್ಥೆಗಳು ವಿಭಿನ್ನ ಕಾರ್ಯಗಳಲ್ಲಿ ತೊಡಗಿಕೊಂಡವು.

1961ರಲ್ಲಿ ಈ ಎಲ್ಲ ವಿಭಿನ್ನ ಸಂಸ್ಥೆಗಳು ಒಂದು ರಾಷ್ಟ್ರೀಯ ಸಂಸ್ಥೆಯ ಅಡಿಯಲ್ಲಿ ದೊಡ್ಡಪ್ರಮಾಣದ ಸ್ವಾಯತ್ತ ಆಡಳಿತದಲ್ಲಿ ಸೆಪ್ಟೆಂಬರ್ 1, 1961 ರಲ್ಲಿ ದೆಹಲಿಯಲ್ಲಿ 'ನ್ಯಾಷನಲ್ ಕೌನ್ಸಿಲ್ ಆಫ್ ಎಜುಕೇಷನಲ್ ರಿಸರ್ಚ್ ಅಂಡ್ ಟ್ರೈನಿಂಗ್ ಎಂಬ ಹೆಸರಿನಲ್ಲಿ ಸ್ಥಾಪನೆಗೊಂಡಿತು.

NCERT ಯ ಮೂಲ ಉದ್ದೇಶವೇನೆಂದರೆ, ಪ್ರಾಥಮಿಕ ಶಿಕ್ಷಣದ ಗುಣಮಟ್ಟವನ್ನು ಹೆಚ್ಚಿಸುವುದು ಜೊತೆಗೆ ಪ್ರಾಥಮಿಕ ಶಿಕ್ಷಣಕ್ಕೆ ಸಂಬಂಧಿಸಿದ ಯಾವುದೇ ವಿಷಯಗಳಿಗೆ ಕೇಂದ್ರ ಮತ್ತು ರಾಜ್ಯ ಸರ್ಕಾರಗಳಿಗೆ ಮಾಹಿತಿಯನ್ನು ಒದಗಿಸುವ ಏಕೈಕ ಸಂಸ್ಥೆಯಾಗಿ ರೂಪುಗೊಂಡಿತು. ಮಿನಿಸ್ಟ್ರಿ ಆಫ್ ಹ್ಯೂಮನ್ ರಿಸೋರ್ಸ್ ಡೆವಲಪ್‌ಮೆಂಟ್ (MHRD)ಯು ಯಾವುದೇ ನಿಯಮಾವಳಿಗಳ ಜಾರಿಗೆ ಮತ್ತು ನಿರ್ದೇಶಿಸಲಾಗುವ ಕಾರ್ಯಕ್ರಮಗಳಿಗೆ ಮಾಹಿತಿಯನ್ನು ಈ ಸಂಸ್ಥೆಯಿಂದ ಪಡೆಯುವುದು NCERT ಒಂದು ಸಾಮಾನ್ಯ ಅಂಗಸಂಸ್ಥೆಯನ್ನು ಹೊಂದಿದ್ದು ಎಲ್ಲ ರಾಜ್ಯಗಳ ಶಿಕ್ಷಣ ಮಂತ್ರಿಗಳು ಮತ್ತು ಪ್ರಸಿದ್ಧ ಶಿಕ್ಷಣ ತಜ್ಞರನ್ನು ಒಳಗೊಂಡಿದೆ.

NCERT ಯು ಈ ಕೆಳಕಂಡ 4 ಧ್ಯೇಯಗಳು–

- ಶಾಲಾ ಶಿಕ್ಷಣದ ಗುಣಮಟ್ಟವನ್ನು ಹೆಚ್ಚಿಸುವುದು.
- ತರಬೇತಿ ಕಾರ್ಯಕ್ರಮಗಳನ್ನು ಆಯೋಜಿಸುವುದು.
- ಶಿಕ್ಷಣದ ಪ್ರಸರಣ ಮಾಡುವುದು
- ಪ್ರಾಥಮಿಕ ಶಿಕ್ಷಣ ಕ್ಷೇತ್ರದಲ್ಲಿ ಎದುರಾಗುವ ಸಮಸ್ಯೆಗಳನ್ನು ಬಗೆಹರಿಸುವುದು.

ಕೆಲವು ಅಂಗಸಂಸ್ಥೆಗಳು NCERT ಯ ಕಾರ್ಯನಿರ್ವಹಣೆಗೆ ನೆರವಾಗುತ್ತಿವೆ ಅವುಗಳಲ್ಲಿ–

- ನ್ಯಾಷನಲ್ ಇನ್ಸ್ಟಿಟ್ಯೂಟ್ ಆಫ್ ಎಜುಕೇಷನ್, NIE
- ನ್ಯಾಷನಲ್ ಇನ್ಸ್ಟಿಟ್ಯೂಟ್ ಆಫ್ ಎಜುಕೇಷನ್ ಟೆಕ್ನಾಲಜಿ CIET
- ಪಂಡಿತ ಸುಂದರಲಾಲ್ ಶರ್ಮ ಸೆಂಟ್ರಲ್ ಇನ್ಸ್ಟಿಟ್ಯೂಟ್ ಆಫ್ ವೊಕೇಷನಲ್ ಎಜುಕೇಶನ್ PSSCIVE, Bhopal
- ರೀಜನಲ್ ಇನ್ಸ್ಟಿಟ್ಯೂಟ್ ಆಫ್ ಎಜುಕೇಶನ್– RIE ಅಜ್ಮೀರ್, ಭುವನೇಶ್ವರ, ಭೋಪಾಲ್, ಷಿಲ್ಲಾಂಗ್, ಮತ್ತು ಮೈಸೂರು

NCERT ಯ ಮುಖ್ಯ ಆಡಳಿತಾಂಗ ಎಂದರೆ 'ಎಕ್ಸಿಕ್ಯೂಟಿವ್ ಕಮಿಟಿ' MHRD ಯ ಯೂನಿಯನ್ ಮಿನಿಸ್ಟರ್ ಇದರ ಅಧ್ಯಕ್ಷರಾಗಿರುತ್ತಾರೆ. ಇದು ಈ ಕೆಳಕಂಡ ಪ್ರತಿನಿಧಿಗಳನ್ನು ಒಳಗೊಂಡಿರುತ್ತದೆ.

(1) ಎಲ್ಲ ರಾಜ್ಯಗಳ ಮತ್ತು ಯೂನಿಯನ್ ಟೆರಿಟರಿಯ ಶಿಕ್ಷಣ ಮಂತ್ರಿಗಳು
(2) ಯುಜಿಸಿ–ಛೇರ್ ಪರ್ಸನ್
(3) ಸೆಕ್ರೆಟರಿ– ಭಾರತ ಸರ್ಕಾರ
(4) ಮಿನಿಸ್ಟ್ರಿ ಆಫ್ MHRD
(5) ನಾಲ್ಕು ವಿಶ್ವವಿದ್ಯಾಲಯಗಳ ಕುಲಪತಿಗಳು (ಒಂದೊಂದು ಪ್ರದೇಶದಿಂದ ಒಬ್ಬರಂತೆ)
(6) ಸೆಂಟ್ರಲ್ ಬೋರ್ಡ್ ಆಫ್ ಸೆಕೆಂಡರಿ ಎಜುಕೇಶನ್‌ನ–ಛೇರ್‌ಮನ್
(7) ಕೇಂದ್ರೀಯ ವಿದ್ಯಾಲಯಗಳ ಸಂಘಟನೆಯ ಕಮೀಷನರ್.
(8) ಡೈರೆಕ್ಟರ್, ಸೆಂಟ್ರಲ್ ಹೆಲ್ತ್ ಎಜುಕೇಷನ್ ಬ್ಯೂರೋ
(9) ಡೈರೆಕ್ಟರ್ ಆಫ್ ಟ್ರೈನಿಂಗ್
(10) ಡೈರೆಕ್ಟರ್ ಜನರಲ್ ಆಫ್ ಟ್ರೈನಿಂಗ್ & ಎಂಪ್ಲಾಯ್‌ಮೆಂಟ್
(11) ಕಾರ್ಮಿಕ ಇಲಾಖೆಯ ಒಬ್ಬ ಪ್ರತಿನಿಧಿ
(12) ಪ್ಲಾನಿಂಗ್ ಕಮಿಷನ್

ಮತ್ತು ಎಕ್ಸಿಕ್ಯೂಟಿವ್ ಕಮಿಟಿಯ ಸದಸ್ಯರು ಹಾಗೂ ಭಾರತ ಸರ್ಕಾರದಿಂದ ನೇಮಿಸಲ್ಪಟ್ಟ ನಾಲ್ಕಕ್ಕಿಂತ ಕಡಿಮೆ ಸಂಖ್ಯೆಯ ಶಿಕ್ಷಕರನ್ನು ಇದು ಒಳಗೊಂಡಿದೆ.

–ಇದರ ಕಾರ್ಯದರ್ಶಿ ಇದರ ಸಂಘಟಕನೂ ಆಗಿದ್ದು, ಮುಖ್ಯ ಕಂಟ್ರೋಲಿಂಗ್ ಕಮಿಟಿಗೆ ನೆರವಾಗುವ ಮೂರು ಸಮಿತಿಗಳು ಇದ್ದು, NCERT ಯ ಛೇರ್‌ಮನ್ ಅದರ ಡೈರೆಕ್ಟರ್ ಆಗಿರುತ್ತಾರೆ.

## 4.2.1 NCERT ಯ ಪಾತ್ರ:

1961 ರಲ್ಲಿ ಭಾರತ ಸರ್ಕಾರವು ನ್ಯಾಷನಲ್ ಕೌನ್ಸಿಲ್ ಆಫ್ ಎಜುಕೇಶನಲ್ ರಿಸರ್ಚ್ ಅಂಡ್ ಟ್ರೈನಿಂಗ್ (NCERT) ಸಂಸ್ಥೆಯನ್ನು ಸ್ಥಾಪಿಸಿತು.

ಇದು ರಾಜ್ಯ ಮತ್ತು ಕೇಂದ್ರ ಸರ್ಕಾರಗಳಿಗೆ ಪ್ರಾಥಮಿಕ ಶಿಕ್ಷಣ ಸಂಬಂಧಿಯಾದ ಯಾವುದೇ ಮಾಹಿತಿ ನೀಡಬಲ್ಲ ಸ್ವತಂತ್ರ ಸ್ವಾಯತ್ತ ಸಂಸ್ಥೆಯಾಗಿ ರೂಪುಗೊಂಡಿತು.

ಮುಖ್ಯವಾಗಿ ಗುಣಮಟ್ಟದ ಸುಧಾರಣೆಯನ್ನು ಶಾಲಾ ಶಿಕ್ಷಣದಲ್ಲಿ ತರಲು ಮತ್ತು ಶಿಕ್ಷಕರ ಸಿದ್ಧತೆಯನ್ನು ಕುರಿತ ಹಾಗೆ, ಈ ಸಮಿತಿಯು ಮೌಲ್ಯಮಾಪನ ಮಾಡುತ್ತ ಒಂದು ವಿನೂತನ ಸಂಸ್ಥೆಯಾಗಿ ಬೆಳೆದುಬಂದಿತು. ಇದರಿಂದಾಗಿ ಹಲವು ಚಟುವಟಿಕೆಗಳು ಶಾಲಾ ಶಿಕ್ಷಣದ್ಲಿ ಪರಿಚಯಗೊಂಡವು. NCERT ಯ ಶೈಕ್ಷಣಿಕ ಸಂಶೋಧನೆ, ತರಬೇತಿ ಕಾರ್ಯಕ್ರಮ ಹಾಗೂ ಸಂಶೋಧನ ವಿಧಾನಗಳ ಮೂಲಕ ಶಿಕ್ಷಣಕ್ಷೇತ್ರಕ್ಕೆ ನೆರವನ್ನು ಒದಗಿಸುತ್ತಿವೆ.

ವಿವಿಧ ವಿಭಾಗಗಳಾದ NIE, RIE, CIET, PSSCIVE- ಮುಂತಾದವು ಪ್ರಾಥಮಿಕ ಶಿಕ್ಷಣದ ಬೆಳವಣಿಗೆಗೆ ಸಹಕಾರಿಯಾಗವೆ. NCERT ಯು ಸಂಶೋಧನಾ ಕಾರ್ಯಗಳಿಗೆ

ನೆರವಾಗುವ ಮೂಲಕ ಶಿಕ್ಷಕರಿಗೆ ಪಿ.ಎಚ್.ಡಿ. ಪಡೆಯಲು ಮತ್ತು ಸಂಶೋಧನಾ ಕೃತಿಗಳನ್ನು ಪ್ರಕಟಿಸಲು ಅಗತ್ಯವಾದ ಆರ್ಥಿಕ ನೆರವನ್ನೂ ಒದಗಿಸುತ್ತಿದೆ.

ಪ್ರೋಗ್ರಾಂ ಅಡ್ವೈಸರಿ ಕಮಿಟಿಯು / NCERT ಯ ಪ್ರಧಾನ ಸಮಿತಿಯಾಗಿದ್ದು, ಸಂಶೋಧನೆ, ತರಬೇತಿ ಮತ್ತು ವಿಸ್ತೃತ ಕಾರ್ಯಯೋಜನೆಗಳಿಗೆ ಬೇಕಾದ ಸಲಹೆಗಳನ್ನು ನೀಡುವುದು. ಎಲ್ಲ ಬಗೆಯ ಶೋಧನಾ ಕಾರ್ಯಗಳನ್ನು ಪರಿಶೀಲಿಸಿ ತರಬೇತಿ ಯೋಜನೆಗಳನ್ನು ಪರೀಕ್ಷಿಸಿ ನೆರವು ನೀಡುವುದು.

1. ಇತರ ಸಂಸ್ಥೆಯಿಂದ ಬಂದ ಸಂಶೋಧನಾ ಕಾರ್ಯ ಪರಿಶೀಲನೆ
2. ಶೈಕ್ಷಣಿಕ ಅಧ್ಯಯನ ಮತ್ತು ಯೋಜನೆಗಳಿಗೆ ಸಂಬಂಧಿಸಿದಂತೆ,
3. ಕ್ಷೇತ್ರ ಕಾರ್ಯದ ವಿಸ್ತೃತತೆಗೆ ಸಂಬಂಧಿಸಿದ್ದು,

NCERT ಯು NIE ಮತ್ತು RIE ಗಳನ್ನು ತನ್ನ ಸಂಸ್ಥೆಯ ಉದ್ದೇಶಗಳು ಮತ್ತು ಧ್ಯೇಯಗಳ ಸಾಧನೆಯ ನೆರವಿಗಾಗಿ ಅವಲಂಭಿಸಿದೆ.

1. ರಾಷ್ಟ್ರೀಯ ಪಠ್ಯಕ್ರಮದ ರೂಪರೇಖೆಯ ಜಾರಿ
2. ಪ್ರಾಥಮಿಕ ಶಿಕ್ಷಣದ ಸಾರ್ವತ್ರೀಕರಣ
3. ವೃತ್ತಿಯಾಧಾರಿತ ಶಿಕ್ಷಣ
4. ವಿಶೇಷ ಅಗತ್ಯಗಳಿರುವ ತಂಡಗಳಿಗೆ ಶಿಕ್ಷಣ
5. ಬಾಲ್ಯದ ಶಿಕ್ಷಣ
6. ಮೌಲ್ಯಮಾಪನ ಮತ್ತು ಪರೀಕ್ಷಾ ಸುಧಾರಣೆ
7. ಮಾಹಿತಿ ತಂತ್ರಜ್ಞಾನ ಶಿಕ್ಷಣ
8. ಮೌಲ್ಯಾಧಾರಿತ ಶಿಕ್ಷಣ
9. ಶಿಕ್ಷಣ ತಂತ್ರಜ್ಞಾನ
10. ಅಪೂರ್ವವಾದ ಪಠ್ಯಕೃತಿಗಳ ಅಭಿವೃದ್ಧಿ/ ವರ್ಕ್‌ಬುಕ್/ ಶಿಕ್ಷಕರ ಕೈಪಿಡಿ/ ಪೂರಕ ಅಧ್ಯಯನ ಸಾಮಗ್ರಿ
11. ಬೋಧನೆ–ಕಲಿಕೆಯ ಸಾಮಗ್ರಿಗಳ ಉತ್ಪಾದನೆ
12. ಹೆಣ್ಣುಮಗುವಿನ ಶಿಕ್ಷಣ
13. ಪ್ರತಿಭೆಯ ಗುರುತಿಸುವಿಕೆ ಮತ್ತು ಪೋಷಿಸುವಿಕೆ.
14. ಮಾರ್ಗದರ್ಶನ ಮತ್ತು ಸಮಾಲೋಚನೆ
15. ಶಿಕ್ಷಕರ ಶಿಕ್ಷಣದ ಅಭಿವೃದ್ಧಿ
16. ಅಂತರಾಷ್ಟ್ರೀಯ ಸಂಬಂಧಗಳು.

### 4.2.2 NCERT ಯ ಕಾರ್ಯಗಳು:

NCERT ಯು ಈ ಕೆಳಕಂಡ ಮಹತ್ವದ ಕಾರ್ಯಗಳನ್ನು ನಿರ್ವಹಿಸುತ್ತಿದೆ.

1) **ಸಂಶೋಧನೆ:** NCERT ಯು ಶೈಕ್ಷಣಿಕ ಸಂಶೋಧನೆಗಳನ್ನು ವೈಯಕ್ತಿಕವಾಗಿ ಅಥವಾ ಇತರ ಸಂಸ್ಥೆಗಳ ಸಹಯೋಗದಲ್ಲಿ ಕೈಗೊಳ್ಳುತ್ತದೆ. ಅದು ಶಿಕ್ಷಣ ಸಂಶೋಧಕರಿಗೆ ಅಗತ್ಯವಾದ ಕೋರ್ಸ್‌ಗಳನ್ನು ನಡೆಸುವುದು ಮಾತ್ರವಲ್ಲದೆ ರಿಸರ್ಚ್ ಪೆಲೋಶಿಪ್

ಕೊಡುವುದರ ಮೂಲಕ ಪ್ರಾಥಮಿಕ ಶಿಕ್ಷಣದ ಯಾವುದೇ ಸಂಶೋಧನೆ ಅಧ್ಯಯನಗಳಿಗೆ ಉತ್ತೇಜನ ನೀಡುವುದು.

2) **ತರಬೇತಿ:** ಸೇವಾಪೂರ್ವ ಮತ್ತು ಸೇವಾನಿರತ ಶಿಕ್ಷಕರಿಗೆ ತರಬೇತಿಯನ್ನು ಹಲವು ಹಂತಗಳಲ್ಲಿ NCERT ನಡೆಸುತ್ತದೆ. ಪ್ರಾಥಮಿಕ ಪೂರ್ವ, ಪ್ರಾಥಮಿಕ ಮಾಧ್ಯಮಿಕ, ಪ್ರೌಢ ಮತ್ತು ವೃತ್ತಿ ಆಧಾರಿತ ಶಿಕ್ಷಣ, ಶೈಕ್ಷಣಿಕ ತಂತ್ರಜ್ಞಾನ– ಈ ಎಲ್ಲ ಹಂತಗಳಲ್ಲಿ ತರಬೇತಿ ಮಾರ್ಗದರ್ಶನ ಮತ್ತು ಸಮಾಲೋಚನಾ ಕೋರ್ಸ್‌ಗಳನ್ನು ಇದು ನಡೆಸುತ್ತದೆ.

3) **ಅಭಿವೃದ್ಧಿ:** ಸಮಾಜದಲ್ಲಿ ಬೆಳೆಯುತ್ತಿರುವ ಅಗತ್ಯಗಳಿಗೆ ತಕ್ಕಂತೆ NCERT ಯ ಮೂಲಕ ಶಾಲಾ ಶಿಕ್ಷಣದ ಎಲ್ಲ ಹಂತಗಳಿಗೂ ಆಗಾಗ ಹೊಸ ಬಗೆಯ ಪಠ್ಯಕ್ರಮ, ಮತ್ತು ಭೋಧನಾ ಸಾಮಗ್ರಿಗಳನ್ನು ಅಭಿವೃದ್ಧಿಪಡಿಸಲಾಗುತ್ತದೆ. ಶೈಕ್ಷಣಿಕ ತಂತ್ರಜ್ಞಾನವು ಶಿಕ್ಷಣದ ಮಾರ್ಗಸೂಚಿಗಳನ್ನು ಮತ್ತು ಮೌಲ್ಯಮಾಪನ ಪ್ರಕ್ರಿಯೆ ಮತ್ತು ಕ್ರಮಗಳನ್ನ ಅಭಿವೃದ್ಧಿಪಡಿಸುತ್ತದೆ. ಅಭಿವೃದ್ಧಿಪರ ಚಟುವಟಿಕೆಗಳು ಯಾವುದೇ ಇದ್ದರೂ ಅದನ್ನು ತಂತ್ರಜ್ಞಾನದಲ್ಲಿ ಅಳವಡಿಸುವ ಕಾರ್ಯನಡೆಸುತ್ತದೆ. ಜನಸಂಖ್ಯಾ ಶಿಕ್ಷಣ ಮತ್ತು ವಿಕಲಚೇತನರ ಶಿಕ್ಷಣ ಕ್ರಮಗಳನ್ನು ಅಭಿವೃದ್ಧಿಪಡಿಸಲಾಗುತ್ತದೆ.

4) **ಸೇವಾಪೂರ್ವ ಮತ್ತು ಸೇವಾನಿರತ ತರಬೇತಿ:** NCERT ಯು ಸೇವಾಪೂರ್ವ ತರಬೇತಿಯನ್ನು ಅರ್ಹ ಅಭ್ಯರ್ಥಿಗಳಿಗೆ ಒದಗಿಸುತ್ತವೆ. ಹಾಗೆಯೇ ವೃತ್ತಿ ನಿರತ ಶಿಕ್ಷಕರಿಗೂ ಶಿಕ್ಷಕರಿಗೆ ತರಬೇತಿ ನೀಡುವ ಶಿಕ್ಷಕರಿಗೂ ವಿಭಿನ್ನ ರೀತಿಯ ಕೋರ್ಸ್‌ಗಳನ್ನು ನಡೆಸುತ್ತದೆ.

5) **ಪುನರ್ಮನನ:** ವೃತ್ತಿ ನಿರತ ಶಿಕ್ಷಕರಿಗೆ ಓರಿಯಂಟೇಷನ್ ನಡೆಸುವ ಮೂಲಕ ಶಾಲಾ ಶಿಕ್ಷಣದ ಕ್ರಮಗಳನ್ನು ಆಗಾಗ ಅಭಿವೃದ್ಧಿಪಡಿಸಲಾಗುವುದು. ಹೊಸಬಗೆಯ ಶೈಕ್ಷಣಿಕ ಆಲೋಚನೆಗಳು ಮಾಹಿತಿಗಳನ್ನು ಬೆಳೆಯುತ್ತಿರುವ ತಂತ್ರಜ್ಞಾನಕ್ಕೆ ತಕ್ಕಂತೆ ಎಲ್ಲ ವಿಷಯಗಳಲ್ಲಿಯೂ ಅಳವಡಿಸುವ ಬಗೆಗಿನ ಮಾರ್ಗದರ್ಶನವನ್ನು ನೀಡಲಾಗುವುದು.

6) **ಅಧ್ಯಯನ, ತನಿಖೆ ಮತ್ತು ಕ್ಷೇತ್ರಕಾರ್ಯ:** NCERT ಯು ಸಂಶೋಧನಾ ಅಧ್ಯಯನ, ಶೋಧನಾ ಕ್ರಮಗಳು ಮತ್ತು ಕ್ಷೇತ್ರ ಕಾರ್ಯಗಳನ್ನು ಆಯೋಜಿಸುವ ಮೂಲಕ ಶಾಲಾ ಶಿಕ್ಷಣಕ್ಕೆ ವಿಭಿನ್ನ ಆಯಾಮವನ್ನು ಒದಗಿಸುವ ಶೈಕ್ಷಣಿಕ ಕ್ರಮಗಳನ್ನು ಪರಿಚಯಿಸುತ್ತದೆ.


7) **ಪ್ರಸರಣ:** ಸಂಶೋಧನಾ ಮೌಲ್ಯಗಳನ್ನು ಮತ್ತು ಸುಧಾರಿತ ಶಿಕ್ಷಣ ಕ್ರಮ ಮತ್ತು ವಿಧಾನಗಳ ಮಾಹಿತಿಯನ್ನು ಇದು ಪ್ರಸಾರ ಮಾಡುತ್ತದೆ.

8) **ಸಲಹೆ:** ಇದು ರಾಜ್ಯ ಮತ್ತು ಕೇಂದ್ರ ಸರ್ಕಾರಗಳಿಗೆ ಶಾಲಾ ಶಿಕ್ಷಣ ಮತ್ತು ಶಿಕ್ಷಕರ ಶಿಕ್ಷಣವನ್ನು ಕುರಿತ ಸಲಹೆ ನೀಡುವುದು.

9) **ನಿಯಮಾವಳಿಗಳ:** ಜಾರಿಯ ಕಾರ್ಯವನ್ನು ಇದು ನಿರ್ವಹಿಸುತ್ತದೆ ಮತ್ತು ಭಾರತ ಸಕಾರದ ಕಾರ್ಯಕ್ರಮಗಳನ್ನು ನಿರ್ವಹಿಸುತ್ತದೆ.

10) **ವಿವಿಧ ಕ್ಷೇತ್ರಗಳು:** ಪಠ್ಯಕ್ರಮ, ಪಠ್ಯಗಳು, ಪ್ರಕಟಣೆ, ಪರೀಕ್ಷೆ ಇವೇ ಮುಂತಾದ ವಿವಿಧ ಕ್ಷೇತ್ರಗಳಿಗೆ ಸಂಬಂಧಪಟ್ಟ ತೊಂದರೆಗಳನ್ನು ನಿಭಾಯಿಸುತ್ತವೆ. ಇದಕ್ಕೆ ಸಂಬಂಧಿಸಿದ ಶೋಧನೆಗಳನ್ನು ಕೈಗೊಂಡು ಎಲ್ಲ ಶಾಲಾ ಹಂತದಲ್ಲಿಯೂ ಗುಣಮಟ್ಟದ ಶಿಕ್ಷಣವನ್ನು ನೀಡುವಲ್ಲಿ ಪ್ರಧಾನ ಪಾತ್ರ ವಹಿಸುತ್ತದೆ.

NCERT ಯ ಕಾರ್ಯಗಳನ್ನು ಕೆಳಕಂಡ ಚಿತ್ರದಲ್ಲಿ ಕಾಣಿಸಲಾಗಿದೆ–




ಚಿತ್ರ –4.3: NCERT ಕಾರ್ಯಗಳು

k) **ಅಂತರಾಷ್ಟ್ರೀಯ ಪಾತ್ರ:** NCERT ಯ ಅಂತರ್ದೇಶೀಯ ಏಜೆನ್ಸಿಗಳೊಡನೆ ಸಂಘಟನೆ ಸಹಕಾರ ಹೊಂದಿದ್ದು ಶಾಲಾ ಶಿಕ್ಷಣದ ಅನೇಕ ಯೋಜನೆಗಳ ಬಗ್ಗೆ ಕಾರ್ಯನಿರ್ವಹಿಸುತ್ತದೆ. ಯುನೆಸ್ಕೋ, ಯೂನಿಸೆಫ್, ವರ್ಲ್ಡ್ ಬ್ಯಾಂಕ್ ಮುಂತಾದ ಏಜೆನ್ಸಿಗಳು NCERT ಯ ವಿವಿಧ ಯೋಜನೆಗಳಲ್ಲಿ ಕಾರ್ಯನಿರ್ವಹಿಸುತ್ತಿವೆ.

ಈ ಸಮಿತಿಯು ಪ್ರಾಥಮಿಕ ಶಿಕ್ಷಣ, ಪ್ರಾಥಮಿಕ ಪೂರ್ವ ಶಿಕ್ಷಣ, ಶಿಕ್ಷಕರ ತರಬೇತಿ ಮತ್ತು ಶೈಕ್ಷಣಿಕ ತಂತ್ರಜ್ಞಾನದ ಕಾರ್ಯಕ್ರಮಗಳನ್ನು ನಡೆಸುತ್ತದೆ.

**ಚಟುವಟಿಕೆ–1**

1. ಪ್ರಾಥಮಿಕ ಶಿಕ್ಷಣದ ಗುಣಮಟ್ಟವನ್ನು ಸುಧಾರಿಸುವಲ್ಲಿ NCERT ಯ ಪಾತ್ರ– ಈ ವಿಷಯವನ್ನು ಕುರಿತು 100 ಪದಗಳಷ್ಟು ಮಾಹಿತಿ ನೀಡಿ.

___

___

___

### 4.3 ರಾಜ್ಯಮಟ್ಟದ ಪ್ರಾಥಮಿಕ ಶಿಕ್ಷಣದ ಸಾಂಸ್ಥಿಕ ರಚನೆ:

ರಾಜ್ಯಮಟ್ಟದಲ್ಲಿ 2 ಮುಖ್ಯ ಸಂಸ್ಥೆಗಳು ಶಿಕ್ಷಣಕ್ಕಾಗಿ ಸೇವೆ ಸಲ್ಲಿಸುತ್ತವೆ. ಅವು SCERT ಮತ್ತು SIEMT

#### 4.3.1 ಸ್ಟೇಟ್ ಕೌನ್ಸಿಲ್ ಆಫ್ ಎಜುಕೇಷನಲ್ ರಿಸರ್ಚ್ & ಟ್ರೈನಿಂಗ್ (SCERT)

ಭಾರತದಲ್ಲಿ ಶಿಕ್ಷಣವು ಇಂದು ಬಹಳ ಮಹತ್ವಪೂರ್ಣ ಸ್ಥಿತಿಯಲ್ಲಿದ್ದು, ಕೇಂದ್ರ ಮತ್ತು ರಾಜ್ಯ ಸರ್ಕಾರಗಳೆರಡರ ಹೊಣೆಗಾರಿಕೆ ಎನಿಸಿದೆ.

ಶೈಕ್ಷಣಿಕ ಮತ್ತು ಔದ್ಯೋಗಿಕ ಚಟುವಟಿಕೆಗಳನ್ನು ವ್ಯವಸ್ಥಿತವಾಗಿ ನಿರ್ವಹಿಸಲು ಮತ್ತು ಕ್ರೂಢೀಕರಿಸಲು ಶಾಲಾಮಟ್ಟದಲ್ಲಿ ಹಾಗೂ ಆಡಳಿತಾತ್ಮಕವಾಗಿ ಕಾರ್ಯನಿರ್ವಹಿಸಲು NCERT ಗೆ ಪೂರಕವಾಗಿ ರಾಜ್ಯಮಟ್ಟದ SCERT ಯು ರೂಪುಗೊಂಡಿದೆ. ಇದು ಶಾಲಾಪೂರ್ವಹಂತದಿಂದ ಹಿಡಿದು ಪ್ರೌಢಶಿಕ್ಷಣದವರೆಗಿನ ಯೋಜನೆ, ನಿರ್ವಹಣೆ, ಸಂಶೋಧನೆ, ತರಬೇತಿ, ಮೌಲ್ಯಮಾಪನ ಹೀಗೆ ಹಲವು ಶೈಕ್ಷಣಿಕ ಕಾರ್ಯಕ್ರಮಗಳನ್ನು ನಿರ್ವಹಿಸುವ ಹೊಣೆಹೊತ್ತಿದೆ. SCERT ಸಮಿತಿಗಳು 36 ಸ್ಥಳಗಳಲ್ಲಿವೆ. ಸಿಕ್ಕಿಂ, ತ್ರಿಪುರಾ, ಕೇರಳ, ಗೋವಾ, ಜಮ್ಮು ಕಾಶ್ಮೀರಗಳು ಇದರಲ್ಲಿ ಸೇರಿವೆ.

**SCERT ಯ ಸಾಂಸ್ಥಿಕ ರಚನೆ:**

ಇದು ಹಲವು ಇಲಾಖೆಗಳನ್ನು ಹೊಂದಿದ್ದು, ಪ್ರಮುಖ ಹಾಗೂ ನಿರ್ದಿಷ್ಟ ಕಾರ್ಯಗಳನ್ನು ನಿರ್ವಹಿಸುತ್ತದೆ.

- ಸೇವಾನಿರತ ಶಿಕ್ಷಣ ಇಲಾಖೆ
- ಪ್ರಾಥಮಕ ಶಿಕ್ಷಕರ ಶಿಕ್ಷಣ ಇಲಾಖೆ
- ಸಮಗ್ರ ಪ್ರಾಥಮಿಕ ಶಿಕ್ಷಣ ಇಲಾಖೆ
- ಶೈಕ್ಷಣಿಕ ಸಂಶೋಧನೆ, ನಿಯಮಾವಳಿಗಳ ದೃಷ್ಟಿಕೋನ ಮತ್ತು ವಿನೂತನ ಯೋಜನೆಗಳ ಇಲಾಖೆ
- ಶಿಕ್ಷಣ ಕ್ಷೇತ್ರದ ಮಾಹಿತಿ ತಂತ್ರಜ್ಞಾನ ಇಲಾಖೆ
- ಪರೀಕ್ಷೆ ಮತ್ತು ಪ್ರವೇಶಾತಿ ಕೇಂದ್ರ

**ಇವಲ್ಲದೆ ಇದು ಮತ್ತಿತರ ವಿಭಾಗಗಳನ್ನೂ ಹೊಂದಿವೆ–**

- ಶೈಕ್ಷಣಿಕ ವಿಭಾಗ
- ಆಡಳಿತ ವಿಭಾಗ
- ಲೆಕ್ಕಪತ್ರ ವಿಭಾಗ
- ಪ್ರಕಟಣಾ ವಿಭಾಗ

**SCERT ಯ ಪಾತ್ರ:**

- ರಾಜ್ಯಮಟ್ಟದ ಪ್ರಾಥಮಿಕ, ಪ್ರೌಢ ಹಾಗೂ ಶಿಕ್ಷಕರ ಶಿಕ್ಷಣ ಇಲಾಖೆಗಳನ್ನು SCERT– ಶೈಕ್ಷಣಿಕ ವಲಯವು ಒಳಗೊಂಡಿದೆ

- ಶಾಲಾ ಶಿಕ್ಷಣ, ಅನೌಪಚಾರಿಕ ಶಿಕ್ಷಣ ಮತ್ತು ಶಿಕ್ಷಕರ ಶಿಕ್ಷಣದಲ್ಲಿ ಇದು ಏಜೆಂಟ್ ನ ರೂಪದಲ್ಲಿ ಕಾರ್ಯನಿರ್ವಹಿಸುತ್ತದೆ.
- ತರಬೇತಿ ಶಾಲೆಗಳು, ಜಿಲ್ಲಾಮಟ್ಟದ ಶಿಕ್ಷಣ ತರಬೇತಿ ಸಂಸ್ಥೆಗಳು (DIETS), ಶಿಕ್ಷಕರ ಕಾಲೇಜು ಮತ್ತು ರಾಜ್ಯದ ಅಡ್ವಾನ್ಸ್ಡ ಸ್ಟಡಿ ಸೆಂಟರ್‌ಗಳ ಕಾರ್ಯಗಳನ್ನು ಇದು ನಿಯಂತ್ರಿಸುತ್ತದೆ ಹಾಗೂ ಮೇಲ್ವಿಚಾರಣೆ ನಡೆಸುತ್ತದೆ.
- ಇದು ರಾಜ್ಯ ಸರ್ಕಾರಕ್ಕೆ ಶಿಕ್ಷಕರ ಶಿಕ್ಷಕರನ್ನು ಮತ್ತು ಶಿಕ್ಷಕ ತರಬೇತಿ ಸಂಸ್ಥೆಯ ಮುಖ್ಯಸ್ಥರನ್ನು ನೇಮಿಸಿಕೊಳ್ಳಲು ಹಾಗೂ ವರ್ಗಾವಣೆ ಮಾಡಲು ಅನುಮೋದನೆ ಸಲ್ಲಿಸುತ್ತದೆ.
- ಇದು ಮೇಲ್ವಿಚಾರಕರನ್ನು ನೇಮಿಸುತ್ತದೆ ಹಾಗೂ ಸೇವೆಯಲ್ಲಿರುವ ಪ್ರಾಥಮಿಕ ಹಾಗೂ ಪ್ರೌಢಶಾಲಾ ಶಿಕ್ಷಕರ ತರಬೇತಿಗೆ ಅನುದಾನ ಒದಗಿಸುತ್ತದೆ.
- ಪಠ್ಯಕ್ರಮವನ್ನು ಪ್ರಾಥಮಿಕ ಹಂತದಲ್ಲಿಯೇ ಅಭ್ಯಸಿಸಿ, ಅದಕ್ಕೆ ಸಂಬಂಧಿಸಿದ ಕಲಿಕೆಯ ವಿವರಗಳನ್ನು ಭಿನ್ನ ವಿಷಯಗಳ ವಸ್ತುಗಳನ್ನು ಕನಿಷ್ಠ ಕಲಿಕಾ ಹಂತವನ್ನು ಗಮನದಲ್ಲಿರಿಸಿಕೊಂಡು ಸಿದ್ಧಪಡಿಸುವುದು.
- ಇದು ಶಿಕ್ಷಕರಿಗೆ ಕನಿಷ್ಠ ಕಲಿಕಾ ಹಂತದ ಬಗ್ಗೆ ತರಬೇತಿ ನೀಡುವುದು ಮತ್ತು ಮಕ್ಕಳು ವಿವಿಧ ವಿಷಯಗಳಲ್ಲಿ ಕನಿಷ್ಟ ಕಲಿಕಾ ಹಂತವನ್ನು ಪಡೆಯುವಲ್ಲಿ ಬೇಕಾದ ತಂತ್ರಗಳನ್ನು ಕಲಿಯಲು ನೆರವಾಗುವುದು.
- ಶಾಲಾ ಪೂರ್ವಮಕ್ಕಳಿಗೂ ಅಗತ್ಯವಾದ ಶಿಕ್ಷಣ ಕ್ರಮವನ್ನು ಇದು ಅಭಿವೃದ್ಧಿ ಪಡಿಸುವುದು.
- ಶಿಕ್ಷಕರ ತರಬೇತಿ ಸಂಸ್ಥೆಗಳಿಗೆ ವಿಸ್ತೃತ ಸೇವೆಯನ್ನು ಒದಗಿಸುತ್ತದೆ ಅಲ್ಲದೆ ಎಲ್ಲ ವಿಸ್ತೃತ ಸೇವಾ ಕೇಂದ್ರಗಳ ಕಾರ್ಯವನ್ನು ಸಂಘಟಿಸುತ್ತದೆ.
- MHRD, NCERT ಮತ್ತು ಅಂತರಾಷ್ಟ್ರೀಯ ಏಜೆನ್ಸಿಗಳಾದ ಯುನೆಸ್ಕೊ, ಯೂನಿಸೆಫ್, ವರ್ಲ್ಡ್ ಬ್ಯಾಂಕ್ ಮೊದಲಾದವುಗಳ ಪ್ರಾಯೋಜಿತ ಯೋಜನೆಗಳು ಮತ್ತು ವ್ಯವಸ್ಥೆಗಳನ್ನು ಇದು ಅಳವಡಿಸುತ್ತದೆ.
- ಶಾಲಾ ಶಿಕ್ಷಣದ ಬಗೆಗಿನ ಹಲವು ವಿಷಯಗಳ ಬಗ್ಗೆ ಶೋಧನಾ ಅಧ್ಯಯನವನ್ನು ಇದು ನಡೆಸುತ್ತದೆ. ಇದಲ್ಲದೆ, ಶಾಲೆಗಳ ಸಂಶೋಧನಾ ಯೋಜನೆಗಳಿಗೆ ಹಣಕಾಸಿನ ನೆರವನ್ನು ನೀಡುತ್ತದೆ.

**SCERT ಯ ಕಾರ್ಯಗಳು :**

SCERT ಅನೇಕ ಕಾರ್ಯಗಳನ್ನು ನಿರ್ವಹಿಸುತ್ತದೆ.

ಎ) **ಪಠ್ಯಕ್ರಮ ಸುಧಾರಣೆ ಮತ್ತು ಪಠ್ಯಗಳ ಪರಾಮರ್ಶೆ.**

ಪ್ರಾಥಮಿಕ ಮತ್ತು ಮಾಧ್ಯಮಿಕ ತರಗತಿಗಳ ಪಠ್ಯಕ್ರಮ ಸುಧಾರಣೆ ಹಾಗೂ ಪಠ್ಯಗಳ ಪರಾಮರ್ಶೆ–ಇದು SCERT ಯ ಬಹಳ ಮುಖ್ಯಕಾರ್ಯವಾಗಿದೆ.

ಬಿ) **ಕಾರ್ಯಾಗಾರಗಳ ಆಯೋಜನೆ:** ಸಂಶೋಧನಾ ವಿಧಾನಗಳ ಕುರಿತು ಕಾರ್ಯಾಗಾರ ಗಳನ್ನು ವಿವಿಧ ವಲಯಗಳ ಸಾಮರ್ಥ್ಯಕ್ಕೆ ತಕ್ಕಂತೆ ಆಯೋಜಿಸುವುದು.

ಸಿ) **ಸೇವಾಪೂರ್ವ ಮತ್ತು ಸೇವೆಯಲ್ಲಿರುವ ಸಂದರ್ಭದ ತರಬೇತಿ:** ಶಿಕ್ಷಕರ ತರಬೇತಿ ಕಾರ್ಯಕ್ರಮವನ್ನು ಶಿಕ್ಷಕರ ಕೌಶಲ್ಯಾಭಿವೃದ್ಧಿಗಾಗಿ ನಡೆಸುವುದು.

ಡಿ) **ಸಮಗ್ರ ಗುಣಮಟ್ಟದ ನಿರ್ವಹಣೆ:** ಇದು ಮುಖ್ಯವಾಗಿ ಸಮಗ್ರ ಗುಣಮಟ್ಟ ನಿರ್ವಹಣೆಯ ತತ್ವವನ್ನು ಗಮನದಲ್ಲಿಟ್ಟುಕೊಂಡು ಗುಣಮಟ್ಟದ ದೋಷಗಳ ಮೂಲ ಕಾರಣಗಳನ್ನು ಪತ್ತೆಹಚ್ಚಿ ಅದನ್ನು ನಿರ್ಮೂಲನ ಮಾಡುತ್ತದೆ.

ಇ) **ಮಾರ್ಗದರ್ಶನ:** ಪ್ರಾಥಮಿಕ ಶಿಕ್ಷಣದ ಶಾಲೆಗಳು ಮತ್ತು ಶಿಕ್ಷಕರಿಗೆ ನಿರಂತರ ಮತ್ತು ಸಮಗ್ರ ಮೌಲ್ಯ ಮಾಪನ, ಅತ್ಯುತ್ತಮ ಕಲಿಕಾ ವಿಧಾನಗಳು, ಶೈಕ್ಷಣಿಕ ಮಾದರಿಗಳು, ಪರಿಣಾಮಕಾರಿ ಕಲಿಕೆಯ ವಿಧಾನಗಳು ಮೊದಲಾದ ವಿನೂತನ ಅಭ್ಯಾಸಗಳನ್ನು ಕುರಿತು ಮಾರ್ಗದರ್ಶನ ನೀಡುತ್ತದೆ.

ಎಫ್) **ಪುನರ್ಮನನ ಕಾರ್ಯಾಗಾರಗಳು:** ಶಿಕ್ಷಕರ ಕಾರ್ಯದಕ್ಷತೆಯ ವಿಸ್ತರಣೆ, ಸಂಶೋಧನಾ ಸಾಮರ್ಥ್ಯ, ನಾಯಕತ್ವ ಮನೋಧರ್ಮ ಮುಂತಾದವುಗಳನ್ನು ಅಭಿವೃದ್ಧಿಪಡಿಸುವುದರ ಮೂಲಕ ಶಿಕ್ಷಕರ ಸಬಲೀಕರಣಕ್ಕೆ ಅತ್ಯಗತ್ಯವಾದ ಅನೇಕ ಪುನರ್ಮನನ ಕಾರ್ಯಾಗಾರಗಳನ್ನು ಏರ್ಪಡಿಸುತ್ತದೆ.

ಒಟ್ಟಾರೆಯಾಗಿ, SCERT ಯು ಒಂದು ಶೃಂಗ ಸಂಸ್ಥೆಯಾಗಿದ್ದು ಶೈಕ್ಷಣಿಕ ನೆರವು, ಗುಣಮಟ್ಟದ ಅಭಿವೃದ್ಧಿಯನ್ನು ರಾಜ್ಯಮಟ್ಟದ ಪ್ರಾಥಮಿಕ ಶಿಕ್ಷಣ ವಲಯಕ್ಕೆ ನೀಡುವು ಅಧಿಕಾರವನ್ನು ಹೊಂದಿದೆ.

## 4.3.2 ರಾಜ್ಯಮಟ್ಟದ ಶೈಕ್ಷಣಿಕ ನಿರ್ವಹಣೆ ಮತ್ತು ತರಬೇತಿ ಸಂಸ್ಥೆ (The State Institute of Educational Mangement and Training [SIEMAT])

SIEMAT –ಯು ರಾಜ್ಯಮಟ್ಟದ ಒಂದು ಸ್ವಾಯತ್ತ ಸಂಸ್ಥೆಯಾಗಿದ್ದು, ಅನೇಕ ರಾಜ್ಯಗಳಲ್ಲಿ SCERT ಯ ಅಂಗಸಂಸ್ಥೆಯಾಗಿ ಸ್ಥಾಪನೆಗೊಂಡಿದ್ದು, ರಾಜ್ಯ ಘಟಕ ಕಾರ್ಯಕ್ರಮಗಳನ್ನು ನಿರ್ವಹಿಸುತ್ತದೆ. ಈ ಸಂಸ್ಥೆಯ ಪ್ರಧಾನ ಉದ್ದೇಶ ಏನೆಂದರೆ, ಶೈಕ್ಷಣಿಕ ಯೋಜನೆ ಮತ್ತು ನಿರ್ವಹಣೆಯಲ್ಲಿ ವೈವಿಧ್ಯಪೂರ್ಣ ಸಂಶೋಧನೆಗಳನ್ನು ನಡೆಸುವ ತರಬೇತಿ ಕಾರ್ಯಕ್ರಮಗಳನ್ನು ನಡೆಸುವುದು.

ಇತ್ತೀಚೆಗೆ ಜಿಲ್ಲಾಮಟ್ಟದ ಶೈಕ್ಷಣಿಕ ಯೋಜನೆಗಳನ್ನು ಸಮರ್ಥವಾಗಿ ಹಾಗೂ ಪರಿಣಾಮಕಾರಿಯಾಗಿ ನಿರ್ವಹಿಸಬಲ್ಲ ವೃತ್ತಿಪರರಿಗೆ ಹೆಚ್ಚಿನ ಬೇಡಿಕೆ ಇದೆ. ಇದರಿಂದಾಗಿ ವೃತ್ತಿಪರ ಸಾಮರ್ಥ್ಯವುಳ್ಳವರಿಗೆ ಅಗತ್ಯವಿದ್ದು, ಯೋಜನೆ, ಅಳವಡಿಕೆ ಹಾಗೂ ಶೈಕ್ಷಣಿಕ ಕಾರ್ಯಕ್ರಮಗಳ ಎಲ್ಲ ಹಂತಗಳ ನಿರ್ವಹಣೆಯಲ್ಲಿ ಇವರನ್ನು ತೊಡಗಿಸುವ ಕಾರ್ಯದಲ್ಲಿ ಈ ಸಂಸ್ಥೆ ನೆರವಾಗುತ್ತವೆ. SIEMAT –ಯು ಒಂದು ಸಾಂಸ್ಥಿಕ ಸಿದ್ಧತೆಯನ್ನು ಒದಗಿಸುವ ಮೂಲಕ ವೃತ್ತಿಪರರು, ಶೈಕ್ಷಣಿಕ ಯೋಜನೆ, ಆಡಳಿತ ಮತ್ತು ನಿರ್ವಹಣೆಯ ಕಾರ್ಯಗಳನ್ನು ರಾಜ್ಯ, ಜಿಲ್ಲೆ ಹಾಗೂ ಘಟಕಗಳ ಹಂತದಲ್ಲಿ ನಡೆಸಲು ಸಮರ್ಥವಾಗುವಂತೆ ಮಾಡುತ್ತದೆ.

SIEMAT ಯು ಶೈಕ್ಷಣಿಕ ನಿರ್ವಹಣಾ ಕ್ಷೇತ್ರದಲ್ಲಿ ಸಹಾಯಕ ಸಂಸ್ಥೆಗಳಾಗಿ ಸ್ಥಾಪನೆಗೊಂಡಿವೆ.

ಈ ಸಂಸ್ಥೆಯ ಪ್ರಧಾನ ವಯಕ್ತಿ ಡೈರೆಕ್ಟರ್ ಆಗಿದ್ದು ಒಂದು ಜನರಲ್‌ಬಾಡಿಯನ್ನು ಹೊಂದಿರುತ್ತದೆ. ಅದರಲ್ಲಿ ರಾಜ್ಯದ ಶಿಕ್ಷಣಮಂತ್ರಿ, ಎಕ್ಸಿಕ್ಯೂಟಿವ್ ಕಮಿಟಿಯ ಪ್ರಿನಿಪಲ್ ಸೆಕ್ರೆಟರಿಯರವರು ಪ್ರಧಾನ ಸದಸ್ಯರಾಗಿರುತ್ತಾರೆ.

ವಿವಿಧ ಇಲಾಖೆಗಳು ಈ ಸಂಸ್ಥೆಯೊಳಗೆ ರೂಪುಗೊಂಡಿದ್ದು,

ಉದಾಹರಣೆಗೆ–

SIEMAT ಯು ನಿಯಮಾವಳಿಗಳ ಯೋಜನೆ, ನಿರ್ವಹಣೆ, ಶೈಕ್ಷಣಿಕ ಹಣಕಾಸು, ಸಂಶೋಧನೆ, ಮೌಲ್ಯಮಾಪನ ಮತ್ತು ನೂತನ ಶಿಕ್ಷಣ ತಂತ್ರಜ್ಞಾನ ನಿರ್ವಹಣಾ ಮಾಹಿತಿ ವ್ಯವಸ್ಥೆ ಮೊದಲಾದ ವಿಭಾಗಗಳನ್ನು ಒಳಗೊಂಡಿರುತ್ತದೆ.

**i) SIEMAT ಯ ಪಾತ್ರ:**

ಶಾಲಾ ಶಿಕ್ಷಣದ ನಿರ್ವಹಣೆಯಲ್ಲಿ ಆಡಳಿತಾಧಿಕಾರಿಗಳಿಗೆ ಮತ್ತು ಕಾರ್ಯಕರ್ತರಿಗೆ ನಿರ್ವಹಣಾ ಕೌಶಲವನ್ನು ಒದಗಿಸುವುದೇ SIEMAT ಯ ಪ್ರಧಾನ ಪಾತ್ರವಾಗಿವೆ.

SIEMAT –ಈ ಕೆಳಕಂಡ ಪಾತ್ರವನ್ನು ನಿರ್ವಹಿಸುತ್ತದೆ–

ಎ) **ಜ್ಞಾನ ಸಂಪಾದನೆ:**

- ಸಂಶೋಧನೆಯ ಮೂಲಕ ಜ್ಞಾನದ ಉತ್ಪಾದನೆ
- ಇತರ ಮೂಲಗಳಿಂದ ಬೋಧನಾ ಕ್ರಮಗಳು
- ರಾಷ್ಟ್ರೀಯ ಮತ್ತು ಅಂತರರಾಷ್ಟ್ರೀಯ ಅನುಭವಗಳ ಮೂಲಕ ಕೇಸ್ ಸ್ಟಡೀಸ್‌ನ ಕ್ರೂಢೀಕರಣ.

ಬಿ) **ಜ್ಞಾನದ ಪ್ರಸರಣ:**

- ಮಾಧ್ಯಮಗಳ ಬಳಕೆಯಿಂದ
- ಪ್ರಕಟಣೆಗಳು
- ಸಂವೇದನಾ ಅಧಿವೇಶನಗಳು
- ವಿಚಾರಸಂಕಿರಣಗಳು ಮತ್ತು ಸಂವಾದಗಳು

ಸಿ) **ಜ್ಞಾನಗ್ರಹಿಕೆಯ ಸಾಮರ್ಥ್ಯ ಮತ್ತು ಅಭಿವೃದ್ಧಿ ಉದ್ದೇಶಗಳಿಗೆ ಬಳಕೆ.**
**ಉದಾಹರಣೆಗೆ–**

- ತರಬೇತುದಾರರ, ಕಾರ್ಯಾಗಾರ ನಿರ್ವಾಹಕರ, ಸಮುದಾಯದ ನಾಯಕರ ಪುನರ್ಮನನ ತರಗತಿಗಳು
- ವೃತ್ತಿಪರ ಮತ್ತು ತಾಂತ್ರಿಕ ಸಲಹೆಗಳ ನೀಡಿಕೆ.
- ಜಿಲ್ಲೆ ಮತ್ತು ಸಣ್ಣ ಹಂತದ ಯೋಜನೆ
- ಶಾಲಾ ಆಯ್ಕೆಗಳ ಅಭಿವೃದ್ಧಿ–ಸಾಂಸ್ಥಿಕ ಯೋಜನೆ
- ವಿಸ್ತೃತ ಕಾರ್ಯ

ಡಿ) **ಶೈಕ್ಷಣಿಕ ಸಂಸ್ಥೆಗಳಿಗೆ ತಂತ್ರಜ್ಞಾನದ ನೆರವು ಒದಗಿಸುವುದು.**

**SIEMAT ನ ಕಾರ್ಯಗಳು:**

ಪ್ರಾಥಮಿಕ ಶಿಕ್ಷಣದ ಪ್ರಮುಖ ಕಾರ್ಯಗಳನ್ನು ನಿರ್ವಹಿಸಲು ಸಂಸ್ಥೆಯು ಯೋಜನೆ ಮತ್ತು ನಿರ್ವಹಣೆಯಲ್ಲಿ ತನ್ನ ಜೊತೆಗೆ ಇತರ ರಾಜ್ಯ ಸಂಸ್ಥೆಗಳ ನೆರವನ್ನೂ ಪಡೆಯುತ್ತದೆ. ಎನ್.ಜಿ.ಓ. ಗಳು, ಸಂಶೋಧನಾ ಸಂಸ್ಥೆಗಳು, SRC, SCERT, DIET, BRC, CRC ನಂತಹ ಮತ್ತಿತರ ಸಂಸ್ಥೆಗಳ ನೆರವನ್ನು ಸಹ ಪಡೆದು SIEMAT ಸಂಸ್ಥೆಯು ಕಾರ್ಯನಿರ್ವಹಿಸುತ್ತದೆ.

**SIEMAT ಯ ಪ್ರಧಾನ ಕಾರ್ಯಗಳು ಹೀಗಿವೆ:**

ಎ) ರಾಜ್ಯಮಟ್ಟದಲ್ಲಿ ನಿಯಮಾವಳಿಗಳ ಯೋಜನೆಗೆ ಸಹಕಾರ/ನೆರವು ನೀಡುತ್ತದೆ.

ಬಿ) ವಿವಿಧ ಅಂಶಗಳನ್ನು ಕುರಿತ ಸಂಶೋಧನಾ ಅಧ್ಯಯನವನ್ನು ನಡೆಸುತ್ತದೆ.

ಸಿ) ರಾಜ್ಯ ಮತ್ತು ಜಿಲ್ಲಾ ಮಟ್ಟದ ಸಂಸ್ಥೆಗಳಿಗೆ ವೃತ್ತಿಪರ ಮಾರ್ಗದರ್ಶನ ನೀಡುತ್ತದೆ.

ಡಿ) ರಾಜ್ಯ, ಜಿಲ್ಲೆ ಹಾಗೂ ಪ್ರಾದೇಶಿಕ ಮಟ್ಟದಲ್ಲಿ ಶೈಕ್ಷಣಿಕ ಪ್ರಬಂಧಕರು, ಸಹಾಯಕ ಕಾರ್ಯಕರ್ತರು, ಸಮುದಾಯದ ಮುಂದಾಳುಗಳು ಮೊದಲಾದವರ ಕಾರ್ಯಕ್ಷಮತೆಯನ್ನು ಅಭಿವೃದ್ಧಿ ಪಡಿಸುತ್ತದೆ.

ಇ) ಶೈಕ್ಷಣಿಕ ಸಂಸ್ಥೆಗಳ ಮೌಲ್ಯಮಾಪನ, ಶೈಕ್ಷಣಿಕ ಕಾರ್ಯಕ್ರಮಗಳು ಅಲ್ಲದೆ ಪ್ರಚಲಿತ ಶಿಕ್ಷಣ ವ್ಯವಸ್ಥೆಗಳನ್ನು ಅಭಿವೃದ್ಧಿ ಪಡಿಸುತ್ತದೆ.

ಎಫ್) ಪ್ರಾಜೆಕ್ಟ್ ಯೋಜನೆಗಳು, ಅಳವಡಿಕೆ, ಮೇಲ್ವಿಚಾರಣೆ ಮತ್ತು ಮೌಲ್ಯಮಾಪನಗಳಿಗೆ ನರವು ನೀಡುತ್ತದೆ.

ಜಿ) ಶೈಕ್ಷಣಿಕ ಕಾರ್ಯಕರ್ತರಿಗೆ ಮಾರ್ಗದರ್ಶನ, ತರಬೇತಿ, ಹಾಗೂ ಸಕಾರಾತ್ಮಕ ಮನೋಧರ್ಮವನ್ನು ಬೆಳೆಸುವಲ್ಲಿ ನೆರವು ನೀಡುತ್ತದೆ.

ಎಚ್) ದಸ್ತಾವೇಜುಗಳ, ಕಡತಗಳ ವಿಭಾಗವು ಜಿಲ್ಲೆ, ರಾಜ್ಯ, ರಾಷ್ಟ್ರ ಹಾಗೂ ಅಂತರಾಷ್ಟ್ರೀಯ ಮಟ್ಟದ ಮಾಹಿತಿಗಳನ್ನು ಶಿಕ್ಷಣದ ಯೋಜನೆ ಮತ್ತು ನಿರ್ವಹಣಾ ಕ್ಷೇತ್ರಕ್ಕೆ ಸಂಬಂಧಿಸಿದಂತೆ ಹೊಂದಿರುತ್ತದೆ.

ಐ) ಶೈಕ್ಷಣಿಕ ಯೋಜನೆ, ನಿರ್ವಹಣಾ ಅಭಿವೃದ್ಧಿ, ಮೇಲ್ವಿಚಾರಣೆ, ತರಬೇತಿ ಮತ್ತು ಸಂಶೋಧನೆ ಕುರಿತ ಒಂದು ಅಂತರ್ಜಾಲವನ್ನು ರಾಜ್ಯದ ಒಳ ಮತ್ತು ಹೊರಗೆ ಇದು ಸೃಷ್ಟಿಸುತ್ತದೆ.

ಜೆ) ಶೈಕ್ಷಣಿಕ ಯೋಜನೆ ಮತ್ತು ನಿರ್ವಹಣೆಯಲ್ಲಿ ತೊಡಗಿದವರಿಗೆ ಒಂದು ವಿನಿಮಯ ವೇದಿಕೆಯನ್ನು ಕಲ್ಪಿಸುತ್ತದೆ.

ಕೆ) ಇತರ ರಾಜ್ಯಗಳು, ಭಾರತ ಸರ್ಕಾರ ಮತ್ತು ಇತರ ಶಿಕ್ಷಣ ಸಂಸ್ಥೆಗಳಿಗೆ ಮಾಹಿತಿ ಸೇವೆಯನ್ನು ಒದಗಿಸುವುದು.

ಎಲ್) ಎನ್.ಜಿ.ಓ. ಯೋಜನೆಗಳಿಗೆ ನೆರವು ನೀಡುವ ಮೂಲಕ ಶೈಕ್ಷಣಿಕ ಯೋಜನೆ ಮತ್ತು ನಿರ್ವಹಣೆಯನ್ನು ಮುಂದುವರೆಸುತ್ತದೆ.

**ಚಟುವಟಿಕೆ:2**

1. ಶೈಕ್ಷಣಿಕ ಸಂಶೋಧನೆ, ತರಬೇತಿ ಮತ್ತು ಅಭಿವೃದ್ಧಿಯನ್ನು ಕುರಿತು SCERT ನಿರ್ವಹಿಸುವ ಕಾರ್ಯಗಳನ್ನು ವಿಮರ್ಶಾತ್ಮಕವಾಗಿ ವಿಶ್ಲೇಷಿಸಿ.

______________________________

______________________________

______________________________

2. ಪ್ರಸ್ತುತ ಶೈಕ್ಷಣಿಕ ವ್ಯವಸ್ಥೆಯಲ್ಲಿ SIEMT ಮುಖ್ಯ ಪಾತ್ರ ನಿರ್ವಹಿಸುತ್ತದೆ–ಈ ಹೇಳಿಕೆಯನ್ನು ಸಮರ್ಥಿಸಿ.

______________________________

______________________________

______________________________

## 4.4 ಜಿಲ್ಲಾಮಟ್ಟದ ಪ್ರಾಥಮಿಕ ಶಿಕ್ಷಣದ ಸಾಂಸ್ಥಿಕ ರಚನೆ–ಜಿಲ್ಲಾಮಟ್ಟದ ಶಿಕ್ಷಣ ಮತ್ತು ತರಬೇತಿ ಸಂಸ್ಥೆಗಳು – (DIETS)

ಇದು 1986ರ ಶಿಕ್ಷಣದ ನೀತಿಯನ್ನು ಅನುಸರಿಸಿ ರೂಪುಗೊಂಡಿದೆ. ಅದರ ಬಗೆಗಿನ ಒಂದು ಸಮಗ್ರ ನೋಟವನ್ನು ಇಲ್ಲಿ ಚರ್ಚಿಸಬಹುದು.

ಜಿಲ್ಲಾಮಟ್ಟದ ಶಿಕ್ಷಣ ಮತ್ತು ತರಬೇತಿ ಸಂಸ್ಥೆಯು ಒಂದು ಏಜೆನ್ಸಿಯಾಗಿದ್ದು, ಶೈಕ್ಷಣಿಕ ವಲಯದ ಯೋಜನೆ, ಅನುಮೋದನೆ, ಮೇಲ್ವಿಚಾರಣೆ ಮೊದಲಾದವುಗಳ ಶಿಕ್ಷಕ ಚಟುವಟಿಕೆಗಳನ್ನು ನಿರ್ವಹಿಸುತ್ತದೆ


**ಜಿಲ್ಲಾಮಟ್ಟದ ಶಿಕ್ಷಣ ಮತ್ತು ತರಬೇತಿ ಸಂಸ್ಥೆಯ ಸ್ವರೂಪ: (structure of DIET)**

ಈ ಸಂಸ್ಥೆಯು ಸೇವಾಪೂರ್ವ ಮತ್ತು ಸೇವಾನಿರತ ಶಿಕ್ಷಕರಿಗೆ ವಸತಿ ವ್ಯವಸ್ಥೆ ಕಲ್ಪಿಸುವ ಮೂಲಕ ತರಬೇತಿ ನೀಡುತ್ತದೆ. ಪ್ರತಿ ಸಂಸ್ಥೆಯೂ ಈ ಕೆಳಕಂಡ ಏಳು ಶೈಕ್ಷಣಿಕ ಶಾಖೆಗಳನ್ನು ಹೊಂದಿದೆ.

- ✓ ಸೇವಾಪೂರ್ವ ಶಿಕ್ಷಣ ತರಬೇತಿ ಶಾಖೆ (PSTE)
- ✓ ಕಾರ್ಯಾನುಭವ ಶಾಖೆ (WE)
- ✓ ಜಿಲ್ಲಾ ಸಂಪನ್ಮೂಲ ಕೇಂದ್ರ (DRU)
- ✓ ಸೇವಾನಿರತ ಕಾರ್ಯಕ್ರಮಗಳು, ಕ್ಷೇತ್ರ ಸಂವಾದ, ರಚನಾತ್ಮಕತೆ, ಸಹಕಾರ ಶಾಖೆ (IFIC)
- ✓ ಪಠ್ಯಕ್ರಮ, ವಸ್ತು ಅಭಿವೃದ್ಧಿ ಮತ್ತು ಮೌಲ್ಯಮಾಪನ ಶಾಖೆ (CMDE)

- ✓ ಶೈಕ್ಷಣಿಕ ತಂತ್ರಜ್ಞಾನ ಶಾಖೆ (ET)
- ✓ ಯೋಜನೆ ಮತ್ತು ನಿರ್ವಹಣಾ ಶಾಖೆ (P & M)

ಈ ಶಾಖೆಗಳನ್ನು ಚಿತ್ರದಲ್ಲಿ ತೋರಿಸಲಾಗಿದೆ.




ಚಿತ್ರ – 4.4: DIET ನ ಶೈಕ್ಷಣಿಕ ಶಾಖೆಗಳು

## 4.4.1: DIET ನ ಪಾತ್ರ:

DIET ಯ ಪಾತ್ರಗಳು ಹೀಗಿವೆ:

- ❖ ಜಿಲ್ಲಾ ಮತ್ತು ಉಪ–ಜಿಲ್ಲಾಮಟ್ಟದಲ್ಲಿನ ಯಾವುದೇ ತೊಂದರೆಗಳನ್ನು ನೇರ ಮಾತುಕತೆ ನಡೆಸುವ ಮೂಲಕ ಪತ್ತೆಹಚ್ಚುವುದು.
- ❖ ಸಣ್ಣ ಸಂಶೋಧನಾ ಅಧ್ಯಯನಗಳನ್ನು ಪ್ರಾಥಮಿಕ ಶಿಕ್ಷಣದ ಅನೇಕ ದೃಷ್ಟಿಕೋನಗಳಲ್ಲಿ ರೂಪಿಸುವುದು ಮತ್ತು ನಡೆಸುವುದು.
- ❖ ಜಿಲ್ಲೆಯ ಕಾರ್ಯಶೋಧನಾ ಚಟುವಟಿಕೆಯನ್ನು ಪರಿವೀಕ್ಷಿಸಲು
- ❖ ಶಿಕ್ಷಕರು, ಶೋಧನಾ ಕಾರ್ಯದವರು ಕಾರ್ಯಶೋಧನೆಯನ್ನು ಕೈಗೊಳ್ಳಲು ಮತ್ತು ಆಕರಗಳ ನೆರವನ್ನು ಒದಗಿಸಲು ತರಬೇತಿ ನೀಡಲು
- ❖ ಶೋಧನಾ ವಿವರವನ್ನು ಹಂಚಿಕೊಳ್ಳಲು, ಅವುಗಳನ್ನು ಜಿಲ್ಲೆಯ ಯೋಜನೆಗಳಲ್ಲಿ ಅಳವಡಿಸಲು ಮತ್ತು ಸಂಬಂಧಿಸಿದ ಮಧ್ಯಸ್ಥಿಕೆಗಳನ್ನು ಮತ್ತಷ್ಟು ಅಭಿವೃದ್ಧಿಪಡಿಸಲು.

## 4.4.2 DIET'S ನ ಕರ್ತವ್ಯಗಳು

ಪ್ರತಿಯೊಂದು DIET – ಈ ಕೆಳಕಂಡ ಕಾರ್ಯಗಳನ್ನು ನಿರ್ವಹಿಸಬೇಕು.

**ಅ) ತರಬೇತಿ ಮತ್ತು ಪುನರ್ಮನನ ಕೆಳಕಂಡ ನಿರ್ದೇಶಿತ ಗುಂಪುಗಳ ತರಬೇತಿ ಮತ್ತು ಪುನರ್ಮನನ**

- ಪ್ರಾಥಮಿಕ ಶಾಲಾ ಶಿಕ್ಷಕರು (ಇಬ್ಬರು/ಸೇವೆಗೆ ಮುನ್ನ ಮತ್ತು ಸೇವೆಯಲ್ಲಿ)

- ತರಬೇತಿ, ಪುನರ್ಮನನ–ಸಾಂಸ್ಥಿಕ ಹಂತದಲ್ಲಿ–ಹೆಡ್‌ಮಾಸ್ಟರ್, ಶಾಲಾ ಮುಖ್ಯೋಪಾಧ್ಯಾಯರು ಮತ್ತು ಶಿಕ್ಷಣಾಧಿಕಾರಿಗಳ ವಿಭಾಗ.
- (ಪ್ರವೇಶದ ಹಂತ ಮತ್ತು ಕಲಿಕೆಯ ಹಂತದ) ಅನೌಪಚಾರಿಕ ಮತ್ತು ವಯಸ್ಕರ ಶಿಕ್ಷಣದ ತರಬೇತುದಾರರು ಮತ್ತು ಮೇಲ್ವಿಚಾರಕರು.
- ಜಿಲ್ಲಾ ಶಿಕ್ಷಣ ಮಂಡಳಿ ಮತ್ತು ಗ್ರಾಮ ಶಿಕ್ಷಣ ಸಮಿತಿ (VEC's- Village Education Centre) ಸಮುದಾಯದ ನಾಯಕರು, ಯುವ ಜನತೆ ಮತ್ತು ಇತರ ಸ್ವಯಂ ಸೇವಕರು ಹಾಗೂ ಯಾರು ಶೈಕ್ಷಣಿಕ ಕಾರ್ಯಕರ್ತರಾಗಬಯಸುವರೋ ಆ ಸದಸ್ಯರ ಪುನರ್ಮನನ ಕಾರ್ಯಕ್ರಮ.

**ಆ) ಜಿಲ್ಲಾ ಪ್ರಾಥಮಿಕ ಮತ್ತು ವಯಸ್ಕ ಶಿಕ್ಷಣ ವ್ಯವಸ್ಥೆಗೆ ಶೈಕ್ಷಣಿಕ ಆಕರಗಳ ನೆರವು.**

- ಕಾರ್ಯಕ್ಷೇತ್ರದೊಡನೆ ವಿಸ್ತೃತ ಚಟುವಟಿಕೆಗಳು ಮತ್ತು ಸಂವಾದ.
- ಶಿಕ್ಷಕರ ಆಕರಗಳ, ಕಲಿಕಾ ಕೇಂದ್ರ ಮತ್ತು ತರಬೇತುದಾರರ ಸೇವೆಗಳ ಅನುಕೂಲತೆ.
- ಸ್ಥಳೀಯ ವಸ್ತುಗಳಿಗೆ ಸಂಬಂಧಿಸಿದ ಅಭಿವೃದ್ಧಿ ಮತ್ತು ಬೋಧನಾ ಕ್ರಮ ಮತ್ತು ಮೌಲ್ಯಮಾಪನ ಪರಿಕರಗಳು ಇತ್ಯಾದಿ.
- ಪ್ರಾಥಮಿಕ ಶಾಲೆಗಳು ಮತ್ತು NEE/AE ಕಾರ್ಯಕ್ರಮಗಳ ಮೌಲ್ಯಮಾಪನಾ ಕೇಂದ್ರವಾಗಿ ಸೇವೆ ಸಲ್ಲಿಸುವುದು.

**ಇ) ಕಾರ್ಯಶೋಧನೆ ಮತ್ತು ಪ್ರಯೋಗ:**

- ಜಿಲ್ಲಾ ಪ್ರಾಥಮಿಕ ಮತ್ತು ವಯಸ್ಕರ ಶಿಕ್ಷಣದ ಉದ್ದೇಶ ಸಾಫಲ್ಯತೆಯ ನಿರ್ದಿಷ್ಟ ತೊಂದರೆಗಳನ್ನು ಎದುರಿಸುವುದು.
- DIET ಯ ಕರ್ತವ್ಯಗಳನ್ನು ಕಾರ್ಯಗತಗೊಳಿಸಲು ಹೆಚ್ಚಿನ ಭೌತಿಕ ಸೌಲಭ್ಯಗಳು (ಉದಾ: ಕಟ್ಟಡ ಇತ್ಯಾದಿ) ತರಬೇತಿ ವಸ್ತುಗಳು, ಕ್ರಮಗಳು ಉಪಕರಣಗಳು ಹೆಚ್ಚುವರಿ ಅರ್ಹತೆಯುಳ್ಳ ಮತ್ತು ಸಮರ್ಥ ಶಿಕ್ಷಕರು, ಸ್ವಾಯತ್ತತೆ, ಅಧಿಕಾರಿಗಳ ತರಬೇತಿ ಮತ್ತು ಆರ್ಥಿಕ ಅನುದಾನಗಳನ್ನು ನೀಡಲಾಗುವುದು. ಇದರ ಜೊತೆಗೆ DIET ನಲ್ಲಿ ಹೊಸ ಶಾಖೆಗಳನ್ನು ಈ ಕೆಳಕಂಡಂತೆ ನಿರ್ಮಿಸಲಾಗುವುದು.
- ಸೇವಾ ಪೂರ್ವ ಶಿಕ್ಷಕರ ಶಿಕ್ಷಣ ಕೇಂದ್ರ ಶಾಖೆ
- ಪಠ್ಯಕ್ರಮ, ವಸ್ತು–ವಿಷಯ ಅಭಿವೃದ್ಧಿ ಮತ್ತು ಮೌಲ್ಯಮಾಪನ ಶಾಖೆ
- ಕಾರ್ಯಾನುಭವ ಶಾಖೆ
- ಜಿಲ್ಲಾ ಸಂಪನ್ಮೂಲ ಕೇಂದ್ರ (DRU-District Resource Unit)–ವಯಸ್ಕ ಮತ್ತು ಅನೌಪಚಾರಿಕ ಶಿಕ್ಷಣ ಶಾಖೆ, ಮತ್ತಿತರ ಶಾಖೆಗಳು ಉದಾಹರಣೆಗೆ ಯೋಜನೆ ಮತ್ತು ನಿರ್ವಹಣೆ, ಶೈಕ್ಷಣಿಕ ತಂತ್ರಜ್ಞಾನ ಮತ್ತು ಸೇವಾವಧಿಯ ಕಾರ್ಯಕ್ರಮಗಳು, ಕ್ಷೇತ್ರ ಸಂವಾದ ಮತ್ತು ವಿನೂತನ ಸಂಘಟನಾ ಶಾಖೆಗಳು.

## 4.5 ಬ್ಲಾಕ್ ಹಂತದಲ್ಲಿ ಪ್ರಾಥಮಿಕ ಶಿಕ್ಷಣದ ಸಾಂಸ್ಥಿಕ ರಚನೆ: ಬ್ಲಾಕ್ ರಿಸೋರ್ಸ್ ಸೆಂಟರ್ (BRC):

ಜಿಲ್ಲಾ ಮಟ್ಟದ ಉತ್ತಮ ಗುಣಮಟ್ಟದ ಶಿಕ್ಷಣವನ್ನು ಅಭಿವೃದ್ಧಿಪಡಿಸುವ ಹೊಣೆಗಾರಿಕೆಯನ್ನು DIETS ಗಳಿಗೆ ನೀಡಲಾಗಿದೆ. ಬ್ಲಾಕ್ ಹಂತದಲ್ಲಿ BRC ಗಳು ಶೈಕ್ಷಣಿಕ ನೆರವು ಹಾಗೂ ಶಿಕ್ಷಣ ಮಾರ್ಗದರ್ಶನವನ್ನು ಶಿಕ್ಷಕರು ಮತ್ತು ಶಾಲೆಗಳಿಗೆ ನೀಡುವ ಗುರಿ ಹೊಂದಿದ್ದು, ಈ ಮೂಲಕ ಶಾಲಾ ಮಟ್ಟದಲ್ಲಿ ಗುಣಮಟ್ಟದ ವೃದ್ಧಿಕೌಶಲವನ್ನು ಅಳವಡಿಸುತ್ತಿದೆ.

BRC ಯು 100 ಹಳ್ಳಿಗಳ ಒಂದು ಗುಂಪಾಗಿದ್ದು, ಬ್ಲಾಕ್ ಎಜುಕೇಷನ್ ಆಫೀಸರ್ ಮತ್ತು ತಾಂತ್ರಿಕ ಸಹಾಯಾಧಿಕಾರಿಗಳಾದ ಡೇಟಾ ಆಪರೇಟರ್ಸ್, ಜೂನಿಯರ್ ಇಂಜಿನಿಯರ್ಸ್, ಬ್ಲಾಕ್ ಕೋ-ಆರ್ಡಿನೇಟರ್ಸ್, ಸಂಪನ್ಮೂಲ ಶಿಕ್ಷಕರು, ಮತ್ತಿತರರ ನೆರವಿನಿಂದ BRC ಕಾರ್ಯನಿರ್ವಹಿಸುತ್ತದೆ.

### 4.5.1 BRC ಪಾತ್ರ ಮತ್ತು ಕರ್ತವ್ಯಗಳು:

BRC ಯು ಸರ್ವಶಿಕ್ಷಣ ಅಭಿಯಾನದ SSA ಕಾರ್ಯಚಟುವಟಕೆಗಳನ್ನು, ಯೋಜಿಸುವ, ಜಾರಿಗೆ ತರುವ, ನಿರ್ವಹಿಸುವ ಹೊಣೆಯನ್ನು ಹೊಂದಿರಬೇಕು. ಅದು ಶಿಕ್ಷಕರಿಗೆ ತರಬೇತಿ ನೀಡುತ್ತದೆ. ವಸ್ತು-ವಿಷಯಗಳನ್ನು ಅಭಿವೃದ್ಧಿಪಡಿಸುತ್ತದೆ. ಸಮುದಾಯದ ಚಲನಶೀಲತೆ ಹಾಗೂ ಕಾರ್ಯಶೋಧನೆಗೆ ನೆರವಾಗುತ್ತದೆ. ಶಿಕ್ಷಕರು & ವಿದ್ಯಾರ್ಥಿಗಳಲ್ಲಿ ಅನೇಕ ಸ್ಪರ್ಧೆಗಳು, ಚಟುವಟಿಕೆಗಳನ್ನು ಆಯೋಜಿಸುತ್ತದೆ. ಪ್ರಾಥಮಿಕ ಶಿಕ್ಷಣದ ಯಾವುದೇ ಮಾಹಿತಿಯನ್ನು BRC ಒದಗಿಸುತ್ತದೆ. ಜೊತೆಗೆ ಜಿಲ್ಲಾ ಮತ್ತು ರಾಜ್ಯಮಟ್ಟದ ಅಧಿಕಾರಿಗಳ ಲಭ್ಯತೆಗೆ ನೆರವಾಗುತ್ತದೆ.

BRC ಯು ಪ್ರಾಥಮಿಕ ಶಾಲಾ ಶಿಕ್ಷಕರಿಗೆ ಎಲ್ಲ ವಿಧದ ಶೈಕ್ಷಣಿಕ ನೆರವನ್ನು ಒದಗಿಸುವ ಸಂಪನ್ಮೂಲ ಕೇಂದ್ರವಾಗಿದೆ. ಈ ಕೆಳಕಂಡ ಕಾರ್ಯಗಳನ್ನು BRC ನಿರ್ವಹಿಸುತ್ತದೆ.

- ಪ್ರಾಥಮಿಕ ಶಾಲೆಗೆ ಸೂಕ್ತ ಸ್ಥಳ ಮತ್ತು ಉಪಕರಣಗಳನ್ನು ನೀಡುವುದು.
- ಶಾಲೆಯ ಕಟ್ಟಡದ ಈಗಿನ ದುರಸ್ತಿ ಕಾರ್ಯಗಳನ್ನು ನಿರ್ವಹಿಸುವುದು ಮತ್ತು ಅಧಿಕೃತ ಅನುಮತಿ ದೊರೆತರೆ ಹೊಸಕಟ್ಟಡ ನಿರ್ಮಾಣದ ಕಾರ್ಯನಿರ್ವಹಿಸುವುದು.
- ಶಾಲೆಗೆ ಅಗತ್ಯವಿರುವ ಮೇಲ್ವಿಚಾರಣೆ ನಡೆಸುವುದು.
- ತನ್ನ ಕಾರ್ಯಕ್ಷೇತ್ರದಲ್ಲಿ ಕಡ್ಡಾಯ ಹಾಜರಾತಿಯ ನಿಯಮದ ಜಾರಿಯ ಹೊಣೆಗಾರಿಕೆ ಹೊಂದಿರುವುದು.
- ಎಲ್ಲೆಲ್ಲಿ ಸಾಧ್ಯವೋ ಅಲ್ಲಿ ಮಕ್ಕಳಿಗೆ ಮಧ್ಯಾಹ್ನದ ಬಿಸಿಯೂಟದ ವ್ಯವಸ್ಥೆ ಮಾಡುವುದು.
- ಮಕ್ಕಳಿಗೆ ಶಾಲಾ ಸಮವಸ್ತ್ರ ನೀಡುವುದು.
- ಶಾಲಾ ಕಾರ್ಯಕ್ರಮಗಳನ್ನು ಆಚರಿಸುವುದು ಮತ್ತು ಪ್ರವಾಸದ ಆಯೋಜನೆ ಮತ್ತು ಸಾಂಸ್ಕೃತಿಕ ಕಾರ್ಯಕ್ರಮಗಳನ್ನು ಶಾಲೆಯಲ್ಲಿ ಆಯೋಜಿಸುವುದು.

- ಸಾಂಸ್ಥಿಕ ಹಂತದಲ್ಲಿ ಕೈಗೊಂಡ ರಚನಾತ್ಮಕ ಶಿಕ್ಷಣ ಕಾರ್ಯಗಳ ಗುಣಮಟ್ಟ ಮತ್ತು ಅಭಿವೃದ್ಧಿಯನ್ನು ಸಮೀಕ್ಷಿಸುವುದು.
- ಸಾಂಸ್ಥಿಕ ಹಂತದ ಕಾರ್ಯಗಳನ್ನು ಮತ್ತು ಜಾಗೃತಿ ಜಾಥಾಗಳನ್ನು ಆಯೋಜಿಸುವುದು.
- NGO, SHG (Self Help Group) ಸರ್ಕಾರಿ ಇಲಾಖೆಗಳೊಂದಿಗೆ ಸಹಕಾರ & ಸಂಘಟನೆಯನ್ನು ಹೊಂದಿರುವುದು.
- ಕಾಲಾನುಕ್ರಮ ಪರಿಶೀಲನಾ ಸಭೆಯನ್ನು ಸಂಸ್ಥೆಯ ಇತರ ಅಧಿಕಾರಿಗಳೊಡನೆ ನಿರ್ವಹಿಸುವುದು.
- ತರಬೇತಿಯ ಪ್ರಭಾವವನ್ನು ಪರಿಗಣಿಸಿ ಸಾಂಸ್ಥಿಕ ಹಂತದ ಮೇಲ್ವಿಚಾರಣೆ ಮತ್ತು ತರಬೇತಿ ಕಾರ್ಯಕ್ರಮಗಳನ್ನು ನೋಡಿಕೊಳ್ಳುವುದು.

## 4.6 ಕ್ಲಸ್ಟರ್ ಹಂತದ ಸಾಂಸ್ಥಿಕ ರಚನೆಯ ಪ್ರಾಥಮಿಕ ಶಿಕ್ಷಣ: ಕ್ಲಸ್ಟರ್ ರಿಸೋರ್ಸ್ ಸೆಂಟರ್ (CRC):

ಕ್ಲಸ್ಟರ್ ಎಂದರೆ 8 ರಿಂದ 10 ಶಾಲೆಗಳ ಒಂದು ಗುಂಪು. ಇದರಲ್ಲಿ ವಿವಿಧ ಸಂಸ್ಥೆಗಳು ತಮ್ಮೊಳಗಿನ ಸಂಪನ್ಮೂಲಗಳು, ಅಧಿಕಾರಿಗಳು, ವಸ್ತುಗಳು, ಬೋಧನಾ ಕ್ರಮಗಳು ಮುಂತಾದವುಗಳನ್ನು ಪರಸ್ಪರ ವಿನಿಮಯ ಮಾಡಿಕೊಳ್ಳುವ ಮೂಲಕ ಕಾರ್ಯನಿರ್ವಹಣೆ ಮಾಡುವುದು. CRC ಯ ಮೂಲಕ ಶಿಕ್ಷಕರು ಒಟ್ಟಾಗುವ, ಮಾಹಿತಿ, ಅನುಭವ, ಅಭಿಪ್ರಾಯಗಳನ್ನು ಪರಸ್ಪರ ವಿನಿಮಯ ಮಾಡಿಕೊಳ್ಳುವ ಮೂಲಕ ತಮ್ಮ ಒಟ್ಟಾರೆ ವೃತ್ತಿ ಕೌಶಲ್ಯದ ಅಭಿವೃದ್ಧಿಗೆ ಕಾರಣವಾಗುತ್ತದೆ.

ಕ್ಲಸ್ಟರ್ ಹಂತದಲ್ಲಿ ಇದೇ ಬಗೆಯ ಕಾರ್ಯಗಳ ನಿರ್ವಹಣೆಗೆ CRC ಅಗತ್ಯ. ಆದರೆ, BRC ಯು ಬ್ಲಾಕ್ ಲೆವೆಲ್‌ನಲ್ಲಿ ಅಗತ್ಯ. ಈ ಶಾಲೆಗಳ ಮುಖ್ಯೋಪಾಧ್ಯಾಯರು ಪಂಚಾಯತ್ ಎಜುಕೇಷನ್ ಆಫೀಸರ್ ಎಂದು ಗ್ರಾಮೀಣ ಪ್ರದೇಶಗಳಲ್ಲಿ ಕರೆಯಲಾಗುವ ಕಾರಣ ಇವರಿಗೆ ಎಲ್ಲ ಲೆಕ್ಕ-ಪತ್ರಗಳ ದಾಖಲಾತಿಯನ್ನು ನೀಡಬೇಕಾಗುವುದು. ಹಾಗೆಯೇ ಕ್ಲಸ್ಟರ್ ಎಜುಕೇಷನ್ ಆಫೀಸರ್ಸ್ ನಗರ ಪ್ರದೇಶಗಳಿಗೆ ಮೀಸಲು.

### 4.6.1- CRC ಗಳ ಪಾತ್ರ:

1. ಶಾಲೆಗಳ ಕಾರ್ಯನಿರ್ವಹಣೆಗೆ ನಿಯಮ ಮತ್ತು ನಿಬಂಧನೆಗಳನ್ನು ಸಿದ್ಧಪಡಿಸುವುದು.
2. ಶಾಲೆಗಳ ಹಣಕಾಸನ್ನು ನಿರ್ವಹಿಸುವುದು ಮತ್ತು ಹಂಚುವುದು
3. ಹೊಸ ಪಠ್ಯಕ್ರಮಗಳನ್ನು ಅಳವಡಿಸಲು ಬೇಕಾದ ಸಿದ್ಧತೆ ಮಾಡುವುದು.
4. ಶಿಕ್ಷಕರಿಗೆ ಕಾರ್ಯಾಗಾರಗಳನ್ನು ಏರ್ಪಡಿಸುವುದು.

### 4.6.2- CRC ಗಳ ಕರ್ತವ್ಯಗಳು:

CRC-ಕ್ಲಸ್ಟರ್ ರಿಸೋರ್ಸ್ ಸೆಂಟರ್‌ಗಳು ಶಿಕ್ಷಕರ ಸಬಲೀಕರಣದ ಕೇಂದ್ರಗಳಾಗಿವೆ. ಇಲ್ಲಿ ಶಿಕ್ಷಕರು ತಮ್ಮ ಅನುಭವಗಳು, ರಚನಾತ್ಮಕ ಹಾಗೂ ಹೊಸ ಬೋಧನಾ ಕ್ರಮಗಳು ಇವುಗಳನ್ನು ಹಂಚಿಕೊಳ್ಳಲು ಸಾಧ್ಯ. ಕ್ಲಸ್ಟರ್ ರಿಸೋರ್ಸ್ ಸೆಂಟರ್‌ನ ಕರ್ತವ್ಯಗಳು ಹೀಗಿವೆ.

- ❖ ಸಂಕೀರ್ಣದಲ್ಲಿ ಶಾಲೆಗಳ ತನಿಖೆ ಮತ್ತು ಮೇಲ್ವಿಚಾರಣೆ

- ಸಂಕೀರ್ಣದೊಳಗಿನ ಶಿಕ್ಷಕರ ವರ್ಗಾವಣೆಗಳನ್ನು ಕೈಗೊಳ್ಳುವುದು.
- ವೇತನಗಳ ಮಂಜೂರಾತಿ.
- ಪೀಠೋಪಕರಣಗಳ ಹಂಚಿಕೆ
- ಉಪಕರಣಗಳು & ಲೇಖನ ಸಾಮಗ್ರಿ
- ಸಂಕೀರ್ಣದಲ್ಲಿ ರಜೆಯ ಪರ್ಯಾಯ ಸೌಕರ್ಯ
- ಸಂಕೀರ್ಣದಲ್ಲಿ ಶಾಲಾ ಮುಖ್ಯಸ್ಥರಿಗೆ ಸಾಂದರ್ಭಿಕ ರಜೆಯ ಮಂಜೂರಾತಿ
- BRC ಜಿಲ್ಲೆ ಮತ್ತು ರಾಜ್ಯ ಕಾರ್ಯಭಾರಗಳಿಗೆ ಮಾಹಿತಿಗಳ ಸಂಗ್ರಹ ಮತ್ತು ರವಾನೆ
- ಶೈಕ್ಷಣಿಕ ವಸ್ತುಗಳ ಅಭಿವೃದ್ಧಿ
- ಶೈಕ್ಷಣಿಕ ಕಾರ್ಯಾಗಾರಗಳು
- ಶಿಕ್ಷಕರಿಗಾಗಿ ನಿಯಮಿತ ಸಭೆಗಳನ್ನು ಏರ್ಪಡಿಸುವುದು.
- ಶೈಕ್ಷಣಿಕ ಮತ್ತು ಶಿಕ್ಷಣೇತರ ಕಾರ್ಯಕ್ರಮಗಳನ್ನು ಏರ್ಪಡಿಸುವುದು.
- ಬೋಧನೆ ಮತ್ತು ಕಲಿಕೆಯ ಆಕರಗಳ ಉತ್ತಮ ಸೌಲಭ್ಯವನ್ನು ಒದಗಿಸುವುದು.
- ಸೇವೆಯಲ್ಲಿನ ತರಬೇತಿ ಕಾರ್ಯಕ್ರಮಗಳ ಆಯೋಜನೆ ಇವರಿಗಾಗಿ–
- ಶಾಲೆಗಳ ಮೇಲ್ವಿಚಾರಣೆ

ಗ್ರಾಮೀಣ ಶಿಕ್ಷಕರ ಮತ್ತು ವಿದ್ಯಾರ್ಥಿಗಳ ಪ್ರತ್ಯೇಕತೆಗೆ CRC ಯ ತಡೆ. ಇದು ಶಾಲಾ ಆಡಳಿತ ಮತ್ತು ಲೆಕ್ಕಪತ್ರಗಳನ್ನು ಉತ್ತಮಗೊಳಿಸುವುದು.

## 4.7 ಎಲ್ಲವನ್ನು ಒಟ್ಟುಗೂಡಿಸೋಣ:

ಭಾರತ ಸರ್ಕಾರದ MHRD ಯು ದೇಶದಲ್ಲಿ, ಸಾಮಾನ್ಯ ಮತ್ತು ಪ್ರಾಥಮಿಕ ಶಾಲಾ ಶಿಕ್ಷಣವು ವಿವಿಧ ನೆಲೆಗಳಲ್ಲಿ ಶ್ರೇಷ್ಠತೆಯನ್ನು ಸಾಧಿಸುವುದಕ್ಕಾಗಿ, ಗುಣಮಟ್ಟದ ವೃದ್ಧಿಗಾಗಿ ಪ್ರಾಥಮಿಕ ಶಿಕ್ಷಣದ ಸಾರ್ವತ್ರೀಕರಣ (UEE-Universalisation of Elementary Education) ಹೊಣೆಗಾರಿಕೆಗಳನ್ನು ವಿಕೇಂದ್ರೀಕರಿಸಿದೆ.

ರಾಷ್ಟ್ರೀಯ ಮಟ್ಟದಲ್ಲಿ ಶಿಕ್ಷಣದ ಮೂಲಸಂಸ್ಥೆ NCERT ಯು 1961ರಲ್ಲಿ ಸ್ಥಾಪನೆಗೊಂಡಿತು. NCERT ಯ ನಿರ್ದಿಷ್ಟ ಕಾರ್ಯಗಳೆಂದರೆ ಶಾಲಾ ಶಿಕ್ಷಣದ ಗುಣಮಟ್ಟವನ್ನು ವೃದ್ಧಿಸುವುದು ಮತ್ತು ಶೈಕ್ಷಣಿಕ ವಿಷಯಗಳಿಗೆ ಸಂಬಂಧಿಸಿದಂತೆ ಎಂ.ಎಚ್.ಆರ್‌ಡಿಗೆ ಸಲಹೆ ನೀಡುವುದು, NCERT ಯ ವಿವಿಧ ಪಾತ್ರಗಳು ಮತ್ತು ಕಾರ್ಯಗಳನ್ನು ಈ ಘಟಕದಲ್ಲಿ ನಿರೂಪಿಸಲಾಗಿದೆ.

ಪ್ರಾಥಮಿಕ ಶಿಕ್ಷಣದ ಸಾರ್ವತ್ರೀಕರಣದ (UEE) ಉದ್ದೇಶವನ್ನು ಸಾಧಿಸಲು ರಾಜ್ಯಮಟ್ಟದಲ್ಲಿ ಎರಡು ಮುಖ್ಯ ವಿಧದ ಸಂಸ್ಥೆಗಳು ಕಾರ್ಯನಿರ್ವಹಿಸುತ್ತಿವೆ.

ಅವು SCERT ಮತ್ತು SIEMT (SCERT- State Council of Educational Research and Training) ರಾಷ್ಟ್ರಮಟ್ಟದಲ್ಲಿ NCERT ಯಂತೆ ಅದೇ ರೀತಿಯ ಕಾರ್ಯಗಳನ್ನು ರಾಜ್ಯಮಟ್ಟದಲ್ಲಿ NCERT ನಿರ್ವಹಿಸುತ್ತದೆ.

NCERT ಯು ಅನೇಕ ವಿಭಾಗಗಳನ್ನು ಹೊಂದಿದೆ. ರಾಜ್ಯ ಶಿಕ್ಷಣ ವಿಭಾಗದ ಶೈಕ್ಷಣಿಕ ವಲಯವಿದು. ಮತ್ತೊಂದು ರಾಜ್ಯಮಟ್ಟದ ಸಂಸ್ಥೆ ಎಂದರೆ SIEMAT (State Institute of Educational Management and Training) ಶೈಕ್ಷಣಿಕ ಆಡಳಿತದ ಜೊತೆಗೆ ಅಧಿಕಾರಿಗಳ ಕಾರ್ಯನಿರ್ವಹಣಾ ಕೌಶಲವನ್ನು ಮತ್ತು ಕ್ಷಮತೆಯನ್ನು ವೃದ್ಧಿಸುವುದು ಇದರ ಮುಖ್ಯ ಪಾತ್ರವಾಗಿದೆ. ಇದಲ್ಲದೆ, ರಾಷ್ಟ್ರಮಟ್ಟದಲ್ಲಿ ಪಾಲಿಸಿ ಪ್ಲಾನಿಂಗ್ ಮತ್ತು ಇತರ ಕಾರ್ಯಗಳಿಗೆ ಸಹ ಇದು ನೆರವಾಗುವುದು.

ಮುಂದೆ ಪ್ರಾಥಮಿಕ ಶಿಕ್ಷಣದ ವಿಕೇಂದ್ರೀಕರಣವು NPE– 1986ರ ಅನುಮೋದನೆಯಿಂದ ಉಂಟಾಯಿತು. ಜಿಲ್ಲಾಮಟ್ಟದ ಶಿಕ್ಷಣ ಸಂಸ್ಥೆಗಳು DIETS ಎಂದು ರೂಪು ತಳೆದವು. ಇವುಗಳು ಶಿಕ್ಷಕರ ಸೇವಾಪೂರ್ವ ಮತ್ತು ಸೇವಾನಿತರ ಸಂದರ್ಭದ ಕೋರ್ಸ್‌ಗಳನು ಆಯೋಜಿಸದವು. ಇದರ ಜೊತೆಗೆ DIETS ಗಳ ಮೂಲಕ ಪ್ರಾಥಮಿಕ ಶಿಕ್ಷಣ, ಪಠ್ಯಕ್ರಮ ಸಿದ್ಧತೆ ಮತ್ತು ಅಧ್ಯಯನ ಸಾಮಗ್ರಿಗಳ ಅಭಿವೃದ್ಧಿಯನ್ನು ಕುರಿತ ಮೈನರ್ ರಿಸರ್ಚ್ ಪ್ರಾಜೆಕ್ಟ್‌ಗಳು ಕಾರ್ಯಾರಂಭಗೊಂಡವು. ಇದು ಜಿಲ್ಲಾ ಸಂಪನ್ಮೂಲ ಕೇಂದ್ರವನ್ನ ಸಹ ಹೊಂದಿದೆ (DRU-District Resource Unit).

ಮುಂದೆ ವಿಕೇಂದ್ರೀಕರಣವು ಬ್ಲಾಕ್ ರಿಸೋರ್ಸ್ ಸೆಂಟರ್ ಮತ್ತು ಕ್ಲಸ್ಟರ್ ರಿಸೋರ್ಸ್ ಸೆಂಟರ್‌ಗಳ ಆರಂಭಕ್ಕೆ ಕಾರಣವಾಯಿತು. ಪ್ರಾಥಮಿಕ ಶಿಕ್ಷಣದ ಶಿಕ್ಷಕರು ಮತ್ತು ಶಾಲೆಗಳಿಗೆ ಇವು ಶೈಕ್ಷಣಿಕ ನೆರವು ಮತ್ತು ಶೈಕ್ಷಣಿಕ ಅನುದಾನ, ಮಾರ್ಗದರ್ಶನ ನೀಡುವ ಸಂಸ್ಥೆಗಳಾದವು. CRC ಸಂಸ್ಥೆಗಳು ಶಿಕ್ಷಕರ ಸಬಲೀಕರಣಕ್ಕೆ ಪ್ರಾಧಾನ್ಯ ನೀಡುವ ಮೂಲಕ ಹೊಸಬಗೆಯ ಬೋಧನಾ ಕ್ರಮಗಳು, ಬೋಧನಾ ಸಾಮಗ್ರಿಗಳು ಶಿಕ್ಷಕರ ಮೂಲಕವೇ ಶಾಲೆಗಳಿಗೆ ಪರಿಚಿತಗೊಂಡವು.

## 4.8 ಶಬ್ದಕೋಶ/ ಸಂಕ್ಷಿಪ್ತ ಅಕ್ಷರಗಳು:

| | | |
|---|---|---|
| NCERT | : | ನ್ಯಾಷನಲ್ ಕೌನ್ಸಿಲ್ ಆಫ್ ಎಜುಕೇಷನ್ ರಿಸರ್ಚ್ ಮತ್ತು ಟ್ರೈನಿಂಗ್ |
| MHRD | : | ಮಿನಿಸ್ಟ್ರಿ ಆಫ್ ಹ್ಯೂಮನ್ ರಿಸೋರ್ಸ್ ಡೆವಲಪ್‌ಮೆಂಟ್ |
| SCERT | : | ಸ್ಟೇಟ್ ಕೌನ್ಸಿಲ್ ಆಫ್ ಎಜುಕೇಷನಲ್ ರಿಸರ್ಚ್ ಅಂಡ್ ಟ್ರೈನಿಂಗ್ |
| MLL | : | ಮಿನಿಮಮ್ ಲೆವೆಲ್ಸ್ ಆಫ್ ಲರ್ನಿಂಗ್ |
| DPEP | | ಡಿಸ್ಟ್ರಿಕ್ಟ್ ಪ್ರೈಮರಿ ಎಜುಕೇಷನ್ ಪ್ರೋಗ್ರಾಂ |
| SOPT | | ಸ್ಪೆಷಲ್ ಓರಿಯಂಟೇಷನ್ ಫಾರ್ ಪ್ರೈಮರಿ ಸ್ಕೂಲ್ ಟೀಚರ್ಸ್ |
| TQM | | ಟೋಲ್ ಕ್ವಾಲಿಟಿ ಮ್ಯಾನೇಜ್‌ಮೆಂಟ್ |
| SIEMAT | | ಸ್ಟೇಟ್ ಇನ್ಸ್ಟಿಟ್ಯೂಟ್ ಆಫ್ ಎಜುಕೇಷನಲ್ ಮ್ಯಾನೇಜ್‌ಮೆಂಟ್ ಅಂಡ್ ಟ್ರೈನಿಂಗ್ |
| NGO | | ನಾನ್ ಗವರ್ನಮೆಂಟ್ ಆರ್ಗನೇಸೇಷನ್ |

| | | |
|---|---|---|
| DIET | | ಡಿಸ್ಟ್ರಿಕ್ಟ್ ಇನ್ಸ್ಟಿಟ್ಯೂಟ್ ಆಫ್ ಎಜುಕೇಷನ್ ಅಂಡ್ ಟ್ರೈನಿಂಗ್ |
| BRCs | | ಬ್ಲಾಕ್ ರಿಸೋರ್ಸ್ ಸೆಂಟರ್ಸ್ |
| CRCs | | ಕ್ಲಸ್ಟರ್ ರಿಸೋರ್ಸ್ ಸೆಂಟರ್ಸ್ |

### 4.9 ಹೆಚ್ಚಿನ ಓದು–ಉಲ್ಲೇಖಗಳಿಗೆ ಸಲಹೆ:

- ಎಜುಕೇಶನಲ್ ಮ್ಯಾನೇಜ್‌ಮೆಂಟ್–ದೇಶಮುಖ್ ಆಶಿಮಾ ಮತ್ತು ಡಾ॥ ನಾಯರ್ ಅಂಜು (2010) ಹಿಮಾಲಯ ಪಬ್ಲಿಷಿಂಗ್ ಹೌಸ್–1 ಪುಟ–479–492
- ಪ್ರೈಮರಿ ಎಜುಕೇಶನ್: ಕರೆಂಟ್ ಸಿಚುಯೇಶನ್ ಪ್ರಾಬ್ಲಮ್ಸ್ ಅಂಡ್ ಸಲ್ಯೂಷನ್ಸ್–ದೇಶ್‌ಮುಖ್ಯ ವಿ.ಎಸ್. ಮತ್ತು ಪಾಟೀಲ್ ಡಬ್ಲ್ಯೂ.ಆರ್.(2009) ನಿರಾಲಿ ಪ್ರಕಾಶನ.

**ಎಜುಕೇಶನಲ್ ಮ್ಯಾನೇಜ್‌ಮೆಂಟ್ :**

- ಎಸ್.ಆರ್.ಪಾಂಡ್ಯ
- http://www.dtert.tn.nic.in/functions%20of%20DIET.html

### 4.10: ಘಟಕದ ಕೊನೆಯ ಅಭ್ಯಾಸಗಳು:

1) NCERT ಯ ಒಂಭತ್ತು ಕಾರ್ಯಗಳು ಈ ಚೌಕಟ್ಟಿನಲ್ಲಿವೆ. ಅವುಗಳನ್ನು ಪತ್ತೆ ಮಾಡಿರಿ–

| | | | | | | | | | | |
|---|---|---|---|---|---|---|---|---|---|---|
| d | i | s | s | e | m | i | n | a | t | e |
| c | r | g | e | e | s | e | a | n | e | h |
| d | t | n | s | e | s | a | r | c | g | h |
| o | r | i | e | n | t | a | t | i | o | n |
| d | a | d | d | g | n | e | s | c | r | c |
| s | i | a | n | d | e | v | o | p | l | g |
| u | n | n | w | o | r | k | s | h | o | p |
| r | i | c | q | w | e | t | r | t | i | g |
| v | n | c | d | e | v | e | l | o | q | e |
| o | g | s | u | r | v | e | y | s | r | e |
| i | m | p | l | e | m | e | n | t | s | o |
| d | e | v | e | l | o | p | m | e | n | t |

2) ಯಾವುದೇ DIET ಯನ್ನು ಆಯ್ಕೆ ಮಾಡಿ ಮತ್ತು ಅದರ ಕಾರ್ಯಗಳನ್ನು ಅಭ್ಯಾಸ ಮಾಡಿ ಒಂದು ಸಂಕ್ಷಿಪ್ತ ವರದಿ ನೀಡಿ.
   - ಅ) ಅವುಗಳಿಂದ ದೊರಕುವ ಭೌತಿಕ ಅನುಕೂಲಗಳು.
   - ಆ) ಸೇವೆಯಲ್ಲಿರುವ ಶಿಕ್ಷಕರ ಶಿಕ್ಷಣವನ್ನು ಗಮನದಲ್ಲಿರಿಸಿಕೊಂಡು ವೈವಿಧ್ಯತೆ ಮತ್ತು ಸಮಗ್ರತೆಯ ಕಾರ್ಯಕ್ರಮಗಳನ್ನು ಕಳೆದ ಶೈಕ್ಷಣಿಕ ವರ್ಷದಲ್ಲಿ ಆಯೋಜಿಸಲಾಗಿತ್ತು.
   - ಇ) ತರಬೇತಿ ಕಾರ್ಯಚಟುವಟಿಕೆಗಳನ್ನು ಅದರ ಸುದೀರ್ಘ ಅವಧಿಯ ಪ್ರಯೋಜನಕ್ಕಾಗಿ ಮಾಡಲಾಗಿದೆ.
   - ಈ) ಅದರ ಕಾರ್ಯಗಳನ್ನು ವಿವರವಾಗಿ ಪಟ್ಟಿ ಮಾಡಿ

Notes

# ಘಟಕ 5 ಪ್ರಾಥಮಿಕ ಶಿಕ್ಷಣದ ಸಾರ್ವತ್ರೀಕರಣ(UEE)ಕ್ಕಾಗಿ ತಂತ್ರಗಳು –I

ರಚನೆ :

5.0 ಪೀಠಿಕೆ

5.1 ಕಲಿಕಾ ಉದ್ದೇಶಗಳು

5.2 ಪ್ರಾಥಮಿಕ ಶಿಕ್ಷಣದ ಸಾರ್ವತ್ರೀಕರಣ(UEE)

5.3 ಪ್ರಾಥಮಿಕ ಶಿಕ್ಷಣದ ಸಾರ್ವತ್ರೀಕರಣ(UEE)ಕ್ಕಾಗಿ ಯೋಜನಾ ವಿಧಾನ

- 5.3.1 ಉತ್ತರ ಪ್ರದೇಶ–ಮೂಲ ಶಿಕ್ಷಣ ಯೋಜನೆ
- 5.3.2 ಬಿಹಾರ್ ಶಿಕ್ಷಣ ಯೋಜನೆ
- 5.3.3 ಲೋಕ್ ಜಂಬಿಷ್
- 5.3.4 ಶಿಕ್ಷಾ ಕರ್ಮಿ
- 5.3.5 ಮಹಾರಾಷ್ಟ್ರದಂತಹ ರಾಜ್ಯಕ್ಕೆ ನಿರ್ದಿಷ್ಟವಾದ ಯೋಜನೆ
  - 5.3.5.1 ಸಾಮಾಜಿಕವಾಗಿ ವಂಚಿತರಾದ ಮಕ್ಕಳಿಗೆ ಯೋಜನೆಗಳು
  - 5.3.5.2 ಹೆಣ್ಣು ಮಕ್ಕಳಿಗಾಗಿ ಯೋಜನೆಗಳು
  - 5.3.5.3 ಆರ್ಥಿಕವಾಗಿ ಹಿಂದುಳಿದ ಮಕ್ಕಳಿಗೆ ಯೋಜನೆಗಳು
  - 5.3.5.4 ದೂರದ ಪ್ರದೇಶದ ಮಕ್ಕಳಿಗೆ ಯೋಜನೆಗಳು
  - 5.3.5.5 ಶಾಲೆಯಿಂದ ಹೊರಗುಳಿದ ಮಕ್ಕಳಿಗೆ ಯೋಜನೆಗಳು
  - 5.3.5.6 ವಿಶೇಷ ಗುರಿ ಗುಂಪಿಗಾಗಿ ಯೋಜನೆ ( ಅಂಗವಿಕಲರು, ದೇವದಾಸಿ ಮಕ್ಕಳು, ಇತ್ಯಾದಿ )

5.4 ಜಿಲ್ಲಾ ಪ್ರಾಥಮಿಕ ಶಿಕ್ಷಣ ಕಾರ್ಯಕ್ರಮ (D.P.E.P.)

- 5.4.1 ಜಿ.ಪ್ರಾ.ಶಿ.ಕಾ.ದ ಉದ್ದೇಶಗಳು
- 5.4.2 ಜಿ.ಪ್ರಾ.ಶಿ.ಕಾ.ದ ಪ್ರಮುಖ ಅಂಶಗಳು
- 5.4.3 ಜಿ.ಪ್ರಾ.ಶಿ.ಕಾ.ದ ಕಾರ್ಯಾಚರಣೆ ಯೋಜನೆ
- 5.4.4 ತಂತ್ರಗಳು ಮತ್ತು ಚಟುವಟಿಕೆಗಳು
- 5.4.5 ಪ್ರಾ.ಶಿ.ಸಾ. (UEE)ದ ಮೇಲೆ ಕಾರ್ಯಕ್ರಮಗಳ ಪ್ರಭಾವ

5.5 ಸಾರಾಂಶಿಸೋಣ

5.6 ಶಬ್ದ ಸಂಗ್ರಹ / ಸಂಕ್ಷೇಪಣಗಳು

5.7 ಸೂಚಿತ ವಾಚನ ಮತ್ತು ಉಲ್ಲೇಖಗಳು

5.8 ಪಾಠಾಂತ್ಯ ಅಭ್ಯಾಸಗಳು

## 5.0 ಪೀಠಿಕೆ

ನಿಮಗೆ ತಿಳಿದಿರುವಂತೆ, ಭಾರತದಲ್ಲಿ ಶಿಕ್ಷಣ ನೀತಿ ಮತ್ತು ಯೋಜನೆಗೆ ಪ್ರಾಥಮಿಕ ಶಿಕ್ಷಣವು ಬಹುಮುಖ್ಯ ಘಟಕವಾಗಿದೆ. ಶಿಕ್ಷಣವು ರಾಜ್ಯ ಮತ್ತು ಕೇಂದ್ರ ಸರ್ಕಾರಗಳೆರಡರ ಕಾಳಜಿಯಾಗಿದೆ. ಭಾರತದಲ್ಲಿ ಸ್ವಾತಂತ್ರ್ಯಾ ನಂತರ, ರಾಜ್ಯ ಸರ್ಕಾರಗಳು ಶಿಕ್ಷಣವನ್ನು ಒದಗಿಸುತ್ತಿವೆ. 1986ರಲ್ಲಿ ರಾಷ್ಟ್ರೀಯ ಶಿಕ್ಷಣ ನೀತಿ (N.E.P.) ಮೂಲಕ ಅನೇಕ ಪ್ರಾಯೋಜಿತ ಕಾರ್ಯಕ್ರಮಗಳನ್ನು ಪ್ರಾರಂಭಿಸಿದ್ದು, ಇದು ದೇಶದಲ್ಲಿ ಪ್ರಾಥಮಿಕ ಶಿಕ್ಷಣದ ಸ್ಥಿತಿಯನ್ನು ಸುಧಾರಿಸಿದೆ. ಭರತದ ವಿವಿಧ ರಾಜ್ಯಗಳಲ್ಲಿ ಪ್ರಾಥಮಿಕ ಶಿಕ್ಷಣದ ಪ್ರಸ್ತುತ ಸ್ಥಿತಿ ಏನು ? ನಾವು ಎಲ್ಲಿ ನಿಂತಿದ್ದೇವೆ ? ಪ್ರಾಥಮಿಕ ಶಿಕ್ಷಣದ ಸ್ಥಿತಿಯನ್ನು ಸುಧಾರಿಸಲು ರಾಜ್ಯಗಳು ಯಾವ ಕ್ರಮಗಳನ್ನು ತೆಗೆದುಕೊಂಡಿದೆ ? ಈ ಪ್ರಶ್ನೆಗಳಿಗೆ ಉತ್ತರಗಳನ್ನು ಈ ಘಟಕದಲ್ಲಿ ಕಂಡುಹಿಡಿಯಲು ಪ್ರಯತ್ನಿಸೋಣ.

## 5.1 ಕಲಿಕಾ ಉದ್ದೇಶಗಳು

ಈ ಘಟದವನ್ನು ಅಧ್ಯಯನ ಮಾಡಿದ ನಂತರ ನಿಮಗೆ ಈ ಕೆಳಕಂಡದ್ದನ್ನು ಮಾಡಲು ಸಾದ್ಯವಾಗುತ್ತದೆ :

- ನಿಮ್ಮ ರಾಜ್ಯದಲ್ಲಿ (ಮಹಾರಾಷ್ಟ್ರ ರಾಜ್ಯದ ಒಂದು ಪ್ರಕರಣದ ಅಧ್ಯಯನದ ಆಧಾರದ ಮೇಲೆ) ಒಟ್ಟು ದಾಖಲಾತಿ ಅನುಪಾತ (Gross Enrollment Ratio ) ಮತ್ತು ನಿವ್ವಳ ದಾಖಲಾತಿ ಅನುಪಾತ ( Net Enrollment Ratio ) ವಿಷಯದಲ್ಲಿ ಪ್ರಾಥಮಿಕ ಶಿಕ್ಷಣದ ಪ್ರಸ್ತುತ ಸ್ಥಿತಿಯ ಬಗ್ಗೆ ವರದಿ ಸಿದ್ಧಪಡಿಸುವಿರಿ.
- ಪ್ರಾಥಮಿಕ ಶಿಕ್ಷಣ ಸಾರ್ವತ್ರೀಕರಣದ ಸಂದರ್ಭದಲ್ಲಿ ಪ್ರಾಥಮಿಕ ಶಿಕ್ಷಣಕ್ಕಾಗಿ ವಿವಿಧ ರಾಜ್ಯ ಮಟ್ಟದ ಯೋಜನೆಗಳನ್ನು ಪರೀಕ್ಷಿಸುವಿರಿ.
- ನಿಮ್ಮ ರಾಜ್ಯದಲ್ಲಿ ವಿವಿಧ ಯೋಜನೆಗಳಿಗೆ ಸಂಬಂಧಿಸಿದಂತೆ ಪ್ರಾಥಮಿಕ ಶಿಕ್ಷಣದ ಸಾರ್ವತ್ರೀಕರಣದ ಪ್ರಗತಿಯನ್ನು ಪರಿಶೀಲಿಸುವಿರಿ.
- ಪ್ರಾಥಮಿಕ ಶಿಕ್ಷಣ ಸಾರ್ವತ್ರಿಕರಣಕ್ಕಾಗಿ ಜಿಲ್ಲಾ ಪ್ರಾಥಮಿಕ ಶಿಕ್ಷಣ ಕಾರ್ಯಕ್ರಮ ಅಳವಡಿಸಿಕೊಂಡ ವಿವಿಧ ತಂತ್ರಗಳನ್ನು ಪಟ್ಟಿ ಮಾಡಿ, ವಿವರಿಸುವಿರಿ.
- ನಿಮ್ಮ ರಾಜ್ಯದ ವಿವಿಧ ಜಿಲ್ಲೆಗಳಲ್ಲಿ ಪ್ರಾಥಮಿಕ ಶಿಕ್ಷಣದ ಸಾರ್ವತ್ರೀಕರಣದ ಮೇಲೆ ಜಿಲ್ಲಾ ಪ್ರಾಥಮಿಕ ಶಿಕ್ಷಣ ಕಾರ್ಯಕ್ರಮದ ಪ್ರಭಾವವನ್ನು ಹೋಲಿಸುವಿರಿ.

## 5.2 ಪ್ರಾಥಮಿಕ ಶಿಕ್ಷಣ ಸಾರ್ವತ್ರೀಕರಣ (UEE)

ನಿಮ್ಮ ರಾಜ್ಯದ ಪ್ರತಿ ಮಗುವಿಗೆ ಪ್ರಾಥಮಿಕ ಶಿಕ್ಷಣದ ಅವಕಾಶವನ್ನು ನೀಡಲು, ಅದರ ಯಶಸ್ವೀ ಅನುಷ್ಠಾನದ ಮಾರ್ಗದಲ್ಲಿ ಬರುವ ಹಲವು ಅಡಚಣೆಗಳನ್ನು ನಿರ್ಮೂಲನೆ

ಮಾಡಲು ನೀವು ಕಷ್ಟಪಟ್ಟು ಕೆಲಸ ಮಾಡಬೇಕೆಂಬುದನ್ನು ನೀವು ಮೆಚ್ಚುವಿರಿ.

ಪ್ರತಿ ರಾಜ್ಯದಲ್ಲಿ ಶಾಲೆಗೆ ಹೋಗುವಲ್ಲಿ ಪೋಷಕರು ಮತ್ತು ಮಕ್ಕಳು ಎದುರಿಸುತ್ತಿರುವ ವಿವಿಧ ಸಮಸ್ಯೆಗಳು ಭಿನ್ನವಾಗಿರುತ್ತದೆ. ಮುಂದುವರೆಯುವುದಕ್ಕಿಂತ ಮೊದಲು ಈ ಕೆಳಗೆ ಒಂದು ಚೌಕದಲ್ಲಿ ನೀಡಿರುವ ಉದಾಹರಣೆಯನ್ನು ನೋಡೋಣ.

ಪ್ರಕಾಶ್ ಗಣೇಶ್ ಪಾಟೀಲ್, ದುಮ್ಕಾ ಜಿಲ್ಲೆಯ ಮೊಹದಿ ಹಳ್ಳಿಯ ನಾಲ್ಕನೇ ತರಗತಿಯ ವಿದ್ಯಾರ್ಥಿಯಾಗಿದ್ದಾನೆ. ಅವನಿಗೆ 2ನೇ ತರಗತಿಯಲ್ಲಿ ಓದುತ್ತಿರುವ ಕಿರಿಯ ಸಹೋದರನಿದ್ದಾನೆ ಹಾಗೂ 6ನೇ ತರಗತಿಯಲ್ಲಿ ಓದುತ್ತಿರುವ ಹಿರಿಯ ಸಹೋದರಿ ಇದ್ದಾಳೆ. ಪ್ರಕಾಶನ ತಂದೆ ಗಣೇಸ್ ಒಬ್ಬ ಕಮ್ಮಾರನಾಗಿ, ಎತ್ತುಗಳ ಕಾಲಿನ ಗೊರಸುಗಳಿಗೆ ಹಾಕುವ ಲಾಳಗಳ ಸರಿಪಡಿಸುವ ಕೆಲಸ ಮಾಡುತ್ತಾನೆ. ಕಬ್ಬು ಕತ್ತರಿಸುವವರು ಎತ್ತಿನ ಗಾಡಿಯಲ್ಲಿ ಕಬ್ಬುಗಲನ್ನು ಸಾಗಿಸಲು ತಮ್ಮೊಂದಿಗೆ ಎತ್ತುಗಳನ್ನು ತರುತ್ತಾರೆ. ಇದು ಅವರಿಗೆ ಉತ್ತಮವಾದ ಕೆಲಸವನ್ನು ಒದಗಿಸುತ್ತದೆ. ಅವರು ಕಬ್ಬು ಕತ್ತರಿಸುವವರೊಂದಿಗೆ 6 ತಿಂಗಳುಗಳ ಕಾಲ ಉಳಿಯುತ್ತಾರೆ. ಗಣೇಶ್ ತನ್ನ ಕುಟುಂಬದವರೊಂದಿಗೆ ದೀಪಾವಳಿಗೆ ಮುಂಚಿತವಾಗಿ ಕಾರ್ಖಾನೆಗೆ ಪ್ರತಿ ವರ್ಷವೂ ಬರುತ್ತಾನೆ. ಕಾರ್ಖಾನೆಯ ಪ್ರದೇಶಕ್ಕೆ ಬಂದ ನಂತರ, ಪ್ರಕಾಶ್ ತಮ್ಮ ಶಿಕ್ಷಣ ಮುಂದುವರೆಸಲು ಜಿಲ್ಲಾ ಪರಿಷದ್ ಶಾಲೆಗೆ ಹೋಗಬೇಕೆಂದು ಬಯಸಿದ. ಹಳ್ಳಿಯ ಶಾಲೆಯಿಂದ ಜಿಲ್ಲಾ ಪರಿಷದ್ ಶಾಲೆಗೆ ವರ್ಗಾವಣೆ ಪಡೆಯುವಲ್ಲಿ ಕಾರ್ಯ ವಿಧಾನದ ಸಮಸ್ಯೆಗಳಿಂದಾಗಿ ಅವನು 2 ವಷ ಕಳೆದುಕೊಂಡನು. ಆದ್ದರಿಂದ ..............

ಈ ಕೆಳಗಿನ ಪ್ರಶ್ನೆಗಳನ್ನು ನೋಡಿ ಮತ್ತು ನೀವು ಇದರ ಬಗ್ಗೆ ಏನೆಂದು ಯೋಚಿಸುತ್ತೀರಿ ?

- ಪ್ರಕಾಶ್ ತನ್ನ ಶಿಕ್ಷಣವನ್ನು ಬಿಡಬೇಕೆಂದು ಹಾಗೂ ತನ್ನ ತಂದೆಗೆ ಅವರ ವ್ಯವಹಾರದಲ್ಲಿ ಸಹಾಯ ಮಾಡಬೇದೆಂದು ಯೋಚಿಸುತ್ತಿದ್ದಾನೆ. ಅವನು ಶಾಲೆ ಬಿಟ್ಟು ಬಿಡಬೇಕು ಎಂದು ನೀವು ಯೋಚಿಸುತ್ತೀರಾ ?
- ಪ್ರಕಾಶನು ತಮ್ಮ ಶಿಕ್ಷಣವನ್ನು ಮುಂದುವರೆಸುವಂತೆ ಪ್ರಕಾಶ್‌ನ ತಂದೆಗೆ ನೀವು ಹೇಗೆ ಮಾರ್ಗದರ್ಶನ ಮಾಡುವಿರಿ /

ಮಹಾರಾಷ್ಟ್ರದಲ್ಲಿ ಇಂತಹ ಸಮಸ್ಯೆಗಳನ್ನು ಬಗೆಹರಿಸಲು ರಾಜ್ಯ ಸರ್ಕಾರವು 2001ರಲ್ಲಿ ಸಖರ್ ಶಾಲೆಗಳು ಎಂಬುದನ್ನು ಈ ರೀತಿಯ ಭೌತಿಕ ಸ್ಥಳಾಮತರದ ಸಂದರ್ಭದಲ್ಲಿ ಶಾಲೆಯನ್ನು ಮುಂದುವರೆಸಲು ಒಂದು ತಂತ್ರವಾಗಿ ಪರಿಚಯಿಸಿದೆ. ಸಖರ್ ಶಾಲೆಗಳು ವರ್ಷ ಪೂರ್ತಿ ಕಾರ್ಯ ನಿರ್ವಹಿಸುವುದಿಲ್ಲ. ಅವು ಶೈಕ್ಷಣಿಕ ವರ್ಷದ 2ನೇ ಭಾಗದಲ್ಲಿ ಮಾತ್ರ ಕಾರ್ಯ ನಿರ್ವಹಿಸುತ್ತವೆ. ಸಾಮಾನ್ಯವಾಗಿ ಶಾಲೆಗಳು ಬೇಸಿಗೆ ರಜಾ ನಂತರ ಜೂನ್ ತಿಂಗಳಿನಲ್ಲಿ ಪ್ರಾರಂಭವಾಗುತ್ತವೆ. ಕಬ್ಬು ಕತ್ತರಿಸುವವರ ಮಕ್ಕಳು ಅಕ್ಟೋಬರ್ ಮತ್ತು ನವೆಂಬರ್‌ನ ನಡುವೆ ಹಿಸುಕುವ ಅವಧಿಯಲ್ಲಿ ವಲಸೆ ಹೋಗುತ್ತಾರೆ. ಈ ವಲಸೆಯ ಸಂದರ್ಭದಲ್ಲಿ ಮಕ್ಕಳು ಹಲವಾರು ತಿಂಗಳುಗಳವರೆಗೆ ಶಾಲೆಗಳಿಗೆ ಹಾಜರಾಗುವುದಿಲ್ಲ

ಮತ್ತು ನಂತರದ ವರ್ಷದ ಮಾರ್ಚ್/ಏಪ್ರಿಲ್‌ನಲ್ಲಿ ಈ ಕುಟುಂಬದವರು ತಮ್ಮ ತಮ್ಮ ಹಳ್ಳಿಗಳಿಗೆ ಹಿಂತಿರುಗಿದಾಗ, ಮಕ್ಕಳು ತಮ್ಮ ಶಿಕ್ಷಣವನ್ನು ಎಲ್ಲಿ ನಿಲ್ಲಿಸಿದ್ದರೋ, ಅಲ್ಲಿಂದ ಮುಂದುವರೆಸಲು ಅಸಮರ್ಥರಾಗಿರುತ್ತಾರೆ ಮತ್ತು ಇದರಿಂದ ಅವರು ಬಲವಂತವಾಗಿ ಶಾಲೆಯನ್ನು ಬಿಡಬೇಕಾಗುತ್ತದೆ. ಸಖರ್ ಶಾಲೆಗಳಲ್ಲಿ ತರಗತಿಗಳು ಸಕ್ಕರೆ ಕಾರ್ಖಾನೆಗಳ ಬಳಿ ವಲಸೆಯ ಅವಧಿಗಳ ನಡುವೆ (ಸುಮಾರು 6 ತಿಂಗಳು) ವಿದ್ಯಾರ್ಥಿಗಳಿಗೆ ಸೂಕ್ತವಾದ ಸಮಯಗಳಲ್ಲಿ ನಡೆಸಲಾಗುತ್ತದೆ. ಆದ್ದರಿಂದ ಈ ಶಾಲೆಗಳನ್ನು 'ಎರಡನೇ ಸೆಮಿಸ್ಟರ್ ಶಾಲೆ' ಎಂದು ಕರೆಯಲಾಗುತ್ತದೆ.



ಕಬ್ಬು ತೋಟಗಳಲ್ಲಿ ಸಖರ್ ಶಾಲೆ

**ತರಗತಿ –ಹೊರಗಡೆ**

ಈ ಅಧ್ಯಯನವು ನಮಗೆ ಪ್ರಾಥಮಿಕ ಶಿಕ್ಷಣದ ಸಾರ್ವತ್ರೀಕರಣ(UEE)ವನ್ನು ವ್ಯಾಖ್ಯಾನಿಸಲು ಈ ಕೆಳಕಂಡಂತೆ ಸಹಾಯಮಾಡುತ್ತದೆ :

ಶಿಕ್ಷಣದ ಸಾರ್ವತ್ರೀಕರಣ ಎಂದರೆ ಮಕ್ಕಳ ಮತ್ತು ಸ್ಥಳದ ನಿರ್ದಿಷ್ಟ ಅಗತ್ಯತೆಗಳಿಗನುಗುಣವಾಗಿ ಎಲ್ಲೆಡೆ ಶಿಕ್ಷಣದ ಲಭ್ಯತೆ ಇರುವುದಾಗಿದೆ.

ಭಾರತದಲ್ಲಿ ಶಾಲಾ ಶಿಕ್ಷಣವು ಈ ಕೆಳಗಿನ ಹಂತಗಳಲ್ಲಿ ವಿಶಾಲವಾಗಿ ವರ್ಗೀಕರಿಸಲಾಗಿದೆ :

ಪೂರ್ವ ಪ್ರಾಥಮಿಕ ಶಾಲೆ : 3–6 ವರ್ಷ ವಯಸ್ಸು

ಪ್ರಾಥಮಿಕ : ಪ್ರಾಥಮಿಕ (I-V) : 6–11 ವರ್ಷ ವಯಸ್ಸು

: ಹಿರಿಯ ಪ್ರಾಥಮಿಕ (VI-VIII) : 11–14 ವರ್ಷ ವಯಸ್ಸು


ಮಾಧ್ಯಮಿಕ : (IX-X) 15–16 ವರ್ಷ ವಯಸ್ಸು

ಹಿರಿಯ ಮಾಧ್ಯಮಿಕ : (XI-XII) 17–18 ವರ್ಷ ವಯಸ್ಸು

ಪ್ರಾಥಮಿಕ ಮತ್ತು ಹಿರಿಯ ಪ್ರಾಥಮಿಕ ಶಿಕ್ಷಣದ ಸಂಯೋಜನೆಯನ್ನು ಪ್ರಾಥಮಿಕ ಶಿಕ್ಷಣ ಎಂದು ಕರೆಯಲಾಗುತ್ತದೆ. ಪ್ರಾಥಮಿಕ ಶಿಕ್ಷಣವು ಶಿಕ್ಷಣ ವ್ಯವಸ್ಥೆಯ ಗೋಪುರದ ಅಡಿಪಾಯವಾಗಿದೆ ಮತ್ತು ಸರ್ವ ಶಿಕ್ಷಾ ಅಭಿಯಾನದ ಮೂಲಕ 10ನೇ ಪಂಚ ವಾರ್ಷಿಕ ಯೋಜನೆಯಲ್ಲಿ ಪ್ರಮುಖ ಒತ್ತನ್ನು ಪಡೆದಿದೆ. ಸರ್ವ ಶಿಕ್ಷಾ ಅಭಿಯಾನ (S.S.A.) ವು ಈ ಪ್ರದೇಶಗಳಲಿ ಪ್ರಾಥಮಿಕ ಶಾಲೆಗಳ ಅವಕಾಶವನ್ನು ಸುಧಾರಿಸಿದ್ದು, ಪ್ರಾಥಮಿಕ ಶಿಕ್ಷಣದ ಸಾರ್ವತ್ರೀಕರಣದ ಹಾದಿಯ ವೇಗವನ್ನು ಹೆಚ್ಚಿಸಿದೆ.

ಪ್ರಾಥಮಿಕ ಶಿಕ್ಷಣದ ಸಾರ್ವತ್ರೀಕರಣ ಮತ್ತು ಅದರ ಅಂಶಗಳು :

ತಮ್ಮನ್ನು ತಾವು ಶಿಕ್ಷಿತರನ್ನಾಗಿ ಮಾಡಲು ಪ್ರತಿಯೊಬ್ಬರಿಗೂ ಲಭ್ಯತೆ ಮತ್ತು ಸಮಾನ ಅವಕಾಶ ಎಂದು ಪ್ರಾಥಮಿಕ ಶಿಕ್ಷಣ ಸಾರ್ವತ್ರೀಕರಣವನ್ನು ವ್ಯಾಖ್ಯಾನಿಸಬಹುದಾಗಿದೆ. ಪ್ರಾಥಮಿಕ ಶಿಕ್ಷಣದ ಸಾರ್ವತ್ರೀಕರಣದಲ್ಲಿ ಮೂರು ಅಂಶಗಳಿವೆ.




**ಚಿತ್ರ : 5.1**

## ಪ್ರಾಥಮಿಕ ಶಿಕ್ಷಣ

- **ಅವಕಾಶ ಮತ್ತು ದಾಖಲಾತಿ ಸಾರ್ವತ್ರೀಕರಣ** : ಭಾರತ ಸರ್ಕಾರವು ವಿದ್ಯಾರ್ಥಿಗಳಿಗೆ ಸುಲಭವಾಗಿ ಅವಕಾಶ ಪಡೆಯಲು ಪ್ರತಿ ಕಿಲೋಮೀಟರ್‌ಗೆ ಒಂದು ಪ್ರಾಥಮಿಕ ಶಾಲೆಯನ್ನು ಸ್ಥಾಪಿಸಲು ಯೋಜಿಸಿದೆ. ಆ ನಿದಿಷ್ಟ ಶಾಲೆಯ ವ್ಯಾಪ್ತಿಯಲ್ಲಿ ಬರುವ ಕುಟುಂಬಗಳ ಸಮೀಕ್ಷೆಯನ್ನು ವರ್ಷದ ಪ್ರಾರಂಭದಲ್ಲಿ ಆ ಸಾಲೆಯಿಂದ ಮಾಡಲಾಗುತ್ತದೆ. ಶಿಕ್ಷಣ ಪಡೆಯಲು ಅರ್ಹತೆ ಇರುವ ಎಲ್ಲಾ ಮಕ್ಕಳು ಹಾಗೂ ಶಲೆಯಿಂದ ಹೊಗುಳಿದಿರುವ ಎಲ್ಲ ಮಕ್ಕಳನ್ನು ಶಾಲೆಗೆ ತರಬೇಕೆಂದು ಒಂದು ಪಟ್ಟಿಯನ್ನು ಮಾಡಲಾಗುತ್ತದೆ. ಶಾಲೆಯು ಪ್ರಾರಂಭವಾದಾಗ, ಎಲ್ಲ ಅರ್ಹ ವಿದ್ಯಾರ್ಥಿಗಳ 100% ದಾಖಲಾತಿಯನ್ನು ಖಚಿತಪಡಿಸಿಕೊಳ್ಳಲು ದಾಖಲಾತಿ ವಾರವನ್ನು ಆಚರಿಸಲಾಗುತ್ತದೆ.

- **ಹಾಜರಾತಿ ಮತ್ತು ಉಳಿಕೆ** : ಇತ್ತೀಚೆಗೆ ಹೆಚ್ಚಾಗಿ ಅರಿವಾಗಿರುವುದೆಂದರೆ ಶೈಕ್ಷಣಿಕ ವ್ಯವಸ್ಥೆಗೆ ಅನನುಕೂಲಕ ಮಕ್ಕಳನ್ನು ದಾಖಲು ಮಾಡಿಕೊಳ್ಳುವುದಕ್ಕಿಂತ ಅವರನ್ನು ಶಾಲೆಯಲ್ಲಿ ಉಳಿಸಿಕೊಳ್ಳುವುದು ಹೆಚ್ಚು ಸವಾಲಿನ ಕಾರ್ಯವಾಗಿದೆ. ಆದ್ದರಿಂದ 14 ವರ್ಷದೊಳಗಿನ ಎಲ್ಲಾ ಮಕ್ಕಳ ಸಾರ್ವತ್ರಿಕ ಉಳಿಕೆ ಅತ್ಯಗತ್ಯವಾಗಿದೆ. ಆದ್ದರಿಂದ ಅನೇಕ ಸೌಲಭ್ಯಗಳು ಉದಾಹರಣೆಗೆ, ದೈನಂದಿನ ಹಾಜರಾತಿ ಭತ್ಯೆ, ಉಚಿತ ಪ್ರಯಾಣ ಪಾಸ್, ಉಚಿತ ಮರ್ಧಯಾಹ್ನ ಬಿಸಿಯೂಟ ಇತ್ಯಾದಿಗಳನ್ನು ಒದಗಿಸುತ್ತಿದ್ದು, ಹಾಜರಾತಿಯನ್ನು ಸುಧಾರಿಸಲು ಬೋಧನೆಯಲ್ಲಿ ಹೊಸ ತಂತ್ರಗಳನ್ನು ಅಳವಡಿಸಲಾಗಿದೆ.

- **ಶಿಕ್ಷಣದ ಗುಣಮಟ್ಟ** : ಗುಣಮಟ್ಟ ಶಿಕ್ಷಣದ ಅವಕಾಸದ ಮೂಲಕ ಪ್ರತಿ ಮಗುವೂ ತನ್ನನ್ನು ಕಲಿಕೆಯ ಕನಿಷ್ಠ ಮಟ್ಟ (M.L.L.) ಅನ್ನು ಸಾಧಿಸುವಂತೆ ಮಾಡುವುದು ಮತ್ತು ಭೌತಿಕ ಕಟ್ಟಡ, ಮೂಲಭೂತ ಅವಶ್ಯಕತೆಗಳಾದ ಕುಡಿಯುವ ನೀರು ಮತ್ತು ಶೌಚಾಲಯಗಳು, ಶಿಕ್ಷಕರ ತರಬೇತಿ ಮತ್ತು ವಿದ್ಯಾರ್ಥಿಗಳು ಶಿಕ್ಷಕರ ನಡುವಿನ ಅನುಪಾತ–ಇವುಗಳಲ್ಲಿ ಗಮನಾರ್ಹ ಸುಧಾರಣೆ ತರುವುದು.

ಚಟುವಟಿಕೆ –1

1. ಶಾಲೆಯೊಂದರಲ್ಲಿ ಸಾಜಿದ್ ಮತ್ತು ಅವನ ಸಹೋದರಿ ಪ್ರತಿ ಶನಿವಾರ ಗೈರು ಹಾಜರಾಗುತ್ತಾರೆ ಮತ್ತು ಯಾವಾಗಲೂ ಅವರ ಶಿಕ್ಷಕರಿಗೆ ಸುಳ್ಳು ಕಾರಣಗಳನ್ನು ನೀಡುತ್ತಾರೆ. ಶಿಕ್ಷಕರಾಗಿ ಅವರ ಗೈರು ಹಾಜರಿಯನ್ನು ವಿಚಾರಣೆ ಮಾಡಲು ನಿಮ್ಮ ಆರಂಭಿಕ ಹಂತ ಏನಿರಬಹುದು ?

.............................................................................................................................

.............................................................................................................................

21ನೇ ಶತಮಾನವನ್ನು ಪ್ರವೇಶಸುವ ಮೊದಲು ಭಾರತ ಸರ್ಕಾರವು ರಾಷ್ಟ್ರೀಯ ಶಿಕ್ಷಣ ನೀತಿ 1986 ಮತ್ತು ಕ್ರಿಯಾ ಯೋಜನೆ 1992ರ ಅಡಿಯಲ್ಲಿ 14 ವರ್ಷದೊಳಗಿನ ಎಲ್ಲ ಮಕ್ಕಳಿಗೆ ಉಚಿತ ಹಾಗೂ ಕಡ್ಡಾಯ ಶಿಕ್ಷಣದೊಂದಿಗೆ ಪ್ರಾಥಮಿಕ ಶಿಕ್ಷಣ ಸಾರ್ವತ್ರೀಕರಣವನ್ನು ಭದ್ರಪಡಿಸಿದೆ. ಇದನ್ನು ಸಾಧಿಸಲು, ಗುರಿ ವಿಧಾನದಲ್ಲಿ ಕಾರ್ಯಕ್ರಮಗಳನ್ನು ಜಾರಿಗೆ ತಂದಿದ್ದು, ಇವು ಸ್ಪಷ್ಟವಾಗಿ ವ್ಯಾಖ್ಯಾನಿಸಿದ ಉದ್ದೇಶಗಳು, ವ್ಯಾಪ್ತಿ ಮತ್ತು ಅನುಷ್ಠಾನದ ಕಾಲರೇಖೆಗಳು ಹಾಗೂ ಮೈಲಿಗಲ್ಲುಗಳ ಜೊತೆಗೆ ಅಳೆಯಬಹುದಾದ ಫಲಿತಾಂಶಗಳು ಮತ್ತು ಪ್ರತೀ ಹಂತದಲ್ಲಿ ನೆರವು ನೀಡುವುದನ್ನು ಯೋಜನೆಗಳು ಒಳಗೊಂಡಿದೆ ಎಂಬುದನ್ನು ಸ್ಪಷ್ಟಪಡಿಸುತ್ತದೆ.

## 5.3.1 ಉತ್ತರ ಪ್ರದೇಶದ ಮೂಲ ಶಿಕ್ಷಣ ಯೋಜನೆ (UP-BEP)

1993ರಲ್ಲಿ ಉತ್ತರ ಪ್ರದೇಶ ರಾಜ್ಯ ಸರ್ಕಾರವು ವಿಶ್ವ ಬ್ಯಾಂಕಿ ನೆರವಿನಿಂದ ಮೂಲ ಶಿಕ್ಷಣ ಯೋಜನೆಯನ್ನು ಪ್ರಾರಂಭಿಸಿತು. "ಸಭೀಕೆಲಿಯೆ ಶಿಕ್ಷಾ ಪರಿಯೋಜನಾ ಪರಿಷದ್" (ಉತ್ತರ ಪ್ರದೇಶ ಸರ್ವರಿಗೂ ಶಿಕ್ಷಣ ಯೋಜನಾ ಮಂಡಳಿ) ಎಂದು ಕರೆಯಲ್ಪಡುವ ಉತ್ತರ ಪ್ರದೇಶದ ಸಮಾಜಕ್ಕೆ ಈ ಯೋಜನೆಯನ್ನು ಜಾರಿಗೊಳಿಸುವ ಜವಾಬ್ದಾರಿಯನ್ನು ವಹಿಸಲಾಯಿತು.

- **ಯೋಜನೆಯ ಉದ್ದೇಶಗಳು** : ಈ ಯೋಜನೆಯ ಉದ್ದೇಶಗಳು ಈ ಕೆಳಕಂಡಂತಿವೆ :
  - 14 ವರ್ಷದೊಳಗಿನ ಎಲ್ಲಾ ಮಕ್ಕಳಿಗೆ ಪ್ರಾಥಮಿಕ ಶಿಕ್ಷಣದ ಅವಕಾಶವನ್ನು ಕ್ಲಪಿಸುವ ಮತ್ತು ಔಪಚಾರಿಕ ಮತ್ತು ಅನೌಪಚಾರಿಕ ಶಿಕ್ಷಣದ ಮೂಲಕ ಪ್ರಾಥಮಿಕ ಮಟ್ಟವನ್ನು ಪೂರ್ಣಗೊಳಿಸುವವರೆಗೆ ಸಾರ್ವತ್ರಿಕ ಭಾಗವಹಿಸುವಿಕೆಯನ್ನು ಒಳಗೊಂಡ ಸಂಯೋಜಿತ ಕಾರ್ಯಕ್ರಮವಾಗಿ ನೋಡಲಾಗಿದೆ.
  - ಕಲಿಕೆಯ ಕನಿಷ್ಠ ಮಟ್ಟಕ್ಕೆ ಸಾರ್ವತ್ರಿಕ ಸಾಧನ ಕಾರ್ಯಕ್ರಮ
  - ಯುವಜನರಿಗೆ ಶಿಕ್ಷಣ ಮತ್ತು ಕೌಶಲ್ಯ ಅಭಿವೃದ್ಧಿ ಕಾರ್ಯಕ್ರಮವನ್ನು ಒದಗಿಸುವುದು.
  - ಮಹಿಳಾ ಸಬಲೀಕರಣ ಮತ್ತು ಶಿಕ್ಷಣದಲ್ಲಿ ಹೆಚ್ಚಿನ ಲಿಂಗ ಸಮಾನತೆ.
  - ಪರಿಶಿಷ್ಟ ಜಾತಿ ಮತ್ತು ಪರಿಶಿಷ್ಟ ಪಂಗಡ ಮಕ್ಕಳಿಗೆ ಸಮಾನ ಶಿಕ್ಷಣದ ಅವಕಾಶ.

- **ತಂತ್ರಗಳು** : ಯೋಜನೆಯಲ್ಲಿ ಅಳವಡಿಸಿಕೊಂಡ ತಂತ್ರಗಳು ಈ ಕೆಳಕಂಡಂತಿವೆ :
  - ವಿವಿಧ ಮೂಲ ಶಿಕ್ಷಣ ಕಾರ್ಯಕ್ರಮಗಳನ್ನು ಯೋಜಿಸಲು, ನಿರ್ವಹಿಸಲು ಮತ್ತು ಮೌಲ್ಯಮಾಪನ ಮಾಡಲು ಸಾಂಸ್ಥಿಕ ಸಾಮರ್ಥ್ಯವನ್ನು ನಿರ್ಮಿಸಲು ರಾಜ್ಯ ಮತ್ತು ಜಿಲ್ಲಾ ಮಟ್ಟದ ಯೋಜನೆ, ನಿರ್ವಹಣೆ ಮತ್ತು ವೃತ್ತಿಪರ ಬೆಂಬಲ ರಾಜ್ಯ ಸಂಘಟನೆಯ ಪ್ರಬಲ ಚೌಕಟ್ಟನ್ನು ಸ್ಥಾಪಿಸಲಾಯಿತು.
  - ಶಿಕ್ಷಣದ ಗುಣಮಟ್ಟವನ್ನು ಸುಧಾರಿಸಲು ಆರಂಭಿಕ ಬಾಲ್ಯ ಶಿಕ್ಷಣ ಪಠ್ಯಕ್ರಮ ಮತ್ತು ಪಠ್ಯಪುಸ್ತಕ ಪರಿಷ್ಕರಣೆ, ಸೇವಾ ನಿರತ ತರಬೇತಿ, ಮಹಿಳಾ ಮತ್ತು ಹೆಣ್ಣು ಮಕ್ಕಳ ಶಿಕ್ಷಣ, ಶಾಲಾ ನಿರ್ವಹಣೆಯನ್ನು ಬಲಪಡಿಸುವುದು–ಇವುಗಳನ್ನು ಬಳಸಲಾಯಿತು.

– ವಂಚಿತ ಪ್ರದೇಶಗಳಲ್ಲಿ ಹೆಚ್ಚು ಪ್ರಾಥಮಿಕ ಹಾಗೂ ಹಿರಿಯ ಪ್ರಾಥಮಿಕ ಶಾಲೆಗಳನ್ನು ನಿರ್ಮಿಸುವುದು ಮತ್ತು ಶಾಲೆಯಿಂದ ಹೊರಗುಳಿದ ಮಕ್ಕಳಿಗೆ ಅನೌಪಚಾರಿಕ ಶಿಕ್ಷಣದ ಅನುಷ್ಠಾನದ ಮರು ವಿನ್ಯಾಸವನ್ನು ಬೆಂಬಲಿಸುವ ಮೂಲಕ ಹತ್ತು ಜಿಲ್ಲೆಗಳಲ್ಲಿ ಮೂಲ ಶಿಕ್ಷಣದ ಅವಕಾಶವನ್ನು ಸುಧಾರಿಸುವುದು.

- **ಚಟುವಟಿಕೆಗಳು** : ಈ ಕೆಳಗಿನ ಚಟುವಟಿಕೆಗಳನ್ನು ಕೇಂದ್ರೀಕರಿಸಲಾಗಿದೆ.
  – ಸಂಸ್ಕೃತಿ ಮತ್ತು ಸಂವಹನ ಕುರಿತು ಶೈಕ್ಷಣಿಕ ಚಟುವಟಿಕೆಗಳು
  – ವಿಜ್ಞಾನ ಮತ್ತು ಪರಿಸರ
  – ಸಾಮಾಜಿಕ ನ್ಯಾಯ ಅರ್ಥವನ್ನು ಸೃಷ್ಟಿಸುವುದು

- **ಅನುಷ್ಠಾನ** : ಉತ್ತರಾಂಚಲ ಸೇರಿದಂತೆ ಉತ್ತರ ಪ್ರದೇಶದ 63 ಜಿಲ್ಲೆಗಳಲ್ಲಿ 10 ಉದ್ದೇಶಿತ ಜಿಲ್ಲೆಗಳಲ್ಲಿ ಯೋಜನೆಯ ವಿವಿಧ ಚಟುವಟಿಕೆಗಳನ್ನು ಕೇಂದ್ರೀಕರಿಸಲಾಗಿದೆ. ಈ ಜಿಲ್ಲೆಗಳಿಂದರೆ ವಾರಣಾಸಿ, ಅಲಹಾಬಾದ್, ಬಂದ, ಇಟಾವ, ಸಿತಾಪುರ್, ಅಲೀಘಡ್, ಸಹಾರಾನ್ಪುರ್, ಗೋರಖ್‌ಪುರ್, ಪೌರಿ ಮತ್ತು ನೈನಿಟಾಲ್.

## 5.3.2 ಬಿಹಾರ ಶಿಕ್ಷಣ ಯೋಜನೆ (BEP)

ಇದು ಬಿಹಾರದಲ್ಲಿ ಪ್ರಾಥಮಿಕ ಶಿಕ್ಷಣದ ಸಾರ್ವತ್ರೀಕರಣದ ಗುರಿಯನ್ನು ಹೊಂದಿದ್ದು, ರಾಜ್ಯದಲ್ಲಿ ಶಿಕ್ಷಣದ ಗುಣಾತ್ಮಕ ಸುಧಾರಣೆಗೆ ಮಹತ್ವವನ್ನು ನೀಡುತ್ತದೆ. ಈ ಯೋಜನೆಯು **UPBEP** ಸಾಧನೆಗಳನ್ನು ಆಧರಿಸಿದೆ ಮತ್ತು **UPBEP**ಯ ಅನುಷ್ಠಾನಕ್ಕೆ ಜವಾಬ್ದಾರಿಯುತವಾದ ಸಂಸ್ಥೆ ಅಂದರೆ ಉತ್ತರ ಪ್ರದೇಶ ಮೂಲ ಶಿಕ್ಷಾ ಪರಿಷದ್ ಸಹಾ ಇದಕ್ಕೆ ಜವಾಬ್ದಾರಿಯಾಗಿದೆ. ಈ ಯೋಜನೆಯನ್ನು **UNICEF**, ಭಾರತ ಸರ್ಕಾರ ಮತ್ತು ಬಿಹಾರ ಸರ್ಕಾರ ಜಂಟಿಯಾಗಿ ಕೈಗೊಂಡಿವೆ. ಈ ಯೋಜನೆಯು ಸಮಾಜದಲ್ಲಿನ ಪರಿಶಿಷ್ಟ ಜಾತಿ/ಪರಿಶಿಷ್ಟ ಪಂಗಡ ಮತ್ತು ಮಹಿಳೆಯರಂತಹ ವಂಚಿತ ವರ್ಗಗಳ ಶಿಕ್ಷಣಕ್ಕೆ ವಿಶೇಷ ಒತ್ತನ್ನು ನೀಡುತ್ತದೆ. ಇದು 1991–92ರಲ್ಲಿ ರಾಂಚಿ, ರೋಹ್ಟಾಸ್ ಮತ್ತು ಪಶ್ಚಿಮ ಚಂಪಾರಣ್ಯದ ಮೂರು ಜಿಲ್ಲೆಗಳಲ್ಲಿ ಪ್ರಾರಂಭವಾದ ಸರ್ವರಿಗೂ ಶಿಕ್ಷಣ ಯೋಜನೆಯು ಮೊದಲ ವ್ಯಾಪಕ ಬಾಹ್ಯವಾಗಿ ಧನ ಸಹಾಯಪಡೆದ ಯೋಜನೆಯಾಗಿದೆ ಮತ್ತು 1992–93ರಲ್ಲಿ ಇನ್ನೂ 4 ಜಿಲ್ಲೆಗಳಿಗೆ ವಿಸ್ತರಿಸಲಾಗಿದೆ.

- **ಯೋಜನೆಯ ಉದ್ದೇಶಗಳು**
  – ಪ್ರಾಥಮಿಕ ಶಿಕ್ಷಣದ ಸಾರ್ವತ್ರೀಕರಣವನ್ನು 14 ವರ್ಷದ ಒಳಗಿನ ಎಲ್ಲಾ ಮಕ್ಕಳ ಪ್ರಾಥಮಿಕ ಶಿಕ್ಷಣದ ಅವಕಾಶದ, ಕಡೆಯ ಪಕ್ಷ ಕನಿಷ್ಠ ಮಟ್ಟದ ಕಲಿಕೆಯ ಸಾರ್ವತ್ರಿಕ ಸಾಧನೆಯ ಒಂದು ಸಮ್ಮಿಶ್ರ ಕಾರ್ಯಕ್ರಮವಾಗಿ ನೋಡಲಾಗಿದೆ.
  – ಮಹಿಳೆಯರ ಸಮಾನತೆ ಮತ್ತು ಅವರ ಸಬಲೀಕರನದ ಉದ್ದೇಶಗಳನ್ನು ಪೂರೈಸಲು ಶಿಕ್ಷಣ ವ್ಯವಸ್ಥೆಯ ದೃಷ್ಟಿಕೋನ.

– ಕೆಳಜಾತಿಗಳು, ಜನಾಂಗೀಯ ಸಮುದಾಯಗಳು ಮತ್ತು ಸಮಾಜದ ನಿರ್ಗತಿಕ ವರ್ಗಕ್ಕೆ ಸೇರಿದ ವಯಸ್ಕರಿಗೆ ಮತ್ತು ಮಕ್ಕಳಿಗೆ ಸಮಾನವಾಧ ಶೈಕ್ಷಣಿಕ ಅವಕಾಶವನ್ನು ಒದಗಿಸುವ ಅಗತ್ಯ ಮಧ್ಯಸ್ಥಿಕೆಗಳನ್ನು ರೂಪಿಸುವುದು.
– ಶಿಕ್ಷಣದ ದಾಖಲಾತಿ ಸಾಮರ್ಥ್ಯವನ್ನು ಹೆಚ್ಚಿಸುವುದು ಮತ್ತು ಅಪವ್ಯಯವನ್ನು ಕಡಿಮೆ ಮಾಡುವುದು. ವಿಶೇಷವಾಗಿ ಹೆಣ್ಣುಮಕ್ಕಳು ಮತ್ತು ಪರಿಶಿಷ್ಟ ಜಾತಿ ವಿದ್ಯಾರ್ಥಿಗಳು.

- **ತಂತ್ರಗಳು** :
  – ಸುಮಾರು 11,000 ಪ್ರಾಥಮಿಕ ಮತ್ತು ಹಿರಿಯ ಪ್ರಾಥಮಿಕ ವರ್ಗಕೋಣೆಗಳ ನಿರ್ಮಾಣ
  – ಸುಮಾರು 16,000 ಹೆಚ್ಚುವರಿ ಶಿಕ್ಷಕರ ನೇಮಕಾತಿ
  – ಹೊಸದಾಗಿ ನೇಮಕಗೊಂಡ ಶಿಕ್ಷಕರ ತರಬೇತಿ
  – ಹೊಸದಾಗಿ ತೆರೆಯಲ್ಪಟ್ಟ ಶಾಲೆಗಳಿಗೆ ಸಾಮಗ್ರಿಗಳನ್ನು ಒದಗಿಸುವುದು
  – ಸಹಭಾಗಿತ್ವ ಯೋಜನೆ ಮತ್ತು ಅನುಷ್ಠಾನ
  – ಮಹಿಳಾ ಸಮಾಖ್ಯ ಅಂಶದ ಅನುಷ್ಠಾನ

- **ಚಟುವಟಿಕೆಗಳು** :
  – ಈ ಕೆಳಕಂಡ ಚಟುವಟಿಕೆಗಳನ್ನು ಯೋಜನೆಯು ಕೈಗೊಂಡಿದೆ :
  – ಗ್ರಾಮೀಣ ಮಟ್ಟದಲ್ಲಿ ಕಾರ್ಯಕ್ರಮದ ಅನುಷ್ಠಾನದಲ್ಲಿ ಸಮುದಾಯದ ಪಾಲ್ಗೊಳ್ಳುವಿಕೆ ಮತ್ತು ಗ್ರಾಮ ಶಿಕ್ಷಣ ಸಮಿತಿಗಳ ಸಂಘಟನೆ.
  – ಸರ್ಕಾರೇತರ ಸಂಸ್ಥೆಗಳ ಮೂಲಕ ಅನೌಪಚಾರಿಕ ಶಿಕ್ಷಣ
  – ರಾಜ್ಯ ಮಟ್ಟದ ಕಾರ್ಯಾಗಾರದ ಸಂಘಟನೆ : ಪ್ರಮುಖ ವ್ಯಕ್ತಿಗಳು ಮತ್ತು ಪ್ರಾಥಮಿಕ ಶಿಕ್ಷಕರಿಗೆ ಕಲಿಕೆಯ ಕನಿಷ್ಠ ಮಟ್ಟದ ಬಗ್ಗೆ ತರಬೇತಿಯನ್ನು ನೀಡಿದೆ.
  – ಮಹಿಳಾ ಅಭಿವೃದ್ಧಿಗೆ ಜಿಲ್ಲಾ ಮಟ್ಟದಲ್ಲಿ ಕೇಂದ್ರ (ಕೋರ್) ಗುಂಪಿನ ರಚನೆ.
  – ದಾಖಲಾತಿ ಆಂದೋಲನ
  – ಭಿತ್ತಿ ಪತ್ರ ಕಾರ್ಯಾಗಾರ, ಗ್ರಾಮೀಣ ಗ್ರಂಥಾಲಯಗಳ ಪರಿಕಲ್ಪನೆಯ ವಿಸ್ತರಣೆ ಇತ್ಯಾದಿ.
  – ಶಿಕ್ಷಣ ಕ್ಷೇತ್ರಕ್ಕೆ ಗಣಕೀಕೃತ ಮೇಲ್ವಿಚಾರಣಾ ವ್ಯವಸ್ಥೆಯ ಪರಿಚಯ
  – ಮಹಿಳಾ ಸಮಾಖ್ಯ : ಶಾಲೆಗಳ ಸ್ಥಳೀಯ ಹೊಣೆಗಾರಿಕೆಯನ್ನು ಸ್ಥಾಪಿಸಲು, ಆರಂಭಿಕ ಬಾಲ್ಯಾವಸ್ಥೆಯ ಆರೈಕೆ ಮತ್ತು ಶಿಕ್ಷಣ ಹಾಗೂ ಅನೌಪಚಾರಿಕ ಶಿಕ್ಷಣ ಕೇಂದ್ರಗಳ ನಿರ್ವಹಣೆಯಲ್ಲಿ ಸಕ್ರಿಯ ಪಾತ್ರವನ್ನು ವಹಿಸಲು, ಶಿಕ್ಷಕರನ್ನು ಬೆಂಬಲಿಸಲು ಮತ್ತು VECನಲ್ಲಿ ಭಾಗವಹಿಸಲು.

- **ಅನುಷ್ಠಾನ** : ರಾಜ್ಯ / ಜಿಲ್ಲಾ ಮಟ್ಟದಲ್ಲಿ ನಿರ್ವಹಣಾ ರಚನೆಗಳನ್ನು ಸ್ಥಾಪಿಸುವುದು, ಮಹಿಳಾ ಸಬಲೀಕರಣ,ವ್ಯಾಪಕ ಸಮುದಾಯದ ಕ್ರೋಢೀಕರಣ, ಮೂಲ ಶಿಕ್ಷಣದಲ್ಲಿ

ಹೆಚ್ಚಿನ ರಾಷ್ಟ್ರೀಯ / ಅಂತರ್‍ರಾಷ್ಟ್ರೀಯ ಆಸಕ್ತಿಯ ಕ್ರೋಢೀಕರಣ ಇತ್ಯಾದಿ. ಜನಸಂಖ್ಯೆಯ ವಿಶ್ಲೇಷಣೆ ಮತ್ತು ದಾಖಲಾತಿಯ ಸಮಸ್ಯೆಗಳ ಆಧಾರದ ಮೇಲೆ ವರ್ಗಕೋಣೆಗಳ ಆಯ್ಕೆ ಮಾಡುವುದು, ಗ್ರಾಮ ಮಟ್ಟದ ಸೂಕ್ಷ್ಮ ಯೋಜನೆಗಳನ್ನು ನಿರ್ಧರಿಸಲಾಗಿದೆ. ಯೋಜನಾ ಮೇಲ್ವಿಚಾರಣೆ–ಇದು ಉತ್ತರ ಪ್ರದೇಶ ಮೂಲ ಶಿಕ್ಷಣ ಯೋಜನೆ (i) ಮತ್ತು (ii) ನೇ ಜಿಲ್ಲಾ ಪ್ರಾಥಮಿಕ ಶಿಕ್ಷಣ ಯೋಜನೆಯ ಮೇಲ್ವಿಚಾರಣೆಯೊಂದಿಗೆ ಇದನ್ನು ವರ್ಷಕ್ಕೆ 2 ಬಾರಿ ಮಾಡುವುದು.

ಪ್ರಸ್ತಾವಿತ ಯೋಜನೆಯನ್ನು UP-BEP(i) ರಿಂದ ಪ್ರಸ್ತುತವಾಗಿ ಆವೃತಗೊಂಡಿರುವ 12 ಜಿಲ್ಲೆಗಳಲ್ಲಿ ಅನುಷ್ಠಾನಗೊಳಿಸಲಾಗಿದೆ.

### 5.3.3 ಲೋಕ್ ಜಂಬಿಷ್

ಲೋಕ್ ಜಂಬಿಷ್–"ಎಲ್ಲರಿಗೂ ಶಿಕ್ಷಣಕ್ಕಾಗಿ ಜನರ ಚಳುವಳಿ" ಅನ್ನು 1942ರಲ್ಲಿ ರಾಜಸ್ಥಾನ ಸರ್ಕಾರವು ಸ್ವೀಡಿಶ್ ಅಂತರ್‍ರಾಷ್ಟ್ರೀಯ ಅಭಿವೃದ್ಧಿ ಪ್ರಾಧಿಕಾರ (SIDA) ದ ಬೆಂಬಲದೊಂದಿಗೆ ಪ್ರಾರಂಭಿಸಿತು.

ಔಪಚಾರಿಕ ಮತ್ತು ಅನೌಪಚಾರಿಕ ವಿಧಾನಗಳು ಹಾಗೂ ಕ್ರಿಯಾತ್ಮಕ ಸಾಕ್ಷರತೆಯ ಮೂಲಕ ತೃಪ್ತಿಕರ ಮಟ್ಟಕ್ಕೆ ಪ್ರಾಥಮಿಕ ಶಿಕ್ಷಣ ಸಾರ್ವತ್ರೀಕರಣದ ಮುಖ್ಯ ಗುರಿಯನ್ನು ಸಾಧಿಸಲು ಇದು ಒಂದು ಕಾರ್ಯಕ್ರಮವಾಗಿದೆ.

ಇದು ಹೆಣ್ಣು ಮಕ್ಕಳ ಶಿಕ್ಷಣ ಮತ್ತು ಅಭಿವೃದ್ಧಿ : ಸಾಕ್ಷರತೆಯ ನಂತರದ ಮಟ್ಟ ಮತ್ತು ಆಡಳಿತ ವ್ಯವಸ್ಥೆಯನ್ನು ಸ್ಥಾಪಿಸುವ ತತ್‌ಕ್ಷಣದ ಗುರಿಗಳೊಂದಿಗೆ ಶಿಕ್ಷಣವನ್ನು ಮುಂದುವರೆಸುವುದು ಮತ್ತು ಜನರ ಸಜ್ಜುಗೊಳಿಸುವ ಚಟುವಟಿಕೆಗಳನ್ನು ಪ್ರಾರಂಭಿಸುವುದು.

- **ಯೋಜನೆಯ ಉದ್ದೇಶಗಳು**
  - ಜನರ ಸನ್ನದ್ಧತೆ ಮತ್ತು ಅವರ ಪಾಲ್ಗೊಳ್ಳುವಿಕೆಯ ಮೂಲಕ 2000 ಇಸವಿಯ ಒಳಗೆ ಸರ್ವರಿಗೂ ಶಿಕ್ಷಣವನ್ನು ಸಾಧಿಸುವುದು.
  - ಹೆಣ್ಣು ಶಿಶು ಮತ್ತು ಮಹಿಳೆಯರಿಗೆ ಗಮನ ಕೊಡುವುದು ಮೂಲಕ ಹೆಣ್ಣು ಮಕ್ಕಳ ದಾಖಲಾತಿಯಲ್ಲಿ ಸುಧಾರಣೆ ತರುವುದನ್ನು ಖಚಿತಪಡಿಸಿಕೊಳ್ಳುವುದು.
  - ಶಿಕ್ಷಣವನ್ನು ಸಮಾನತೆಯ ಸಾಧನವಾಗಿ ಮಾಡುವ ಮೂಲಕ ಮಹಿಳೆಯರ ಸಬಲೀಕರಣ ಮಾಡುವುದು.
  - ಪ್ರತಿ ಲಿಂಗ ಮತ್ತು ಹಿಂದುಳಿದ ಗುಂಪಿನ 15–53 ವರ್ಷಗಳ ವ್ಯಕ್ತಿಗಳಲ್ಲಿ ಜೀವನದ ಪರಿಸ್ಥಿತಿಗಳಿಗೆ ಸೂಕ್ತವಾಗುವಂತೆ 3 R's (ಓದುವುದು, ಬರೆಯುವುದು ಮತ್ತು ಲೆಕ್ಕಾಚಾರ) ಗಳನ್ನು ಮಾಡುವುದರ ಮೂಲಕ 80% ರಷ್ಟು ಸಾಕ್ಷರತಾ ಮಟ್ಟ ತಲುಪುವಂತೆ ಮಾಡುವುದು.
  - ಕಲಿಕಾ ಪ್ರಕ್ರಿಯೆಯಲ್ಲಿ ಗುಣಾತ್ಮಕ ಸುಧಾರಣೆಯನ್ನು ತರಲು ತರಬೇತಿ ಮತ್ತು ತಾಂತ್ರಿಕ ಸಂಪನ್ಮೂಲಗಳ ವ್ಯವಸ್ಥೆಯನ್ನು ರಚಿಸುವುದು, ರಚನೆಯನ್ನು ಬೆಮಬಲಿಸುವುದು.

– ಪಾರದರ್ಶಕತೆಯನ್ನು ಖಚಿತಪಡಿಸಿಕೊಳ್ಳಲು ಪ್ರಕ್ರಿಯೆಯಿಂದ ಪರಸ್ಪರ ಸಂಪರ್ಕ ಹೊಂದಿರುವ ವ್ಯಕ್ತಿಗಳು ದತ್ತಾಂಶಗಳನ್ನು ಸಂಗ್ರಹಿಸುವುದು ಮತ್ತು ಬಳಸುವುದು.

- **ಮುಖ್ಯ ಅಂಶಗಳು**
  - ಕಾರ್ಯಕ್ರಮಗಳನ್ನು ಪ್ರಾರಂಭಿಸಲು ಮತ್ತು ನಿರ್ವಹಿಸಲು ಸ್ವಾಯತ್ತ ಸಮಸ್ಥೆಯನ್ನು ರಚಿಸುವುದರೊಂದಿಗೆ ಪ್ರಗತಿಯನ್ನು ಪರಿಶೀಲಿಸುವ ಸಮಿತಿಯ ಸಬಲೀಕರಣ.
  - ಗ್ರಾಮ ಮಟ್ಟದಲ್ಲಿ ಲೋಕ್ ಜಂಬಿಶ್‌ನ ಪ್ರಮುಖ ಕಾರ್ಯಾಚರಣಾ ಲಕ್ಷಣವನ್ನು ಶಾಲಾ ನಕ್ಷೆ ಮತ್ತು ಸೂಕ್ಷ್ಮ ಯೋಜನೆಯು ಪ್ರತಿನಿಧಿಸುತ್ತದೆ. ಇದನ್ನು ಸಾಮಾಜಿಕ ಆನಿಮೇಟರ್ಸ್, ಶಿಕ್ಷಕರು ಮತ್ತು ಲೋಕ್ ಜಂಬಿಶ್ ಕಾರ್ಯಕರ್ತರು ಶಿಕ್ಷಣವನ್ನು ಮೌಲ್ಯಾಂಕನ ಮಾಡುವುದರಿಂದ ಪ್ರತಿ ಮಗುವಿನ ಪ್ರಗತಿಯನ್ನು ಪತ್ತೆಹಚ್ಚಲು ಸಹಾಯಕವಾಗಿದೆ.

- **ತಂತ್ರಗಳು**
  - 5 ಬ್ಲಾಕ್‌ಗಳಲ್ಲಿ ವಿಚಾರಣಾ ಅವಧಿಯಲ್ಲಿ ಕಾರ್ಯಕ್ರಮಗಳನ್ನು ಬೆಂಬಲಿಸಲು ಮತ್ತು ಮೇಲ್ವಿಚಾರಣೆ ಮಾಡಲು ಕೆಳ ಹಂತದಲ್ಲಿ ಒಂದು ಯಾಂತ್ರಿಕ ವ್ಯವಸ್ಥೆಯನ್ನು ಅಭಿವೃದ್ಧಿಪಡಿಸಲಾಗಿದೆ. ಉದಾಹರಣೆಗೆ ಪ್ರೇರಕ್ ದಳ್, ಭವನ್ ನಿರ್ಮಾಣ್ ಸಮಿತಿ, ಗ್ರಾಮ ಶಿಕ್ಷಣ ಸಮಿತಿ, ತಾಲ್ಲೂಕು(ಕ್ಲಸ್ಟರ್) ಖಂಡ್ ಸ್ತರೀಯಾ ಶಿಕ್ಷಾ ಪ್ರಬಂಧನ್ ಸಮಿತಿ (ತಾಲ್ಲೂಕು ಮಟ್ಟದ ನಿರ್ವಹಣೆ) ಮತ್ತು ತಾಲ್ಲೂಕು ಚುಕ್ಕಾಣಿ ಗುಂಪುಗಳು.
  - ಮಹಿಳಾ ಭಾಗವಹಿಸುವಿಕೆಯನ್ನು ಪಡೆಯಲು 'ಅಧ್ಯಾಪಕ್ ಮಂಚ್' ಅನ್ನು ರಚಿಸಲಾಗಿದೆ.
  - ಕೆಲಸದ ಪ್ರದೇಶದ ಜವಾಬ್ದಾರಿಯನ್ನು ಪೂರೈಸಲು ಮ್ಯಾಟ್ರಿಕ್ಸ್ ವ್ಯವಸ್ಥೆಯ ನಿರ್ವಹಣೆಯನ್ನು ಪ್ರಾರಂಭಿಸಲು ಎಲ್ಲಾ ಹಂತಗಳಲ್ಲಿ ಕಾರ್ಯಕರ್ತರ ಸಂಖ್ಯೆಯನ್ನು ಹೆಚ್ಚಿಸಿದೆ.
  - ಕ್ಲಸ್ಟರ್ ಮತ್ತು ಬ್ಲಾಕ್ ಮಟ್ಟದಲ್ಲಿ ಎಲ್ಲಾ ಕಾರ್ಯಕರ್ತರ ವಿಮರ್ಶೆ ಯೋಜನಾ ಸಭೆಗಳು (Review Planning Meeting - RPM's) ಪ್ರತಿ ತಿಂಗಳು ನಡೆಸಿ ಕಾರ್ಯವನ್ನು ಪರಿಶೀಲಿಸುವುದು ಮತ್ತು ಮುಂದಿನ ತಿಂಗಳಿಗೆ ಯೋಜಿಸಲಾಗುತ್ತದೆ ಮತ್ತು ಇದೇ ಪ್ರಕ್ರಿಯೆಯು 2–3 RPM's ಗಳೊಂದಿಗೆ ರಾಜ್ಯ ಮಟ್ಟದಲ್ಲಿ ಪುನರಾವರ್ತಿಸಲಾಗುತ್ತದೆ.
  - ಪ್ರವೇಶೋತ್ಸವ : ಪ್ರವೇಶೋತ್ಸವ ಎಂಬುದು ಮಕ್ಕಳು, ಶಾಲೆ ಮತ್ತು ಸಮುದಾಯದ ನಡುವೆ ಶಿಕ್ಷಣದ ಬಗ್ಗೆ ಧನಾತ್ಮಕಿ ಹಾಗೂ ಸೃಜನಶೀಲ ಪರಿಸರವನ್ನು ಸೃಷ್ಠಿಸುವ ಒಂದು ಘಟನೆಯಾಗಿದೆ.
  - 

- **ಚಟುವಟಿಕೆಗಳು** : ಈ ಕೆಳಗಿನ ಚಿತ್ರ (5.1)ವು ಈ ಯೋಜನೆಯಲ್ಲಿ ಕೈಗೊಂಡ ಪ್ರಮುಖ ಚಟುವಟಿಕೆಗಳನ್ನು ದಾಖಲಿಸುತ್ತದೆ.

| | |
|---|---|
| ಬುಡಕಟ್ಟು ಮಕ್ಕಳಿಗೆ ವಿದ್ಯಾರ್ಥಿನಿಲಯ | ಕಾಲೋಚಿತ ವಲಸಿಗರ ಹಾಗೂ ದೂರ ಅವಾಸಸ್ಥಾನದಲ್ಲಿರುವವರ ಮಕ್ಕಳಿಗೆ ಶಿಕ್ಷಣದ ಅಗತ್ಯಗಳನ್ನು ಪೂರೈಸುವುದು |
| ಮಹಿಳಾ ಶಿಕ್ಷಣ ವಿಹಾರ್ | ಶಾಲೆಯಿಂದ ಹೊರಗೂಳಿದ 15+ ವಯಸ್ಸಿನ ಹೆಣ್ಣು ಮಕ್ಕಳ ಗುಂಪಿಗೆ ವಸತಿ ಶಿಕ್ಷಣವನ್ನು ಇಲ್ಲಿ ನಡೆಸಲಾಗುತ್ತದೆ. ಇದು ಗ್ರಾಮೀಣ ಪ್ರದೇಶಗಳಲ್ಲಿ ವಸತಿ ರೀತಿಯ ವಾತಾವರಣದಲ್ಲಿ ಗುಣಮಟ್ಟದ ಶಿಕ್ಷಣವನ್ನು ನೀಡುತ್ತದೆ. |
| ಬಾಲಿಕಾ ಶಿಕ್ಷಣ ಶಿಬಿರ | ಔಪಬಾರಿಕ ಶಿಕ್ಷಣಕ್ಕೆ ಪ್ರವೇಶವನ್ನು ಅನುಕೂಲಿಸಲು 9+ ವಯಸ್ಸಿನ ಹೆಣ್ಣು ಮಕ್ಕಳ ಗುಂಪಿಗೆ ಶಾಲೆಯಲ್ಲಿ 6 ರಿಂದ 8 ತಿಂಗಳು ನಡೆಸುವ ವಸತಿ ಶಿಬಿರವಾಗಿದೆ. |
| ಮುಕ್ತಾಂಗನ್ | ಬಾರನ್‌ನ ಕಿಷ್ಣೇನ್‌ಗಂಜ್ ಬ್ಲಾಕ್‌ನ ಖಂಡೇಲಾ ಕ್ಲಸ್ಟರ್‌ನ ಬುಡಕಟ್ಟು ಮಕ್ಕಳಿಗಾಗಿ ಈ ಕಾರ್ಯಕ್ರಮ |
| ಮದರಸಾ | ಭಾರತ್‌ಪುರ್‌ನ ಕಮನ್‌ಬ್ಲಾಕ್‌ನ ಅಲ್ಪಸಂಖ್ಯಾತ ಸಮುದಾಯಕ್ಕೆ ಸೇರಿದ ಮಕ್ಕಳನ್ನು ತಲುಪಲು ಬಲಪಡಿಸುವುದು |
| ಸಹಜ್ ಶಿಕ್ಷಾ ಕೇಂದ್ರದ ಸಾಂಸ್ಥೀಕರಣ | ಇದು ದುಡಿಯುವ ಮಕ್ಕಳ ಅಗತ್ಯಗಳನ್ನು ಪೂರೈಸುವ ಅನೌಪಚಾರಿಕ ಶಿಕ್ಷಣ ಕಾರ್ಯಕ್ರಮವಾಗಿದೆ. |
| ಶಾಲಾ ಆರೋಗ್ಯ ಕಾರ್ಯಕ್ರಮ | ಈ ಕಾರ್ಯಕ್ರಮವು ಶಾಲಾ ಮಕ್ಕಳಲ್ಲಿ ಜಾಗೃತಿಯನ್ನು ಮೂಡಿಸಲು ಬಳಸಿದ ಪ್ರಯತ್ನಗಳನ್ನು ಕೇಂದ್ರೀಕರಿಸುತ್ತದೆ. |
| ಅಂಗನವಾಡಿ ಕೇಂದ್ರಗಳು | ಪ್ರಾಥಮಿಕ ಶಿಕ್ಷಣದೊಂದಿಗೆ ಕೊಂಡಿಯಾಗಿ ಪೂರ್ವ ಪ್ರಾತಮಿಕ ಶಿಕ್ಷಣದ ಕಾರ್ಯಕ್ರಮವನ್ನು ಬಲಪಡಿಸುವುದು. ಉತ್ತು ಪ್ರದೇಶ ಉತ್ತೇಜಿಸಿದ ವಿಹಾನ್ ಎಂಬ ಸರ್ಕಾರೇತರ ಸಂಸ್ಥೆಯು 245 ಅಂಗನವಾಡಿ ಕೇಂದ್ರಗಳನ್ನು ನಿರ್ವಹಿಸುತ್ತದೆ. |

**ಚಿತ್ರ 5.2 ಲೋಕ್ ಜಂಬಿಷ್‌ನ ಮುಖ್ಯ ಚಟುವಟಿಕೆಗಳು**

## 5.3.4 ಶಿಕ್ಷಾ ಕರ್ಮಿ ಯೋಜನೆ

ಶಿಕ್ಷಾ ಕರ್ಮಿ ಯೋಜನೆಯು ಒಂದು ಶೈಕ್ಷಣಿಕ ಕಾರ್ಯಕ್ರಮವಾಗಿದ್ದು, ರಾಜಸ್ಥಾನ ಸರ್ಕಾರವು 1987ರಿಂದ ರಾಜಸ್ಥಾನ ಶಿಕ್ಷಾ ಕರ್ಮಿ ಮಂಡಳಿ (RSKB)ನ ಮೂಲಕ ಸ್ವೀಡಿಶ್ ಅಂತರಾಷ್ಟ್ರೀಯ ಅಭಿವೃದ್ಧಿ ಪ್ರಾಧಿಕಾರ (SIDA)ನ ಸಹಾಯದೊಂದಿಗೆ ಜಾರಿಗೆ ತಂದಿತು.

ಸಾರ್ವತ್ರೀಕರಣದ ಉದ್ದೇಶವನ್ನು ಸಾಧಿಸುವಲ್ಲಿ ಪ್ರಮುಖ ಅಡಚಣೆಯಾಗಿದ್ದ ಶಿಕ್ಷಕರ ಗೈರು ಹಾಜರಿಯು ಈ ಯೋಜನೆಯ ಮೂಲಕ ಕಂಡು ಬಂದಿತು. ಇದಕ್ಕೆ ಅನುಗುಣವಾಗಿ ಶಿಕ್ಷಾಕರ್ಮಿ ಎಂದು ಕರೆಯಲ್ಪಡುವ ಇಬ್ಬರು ಸ್ಥಳೀಯ ನಿವಾಸಿಗಳು ಅಥವಾ ಶೈಕ್ಷಣಿಕ ಕಾರ್ಯಕರ್ತರ ಗುಂಪನ್ನು ಏಕೋಪಾಧ್ಯಾಯ ಶಾಲೆಯಲ್ಲಿ ಪ್ರಾಥಮಿಕ ಶಾಲಾ ಶಿಕ್ಷಕನ ಬದಲಿ ಶಿಕ್ಷಕರಾಗಿ ಭಾವಿಸಲಾಯಿತು.

ಸ್ಥಳೀಯ ವ್ಯಕ್ತಿಯ ನೇಮಕಾತಿಯನ್ನು ಖಚಿತಪಡಿಸುವಾಗ ಶಿಕ್ಷಾ ಕರ್ಮಿಯ ಆಯ್ಕೆಯಲ್ಲಿ ಶಿಕ್ಷಕರಿಗೆ ನಿಗಧಿಪಡಿಸಲಾದ ಶೈಕ್ಷಣಿಕ ಅರ್ಹತೆಯು ಮುಖ್ಯವಾಗಿರುವುದಿಲ್ಲ, ಆದರೆ ಅವರು ಶಿಕ್ಷಕರಾಗಿ ಪರಿಣಾಮಕಾರಿಯಾಗಿ ಕಾರ್ಯ ನಿರ್ವಹಿಸಲು ಅವರಿಗೆ ತರಬೇತಿಯನ್ನು ಮತ್ತು ಶೈಕ್ಷಣಿಕ ಬೆಂಬಲವನ್ನು ನೀಡಲಾಗುತ್ತದೆ.

- **<u>ಯೋಜನೆಯ ಉದ್ದೇಶಗಳು:</u>**
  - ಪ್ರಾಥಮಿಕ ಶಿಕ್ಷಣ ಸಾರ್ವತ್ರೀಕರಣವನ್ನು 14 ವರ್ಷದ ಒಳಗಿನ ಎಲ್ಲಾ ಮಕ್ಕಳಿಗೆ ಪ್ರಾಥಮಿಕ ಶಿಕ್ಷಣದ ಅವಕಾಶ ನೀಡುವ ಒಂದು ಸಮ್ಮಿಶ್ರ ಕಾರ್ಯಕ್ರಮವಾಗಿ ನೋಡಲಾಗುತ್ತದೆ.
  - ಸಾರ್ವತ್ರಿಕ ಸಾಧನೆ – ಕನಿಷ್ಠ ಮಟ್ಟದ ಕಲಿಕೆಯ ಮಟ್ಟವನ್ನು ಸಾಧಿಸುವುದು
  - ಸಮಾನತೆಯ ಉದ್ದೇಶವನ್ನು ಪೂರೈಸಲು ಶಿಕ್ಷಣ ವ್ಯವಸ್ಥೆಯ ದೃಷ್ಟಿಕೋನ
  - ಮಹಿಳೆಯರಿಗೆ ಮತ್ತು ಅವರ ಸಬಲೀಕರಣಕ್ಕಾಗಿ ಸಮಾಜದ ಕೆಳಜಾತಿಗಳು, ಜನಾಂಗೀಯ ಸಮುದಾಯಗಳು ಮತ್ತು ನಿರ್ಗತಿಕ ವರ್ಗಕ್ಕೆ ಸೇರಿದ ವಯಸ್ಕರು ಮತ್ತು ಮಕ್ಕಳಿಗೆ ಸಮಾನವಾದ ಶೈಕ್ಷಣಿಕ ಅವಾಕಾಶಗಳನ್ನು ಒದಗಿಸುವ ಅಗತ್ಯ ಮಧ್ಯಸ್ಥಿಕೆಗಳನ್ನು ಮಾಡುವುದು
  - ಮಕ್ಕಳಲ್ಲಿ ವಿಶೇಷವಾಗಿ ಹೆಣ್ಣು ಮಕ್ಕಳಲ್ಲಿ ಕಳಪೆ ದಾಖಲಾತಿ ಮತ್ತು ಹೆಚ್ಚು ಅಪವ್ಯಯದ ಸಮಸ್ಯೆಯನ್ನು ಬಗೆಹರಿಸುವುದು
- **ತಂತ್ರಗಳು**
  - ಶಿಕ್ಷಾ ಕರ್ಮಿ ಯೋಜನೆಯ ವರ್ಷಕ್ಕೆ 2 ಬಾರಿ ಪುನರಾವಲೋಕನವನ್ನು SIDA ನಿಯೋಜಿಸಿದ ಒಂದು ಮೇಲ್ವಿಚಾರಣಾ ಸಂಸ್ಥೆಯು ಮಾಡುತ್ತದೆ.
  - ಕ್ಷೇತ್ರ ಅನುಭವಗಳು ಮತ್ತು ಒಮ್ಮತದ ನಿರ್ಧಾರ ಕೈಗೊಳ್ಳುವಿಕೆಯ ಆಧಾರದ ಮೇಲೆ ಕಾರ್ಯವಿಧಾನಗಳನ್ನು ವಿಕಸನಗೊಳಿಸಲಾಗಿದೆ.
  - ಹೆಚ್ಚಿನ ವಿಕೇಂದ್ರೀಕರಣ ಮತ್ತು ಹೆಚ್ಚಿನ ಸಮುದಾಯದ ಒಳಗೊಳ್ಳುವಿಕೆ.
  - ಅವಕಾಶದಲ್ಲಿ ಲಿಂಗ ಮತ್ತು ಸಾಮಾಜಿಕ ಸೂಕ್ಷ್ಮತೆಯನ್ನು ಉತ್ತೇಜಿಸಲಾಗಿದೆ.

**ಅನುಷ್ಠಾನ**

ರಾಜಸ್ಥಾನ ಸರ್ಕಾರ ಮತ್ತು ಸರ್ಕಾರೇತರ ಸಂಸ್ಥೆಗಳು ಜೊತೆಜೊತೆಯಾಗಿ ಯೋಜನಾ ನಿರ್ದೇಶಕರೊಂದಿಗೆ SK. ತರಬೇತುದಾರರಿಗೆ. ತರಬೇತಿ ನೀಡಲು ವಿನ್ಯಾಸಗೊಳಿಸಲು ಮತ್ತು ಸಂಘಟಿಸಲು ಹಾಗೂ ಶಿಕ್ಷಾ ಕರ್ಮಿ ತರಬೇತಿಯನ್ನು ಮೇಲ್ವಿಚಾರಣೆ ಮಾಡುವಲ್ಲಿ ಕಾರ್ಯನಿರ್ವಹಿಸಿವೆ.

ಗ್ರಾಮೀಣ ಪ್ರದೇಶಗಳ ವಂಚಿತ ವರ್ಗಗಳ ಅಗತ್ಯಗಳನ್ನು ಪೂರೈಸಲು ಶಿಕ್ಷಣ ಸೇವೆಗಳು, ಪಂಚಾಯತ್ ಸಮಿತಿ, ಶಿಕ್ಷಾ ಕರ್ಮಿ ಸಹಯೋಗಿ ಮತ್ತು ಸರ್ಕಾರೇತರ ಸಂಸ್ಥೆಗಳಿಂದ ವಿಷಯ ತಜ್ಞರು, ಶಿಕ್ಷಾ ಕರ್ಮಿ ಮತ್ತು ಗ್ರಾಮೀಣ ಸಮುದಾಯದ ಸಹಕಾರವು ಈ ಯೋಜನೆಯ ಗುರಿಗಳನ್ನು ಸಾಧಿಸಲು ಅಗತ್ಯವಾಗಿದೆ.

**ಚಟುವಟಿಕೆಗಳು** : ಈ ಕೆಳಗಿನ ಚಿತ್ರವು (5.3) ಯೋಜನೆಯು ಕೈಗೊಂಡ ಪ್ರಮುಖ ಚಟುವಟಿಕೆಗಳನ್ನು ದಾಖಲಿಸುತ್ತದೆ.

| | |
|---|---|
| ದಿನಕೇಂದ್ರ | ಅಸ್ತಿತ್ವದಲ್ಲಿರುವ ಪ್ರಾಥಮಿಕ ಶಾಲೆಗಳು ಶಿಕ್ಷಾ ಕರ್ಮಿಯಿಂದ ನಡೆಸಲ್ಪಟ್ಟರೆ ಅದನ್ನು ದಿನಕೇಂದ್ರ ಎಂದು ಕರೆಯಲಾಗುತ್ತದೆ. |
| ಪ್ರೆಹರ್ ಪಾಠಶಾಲೆಗಳು | ಯಾವ ಮಕ್ಕಳು ದಿನಕೇಂದ್ರಕ್ಕೆ ಹಾಜರಾಗುವುದಿಲ್ಲವೋ, ಅವರು ರಾತ್ರಿಯಲ್ಲಿ ಶಾಲೆಗೆ ಬರುತ್ತಾರೆ. ಇದೇ ಪ್ರೆಹರ್ ಪಾಠಶಾಲೆಗಳು. |
| ಮಹಿಳಾ ಪ್ರಕಾಶನ ಕೇಂದ್ರ | ಈ ಯೋಜನೆಯು ಮಹಿಳಾ ಶಿಕ್ಷಾ ಕರ್ಮಿಯ ನೇಮಕಾತಿಯನ್ನು ಬೆಂಬಲಿಸುತ್ತದೆ ಹಾಗೂ ಮಹಿಳಾ ಶಿಕ್ಷಾಕರ್ಮಿ ತರಬೇತಿ ಕೇಂದ್ರದ ಸ್ಥಾಪನೆಯನ್ನು ಮಹಿಳಾ ಪ್ರಕಾಶನ ಕೇಂದ್ರ ಎಂದು ಕರೆಯಲಾಗುತ್ತದೆ. ಇದು ಸ್ಥಳೀಯ ಮಹಿಳೆಯರನ್ನು ಮಹಿಳಾ ಶಿಕ್ಷಾಕರ್ಮಿಯಾಗಿ ಕೆಲಸ ಮಾಡಲು ಸಿದ್ಧಗೊಳಿಸುತ್ತದೆ. |
| ಸಮನ್ವಯ ವಿಧಾನ | ಒಂದು ಸಮೀಕ್ಷೆಯು ಘಟೋಲ್ ಬ್ಲಾಕ್‌ಗಳು (ಬುಡಕಟ್ಟು) ಮತ್ತು ಬಲೋತ್ರ (ಮರುಭೂಮಿ) ದಲ್ಲಿ 14 ವರ್ಷದೊಳಗಿನ ಮಕ್ಕಳಲ್ಲಿ 6% ರಷ್ಟು ಮಕ್ಕಳು ದೈಹಿಕ ಅಂಗವಿಕಲತೆಯಿಂದ ನರಳುತ್ತಿದ್ದಾರೆ ಎಂಬುದನ್ನು ಬಹಿರಂಗಪಡಿಸಿದೆ. ಆದ್ದರಿಂದ SKP ಶಾಲೆಗಳಲ್ಲಿ ಅಂಗವಿಕಲ ಮಕ್ಕಳನ್ನು ಸಮನ್ವಯ ಗೊಳಿಸಲು ಯೋಜನೆಯನ್ನು ಪ್ರಾರಂಭಿಸಿದೆ. |

**ಚಿತ್ರ 5.3** : ಶಿಕ್ಷಾ ಕರ್ಮಿಯ ಮುಖ್ಯ ಚಟುವಟಿಕೆಗಳು

### ಚಟುವಟಿಕೆ – 2

1. ನಿಮ್ಮ ಪ್ರದೇಶದಲ್ಲಿ ಶಾಲೆಯಿಂದ ಹೊರಗುಳಿದ ಮಕ್ಕಳಿಗಾಗಿ ಕೆಲಸ ಮಾಡುವ ಯಾವುದಾದರೊಂದು ಸಂಸ್ಥೆಗೆ ಭೇಟಿ ನೀಡಿ ಮತ್ತು ಈ ಕೆಳಗಿನ ಅಂಶಗಳನ್ನು ಅನುಸರಿಸಿ ಒಂದು ವರದಿಯನ್ನು ಸಿದ್ಧಪಡಿಸಿ...
   - ಸಾಮಾನ್ಯ ಮಾಹಿತಿ – ಸಂಸ್ಥೆಯ ಹೆಸರು, ವಿಳಾಸ, ದೂರವಾಣಿ ಸಂಖ್ಯೆ, ಕೆಲಸದ ಪ್ರದೇಶ, ತರಗತಿಗಳ ಸಂಖ್ಯೆ ಮತ್ತು ವಿದ್ಯಾರ್ಥಿಗಳು, ರಾಜ್ಯ ಅಥವಾ ರಾಷ್ಟ್ರೀಯ ಮಟ್ಟದ್ದೇ ?
   - ಉದ್ದೇಶಗಳು ಮತ್ತು ವಿವಿಧ ಚಟುವಟಿಕೆಗಳು (ಶೈಕ್ಷಣಿಕ ಮತ್ತು ಸಹಪಠ್ಯ )

## 5.5 ಪ್ರಕರಣ ಅಧ್ಯಯನ : ಮಹಾರಾಷ್ಟ್ರದಲ್ಲಿ ವಿವಿಧ ಯೋಜನೆಗಳು.

ಈಗ ನಾವು ಭಾರತದ ರಾಜ್ಯಗಳಲ್ಲಿ ಪ್ರಾಥಮಿಕ ಶಿಕ್ಷಣ ಸಾರ್ವತ್ರೀಕರಣ ಯೋಜನೆಯ ವಿವಿಧ ವಿಧಗಳ ಕಾರ್ಯಾಚರಣೆಯನ್ನು ಪರಿಶೀಲಿಸಲು ಒಂದು ರಾಜ್ಯದ ಪ್ರಕರಣ ಅಧ್ಯಯನವನ್ನು ನಾವೀಗ ನೋಡೋಣ. ನಾವು ಮಹಾರಾಷ್ಟ್ರ ರಾಜ್ಯವನ್ನು ಆಯ್ಕೆ ಮಾಡಿದ್ದು, ನೀವು ನಿಮ್ಮ ರಾಜ್ಯವನ್ನು ಸಂಬಂಧೀಕರಿಸಬೇಕಿದೆ.

ಮಹಾರಾಷ್ಟ್ರದಲ್ಲಿ ಗುಣಾತ್ಮಕ ಮತ್ತು ಪರಿಮಾಣಾತ್ಮಕ ಪ್ರಾಥಮಿಕ ಶಿಕ್ಷಣಕ್ಕಾಗಿ ವಿವಿಧ ಯೋಜನೆಗಳನ್ನು ಅಭಿವೃದ್ಧಿಪಡಿಸಿ ಅನುಷ್ಠಾನ ಮಾಡಲಾಗಿದೆ. ಇದು ಮಹಾರಾಷ್ಟ್ರದಲ್ಲಿ ಪ್ರಾಥಮಿಕ ಶಿಕ್ಷಣ ಸಾರ್ವತ್ರೀಕರಣಕ್ಕೆ ಕಾರಣವಾಗಿರಬಹುದು.

ಮಹಾರಾಷ್ಟ್ರ ಸರ್ಕಾರವು ಪ್ರಾಥಮಿಕ ಶಿಕ್ಷಣಕ್ಕಾಗಿ ವಿವಿಧ ಯೋಜನೆಗಳನ್ನು ಕಂಡುಹಿಡಿದಿದ್ದು ಈ ಕೆಳಕಂಡಂತಿವೆ.

**5.3.5 ಮಹಾರಾಷ್ಟ್ರದಂತಹ ರಾಜ್ಯಕ್ಕೆ ನಿರ್ದಿಷ್ಟವಾದ ಯೋಜನೆಗಳು.**

**5.3.5 ಸಾಮಾಜಿಕವಾಗಿ ವಂಚಿತರಾದ ಮಕ್ಕಳಿಗಾಗಿ ಯೋಜನೆಗಳು**

ಪರಿಶಿಷ್ಟ ಜಾತಿ, ಪರಿಶಿಷ್ಟ ಪಂಗಡಗಳು, ಅಲೆಮಾರಿ ಜಾತಿ ಮತ್ತು ಬುಡಕಟ್ಟು ಜನಾಂಗದವರು ಸಾಮಾಜಿಕವಾಗಿ ಹಿಂದುಳಿದ ವರ್ಗಕ್ಕೆ ಸೇರುತ್ತಾರೆ. ಮಹಾರಾಷ್ಟ್ರದಲ್ಲಿ ಹಿಂದುಳಿದ ವರ್ಗಗಳ ಬಾಲಕರು ಮತ್ತು ಬಾಲಕಿಯರ ಕಲ್ಯಾಣಕ್ಕಾಗಿ ಈ ಕೆಳಕಂಡ ಯೋಜನೆಗಳನ್ನು ರಾಜ್ಯಸರ್ಕಾರ ನಡೆಸುತ್ತಿದೆ.

- ಹತ್ತನೇ ತರಗತಿಯವರೆಗೆ ವಿದ್ಯಾರ್ಥಿವೇತನ (Stipend)
- ಉಚಿತ ಸಮವಸ್ತ್ರ ಮತ್ತು ಪುಸ್ತಕ
- ಭೋಜನಾ ವ್ಯವಸ್ಥೆಯಿರುವ ಮನೆಗಳು
- ಸರ್ಕಾರ ಮತ್ತು ಖಾಸಗಿ ಸಂಸ್ಥೆಗಳಿಂದ ನಡೆಸಲ್ಪಡುವ ವಿದ್ಯಾರ್ಥಿನಿಲಯಗಳು
- N C E R T ಸ್ಥಾಪಿಸಿದ ರಾಷ್ಟ್ರೀಯ ಪ್ರತಿಭಾ ಸಂಶೋಧನಾ ಮಂಡಳಿಯು ಪ.ಜಾ. ಮತ್ತು ಪ.ಪಂ.ದವರಿಗೆ ಮಾಧ್ಯಮಿಕ ಶಿಕ್ಷಣವನ್ನು ಪೂರ್ಣಗೊಳಿಸಿದ ನಂತರ ವಿದ್ಯಾರ್ಥಿವೇತನವನ್ನು ನೀಡುತ್ತದೆ.
- ಹಾಜರಾತಿಗಾಗಿ ಭತ್ಯೆ
- ಆಶ್ರಮ ಶಾಲೆಗಳು
- ಪುಸ್ತಕ ಬ್ಯಾಂಕ್ ಯೋಜನೆ

**5.3.5.2 ಹೆಣ್ಣು ಮಕ್ಕಳಿಗಾಗಿ ಯೋಜನೆಗಳು**

ಕುಟುಂಬ ಹಾಗೂ ಸಮಾಜಕ್ಕಾಗಿ ಹೆಣ್ಣು ಮಕ್ಕಳ ಶಿಕ್ಷಣವು ಬಹುಮುಖ್ಯವಾಗಿದೆ. ಹೆಣ್ಣು ಮಕ್ಕಳ ಶಿಕ್ಷಣಕ್ಕಾಗಿ ರಾಜ್ಯವು ಹಲವು ಯೋಜನೆಗಳನ್ನು ಪ್ರಾರಂಭಿಸಿದೆ.

- **ಹಾಜರಾತಿಗಾಗಿ ಭತ್ಯೆ** : ಹಿಂದುಳಿದ ವರ್ಗಗಳಿಂದ ಬರುವ ಹೆಣ್ಣು ಮಕ್ಕಳಲ್ಲಿ ತರಗತಿ I-IVರವರೆಗೆ ಅಪವ್ಯಯವನ್ನು ಕಡಿಮೆಗೊಳಿಸಲು ಶಾಲೆಯು ಕಾರ್ಯನಿರ್ವಹಿಸಿದ ದಿನಗಳಲ್ಲಿ 75% ರಷ್ಟು ದಿನ ಹಾಜರಿದ್ದರೆ, ಪ್ರತಿ ದಿನಕ್ಕೆ 1ರಂತೆ ಭತ್ಯೆಯನ್ನು ನೀಡುವುದು. ಅಹಿಲ್ಯಾಬಾಯಿ ಹೋಲ್ಕರ್ಸ್‌ರವರಿಂದ ಹೆಣ್ಣು ಮಕ್ಕಳಿಗೆ ಉಚಿತ ಪ್ರಯಾಣದ ಯೋಜನೆ. 1997 ರಲ್ಲಿ ಸರ್ಕಾರವು ಗ್ರಾಮೀಣ ಪ್ರದೇಶದ ಹೆಣ್ಣು ಮಕ್ಕಳು ತಮ್ಮ ಶಿಕ್ಷಣದಿಂದ ವಂಚಿತರಾಗಬಾರದು ಎಂಬುದಕ್ಕಾಗಿ ಉಚಿತ ಪ್ರಯಾಣದ ಯೋಜನೆಯನ್ನು ಪ್ರಾರಂಭಿಸಿತು.
- **ಮಾತೃ ಪ್ರಬೋಧನ್ ಯೋಜನೆ** : ಗ್ರಾಮೀಣ ಪ್ರದೇಶಗಳಲ್ಲಿ ಪ್ರಾಥಮಿಕ ಶಿಕ್ಷಣದ ಸಾರ್ವತ್ರೀಕರಣದ ಗುರಿಯನ್ನು ಸಾಧಿಸಲು ಮಕ್ಕಳ ಶಿಕ್ಷಣ, ಅವರ ಆರೋಗ್ಯ ಮತ್ತು ವೈಯಕ್ತಿಕ ಬೆಳವಣಿಗೆಯ ಬಗ್ಗೆ ತಾಯಂದಿರಿಗೆ ಶಿಕ್ಷಣವನ್ನು ನೀಡುವ ಕಾರ್ಯಕ್ರಮವನ್ನು ಆಯೋಜಿಸಲಾಗಿದೆ.
- **ಸೈನಿಕ ಶಾಲೆ** : ಮಹಾರಾಷ್ಟ್ರದಲ್ಲಿ ಹೆಣ್ಣು ಮಕ್ಕಳನ್ನು ಉತ್ತೇಜಿಸಲು ನಾಸಿಕ್‌ನ ಭೋರ್ ಎಂಬಲ್ಲಿ ಸೈನಿಕ ಶಾಲೆಯನ್ನು ಸರ್ಕಾರ ಪ್ರಾರಂಭಿಸಿದೆ. ಹೆಣ್ಣು ಮಕ್ಕಳು ದೈಹಿಕವಾಗಿ ಸದೃಢರಾಗಿದ್ದರೆ ಹೆಚ್ಚುವರಿ ತರಬೇತಿಯ ಅವಕಾಶವನ್ನು ಕೊಡುವುದರ ಜೊತೆಗೆ ವಿದ್ಯಾರ್ಥಿವೇತನ (Stipend)ವನ್ನು ನೀಡುಲಾಗುತ್ತಿದೆ.
- **ಸಮೂಹ್ ನಿವಾಸಿ ಶಾಲೆ** : ದೂರದ ಪ್ರದೇಶಗಳಿಂದ ಬರುವ ಹೆಣ್ಣು ಮಕ್ಕಳು ಶಾಲೆಗೆ ತಲುಪಲು ಸಾಧ್ಯವಾಗದ ಕಾರಣ ಸಮುಹ್ ನಿವಾಸಿ ಶಾಲೆಗಳನ್ನು ತೆರೆಯಲಾಗಿದೆ.

### 5.5.5.3 ಆರ್ಥಿಕವಾಗಿ ಹಿಂದುಳಿದಿರುವ ಮಕ್ಕಳಿಗಾಗಿ ಯೋಜನೆಗಳು

ಸಮಾಜದಲ್ಲಿ ಪ್ರತಿ ಜಾತಿ ಹಾಗೂ ಧರ್ಮದಲ್ಲಿ ಅನೇಕ ಜನರು ಆರ್ಥಿಕವಾಗಿ ದುರ್ಬಲರಾಗಿದ್ದಾರೆ. ಅವರು ತಮ್ಮ ಮಕ್ಕಳನ್ನು ಶಿಕ್ಷಣಕ್ಕಾಗಿ ಶಾಲೆಗೆ ಕಳುಹಿಸಲು ಸಾಧ್ಯವಾಗುತ್ತಿಲ್ಲ. ಬಡತನದಿಂದಾಗಿ ಈ ಮಕ್ಕಳು ಶಾಲೆಯನ್ನು ಬಿಟ್ಟು ಕೆಲಸ ಮಾಡಬೇಕಿದೆ ಮತ್ತು ಕುಟುಂಬಕ್ಕಾಗಿ ಸಂಪಾದಿಸಲು ಪ್ರಾರಂಭಿಸಬೇಕಿದೆ.

ಈ ಮಕ್ಕಳಿಗಾಗಿ ಕೆಲವು ಯೋಜನೆಗಳು ಈ ಕೆಳಕಂಡಂತಿವೆ.

- **ವಿದ್ಯಾರ್ಥಿವೇತನ :** ಮಹಾರಾಷ್ಟ್ರ ಸರ್ಕಾರವು 1978ರಲ್ಲಿ ಹಿರಿಯ ಮಾಧ್ಯಮಿಕ ಹಂತದ ಪ್ರತಿಭಾವಂತ ಮತ್ತು ಆರ್ಥಿಕವಾಗಿ ಹಿಂದುಳಿದ ವಿದ್ಯಾರ್ಥಿಗಳಿಗಾಗಿ ಈ ವಿದ್ಯಾರ್ಥಿವೇತನವನ್ನು ಪ್ರಾರಂಭಿಸಿತು. ಇದರಲ್ಲಿ ಬಾಲಕರಿಗೆ ರೂ.70ನ್ನು ಮತ್ತು ಬಾಲಕಿಯರಿಗೆ ರೂ.80ನ್ನು ನೀಡಲಾಗುವುದು.
- **Eastern Broadcasting Company [EBC]** : ಮಹಾರಾಷ್ಟ್ರ ಸರ್ಕಾರವು ಈ ಯೋಜನೆಯನ್ನು 1956ರಲ್ಲಿ ಪ್ರಾರಂಭಿಸಿತು. ಪ್ರತೀ ವರ್ಷವೂ 75% ರಷ್ಟು ಹಾಜರಾತಿ

ಮತ್ತು ಉತ್ತೀರ್ಣರಾದ ವಿದ್ಯಾರ್ಥಿಗಳಿಗೆ, ಪೋಷಕರ ವಾರ್ಷಿಕ ಆದಾಯವು ರೂ 15,000/– ಇರುವ ವಿದ್ಯಾರ್ಥಿಗಳಿಗೆ ಈ ವಿದ್ಯಾರ್ಥಿವೇತನವನ್ನು ಪುರಸ್ಕರಿಸಲಾಗುತ್ತದೆ.

- **ಪೌಷ್ಟಿಕಾಂಶದ ಆಹಾರ :** ಈ ಯೋಜನೆಯನ್ನು ಗ್ರಾಮ ಅಭಿವೃದ್ಧಿ ಸಮಿತಿಯು 1995ರಲ್ಲಿ ಪ್ರಾರಂಭಿಸಿತು. ಪ್ರತಿದಿನ ನಿಯಮಿತವಾಗಿ ಶಾಲೆಗೆ ಹಾಜರಾಗುವ ಪ್ರತಿ ಮಗುವಿಗೆ ಒದಗಿಸಲಾಗುತ್ತದೆ.
- **ಸಾವಿತ್ರಿಬಾಯಿ ಫುಲೆ ಪೋಷಕ ದತ್ತು ಯೋಜನೆ :** ಈ ಯೋಜನೆಯನ್ನು 1993ರಲ್ಲಿ ಪ್ರಾರಂಭಿಸಲಾಯಿತು. ಆರ್ಥಿಕ ಸ್ಥಿತಿಯ ಕಾರಣದಿಂದಾಗಿ ಅನೇಕ ಹೆಣ್ಣು ಮಕ್ಕಳು ಶಾಲೆಗಳನ್ನು ಬಿಡುತ್ತಾರೆ. ಈ ಯೋಜನೆಯ ಪ್ರಕಾರ ಪ್ರಾಂಶುಪಾಲರು, ಅಧಿಕಾರಿಗಳು ಮತ್ತು ಸಮಾಜದ ಯಾವುದೇ ಸದಸ್ಯರು ಈ ಹೆಣ್ಣು ಮಕ್ಕಳಲ್ಲಿ ಒಬ್ಬರನ್ನು ದತ್ತು ತೆಗೆದುಕೊಳ್ಳಬಹುದಾಗಿದೆ ಮತ್ತು 7ನೆಯ ತರಗತಿಯವರೆಗೆ ಪ್ರತಿ ತಿಂಗಳು ಕನಿಷ್ಠ ರೂ. 30ಗಳ ಸಹಾಯ ಮಾಡಬೇಕಿದೆ.
- **ಪುಸ್ತಕ ಬ್ಯಾಕ್ ಯೋಜನೆ :** ಪ್ರಾಥಮಿಕ ಶಾಲೆಗಳ ವಿದ್ಯಾರ್ಥಿಗಳು ಶಾಲಾ ಪುಸ್ತಕಗಳನ್ನು ಉಚಿತವಾಗಿ ಪಡೆಯುತ್ತಿದ್ದಾರೆ. ಈ ಪುಸ್ತಕಗಳನ್ನು ಒಂದು ವರ್ಷದ ನಂತರ ಹಿಂಪಡೆಯಲಾಗುತ್ತದೆ ಮತ್ತು ಹೊಸವರ್ಷ ಪ್ರಾರಂಭವಾದಾಗ ಚಟುವಟಿಕೆ ಪುನರಾವರ್ತನೆಯಾಗುತ್ತದೆ. 1 ಮತ್ತು 2 ನೇ ತರಗತಿಯ ವಿದ್ಯಾರ್ಥಿಗಳಿಗೆ ಪ್ರತಿ ವರ್ಷವೂ ಹೊಸ ಪುಸ್ತಕಗಳನ್ನು ಒದಗಿಸಲಾಗುತ್ತದೆ. ಪುಸ್ತಕ ಬ್ಯಾಂಕಿನಲ್ಲಿ ಉನ್ನತ ತರಗತಿಗಳ ಎಲ್ಲಾ ಪುಸ್ತಕಗಳನ್ನು ಹೊಸ ಪುಸ್ತಕಗಳೊಂದಿಗೆ ವಿನಿಮಯಮಾಡಿಕೊಳ್ಳಬಹುದಾಗಿದೆ.

### 5.3.5.4 ದೂರದ ಪ್ರದೇಶದ ಮಕ್ಕಳಿಗಾಗಿ ಯೋಜನೆಗಳು.

ಮಹಾರಾಷ್ಟ್ರ ಸರ್ಕಾರವು 1970ರಲ್ಲಿ ದೂರದ (ಆಳವಾದ) ಪ್ರದೇಶಗಳಲ್ಲಿ ವಾಸಿಸುವ ಮಕ್ಕಳ ಶಿಕ್ಷಣಕ್ಕಾಗಿ ಹಲವು ಯೋಜನೆಗಳನ್ನು ಪ್ರಾರಂಭಿಸಿದೆ.

- **ಪೌಷ್ಟಿಕಾಂಶದ ಆಹಾರ ಪದ್ಧತಿ** : ಇದು 0–6 ವರ್ಷ ವಯಸ್ಸಿನ ಮಕ್ಕಳ ಗುಣಮಟ್ಟದ ಆಹಾರವನ್ನು ಸುಧಾರಿಸುವ ಗುರಿಯನ್ನು ಹೊಂದಿದೆ. ಅಂಗನವಾಡಿ ಮತ್ತು ಬಾಲವಾಡಿ ಮಕ್ಕಳಿಗೆ ಪೌಷ್ಟಿಕಾಂಶದ ಆಹಾರವನ್ನು ಒದಗಿಸಲಾಗಿದೆ. ಪ.ಪಂ.ದ ಮಕ್ಕಳು ಸಹಾ ಈ ಯೋಜನೆಯ ಲಾಭ ಪಡೆದು ಮಾನಸಿಕ ಹಾಗೂ ದೈಹಿಕ ಬೆಳವಣಿಗೆಯನ್ನು ತೋರಿಸಿದ್ದಾರೆ. 1–5ನೇ ತರಗತಿಯ ವಿದ್ಯಾರ್ಥಿಗಳಿಗೂ ಸಹ ಮಧ್ಯಾಹ್ನದ ಬಿಸಿಯೂಟವನ್ನು ನೀಡಲಾಗಿದೆ.

- **ಆಶ್ರಮ ಶಾಲೆ :** ಈ ಯೋಜನೆಯನ್ನು ಬುಡಕಟ್ಟು ಅಭಿವೃದ್ಧಿ ನಿರ್ದೇಶನಾಲಯವು ಅನುಷ್ಠಾನಗೊಳಿಸಿದೆ. ಬಡತನದಿಂದಾಗಿ ದೂರದ ಪ್ರದೇಶಗಳಲ್ಲಿನ ಪೋಷಕರು ತಮ್ಮ ಮಕ್ಕಳ ಅಗತ್ಯಗಳನ್ನು ಪೂರೈಸಲು ಸಾಧ್ಯವಾಗುತ್ತಿಲ್ಲ. ಈ ಬಡಮಕ್ಕಳು ಆಶ್ರಮ ಶಾಲೆಗಳಲ್ಲಿ ಸಾಕ್ಷರತೆಗಾಗಿ ದಾಖಲಾಗಿದ್ದಾರೆ. ವಸತಿ ಮತ್ತು ಸಮವಸ್ತ್ರವು ಉಚಿತವಾಗಿದೆ. ಈ ಶಾಲೆಗಳು 1–10ನೇ ತರಗತಿಯನ್ನು ನಿರ್ವಹಿಸುತ್ತದೆ ಮತ್ತು ಆಡಳಿತದಿಂದ ಮೇಲ್ವಿಚಾರಣೆ ಮಾಡಲಾಗುತ್ತದೆ.

ಆಶ್ರಮ ಶಾಲೆಗಳಲ್ಲಿ ಎರಡು ವಿಧಗಳಿವೆ.

1 ಮೂಲ ಆಶ್ರಮ ಶಾಲೆ – 1–7ನೇ ತರಗತಿಗಾಗಿ

2 PARA ಮೂಲ ಆಶ್ರಮಶಾಲೆ– 5–10 ತರಗತಿಯವರೆಗೆ

- **ವಿದ್ಯಾನಿಕೇತನ್ :** ಯವತ್ಮಾಳ್ ಜಿಲ್ಲೆಯ ಕೆಲಾಪುರದಲ್ಲಿ ಸ್ಥಾಪಿಸಲಾದ ಇದು ಪ್ರತಿಭಾನ್ವಿತ ಬುಡಕಟ್ಟು ವಿದ್ಯಾರ್ಥಿಗಳಿಗೆ ಮೊಟ್ಟಮೊದಲ ಸಂಸ್ಥೆಯಾಗಿದೆ. ಹೆಣ್ಣು ಮಕ್ಕಳಿಗಾಗಿ ಸ್ವತಂತ್ರ ವಿದ್ಯಾನಿಕೇತನ್‌ಅನ್ನು ಸ್ಥಾಪಿಸಲಾಗಿದೆ. ಎಲ್ಲಾ ಶೈಕ್ಷಣಿಕ ಸಂಸ್ಥೆಗಳಲ್ಲಿ 10 ಸೀಟುಗಳನ್ನು ಆದಿವಾಸಿ ವಿದ್ಯಾರ್ಥಿಗಳಿಗೆ ಕಾಯ್ದರಿಸಲಾಗಿದೆ.

- **ಕುರಾನ್ ಶಾಲ :** ಇದು ಅನೌಪಚಾರಿಕ ಶಿಕ್ಷಣವನ್ನು ಒದಗಿಸುವ ಸಂಚಾರಿ ಶಾಲೆಯಾಗಿದೆ. ಮೊದಲ ಕುರಾನ್ ಶಾಲಾವನ್ನು ಜಾರಿಗೆ ತಂದದ್ದು ಶ್ರೀಮತಿ ತಾರಾಬಾಯಿ ಮೋದಕ್ ಮತ್ತು ಶ್ರೀಮತಿ ಅನುತಾಯಿ ವಾಘ್. ಶಿಕ್ಷಕರು ಅರಣ್ಯ ಪ್ರದೇಶಗಳಲ್ಲಿ ವಿದ್ಯಾರ್ಥಿಗಳನ್ನು ಅನುಸರಿಸುತ್ತಾರೆ ಮತ್ತು ಶುಚಿತ್ವ, ಔಷಧಿಗಳು, ಒಳ್ಳೆಯ ಅಭ್ಯಾಸಗಳು, ಭಾಷೆ ಬಗ್ಗೆ ಅನೌಪಚಾರಿಕವಾಗಿ ಬೋಧಿಸುತ್ತಾರೆ. ಜೀವನದ ಗುಣಮಟ್ಟವನ್ನು ಅಬಿವೃದ್ಧಿಪಡಿಸಲು ಪ್ರಯತ್ನಿಸುತ್ತಾರೆ.

- **ಮಕ್ಕಳ ಶಿಕ್ಷಣ ಯೋಜನೆ :** ಯುನಿಸೆಫ್‌ನ ಅಡಿಯಲ್ಲಿ 1982ರಲ್ಲಿ ಮಹಾರಾಷ್ಟ್ರ ರಾಜ್ಯವು ಈ ಯೋಜನೆಯನ್ನು ಪ್ರಾರಂಭಿಸಿತು. ಪುಸ್ತಕಗಳು ಶಾಲೆಗಳ ಬಗ್ಗೆ ವಿದ್ಯಾರ್ಥಿಗಳಲ್ಲಿ ಆಸಕ್ತಿಯನ್ನು ಹೆಚ್ಚಿಸಲು ವಿವಿಧ ಚಿತ್ರಗಳಿಂದ ತುಂಬಿರುವ ಪುಸ್ತಕಗಳನ್ನು ಮಕ್ಕಳಿಗೆ ನೀಡಲಾಗುತ್ತದೆ. ತಮ್ಮ ಮಕ್ಕಳ ಪ್ರಗತಿಯ ಬಗ್ಗೆ ಖಾತರಿಪಡಿಸಿಕೊಳ್ಳಲು ಪೋಷಕರ ಸಭೆಯನ್ನು ಆಯೋಜಿಸಲಾಗುತ್ತದೆ.

- **ಬುಡಕಟ್ಟು ಭಾಷೆಗಳಿಗಾಗಿ ಯೋಜನೆ :** ಶಾಲೆಗಳ ಭಾಷೆಗೂ ಬುಡಕಟ್ಟು ಪ್ರದೇಶಗಳಿಗೂ ನಡುವೆ ವ್ಯತ್ಯಾಸವಿದೆ. ಆದ್ದರಿಂದ ಬುಡಕಟ್ಟು ಮಕ್ಕಳಿಗೆ ಗುಣಮಟ್ಟದ/ ಶಿಷ್ಟ ಭಾಷೆಯನ್ನು ಅರ್ಥಮಾಡಿಕೊಳ್ಳುವುದು ಕಷ್ಟವಾಗುತ್ತದೆ. ಈ ತೊಂದರೆಯನ್ನು ತಗೆದುಹಾಕಲು ಈ ಎರಡೂ ಭಾಷೆಗಳು ಸಮಾನವಾಗಿರಬೇಕು. ಆಗ ವಿದ್ಯಾರ್ಥಿಗಳಿಗೆ ಮಾತೃಭಾಷೆ ಹಾಗೂ ಪ್ರಾದೇಶಿಕ/ಪ್ರಾಂತೀಕ ಭಾಷೆಯ ಪರಿಚಯವಾಗಬಹುದು. ಆದ್ದರಿಂದ MSCERT ಈ ಮಕ್ಕಳಿಗೆ ಬುಡಕಟ್ಟು ಭಾಷೆಗಳಲ್ಲಿ ಪಠ್ಯಪುಸ್ತಕಗಳನ್ನು ಸಿದ್ಧಪಡಿಸುತ್ತದೆ ಮತ್ತು ಶಿಕ್ಷಕರಿಗೆ ತರಬೇತಿಯ ಜೊತೆಗೆ ಕೈಪಿಡಿಯನ್ನು ಸಿದ್ಧಪಡಿಸಲಾಗುತ್ತದೆ.

### 5.3.5.5 ಶಾಲೆಯಿಂದ ಹೊರಗುಳಿದ ಮಕ್ಕಳಿಗಾಗಿ ಯೋಜನೆಗಳು

ಬಡತನದಿಂದಾಗಿ ಅನೇಕ ವಿದ್ಯಾರ್ಥಿಗಳು ಶಿಕ್ಷಣದಿಂದ ವಂಚಿತರಾಗಿದ್ದಾರೆ. ಇವರನ್ನು ಔಪಚಾರಿಕ ಶಿಕ್ಷಣಕ್ಕೆ ಮರಳಿ ತರಲು ಸರ್ಕಾರವು ಅನೇಕ ಯೋಜನೆಗಳನ್ನು ಸ್ಥಾಪಿಸಿದೆ.

- **ಸೇತುಬಂಧ ಶಾಲೆ** : ಈ ಕಾರ್ಯಕ್ರಮದ ಮುಖ್ಯ ವಿಷಯಗಳೆಂದರೆ ವಿದ್ಯಾರ್ಥಿಗಳು ತಮ್ಮ ಅಧ್ಯಯನವನ್ನು ಬಿಟ್ಟು, ಶಾಲೆಗೆ ಹೋಗುವುದೇ ಇಲ್ಲ. ಆಗ ಸ್ವಲ್ಪ ಮಟ್ಟಿಗೆ ಅವರು ಅಧ್ಯಯನವನ್ನು ಮರೆತುಬಿಡುತ್ತಾರೆ. ವಿದ್ಯಾರ್ಥಿಗಳಿಗೆ ತಮ್ಮ ಉಳಿದ ಶಿಕ್ಷಣವನ್ನು ಪೂರ್ಣಗೊಳಿಸಲು ಅವಕಾಶವನ್ನು ಒದಗಿಸಲಾಗುತ್ತದೆ. ಸುಮಾರು 45 ದಿನಗಳ ಈ ಅವಧಿಯ ನಂತರ, ಅವರನ್ನು ಮುಖ್ಯವಾಹಿನಿಯ ಪ್ರಾಥಮಿಕ ಮತ್ತು ಪ್ರೌಢ ಶಾಲೆಗಳಿಗೆ ದಾಖಲಾಗಲು ಕಳುಹಿಸಲಾಗುತ್ತದೆ. ಈ ಶಾಲೆಯು ವಸತಿಯನ್ನು ಒಳಗೊಂಡ ಮನೆ ಹಾಗೂ ಶಾಲೆಯಾಗಿದ್ದು, 45 ದಿನಗಳ ಪಠ್ಯವಸ್ತುವನ್ನು ಮಾತ್ರ ಹೊಂದಿರುತ್ತದೆ. ಅಧ್ಯಯನವನ್ನು ಬಿಟ್ಟ ಮಕ್ಕಳನ್ನು ಇಲ್ಲಿ ಸೇರಿಸಿ, ಅವರವರು ಅಧ್ಯಯನ ಮಾಡಿದ ತರಗತಿಗಳಿಗನುಗುಣವಾಗಿ ಬೋಧಿಸಲಾಗುತ್ತದೆ. ನಂತರ ಅವರನ್ನು ನಿಯಮಿತ ಶಾಲೆಗಳಿಗೆ ಕಳುಹಿಸಲಾಗುತ್ತದೆ. ಈ ರೀತಿಯ ಶಾಲೆಯನ್ನು ನಡೆಸುವಂತಹ ವ್ಯಕ್ತಿಯು ಹಿರಿಯ ಮಾಧ್ಯಮಿಕ ತರಗತಿಯಲ್ಲಿ ಉತ್ತೀರ್ಣರಾಗಿರಬೇಕು ಮತ್ತು ಸೇತುವೆ ಶಾಲೆಗೆ ನಿಯಮಿತವಾಗಿ ಈ ಮಕ್ಕಳು ಹಾಜರಾಗುವಂತೆ ಕಷ್ಟಪಡಬೇಕಾಗುತ್ತದೆ. ಸರ್ಕಾರವೂ ಸಹ ಸೇತುಬಂಧ ಶಾಲೆ ಹಾಗೂ ಮಕ್ಕಳ ಅಗತ್ಯತೆಗನುಗುಣವಾಗಿ ಪಠ್ಯವಸ್ತು ಹಾಗೂ ಪುಸ್ತಕಗಳನ್ನು ಸಿದ್ಧಪಡಿಸುತ್ತದೆ.
- **ಸಿಂಧು ಬಾಲಕಾರ್ಮಿಕ ಯೋಜನೆ** : ಅನೇಕ ಮಕ್ಕಳು ವಿವಿಧ ವೃತ್ತಿಯಲ್ಲಿ ಬಾಲಕಾರ್ಮಿಕರಾಗಿ ಕೆಲಸ ಮಾಡುತ್ತಿದ್ದಾರೆ. ಈ ಯೋಜನೆಯು ಬಾಲಕಾರ್ಮಿಕ ಸಂಪ್ರದಾಯವನ್ನು ನಿರ್ಮೂಲನೆ ಮಾಡುವ ಗುರಿಯನ್ನು ಹೊಂದಿದೆ ಮತ್ತು ಅವರನ್ನು ಶಿಕ್ಷಣದ ಮುಖ್ಯ ವಾಹಿನಿಗೆ ತರಲು ಉದ್ದೇಶಿಸಿದೆ. ಮಹಾರಾಷ್ಟ್ರದ 5 ರಾಜ್ಯಗಳಲ್ಲಿ ಈ ಯೋಜನೆಯನ್ನು ಜಾರಿಗೆ ತರಲಾಗಿದೆ. ಅವುಗಳೆಂದರೆ ಗೋಂಡ್ಯ, ಅಮರಾವತಿ, ಜಲಾನ, ಔರಂಗಾಬಾದ್ ಮತ್ತು ಮುಂಬೈ. MSCERTಯು ಈ ಯೋಜನೆಯ ಸ್ವಯಂ ಸೇವಕರಿಗೆ ತರಬೇತಿ ನೀಡುವ ಜವಾಬ್ದಾರಿಯನ್ನು ತಗೆದುಕೊಂಡಿದೆ. ಈ ಬಾಲ ಕಾರ್ಮಿಕ ಯೋಜನೆಯನ್ನು ರಾಷ್ಟ್ರ ಮಟ್ಟದಲ್ಲಿ ಒಂದು ಸೊಸೈಟಿಯ ಮೂಲಕ ಸಂಘಟಿಸಲ್ಪಟ್ಟಿದ್ದು, ಅದನ್ನು ರಾಷ್ಟ್ರೀಯ ಬಾಲಕಾರ್ಮಿಕ ಯೋಜನೆ (NCLP) ಎಂದು ಕರೆಯಲಾಗುತ್ತದೆ. ಕಾರ್ಖಾನೆಗಳು, ಕೈಗಾರಿಕೆಗಳು, ಹೋಟೇಲುಗಳು ಇತ್ಯಾದಿ., ಅಪಾಯಕಾರಿ ಪ್ರದೇಶಗಳಲ್ಲಿ ಬಾಲ ಕಾರ್ಮಿಕರ ಬಗ್ಗೆ ವಿಚಾರಣೆ ನಡೆಸುವುದು ಮತ್ತು 5–8 ವರ್ಷಗಳ ಮಕ್ಕಳನ್ನು ಮುಖ್ಯವಾಹಿನಿಗೆ ಸೇರಿಸುವ ಜವಾಬ್ದಾರೆ ಸ್ವಯಂ ಸೇವಕರದ್ದಾಗಿರುತ್ತದೆ. 9–13 ವರ್ಷ ವಯಸ್ಸಿನ ಮಕ್ಕಳನ್ನು ವೃತ್ತಿಪರ ತರಬೇತಿ ಕೇಂದ್ರಗಳಲಿ ಸೇರಿಸಿಕೊಳ್ಳಬೇಕು ಮತ್ತು ಅವರಿಗೆ ನೀಡಲಾದ ವಿದ್ಯಾರ್ಥಿವೇತನದೊಂದಿಗೆ ನಿಯಮಿತವಾಗಿ ಶಾಲೆಗೆ ಹಾಜರಾಗುವಂತೆ ಪ್ರೋತ್ಸಾಹಿಸಬೇಕು. 14–17 ವರ್ಷ ವಯಸ್ಸಿನ ಮಕ್ಕಳಿಗೆ ವೃತ್ತಿಪರ ತರಬೇತಿಯನ್ನು ನೀಡಬೇಕು ಮತ್ತು ಶಿಕ್ಷಣವನ್ನು ಮುಂದುವರೆಸಲು ವಿದ್ಯಾರ್ಥಿವೇತನವನ್ನು ನೀಡಬೇಕು.
- ಆ ಪ್ರದೇಶದಲ್ಲೇ ಕನಿಷ್ಠ 50 ವಿದ್ಯಾರ್ಥಿಗಳಿಗೆ ವಸತಿ ಸೌಕರ್ಯವಿದ್ದರೆ ಮಾತ್ರ ಕೇಂದ್ರವನ್ನು ತೆರೆಯಬೇಕು. ಕೇಂದ್ರದಲ್ಲಿ ವಿವಿಧ ವಯೋಮಾನದ ವಿದ್ಯಾರ್ಥಿಗಳಿರುತ್ತಾರೆ. ಆದುದರಿಂದ ವಿದ್ಯಾರ್ಥಿಗಳಿಗೆ ಸುಲಭವಾಗಿಸಲು ಬೋಧಿಸುವಾಗ ಗುಂಪಿಜನ ವ್ಯವಸ್ಥೆಯನ್ನು

ಅನ್ವಯಿಸಿಕೊಳ್ಳಬೇಕು. ವಿದ್ಯಾರ್ಥಿಗಳು ಕೆಲಸ ಮಾಡಿ ಬಂದಿರುವುದನ್ನು ಇಲ್ಲಿ ಗಮನದಲ್ಲಿಟ್ಟುಕೊಳ್ಳಬೇಕು. ಆದ್ದರಿಂದ ಅಧ್ಯಯನದ ಕಡೆಗೆ ಅವರ ಆಸಕ್ತಿಯನ್ನು ಹೆಚ್ಚಿಸಲು ವಿವಿಧ ಕಾರ್ಯಕ್ರಮಗಳನ್ನು ಸಂಘಟಿಸಬೇಕು ಮತ್ತು ವಿವಿಧ ಬೋಧನಾ ಸಾಮಗ್ರಿಗಳನ್ನು ಬಳಸಬೇಕು.

- **ಸಖರ್ ಶಾಲೆ** : ಸಖರ್ ಶಾಲೆಗಳು ಕಬ್ಬು ಕಾರ್ಮಿಕರ ಮಕ್ಕಳಿಗೆ ಪ್ರಾಥಮಿಕ ಶಿಕ್ಷಣವನ್ನು ಒದಗಿಸುವ ಉದ್ದೇಶದಿಂದ ಕಬ್ಬು ಕತ್ತರಿಸುವವರ ನೆಲೆಗಳಲ್ಲಿನ ಶಾಲೆಗಳಾಗಿವೆ. ಪೋಷಕರು ಕಾರ್ಖಾನೆಯ ಪ್ರದೇಶಗಳಿಗೆ ನಿಯಮಿತವಾಗಿ ವಲಸೆ ಹೋಗುವುದರಿಮದ ಅಥವಾ ದೀರ್ಘಾವಧಿಯವರೆಗೆ ಅವರ ಮಕ್ಕಳು ಶಿಕ್ಷಣದಿಂದ ವಂಚಿತರಾಗುತ್ತಾಋಎ. ಏಕೆಂದರೆ ವಲಸೆ ಬಂದ ಮಕ್ಕಳಿಗೆ ತಮ್ಮ ಶಿಕ್ಷಣವನ್ನು ಮುಂದುವರೆಸಲು ಯಾವುದೇ ವಿಶೇಷ ಅವಕಾಶವಿರುವುದಿಲ್ಲ. ಸಖರ್ ಶಾಲೆಯು ವಲಸೆ ಬಂದ ಕಾರ್ಮಿಕರ ವಸಾಹತುಗಳಲ್ಲಿ ಶಾಲೆಗಳನ್ನು ತೆರೆಯುವುದು ಮತ್ತು ಸಾಕಷ್ಟು ಶೈಕ್ಷಣಿಕ ಸೇವೆಗಳನ್ನು ಒದಗಿಸುವುದರ ಮೂಲಕ ಶಿಕ್ಷಣವನ್ನು ಮುಂದುವರೆಸುವಲ್ಲಿನ ಸಮಸ್ಯೆಗಳನ್ನು ಬಗೆಹರಿಸುತ್ತದೆ.
- ಇವುಗಳನ್ನು ಎರಡನೇ ಸೆಮಿಸ್ಟರ್ ಶಾಲೆಗಳು ಎಂದು ಕರೆಯಲಾಗುತ್ತದೆ. ಏಕೆಂದರೆ ಸಕರ್ ಶಾಲೆಗಳು ವರ್ಷ ಪೂರ್ತಿ ಕಾರ್ಯ ನಿರ್ವಹಿಸುವುದಿಲ್ಲ. ಇದು ಶೈಕ್ಷಣಿಕ ವರ್ಷದ 2ನೇ ಭಾಗದಲ್ಲಿ ಮಾತ್ರ ಕಾರ್ಯ ನಿರ್ವಹಿಸುತ್ತದೆ.

- **ಕೇಪ್ ಯೋಜನೆ** : ಮಹಾರಾಷ್ಟ್ರ ಸರ್ಕಾರವು ಶಾಲೆಯಿಂದ ಹೊರಗುಳಿದ 6–14 ವರ್ಷದೊಳಗಿನ ಮಕ್ಕಳಿಗೆ 1981ರಲ್ಲಿ ಯುನಿಸೆಫ್‌ನ ಸಹಾಯದೊಂದಿಗೆ ಸರ್ವರಿಗೂ ಪ್ರಾಥಮಿಕ ಶಿಕ್ಷಣ ಎಂಬ ಈ ಯೋಜನೆಯನ್ನು ಪ್ರಾರಂಭಿಸಿತು. ಶೈಕ್ಷಣಿಕ ಕಾಲೇಜುಗಳಿಗೆ ಹೊಂದಿಕೊಂಡಿರುವಂತೆ ಸ್ವ ಕಲಿಕಾ ಕೇಂದ್ರವನ್ನು ತೆರೆದು, ಇದರಲ್ಲಿ ಶಾಲೆಯಿಂದ ಹೊರಗುಳಿದ 25–30 ಮಕ್ಕಳನ್ನು ದಾಖಲಿಸಿತು ಹಾಗೂ ಈ ಮಕ್ಕಳು ತಮ್ಮ ಅನುಕೂಲಕ್ಕೆ ತಕ್ಕಂತೆ ಅರೆಕಾಲಿಕ ತರಗತಿಗಳಿಗೆ ಬರುತ್ತಾರೆ. ಅಧ್ಯಯನಕ್ಕೆ ಸಹಾಯವಾಗುವಂತೆ ಸ್ವ ಕಲಿಕಾ ನೆರವು ಇರುತ್ತದೆ.

- **ಪರಿಹಾರ ಬೋಧನಾ ತರಗತಿಗಳು :** ಎಂ. ಫುಲೆ ಹಮಿ ಯೋಜನೆ ಸೇತುಬಂಧ ಶಾಲೆಯ ಮಕ್ಕಳು ತಮ್ಮ ಗಮನ ಕೇಂದ್ರೀಕರಿಸುವ ಸಾಮರ್ಥ್ಯ ಕಡಿಮೆ ಇರುವುದರಿಂದ ಅಧ್ಯಯನದಲ್ಲಿ ವಂಚಿತರಾಗಿಯೇ ಉಳಿಯುತ್ತಾರೆ. ಆದ್ದರಿಂದ ಈ ತರಗತಿಗಳು ಕಲಿಕೆಯಲ್ಲಿ ಕನಿಷ್ಠ ಮಟ್ಟವನ್ನು ತಲುಪಲು ವಿದ್ಯಾರ್ಥಿಗಳಿಗೆ ಸಹಾಯಮಾಡುತ್ತದೆ.
- **ವಸತಿ ಶಾಲೆ :** ಇವು ಗುಡ್ಡಗಾಡು, ಬುಡಕಟ್ಟು ಮತ್ತು ದೂರದ ಪ್ರದೇಶಗಳಲ್ಲಿ ಒಂದು ಕಿಲೋ ಮೀಟರ್ ವ್ಯಾಪ್ತಿಯೊಳಗೆ ಶಾಲೆಗಳು ಇಲ್ಲವೋ, ಅಲ್ಲಲ್ಲಿ ಅನೌಪಚಾರಿಕ ಶಿಕ್ಷಣವನ್ನು ನೀಡುವ ಪ್ರಾಥಮಿಕ ಶಾಲೆಗಳಾಗಿವೆ. ಮತ್ತು 1–4ನೇ ತರಗತಿಯ ಪಠ್ಯವಸ್ತುವನ್ನು ವಿದ್ಯಾರ್ಥಿಗಳಿಗೆ ಬೋಧಿಸಲಾಗುತ್ತದೆ. ಗ್ರಾಮ ಪಂಚಾಯತಿ ಮಂಜೂರು ಮಾಡಿದ ಆವರಣದಲ್ಲಿ ವಸತಿ ಶಾಲೆಗಳನ್ನು ಪ್ರಾರಂಭಿಸಲು ಕನಿಷ್ಟ 1–4 ತರಗತಿಗಳಿಗೆ 15

ವಿದ್ಯಾರ್ಥಿಗಳು ದಾಖಲಾಗಬೇಕು. ಗ್ರಾಮ ಶಿಕ್ಷಣ ಸಮಿತಿಯು ಅರ್ಹ ಶಿಕ್ಷಕರ ವ್ಯವಸ್ಥೆ ಮಾಡುತ್ತದೆ ಮತ್ತು ಇವರು ಶಾಲೆಗೆ ಸೇರುವ ಮುನ್ನ DIETನಿಂದ 30 ದಿನಗಳ ತರಬೇತಿಯನ್ನು ನೀಡಲಾಗುತ್ತದೆ. ಸಮೀಪದಲ್ಲಿರುವ ಪ್ರಾಥಮಿಕ ಶಾಲೆಯ ಪ್ರಾಂಶುಪಾಲರು ಈ ಶಾಲೆಯ ಮೇಲ್ವಿಚಾರಣೆಯನ್ನು ಮಾಡುತ್ತಾರೆ.

## 5.3.5.6 ವಿಶೇಷ ಗಿರಿಯ ಗುಂಪಿಗಾಗಿ ಯೋಜನೆ (ಅಂಗವಿಕಲ, ದೇವದಾಸಿ ಮಕ್ಕಳು ಇತ್ಯಾದಿ )

ವಿವಿಧ ಸಾಮಾಜಿಕ ಶ್ರೇಣಿ ಮತ್ತು ಜಾತಿಗಳು, ಧರ್ಮ ಮತ್ತು ಶೈಕ್ಷಣಿಕವಾಗಿ ಹಿಂದುಳಿದ ವರ್ಗಗಳ ಮಕ್ಕಳು ಈ ವಿಶೇಷ ಗುರಿ ಗುಂಪಿನಲ್ಲಿ ಸೇರಿಸಲಾಗಿದೆ. ಈ ಮಕ್ಕಳು ತಮ್ಮ ಪ್ರಾಥಮಿಕ ಶಿಕ್ಷಣವನ್ನು ಪೂರ್ಣಗೊಳಿಸಲಾಗಲಿಲ್ಲ. ಆದ್ದರಿಂದ ಕೆಲವು ಯೋಜನೆಯಡಿಯಲ್ಲಿ ಇವರಿಗೆ ವಿಶೇಷ ಗಮನ ನೀಡಲಾಗುತ್ತಿದೆ.

- **ದೇವದಾಸಿ ಮಕ್ಕಳಿಗೆ ಯೋಜನೆಗಳು :** ದೇವದಾಸಿ ಸಂಪ್ರದಾಯವು ನಕಾರಾತ್ಮಕ ಸಾಮಾಜಿಕ ಸಂಪ್ರದಾಯವಾಗಿದೆ. ಕುರುಡು ನಂಬಿಕೆಯ ಕಾರಣದಿಂದಾಗಿ ಅನೇಕ ದೇವದಾಸಿಯರು ಇನ್ನೂ ಸಾಮಾಜಿಕವಾಗಿ ಹಾಗೂ ಆರ್ಥಿಕವಾಗಿ ಹಿಂದುಳಿದಿದ್ದಾರೆ. ಆದ್ದರಿಮದಲೇ ಅವರ ಮಕ್ಕಳಿಗೆ ಶಿಕ್ಷಣವನ್ನು ನೀಡಲು ಆಗುತ್ತಿಲ್ಲ. ಹಾಗಾಗಿ ದೇವದಾಸಿ ಮತ್ತು ವರಂಗಾಣ ಮಕ್ಕಳಿಗಾಗಿ ಅನೇಕ ಯೋಜನೆಗಳನ್ನು ಪ್ರಾರಂಭಿಸಲಾಗಿದೆ.
  - ಪೌಷ್ಠಿಕಯುತ ಆಹಾರ
  - ಹಾಜರಾತಿ ಭತ್ಯೆ
  - ಪುಸ್ತಕ ಬ್ಯಾಂಕು ಯೋಜನೆ
  - ವಸತಿ ಶಾಲೆಗಳು–ಸ್ನೇಹಾಲಯ
  - ಮಹಿಳೆಯರ ಪ್ರಬೋಧನೆಯ ಕಾರ್ಯಕ್ರಮ
  - ಉಚಿತ ಪಾಸ್ ಯೋಜನೆ

- **ಅಂಗವಿಕಲರಿಗೆ ಶಿಕ್ಷಣ :** ಇವರಿಗೆ ಸಮನ್ವಯ ಶಾಲೆಗಳ ಅವಕಾಶವಿದೆ. ಇದರಲ್ಲಿ ಅನೌಪಚಾರಿಕ ಶಿಕ್ಷಣ, ದೂರ ಶಿಕ್ಷಣ, ಸಂಚಾರಿ ಶಾಲೆಗಳು, ಪರಿಹಾರ ಶಿಕ್ಷಣ ಮತ್ತು ಅರೆಕಾಲಿಕ ಶಿಕ್ಷಣ, ವೃತ್ತಿ ಶಿಕ್ಷಣ ಇತ್ಯಾದಿ., ರೀತಿಯ ಮುಕ್ತ ಕಲಿಕಾ ವಿಧಾನಗಳನ್ನು ಒಳಗೊಂಡಿದೆ.
- **ನ್ಯೂನತೆಯುಳ್ಳ ಮಕ್ಕಳಿಗೆ ಶಿಕ್ಷಣ :** ಮಹಾರಾಷ್ಟ್ರ ಸರ್ಕಾರವು ನ್ಯೂನತೆಯುಳ್ಳ ಮಕ್ಕಳಿಗೆ ವಿಶೇಷ ಶಾಲೆಗಳನ್ನು ಪ್ರಾರಂಭಿಸಿದೆ. 1885ರಲ್ಲಿ ಮುಂಬೈನಲ್ಲಿ ಕಿವುಡ ಮತ್ತು ಮೂಕ ಶಾಲೆ ಸ್ಥಾಪಿಸಲಾಯಿತು. ಸಾಮಾನ್ಯ ಮಕ್ಕಳಿಗೆ ನೀಡುವಂತೆ ಈ ಮಕ್ಕಳಿಗೇನಾದರೂ ಅವಕಾಶವನ್ನು ನೀಡಿದರೆ, ಅವರ ಆತ್ಮವಿಶ್ವಾಸ ಹೆಚ್ಚಾಗುತ್ತದೆ. ಆದ್ದರಿಂದ ಅವರನ್ನು ಸಾಮಾನ್ಯ ಶಾಲೆಗಲ್ಲಿ ದಾಖಲಿಸಿಕೊಳ್ಳಲಾಗುತ್ತದೆ. ಇದನ್ನು ಸಮನ್ವಯ ವಿಧಾನ ಎಂದು ಕರೆಯಲಾಗಿದೆ.

**ಚಟುವಟಿಕೆ – 3**

ನೀವು ಮಹಾರಾಷ್ಟ್ರ ರಾಜ್ಯದಲ್ಲಿ ಕಾರ್ಯ ನಿರ್ವಹಿಸುತ್ತಿರುವ ಅನೇಕ ಯೋಜನೆಗಳನ್ನು ಒಂದು ಪ್ರಕರಣವಾಗಿ ಅಧ್ಯಯನ ಮಾಡಿದ ನಂತರ, ನಿಮ್ಮ ರಾಜ್ಯದಲ್ಲಿ ಕಾರ್ಯ ನಿರ್ವಹಿಸುತ್ತಿರುವ ಯೋಜನೆಗಳನ್ನು ನೋಡಿ, ಹಾಗೂ ನಿಮ್ಮ ರಾಜ್ಯವು ಮಹಾರಾಷ್ಟ್ರದೊಂದಿಗೆ ಹೋಲಿಕೆಯಾಗುತ್ತದೆಯೇ ಪರೀಕ್ಷಿಸಿ. ನೀವು ಗಮನಿಸುವ ಹೋಲಿಕೆಗಳು ಮತ್ತು ವ್ಯತ್ಯಾಸಗಳಾವುವು ?

--------------------------------------------------------------------------------------------------------

--------------------------------------------------------------------------------------------------------

## 5.4 ಜಿಲ್ಲಾ ಪ್ರಾಥಮಿಕ ಶಿಕ್ಷಣ ಯೋಜನೆ (DPEP)

ಭಾರತದಲ್ಲಿ ಶಿಕ್ಷಣಕ್ಕೆ ಸಂಬಂಧಿಸಿದಂತೆ ರಾಷ್ಟ್ರೀಯ ಕಾರ್ಯಕ್ರಮಗಳು, ರಾಜ್ಯ ಮಟ್ಟದ ಕಾರ್ಯಕ್ರಮಗಳು ಮತ್ತು ಬಾಹ್ಯವಾಗಿ ಧನ ಸಹಾಯ ಪಡೆದ ಕಾರ್ಯಕ್ರಮಗಳನ್ನು ಯೋಜಿಸುವ ಮತ್ತು ಅನುಷ್ಠಾನಗೊಳಿಸುವ ಪ್ರಕ್ರಿಯೆಯಲ್ಲಿ ದೇಶವು ಗಳಿಸಿದ ವೈವಿಧ್ಯಮಯ ಅನುಭವ ಹಾಗೂ ಪರಿಣತಿಯ ಆಧಾರದ ಮೇಲೆ ಜಿಲ್ಲಾ ಪ್ರಾಥಮಿಕ ಶಿಕ್ಷಣ ಕಾರ್ಯಕ್ರಮ **(DPEP)** ವನ್ನು ಪರಿಕಲ್ಪನೆಯಾಗಿ ಮತ್ತು ಮೂರ್ತರೂಪವಾಗಿ ನೋಡಲಾಗಿದೆ. 1994ರಲ್ಲಿ ಪ್ರಾರಂಭವಾದ ಈ ಕಾರ್ಯಕ್ರಮವು ಇಡೀ ಪ್ರಪಂಚದಲ್ಲೇ ಅತಿ ದೊಡ್ಡದಾದ ಶಿಕ್ಷಣ ಯೋಜನೆಗಳಲ್ಲಿ ಒಂದಾಗಿದೆ. ಇದು ಜಿಲ್ಲಾ ನಿರ್ದಿಷ್ಟ ಯೋಜನೆಯೊಂದಿಗೆ ವಿಕೇಂದ್ರಿಕೃತ ನಿರ್ವಹಣೆ, ಭಾಗವಹಿಸುವಿಕೆಯ ಪ್ರಕ್ರಿಯೆಗಳು, ಸಬಲೀಕರಣ ಮತ್ತು ಇಲ್ಲಾ ಹಂತಗಳಲ್ಲಿ ಸಾಮರ್ಥ್ಯಾಭಿವೃದ್ಧಿಗೆ ಹೆಚ್ಚು ಮಹತ್ವ ನೀಡುವ ಮೂಲಕ ಪ್ರಾಥಮಿಕ ಶಿಕ್ಷಣ ಸಾರ್ವತ್ರೀಕರಣದ ಗುರಿಯನ್ನು ಸಾಧಿಸುವ ಆಶಯವನ್ನು ಹೊಂದಿದೆ. ಪ್ರಾಥಮಿಕ ಶಿಕ್ಷಣವನ್ನು ಪುನರುಜ್ಜೀವನಗೊಳಿಸವು ಮತ್ತು ಉನ್ನತ ಪ್ರಾಥಮಿಕ ಶಿಕ್ಷಣದ ಉದ್ದೇಶವನ್ನು ಸಾಧಿಸುವ ಒಂದು ಮುಖ್ಯ ಹೆಜ್ಜೆಯಾಗಿದೆ ಈ ಕಾರ್ಯಕ್ರಮ.

ಜಿ.ಪ್ರಾ.ಶಿ.ಕಾ.( **DPEP**) (ಹಂತ1) ಎಂಬುದು ಕೇಂದ್ರ ಸರ್ಕಾರದ ಒಂದು

ಯೋಜನೆಯಾಗಿದೆ ಮತ್ತು ವಿಶ್ವ ಬ್ಯಾಂಕಿನ ನೆರವಿನಿಂದ 5 ರಾಜ್ಯಗಳಲ್ಲಿ ಪ್ರಾರಂಭಿಸಲಾಗಿದೆ. ತದನಂತರ ಇದನ್ನು ಇನ್ನೂ ಅನೇಕ ರಾಜ್ಯಗಳಿಗೆ ವಿಸ್ತರಿಸಲಾಯಿತು. ಪ್ರತಿ ರಾಜ್ಯವು ಈ ಯೋಜನೆಯನ್ನು ಪ್ರಾರಂಭಿಸಲು ಐದು ಜಿಲ್ಲೆಗಳನ್ನು ಆಯ್ಕೆ ಮಾಡಲು ಸೂಚಿಸಲಾಗಿದ್ದು, ಮಹಿಳಾ ಶಿಕ್ಷಣವು ರಾಷ್ಟ್ರೀಯ ಅನುಪಾತಕ್ಕಿಂತ ಕಡಿಮೆ ಇರುವ, ಹಿಂದುಳಿದ ಜಿಲ್ಲೆಗಳು ಹಾಗೂ TLC's ಗಳು ಪ್ರಾಥಮಿಕ ಶಿಕ್ಷಣದ ಬೇಡಿಕೆಯನ್ನು ಹೆಚ್ಚಿಸಲು ಯಶಸ್ವಿಯಾಗಿ ಮುನ್ನಡೆಸಿದ ಜಿಲ್ಲೆಗಳನ್ನು ಆಯ್ಕೆ ಮಾಡಲಾಯಿತು.

## 5.4.1 ಜಿ.ಪ್ರಾ.ಶಿ.ಕಾ.( DPEP) ದ ಉದ್ದೇಶಗಳು

ಜಿ.ಪ್ರಾ.ಶಿ.ಕಾ.( **DPEP**)ವು ತನ್ನ ದಾಖಲೆಯಲ್ಲಿ ನಿರ್ದಿಷ್ಟವಾದ ಉದ್ದೇಶಗಳನ್ನು ಹೊಂದಿದೆ. ಪ್ರತಿ ರಾಜ್ಯವು ಅನುಷ್ಠಾನಕ್ಕೆ ತರುತ್ತಿರುವ ಪ್ರಮುಖ ಉದ್ದೇಶಗಳ ಜೋಡಣೆಯನ್ನು ಈ ಕೆಳಗೆ ನೀಡಲಾಗಿದೆ.

- ಔಪಚಾರಿಕ ಅಥವಾ ಅನೌಪಚಾರಿಕ ಶಿಕ್ಷಣದ ಮೂಲಕ 6–14 ವರ್ಷದ ಮಕ್ಕಳಿಗೆ 100% ಅವಕಾಶ
- 100% ದಾಖಲಾತಿ ಮತ್ತು ಉಳಿಕೆ
- ಗುಣಮಟ್ಟದ ಶಿಕ್ಷಣದ ಮೂಲಕ ಮಕ್ಕಳು ಕಲಿಕೆಯ ಕನಿಷ್ಠ ಮಟ್ಟವನ್ನು ಸಾಧಿಸುವುದು
- ಸ್ಥಗಿತವನ್ನು ತಡೆಗಟ್ಟುವುದು ಮತ್ತು ಶಾಲೆಯಲ್ಲಿ ಅಪವ್ಯಯವನ್ನು ಕಡಿಮೆ ಮಾಡುವುದು
- ಶಿಕ್ಷಕರ ಮತ್ತು ಸಮಾಜದ ಸಾಮರ್ಥ್ಯಾಭಿವೃದ್ಧಿ, ಗರಿಷ್ಠ ವಿಕೇಂದ್ರೀಕರನ ಮತ್ತು ಸಮುದಾಯದ ಸಹಭಾಗಿತ್ವ
- ಸಮಾಜದ ಪ್ರತಿಯೊಂದ ಘಟಕದಿಂದ ಶಾಲೆಯಲ್ಲಿ ದಾಖಲಾತಿಯನ್ನು ಹೆಚ್ಚಿಸುವುದು

### 5.4.2 ಜಿ.ಪ್ರಾ.ಶಿ.ಕಾ.( DPEP)ಯ ಪ್ರಮುಖ ಅಂಶಗಳು

ಜಿ.ಪ್ರಾ.ಶಿ.ಕಾ.( **DPEP**)ಯಲ್ಲಿ ಪ್ರಮುಖವಾದ 4 ಅಂಶಗಳಿವೆ. ಅವುಗಳೆಂದರೆ:

- **ನಾಗರಿಕ ಕಾರ್ಯಗಳು** : ನಾಗರಿಕ ಕಾರ್ಯಗಳ ಕಾರ್ಯಕ್ರಮದಲ್ಲಿ ಹೊಸ ಶಾಲೆಗಳ ನಿರ್ಮಾಣ, ತರಗತಿ 5ರವರೆಗೆ ವಿಸ್ತರಿಸಲ್ಪಟ್ಟ ಶಾಲೆಗಳಲ್ಲಿ ಹೊಸದಾಗಿ ಹೆಚ್ಚುವರಿ ತರಗತಿಗಳ ನಿರ್ಮಾಣ, ಶೌಚಾಲಯಗಳ ನಿರ್ಮಾಣ, ಬೋರ್ ಬಾವಿಗಳು, ಶಾಲಾ ದುರಸ್ತಿ ಕಾರ್ಯಕ್ರಮ, ಗುಂಪು ವಸತಿ ಶಾಲೆ, ಶಿಕ್ಷಕರಿಗೆ ವಸತಿ ಸಮುಚ್ಚಯ ಮತ್ತು ಮಹಿಳಾ ವಸತಿ ನಿಲಯ–ಇವುಗಳನ್ನು ಪ್ರಸ್ತಾಪಿಸಲಾಗಿದೆ.
- **ಕಾರ್ಯಕ್ರಮ** : ಮಕ್ಕಳಿಗೆ ಶಾಲಾ ಸೌಲಭ್ಯಗಳನ್ನು ಒದಗಿಸುವ ಹಲವು ಪರ್ಯಾಯ ವಿಧಾನಗಳನ್ನು ಔಪಚಾರಿಕ ಶಿಕ್ಷಣ ವ್ಯವಸ್ಥೆಯಲ್ಲಿ ತರಲು ಸಾಧ್ಯವಾಗಲಿಲ್ಲವೋ ಅವುಗಳನ್ನು ಜಾರಿಗೆ ತರಲಾಯಿತು. ಜಿ.ಪ್ರಾ.ಶಿ.ಕಾ.( **DPEP**) ಚಟುವಟಿಕೆಗಳು ಕಾರ್ಯಕ್ರಮದ ಪ್ರಮುಖ ಅಂಶಗಳಾಗಿವೆ.

- **ನಿರ್ವಹಣೆ :** ಕಾರ್ಯಕ್ರಮದ ಉತ್ತಮ ಅನುಷ್ಠಾನಕ್ಕೆ ಅನುಕೂಲವಾಗುವಂತಗೆ ನಿರ್ವಹಣಾ ಮಾಹಿತಿ ವ್ಯವಸ್ಥೆ(Management Information System-MIS) ಯನ್ನು ಅಭಿವೃದ್ಧಿಪಡಿಸುವುದರ ಮೂಲಕ ಚಟುವಟಿಕೆಗಳನ್ನು ನಿಕಟವಾಗಿ ಮೇಲ್ವಿಚಾರಣೆ ಮಾಡಲು ಮತ್ತು ನಿಧಿಯ ಹರಿವಿನ ವೇಗವನ್ನು ಅನುಕೂಲಿಸಲು ಜಿ.ಪ್ರಾ.ಶಿ.ಕಾ.( **DPEP**)ವು ವಿಶಿಷ್ಟ ನಿರ್ವಹಣೆಯ ವಿನ್ಯಾಸಗಳನ್ನು ಕಲ್ಪಿಸಿದೆ. ಈ ರಚನೆಗಳನ್ನು ರಾಷ್ಟ್ರ, ರಾಜ್ಯ ಮತ್ತು ಜಿಲ್ಲೆಯ ಹಂತಗಳಲ್ಲಿ ರೂಪಿಸಲಾಗಿದೆ. ಈ ಹೊಸ ರಚನೆಗಳು ಜಿಲ್ಲೆಯ ಯೋಜನೆಗಳನ್ನುಬೆಂಬಲಿಸುತ್ತವೆ ಮತ್ತು ಯೋಜನೆಯ ಅವಧಿಯ ಅಂತ್ಯದಲ್ಲಿ ಅಸ್ತಿತ್ವದಲ್ಲಿರುವ ಸಾಂಸ್ಥಿಕ ವ್ಯವಸ್ಥೆಗಳೊಂದಿಗೆ ವಿಲೀನಗೊಳ್ಳುತ್ತವೆ.
- **ಶಾಲಾ ನಕ್ಷೆ ಮತ್ತು ಸೂಕ್ಷ್ಮ ಯೋಜನೆ :** ಪ್ರಾಥಮಿಕ ಶಿಕ್ಷಣದಲ್ಲಿ ದಾಖಲಾತಿ ಮತ್ತು ಭಾಗವಹಿಸುವಿಕೆಗೆ ಸಂಬಂಧಿಸಿದಂತೆ ಅಡೆತಡೆಗಳನ್ನು ಗುರ್ತಿಸಲು ಸಮುದಾಯವನ್ನು ಒಳಗೊಳ್ಳುವ ಗುರಿಯನ್ನು ಸೂಕ್ಷ್ಮ ಯೋಜನೆ ಹೊಂದಿದೆ. ಈ ಅಡೆತಡೆಗಳನ್ನು ಬಗೆಹರಿಸಲು ಪರಿಹಾರಗಳನ್ನು ಕಂಡುಹಿಡಿಯಲು ಇದು ಸಮುದಾಯದ ಬೆಂಬಲವನ್ನು ಸೆಳೆಯುತ್ತದೆ. VECಗಳ ಪಾತ್ರವನ್ನು ಮೂರ್ತಗೊಳಸುವುದುರ ಮೂಲಕ ಜವಾಬ್ದಾರಿಗಳನ್ನು ಸರಿಪಡಿಸಲು ಸೂಕ್ಷ್ಮ ಯೋಜನೆಯು ನೆರವಾಗುತ್ತದೆ. ಈ VECಗಳು ಗ್ರಾಮದ ಶಿಕ್ಷಣ ವ್ಯವಸ್ಥೆಯನ್ನು ಮೇಲ್ವಿಚಾರಣೆ ಮಾಡುತ್ತದೆ ಹಾಗೂ ದಾಖಲಾತಿ ಮತ್ತು ಉಳಿಕೆಯ ಪ್ರಗತಿಗೆ ಕೊಡುಗೆ ನೀಡುತ್ತವೆ.

### 5.4.3 ಜಿ.ಪ್ರಾ.ಶಿ.ಕಾ.( DPEP)ದ ಕಾರ್ಯಾಚರಣೆ ಯೋಜನೆ :

ರಾಷ್ಟ್ರೀಯ ಸಂಸ್ಥೆಗಳಿಂದ ರಾಜ್ಯ ಮತ್ತು ಜಿಲ್ಲಾ ಮಟ್ಟಗಲಿಗೆ ವೃತ್ತಿಪರ ಬೆಂಬಲವನ್ನು ನೀಡುವುದರ ಮೂಲಕ ವಿಕೇಂದ್ರೀಕೃತ ಯೋಜನೆ ಪ್ರಯತ್ನಗಳು ಬಹುತೇಕವಾಗಿ ಪ್ರಾರಂಭಿಸಲಾಗಿದೆ.ವಿವಿಧ ಕ್ರಮಗಳ ಮೂಲಕ ಜಿ.ಪ್ರಾ.ಶಿ.ಕಾ.( **DPEP**)ವಿ ವಿಕೇಂದ್ರಿಕರಣ ಕಲ್ಪನೆಯನ್ನು ಅನುವಾದಿಸಲು ಒಂದು ಗಂಭೀರ ಪ್ರಯತ್ನವನ್ನು ಮಾಡಿದೆ :

- ವಿಕೇಂದ್ರೀಕೃತ ಶೈಕ್ಷಣಿಕ ಯೋಜನೆಯನ್ನು ಆರಂಭಿಸಲು ಈ ಕಾರ್ಯಕ್ರಮವು ಒಂದು ಜಿಲ್ಲೆಯನ್ನು ಘಟಕವಾಗಿ ಗುರ್ತಿಸಿದೆ.
- ರಾಜ್ಯ ಮಟ್ಟದಿಂದ ಸ್ಥಳೀಯ ಮಟ್ಟಗಳಿಗೆ ಸಂಪನ್ಮೂಲ ನಿರ್ಧಾರಗಳ ವಿನ್ಯಾಸವನ್ನು ಬದಲಿಸಲು ಈ ಕಾರ್ಯಕ್ರಮ ಪ್ರಯತ್ನಿಸಿದೆ.
- ಯೋಜನಾ ಪ್ರಕ್ರಿಯೆಯನ್ನು ಇನ್ನಷ್ಟು ಸಮಾಲೋಚಿಸುವಂತೆ, ಭಾಗವಹಿಸುವಂತೆ ಮತ್ತು ಪಾರದರ್ಶಕವಾಗುವಂತೆ ಬಲಪಡಿಸಲು ಈ ಕಾರ್ಯಕ್ರಮ ಪ್ರಯತ್ನಿಸಿದೆ.
- ಕ್ಷೇತ್ರ ಸಂಪನ್ಮೂಲ ಕೇಂದ್ರಗಳು(BRC's) ಮತ್ತು ಸಮೂಹ ಸಂಪನ್ಮೂಲ ಕೇಂದ್ರಗಳಂತಹ (CRC's) ರೀತಿ ಹೊಸ ಸಾಂಸ್ಥಿಕ ವ್ಯವಸ್ಥೆಗಳ ಮೂಲಕ ಶೈಕ್ಷಣಿಕ ಚಟುವಟಿಕೆಗಳಿಗೆ ವೃತ್ತಿಪರ ಸಂಪನ್ಮೂಲ ಬೆಂಬಲವನ್ನು ಒದಗಿಸಲು ಪ್ರಯತ್ನಿಸಿದೆ.

- ಪ್ರತೀ ಶಾಲೆಗೆ ವಾರ್ಷಿಕವಾಗಿ ರೂ. 2,000/–ಗಳನ್ನು ಹಾಗೂ ಪ್ರತೀ ಶಿಕ್ಷಕರಿಗೆ ರೂ.500/–ಗಳನ್ನು ಸಾದಿಲ್ವಾರು ಅನುದಾನವಾಗಿ ಒದಗಿಸುವ ಮೂಲಕ ಶಾಲೆಗಳಿಗೆ ಬೆಂಬಲವನ್ನು ಒದಗಿಸಲು ಪ್ರಯತ್ನಿಸಿತು.
- ಯೋಜನಾ ಪ್ರಕ್ರಿಯೆಯು ಜಿಲ್ಲೆ ಮತ್ತು ಉಪಜಿಲ್ಲೆಯ ಹಂತಗಳಲ್ಲಿ ಸ್ಥಳೀಯ ಮಟ್ಟದ ಸಾಮರ್ಥ್ಯವನ್ನು ರಚಿಸಲು ಪ್ರಯತ್ನಿಸಿತು.

## 5.4.4. ತಂತ್ರಗಳು ಮತ್ತು ಚಟುವಟಿಕೆಗಳು

- **ಅವಕಾಶ** : ಬುಡಕಟ್ಟು ಪ್ರದೇಶದಲ್ಲಿ ಹೊಸ ಕಿರಿಯ ಪ್ರಾಥಮಿಕ ಶಾಲೆಗಳನ್ನು ದೂರದ ಬುಡಕಟ್ಟು ಪ್ರದೇಶಗಳಲ್ಲಿ ಬಹುವರ್ಗ ಕಲಿಕಾ ಕೇಂದ್ರಗಳನ್ನು ಮತ್ತು ದೂರದ ಹಾಗೂ ಹಿಂದುಳಿದ ಪ್ರದೇಶಗಳಲ್ಲಿ (ಬುಡಕಟ್ಟು ಮತ್ತು ಕರಾವಳಿ) ಪರ್ಯಾಯ ಶಾಲೆಗಳನ್ನು ತೆರೆಯುವುದು.
- **ಬುಡಕಟ್ಟು ಮತ್ತು ಕರಾವಳಿ ಶಿಕ್ಷಣ** : ಸ್ವಯಂ ಸೇವಕರು ಮತ್ತು ಪಂಚಾಯತ್‌ನ ಸಹಾಯದಿಂದ ದಾಖಲಾತಿ ಆಂದೋಲನ, ಜಾಗೃತಿ ಕಾರ್ಯಕ್ರಮ ಮತ್ತು ಬುಡಕಟ್ಟು ಮಕ್ಕಳಿಗೆ ಪಠ್ಯಪುಸ್ತಕಗಳನ್ನು ಉಚಿತವಾಗಿ ಸರಬರಾಜು ಮಾಡುವುದು.
- **ಗುಣಮಟ್ಟ ಸುಧಾರಣೆ** : ಚಟುವಟಿಕೆ ಆಧಾರಿತ ಶಿಕ್ಷಣ ಶಾಸ್ತ್ರದ ಬಗ್ಗೆ ಪುನರಾವರ್ತಿತ ಶಿಕ್ಷಕ ತರಬೇತಿ.

  BRC ತರಬೇತುದಾರರ ಭೇಟಿಗಳು ಹಾಗೂ ಶಿಕ್ಷಕರ ಮಾಸಿಕ ಕ್ಲಸ್ಟರ್ ಸಮಾಲೋಚನಾ ಸಭೆಗಳ ಮೂಲಕ ಶಿಕ್ಷಕರಿಗೆ ಆನ್‌ಸೈಟ್ ಬೆಂಬಲ, ಪರಿಶಿಷ್ಟ ಜಾತಿ, ಪರಿಶಿಷ್ಟ ಪಂಗಡ ಅಭ್ಯರ್ಥಿಗಳಿಗೆ TTC ತರಬೇತಿ, ಕೈಪಿಡಿ ಪುಸ್ತಕಗಳು, ಚಟುವಟಿಕೆ ಬ್ಯಾಂಕುಗಳು ಇತ್ಯಾದಿ., ಶಿಕ್ಷಕ ಬೆಂಬಲ ಸಾಮಗ್ರಿಗಳ ಸರಬರಾಜು, ಮಾಸಿಕ ತರಗತಿ ಪೋಷಕ ಶಿಕ್ಷಕ ಸಭೆಗಳು(PTA) ಹಾಗೂ ಸಹವಾಸ ಶಿಬಿರ.
- **ಸಮುದಾಯದ ಸನ್ನದ್ಧತೆ** : ಗ್ರಾಮೀಣ ಶಿಕ್ಷಣ ಸಮಿತಿಯ ರಚನೆ ಮತ್ತು ಪಂಚಾಯತ್ ಮೇಲ್ವಿಚಾರಣಾ ಕೋಶದ (PMC) ರಚನೆ, PMCಗಾಗಿ ತರಬೇತಿ ಮತ್ತು ಪೋಷಕರಿಗೆ ಪುನಶ್ಚೇತನಗೊಳಿಸುವುದು.
- **ಸಂಶೋಧನೆ ಮತ್ತು ಮೌಲ್ಯಮಾಪನ** : ಕ್ರಿಯಾ ಸಂಶೋಧನೆ ಕಾರ್ಯಕ್ರಮ, BRC ಮತ್ತು ಜಿಲ್ಲಾ ಮಟ್ಟದಲ್ಲಿ ಅಧ್ಯಯನವನ್ನು ನಡೆಸುವುದು.
- **ಯೋಜನೆ ಮತ್ತು ನಿರ್ವಹಣೆ** : ಶಾಲಾ ಆಧಾರಿತ ಯೋಜನೆಯ ದೃಷ್ಟಿಕೋನ, ಪಾಲ್ಗೊಳ್ಳುವಿಕೆ ಪ್ರಕ್ರಿಯೆಯ ಮೂಲಕ ವಾರ್ಷಿಕ ಯೋಜನೆಯ ತಯಾರಿಕೆ ಮತ್ತು ಬ್ಲಾಕ್ ಸಲಹಾ ಸಮಿತಿಗಳು, ಜಿಲ್ಲಾ ಸಲಹಾ ಮಂಡಳಿ ಹಾಗೂ ಜಿಲ್ಲಾ ಅನುಷ್ಠಾನ ಸಮಿತಿಯ ಸಭೆಗಳು.**ಅಂಗವಿಕಲ ಮಕ್ಕಳ ಗುರ್ತಿಸುವಿಕೆ ಮತ್ತು ಶಿಕ್ಷಣ (IEDC) :** ಅಂಗವಿಕಲ

ಮಕ್ಕಳನ್ನು ಗುರ್ತಿಸುವುದು, ನೆರವು ಮತ್ತು ಉಪಕರಣಗಳ ಸರಬರಾಜು, ಶಿಕ್ಷಕರಿಗೆ ತರಬೇತಿ, ಪೋಷಕರಿಗೆ ಪುನಶ್ಚೇತನ, ಜನರ ಪ್ರತಿನಿಧಿಗಳು.

- **ಹೆಣ್ಣು ಮಕ್ಕಳ ಶಿಕ್ಷಣ :** ಹೆಣ್ಣು ಮಕ್ಕಳಿಗೆ ಪಠ್ಯ ಪುಸ್ತಕಗಳ ಉಚಿತ ಸರಬರಾಜು, ಜಾಗೃತಿ ಕಾರ್ಯಕ್ರಮ ಮತ್ತು ಶಿಕ್ಷಕರ ಸಂವೇದನೆ ಕಾರ್ಯಕ್ರಮ
- **ದೂರ ಶಿಕ್ಷಣ :** ದೂರ ಸಂಪರ್ಕ ಗೋಷ್ಠಿ ಮತ್ತು ದೂರ ಕಲಿಕಾ ಸಾಮಗ್ರಿಗಳ ಸರಬರಾಜು
- **ಮಾಧ್ಯಮ :** ಜಿಲ್ಲೆ ಮತ್ತು ಬ್ಲಾಕ್ ಮಟ್ಟದಲ್ಲಿ ಸುದ್ದಿ ಪತ್ರಗಳನ್ನು ಪ್ರಕಟಿಸುವುದು ಮತ್ತು ಜಿಲ್ಲಾ ಹಾಗೂ ಪಂಚಾಯತ್ ಮಟ್ಟದ ಪ್ರದರ್ಶನ
- **ನಿರ್ವಹಣಾ ಮಾಹಿತಿ ವ್ಯವಸ್ಥೆ (MIS) :** ಜಿ.ಪ್ರಾ.ಶಿ.ಕಾ. ಜಿಲ್ಲೆಗಳಿಗೆ ಮತ್ತು ರಾಜ್ಯ ಯೋಜನಾ ಕಛೇರಿಗೆ ಗಣಕಯಂತ್ರಗಳ ಸರಬರಾಜು ಹಾಗೂ ಡಯಲ್ ಅಪ್ ನೆಟ್‌ವರ್ಕಿಂಗ್, ವ್ಯವಸ್ಥಾ ವಿಶ್ಲೇಷಕ ಮತ್ತು ಪ್ರೋಗ್ರಾಮರ್‌ನ ನೇಮಕಾತಿ, ಡಾಟಾ ಎಂಟ್ರಿ ಆಪರೇಟರ್‌ಗಳು, ಪ್ರತಿ ವರ್ಷ **MIS** ಶಾಲಾ ಡಾಟಾ ಬೇಸ್‌ಅನ್ನು ನವೀಕರಿಸುವುದು ಪ್ರತಿ ತಿಂಗಳಲ್ಲಿ SOE(ಖರ್ಚಿನ ವಿವರ) ದ ಡಾಟಾವನ್ನು ಅಭಿವೃದ್ಧಿಪಡಿಸುತ್ತದೆ ಹಾಗೂ ಅದನ್ನು SPO (ರಾಜ್ಯ ಯೋಜನಾ ಕಛೇರಿ)ಗೆ ಕಳುಹಿಸುತ್ತದೆ.
- **ಗ್ರಾಮ ಶಿಕ್ಷಣ ವಹಿ ಮತ್ತು ಉಳಿಕೆ ವಹಿ :** ಇದು ಗ್ರಾಮದಲ್ಲಿರುವ ಎಲ್ಲಾ ಕುಟುಂಬಗಳ ಪ್ರತಿ ಬಾಲಕ ಮತ್ತು ಬಾಲಕಿಯ ಶೈಕ್ಷಣಿಕ ಪರಿಸ್ಥಿತಿಯನ್ನು ತಿಳಿಸುತ್ತದೆ ಮತ್ತು ಉಳಿಕೆ ವಹಿಯು ಮೂಲಭೂತವಾಗಿ ಪ್ರತಿ ಶಾಲೆಯ ಅಥವಾ ತರಗತಿಯ ಉಳಿಕೆ ಮಟ್ಟವನ್ನು ಲೆಕ್ಕಾಚಾರ ಮಾಡುವುದು, ಎಷ್ಟು ಮಕ್ಕಳು ತಮ್ಮ ಶಿಕ್ಷಣವನ್ನು ಮುಂದುವರೆಸಿದ್ದಾರೆ ಹಾಗೂ ಎಷ್ಟು ಜನ ಶಾಲೆಯನ್ನು ಬಿಟ್ಟಿದ್ದಾರೆ ಎಂಬುದನ್ನು ಸೂಚಿಸುತ್ತದೆ.

## 5.4.4 ಪ್ರಾಥಮಿಕ ಶಿಕ್ಷಣದ ಸಾರ್ವತ್ರೀಕರಣದ ಮೇಲೆ ಕಾರ್ಯಕ್ರಮದ ಪ್ರಭಾವ

ಈ ಕಾರ್ಯಕ್ರಮವನ್ನು ಪ್ರಚಾರದ ರೀತಿಯಲ್ಲಿ ಜಾರಿಗೆ ತರಲಾಯಿತು. NLMA ಮಾರ್ಗಗಳಲ್ಲಿ ಒಂದು ರಾಷ್ಟ್ರೀಯ ನಿರ್ವಹಣಾ ರಚನೆಯನ್ನು ಪ್ರಾರಂಭಿಸಲಾಯಿತು. ಇದು ದೇಶದಾದ್ಯಂತ ಕಾರ್ಯಕ್ರಮವನ್ನು ಕಾರ್ಯಗತಗೊಳಿಸುವುದನ್ನು ಮೇಲ್ವಿಚಾರಣೆ ಮಾಡುತ್ತದೆ ಮತ್ತು DPEP ಜಿಲ್ಲೆಗಳಲ್ಲಿ ಅವಕಾಶ ಮತ್ತು ಉಳಿಕೆಯನ್ನು ಮೌಲ್ಯಮಾಪನ ಮಾಡಲು ಸನ್ನಿವೇಶ ವಿಶ್ಲೇಷಣೆ ನಡೆಸಲಾಯಿತು ಹಾಗೂ ಆಯ್ಕೆ ಮಾಡಲಾದ ರಾಜ್ಯಗಳಲ್ಲಿ DPEP ಗಳ ಕಾರ್ಯಕ್ಷಮತೆಯನ್ನು ಹೋಲಿಸುವುದು. ಈ ವಿಶ್ಲೇಷಣೆಯು ರಾಜ್ಯ ಶಿಕ್ಷಣ ನಿರ್ದೇಶನಾಲಯದಿಮದ ಪಡೆದ ದ್ವಿತೀಯ ಮೂಲಗಳಿಂದ ಹಾಗೂ DPEP ಅಡಿಯಲ್ಲಿ ಸ್ಥಾಪಿಸಲ್ಪಟ್ಟ EMIS ಗಳಿಂದ ಪಡೆದ ದತ್ತಾಂಶಗಳನ್ನು ಆಧರಿಸಿದೆ.

ಈ ಕೆಳಗಿನವುಗಳು ಮೌಲ್ಯಮಾಪನದಿಂದ ಹೊರಬಂದ ಅಂಶಗಳು / ಅವಲೋಕನಗಳು

**ವ್ಯಾಪ್ತಿ :**

- ಒಳಗೊಂಡ ಜಿಲ್ಲೆಗಳು – 219 (ವಿಂಗಡಿಸಲಾದ ಜಿಲ್ಲೆಗಳೊಂದಿಗೆ 248)

- ➢ ಹಂತ 1 (1994–ಸೆಪ್ಟಂಬರ್ 2001) 42
- ➢ ಹಂತ 2 (1996–ಡಿಸೆಂಬರ್ 2002) 80
- ➢ ಹಂತ 3 (1998–ಮಾರ್ಚ್ 2003) 27
- ➢ ಇತರೆ ಹಂತಗಳು 70

ಒಟ್ಟು ಒಳಗೊಂಡ ರಾಜ್ಯಗಳು 18

- **ಶಾಲೆಗಳು**
  - ➢ ವ್ಯವಸ್ಥೆಯಲ್ಲಿನ ಶಾಲೆಗಳು – 3,75,000
  - ➢ ಹೊಸದಾಗಿ ಸೇರ್ಪಡೆಯಾದ ಶಾಲೆಗಳು – 10,000
- **ವಿದ್ಯಾರ್ಥಿಗಳು ಮತ್ತು ಮಕ್ಕಳು**
  - ➢ ವ್ಯವಸ್ಥೆಯಲ್ಲಿನ ವಿದ್ಯಾರ್ಥಿಗಳು – 513 ಲಕ್ಷ
  - ➢ ಒಟ್ಟು ಶಿಕ್ಷಕರು – 11 ಲಕ್ಷ
- **ECE**
  - ➢ ಆರಂಭಿಕ ಬಾಲ್ಯ ಶಿಕ್ಷಣ ಕೇಂದ್ರಗಳ ಸ್ಥಾಪನೆ – 56,124
  - ➢ ಒಳಗೊಂಡ ಮಕ್ಕಳು – 21 ಲಕ್ಷ
- **ಪರ್ಯಾಯ ಶಾಲೆಗಳು (Alternative Schools-AS)**
  - ➢ ಸ್ಥಾಪಿಸಿದ AS ಕೇಂದ್ರಗಳು – 56,124
  - ➢ ಒಳಗೊಂಡ ಮಕ್ಕಳು – 21 ಲಕ್ಷ
- ದಾಖಲಾತಿ

GER (ಶಿಕ್ಷಣ ಖಾತರಿ ಶಾಲೆ EGS ಮತ್ತು ಪರ್ಯಾಯ ಶಾಲೆ ASಯ ದಾಖಲಾತಿಯನ್ನು ಸೇರಿಕೊಂಡು ) 102%

NER (ಶಿಕ್ಷಣ ಖಾತರಿ ಶಾಲೆ EGS ಮತ್ತು ಪರ್ಯಾಯ ಶಾಲೆ ASಯ ದಾಖಲಾತಿಯನ್ನು ಸೇರಿಕೊಂಡು ) 90%

ಸೂಚನೆ : GER ಮತ್ತು NERಗಳನ್ನು ಲೆಕ್ಕಾಚಾರ ಮಾಡಲು ಸೂತ್ರವನ್ನು ಈ ಘಟಕದ ಕೊನೆಯಲ್ಲಿ ನೀಡಲಾಗಿದೆ.

(ಮೂಲ : DPEP ಆಧಾರದ ಹಾಳೆ, DPEPಕರೆ, ಸಂಪುಟ 6, ಸಂಖ್ಯೆ 11)

## 5.5 ಸಾರಾಂಶಿಸೋಣ

ಭಾರತದ ಶಿಕ್ಷಣ ವ್ಯವಸ್ಥೆಯು ಅಗಾಧವಾಗಿ ದೊಡ್ಡದಾಗಿದೆ. 121 ಮಿಲಿಯನ್ ಜನಸಂಖ್ಯೆಯೊಂದಿಗೆ ನಮ್ಮ ದೇಶವನ್ನು ಪ್ರಪಂಚದ ಅತ್ಯಂತ ದೊಡ್ಡ ದೇಶವಾಗಿ ಇದರ 300 ಮಿಲಿಯನ್ ವಿದ್ಯಾರ್ಥಿಗಳು ಮತ್ತು 6.5 ಮಿಲಿಯನ್ ಶಿಕ್ಷಕರು ಮಾಡಬಹುದಾದ

ದಾಖಲಾತಿಯು 100% ಅನ್ನು ಮುಟ್ಟುತ್ತಿದೆ. 120 ಮಿಲಿಯನ್ ಮಕ್ಕಳು ಶಾಲೆಗಳಲ್ಲಿ ಮಧ್ಯಾಹ್ನದ ಬಿಸಿಯೂಟವನ್ನು ಪಡೆಯುತ್ತಿದ್ದಾರೆ. ಸಾಕ್ಷರತಾ ಮಟ್ಟವು 65% ರಿಂದ 75%ರಷ್ಟು ಹೆಚ್ಚುತ್ತಿದೆ. ಶಿಕ್ಷಣವನ್ನು ಉತ್ತಮ ಜೀವನದ ಬಾಗಿಲಾಗಿ ಕಾಣುತ್ತಿರುವುದು ಹೆಚ್ಚಾಗುತ್ತಿದೆ.

ಪ್ರಾಥಮಿಕ ಶಿಕ್ಷಣದ ಸಾರ್ವತ್ರೀಕರಣದ ಗುರಿಯನ್ನು ಸಾಧಿಸಲು ವಿವಿಧ ಯೋಜನೆಗಳ ಮೂಲಕ ವಿಭಿನ್ನ ತಂತ್ರಗಳ ಬಳಕೆಗೆ ಒತ್ತು ನೀಡಲಾಗಿದೆ. ಉದಾಹರಣೆಗೆ ಉತ್ತರ ಪ್ರದೇಶ ಮೂಲ ಶಿಕ್ಷಣ ಯೋಜನೆ, ಪ್ರಾಥಮಿಕ ಶಿಕ್ಷಣದ ಗುಣಮಟ್ಟವನ್ನು ಸುಧಾರಿಸಲು ಬಿಹಾರ ಶಿಕ್ಷಣ ಯೋಜನೆ, ಹೆಣ್ಣು ಮಕ್ಕಳ ಶಿಕ್ಷಣಕ್ಕಾಗಿ ಲೋಕ್ ಜಂಬಿಷ್ ಮತ್ತು ಶಿಕ್ಷಕರ ಗೈರು ಹಾಜರಿಗಾಗಿ ಶಿಕ್ಷಾ ಕರ್ಮಿ.

90ರ ದಶಕದ ಮಧ್ಯ ಭಾಗದಲ್ಲಿ ಮಹಿಳಾ ಸಾಕ್ಷರತಾ ಪ್ರಮಾಣ ಕಡಿಮೆ ಇರುವ ಜಿಲ್ಲೆಗಳಲ್ಲಿ ಡಿ.ಪಿ.ಇ.ಪಿ. ಕಾರ್ಯಕ್ರಮಗಳನ್ನು ಪರಿಚಯಿಸಲಾಯಿತು. ಇದು ಪ್ರಾಥಮಿಕ ಶಿಕ್ಷಣಕ್ಕಾಗಿ ವಿಕೇಂದ್ರೀಕೃತ ಯೋಜನೆ ಮತ್ತು ಸಮುದಾಯದ ಒಳಗೊಳ್ಳುವಿಕೆಯೊಂದಿಗೆ ಶಾಲೆಯಿಂದ ಹೊರಗುಳಿದ ಮಕ್ಕಳನ್ನು ಶಾಲೆಯೊಳಗೆ ತರಲು ಹೊಸ ಉಪಕ್ರಮವನ್ನು ಪ್ರವರ್ತಿಸಿದೆ. ವಿವಿಧ ಚಟುವಟಿಕೆಗಳ ಪರಿಣಾಮಕಾರಿ ಅನುಷ್ಠಾನವನ್ನು ತೋರಿಸುವ ಗ್ರಾಮ ಮಟ್ಟದಲ್ಲಿ ಜನರ ಭಾಗವಹಿಸುವಿಕೆಯ ಉತ್ಸಾಹವು ಗಣನೀಯವಾಗಿ ಹೆಚ್ಚಿಸಿದೆ. ಗ್ರಾಮ ಶಿಕ್ಷಣ ಸಮಿತಿಗಳು ವಿವಿಧ ಜಿಲ್ಲೆಗಳಲ್ಲಿ ಸುಮಾರು ನೂರು ಪ್ರತಿಶತ ಹಳ್ಳಿಗಳನ್ನು ಒಳಗೊಂಡಿದೆ. ಈ ಧನಾತ್ಮಕ ಬದಲಾವಣೆಗಳಿಂದಾಗಿ ಭಾರತವು ಶೀಘ್ರದಲ್ಲೇ ಪ್ರಾಥಮಿಕ ಶಿಕ್ಷಣ ಸಾರ್ವತ್ರೀಕರಣದ ಗುರಿ ಸಾಧಿಸಲು ಆಶಿಸುತ್ತದೆ.

## 5.6 ಶಬ್ದ ಸಂಗ್ರಹ / ಸಂಕ್ಷೇಪಣಗಳು

- ಶಿಕ್ಷಣದ ಸಾರ್ವತ್ರೀಕರಣ ಎಂದರೆ ಮಕ್ಕಳ ಮತ್ತು ಸ್ಥಳದ ನಿರ್ದಿಷ್ಟ ಅಗತ್ಯತೆಗಳ ಪ್ರಕಾರ ಎಲ್ಲೆಡೆ ಶಿಕ್ಷಣದ ಲಭ್ಯತೆ ಇರುವುದು.
- ಸಾರ್ವತ್ರೀಕರಣದ ಮೂರು ಅಂಶಗಳು : ಅವಕಾಶದ ಸಾರ್ವತ್ರೀಕರಣ ಮತ್ತು ದಾಖಲಾತಿ, ಹಾಜರಾತಿ ಮತ್ತು ಉಳಿಕೆ, ಗುಣಾತ್ಮಕ ಶಿಕ್ಷಣ.
- ಒಟ್ಟು ದಾಖಲಾತಿ ಅನುಪಾತವು ಸಂಬಂಧಿತ ಸೂಚಕವಾಗಿದೆ. ಪ್ರಾಥಮಿಕ GER ಪ್ರಾಥಮಿಕ ಶಾಲಾ ವಯಸ್ಸಿನ ಜನಸಂಖ್ಯೆಗೆ ಅನುಗುಣವಾಗಿ ಪ್ರಾಥಮಿಕ ಶಾಲೆಯಲ್ಲಿ ಒಟ್ಟು ಎಷ್ಟು ಮಕ್ಕಳು ಇದ್ದಾರೆ ಎಂಬುದನ್ನು ಸೂಚಿಸುತ್ತದೆ.

$$\text{ಪ್ರಾಥಮಿಕ GER} = \frac{\text{ಪ್ರಾಥಮಿಕ ಶಾಲೆಯಲ್ಲಿ ದಾಖಲಾದ ಮಕ್ಕಳ ಸಂಖ್ಯೆ}}{\text{ಪ್ರಾಥಮಿಕ ಶಾಲಾ ವಯಸ್ಸಿನ ಮಕ್ಕಳ ಸಂಖ್ಯೆ}}$$

- GERನ ಮೌಲ್ಯವು 100 ಪ್ರತಿಶತವನ್ನು ಮೀರಬಹುದು. 100 ಪ್ರತಿಶತಕ್ಕಿಂತ ಹೆಚ್ಚಿನ ಮೌಲ್ಯವು ಪ್ರಾಥಮಿಕ ಶಾಲಾ ವಯಸ್ಸಿಗಿಂತ ಹೆಚ್ಚಿನ ಅಥವಾ ಕಡಿಮೆ ವಯಸ್ಸಿನ ಕೆಲವು

ಮಕ್ಕಳು ಪ್ರಾಥಮಿಕ ಶಾಲೆಯಲ್ಲಿದ್ದಾರೆ ಎಂದರ್ಥ. 100 ಪ್ರತಿಶತಕ್ಕಿಂತಲೂ ಹೆಚ್ಚು GER ಇದ್ದರೆ, ಅದು ವಯಸ್ಸು ಮೀರಿದ ದಾಖಲಾತಿಯನ್ನು ಸೂಚಿಸುತ್ತದೆ. ಉದಾಹರಣೆಗೆ ಉಳಿಕೆ ಅಥವಾ ತಡವಾಗಿ ದಾಖಲಾಗುವುದು.

$$\text{ಪ್ರಾಥಮಿಕ NER} = \frac{\text{ಪ್ರಾಥಮಿಕ ಶಾಲೆಗೆ ದಾಖಲಾಗುವ ಪ್ರಾಥಮಿಕ ಶಾಲಾ ವಯಸ್ಸಿನ ಮಕ್ಕಳ ಸಂಖ್ಯೆ}}{\text{ಪ್ರಾಥಮಿಕ ಶಾಲಾ ವಯಸ್ಸಿನ ಮಕ್ಕಳ ಸಂಖ್ಯೆ}}$$

NERನ ಮೌಲ್ಯವು 100% ಕ್ಕಿಂತ ಹೆಚ್ಚಾಗಬಾರದು. ಪ್ರಾಥಮಿಕ ಶಾಲೆಗೆ ಪ್ರಾಥಮಿಕ ಶಾಲಾ ವಯಸ್ಸಿನ ಎಲ್ಲಾ ಮಕ್ಕಳು ದಾಖಲಾದರೆ, ಪ್ರಾಥಮಿಕ NER 100% ಆಗುತ್ತದೆ. ಪ್ರಾಥಮಿಕ NER 100% ಕ್ಕಿಂತ ಕಡಿಮೆ ಇದ್ದರೆ, ಇದರರ್ಥ ಪ್ರಾಥಮಿಕ ಶಾಲಾ ವಯಸ್ಸಿನ ಎಲ್ಲಾ ಮಕ್ಕಳು ಪ್ರಾಥಮಿಕ ಶಾಲೆಯಲ್ಲಿ ಇಲ್ಲ ಎಂಬುದಾಗಿದೆ. ಕೆಲವುರು ಶಾಲೆಯಿಂದ ಹೊರಗುಳಿದಿರಬಹುದು, ಕೆಲವರು ಪೂರ್ವ ಪ್ರಾಥಮಿಕ ಶಾಲೆಯಲ್ಲಿರಬಹುದು, ಇನ್ನೂ ಕೆಲವರು ಮಾಧ್ಯಮಿಕ ಶಾಲೆ ಅಥವಾ ಇತರೆ ವಿಧಾನದ ಶಿಕ್ಷಣದಲ್ಲಿರಬಹುದು.

- ಉತ್ತರ ಪ್ರದೇಶದ ಮೂಲ ಶಿಕ್ಷಣದ ಅವಕಾಶದ ಸುಧಾರಣೆಗೆ ಮೂಲ ಶಿಕ್ಷಣ ಯೋಜನೆ ಇದೆ.
- ಬಿಹಾರ ಶಿಕ್ಷಣ ಯೋಜನೆಯು (BEP) ಪ್ರಾಥಮಿಕ ಶಿಕ್ಷಣ ಸಾರ್ವತ್ರೀಕರಣದ ಗುರಿಯನ್ನು ಹೊಂದಿದ್ದು, ರಾಜ್ಯದಲ್ಲಿ ಗುಣಾತ್ಮಕ ಶಿಕ್ಷಣದ ಸುಧಾತಣೆಗೆ ಹೆಚ್ಚು ಮಹತ್ವ ನೀಡುತ್ತದೆ.
- ಲೋಕ್ ಜಂಬಿಷ್ ಒಂದು ನವೀನ ಯೋಜನೆಯಾಗಿದ್ದು, ಇದನ್ನು ಹೆಣ್ಣು ಮಕ್ಕಳ ಶಿಕ್ಷಣದ ಬಗ್ಗೆ ಮುಖ್ಯವಾಗಿ ಒತ್ತು ನೀಡುವ ಸರ್ವರಿಗೂ ಶಿಕ್ಷಣಕ್ಕಾಗಿ ಜನರ ಚಳುವಳಿ ಎಂದು ಕರೆಯಲಾಗುತ್ತದೆ.
- ಶಿಕ್ಷಾ ಕರ್ಮಿ ಯೋಜನೆಯು ಸಾರ್ವತ್ರೀಕರಣದ ಉದ್ದೇಶವನ್ನು ಸಾಧಿಸುವಲ್ಲಿ ಪ್ರಮುಖ ಅಡಚಣೆಯಾಗಿದ್ದ ಶಿಕ್ಷಕರ ಗೈರು ಹಾಜರಿಯನ್ನು ಬಗೆಹರಿಸಲು ಜಾರಿಗೆ ತಂದ ಒಂದು ಶೈಕ್ಷಣಿಕ ಕಾರ್ಯಕ್ರಮವಾಗಿದೆ.
- ಮಹಾರಾಷ್ಟ್ರ ಸರ್ಕಾರವು ಮಾತೃ ಪ್ರಬೋಧನ್, ಸಾವಿತ್ರಿ ಬಾಯಿ ಫುಲೆ ಪೋಷಕ ದತ್ತು ಯೋಜನೆ, ಸಖರ್ ಶಾಲೆ, ಕುರಾನ್ ಶಾಲಾ, ವಿದ್ಯಾನಿಕೇತನ್, ಬುಡಕಟ್ಟು ಭಾಷೆಗಳಿಗಾಗಿ ಯೋಜನೆಗಳು ಇತ್ಯಾದಿ., ವಿಭಿನ್ನ ಯೋಜನೆಗಳನ್ನು ಕಂಡುಹಿಡಿದಿದೆ.
- ಜಿ.ಪ್ರಾ.ಶಿ.ಕಾ. (DPEP) ವು ಇಡೀ ವಿಶ್ವದಲ್ಲೇ ಒಂದು ಅತಿ ದೊಡ್ಡ ಶಿಕ್ಷಣ ಯೋಜನೆಗಳಲ್ಲೊಂದಾಗಿದೆ. 1994ರಲ್ಲಿ ಜಾರಿಗೆ ಬಂದ ಈ ಯೋಜನೆಯು ಜಿಲ್ಲಾ ಮಟ್ಟದ ನಿರ್ದಿಷ್ಟ ಯೋಜನೆಯೊಂದಿಗೆ ವಿಕೇಂದ್ರೀಕೃತ ನಿರ್ವಹಣೆ, ಸಹಭಾಗಿತ್ವದ ಪ್ರಕ್ರಿಯೆಗಳು, ಸಬಲೀಕರಣ ಮತ್ತು ಎಲ್ಲಾ ಹಂತಗಳಲ್ಲಿ ಸಾಮರ್ಥ್ಯಾಭಿವೃದ್ಧಿಗೆ ಮಹತ್ವ

ನೀಡುವ ಮೂಲಕ ಪ್ರಾಥಮಿಕ ಶಿಕ್ಷಣದ ಸಾರ್ವತ್ರೀಕರಣವನ್ನು ಸಾಧಿಸುವ ಗುರಿಯನ್ನು ಹೊಂದಿದೆ.

**ಸಂಕ್ಷೇಪಣಗಳು**

| | | |
|---|---|---|
| DPEP | : | District Primary Education Programme<br>ಜಿಲ್ಲಾ ಪ್ರಾಥಮಿಕ ಶಿಕ್ಷಣ ಕಾರ್ಯಕ್ರಮ |
| UP-BEP | : | Uttar Pradesh Basic Education Project<br>ಉತ್ತರ ಪ್ರದೇಶ ಮೂಲ ಶಿಕ್ಷಣ ಯೋಜನೆ |
| Primary GER | : | Gross Enrollment Ratio<br>ಒಟ್ಟು ದಾಖಲಾತಿ ಅನುಪಾತ |
| UEE | : | Universalisation of Elementary Education<br>ಪ್ರಾಥಮಿಕ ಶಿಕ್ಷಣದ ಸಾರ್ವತ್ರೀಕರಣ |
| NER | : | Net Enrollment Ratio<br>ನಿವ್ವಳ ದಾಖಲಾತಿ ಅನುಪಾತ |
| BEP | : | Bihar Education Project<br>ಬಿಹಾರ ಶಿಕ್ಷಣ ಯೋಜನೆ |

## 5.7 ಸೂಚಿತ ವಾಚನ ಮತ್ತು ಉಲ್ಲೇಖಗಳು

1. ಲೋಕ್ ಜಂಬಿಷ್ : 6ನೇ ವರದಿಯ ವಿಮರ್ಶೆhttp://booksVolume 1/1970-Volume 41/2011

## 5.8 ಘಟಕಾಂತ್ಯ ಅಭ್ಯಾಸಗಳು

**1. ಸರಿಯಾದ ಪರ್ಯಾಯವನ್ನು ಆಯ್ಕೆ ಮಾಡುವುದರ ಮೂಲಕ ಬಿಟ್ಟ ಸ್ಥಳ ಪೂರ್ತಿಗೊಳಿಸಿ.**

a) ಸರ್ವ ಶಿಕ್ಷಾ ಅಭಿಯಾನದ ಮೂಲಕ ______(10ನೇ/7ನೇ) ಪಂಚ ವಾರ್ಷಿಕ ಯೋಜನೆಯಲ್ಲಿ ಪ್ರಾಥಮಿಕ ಶಿಕ್ಷಣವು ಹೆಚ್ಚು ಒತ್ತನ್ನು ಪಡೆಯಿತು.

b) 2009–10ನೇ ಸಾಲಿನಲ್ಲಿ ಅತ್ಯಧಿಕ ಶಾಲೆಗಳು ______(ಮಧ್ಯಪ್ರದೇಶ/ಉತ್ತರಪ್ರದೇಶ) ರಾಜ್ಯದಲ್ಲಿದೆ.

c) 'ಸರ್ವರಿಗೂ ಶಿಕ್ಷಣಕ್ಕಾಗಿ ಜನರ ಚಳುವಳಿ' ಎಂದರೆ ______ .(ಲೋಕ್ ಜಂಬಿಷ್/ಮಹಿಳಾ ಸಮಾಖ್ಯ)

d) ______(ಮಧ್ಯಪ್ರದೇಶ/ಅಸ್ಸಾಂ) ರಾಜ್ಯದ ವಿಷಯದಲ್ಲಿ ಮುನರಾವರ್ತಿಸುವವರ ಸಂಖ್ಯೆ 50% ಇಳಿಮುಖವಾಗಿದೆ.

e) ಶಿಕ್ಷಾ ಕರ್ಮಿ ಯೋಜನೆಯನ್ನು ರಾಜಸ್ಥಾನ ಸರ್ಕಾರ _____(SIDA /ವಿಶ್ವಬ್ಯಾಂಕ್)ನ ನೆರವಿನಿಂದ 1987ರಲ್ಲಿ ಪ್ರಾರಂಭಿಸಿತು.

f) ಸಮಾಜದ ವಂಚಿತ ವರ್ಗಗಳ ಶಿಕ್ಷಣಕ್ಕೆ ______ (UP-BEP/BEP) ವಿಶೇಷ ಮಹತ್ವ ನೀಡಿದೆ.

**ಉತ್ತರಗಳು**

a) 10ನೇ b) ಉತ್ತರಪ್ರದೇಶ c) ಲೋಕ್ ಜಂಬಿಷ್ d)ಅಸ್ಸಾಂ e)SIDA f) BEP

**2. ಈ ಕೆಳಗಿನ ಸಂದರ್ಭಗಳಲ್ಲಿ ಜಾರಿಗೆ ತಂದ ಸೂಕ್ತ ಯೋಜನೆಗಳನ್ನು ಬರೆಯಿರಿ.**

**ಹೇಳಿಕೆಗಳು**

**ಯೋಜನೆಗಳು** :

a) ಎಲ್ಲಾ DPEP ಜಿಲ್ಲೆಗಳು ಹಾಗೂ ರಾಜ್ಯ ಯೋಜನಾ ಕಛೇರಿಗೆ ಕಂಪ್ಯೂಟರ್‌ಗಳು ಹಾಗೂ ಡಯಲ್ ಅಪ್ ನೆಟ್‌ವರ್ಕಿಂಗ್ ಅನ್ನು ಸರಬರಾಜು ಮಾಡುವುದು.

b) ಬಾಲ ಕಾರ್ಮಿಕ ಸಂಪ್ರದಾಯವನ್ನು ನಿರ್ಮೂಲನೆ ಮಾಡುವುದು ಮತ್ತು ಅವರನ್ನು ಶಿಕ್ಷಣದ ಮುಖ್ಯವಾಹಿನಿಗೆ ಕರೆತರುವ ಗುರಿಯನ್ನು ಹೊಂದಿದ ಯೋಜನೆ.

c) ಶಿಕ್ಷಾ ಕರ್ಮಿ ಇಂದ ನಡೆಸಲ್ಪಡುವ ಅಸ್ತಿತ್ವದಲ್ಲಿರುವ ಪ್ರಾಥಮಿಕ ಶಾಲೆಗಳು

d) ಗ್ರಾಮೀಣ ಗ್ರಂಥಾಲಯಗಳ ಪರಿಕಲ್ಪನೆಯನ್ನು ವಿಸ್ತರಿಸುವುದು.

e) ಬಾರನ್‌ನ ಕಿಷನ್‌ಗಂಜ್ ಬ್ಲಾಕ್‌ನ ಖಂಡೇಲ ಕ್ಲಸ್ಟರ್‌ನ ಬುಡಕಟ್ಟು ಮಕ್ಕಳಿಗಾಗಿ ಜಾರಿಗೆ ತಂದ ಯೋಜನೆ.

**ಉತ್ತರಗಳು**

a) ನಿರ್ವಹಣಾ ಮಾಹಿತಿ ವ್ಯವಸ್ಥೆ (MIS)

b) ಸಿಂಧು ಬಾಲ ಕಾರ್ಮಿಕ ಯೋಜನೆ

c) ದಿನ ಕೇಂದ್ರ

d) ಭಿತ್ತಿ ಪತ್ರ ಕಾರ್ಯಾಗಾರ

e) ಮುಕ್ತಾಂಗನ್

**3. ಹೊಂದಿಸಿ ಬರೆಯಿರಿ :**

| ಗುಂಪು A | ಗುಂಪು B |
|---|---|
| I. ಬಿಹಾರದ ಶಿಕ್ಷಣ ಯೋಜನೆ | a) ಹೆಣ್ಣು ಮಕ್ಕಳ ಶಿಕ್ಷಣ |
| II. ಲೋಕ್ ಜಂಬಿಷ್ | b) ಶಿಕ್ಷಕರ ಗೈರು ಹಾಜರಿ |
| III. ಶಿಕ್ಷಾ ಕರ್ಮಿ | c) ಸಮನ್ವಯ ಶಿಕ್ಷಣ |
| | d)ಪ್ರಾಥಮಿಕ ಶಿಕ್ಷಣದ ಗುಣಮಟ್ಟವನ್ನು ಸುಧಾರಿಸುವುದು. |

**ಉತ್ತರಗಳು**

| | |
|---|---|
| I. ಬಿಹಾರದ ಶಿಕ್ಷಣ ಯೋಜನೆ | d)ಪ್ರಾಥಮಿಕ ಶಿಕ್ಷಣದ ಗುಣಮಟ್ಟವನ್ನು ಸುಧಾರಿಸುವುದು. |
| II. ಲೋಕ್ ಜಂಬಿಷ್ | a) ಹೆಣ್ಣು ಮಕ್ಕಳ ಶಿಕ್ಷಣ |
| III. ಶಿಕ್ಷಾ ಕರ್ಮಿ | b) ಶಿಕ್ಷಕರ ಗೈರು ಹಾಜರಿ |

**4. ಬಿಟ್ಟ ಸ್ಥಳ ಪೂರ್ತಿಗೊಳಿಸಿ :**

a) ಶಿಕ್ಷಣದ ಸಾರ್ವತ್ರೀಕರಣ ಎಂದರೆ ಸ್ಥಳ ಮತ್ತು ಮಕ್ಕಳ ನಿರ್ದಿಷ್ಟ ಅಗತ್ಯತೆಗಳಿಗನುಗುಣವಾಗಿ ಶಿಕ್ಷಣದ _____ ಅನ್ನು ಎಲ್ಲೆಡೆ ಲಭ್ಯವಿರುವಂತೆ ಮಾಡುವುದಾಗಿದೆ..

b) ಭಾರತ ಸರ್ಕಾರವು ಪ್ರಾಥಮಿಕ ಮಟ್ಟದಲ್ಲಿ ________ ನಷ್ಟು ನಡೆದು ಹೋಗುವಷ್ಟು ದೂರದ ಒಳಗೆ ಸುಲಭವಾಗಿ ಶಾಲೆಯ ಅವಕಾಶವನ್ನು ಪಡೆಯುವಂತೆ ಮಾಡಿದೆ..

c) __________ ನ ಮೌಲ್ಯ 100% ಕ್ಕಿಂತ ಹೆಚ್ಚಿದ್ದರೆ ಅದರರ್ಥ ಪ್ರಾಥಮಿಕ ಶಾಲಾ ವಯಸ್ಸಿಗಿಮತ ಕಡಿಮೆ ಅಥವಾ ಹೆಚ್ಚಿನ ವಯಸ್ಸಿನ ಮಕ್ಕಳು ಪ್ರಾಥಮಿಕ ಶಾಲೆಯಲ್ಲಿದ್ದಾರೆ.

d) ಭಾರತದಲ್ಲಿ ಜಿ.ಪ್ರಾ.ಶಿ.ಯೋ.(DPEP)ಯನ್ನು ______ ರೀತ್ಯಾ ಜಾರಿಗೆ ತರಲಾಯಿತು.

e) ಮಹಾರಾಷ್ಟ್ರದಲ್ಲಿ ಹೆಣ್ಣು ಮಕ್ಕಳನ್ನು ಉತ್ತೇಜಿಸಲು ನಾಸಿಕ್‌ನ _____ನಲ್ಲಿ ಸೈನಿಕ ಶಾಲೆಯನ್ನು ಸರ್ಕಾರ ಪ್ರಾರಂಭಿಸಿತು.

f) ಸಾಮಾಜಿಕ ಸಮಾನತೆ ಸೂಚ್ಯಂಕವು(ISE) ಭಾರತದ ಎಲ್ಲಾ ಜಿಲ್ಲೆಗಳಿಗಿಂತ ______ರಷ್ಟು ಪರಿಶಿಷ್ಟ ಜಾತಿ ಜನಸಂಖ್ಯೆಯ ಹೆಚ್ಚಳವನ್ನು ಸೂಚಿಸುತ್ತದೆ.

**5. ಒಂದು ವಾಕ್ಯದಲ್ಲಿ ಉತ್ತರಿಸಿ :**

a) 2ನೇ ಸೆಮಿಸ್ಟರ್ ಶಾಲೆಗಳಿಂದು ಯಾವ ಶಾಲೆಗಳನ್ನು ಕರೆಯಲಾಗಿದೆ ?

b) ಬಾಲಕಾರ್ಮಿಕ ಯೋಜನೆಯನ್ನು ರಾಷ್ಟ್ರೀಯ ಬಾಲಕಾರ್ಮಿಕ ಯೋಜನೆ ಎಂದು ಕರೆಯಲಾಗುತ್ತದೆ. ಏಕೆ ?

c) ಪ್ರಾಥಮಿಕ ಶಿಕ್ಷಣ ಸಾರ್ವತ್ರೀಕರಣವನ್ನು ವ್ಯಾಖ್ಯಾನಿಸಿ.

d) ಮಹಾರಾಷ್ಟ್ರದಲ್ಲಿ ಕುರಾನ್ ಶಾಲಾಗಳನ್ನು ಜಾರಿಗೆ ತಂದವರು ಯಾರು ?

e) ಶಿಕ್ಷಾ ಕರ್ಮಿ ಎಂದರೇನು ?

f) ಜಿ.ಪ್ರಾ.ಶಿ.ಯೋ.(DPEP)ಯ ಸನ್ನಿವೇಶ ವಿಶ್ಲೇಷಣೆ ಮಾಡಲು ದತ್ತಾಂಶಗಳನ್ನು ಎಲ್ಲಿಂದ ಪಡೆಯಲಾಗುತ್ತದೆ ?

**6. ಸಂಕ್ಷಿಪ್ತವಾಗಿ ಉತ್ತರಿಸಿ :**

a) ಪ್ರಾಥಮಿಕ ಶಿಕ್ಷಣ ಸಾರ್ವತ್ರೀಕರಣ ಎಂದರೇನು ? ಪ್ರಾಥಮಿಕ ಶಿಕ್ಷಣದ ಸಾರ್ವತ್ರೀಕರಣದ ವಿವಿಧ ಅಂಶಗಳನ್ನು ಬರೆಯಿರಿ.

b) ಲೋಕ್ ಜಂಬಿಷ್‌ನ ಪ್ರಮುಖ ಕಾರ್ಯಾಚರಣೆಯ ವೈಶಿಷ್ಟ್ಯತೆಯನ್ನು ಪ್ರತಿನಿಧಿಸುವ ಶಾಲಾ ನಕ್ಷೆ ಮತ್ತು ಸೂಕ್ಷ್ಮ ಯೋಜನೆಯನ್ನು ವಿವರಿಸಿ.

c) ಒಟ್ಟು ದಾಖಲಾತಿ ಅನುಪಾತ(GER)ವನ್ನು ನೀವು ಏನೆಂದು ಅರ್ಥೈಸಿಕೊಂಡಿದ್ದೀರಿ ? ಉದಾಹರಣೆಯನ್ನು ನೀಡುವುದರ ಮೂಲಕ ವಿವರಿಸಿ.

d) ಆರ್ಥಿಕವಾಗಿ ಹಿಂದುಳಿದ ಮಕ್ಕಳಿಗೆ ರಾಜ್ಯ ಸರ್ಕಾರ ಯಾವ ಸೌಲಭ್ಯಗಳನ್ನು ನೀಡಿದೆ ?

e) ಮೂಲ ಶಿಕ್ಷಣ ಯೋಜನೆಯಡಿಯಲ್ಲಿ ಉತ್ತರ ಪ್ರದೇಶದ ಸರ್ಕಾರವು ಯಾವ ಯಾವ ತಂತ್ರಗಳನ್ನು ಹಾಗೂ ಚಟುವಟಿಕೆಗಳನ್ನು ಯೋಜಿಸಿದೆ ?

## ಘಟಕ 6 ಪ್ರಾಥಮಿಕ ಶಿಕ್ಷಣವನ್ನು ಸಾರ್ವತ್ರಿಕಗೊಳಿಸಲು (UEE-II) ಕೆಲವು ಕಾರ್ಯತಂತ್ರಗಳು

ಸಂರಚನೆ

*6.0* ಪರಿಚಯ

*6.1* ಕಲಿಕಾ ಉದ್ದೇಶಗಳು

*6.2* ಸರ್ವ ಶಿಕ್ಷಣ ಅಭಿಯಾನ *(SSA)* ಕಾರ್ಯಕ್ರಮ ಮತ್ತು ಅವಶ್ಯಕ ಲಕ್ಷಣಗಳು

*6.3* ಸರ್ವ ಶಿಕ್ಷಣ ಅಭಿಯಾನ *(SSA)* ಕಾರ್ಯಕ್ರಮದ ಗುರಿ ಮತ್ತು ಉದ್ದೇಶಗಳು

*6.4* ಸರ್ವ ಶಿಕ್ಷಣ ಅಭಿಯಾನ *(SSA)* ಕಾರ್ಯಕ್ರಮ ದ ವ್ಯಾಪಕ ಕಾರ್ಯತಂತ್ರಗಳು

*6.5* ಸರ್ವ ಶಿಕ್ಷಣ ಅಭಿಯಾನ *(SSA)* ಕಾರ್ಯಕ್ರಮದಲ್ಲಿನ ಹಣಕಾಸು ನಿಯಮಗಳು

*6.6* ಶಾಲಾಭಿವೃದ್ದಿ ಮತ್ತು ಸಂಬಂಧಿಸಿದ ಸೌಲಭ್ಯಗಳು

*6.7* ಮಧ್ಯಾನದ ಉಪಹಾರ ಮತ್ತು ಸರ್ವ ಶಿಕ್ಷಣ ಅಭಿಯಾನದಲ್ಲಿ ಇದರ ಕೊಡುಗೆ

*6.8* ಕಡ್ಡಾಯ ಶಿಕ್ಷಣ ಕಾಯ್ದೆ ೨೦೦೯ ಮತ್ತು ಸರ್ವಶಿಕ್ಷಣ ಅಭಿಯಾನ ಸುಸಂಗತಗೊಳಿಸುವುದು

*6.9* ಉಪಸಂಹಾರ

*6.10* ಓದಲು ಸಲಹೆಗಳು ಮತ್ತು ಆಕರಗಳು

*6.11* ಘಟಕದ ಕೊನೆಯಲ್ಲಿನ ಅಭ್ಯಾಸಗಳು

## 6.0 ಪರಿಚಯ

ಘಟಕ 5 ರಲ್ಲಿ , ನಮ್ಮ ದೇಶದಲ್ಲಿನ ವಿವಿಧ ರಾಜ್ಯಗಳಲ್ಲಿನ ಪ್ರಾಥಮಿಕ ಶಿಕ್ಷಣವನ್ನು ಸಾರ್ವತ್ರಿಕಗೊಳಿಸುವ ವಿವಿಧ ಯೋಜನೆಗಳನ್ನು ನೀವು ಅಧ್ಯಯನ ಮಾಡಿದ್ದೀರಿ. ಹಾಗೆಯೇ ಪ್ರಾಥಮಿಕ ಶಿಕ್ಷಣವನ್ನು ಸಾರ್ವತ್ರಿಕಗೊಳಿಸುವಲ್ಲಿ ಜಿಲ್ಲಾ ಪ್ರಾಥಮಿಕ ಶಿಕ್ಷಣ ಕಾರ್ಯಕ್ರಮ(DPEP)ದ ಪರಿಣಾಮವನ್ನು ಸಹ ಅಧ್ಯಯನ ಮಾಡಿದಿರಿ. ಈ ಘಟಕದಲ್ಲಿ ನೀವು ದೇಶದಲ್ಲಿ ಸಾರ್ವತ್ರಿಕ ಪ್ರಾಥಮಿಕ ಶಿಕ್ಷಣವನ್ನು ಸಾಧಿಸುವಲ್ಲಿ ಪ್ರಮುಖ ಯೋಜನೆಯಾದ ಸರ್ವಶಿಕ್ಷಣ ಅಭಿಯಾನದ ಅವಶ್ಯಕ ಲಕ್ಷಣಗಳು, ನಿರ್ವಹಣೆ ಮತ್ತು ಮಾರ್ಗದರ್ಶನದ ಬಗ್ಗೆ ಅಧ್ಯಯನ ಮಾಡುವಿರಿ.

6–14 ರ ವಯಸ್ಸಿನೊಳಗಿನ ಎಲ್ಲಾ ಮಕ್ಕಳಿಗೂ ಪ್ರಾಥಮಿಕ ಶಿಕ್ಷಣ ದೊರಕಿಸಿ ಕೊಡುವ ಉದ್ದೇಶದಿಂದ ಸರ್ವಶಿಕ್ಷಣ ಅಭಿಯಾನ ಯೋಜನೆಯನ್ನು ವಿನ್ಯಾಸಗೊಳಿಸಲಾಯಿತು. ಉತ್ತಮವಾದ ಪ್ರಗತಿಯ ಹೊರತಾಗಿಯೂ ಹಲವು ರಾಜ್ಯಗಳಲ್ಲಿ ಬಹಳಷ್ಟು ಸಂಖ್ಯೆಯ ಶಾಲೆಯಿಂದ ಹೊರಗುಳಿದ ಮಕ್ಕಳು ಈ ಕಾರ್ಯಕ್ರಮದ ಉಪಯೋಗ ಪಡೆಯಲಿಲ್ಲ. ಸರ್ವಶಿಕ್ಷಣ ಅಭಿಯಾನ ಕಾರ್ಯಕ್ರಮದ ಅನುಷ್ಠಾನದ ಬಗ್ಗೆ ಚರ್ಚಿಸುವಾಗ ಶಿಕ್ಷಣವನ್ನು ಮೂಲಭೂತ ಹಕ್ಕು ಎಂದು ಖಾತರಿಪಡಿಸುವ ಶಿಕ್ಷಣ ಹಕ್ಕು ಕಾಯ್ದೆ ೨೦೦೯ ರ ಬಗ್ಗೆಯೂ ಸಹ ನಾವು ಚರ್ಚಿಸಬೇಕು.

## 6.1 ಕಲಿಕಾ ಉದ್ದೇಶಗಳು

ಈ ಘಟಕದ ಮೂಲಕ ನೀವು ಈ ಕೆಳಕಂಡ ಅಂಶಗಳನ್ನು ಕಲಿಯಲು ಸಾಮರ್ಥ್ಯರಾಗುವಿರಿ :

- ಸರ್ವಶಿಕ್ಷಣ ಅಭಿಯಾನದ ಹಿನ್ನೆಲೆ ಮತ್ತು ಅವಶ್ಯಕ ಲಕ್ಷಣಗಳ ವಿವರಣೆ
- ಸರ್ವಶಿಕ್ಷಣ ಅಭಿಯಾನದ ಗುರಿ ಮತ್ತು ಉದ್ದೇಶಗಳ ವಿವರಣೆ
- ಸರ್ವಶಿಕ್ಷಣ ಅಭಿಯಾನ ಕಾರ್ಯಕ್ರಮದ ವ್ಯಾಪಕ ಕಾರ್ಯತಂತ್ರಗಳನ್ನು ಗುರುತಿಸುವುದು ಮತ್ತು ಅವುಗಳನ್ನು ವಿವರಿಸುವುದು.
- ಸರ್ವಶಿಕ್ಷಣ ಅಭಿಯಾನ ಕಾರ್ಯಕ್ರಮದ ಹಣಕಾಸು ನಿಯಮಗಳನ್ನು ವಿವರಿಸುವುದು.
- ಸರ್ವಶಿಕ್ಷಣ ಅಭಿಯಾನದ ಉದ್ದೇಶಗಳನ್ನು ಸಾಧಿಸುವಲ್ಲಿ ಮಧ್ಯಾಹ್ನದ ಉಪಹಾರ ಯೋಜನೆಯ ಕೊಡುಗೆಯನ್ನು ಚರ್ಚಿಸುವುದು.
- ಕಡ್ಡಾಯ ಶಿಕ್ಷಣ ಕಾಯ್ದೆ 2009 ರ ಅಗತ್ಯತೆಯನ್ನು ಮತ್ತು ಸರ್ವಶಿಕ್ಷಣ ಅಭಿಯಾನದ ಜೊತೆಗಿನ ಇದರ ಸಂಬಂಧವನ್ನು ಚರ್ಚಿಸುವುದು
- ಅಸಾಕ್ಷರತೆಯನ್ನು ನಿರ್ಮೂಲಗೊಳಿಸುವಲ್ಲಿ ಸರ್ವಶಿಕ್ಷಣ ಅಭಿಯಾನ ದ ಪಾತ್ರವನ್ನು ಚರ್ಚಿಸುವುದು

### 6.2 ಸರ್ವ ಶಿಕ್ಷಣ ಅಭಿಯಾನ *(SSA)* ಕಾರ್ಯಕ್ರಮ ಮತ್ತು ಅವಶ್ಯಕ ಲಕ್ಷಣಗಳು

ನಿಮಗೆ ತಿಳಿದಿರುವಂತೆ ಸರ್ವ ಶಿಕ್ಷಣ ಅಭಿಯಾನ *(SSA)* ಕಾರ್ಯಕ್ರಮವು, 6–14 ವಯಸ್ಸಿನ ಎಲ್ಲಾ ಮಕ್ಕಳಿಗೆ ಪ್ರಾಥಮಿಕ ಶಿಕ್ಷಣವನ್ನು ಸಾರ್ವತ್ರಿಕಗೊಳಿಸುವ ಸರ್ಕಾರದ ಪ್ರಮುಖ ಕಾರ್ಯಕ್ರಮವಾಗಿದೆ. ಈ ಯೋಜನೆಯು ಶಾಲಾ ದಾಖಲಾತಿ ಮತ್ತು

ಹಾಜರಾತಿ ಹೆಚ್ಚಿಸುವ ಮತ್ತು ತರಗತಿ ಹಂತಕ್ಕೆ ಸೂಕ್ತವಾದ ಕಲಿಕೆಯನ್ನು ಸಾಧಿಸುವ ಗುಣಮಟ್ಟದ ಶಿಕ್ಷಣವನ್ನು ಒದಗಿಸುವ ಗುರಿಹೊಂದಿದೆ. ಇದು ಲಿಂಗ ತಾರತಮ್ಯ ಮತ್ತು ವಿವಿಧ ಸಾಮಾಜಿಕ ವರ್ಗಗಳ ನಡುವಿನ ಅಂತರವನ್ನು ಕಡಿಮೆ ಮಾಡುವ ಗುರಿಯನ್ನು ಸಹ ಹೊಂದಿದೆ. ಸರ್ವ ಶಿಕ್ಷಣ ಅಭಿಯಾನವು *1998* ರಲ್ಲಿ ನಡೆದ ರಾಜ್ಯ ಶಿಕ್ಷಣ ಮಂತ್ರಿಗಳ ಸಮ್ಮೇಳನದ ಶಿಫಾರಸ್ಸುಗಳ ಆಧಾರದ ಮೇಲೆ 2001 ಪ್ರಾರಂಭವಾಯಿತು. ಹೀಗಿದ್ದರೂ ಕಾನೂನಿನ 86 ನೇ ವಿಧಿಯು 2002 ರಲ್ಲಿ ಪ್ರಾಥಮಿಕ ಶಿಕ್ಷಣವನ್ನು ಮೂಲಕಭೂತ ಹಕ್ಕು ಎಂದು ಪ್ರತಿಪಾದಿಸಿತು. ಉಚಿತ ಮತ್ತು ಕಡ್ಡಾಯ ಶಿಕ್ಷಣ ಪಡೆಯುವ ಮಕ್ಕಳ ಹಕ್ಕು ಆಗಸ್ಟ್ 2009 ರವರೆಗೂ ಸಂಸತ್ತಿನಲ್ಲಿ ಅಂಗೀಕಾರವಾಗಿರಲಿಲ್ಲ.

**i.** ಸರ್ವ ಶಿಕ್ಷಣ ಅಭಿಯಾನದ ಅವಶ್ಯಕ ಲಕ್ಷಣಗಳು

1. ಸರ್ವ ಶಿಕ್ಷಣ ಅಭಿಯಾನವು ಪ್ರಾಥಮಿಕ ಶಿಕ್ಷಣವನ್ನು ಸಾರ್ವತ್ರಿಕಗೊಳಿಸುವಿಕೆಯನ್ನು ಸಾಧಿಸುವ ನಿರ್ಧಿಷ್ಟ ಕಾರ್ಯಕ್ರಮವಾಗಲು ಈ ಕೆಳಗಿನ ಲಕ್ಷಣಗಳು ಅವಶ್ಯಕವಾಗಿವೆ.
2. ಪ್ರಾಥಮಿಕ ಶಿಕ್ಷಣವನ್ನು ಸಾರ್ವತ್ರಿಕಗೊಳಿಸು ಗುರಿ ಮತ್ತು ಉದ್ದೇಶಕ್ಕೆ ಸ್ಪಷ್ಟವಾದ ಸಮಯದ ಚೌಕಟ್ಟನ್ನು ಹೊಂದಿರುವ ಕಾರ್ಯಕ್ರಮವಾಗಿದೆ
3. ಇದು ಇಡೀ ದೇಶದಲ್ಲಿನ ಗುಣಮಟ್ಟದ ಮೂಲ ಶಿಕ್ಷಣದ ಬೇಡಿಕೆಗೆ ಸ್ಪಂದನೆಯಾಗಿದೆ.
4. ಮೂಲ ಶಿಕ್ಷಣದ ಮೂಲಕ ಸಾಮಾಜಿಕ ನ್ಯಾಯ ಉದಗಿಸುವ ಅವಕಾಶವಾಗಿದೆ.
5. ಇದು ಪಂಚಾಯತ್ ರಾಜ್, ಶಾಲಾ ನಿರ್ವಹಣಾ ಸಮಿತಿಗಳು, ಗ್ರಾಮ ಶಿಕ್ಷಣ ಸಮಿತಿಗಳು, ಪೋಷಕ–ಶಿಕ್ಷಕ ಸಂಘಗಳು ಮತ್ತು ಸ್ಥಳೀಯ ಮಟ್ಟದ ಸಾರ್ವಜನಿಕರು ಮಕ್ಕಳ ಶಿಕ್ಷಣದಲ್ಲಿ ಸಕ್ರಿಯವಾಗಿ ಭಾಗವಹಿಸುವಂತೆ ಮಾಡುವುದಾಗಿದೆ.
6. ಇದು ದೇಶಾದ್ಯಂತ ಪ್ರಾಥಮಿಕ ಶಿಕ್ಷಣವನ್ನು ಸಾರ್ವತ್ರಿಕಗೊಳಿಸುವ ರಾಜಕೀಯ ಸಾಮರ್ಥ್ಯದ ಅಭಿವ್ಯಕ್ತಪಡಿಸುವುದಾಗಿದೆ.
7. ಇದು ಪ್ರಾಥಮಿಕ ಶಿಕ್ಷಣದ ನಿರ್ವಹಣೆಯಲ್ಲಿ ಸ್ವಾಯತ್ತ ಸಂಸ್ಥೆಗಳನ್ನು ಹಾಗು ತಳಮಟ್ಟದ ಸಂರಚನೆಗಳನ್ನು ಒಳಗೊಳ್ಳಿಸುತ್ತದೆ.

8. ಇದು ಕೇಂದ್ರ. ರಾಜ್ಯ ಮತ್ತು ಸ್ಥಳೀಯ ಸರ್ಕಾರಗಳ ಪಾಲುದಾರಿಕೆಯನ್ನು ಸ್ವಾಗತಿಸುತ್ತದೆ.
9. ಇದು ರಾಜ್ಯಗಳು ತಮ್ಮದೇ ಆದ ಪ್ರಾಥಮಿಕ ಶಿಕ್ಷಣದ ಧ್ಯೇಯಗಳನ್ನು ಹೊಂದಲು ಇರುವ ಅವಕಾಶವಾಗಿದೆ.
10. ಇದು ಕಾರ್ಯಕ್ರಮಗಳ ಅನುಷ್ಠಾನದ ಕಾರ್ಯತಂತ್ರಗಳಲ್ಲಿ ಖಾಸಗಿ ಸಾರ್ವಜನಿಕ ಪಾಲುದಾರಿಕೆಗೆ ಇರುವ ಅವಕಾಶವಾಗಿದೆ.

ಈ ಮೇಲಿನ ಅಂಶಗಳ ಜೊತೆಗೆ, ಸರ್ವ ಶಿಕ್ಷಣ ಅಭಿಯಾನ ಕಾರ್ಯಕ್ರಮವು ಸಮುದಾಯಾಧಾರಿತ ಗುಣಮಟ್ಟದ ಶಿಕ್ಷಣದ ಮೂಲಕ ಎಲ್ಲಾ ಮಕ್ಕಳಲ್ಲಿಯೂ ಮಾನವೀಯ ಸಾಮರ್ಥ್ಯಗಳನ್ನು ಅಭಿವೃದ್ಧಿಗೊಳಿಸುವ ಅವಕಾಶಗಳನ್ನು ಒದಗಿಸುವ ಪ್ರಯತ್ನವಾಗಿದೆ.

## 6.3 ಸರ್ವ ಶಿಕ್ಷಣ ಅಭಿಯಾನ *(SSA)* ಕಾರ್ಯಕ್ರಮದ ಗುರಿ ಮತ್ತು ಉದ್ದೇಶಗಳು

**(a)** ಸರ್ವ ಶಿಕ್ಷಣ ಅಭಿಯಾನದ ಗುರಿ

ಸರ್ವ ಶಿಕ್ಷಣ ಅಭಿಯಾನವು ೨೦೧೦ ರೊಳಗೆ ೬-೧೪ ವಯಸ್ಸಿನ ಎಲ್ಲಾ ಮಕ್ಕಳಿಗೂ ಉಪಯಯುಕ್ತವಾದ ಹಾಗು ಸೂಕ್ತವಾದ ಪ್ರಾಥಮಿಕ ಶಿಕ್ಷಣವನ್ನು ಒದಗಿಸುವ ಗುರಿ ಹೊಂದಿತ್ತು. ಶಾಲಾ ನಿರ್ವಹಣೆಯಲ್ಲಿ ಸಮುದಾಯದ ಭಾಗವಹಿಸುವಿಕೆಯನ್ನು ಸಾಧ್ಯವಾಗಿಸುವ ಮೂಲಕ ಸಾಮಾಜಿಕ, ಪ್ರಾದೇಶಿಕ ಮತ್ತು ಲಿಂಗ ತಾರತಮ್ಯಗಳನ್ನು ಕಡಿಮೆ ಮಾಡುವ ಗುರಿಯನ್ನು ಸಹ ಹೊಂದಿದೆ. ಸೂಕ್ತ ಮತ್ತು ಉಪಯುಕ್ತ ಶಿಕ್ಷಣವು ಸಮುದಾಯದ ಐಕ್ಯತೆಯನ್ನು ಹೆಚ್ಚಿಸುವ ಶಿಕ್ಷಣ ವ್ಯವಸ್ಥೆಯನ್ನು ಅನ್ವೇಷಣೆ ಮಾಡುತ್ತದೆ. ಮಕ್ಕಳು ಆದ್ಯಾತ್ಮಿಕವಾಗಿ ಮತ್ತು ಪ್ರಾಪಂಚಿಕವಾಗಿ ಮಾನವೀಯ ಅಂಶಗಳಿಗೆ ಸಜ್ಜುಗೊಳ್ಳಲು ಅವರ ನೈಸರ್ಗಿಕ ಪರಿಸರವನ್ನು ಅರ್ಥೈಸಿಕೊಳ್ಳಲು ಸಾಧ್ಯವಾಗಿಸುವ ಗುರಿಯನ್ನು ಹೊಂದಿದೆ. ಈ ಅನ್ವೇಷಣೆಯು ಮಕ್ಕಳು ಸ್ವಾರ್ಥ ಚಿಂತನೆಯನ್ನು ಬಿಟ್ಟು ಒಬ್ಬರಿಗೊಬ್ಬರ ಒಳಿತಿಗಾಗಿ ಕಾರ್ಯನಿರ್ವಹಿಸುವ ಅವಕಾಶಗಳನ್ನು ನೀಡುವ ಮೌಲ್ಯಾಧಾರಿತ ಶಿಕ್ಷಣವನ್ನು ಪ್ರಕ್ರಿಯೆಗೊಳಿಸುತ್ತದೆ. ಸರ್ವಶಿಕ್ಷಣ ಅಭಿಯಾನವು ಬಾಲ್ಯಪೂರ್ವ ರಕ್ಷಣೆ ಮತ್ತು ಶಿಕ್ಷಣ ಪ್ರಾಮುಖ್ಯತೆಯನ್ನು ಅರಿತಿದೆ. ಹಾಗು ೦-೧೪ ರ ವಯಸ್ಸಿನ ಮಕ್ಕಳನ್ನು ಒಳಗೊಂಡಿದೆ. ಇದು ಮಹಿಳಾ ಮತ್ತು ಮಕ್ಕಳ ಕಲ್ಯಾಣ ಇಲಾಖೆಯ ಸಮಗ್ರ ಮಕ್ಕಳ ಕಲ್ಯಾಣ ಯೋಜನೆಯಲ್ಲಿನ (ಐ.ಸಿ.ಡಿ.ಎಸ್) ಮತ್ತು ಇತರೇ ವಿಶೇಷ

ಶಾಲಾಪೂರ್ವ ಕೇಂದ್ರಗಳ ಯೋಜನೆಯ ಶಾಲಾ ಪೂರ್ವ ಕಲಿಕೆಯನ್ನು ಬೆಂಬಲಿಸುವುದಾಗಿದೆ.

**(b)** ಸರ್ವ ಶಿಕ್ಷಣ ಅಭಿಯಾನದ ಉದ್ದೇಶಗಳು

ಈ ಕೆಳಗಿನವು ಸರ್ವ ಶಿಕ್ಷಣ ಅಭಿಯಾನದ ನಿರ್ಧಿಷ್ಟ ಉದ್ದೇಶಗಳಾಗಿವೆ.

1. ೨೦೦೩ ರ ಒಳಗೆ ಎಲ್ಲಾ ಮಕ್ಕಳು ಶಾಲೆಗಳಲ್ಲಿ, ಶಿಕ್ಷಣ ಖಚಿತ ಕೇಂದ್ರಗಳಲ್ಲಿ, ಪರ್ಯಾಯ ಶಾಲೆಗಳಲ್ಲಿ, ಮರಳಿ ಶಾಲೆಗೆ ಶಿಭಿರದಲಲ್ಇ ಇರುವಂತೆ ನೋಡಿಕೊಳ್ಳುವುದು. ( ನಂತರ ಇದರ ಅವಧಿಯು ೨೦೦೫ಕ್ಕೆ ನಿಗದಿಯಾಯಿತು)
2. ೨೦೦೭ ರ ಒಳಗೆ ಎಲ್ಲಾ ಮಕ್ಕಳು ಐದು ವರ್ಷದ ಪ್ರಾಥಮಿಕ ಶಾಲೆಯನ್ನು ಪೂರ್ಣಗೊಳಿಸುವಂತೆ ನೋಡಿಕೊಳ್ಳುವುದು.
3. ೨೦೧೦ ರ ಒಳಗೆ ಎಲ್ಲಾ ಮಕ್ಕಳು ಎಂಟು ವರ್ಷದ ಪ್ರಾಥಮಿಕ ಶಿಕ್ಷಣವನ್ನು ಪೂರ್ಣಗೊಳಿಸುವಂತೆ ನೋಡಿಕೊಳ್ಳುವುದು.
4. ಜೀವನಕ್ಕಾಗಿನ ಶಿಕ್ಷಣಕ್ಕೆ ಒತ್ತು ನೀಡುವುದರ ಜೊತೆಗೆ ತೃಪ್ತಿಕರ ಗುಣಮಟ್ಟದ ಪ್ರಾಥಮಿಕ ಶಿಕ್ಷಣದ ಕಡೆಗೆ ಗಮನವಹಿಸುವುದು.
5. ೨೦೦೭ ರ ಒಳಗೆ ಪ್ರಾಥಮಿಕ ಹಂತದಲ್ಲಿ ಹಾಗು ೨೦೧೦ ರ ಒಳಗೆ ಪ್ರಾಥಮಿಕ ಶಿಕ್ಷಣ ಮಟ್ಟದಲ್ಲಿ ಎಲ್ಲಾ ರೀತಿಯ ಲಿಂಗ ಮತ್ತು ಸಾಮಾಜಿಕ ವರ್ಗದ ಅಂತರವನ್ನು ಕಡಿಮೆ ಮಾಡುವುದು.
6. ೨೦೧೦ ರ ಒಳಗೆ ಹಾಜರಾತಿಯನ್ನು ಸಾರ್ವತ್ರಿಕಗೊಳಿಸುವುದು
7. ಒಟ್ಟಾರೆ ಚೌಕಟ್ಟಿನೊಳಗೆ ಸಂದರ್ಭಕ್ಕನುಸಾರವಾದ ಮಾರ್ಗಸೂಚಿಗಳನ್ನು ರಚಿಸಲು ಎಲ್ಲಾ ರಾಜ್ಯಗಳಿಗೂ ಸಾಧ್ಯವಾಗಿಸುವುದು.
8. ಸ್ಥಳೀಯ ನಿರ್ಧಿಷ್ಟತೆಯನ್ನು ಪ್ರತಿಬಿಂಬಿಸಲು ರಾಜ್ಯದ ಎಲ್ಲಾ ಜಿಲ್ಲೆಗಳನ್ನು ಹಾಗು ಆಡಳಿತ ಪ್ರದೇಶಗಳನ್ನು ಬೆಂಬಲಿಸುವುದು.
9. ರಾಷ್ಟ್ರೀಯ ನೀತಿ ನಿಯಮಗಳಲ್ಲಿ ಸ್ಥಳೀಯ ಅವಶ್ಯಕತೆಗಳ ಆಧಾರದ ಯೋಜನೆಯನ್ನು ಪ್ರೋತ್ಸಾಹಿಸುವುದು.
10. ವ್ಯಾಪಕ ರಾಷ್ಟ್ರೀಯ ನೀತಿಗಳನ್ನು ಅನ್ವಯಿಸಿಕೊಳ್ಳುವ ಮೂಲಕ ನೈಜತೆಯುಳ್ಳ ಯೋಜನೆಗಳನ್ನು ತಯಾರಿಸುವುದು.

ಉದ್ದೇಶಗಳನ್ನು ರಾಷ್ಟ್ರಮಟ್ಟದಲ್ಲಿ ವಿವರಿಸಲಾಗಿದ್ದರೂ ಸಹ ವಿವಿಧ ಜಿಲ್ಲೆಗಳು ಮತ್ತು ರಾಜ್ಯಗಳು ತಮ್ಮ ಸ್ಥಳೀಯ ಸಂದರ್ಭಗಳಲ್ಲಿ ಮತ್ತು ಸಮಯ ಚೌಕಟ್ಟಿನಲ್ಲಿ ಸಾರ್ವತ್ರಿಕತೆಯನ್ನು ಸಾಧಿಸುವುದನ್ನು ನಿರೀಕ್ಷಿಸಲಾಗಿತ್ತು. ೨೦೧೦ ಈ ಸಾಧನೆಗಳಿಗೆ ನೀಡಲಾಗಿದ್ದ ಸಮಯ ಮಿತಿಯಾಗಿತ್ತು. ಶಾಲೆಯಿಂದ ಹೊರಗುಳಿದ ಮಕ್ಕಳನ್ನು ವಿವಿಧ

ಕಾರ್ಯತಂತ್ರಗಳ ಮೂಲಕ ಮುಖ್ಯವಾಹಿನಿಗೆ ತರುವುದು ಮತ್ತು ೬-೧೪ ವರ್ಷ ವಯಸ್ಸಿನ ಎಲ್ಲಾ ಮಕ್ಕಳಿಗೂ ಸಹ ೮ ವರ್ಷದ ಪ್ರಾಥಮಿಕ ಶಾಲಾ ಶಿಕ್ಷಣ ನೀಡುವುದಕ್ಕೆ ಒತ್ತು ನೀಡಲಾಗಿತ್ತು. ಲಿಂಗ ತಾರತಮ್ಯ ಮತ್ತು ವಿವಿಧ ಸಾಮಾಜಿಕ ವರ್ಗಗಳ ನಡುವಿನ ಅಂತರವನ್ನು ಕಡಿಮೆ ಮಾಡುವುದು ಮತ್ತು ಶಾಲೆಯಲ್ಲಿನ ಎಲ್ಲಾ ಮಕ್ಕಳ ಹಾಜರಾತಿಯನ್ನು ಹೆಚ್ಚಿಸುವುದರಲ್ಲಿ ಒತ್ತಡವಿತ್ತು. ಈ ಚೌಕಟ್ಟಿನೊಳಗೆ ಸೂಕ್ತವಾದ ಶಿಕ್ಷಣ ವ್ಯವಸ್ಥೆಯು ನಿರೀಕ್ಷಿತವಾದುದು, ಇದರಿಂದ ಪೋಷಕರು ಮತ್ತು ಮಕ್ಕಳು ಶಾಲಾ ವ್ಯವಸ್ಥೆಯನ್ನು ಅವರ ನೈಸರ್ಗಿಕ ಹಾಗು ಸಾಮಾಜಿಕ ವಾತಾವರಣದ ಅನುಸಾರ ಉಪಯುಕ್ತವೆಂದು ಪರಿಗಣಿಸುತ್ತಾರೆ.

ಒಂದು ಚೌಕಟ್ಟು ಹಾಗು ಒಂದು ಕಾರ್ಯಕ್ರಮವಾಗಿ ಸರ್ವ ಶಿಕ್ಷಣ ಅಭಿಯಾನ
ಸರ್ವ ಶಿಕ್ಷಣ ಅಭಿಯಾನವು ಎರಡು ಅಂಶಗಳನ್ನು ಒಳಗೊಂಡಿದೆ –
೧. ಇದು ಪ್ರಾಥಮಿಕ ಶಿಕ್ಷಣ ಯೋಜನೆಗಳನ್ನು ಅನುಷ್ಠಾನಗೊಳಿಸಲು ವ್ಯಾಪಕವಾದ ಚೌಕಟ್ಟನ್ನು ಒದಗಿಸುತ್ತದೆ.
೨. ಇದು ಪ್ರಾಥಮಿಕ ಶಿಕ್ಷಣದ ಸಾರ್ವತ್ರಿಕತೆಯನ್ನು ಸಾಧಿಸಲು ಮಹತ್ವದ ಅಂಶಗಳನ್ನು ಅಭಿವೃದ್ದಿಪಡಿಸಲು ಅನುದಾನ ದ ಅವಕಾಶವನ್ನು ಹೊಂದಿರುವ ಕಾರ್ಯಕ್ರಮವಾಗಿದೆ.
ಹೀಗಿರುವಾಗ, ಪ್ರಾಥಮಿಕ ಶಿಕ್ಷಣದಲ್ಲಿ ರಾಜ್ಯ ಮತ್ತು ಕೇಂದ್ರದ ಯೋಜನೆಗಳ ಅನುದಾನವು ಸರ್ವ ಶಿಕ್ಷಣ ಅಭಿಯಾನದ ಚೌಕಟ್ಟಿನ ಭಾಗವಾಗಿ ಪ್ರತಿಫಲಿಸುತ್ತವೆ, ಕೆಲವೇ ವರ್ಷಗಳಲ್ಲಿ ಇವುಗಳೆಲ್ಲವೂ ಸರ್ವ ಶಿಕ್ಷಣ ಅಭಿಯಾನದ ಜೊತೆಗೆ ವಿಲೀನಗೊಳ್ಳಲಿವೆ. ಒಂದು ಕಾರ್ಯಕ್ರಮವಾಗಿ ಇದು ಪ್ರಾಥಮಿಕ ಶಿಕ್ಷಣದ ಸಾರ್ವತ್ರಿಕರಣದಲ್ಲಿ ಹೆಚ್ಚುವರಿ ಸಂಪನ್ಮೂಲವಾಗಿ ಪ್ರತಿಫಲಿಸುತ್ತದೆ.

## 6.4 ಸರ್ವ ಶಿಕ್ಷಣ ಅಭಿಯಾನದ ವ್ಯಾಪಕ ಕಾರ್ಯತಂತ್ರಗಳು

- ಸಾಂಸ್ಥಿಕ ಸುಧಾರಣೆಗಳು – ಸರ್ವ ಶಿಕ್ಷಣ ಅಭಿಯಾನದ ಭಾಗವಾಗಿ ಕೇಂದ್ರ ಮತ್ತು ರಾಜ್ಯ ಸರ್ಕಾರಗಳು ವ್ಯವಸ್ಥೆಯನ್ನು ಪರಿಣಾಮಕಾರಿಗೊಳಿಸಲು ಹಲವು ಸುಧಾರಣೆಗಳನ್ನು ಜಾರಿಗೊಳಿಸುತ್ತವೆ. ರಾಜ್ಯಗಳು ತಮ್ಮ ಪ್ರಚಲಿತ ಶೈಕ್ಷಣಿಕ ಆಡಳಿತವನ್ನು ಒಳಗೊಂಡ ಶಿಕ್ಷಣ ವ್ಯವಸ್ಥೆಯ, ಶಾಲೆಗಳಲ್ಲಿನ ಸಾಧನೆಯ ಹಂತಗಳ, ಹಣಕಾಸಿನ ವಿಷಯಗಳ, ವಿಕೇಂದ್ರೀಕರಣ ಮತ್ತು ಸಮುದಾಯ ಉತ್ತರದಾಯಿತ್ವ, ರಾಜ್ಯ ಶಿಕ್ಷಣ ಕಾಯ್ದೆಯ ವಿಮರ್ಶೆ, ಶಿಕ್ಷಕರ ನೇಮಕಾತಿ, ಮಾರ್ಗದರ್ಶನ ಮತ್ತು ಮೌಲ್ಯಮಾಪನ, ಹೆಣ್ಣುಮಕ್ಕಳು, ಪರಿಶಿಷ್ಟ ವರ್ಗ/ಪಂಗಡ ಮತ್ತು ಹಿಂದುಳಿದ

ವರ್ಗದವರ ಶಿಕ್ಷಣದ ಸ್ಥಿತಿಗತಿ, ಬಾಲ್ಯ ಪೂರ್ವ ರಕ್ಷಣೆ ಮತ್ತು ಶಿಕ್ಷಣದ ಬಗೆಗಿನ ಉದ್ದೇಶಭರಿತ ಮೌಲ್ಯಮಾಪನವನ್ನು ಹೊಂದಿರಬೇಕು. ಹಲವು ರಾಜ್ಯಗಳು ಪ್ರಾಥಮಿಕ ಶಿಕ್ಷಣದ ವ್ಯವಸ್ಥೆಯನ್ನು ಸುಧಾರಿಸುವ ನಿಟ್ಟಿನಲ್ಲಿ ಈಗಾಗಲೇ ಬಹಳಷ್ಟು ಬದಲಾವಣೆಯನ್ನು ಹೊಂದಿವೆ.

- ಸುಸ್ಥಿರ ಹಣಕಾಸು ಒದಗಿಸುವುದು – ಸರ್ವ ಶಿಕ್ಷಣ ಅಭಿಯಾನವು ಪ್ರಾಥಮಿಕ ಶಿಕ್ಷಣದ ಮಧ್ಯವರ್ತನೆಗಳು ಸುಸ್ಥಿರವಾಗಿರಬೇಕು ಎಂಬುದರ ಮೇಲೆ ಅವಲಂಬಿತವಾಗಿದೆ.ಇದು ರಾಜ್ಯ ಮತ್ತು ಕೇಂದ್ರ ಸರ್ಕಾರಗಳ ನಡುವಿನ ಹಣಕಾಸು ಪಾಲುದಾರಿಕೆಗೆ ದೀರ್ಘಕಾಲದ ದೃಷ್ಟಿಕೋನವಾಗಿದೆ.
- ಸಮುದಾಯ ಉತ್ತರದಾಯಿತ್ವ – ಈ ಕಾರ್ಯಕ್ರಮವು ಪರಿಣಾಮಕಾರಿ ವಿಕೇಂದ್ರೀಕರಣದ ಮೂಲಕ ಶಾಲಾ ಆಧಾರಿತ ಮಧ್ಯವರ್ತನೆಗಳಲ್ಲಿನ ಸಮುದಾಯದ ಉತ್ತರದಾಯಿತ್ವವನ್ನು ಪ್ರೋತ್ಸಾಹಿಸುತ್ತದೆ. ಇದು ಮಹಿಳಾ ಗುಂಪುಗಳ , ಗ್ರಾಮ ಶಿಕ್ಷಣ ಸಮಿತಿಯ ಸದಸ್ಯರ, ಗ್ರಾಮ ಪಂಚಾಯಿತಿ ಸದಸ್ಯರ ಭಾಗವಹಿಸುವಿಕೆಯನ್ನು ಹೆಚ್ಚಿಸುತ್ತದೆ.
- ಸಾಂಸ್ಥಿಕ ಸಾಮರ್ಥ್ಯಾಭಿವೃದ್ದಿ – ಸರ್ವಶಿಕ್ಷಣ ಅಭಿಯಾನವು NIEPA / NCERT / NCTE / SCERT / SIEMAT / DIET ನಂತಹ ರಾಷ್ಟ್ರ, ರಾಜ್ಯ ಮತ್ತು ಜಿಲ್ಲಾ ಮಟ್ಟದ ಸಂಸ್ಥೆಗಳ ಸಾಂಸ್ಥಿಕ ಅಭಿವೃದ್ದಿಯನ್ನು ಗ್ರಹಿಸುತ್ತದೆ.
- ಸಂಪನ್ಮೂಲ ವ್ಯಕ್ತಿಗಳ ಮತ್ತು ಸಂಸ್ಥೆಗಳ ಸುಸ್ಥಿರ ಬೆಂಬಲ ವ್ಯವಸ್ಥೆಯಲ್ಲಿ ಗುಣಮಟ್ಟ ಸುಧಾರಿಸುವುದು.
- ಪ್ರಚಲಿತ ಶೈಕ್ಷಣಿಕ ಆಡಳಿತವನ್ನು ಸುಧಾರಿಸುವುದು – ಸಾಂಸ್ಥಿಕ ಅಭಿವೃದ್ದಿಯ ಮೂಲಕ, ಹೊಸ ವಿಧಾನಗಳ ಮೂಲಕ ಮತ್ತು ಪರಿಣಾಮಕಾರಿ ವೆಚ್ಚ ನಿಯಂತ್ರಿತ ವಿಧಾನಗಳ ಮೂಲಕ ಮುಖ್ಯವಾಹಿನಿಯ ಶೈಕ್ಷಣಿಕ ಆಡಳಿತವನ್ನು ಸುಧಾರಿಸುವುದನ್ನು ಇದು ಬೆಂಬಲಿಸುತ್ತದೆ.
- ಪೂರ್ಣ ಪಾರದರ್ಶಕವಾದ ಸಮುದಾಯ ಆಧಾರಿತ ಮಾರ್ಗದರ್ಶನ– ಈ ಕಾರ್ಯಕ್ರಮವು ಸಮುದಾಯ ಆಧಾರಿತ ಮಾರ್ಗದರ್ಶನ ವ್ಯವಸ್ಥೆಯನ್ನು ಹೊಂದಿರುತ್ತದೆ. ಶೈಕ್ಷಣಿಕ ನಿರ್ವಹಣೆ ಮಾಹಿತಿ ವ್ಯವಸ್ಥೆಯು ಶಾಲಾ ಹಂತದ ಮಾಹಿತಿಯನ್ನು ಸಮುದಾಯ ಆಧಾರಿತ ಮಾಹಿತಿಗೆ ಸಮೀಕ್ಷೆಗಳು ಹಾಗು ಯೋಜನೆಗಳಲ್ಲಿ ಸಂಬಂಧೀಕರಿಸುತ್ತದೆ. ಇದರ ಜೊತೆಗೆ ಎಲ್ಲಾ ಶಾಲೆಗಳೂ

ಅನುದಾನಗಳನ್ನು ಒಳಗೊಂಡಂತೆ ಎಲ್ಲಾ ರೀತಿಯ ಮಾಹಿತಿಗಳನ್ನು ಸಮುದಾಯದೊಡನೆ ಹಂಚಿಕೊಳ್ಳಲು ಪ್ರೋತ್ಸಾಹಿಸಲಾಗುತ್ತಿದೆ.

- ಯೋಜನೆಯ ಘಟಕವಾಗಿ ವಸತಿ ಪ್ರದೇಶ – ಸರ್ವಶಿಕ್ಷಣ ಅಭಿಯಾನವು ವಸತಿ ಪ್ರದೇಶವನ್ನು ಯೋಜನೆಯ ಘಟಕವಾಗಿಸಿಕೊಂಡು ಯೋಜನೆ ತಯಾರಿಸಲು ಸಮುದಾಯ ಆಧಾರಿತ ವಿಧಾನದಲ್ಲಿ ಕಾರ್ಯನಿರ್ವಹಿಸುತ್ತದೆ. ವಸತಿ ಪ್ರದೇಶದ ಯೋಜನೆಗಳೇ ಜಿಲ್ಲಾ ಮಟ್ಟದ ಯೋಜನೆಗಳನ್ನು ತಯಾರಿಸಲು ಮೂಲವಾಗಿರುತ್ತವೆ.
- ಸಮುದಾಯಕ್ಕೆ ಉತ್ತರದಾಯಿತ್ವ – ಸರ್ವ ಶಿಕ್ಷಣ ಅಭಿಯಾನವು ಶಿಕ್ಷಕರು, ಪೋಷಕರು ಮತ್ತು ಸಾರ್ವಜನಿಕ ಸಂಪರ್ಕಾಧಿಗಳು ನಡುವೆ ಸಹಕಾರವನ್ನು ಎದುರು ನೋಡುತ್ತದೆ ಹಾಗೆಯೇ ಸಮುದಾಯಕ್ಕೆ ಉತ್ತರದಾಯಿತ್ವ ಮತ್ತು ಪಾರದರ್ಶಕವಾಗಿರುತ್ತದೆ.
- ಹೆಣ್ಣು ಮಕ್ಕಳ ಶಿಕ್ಷಣಕ್ಕೆ ಆದ್ಯತೆ – ಹೆಣ್ಣು ಮಕ್ಕಳ ಶಿಕ್ಷಣಕ್ಕೆ , ಅದರಲ್ಲೂ ಪರಿಶಿಷ್ಟ ಪಂಗಡ ಮತ್ತು ವರ್ಗದ, ಅಲ್ಪಸಂಖ್ಯಾತರ ಹೆಣ್ಣು ಮಕ್ಕಳಿಗೆ ಆದ್ಯತೆ ನೀಡುವುದು ಸರ್ವ ಶಿಕ್ಷಣ ಅಭಿಯಾನದ ಆದ್ಯ ಕಾಳಜಿಯಾಗಿದೆ.
- ವಿಶೇಷ ಗುಂಪುಗಳ ಮೇಲೆ ಗಮನವಹಿಸುವುದು – ಸರ್ವ ಶಿಕ್ಷಣ ಅಭಿಯಾನದಲ್ಲಿ ಪರಿಶಿಷ್ಟ ಪಂಗಡ ಮತ್ತು ವರ್ಗದ , ಅಲ್ಪಸಂಖ್ಯಾತರ, ನಗರ ಪ್ರದೇಶದ ಅವಕಾಶ ವಂಚಿತ ಮಕ್ಕಳ ಮತ್ತು ವಿಶೇಷ ಅಗತ್ಯವುಳ್ಳ ಮಕ್ಕಳ ಗುಂಪುಗಳ ಶೈಕ್ಷಣಿಕ ಪ್ರಕ್ರಿಯೆಯ ಮೇಲೆ ವಿಶೇಷ ಗಮನವಹಿಸಲಾಗುವುದು.
- ಗುಣಮಟ್ಟದೆಡೆಗೆ ಒತ್ತಡ – ಸರ್ವ ಶಿಕ್ಷಣ ಅಭಿಯಾನವು ಪಠ್ಯಕ್ರಮವನ್ನು ಸುಧಾರಿಸುವ ಮೂಲಕ, ಮಗು ಕೇಂದ್ರಿತ ಚಟುವಟಿಕೆಗಳು ಮತ್ತು ಪರಿಣಾಮಕಾರಿ ಬೋಧನಾ–ಕಲಿಕಾ ಕಾರ್ಯತಂತ್ರಗಳ ಮೂಲಕ ಮಕ್ಕಳಿಗೆ ಪ್ರಾಥಮಿಕಹಂತದಲ್ಲಿ ಉಪಯುಕ್ತವಾದ ಮತ್ತು ಸೂಕ್ತವಾದ ಶಿಕ್ಷಣವನ್ನು ನೀಡುವಲ್ಲಿ ವಿಶೇಷವಾದ ಗಮನವಹಿಸುತ್ತದೆ.
- ಶಿಕ್ಷಕರ ಪಾತ್ರ – ಸರ್ವ ಶಿಕ್ಷಣ ಅಭಿಯಾನವು ಶಿಕ್ಷಕರ ಕ್ಲಿಷ್ಟಕರವಾದ ಪಾತ್ರವನ್ನು ಗುರುತಿಸುತ್ತದೆ ಮತ್ತು ಅವರ ಅಭಿವೃದ್ಧಿ ಅವಶ್ಯಕತೆಗಳ ಕಡೆಗೆ ಗಮನ ನೀಡುತ್ತದೆ. ವಲಯ ಸಂಪನ್ಮೂಲ ಕೇಂದ್ರ/ಸಮೂಹ ಸಂಪನ್ಮೂಲ ಕೇಂದ್ರ ಗಳನ್ನು ಸ್ಥಾಪಿಸುವುದು, ಅರ್ಹ ಶಿಕ್ಷಕರ ನೇಮಕಾತಿ, ಪಠ್ಯಕ್ರಮ ಸಂಬಂಧಿತ ಸಾಮಗ್ರಿಗಳ ರಚನೆಯಲ್ಲಿ ಭಾಗವಹಿಸುವ ಮೂಲಕ ಶಿಕ್ಷಕರ ಅಭಿವೃದ್ಧಿಗೆ ಅವಕಾಶ

ಮಾಡಿಕೊಡುವುದು ಮತ್ತು ಶಿಕ್ಷಕರಿಗೆ ಅಧ್ಯಯನ ಪ್ರವಾಶ ಕಲ್ಪಿಸುವುದು ಮುಂತಾದ ರೀತಿಯ ಅವಕಾಶಗಳನ್ನು ಶಿಕ್ಷಕರಲ್ಲಿನ ಮಾನವ ಸಂಪನ್ಮೂಲವನ್ನು ಅಭಿವೃದ್ದಿಪಡಿಸಲು ವಿನ್ಯಾಸಗೊಳಿಸಲಾಗುವುದು.

- ಜಿಲ್ಲಾ ಪ್ರಾಥಮಿಕ ಶಿಕ್ಷಣ ಯೋಜನೆಗಳು – ಸರ್ವ ಶಿಕ್ಷಣ ಅಭಿಯಾನದ ಚೌಕಟ್ಟಿನ ಪ್ರಕಾರ ಪ್ರತೀ ಜಿಲ್ಲೆಗಳು ತಮ್ಮ ಜಿಲಾಹಂತದಲ್ಲಿ " ಜಿಲ್ಲಾ ಪ್ರಾಥಮಿಕ ಶಿಕ್ಷಣ ಯೋಜನೆಗಳನ್ನು ರಚಿಸುತ್ತವೆ, ಇದು ಪ್ರಾಥಮಿಕ ಶಿಕ್ಷಣ ವಲಯದಲ್ಲಿ ಅವಶ್ಯಕವಿರುವಎಲ್ಲಾ ಅಂಶಗಳನ್ನು ಒಳಗೊಂಡಿರುತ್ತದೆ.

## ಸರ್ವ ಶಿಕ್ಷಣ ಅಭಿಯಾನದಲ್ಲಿ ಸಾರ್ವಜನಿಕ ಖಾಸಗಿ ಪಾಲುದಾರಿಕೆ

ಸರ್ಕಾರಿ ಮತ್ತು ಅನುದಾನಿತ ಶಾಲೆಗಳ ಮೂಲಕ ಹೆಚ್ಚಿನ ಪ್ರಮಾಣದ ಪ್ರಾಥಮಿಕ ಶಿಕ್ಷಣದ ಅವಕಾಶಗಳಿವೆ ಎಂಬ ಸತ್ಯವನ್ನು ಸರ್ವಶಿಕ್ಷಣ ಅಭಿಯಾನ ಒಪ್ಪಿಕೊಂಡಿದೆ. ಇದರ ಜೊತೆಗೆ ದೇಶದ ವಿವಿಧ ಭಾಗಗಗಳಲ್ಲಿ ಹಲವು ಖಾಸಗಿ ಅನುದಾನರಹಿತ ಶಾಲೆಗಳು ಸಹ ಪ್ರಾಥಮಿಕ ಶಿಕ್ಷಣ ನೀಡುತ್ತಿವೆ. ದೇಶದ ವಿವಿಧ ಭಾಗಗಳಲ್ಲಿನ ಖಾಸಗಿ ಶಾಲೆಗಳ ಅಧಿಕ ಶುಲ್ಕವನ್ನು ಆರ್ಥಿಕವಾಗಿ ಹಿಂದುಳಿದವರು ಭರಿಸಲಾಗುತ್ತಿಲ್ಲ. ಆದರೂ ಕಡಿಮೆ ದರದಲ್ಲಿ ಶಿಕ್ಷಣ ನೀಡುತ್ತಿರುವ ಜಲವು ಖಾಸಗಿ ಶಾಲೆಗಳು ಇದ್ದು, ಆರ್ಥಿಕವಾಗಿ ಹಿಂದುಳಿದವರೂ ಸಹ ಈ ಶಾಲೆಗಳಿಗೆ ಸೇರಿದ್ದಾರೆ. ಈ ರೀತಿಯ ಕೆಲವು ಶಾಲೆಗಳು ಕಳಪೆ ಮೂಲಭೂತ ಸೌಕರ್ಯ ಹಾಗು ಕಡಿಮೆ ವೇತನದ ಶಿಕ್ಷಕರನ್ನು ಹೊಂದಿವೆ. ಎಲ್ಲಾ ರೀತಿಯ ಶ್ರಮವನ್ನು ಪ್ರೋತ್ಸಾಹಿಸುವ ಮೂಲಕ ಸರ್ವ ಸೌಲಭ್ಯವುಳ್ಳ ಖಾಸಗಿ ಅನುದಾನರಹಿತ ಶಾಲೆಗಳಲ್ಲಿ ಸಮಾನತೆ ಹಾಗು ಸರ್ವರಿಗೂ ಲಭ್ಯತೆಯ ಸಾಧ್ಯವಾಗಿಸಲು ಸಾರ್ವಜನಿಕ ಖಾಸಗಿ ಪಾಲುದಾರಿಕೆಯನ್ನು ಅನ್ವೇಷಿಸಲಾಗಿದೆ. ಸರ್ಕಾರ, ಸ್ಥಳೀಯ ಮಂಡಳಿ ಮತ್ತು ಸರ್ಕಾರಿ ಅನುದಾನಿತ ಶಾಲೆಗಳು ಸರ್ವಶಿಕ್ಷಣ ಅಭಿಯಾನದ ಅಡಿಯಲ್ಲಿ ಬರುತ್ತವೆ , ಇದರ ಫಲವಾಗಿ ಮಧ್ಯಾಹ್ನದ ಉಪಹಾರ ಯೋಜನೆ ಮತ್ತು ಜಿಲ್ಲಾ ಪ್ರಾಥಮಿಕ ಶಿಕ್ಷಣ ಯೋಜನೆಯು ಬರುತ್ತದೆ. ಒಂದು ವೇಳೆ ಯಾವುದೇ ಖಾಸಗಿ ವಲಯವೂ ಸರ್ಕಾರ, ಸ್ಥಳೀಯ ಆಡಳಿತ ಅಥವಾ ಖಾಸಗಿ ಶಾಲೆಯನ್ನು ಅಭಿವೃದ್ದಿಪಡಿಸಲು ಬಯಸಿದಲ್ಲಿ ಅಥವ ಪಾಲುದಾರಿಕೆ ಹೊಂದಲು ಬಯಸಿದಲ್ಲಿ ಈ ಬಗೆಗಿನ ಕೆಲವು ಮಾನದಂಡಗಳ ಮೂಲಕ ರಾಜ್ಯ ಸರ್ಕಾರಗಳ ನೀತಿ ನಿಯಮಗಳಡಿಯಲ್ಲಿ ಪಾಲುದಾರಿಕೆ ಹೊಂದಬಹುದು. ರಾಜ್ಯದ ನೀತಿಗಳಡಿಯಲ್ಲಿ ಡಯಟ್‌ಗಳು ಮತ್ತು ಇತರೇ ಸರ್ಕಾರಿ ಶಿಕ್ಷಕ ತರಬೇತಿ ಸಂಸ್ಥೆಗಳು ಖಾಸಗಿ ಅನುದಾನಿತ ಶಾಲೆಗಳಿಗೆ ಸಂಪನ್ಮೂಲ ಸಹಾಯ ಮಾಡಬಹುದು, ಇದಕ್ಕೆ ತಗುಲುವ ಹೆಚ್ಚುವರಿ ವೆಚ್ಚವನ್ನು ಖಾಸಗಿ ಸಂಸ್ಥೆಗಳು ಭರಿಸಬಹುದು.

## 6.5 ಸರ್ವ ಶಿಕ್ಷಣ ಅಭಿಯಾನದಡಿಯಲ್ಲಿ ಹಣಕಾಸಿನ ನಿಯಮಗಳು

1. ಸರ್ವಶಿಕ್ಷಣ ಅಭಿಯಾನದಡಿಯಲ್ಲಿನ ನೆರವು ೯ನೇ ಯೋಜನೆಯಲ್ಲಿ ೮೫:೧೫ ರ ಅನುಪಾತದ ಹಂಚಿಕೆಯಲ್ಲಿರುವುದು, ೧೦ನೇ ಯೋಜನೆಯಲ್ಲಿ ೭೫:೨೫ ಮತ್ತು ತದನಂತರ ಕೇಂದ್ರ ಮತ್ತು ರಾಜ್ಯ ಸರ್ಕಾರಗಳ ನಡುವೆ ಇದು ೫೦:೫೦ ಅನುಪಾತವಾಯಿತು. ವೆಚ್ಚವನ್ನು ಹಂಚಿಕೊಳ್ಳುವ ಬಗ್ಗೆ ರಾಜ್ಯ ಸರ್ಕಾರಗಳು ಬರವಣಿಗೆಯ ಮೂಲಕ ಬದ್ಧತೆಯನ್ನು ಪಡೆದುಕೊಳ್ಳಬೇಕು.

2. ರಾಜ್ಯ ಸರ್ಕಾರಗಳು ೧೯೯೯-೨೦೦೦ ರಲ್ಲಿ ಇದ್ದಂತೆ ಪ್ರಾಥಮಿಕ ಶಿಕ್ಷಣದ ತಮ್ಮ ಅನುದಾನದ ಮಟ್ಟವನ್ನು ನಿರ್ವಹಣೆ ಮಾಡಬೇಕು. ಸರ್ವಶಿಕ್ಷಣ ಅಭಿಯಾನಕ್ಕೆ ರಾಜ್ಯ ಸರ್ಕಾರಗಳು ನೀಡುವ ಕೊಡುಗೆಯು ಈ ಅನುದಾನಕ್ಕಿಂತ ಹೆಚ್ಚಿನದಾಗಿರುತ್ತದೆ.

3. ಭಾರತ ಸರ್ಕಾರವು ರಾಜ್ಯ ಗಳಿಗೆ ಅಥವಾ ಕೇಂದ್ರಾಡಳಿತ ಪ್ರದೇಶದಗಳಿಗೆ ಅನುದಾನವನ್ನು ಬಿಡುಗಡೆ ಮಾಡಬಹುದು ಮತ್ತ ರಾಜ್ಯಗಳು ಕೇಂದ್ರ ಸರ್ಕಾರದ ಮೊದಲ ಕಂತಿನ ಅನುದಾನವನ್ನು ಮತ್ತು ತಮ್ಮ ಪಾಲಿನ ಅನುದಾನವನ್ನು ತಮ್ಮ ರಾಜ್ಯದಅನುಷ್ಠಾನ ಸೊಸೈಟಿಗಳಿಗೆ ಕಂತುಗಳನ್ನು ಪಾವತಿಸಿದ ನಂತರ ಉಳಿದ ಕಂತುಗಳನ್ನು ಬಿಡುಗಡೆ ಮಾಡಲಾಗುತ್ತದೆ.

4. ಸರ್ವಶಿಕ್ಷಣ ಅಭಿಯಾನದಡಿಯಲ್ಲಿ ನೇಮಕವಾದ ಶಿಕ್ಷಕರ ವೇತನಗಳನ್ನು ಕೇಂದ್ರ ಮತ್ತು ರಾಜ್ಯ ಸರ್ಕಾರಗಳು ೯ನೇ ಯೋಜನೆಯ ಅನುಸಾರ ೮೫:೧೫ ಅ ಅನುಪಾತದಲ್ಲಿ, ೧೦ ನೇ ಯೋಜನೆಯಲ್ಲಿ ೭೫:೨೫, ತದನಂತರ ೫೦:೫೦ ರ ಅನುಪಾತದಲ್ಲಿ ಹಂಚಿಕೊಳ್ಳುತ್ತವೆ.

5. ಇಲಾಖೆಯ ಪ್ರಸ್ತುತ ಪ್ರಾಥಮಿಕ ಶಿಕ್ಷಣದ ಯೋಜನೆಗಳು (ರಾಷ್ಟ್ರೀಯ ಬಾಲಭವನ ಮತ್ತು ಎನ್.ಸಿ.ಟಿ.ಇ ಹೊರತುಪಡಿಸಿ) ೯ನೇ ಯೋಜನೆಯ ನಂತರ ಹೊರಬರುತ್ತವೆ. ಪ್ರಾಥಮಿಕ ಶಿಕ್ಷಣಕ್ಕೆ ಬೆಂಬಲ ನೀಡುವ ರಾಷ್ಟ್ರೀಯ ಪೌಷ್ಟಿಕ ಆಹಾರ ಕಾರ್ಯಕ್ರಮವು (ಮಧ್ಯಾಹ್ನದ ಉಪಹಾರ) ವಿಶಿಷ್ಟ ಮಧ್ಯವರ್ತನೆಯಾಗಿದ್ದು, ಆಹಾರ ಬೀಜಗಳು ಹಾಗು ಸಾಗಣೆಯ ವೆಚ್ಚವನ್ನು ಕೇಂದ್ರ ಸರ್ಕಾರವು ಭರಿಸುತ್ತದೆ ಮತ್ತು ಬೇಯಿಸಿದ ಆಹಾರದ ವೆಚ್ಚವನ್ನು ರಾಜ್ಯ ಸರ್ಕಾರವು ಭರಿಸುತ್ತದೆ.

6. ಜಿಲ್ಲಾ ಶಿಕ್ಷಣ ಯೋಜನೆಯು ಹಲವು ಅಂಶಗಗಳಿಗಾಗಿ ಇದು ಪಿ.ಎಂ.ಜಿ.ವೈ, ಜೆ.ಜಿ.ಎಸ್.ವೈ, ಪಿ.ಎಂ.ಆರ್.ವೈ, ರೋಜಗಾರ್ ಯೋಜನೆ, ಸಂಸತ್ತು ಸದಸ್ಯರ ಹಾಗು ವಿಧಾನಸಭೆ ಸದಸ್ಯರ, ರಾಜ್ಯ ಯೋಜೆನೆ, ವಿದೇಶಿ ಅನುದಾನ ಮತ್ತು ಇತರೇ ಸಂಸ್ಥೆಗಳ ಮೂಲಕ ಲಭ್ಯವಿರುವ ಅನುದಾನಗಳನ್ನು ಸ್ಪಷ್ಟವಾಗಿ ತೋರಿಸುತ್ತದೆ.

7. ಶಾಲೆಯ ರಿಪೇರಿಗೆ, ಉನ್ನತೀಕರಣಕ್ಕೆ, ನಿರ್ವಹಣೆಗೆ ಮತ್ತು ಶಿಕ್ಷಕರ ಕಲಿಕಾ ಸಾಮಗ್ರಿಗಳಿಗಾಗಿ ಬಳಕೆಯಾಗುವ ಎಲ್ಲಾ ವೆಚ್ಚಗಳನ್ನು ಗ್ರಾಮ ಶಿಕ್ಷಣ ಸಮಿತಿಗೆ/ಶಾಲಾನಿರ್ವಹಣಾ ಸಮಿತಿಗೆ/ಗ್ರಾಮಪಂಚಾಯಿತಿಗೆ/ಶಾಲಾ ಹಂತದ ನಿರ್ವಹಣೆಗಳಿಗೆ ವರ್ಗಾವಣೆಯಾಗಬೇಕು.

8. ಸಮವಸ್ತ್ರ ಮತ್ತು ವಿಧ್ಯಾರ್ಥಿ ವೇತನ ವಿತರಣೆಯಂತಹ ಇತರೇ ಯೋಜನೆಗಳು ರಾಜ್ಯ ಸರ್ಕಾರ ಯೋಜನೆಯ ಅನುದಾನದಲ್ಲೇ ಮುಂದುವರೆಯುತ್ತದೆ. ಇವುಗಳು ಸರ್ವ ಶಿಕ್ಷಣ ಅಭಿಯಾನ ಕಾರ್ಯಕ್ರಮದಡಿಯಲ್ಲಿ ಬರುವುದಿಲ್ಲ.

## 6.6 ಶಾಲೆಯ ಮತ್ತು ಇತರೆ ಸೌಲಭ್ಯಗಳ ಅಭಿವೃದ್ದಿ

ನಿಮಗೆ ತಿಳಿದಿರಬಹುದಾದಂತೆ ಪ್ರಾಥಮಿಕ ಶಿಕ್ಷಣವು ಪ್ರಮುಖವಾಗಿ ರಾಜ್ಯಗಳ ಜವಾಬ್ದಾರಿಯಾಗಿರುತ್ತದೆ. ಪ್ರಾಥಮಿಕ ಶಿಕ್ಷಣಕ್ಕೆ ಕೇಂದ್ರ ಸರ್ಕಾರದಿಂದ ದೊರೆಯಬಹುದಾದ ಅನುದಾನವನ್ನು ರಾಜ್ಯ ಸರ್ಕಾರಗಳು ಹೆಚ್ಚುವರಿ ಸಂಪನ್ಮೂಲವಾಫಿ ಪರಿಗಣಿಸಿ ಮೂಲಭೂತ ಸೌಕರ್ಯಗಳ ಅಭಿವೃದ್ದಿಗೆ, ಶಿಕ್ಷಕರ ನೇಮಕಕ್ಕೆ ಮತ್ತು ಶಿಕ್ಷಕರ ತರಬೇತಿಗೆ ಬಳಸಬಹುದು.

ಹೀಗಿದ್ದರೂ ವಿಶೇಷವಾಗಿ ತರಗತಿ, ಪಠ್ಯಕ್ರಮ ಹಂಚಿಕೆ, ಶಿಕ್ಷಕರ ನೇಮಕಾತಿ ಮತ್ತು ಶಿಕ್ಷಕರ ತರಬೇತಿ ನ ವಿಷಯಗಳಲ್ಲಿ ಸರ್ವಶಿಕ್ಷಣ ಅಭಿಯಾನದ ಭೌತಿಕ ಮತ್ತು ಮಾನವ ಸಂಪನ್ಮೂಲ ಗುರಿಯ ಸಾಧನೆಯು ಹಿಂದುಳಿದಿದೆ.

## ಸರ್ವಶಿಕ್ಷಣ ಅಭಿಯಾನದಲ್ಲಿನ ಮಧ್ಯವರ್ತನೆಗಳು

I) ಪರ್ಯಾಯ ಮತ್ತು ಸೃಜನಶೀಲ ಶಿಕ್ಷಣ (**AIE**) – ಎಲ್ಲಾ ಮಕ್ಕಳಿಗೂ ಪ್ರಾಥಮಿಕ ಶಿಕ್ಷಣ ಒದಗಿಸುವಲ್ಲಿ ಇದು ಸರ್ವಶಿಕ್ಷನ ಅಭಿಯಾನದ ಮಹತ್ತರವಾದ ಮಧ್ಯವರ್ತನೆಯಾಗಿದೆ. ಹಿಂದುಳಿದ ವರ್ಗದ ಮಕ್ಕಳು ಮತ್ತು ಬುಡಕಟ್ಟು ಜನಾಂಗದ ಹಾಗು ಕರಾವಳಿ ಪ್ರದೇಶದ ಮಕ್ಕಳ ಭಾಗವಹಿಸುವಿಕೆಯನ್ನು ಸಾಧಿಸಲು ಹಲವು ಕಾರ್ಯತಂತ್ರಗಳನ್ನು ರಚಿಸಲಾಗಿದೆ.

ii) ನಾಗರೀಕ ಕಾರ್ಯಗಳು– ಸರ್ವ ಶಿಕ್ಷಣ ಅಭಿಯಾನದ ಅಡಿಯಲ್ಲಿ ನಾಗರೀಕ ಕಾರ್ಯದ ಅಂಶಗಳು ಬಹಳ ಪ್ರಮುಖವಾದುವು. ಈ ಅಂಶದ ಅಡಿಯಲ್ಲಿ ಒಟ್ಟು ಯೋಜನಾ ವೆಚ್ಚದಲ್ಲಿ ಶೇ ೩೩ರಷ್ಟು ಅನುದಾನ ದೊರೆಯುತ್ತದೆ. ಶಾಲಾ ಮೂಲಭೂತ ಸೌಕರ್ಯಗಳ ಸುಧಾರಣೆಯು ಮಕ್ಕಳಿಗೆ ಶಾಲೆಯ ಲಭ್ಯತೆಯನ್ನು

ಹೆಚ್ಚಿಸುತ್ತದೆ, ಮಕ್ಕಳ ಹಾಜರಾತಿಯನ್ನೂ ಸಹ ಹೆಚ್ಚಿಸುತ್ತದೆ ಇವೆರಡೂ ಸಹ ಸರ್ವ ಶಿಕ್ಷಣ ಅಭಿಯಾನದ ಪ್ರಮುಖ ಉದ್ದೇಶಗಳಾಗಿವೆ. ಜಿಲ್ಲಾ ಹಂತದಲ್ಲಿ ಸಂಪನ್ಮೂಲ ಕೇಂದ್ರಗಳ ಸೌಕರ್ಯದ ಅವಕಾಶವು ಶೈಕ್ಷಣಿಕ ಬೆಂಬಲಕ್ಕೆ ಸಹಾಯಕವಾಗುತ್ತದೆ, ಇದು ಗುಣಮಟ್ಟ ಸುಧಾರಣಯ ಕಡೆಗೆ ವೇಗವರ್ಧಕವಾಗಿ ಕೆಲಸ ಮಾಡುತ್ತದೆ.

iii) ನಾವಿನ್ಯಯುತ ಚಟುವಟಿಕೆಗಳು : ಶಾಲೆಗಳಲ್ಲಿ ೬-೧೪ ವಯಸ್ಸಿನ ಎಲ್ಲಾ ಮಕ್ಕಳಲ್ಲಿಯೂ ಉಪಯಯುಕ್ತವಾದ ಮತ್ತು ಸೂಕ್ತವಾದ ಪ್ರಾಥಮಿಕ ಶಿಕ್ಷಣವನ್ನು ಅನುಷ್ಠಾನಗೊಳಿಸಲು ಮತ್ತು ಸಮುದಾಯಗಳ ಭಾಗವಹಿಸುವಿಕೆಯ ಮೂಲಕ ಸಾಮಾಜಿಕ, ಲಿಂಗ ಮತ್ತು ಪ್ರಾದೇಶಿಕ ತಾರತಮ್ಯಗಳನ್ನು ಕಡಿಮೆ ಮಾಡಲು ನಾವಿನ್ಯಯುತ ಚಟುವಟಿಕೆಗಳು ವೇಗವರ್ಧಕ ಪ್ರಕ್ರಿಯೆಗಳಾಗಿ ಕೆಲಸ ಮಾಡುತ್ತವೆ ಮತ್ತು ಈ ಕಾರ್ಯಕ್ರಮಗಳ ಬಗ್ಗೆ ನೀವು ತಿಳಿದುಕೊಳ್ಳುವ ಮೂಲಕ ಮಕ್ಕಳಲ್ಲಿ ಶಿಕ್ಷಣದ ಬಗ್ಗೆ ಆಸಕ್ತಿ ಮೂಡಿಸಲು ಮತ್ತು ಅಧ್ಯಯನದಲ್ಲಿ ತೊಡಗಿಸುವಲ್ಲಿ ಯಶಸ್ವಿಯಾಗುತ್ತವೆ. ಬಾಲ್ಯಪೂರ್ವ ರಕ್ಷಣೆ ಮತ್ತು ಶಿಕ್ಷಣ, ಹೆಣ್ಣು ಮಕ್ಕಳ ಶಿಕ್ಷಣ, ಎಸ್.ಟಿ/ಎಸ್.ಎಸ್ಸಿ ಶಿಕ್ಷಣ ಮತ್ತು ಕಂಪ್ಯೂಟರ್ ಶಿಕ್ಷಣಗಳು ನಾವಿನ್ಯಯುತ ಚಟುವಟಿಕೆಗೆ ಇರುವ ಉದಾಹರಣೆಗಳಾಗಿವೆ.

**iv**) ಸಂಶೋಧನೆ ಮತ್ತು ಮೌಲ್ಯಮಾಪನ : ಈ ಮಧ್ಯವರ್ತನೆಯು ಸಂಶೋಧನೆ, ಮೌಲ್ಯಮಾಪನ, ಮಾರ್ಗದರ್ಶನ ಮತ್ತು ಮೇಲ್ವಿಚಾರಣೆಯನ್ನು ಒಳಗೊಂಡಿರುತ್ತದೆ. ಶಾಲಾ ನಕ್ಷೆ ರಚನೆ ಮತ್ತು ವಸತಿ ಪ್ರದೇಶದ ಯೋಜನೆಯನ್ನು ಸೇರಿಸಲು ಅವಕಾಶಗಳಿರುತ್ತವೆ. ಅನುದಾನವನ್ನು ಸರ್ಕಾರಿ ಹಾಗು ಸರ್ಕಾರಿ ಅನುದಾನಿತ ಶಾಲೆಗಳಿಗಾಗಿ ಬಳಸಬಹುದು. ಈ ಮಧ್ಯವರ್ತನೆಯಲ್ಲಿ ಈ ಕೆಳಕಂಡ ಚಟುವಟಿಕೆಗಳನ್ನು ಪ್ರಸ್ತಾಪಿಸಲಾಗಿದೆ.

- ಪರಿಣಾಮಕಾರಿ ಕ್ಷೇತ್ರಾಧಾರಿತ ಮಾರ್ಗದರ್ಶನಕ್ಕಾಗಿ ಸಂಪನ್ಮೂಲ ವ್ಯಕ್ತಿಗಳ ಗುಂಪನ್ನು ರಚಿಸುವುದು
- ನಿಯಮಿತವಾದ ಪೀಳಿಗೆಯ ಸಮುದಾಯಾಧಾರಿತ ದತ್ತಾಂಶ ದೊರಕಿಸುವುದು
- ಸಾಧನಾ ಪರಿಕ್ಷೆ ಮತ್ತು ಮೌಲ್ಯಮಾಪನ ಅಧ್ಯಯನ ನಡೆಸುವುದು
- ಸಂಶೋಧನಾ ಚಟುವಟಿಕೆ ನಡೆಸುವುದು

- ಅತಿ ಕಡಿಮೆ ಹೆಣ್ಣು ಮಕ್ಕಳ ಸಾಕ್ಷರತೆ ಇರುವ ಜಿಲ್ಲೆಗಳಿಗೆ ಮತ್ತು ಪರಿಶಿಷ್ಟ ವರ್ಗ, ಪಂಗಡ ಮತ್ತು ಹೆಣ್ಣು ಮಕ್ಕಳ ಶಿಕ್ಷಣದ ಮಾರ್ಗದರ್ಶನಕ್ಕಾಗಿ ವಿಶೇಷ ತಂಡ ರಚಿಸುವುದು .
- ಶೈಕ್ಷಣಿಕ ನಿರ್ವಹಣೆ ಮಾಹಿತಿ ವ್ಯವಸ್ಥೆಯ ವೆಚ್ಚವನ್ನು ಭರಿಸುವುದು
- ಅನಿಶ್ಚಿತ ವೆಚ್ಚಗಳಾದ ಚಾರ್ಟ್, ಪೋಸ್ಟರ್, ಲೇಖನ ಸಾಮಗ್ರಿ, ಮುಂತಾದವುಗಳ ವೆಚ್ಚ ಭರಿಸುವುದು.
- ಸಮಂಜಸ ಅಧ್ಯಯನ ಹಮ್ಮಿಕೊಳ್ಳುವುದು

v) ಶಾಲಾ ಅನುದಾನ : ಈ ಯೋಜನೆಯಡಿಯಲ್ಲಿ ೨೦೦೦ ರೂಪಾಯಿಗಳನ್ನು ಪ್ರತಿ ಶಾಲೆಗೆ ನೀಡಲಾಗಿತ್ತು. ಈ ಶಾಲಾ ಅನುದಾನದಲ್ಲಿ ೧೦೦೦ ರೂಪಾಯಿಗಳನ್ನು ಗ್ರಂಥಾಲಯ ಸುಧಾರಣೆಗೆ ಬಳಸಲಾಗುವುದು. ಉಳಿದ ಹಣವನ್ನು ಶಾಲೆಯಲ್ಲಿ ಕಾರ್ಯನಿರ್ವಹಿಸದ ಪರಿಕರಗಳನ್ನು ನಿರ್ವಹಣೆ ಮಾಡಲು, ಶಾಲೆಯನ್ನು ಸುಂದರಗೊಳಿಸಲು, ಮೇಜು ಖುರ್ಚಿಗಳನ್ನು ಮತ್ತು ಸಂಗೀತ ಪರಿಕರಗಳನ್ನು ರಿಪೇರಿಮಾಡಿಸಲು ಮತ್ತು ಶಾಲಾ ಪರಿಸರವನ್ನು ಅಭಿವೃದ್ದಿಗೊಳಿಸಲು ಬಳಶಬಹುದು.

vi) ಶಿಕ್ಷಕರ ಅನುದಾನ: ತರಗತಿ ಬೋಧನೆಯನ್ನು ಸುಧಾರಿಸಲು ಮತ್ತು ಬೋಧನಾ ಸಿದ್ಧತೆಗಾಗಿ ಪ್ರತಿ ಶಿಕ್ಷಕರಿಗೂ ೫೦೦ ರೂ ಅನುದಾನ ನೀಡಲಾಗುತ್ತಿದೆ. ಶಿಕ್ಷಕರು ತರಗತಿ ಬೋಧನೆಯನ್ನು ಪರಿಣಾಮಕಾರಿಯಾಗಿಸುವಂತಹ ಶಿಕ್ಷಕ ಕಲಿಕಾ ಸಾಮಗ್ರಿಗಳನ್ನು ತಯಾರಿಸಲು ಹಾಗು ಕೊಂಡುಕೊಳ್ಳಲು ಈ ಅನುದಾನವನ್ನು ಬಳಸಿಕೊಳ್ಳಬಹುದು.

vii) ಶಿಕ್ಷಕರ ತರಬೇತಿ : ಎಲ್ಲಾ ಮಕ್ಕಳಿಗೂ ಗುಣಮಟ್ಟದ ಶಿಕ್ಷಣ ದೊರಕಿಸಿ ಕೊಡುವುದು ಸರ್ವ ಶಿಕ್ಷಣ ಅಭಿಯಾನದ ಗುರಿಯಾಗಿದೆ. ಬೋಧನಶಾಸ್ತ್ರದ ವಿಷಯ ಉನ್ನತೀಕರಣ ಹಾಗು ಸಾಂದರ್ಭಿಕ ಅಂಶಗಳ ಮೇಲೆ ನಿರಂತರ ಶಿಕ್ಷಕ ತರಬೇತಿಯು ಸರ್ವ ಶಿಕ್ಷಣ ಅಭಿಯಾನದ ಪ್ರಮುಖ ಉಪಕ್ರಮವಾಗಿದೆ. ಶಿಕ್ಷಕರ ಸಾಮರ್ಥ್ಯ ಅಭಿವೃದ್ದಿಗೊಳಿಸುವುದು ಸೇವಾ ನಿರತ ಶಿಕ್ಷಕರ ತರಬೇಥಿಯ ಪ್ರಮುಖ ಉದ್ದೇಶವಾಗಿದೆ, ಇದರಿಂದ ಶಿಕ್ಷಕರು ಮಗುವಿನ ಕಲಿಕೆಯನ್ನು ಸುಗಮಗೊಳಿಸಬಹುದು. ಶಿಕ್ಷಕರಿಗೆ ತರಬೇತಿ ನೀಡುವ ಸಂಪನ್ಮೂಲ ತರಬೇತುದಾರರನ್ನು ಪ್ರಾಥಮಿಕ ಶಿಕ್ಷಣದ ಸಾರ್ವತ್ರಿಕರಣದ ವಿವಿಧ ಅಂಶಗಳ ಮೇಲೇ ತರಬೇತುಗೊಳಿಸಲು ಅವಕಾಶಗಳಿವೆ, ಸೇವಾ ನಿರತ ಶಿಕ್ಷಕರ ಶಿಕ್ಷಣವು ಶಿಕ್ಷಕರು ಹೊಸ ಹೊಸ ಪ್ರಯೋಗಗಳಿಗೆ ತಮ್ಮನ್ನು ಉನ್ನತೀಕರಿಸಿಕೊಳ್ಳು ಸಹಾಯಕವಾಗುತ್ತದೆ. ತರಬೇತಿಯನ್ನು ಸುದಾರಿಸಲು ಹಲವು ಕಾರ್ಯತಂತ್ರಗಳನ್ನು ಬಳಸಬಹುದು, ಈ ಪ್ರಮುಖ ಕಾರ್ಯತಂತ್ರಗಳೆಂದರೆ:

1. ಶಿಕ್ಷಕರಿಗೆ ತರಬೇತಿ ಮತ್ತು ಮರುತರಬೇತಿ
2. ಹೊಸ ಪಠ್ಯಕ್ರಮ ಮತ್ತು ಪಠ್ಯಪುಸ್ತಕದ ಮೇಲೇ ಪರಿಣಿತಿ ಹೊಂದುವ ತರಬೇತಿ
3. ರಾಷ್ಟ್ರೀಯ ಪಠ್ಯಕ್ರಮ ಚೌಕಟ್ಟಿನಲ್ಲಿ ಪರಿಣಿತಿ ಹೊಂದುವ ತರಬೇತಿ
4. ಪರೀಕ್ಷಾ ನಿಯಮಗಳು
5. ತರಗತಿ ವ್ಯವಸ್ಥೆ ಮತ್ತು ಮೌಲ್ಯಮಾಪನ ಮತ್ತು ಪರಿಣಾಮದ ಬಗ್ಗೆ ತರಬೇತಿ
6. ತಾರ್ಕಿಕ ಮತ್ತು ತಾರ್ಕಿಕವಲ್ಲದ ವಿಷಯಗಳ ಸುಧಾರಣೆ
7. ವಿಶೇಷ ಅಗತ್ಯವುಳ್ಳ ಮಕ್ಕಳ ಸಮಗ್ರ ಶಿಕ್ಷಣದ ಮೇಲೆ ಶಿಕ್ಷಕರಿಗೆ ತರಬೇತಿ
8. ಗುಣಮಟ್ಟದ ಶಿಕ್ಷಣದ ಅಂಶಗಳ ಅನುಷ್ಠಾನ ಮತ್ತು ಯೋಜನೆ
9. ಎಲ್ಲಾ ಮಟ್ಟದಲ್ಲಿಯೂ ಸಂಪನ್ಮೂಲ ಗುಂಪಗಳ ಬಲವರ್ಧನೆ (ಪ್ರತೀ ವಿಷಯಕ್ಕೆ ಪ್ರತ್ಯೇಕ ಸಂಪನ್ಮೂಲ ಗುಂಪು- ಪ್ರತೀ ಜಿಲ್ಲೆಗೂ ೩೦೦-೩೫೦ ಸಂಪನ್ಮೂಲ ವ್ಯಕ್ತಿಗಳು) ಅನುರಸಣೆ ಚಟುವಟಿಕೆಗಳು, ನಿರಂತರ ಬೆಂಬಲ ಮತ್ತು ಪರಿಶೀಲನಾ ಸಭೆಗಳನ್ನು ಖಚಿತಪಡಿಸುವುದು. ಡಯಟ್ ಗಳು ತರಬೇತಿಗ ಅವಶ್ಯಕತೆಗಳನ್ನು ಗುರುತಿಸಿ ತರಬೇತಿ ಮಾಡ್ಯೂಲ್‌ಗಳನ್ನು ರಚಿಸಬೇಕು. ಈ ಪ್ರಕ್ರಿಯೆಯು ತರಬೇತಿಯ ಗುಣಮಟ್ಟವನ್ನು ಹೆಚ್ಚಿಸಲು ಸಹಾಯಕವಾಗುತ್ತದೆ.

ನಿರಂತರ ಶಿಕ್ಷಕರ ತರಬೇತಿಯು ಶೈಕ್ಷಣಿಕ ವಿಧಾನಗಳನ್ನು, ಮಗುವಿನ ಮಾನಸಿಕ ಸ್ಥಿತಿ, ಮಾಡುತ್ತಾ ಕಲಿಯುವುದು, ಮೌಲ್ಯಮಾಪನ ವಿಧಾನಗಳು ಮತ್ತು ಪ್ರಾಥಮಿಕ ಶಿಕ್ಷಕರಿಗೆ ನೀಡುವ ಪೋಷಕ ತರಬೇತಿಗಳನ್ನು ಒಳಗೊಂಡಿರುತ್ತದೆ. ಇಃ) ದೂರ ಶಿಕ್ಷಣ : ದೂರ ಶಿಕ್ಷಣ ಕಾರ್ಯಕ್ರಮವು ಸರ್ವ ಶಿಕ್ಷಣ ಅಭಿಯಾನದ ರಾಷ್ಟ್ರೀಯ ಅಂಶವಾಗಿದ್ದು ಮಾನವ ಸಂಪನ್ಮೂಲ ಸಚಿವಾಲಯದಿಂದ ಪ್ರಾಯೋಜಿತಗೊಳ್ಳುತ್ತದೆ. ದೂರ ಶಿಕ್ಷಣ ಕಾರ್ಯಕ್ರಮವನ್ನು ರಾಜ್ಯಗಳಲ್ಲಿ ಮತ್ತು ಕೇಂದ್ರಾಡಳಿತ ಪ್ರದೇಶಗಳ ಸಹಯೋಜಿತತೆಯಲ್ಲಿ ಅನುಷ್ಠಾನಗೊಳಿಸುವುದು ಇಂದಿರಾಗಾಂಧಿ ನ್ಯಾಷನಲ್ ಓಪನ್ ಯೂನಿವರ್ಸಿಟಿಯ (IGNOU) ಜವಾಬ್ದಾರಿಯಾಗಿರುತ್ತದೆ. ಸರ್ವ ಶಿಕ್ಷಣ ಅಭಿಯಾನದ ದೂರ ಶಿಕ್ಷಣ ಕಾರ್ಯಕ್ರಮವು ಪ್ರಾಥಮಿಕ ಶಿಕ್ಷಣದಲ್ಲಿ ಭಾಗವಹಿಸುವ ಪ್ರತಿಯೊಬ್ಬ ವ್ಯಕ್ತಿಗಳ ಮತ್ತು ಶಿಕ್ಷಕರನ್ನು ಅಭಿವೃದ್ಧಿಗೊಳಿಸುವಲ್ಲಿ ಪ್ರಮುಖ ಪಾತ್ರವಹಿಸುತ್ತದೆ. ಇದು ಕಲಿಕಾ ಸಾಮಗ್ರಿಗಳು, ಆಡಿಯೋ ವೀಡಿಯೋ ಕಾರ್ಯಕ್ರಮ, ರೇಡಿಯೋ ಪ್ರಸಾರ, ಟೆಲಿಕಾನ್ಫರೆನ್ಸ್ ನಂತಹ ಬಹು ಮಾಧ್ಯಮ ಪ್ಯಾಕೇಜ್‌ಗಳ ಬಳಕೆಯ ಮೂಲಕ ಮುಖಾಮುಖಿ ತರಬೇತಿಯನ್ನು ದೊರಕಿಸುತ್ತದೆ. ದೂರ ಶಿಕ್ಷಣ ಮಾದರಿಯ

ತರಬೇತಿಯು ಬಹಳಷ್ಟು ಜನರನ್ನು ತಲುಪುವುದಷ್ಟೇ ಅಲ್ಲದೇ ತರಬೇತಿಯಲ್ಲಿ ಏಕತೆಯನ್ನು ಮೂಡಿಸುತ್ತದೆ ಮತ್ತು ಪ್ರಸರಣದ ನಷ್ಟವನ್ನು ಕಡಿಮೆ ಮಾಡುತ್ತದೆ. ಇದು ಸಾಮನ್ಯವಾಗಿ ಮುಖಾಮುಖಿ ಮಾದರಿಯ ತರಬೇತಿಗಳಲ್ಲಿ ನೋಡಬಹುದಾಗಿರುತ್ತದೆ.

| |
|---|
| ಕಾರ್ಯಯೋಜನೆ –೧ : ಸರ್ವಶಿಕ್ಷಣ ಅಭಿಯಾನವನ್ನು ಬೆಂಬಲಿಸುವ ಮೂರು ಕಾರ್ಯಕ್ರಮಗಳನ್ನು ಹೆಸರಿಸಿ . ಪ್ರಕರಣ ಅಧ್ಯಯನ : ಸರ್ವ ಶಿಕ್ಷಣ ಅಭಿಯಾನ ಕೇಂದ್ರಗಳಿಗೆ ಭೇಟಿ ನೀಡಿ ಮತ್ತು ಅಲ್ಲಿನ ಕಾರ್ಯಗಳನ್ನು ಅಧ್ಯಯನ ಮಾಡಿ. |

## 6.7 ಮಧ್ಯಾಹ್ನದ ಉಪಹಾರ ಯೋಜನೆ ಮತ್ತು ಸರ್ವಶಿಕ್ಷಣ ಅಭಿಯಾನದಲ್ಲಿ ಇದರ ಕೊಡುಗೆ

ಮನುಷ್ಯನ ಊಟ, ವಸತಿ ಮತ್ತು ಬಟ್ಟೆಯಂತಹ ಸಾಮಾನ್ಯ ಅವಶ್ಯಕತೆಗಳನ್ನು ಈಡೇರಿಸುವಲ್ಲಿ ಶಿಕ್ಷಣವು ಪ್ರಮುಖ ಹಾಘು ಮಹತ್ತರವಾದ ಪಾತ್ರವನ್ನು ವಹಿಸುತ್ತದೆ. ಮಗುವು ಮಾನಸಿಕವಾಗಿ, ದೈಹಿಕವಾಗಿ ಮತ್ತು ಆಧ್ಯಾತ್ಮಿಕವಾಗಿ ಗುಣಮಟ್ಟದ ಜೀವನವನ್ನು ನಡೆಸುವಂತೆ ಸಿದ್ಧಗೊಳಿಸುವುದೇ ಶಿಕ್ಷಣದ ಪ್ರಮುಖ ಗುರಿಯಾಗಿದೆ. ಜೀವನದಲ್ಲಿನ ಸವಾಲುಗಳನ್ನು ಎದುರಿಸುವಂತಹ ಸಾಮರ್ಥ್ಯ ಮತ್ತ ಕೌಶಲವನ್ನು ಮಕ್ಕಳಲ್ಲಿ ಉಂಟುಮಾಡುವ ಪ್ರಕ್ರಿಯೆಯೇ ಶಿಕ್ಷಣವಾಗಿದೆ. ಎಲ್ಲರಿಗೂ ಶಿಕ್ಷಣ ಎಂಬ ಗುರಿಯನ್ನು ಸಾಧಿಸಲು ನಾಲ್ಯು ಪ್ರಮುಖ ಅಂಶಗಳನ್ನು ಗುರುತಿಸಲಾಗಿದೆ. ಅವುಗಳೆಂದರೆ, ಶಿಕ್ಷಣದ ಲಭ್ಯತೆ, ಮಕ್ಕಳ ದಾಖಲಾತಿ, ದಾಖಲಾದ ಮಕ್ಕಳ ಹಾಜರಾತಿ ಮತ್ತು ಸಾಧನೆ. ಮಧ್ಯಾಹ್ನದ ಉಪಾಹಾರ ಯೋಜನೆಯು ಈ ನಾಲ್ಕು ಅಂಶಗಳನ್ನು ಸಾಧಿಸಲು ಇರುವ ಶ್ರಮವಾಗಿದೆ.

ಪ್ರಾಥಮಿಕ ಶಿಕ್ಷಣ ವಲಯದಲ್ಲಿ ಅವಕಾಶವಂಚಿತ ಜನರನ್ನು ತಲುಪಲು ಸರ್ಕಾರದಿಂದ ಹಲವಾರು ಯೋಜನೆಗಳು ಅನುಷ್ಠಾನಗೊಂಡಿವೆ. ಸರ್ವ ಶಿಕ್ಷಣ ಅಭಿಯಾನದಂತಹ ಸರ್ಕಾರದ ಪ್ರಮುಖ ಕಾರ್ಯಕ್ರಮಗಳ ಮೂಲಕ ಪ್ರಾಥಮಿಕ ಶಿಕ್ಷಣದ ಲಭ್ಯತೆಯು ಸಾರ್ವತ್ರಿಕವಾಗಿದೆ. ಹೀಗಿದ್ದರೂ ಸಹ ಆರ್ಥಿಕ ಸ್ಥಿತಿಗತಿಗಳ ಕಾರಣದಿಂದಾಗಿ ಕೆಲವು ಪೋಷಕರು ಮಕ್ಕಳನ್ನು ಶಾಲೆಗೆ ಕಳುಹಿಸದಿರುವ ಕಾರಣದಿಂದಾಗಿಮಕೆಲವು ಮಕ್ಕಳು ಇನ್ನೂ ಸಹ ಪ್ರಾಥಮಿಕ ಶಿಕ್ಷಣದಿಂದ ಹೊರಗುಳಿದಿದ್ದಾರೆ. ಈ ಪೋಷಕರಿಗೆ ಮಕ್ಕಳನ್ನು ಶಾಲೆಗೆ ಕಳುಹಿಸುವು ಹಣಕಾಸಿನ ಹೊರೆಯಾಗುತ್ತದೆ ಎಂಬುದಷ್ಟೇ ಅಲ್ಲದೇ ಈ ಮಕ್ಕಳು ಬಾಲಕಾರ್ಮಿಕರಾಗಿ ದುಡಿದು ತರುವ ಆದಾಯಕ್ಕೆ ಅಡಚಣೆಯಾಗುತ್ತದೆ ಎಂಬಚಿಂತೆಯಾಗಿರುತ್ತದೆ. ಆರ್ಥಿಕವಾಗಿ ಹಿಂದುಳಿದ ಪೋಷಕರ ಈ ಮನೋಭಾವ

ಹೀಗಿರುವಾಗ ಮಧ್ಯಾಹ್ನದ ಉಪಹಾರ ಯೋಜನೆಯ ಮೂಲಕ ಮತ್ತು ಪೌಷ್ಟಿಕ ಆಹಾರ ದೊರಕಿಸುವ ಮೂಲಕ ಈ ಪೋಷಕರನ್ನು ಪ್ರೋತ್ಸಾಹಿಸಲಾಗುತ್ತಿದೆ.
ಭಾರತ ಸರ್ಕಾರವು ೧೯೯೫ ರ ಅಕ್ಟೋಬರ್ ೨ ರಂದು "ಪ್ರಾಥಮಿಕ ಶಿಕ್ಷಣಕ್ಕೆ ಪೌಷ್ಟಿಕಾಂಶ ಬೆಂಬಲದ ರಾಷ್ಟ್ರೀಯ ಕಾರ್ಯಕ್ರಮ " ಅಥವಾ ಮಧ್ಯಾಹ್ನದ ಉಪಹಾರ ಕಾರ್ಯಕ್ರಮ ಯೋಜನೆಯನ್ನು ಅನುಷ್ಠಾನಗೊಳಿಸಿತು.
ಈ ಯೋಜನೆಯಡಿಯಲ್ಲಿ, ಶೇ ೮೦ ರಷ್ಟು ಹಾಜರಾತಿಗನುಗುಣವಾಗಿ ಪ್ರತಿಯೊಂದು ಮಗುವಿಗೆ ೩ ಕೆ.ಜಿ ಗೋಧಿಯನ್ನು ನೀಡಲಾಗುತ್ತದೆ ( ವರ್ಷದಲ್ಲಿ ೧೦ ತಿಂಗಳು). ಇದರ ಜೊತೆಗೆ, ೨೦೦೧ ರ ನವೆಂಬರ್ ೨೮ ರಂದು ಅಪರ ನ್ಯಾಯಾಲವು ಮತ್ತು ಸುಪ್ರಿಂ ಕೋರ್ಟ್ ನ್ಯಾಯಾಲಯವು ರಾಜ್ಯ ಸರ್ಕಾರಗಳಿಗೆ ಹಾಗು ಕೇಂದ್ರಾಡಳಿತ ಪ್ರದೇಶಗಳಿಗೆ ಮಧ್ಯಾಹ್ನದ ಉಪಹಾರ ಯೋಜನೆಯನ್ನು ಎಲ್ಲಾ ಸರ್ಕಾರಿ ಶಾಲೆಗಳಿಗೂ ಹಾಗು ಸರ್ಕಾರಿ ಅನುದಾನಿತ ಪ್ರಾಥಮಿಕ ಶಾಲೆಗಳಿಗೂ ವಿಸ್ತರಿಸುವಂತೆ ಸೂಚಿಸಿತು ಹಾಗು ಕನಿಷ್ಟ ೩೦೦ ಕ್ಯಾಲೋರಿಯ ಪೌಷ್ಟಿಕಾಂಶ ಮತ್ತು ೮-೧೨ ಗ್ರಾಂ ನಷ್ಟು ಪ್ರೋಟೀನ್ ನ್ನು ಪ್ರತಿದಿನ ಕನಿಷ್ಟ ೨೦೦ ದಿನಗಳು ಮಧ್ಯಾಹ್ನದ ಉಪಹಾರ ಯೋಜನೆಯಲ್ಲಿ ಸೇರಿಸಬೇಕೆಂದು ಆದೇಶಿಸಿತು.
ತಮಿಳುನಾಡಿನ ಮಧ್ಯಾಹ್ನದ ಉಪಹಾರ ಯೋಜನೆಯು ದೇಶದಲ್ಲಿ ಉತ್ತಮವಾದ ಯೋಜನೆಯೆಂದು ಹೆಸರು ಮಾಡಿದೆ. ಡಾ.ಎಂ.ಜಿ. ರಾಮಚಂದ್ರನ್ ರವರು ಈ ಯೋಜನೆಯನ್ನು ೧೦ನೇ ತರಗತಿಯವರೆಗೂ ವಿಸ್ತರಿಸಲು ನಿರ್ಧರಿಸಿತು. ಕಡಿಮೆ ಜನರಿಗೆ ತಿಳಿದಿರುವಂತೆ ಹಾಗು ಕುತೂಹಲಕರ ಇತಿಹಾಸವೆಂದರೆ ಪಾಂಡಿಚೆರಿ ಸರ್ಕಾರವು ಈ ಯೋಜನೆಯನ್ನು ಸುಮಾರು ೧೯೩೦ ರಲ್ಲೇ ಅನುಷ್ಠಾನಗೊಳಿಸಿತ್ತು.
ಕೆ.ಕಾಮರಾಜ್‌ರವರ ಮಧ್ಯಾಹ್ನದ ಉಪಹಾರ ಯೋಜನೆಯ ಆಲೋಚನೆಯು ಬಹಳ ಆಸಕ್ತಿಕರವಾದುದು. ಒಮ್ಮೆ ಕಾಮರಾಜ್ ರವರು ಕೆಲವು ಹುಡುಗರು ಹಸು ಮತ್ತು ಮೇಕೆಗಳನ್ನು ಮೇಯಿಸುತ್ತಿರುವುದನ್ನು ನೋಡುತ್ತಾರೆ, ಅದರಲ್ಲಿ ಒಬ್ಬ ಹುಡುಗನನ್ನು ಕರೆದು "ಶಾಲೆಗೆ ಯಾಕೆ ಹೋಗುತ್ತಿಲ್ಲ ಎಂದು ಕೇಳುತ್ತಾರೆ ". ಅದಕ್ಕೆ ಆ ಹುಡುಗ ತಕ್ಷಣವೇ ಈ ರೀತಿಯಾಗಿ ಪ್ರತಿಕ್ರಯಿಸುತ್ತಾನೆ "ನಾನು ಶಾಲೆಗೆ ಹೋದರೆ ನೀವು ಊಟ ಕೊಡುತ್ತೀರಾ? ನನಗೆ ತಿನ್ನಲು ಇದ್ದರೆ ಮಾತ್ರವೇ ಕಲಿಯಲು ಸಾಧ್ಯ " . ಆ ಹುಡುಗ ಪ್ರತ್ಯುತ್ತರವೇ ಮಧ್ಯಾಹ್ನದ ಉಪಹಾರ ಯೋಜನೆಯ ಎಲ್ಲಾ ಪ್ರಕ್ರಿಯೆಯು ಪ್ರಾರಂಭವಾಗಲು ಕಾರಣವಾಯಿತು.
ಭಾರತದ ಹಲವು ರಾಜ್ಯಗಳು ಈ ಕಾರ್ಯಕ್ರಮವನ್ನು ಹೊಂದಿವೆ ಅದರಲ್ಲಿ ಗುರುತಿಸುವಂತಹ ಕಾರ್ಯಕ್ರಮವೆಂದರೆ ಸುಮಾರು ೧೯೮೦ ರ ಮೊದಲೇ ಪ್ರಾರಂಭಿಸಿದ

ಗುಜರಾತ್ ರಾಜ್ಯದ ಕಾರ್ಯಕ್ರಮವಾಗಿದೆ. ಕೇರಳವು ೧೯೯೫ರಲ್ಲಿ ಬೇಯಿಸಿದ ಆಹಾರವನ್ನು ಶಾಲೆಗಳಲ್ಲಿ ನೀಡಲು ಪ್ರಾರಂಭಿಸಿತು, ನಂತರ ಮಧ್ಯಪ್ರದೇಶ ಮತ್ತು ಒರಿಸ್ಸಾದ ಕೆಲವು ಪ್ರದೇಶಗಳ ಪ್ರಾರಂಬಿಸಿದವು.

೨೦೦೧ ರ ನವೆಂಬರ್ ೨೮ ರಂದು ಸುಪ್ರಿಂ ಕೋರ್ಟ್ ಸರ್ಕಾರಕ್ಕೆ ಎಲ್ಲಾ ಸರ್ಕಾರಿ ಹಾಗು ಅನುದಾನಿತ ಶಾಲೆಗಳ ಎಲ್ಲಾ ಮಕ್ಕಳಿಗೂ ಈ ಯೋಜನೆಯನ್ನು ವಿಸ್ತರಿಸಲು ಹಾಗು ಬೇಯಿಸಿದ ಆಹಾರ ನೀಡಲು ನಿರ್ದೇಶನ ನೀಡಿತು. ಪ್ರಾರಂಭದಲ್ಲಿ ಈ ನಿರ್ದೇಶನವನ್ನು ಬಹಳಷ್ಟು ರಾಜ್ಯಗಳು ವಿರೋದಿಸಿದರಾದರು ೨೦೦೫ ರಷ್ಟರಲ್ಲಿ ಈ ಯೋಜನೆಯು ಬಹುತೇಕ ಸಾರ್ವತ್ರಿಕವಾಯಿತು. ಇತ್ತೀಚೆಗೆ ಭಾರತ ಸರ್ಕಾರವು ಹೊಸದೊಂದು ಮಧ್ಯಾನ್ನದ ಉಪಹಾರ ಯೋಜನೆಯ ವೆಬ್‌ಸೈಟ್‌ನ್ನು ಅನುಷ್ಠಾನಗೊಳಿಸಿತು. ಅದು http://mdm.nic.in

ಪ್ರಾಥಮಿಕ ಶಿಕ್ಷಣಕ್ಕೆ ಪೌಷ್ಠಿಕಾಂಶ ಬೆಂಬಲದ ರಾಷ್ಟ್ರೀಯ ಕಾರ್ಯಕ್ರಮ

ಹೀಗಿದ್ದರೂ ತಮಿಳುನಾಡಿನ ಈ ಕಾರ್ಯಕ್ರಮವು ರಾಜಕೀಯ ಕಾಯ್ದೆಯಾಯಿತು, ಈ ಕಾರ್ಯಕ್ರಮದ ಯಶಸ್ಸು ಈ ಕಾರ್ಯಕ್ರಮವನ್ನು ಇನ್ನಷ್ಟು ಜಪಪ್ರಿಯಗೊಳಿಸಿತು। ಈ ಯಶಸ್ಸು ೧೯೯೫ರಲ್ಲಿ ಅಧ್ಭುತವಾಗಿತ್ತು, ಹೀಗಿರುವಾಗ ಅಂದಿನ ಪ್ರಧಾನ ಮಂತ್ರಿ ಪಿ.ವಿ.ನರಸಿಂಹ ರಾವ್ ರವರು ಈ ಕಾರ್ಯಕ್ರಮದ ಯಶಸ್ಸನ್ನು ನೋಡಿ ಈ ಯೋಜನೆಯನ್ನು ದೇಶದಾದ್ಯಂತ ಅನುಷ್ಠಾನಗೊಳಿಸುವಂತೆ ಸಲಹೆ ನೀಡಿದರು, ಈ ಮೂಲಕ "ಪ್ರಾಥಮಿಕ ಶಿಕ್ಷಣಕ್ಕೆ ಪೌಷ್ಠಿಕಾಂಶ ಬೆಂಬಲದ ರಾಷ್ಟ್ರೀಯ ಕಾರ್ಯಕ್ರಮ" ಪ್ರಾರಂಭವಾಯಿತು.

ಈ ಕಾರ್ಯಕ್ರಮದ ಪ್ರಕಾರ ಭಾರತ ಸರ್ಕಾರವು ಉಚಿತವಾಗಿ ದವಸ ಧಾನ್ಯಗಳನ್ನು ಉಚಿತವಾಗಿ ನೀಡುತ್ತದೆ ಮತ್ತು ರಾಜ್ಯ ಸರ್ಕಾರವು ಇತರೆ ವೆಚ್ಚಗಳನ್ನು, ವೇತನ ಮತ್ತು ಮೂಲಭೂತ ಸೌಕರ್ಯಗಳ ವೆಚ್ಚವನ್ನು ಭರಿಸುತ್ತದೆ. ಬಹಳಷ್ಟು ರಾಜ್ಯ ಸರ್ಕಾರಗಳು ತಮ್ಮ ಪಾಲಿನ ವೆಚ್ಚವನ್ನು ಭರಿಸಲಾಗದೆ, ಕೇಂದ್ರ ಸರ್ಕಾರದ ಧವಸ ಧಾನ್ಯಗಳನ್ನೇ ಪೋಷಕರಿಗೆ ನೀಡುತ್ತಿವೆ. ಈ ವ್ಯವಸ್ಥೆಯನ್ನು "ಒಣ ಪಡಿತರ" ಎಂದು ಕರೆಯುತ್ತೇವೆ. ೨೦೦೧ ರ ನವೆಂಬರ್ ೨೮ ರಂದು ಸುಪ್ರಿಂ ಕೋರ್ಟ್ ಎಲ್ಲಾ ರಾಜ್ಯಗಳು ಒಣಪಡಿತರದ ಬದಲು ಕಡ್ಡಾಯವಾಗಿ ಬೇಯಿಸಿದ ಆಹಾರವನ್ನು ಒದಗಿಸಬೇಕು ಎಂದು ನಿರ್ದೇಶನ ನೀಡಿತು. ಈ ನಿರ್ದೇಶನವು ೨೦೦೨ ರ ಜೂನ್ ನಿಂದಲೇ ಅನುಷ್ಠಾನಗೊಳ್ಳಬೇಕು ಎಂದು ನಿರ್ದೇಶನ ನೀಡಲಾಗಿತ್ತು, ಆದರೆ ಬಹಳಷ್ಟು ರಾಜ್ಯಗಳು ಈ ನಿರ್ದೇಶನವನ್ನು ಪಾಲಿಸಲಿಲ್ಲ. ಆದರೆ ತದನಂತರ ನ್ಯಾಯಾಲಯ, ಮಾಧ್ಯಮಗಳು, ಮತ್ತುಇ ವಿಶೇಷವಾಗಿ

ಆಹಾರ ಚಳುವಳಿಯ ಹಕ್ಕುಗಳ ಒತ್ತಡದಿಂದಾಗಿ ಬಹಳಷ್ಟು ರಾಜ್ಯಗಳು ಬೇಯಿಸಿದ ಆಹಾರ ನೀಡಲು ಪ್ರಾರಂಭಿಸಿದವು.

೨೦೦೪ ರ ಮೇ ನಲ್ಲಿ ಹೊಸ ಸಮ್ಮಿಶ್ರ ಸರ್ಕಾರವು ಕೇಂದ್ರದಲ್ಲಿ ಅಸ್ತಿತ್ವಕ್ಕೆ ಬಂತು. ಹಾಗು ಈ ಸರ್ಕಾರವು ಬೇಯಿಸಿದ ಆಹಾರಕ್ಕೆ ಪೂರ್ಣ ಪ್ರಮಾಣದಲ್ಲಿ ಅನುದಾನವನ್ನು ಕೇಂದ್ರ ಸರ್ಕಾರದಿಂದಲೇ ಭರಿಸುವ ಭರವಸೆ ನೀಡಿತು. ಈ ಭರವಸೆಯು ಸರ್ಕಾರದ "ಸಾಮನ್ಯ ಕನಿಷ್ಟ ಕಾರ್ಯಕ್ರಮ" ದ ಮೂಲಕ ಅನುಷ್ಟಾನಕ್ಕೆ ಬಂದು ಅಡುಗೆಗೆ ಹಾಗು ಸೂಕ್ತ ಮೂಲಭೂತ ಸೌಕರ್ಯಕ್ಕೆ ಅಗತ್ಯವಾದ ಹಣಕಾಸಿನ ಸಹಾಯ ದೊರೆಯಿತು. ಈ ಹೆಚ್ಚುವರಿ ಸಹಾಯದೊಂದಿಗೆ ಈ ಕಾರ್ಯಕ್ರಮವು ಭಾರತದಲ್ಲಿನ ಬಹಳಷ್ಟು ಪ್ರಾಥಮಿಕ ಶಾಲೆಗಳ ಮಕ್ಕಳಿಗೆ ವಿಸ್ತರಣೆಯಾಯಿತು. ೨೦೦೫ರಲ್ಲಿ ಇದು ೧೩೦ ಮಿಲಿಯನ್ ಮಕ್ಕಳನ್ನು ತಲುಪುವ ಗುರಿ ಹೊಂದಿತ್ತು.

## 6.8 ಸರ್ವ ಶಿಕ್ಷಣ ಅಭಿಯಾನ ಮತ್ತು ೨೦೦೯ ರ ಕಡ್ಡಾಯ ಶಿಕ್ಷಣ ಕಾಯ್ದೆಯನ್ನು ಸುಸಂಗತಗೊಳಿಸುವುದು

೨೦೧೦ ಏಪ್ರಿಲ್ ೧ ರಿಂದ ಮಕ್ಕಳ ಉಚಿತ ಮತ್ತು ಕಡ್ಡಾಯ ಶಿಕ್ಷಣದ ಹಕ್ಕಿನ ಕಾಯ್ದೆಯು ಜಾರಿಗೆ ಬಂದಿತು. ೬-೧೪ರ ವಯಸ್ಸಿನ ಪ್ರತಿಯೊಂದು ಮಗುವು ೮ ವರ್ಷಗಳ ಪ್ರಾಥಮಿಕ ಶಿಕ್ಷಣವನ್ನು ತನ್ನ ನೆರೆಹೊರೆಯ ಶಾಲೆಗಳ ಸೂಕ್ತ ತರಗತಿ ಕೋಣೆಗಳ ಮೂಲಕ ಪಡೆದುಕೊಳ್ಳಬೇಕು. ಈ ಉಪಘಟಕದ ನಂತರ ನೀವು ಈ ಕೆಳಕಂಡ ಉದ್ದೇಶಗಳಲ್ಲಿ ಸಾಮರ್ಥ್ಯ ಹೊಂದಿರಬೇಕು.

- ವಿಶೇಷ ಅಗತ್ಯವುಳ್ಳ ಮಕ್ಕಳ ಸಮಗ್ರ ಶಿಕ್ಷಣದೆಡೆಗೆ ವಿಶೇಷ ಶಿಕ್ಷಕರು ಮತ್ತು ಶಾಲೆಯ ಶಿಕ್ಷಕರ ಮನೋಭಾವವನ್ನು ಮೌಲ್ಯಮಾಪನ ಮಾಡುವುದು.
- ವಿಶೇಷ ಅಗತ್ಯವುಳ್ಳ ಮಕ್ಕಳ ಸಮಗ್ರ ಶಿಕ್ಷಣ ವ್ಯವಸ್ಥೆಯಲ್ಲಿ ಮಕ್ಕಳನ್ನು ನಿರ್ವಹಿಸಲು ಅವಶ್ಯಕವಾದ ಸಾಮರ್ಥ್ಯಗಳನ್ನು ಶಾಲಾ ಶಿಕ್ಷಕರಲ್ಲಿ ಹಾಗು ವಿಶೇಷ ಶಿಕ್ಷಕರಲ್ಲಿ ಮೌಲ್ಯಮಾಪನ ಮಾಡುವುದು.
- ವಿಶೇಷ ಅಗತ್ಯವುಳ್ಳ ಮಕ್ಕಳ ಸಮಗ್ರ ಶಿಕ್ಷಣದೆಡೆಗೆ ಸಾಮಾನ್ಯ ಮಕ್ಕಳ ಮನೋಭಾವವನ್ನು ಮೌಲ್ಯಮಾಪನ ಮಾಡುವುದು.
- ವಿಶೇಷ ಅಗತ್ಯವುಳ್ಳ ಮಕ್ಕಳ ಸಮಗ್ರ ಶಿಕ್ಷಣ ವ್ಯವಸ್ಥೆಯಲ್ಲಿ ಮಕ್ಕಳನ್ನು ನಿರ್ವಹಿಸಲು ಶಾಲಾ ಶಿಕ್ಷಕರು ಮತ್ತು ವಿಶೇಷ ಶಿಕ್ಷಕರು ಹೊಂದಿರಬೇಕಾದ ಅವಶ್ಯಕವಾದ

ಸಾಮರ್ಥ್ಯಗಳು , ಅರಿವು ಮತ್ತು ಮನೋಭಾವಗಳ ನಡುವಿನ ಸಂಬಂಧಗಳನ್ನು ಗುರುತಿಸುವುದು.

- ದೈನಂದಿನ ಜೀವನದ ಸಮಸ್ಯೆಗಳನ್ನು ಬಗೆಹರಿಸಲು ವೈಜ್ಞಾನಿಕ ಮನೋಭಾವಗಳು, ವೈಜ್ಞಾನಿಕ ಮತ್ತು ತಂತ್ರಜ್ಞಾನಾಧಾರಿತ ಸಾಮರ್ಥ್ಯಗಳನ್ನು ಅಭಿವೃದ್ದಿಗೊಳಿಸುವುದು ಮತ್ತು ಸೃಜನಶೀಲತೆಯನ್ನು ಪ್ರೋತ್ಸಾಹಿಸುವುದು.
- ಮಕ್ಕಳ ಶೈಕ್ಷಣಿಕ ಪ್ರಗತಿಯನ್ನು ಸುಧಾರಿಸಲು ಮತ್ತು ಅವರ ಕಲಿಕಾ ನ್ಯೂನತೆಗಳ ಬಗ್ಗೆ ಶಿಕ್ಷಕರಿಗೆ ಮತ್ತು ಪೋಷಕರಿಗೆ ತರಬೇತಿ ಕಾರ್ಯಕ್ರಮಗಳನ್ನು ನಡೆಸುವುದು.
- ಪ್ರಾಥಮಿಕ ಹಂತದ ಶಿಕ್ಷಣದಲ್ಲಿ ಮಕ್ಕಳು ಶಾಲೆಯಿಂದ ಹೊರಗುಳಿಯುವಿಕೆಗೆ ಸಾಮಾಜಿಕ –ಆರ್ಥಿಕ ಕಾರಣಗಳು ಮತ್ತು ಪರಿಣಾಮಗಳನ್ನು ವಿಶ್ಲೇಷಣೆ ಮಾಡುವುದು.
- ಪ್ರಾಥಮಿಕ ಹಂತದಲ್ಲಿನ ಹೆಣ್ಣುಮಕ್ಕಳ ದಾಖಲಾತಿ, ಹಾಜರಾತಿ ಮತ್ತು ಶಾಲೆಯಿಂದ ಹೊರಗುಳಿಯುವಿಕೆಯನ್ನು ಮೌಲ್ಯಮಾಪನ ಮಾಡುವುದು.
- ದಾಖಲಾತಿಯ ಮೇಲೆ ಪರಿಣಾಮ ಬೀರಬಹುದಾದ ಆರ್ಥಿಕ ಮತ್ತು ಜನಸಂಖ್ಯಾ ಅಂಶಗಳನ್ನು ಪರೀಕ್ಷಿಸುವುದು.
- ತರಬೇತಿ ವಿಷಯದಲ್ಲಿ ಸರ್ವ ಶಿಕ್ಷಣ ಅಭಿಯಾನ ಯೋಜನೆಯ ಭೌತಿಕ ಮತ್ತು ಹಣಕಾಸು ಪ್ರಗತಿಯನ್ನು ಪರೀಕ್ಷಿಸುವುದು.

ಪ್ರಾಥಮಿಕ ಮತ್ತು ಉನ್ನತೀಕರಿಸಿದ ಪ್ರಾಥಮಿಕ ಶಾಲೆಗಳ ತೀಕ್ಷ್ಣ ಕೊರತೆಯನ್ನು ಎದುರಿಸಲು ನಿರ್ದಿಷ್ಟ ಅಧಿಕಾರಿಗಳು ಶಿಕ್ಷಣ ಹಕ್ಕು ಕಾಯ್ದೆಯನ್ನು ಹೊಸ ಶೈಕ್ಷಣಿಕ ಅಧಿವೇಶನದಲ್ಲಿ ಅನುಷ್ಠಾನಗೊಳಿಸಲು ಹೇಗೆ ಯೋಜನೆ ಹಮ್ಮಿಕೊಳ್ಳುತ್ತಾರೆ ? ಉಚಿತ ಮತ್ತು ಕಡ್ಡಾಯ ಶಿಕ್ಷಣವು ಸರ್ವಶಿಕ್ಷಣ ಅಭಿಯಾನದ ನಿಯಮಗಳ ಪ್ರಕಾರ ಮಕ್ಕಳಿಗೆ ಖಚಿತವಾಗಿದೆ. ಸರ್ಕಾರದ ನಿಯಮಗಳ ಪ್ರಕಾರ ಒಂದು ಕಿಲೋ ಮೀಟರ್ ವ್ಯಾಪ್ತಿಯಲ್ಲಿನ ೩೦೦ ಜನಸಂಖ್ಯೆಯ ಪ್ರದೇಶದಲ್ಲಿ ಸರ್ಕಾರಿ ಕಿರಿಯ ಪ್ರಾಥಮಿಕ ಶಾಲೆಯಿರಬೇಕು, ಹಾಗೆಯೇ ಪ್ರತೀ ೨ ಕಿಲೋ ಮೀಟರ್ ವ್ಯಾಪ್ತಿಯಲ್ಲಿನ ೮೦೦ ಜನಸಂಖ್ಯೆಯ ಪ್ರದೇಶದಲ್ಲಿ ಉನ್ನತೀಕರಿಸಿದ ಪ್ರಾಥಮಿಕ ಶಾಲೆಗಳು ಇರಬೇಕು.

ಪ್ರಸ್ತುತ, ಶಿಕ್ಷಣ ಇಲಾಖೆಯ ದಾಖಲೆಗಳ ಪ್ರಕಾರ ಜಿಲ್ಲೆಯಲ್ಲಿ ೧೦೩೨ ಪ್ರಾಥಮಿಕ ಶಾಲೆಗಳು ಮತ್ತು ೩೫೨ ಉನ್ನತೀಕರಿಸಿದ ಶಾಲೆಗಳು ಇವೆ. ಇದರ ಜೊತೆಗೆ ಅಂಗೀಕರಿಸಿದ ೭೮೦ ಪ್ರಾಥಮಿಕ ಶಾಲೆಗಳು ಹಾಗು ೫೭೭ ಉನ್ನತೀಕರಿಸಿದ ಪ್ರಾಥಮಿಕ ಶಾಲೆಗಳು ಜಿಲ್ಲೆಯಲ್ಲಿವೆ. ನಾವು ಸಂಖ್ಯೆಗಳನ್ನು ಸೇರಿಸಲು ಬಯಸಿದಲ್ಲಿ ೧೮೧೨

ಪ್ರಾಥಮಿಕ ಶಾಲೆಗಳು ಮತ್ತು ೯೨೯ ಉನ್ನತೀಕರಿಸಿದ ಪ್ರಾಥಮಿಕ ಶಾಲೆಗಳು ಜಿಲ್ಲೆಯಲ್ಲಿವೆ. ಸರ್ವ ಶಿಕ್ಷಣ ಅಭಿಯಾನದ ನಿಯಮಗಳ ಪ್ರಕಾರ ೨೦೦೧ ರ ಜನಗಣತಿ ಪ್ರಕಾರ ಜಿಲ್ಲೆಯ 31,38,671 ಜನಸಂಖ್ಯೆಗೆ ಅನುಗುಣವಾಗಿ ೧೦,೬೪೨ ಪ್ರಾಥಮಿಕ ಶಾಲೆಗಳು ಮತ್ತು ೩,೯೨೩ ಉನ್ನತೀಕರಿಸಿದ ಶಾಲೆಗಳು ಇರಬೇಕು. ಹೀಗಿದ್ದರೂ, ಬಹಳಷ್ಟು ಸಂಖ್ಯೆಯ ಖಾಸಗಿ, ಸರ್ಕಾರೇತರ ಮತ್ತು ಮದರಸಾ ಶಾಲೆಗಳು ಜಿಲ್ಲೆಯಲ್ಲಿವೆ. ೨೦೦೧ ರಲ್ಲಿ ಅನುಷ್ಠಾನಗೊಂಡ ಕೇಂದ್ರ ಸರ್ಕಾರದ ಪ್ರಮುಖ ಕಾರ್ಯಕ್ರಮ ಸರ್ವ ಶಿಕ್ಷಣ ಅಭಿಯಾನವು ನಿರ್ಧಿಷ್ಟ ಸಮಯ ಮಿತಿಯಲ್ಲಿ ಪ್ರಾಥಮಿಕ ಶಿಕ್ಷಣವನ್ನು ಸಾರ್ವತ್ರಿಕರಣಗೊಳಿಸುವುದಾಗಿದೆ. ರಾಜ್ಯ ಸರ್ಕಾರಗಳ ಪಾಲುದಾರಿಕೆಯ ಮೂಲಕ ಈ ಕಾರ್ಯಕ್ರಮವನ್ನು ಇಡೀ ದೇಶದಲ್ಲಿ ಅನುಷ್ಠಾನಗೊಳಿಸಲಾಗಿದೆ. ೬-೧೪ ವಯಸ್ಸಿನ ಎಲ್ಲಾ ಮಕ್ಕಳಿಗೂ ೮ ವರ್ಷದ ಶಾಲಾ ಅವಕಾಶವನ್ನು ಒದಗಿಸುವ ಮತ್ತು ವಿವಿಧ ಕಾರ್ಯತಂತ್ರಗಳ ಮೂಲಕ ಶಾಳೆಯಿಂದ ಹೊರಗುಳಿದ ಮಕ್ಕಳನ್ನು ಮುಖ್ಯವಾಹಿನಿಗೆ ತರುವುದಕ್ಕೆ ಈ ಕಾರ್ಯಕ್ರಮವು ಒತ್ತು ನೀಡುತ್ತದೆ. ಈ ವಯಸ್ಸಿನ ಗುಂಪಿನ ಎಲ್ಲಾ ಮಕ್ಕಳಿಗೂ ೨೦೧೦ ರ ಒಳಗೆ ಉಪಯುಕ್ತವಾದ ಮತ್ತು ಸೂಕ್ತವಾದ ಪ್ರಾಥಮಿಕ ಶಿಕ್ಷಣ ನೀಡುವುದು ಇದರ ಗುರಿಯಾಗಿದೆ.

ಭಾರತ ಸಂವಿಧಾನದ ೮೬ನೇ ವಿಧಿಯು ಶಿಕ್ಷಣವನ್ನು ಮೂಲಭೂತ ಹಕ್ಕು ಎಂದು ಪ್ರತಿಪಾದಿಸಿದೆ ಮತ್ತು ಈಗ ೨೦೧೦ ರ ಏಪ್ರಿಲ್ ೧ ರಿಂದ "ಮಕ್ಕಳ ಉಚಿತ ಮತ್ತು ಕಡ್ಡಾಯ ಶಿಕ್ಷಣ ಹಕ್ಕು ಕಾಯ್ದೆ ೨೦೦೯" ಜಾರಿಗೆ ಬಂದ ನಂತರ ಇದು ಎಲ್ಲಾ ಮಕ್ಕಳು ಶಾಲೆಯಲ್ಲಿರಬೇಕು ಎಂಬ ಆಶಯವನ್ನು ಈಡೇರಿಸಿದೆ.

೬-೧೪ ವಯಸ್ಸಿನ ಕೆಲವು ಮಕ್ಕಳು ಹಲವು ಮಾದರಿಯ ಕೆಲಸದಲ್ಲಿ ತೊಡಗಿದ್ದಾರೆ. ಕಾರ್ಮಿಕ ಇಲಾಖೆಯ ದಾಖಲೆಗಳ ಪ್ರಕಾರ ೫೦೦೦ ಕ್ಕೂ ಹೆಚ್ಚು ಮಕ್ಕಳು ಅಪಾಯಕಾರಿ ಮತ್ತು ಅಪಾಯಕಾರಿಯಲ್ಲದ ಕಾರ್ಖಾನೆಗಳಲ್ಲಿ ಕೆಲಸ ಮಾಡುತ್ತಿದ್ದಾರೆ ಹಾಗು ೧೯೯೬ ಡಿಸೆಂಬರ್ ವೇಳಗೆ ಉತ್ತರಪ್ರದೇಶದ ವಾರಣಾಸಿ, ಚಾಂಡೋಲಿ, ಜೌನ್‌ಪುರ್ ಮತ್ತು ಘಾಜಿಪುರ ಜಿಲ್ಲೆಗಳಲ್ಲಿ ಈ ಮಕ್ಕಳನ್ನು ರಕ್ಷಿಸಲಾಗಿದೆ.

ಕಾರ್ಮಿಕ ಇಲಾಖೆಯ ಹೆಚ್ಚುವರಿ ಆಯುಕ್ತರಾದ ಡಿ.ಕೆ.ಕಾಂಚನ್ ರವರ ಪ್ರಕಾರ ರಾಷ್ಟ್ರೀಯ ಬಾಲ ಕಾರ್ಮಿಕ ಯೋಜನೆ ಅಡಿಯಲ್ಲಿ ಬಾಲ ಕಾರ್ಮಿಕರಿಗಾಗಿ ವಾರಣಾಸಿ ಜಿಲ್ಲೆಯಲ್ಲಿ ೭೦ ವಿಶೇಷ ಶಾಲೆಗಳನ್ನು , ಜೌನ್‌ಪುರ್‌ನಲ್ಲಿ ३೦ ಶಾಲೆಗಳನ್ನು ಮತ್ತು ಘಾಜಿಪುರ್‌ನಲ್ಲಿ ೨೦ ಶಾಲೆಗಳನ್ನು ಸ್ಥಾಪಿಸಲಾಗಿದೆ. ಈ ಪ್ರತೀ ಶಾಲೆಗಳು ೫೦ ಮಕ್ಕಳಿಗೆ ಮೂರು ವರ್ಷದ ವರೆಗೆ ಶಿಕ್ಷಣವನ್ನು ನೀಡುತ್ತಿವೆ.

ರಾಷ್ಟ್ರ ಮಟ್ಟದಲ್ಲಿ, ಆಲ್ ಇಂಡಿಯಾ ಎಜುಕೇಷನ್ ಸರ್ವೇ ಪ್ರಕಾರ ೧೯೦.೫ ಮಿಲಿಯನ್ ಜನಸಂಖ್ಯೆಯಲ್ಲಿನ ೩೮೭೮ ನಗರಗಳಿವೆ . ಈ ನಗರಗಳಲ್ಲಿ ಕನಿಷ್ಟ ೪-೫ ವರ್ಷಗಳ ಶಿಕ್ಷಣ ನೀಡುವ ೭೪,೬೫೬ ಶಾಲೆಗಳಿವೆ. ಇದು ೨೫೦೦ ಜನಸಂಖ್ಯೆಗೆ ಒಂದು ಪ್ರಾಥಮಿಕ ಶಾಲೆ ಇದೆ ಎಂಬುದನ್ನು ಸೂಚಿಸುತ್ತದೆ. ೫ ರಿಂದ ೧೪ ವಯಸ್ಸಿನ ೧೨ ಲಕ್ಷಕ್ಕೂ ಹೆಚ್ಚು ಭಾರತೀಯ ಮಕ್ಕಳು ಕಟ್ಟಡ ನಿರ್ಮಾಣ ಮತ್ತು ಉತ್ಪಾದನಾ ಕಾರ್ಖಾನೆಗಳಂತಹ ಅಪಾಯಕಾರಿ ಕೆಲಸಗಳಲ್ಲಿ ತೊಡಗಿದ್ದಾರೆ.

ಶಿಕ್ಷಣ ಹಕ್ಕು ಕಾಯ್ದೆ ಯು ಸರ್ವ ಶಿಕ್ಷಣ ಅಭಿಯಾನದ ಒಟ್ಟಾರೆ ವಿಧಾನಗಳು ಮತ್ತು ಅನುಷ್ಠಾನ ಕಾರ್ಯತಂತ್ರಗಳಲ್ಲಿ ಪರಿಣಾಮ ಹೊಂದಿದೆ. ಶಿಕ್ಷಣ ಹಕ್ಕು ಕಾಯ್ದೆ ನಿಯಮದಡಿಯಲ್ಲಿ ಸರ್ವ ಶಿಕ್ಷಣ ಅಭಿಯಾನದ ಧ್ಯೇಯ, ಕಾರ್ಯತಂತ್ರ ಮತ್ತು ನಿಯಮಗಳನ್ನು ಸುಸಂಗತಗೊಳಿಸುವುದು ಅವಶ್ಯಕವಾದುದು. ಈ ಸಂದರ್ಭದಲ್ಲಿ, ಸರ್ವಶಿಕ್ಷಣ ಅಭಿಯಾನ ಮತ್ತು ಶಿಕ್ಷಣ ಹಕ್ಕು ಕಾಯ್ದೆ ಗೆ ಸಲಹೆ ನೀಡಲು ಮಾನವ ಸಂಪನ್ಮೂಲ ಅಭಿವೃದ್ಧಿ ಸಚಿವಾಲಯವು ಭಾರತ ಸರ್ಕಾರದ ಮಾಜಿ ಶಿಕ್ಷಣ ಕಾರ್ಯದರ್ಶಿ ಶ್ರೀ ಅನಿಲ್ ಬೋರ್ಡಿಯಾ ರವರ ಅಧ್ಯಕ್ಷತೆಯಲ್ಲಿ ಒಂದು ಸಮಿತಿಯನ್ನು ರಚಿಸಿತು. ಮಾನವ ಸಂಪನ್ಮೂಲ ಅಭಿವೃದ್ಧಿ ಸಚಿವಾಲಯದ ಪರವಾಗಿ ಈ ಸಮಿತಿಯು ನಡಸಿದ ಪ್ರಾರಂಭಿಕ ಸಭೆಗಳಲ್ಲಿನ ಶಿಫಾರಸ್ಸುಗಳಿಗೆ ತನ್ನನ್ನು ಸೀಮಿತಗೊಳಿಸದೇ ಶಿಕ್ಷಣ ಹಕ್ಕು ಕಾಯ್ದೆಯನ್ನು ಅನುಷ್ಟಾನದ ಬಗೆಗೂ ಶಿಫಾರಸ್ಸು ಮಾಡಬೇಕು.

## 6.9 ಉಪ ಸಂಹಾರ

ಘಟಕ ೬ ರಲ್ಲಿನ ಈ ಕೋರ್ಸ್ ಸರ್ವ ಶಿಕ್ಷಣ ಅಭಿಯಾನದಲ್ಲಿ ಈಗಾಗಲೇ ಚರ್ಚಿಸಿರುವಂತೆ ಪ್ರಾಥಮಿಕ ಶಿಕ್ಷಣವನ್ನು ಸಾರ್ವತ್ರಿಕರಣಗೊಳಿಸುವಲ್ಲಿನ ಕಾರ್ಯತಂತ್ರಗಳನ್ನು ವ್ಯಾಖ್ಯಾನಿಸುತ್ತದೆ. ನೀವೇ ನೋಡಿದಂತೆ, ಮೊದಲು ನಾವು ಸರ್ವ ಶಿಕ್ಷಣ ಅಭಿಯಾನದ ಅವಶ್ಯಕ ಲಕ್ಷಣಗಳನ್ನು ಮತ್ತು ಸರ್ವಶಿಕ್ಷಣ ಅಭಿಯಾನದ ಸಂದರ್ಭದಲ್ಲಿ ಈ ಕಾರ್ಯಕ್ರಮದಲ್ಲಿ ನ ಉದ್ದೇಶಗಳನ್ನು ವಿವರಿಸಿದೆವು.ಇದಲ್ಲದೇ ಈ ಘಟಕದಲ್ಲಿ ಸರ್ವ ಶಿಕ್ಷಣ ಅಭಿಯಾನ ಕಾರ್ಯಕ್ರಮದ ವ್ಯಾಪಕ ಕಾರ್ಯತಂತ್ರಗಳನ್ನು ಚರ್ಚಿಸಿದೆವು. ನಾವು ಸರ್ವ ಶಿಕ್ಷಣ ಅಭಿಯಾನದಲ್ಲಿ ಸಾರ್ವಜನಿಕ ಖಾಸಗಿ ಪಾಲುದಾರಿಕೆಯನ್ನು ಮತ್ತು ಯಶಸ್ವೀ ಅನುಷ್ಟಾನದಲ್ಲಿ ಇದರ ಅವಶ್ಯಕತೆಯನ್ನು ಗುರುತಿಸಿದೆವು. ಮುಂದಿನ ಘಟಕವು ಶಾಲಾಭಿವೃದ್ಧಿಯ ಅವಕಾಶಗಳು ಮತ್ತು ಸಂಬಂಧಿತ ಸೌಲಭ್ಯಗಳ ಬಗ್ಗೆ ಚರ್ಚಿಸಲಾಗುವುದು. ೬-೧೪ ವಯಸ್ಸಿನ ಯಾವ ಮಕ್ಕಳು ಸಹ ಶಾಲೆಯಿಂದ ಹೊರಗುಳಿಯಬಾರದು ಮತ್ತು ಎಲ್ಲಾ ಮಕ್ಕಳಿಗೂ ಶಾಲೆ ಲಭ್ಯವಾಗಬೇಕು

ಹಾಗು ಹಾಜರಾತಿ ಹೆಚ್ಚಬೇಕು ಎಂಬುದೇ ಇದರ ಉದ್ದೇಶವಾಗಿದೆ. ಈ ಸನ್ನಿವೇಶದಲ್ಲಿ ಮಧ್ಯಾಹ್ನದ ಉಪಹಾರ ಯೋಜನೆಯ ಕೊಡುಗೆ ಮತ್ತು ಅವಶ್ಯಕತೆಯ ಬಗ್ಗೆ ಚರ್ಚಿಸಲಾಗಿದೆ. ಕೊನೆಯಲ್ಲಿ ಸರ್ವ ಶಿಕ್ಷಣ ಅಭಿಯಾನ ಮತ್ತು ಶಿಕ್ಷಣ ಹಕ್ಕು ಕಾಯ್ದೆ ೨೦೦೯ ರ ಬಗ್ಗೆಯೂ ಚರ್ಚಿಸಲಾಯಿತು.

**6.10 ಓದಲು ಸಲಹೆಗಳು ಮತ್ತು ಆಕರಗಳು**

Bhumika : A Hand Book on Roles and Responsibilities of Head Masters/Head Teachers under SSA. Bihar. A Guide Book for Early Child Care

www.educationforallinindia.com/

www.indianexpress.com/news/lesson-learnt-mp-monitors-ss

depssa.ignou.ac.in/wiki/index.php/Publications

**6.11 ಘಟಕದ ಕೊನೆಯಲ್ಲಿನ ಅಭ್ಯಾಸಗಳು**

1. ಸರ್ವ ಶಿಕ್ಷಣ ಅಭಿಯಾನದ ಮೂಲ ಲಕ್ಷಣಗಳಾವುವು ?
2. ನಿಮ್ಮ ಪ್ರದೇಶದಲ್ಲಿನ ೬ ರಿಂದ ೧೪ ವರ್ಷದ ವಯಸ್ಸಿನ ಮಕ್ಕಳು ಸರ್ವ ಶಿಕ್ಷಣ ಅಭಿಯಾನದಡಿಯಲ್ಲಿ ಶಿಕ್ಷಣ ಪಡೆಯುತ್ತಿರುವ ಬಗ್ಗೆ ವರದಿ ತಯಾರಿಸಿ.

# ಘಟಕ 7 : ಪ್ರಾಥಮಿಕ ಶಿಕ್ಷಣ ಸಾರ್ವತ್ರೀಕರಣದ (UEE) ಯೋಜನೆ ಮತ್ತು ನಿರ್ವಹಣೆ

**ರಚನೆ :**

7.0 ಪರಿಚಯ
7.1 ಕಲಿಕೆಯ ಉದ್ದೇಶಗಳು
7.2 ಪ್ರಾಥಮಿಕ ಶಿಕ್ಷಣದ ನಿರ್ವಹಣೆಯ ವಿಕೇಂದ್ರೀಕರಣ
7.2.1 ಕೇಂದ್ರೀಕೃತ ಮತ್ತು ವಿಕೇಂದ್ರೀಕೃತ ವ್ಯವಸ್ಥೆ
7.2.2 ವಿಕೇಂದ್ರೀಕರಣದೊಂದಿಗೆ ಭಾರತದ ಅನುಭವ
7.3 ಸೂಕ್ಷ್ಮ ಮಟ್ಟದ ಯೋಜನೆ
7.3.1 ಯೋಜನೆ ಎಂದರೇನು ?
7.3.2 ಸೂಕ್ಷ್ಮ ಯೋಜನೆ
7.3.3 ಸೂಕ್ಷ್ಮ ಯೋಜನೆ ಪ್ರಕ್ರಿಯೆಯಲ್ಲಿ ಸಮುದಾಯವನ್ನು ಒಳಗೊಳ್ಳುವ ಕ್ರಮಗಳು
7.3.4 ಡಿಇಒ, ಡಿಆರ್‌ಸಿ (ಡಯಟ್), ಬಿಇಒ, ಬಿಆರ್‌ಸಿ ಮತ್ತು ಸಿಆರ್‌ಸಿ – ಇವರ ಪಾತ್ರ ಮತ್ತು ಜವಾಬ್ದಾರಿಗಳು
7.3.4.1 ಶಾಲೆಗಳ ಉಸ್ತುವಾರಿ ಮತ್ತು ಮೇಲ್ವಿಚಾರಣೆ
7.4 ಪ್ರಾಥಮಿಕ ಶಿಕ್ಷಣದಲ್ಲಿ ನಿರ್ವಹಣೆ ಮತ್ತು ಆಡಳಿತದ ಸಮಸ್ಯೆಗಳು
7.4.1 ಆಡಳಿತಕ್ಕೆ ಸಂಬಂಧಿಸಿದ ಸಮಸ್ಯೆಗಳು
7.4.2 ಶಿಕ್ಷಕರ ನೇಮಕಾತಿ ಮತ್ತು ನಿರ್ವಹಣೆ
7.4.3 ಶಾಲಾ ನಿರ್ವಹಣಾ ಸಮಿತಿಯ ಪಾತ್ರ
7.5 ಶಾಲಾ ನಿರ್ವಹಣೆ ಮತ್ತು ಆರ್‌ಟಿಇ ಕಾಯ್ದೆ 2009 (RTE Act 2009)
7.6 ಪರಿಣಾಮಕಾರಿ ನಿರ್ವಹಣೆ ಮತ್ತು ಸಾಮರ್ಥ್ಯಾಭಿವೃದ್ಧಿಗಾಗಿ ಸಂಪರ್ಕ ವ್ಯವಸ್ಥೆ (Networking)
7.6.1 ಯುಇಇ ನಿರ್ವಹಣೆಗಾಗಿ ಮಾಹಿತಿ ಮತ್ತು ಸಂವಹನ ತಂತ್ರಜ್ಞಾನ
7.6.2 'ಸ್ಕೂಲ್‌ನೆಟ್' (Schoolnet) ಎಂದರೇನು ?
7.6.3 ಸ್ಕೂಲ್‌ನೆಟ್‌ನ ಕಾರ್ಯಗಳು
7.6.4 ಸ್ಕೂಲ್‌ನೆಟ್ ಆಗಿ ಶೈಕ್ಷಣಿಕ ನಿರ್ವಹಣಾ ಮಾಹಿತಿ ವ್ಯವಸ್ಥೆ (Education Management Information System)
7.7 ಹಣಕಾಸು ಒದಗಿಸುವ ಕ್ರಮ
7.8 ಸಾರಾಂಶ
7.9 ಹೆಚ್ಚಿನ ಓದು ಮತ್ತು ಪರಾಮರ್ಶನಕ್ಕಾಗಿ ಸಲಹೆಗಳು
7.10 ಘಟಕಾಂತ್ಯದ ಅಭ್ಯಾಸಗಳು

## 7.0 ಪರಿಚಯ :

ಘಟಕ–5 ಮತ್ತು 6 ರಲ್ಲಿ ಶಿಕ್ಷಣದ ಹಕ್ಕು ಕಾಯ್ದೆ 2009ರ ಪ್ರಕಾರ ಪ್ರಾಥಮಿಕ ಶಿಕ್ಷಣವು ಎಲ್ಲಾ ಮಕ್ಕಳ ಮೂಲಭೂತ ಹಕ್ಕು ಎಂಬುದನ್ನು ನೀವು ಅಧ್ಯಯನ ಮಾಡಿದ್ದೀರಿ. ಈ ಘಟಕದಲ್ಲಿ ಪ್ರಾಥಮಿಕ ಶಿಕ್ಷಣದ ಸಾರ್ವತ್ರೀಕರಣಕ್ಕಾಗಿ ತೆಗೆದುಕೊಂಡ ಕ್ರಮಗಳ ಕುರಿತು ವಿವರಿಸಲಾಗಿದೆ. ಈ ಕಾನೂನಿನ ಅನುಷ್ಠಾನದಲ್ಲಿ ಶಿಕ್ಷಕರಾದ ನೀವು ಮಹತ್ವದ ಪಾತ್ರ ವಹಿಸಬೇಕಾಗಿದೆ. ಶಿಕ್ಷಣದಿಂದ ವಂಚಿತರಾಗಿರುವ ಅಂಗವಿಕಲ, ಎಸ್ಸಿ–ಎಸ್ಟಿ, ಅಲ್ಪಸಂಖ್ಯಾತ, ವಲಸಿಗ ಮತ್ತು ಕೆಲಸ ಮಾಡುವ ಮಕ್ಕಳು ಸೇರಿದಂತೆ ಎಲ್ಲಾ ಮಕ್ಕಳನ್ನು ಶಾಲೆಗೆ ಸೇರಿಸಿಕೊಳ್ಳಲು ಸರ್ಕಾರವು ಎಲ್ಲಾ ಪ್ರಯತ್ನಗಳನ್ನು ಮಾಡುತ್ತಿರುವುದರಿಂದ ಕುರಿತು ನಿಮಗೆ ಈಗಾಗಲೇ ಮನವರಿಕೆಯಾಗಿದೆ. ಮೇಲೆ ಹೇಳಿದ ಹಲವು ಮಕ್ಕಳು ಶಾಲೆಗೆ ದಾಖಲೇ ಆಗಿಲ್ಲ ಅಥವಾ ವಿವಿಧ ಕಾರಣಗಳಿಂದ ಶಾಲೆ ಬಿಟ್ಟವರಾಗಿದ್ದಾರೆ.

ಘಟಕ–4 ಮತ್ತು 5 ರಲ್ಲಿ ಚರ್ಚಿಸಿದಂತೆ, ಕಾನೂನನ್ನು ಜಾರಿಗೆ ತರಲು ಸರ್ಕಾರವು ಎಲ್ಲಾ ಮಕ್ಕಳಿಗೂ ಶಿಕ್ಷಣ ಸಿಗುವಂತೆ ಮಾಡಲು ವಿಸ್ತೃತವಾದ ಕಾರ್ಯಕ್ರಮವನ್ನು ತಯಾರಿಸಿದೆ. ಈ ಘಟಕದಲ್ಲಿ ನೀವು ಶಿಕ್ಷಕರಾಗಿ ಮಕ್ಕಳು ಯಾವುದೇ ಪರಿಸ್ಥಿತಿ ಇದ್ದಾಗ್ಯೂ, ಕಾನೂನು ಮತ್ತು ಸರ್ಕಾರದ ಸಂಸ್ಥೆಗಳನ್ನು ಹೇಗೆ ಬಳಸಿಕೊಂಡು ಎಲ್ಲಾ ಮಕ್ಕಳು ಶಿಕ್ಷಣದ ತಮ್ಮ ಹಕ್ಕನ್ನು ಪಡೆಯಲು ಸಹಾಯ ಮಾಡಬಹುದು ಎಂಬುದನ್ನು ಅಧ್ಯಯನ ಮಾಡುವಿರಿ. ಇದಕ್ಕಾಗಿ ನೀವು ಯುಇಇ (UEE) ಯ ಅನುಷ್ಠಾನವನ್ನು ಹೇಗೆ ರಾಷ್ಟ್ರ, ರಾಜ್ಯ, ಜಿಲ್ಲೆ, ಬ್ಲಾಕ್ (ತಾಲ್ಲೂಕು) ಮತ್ತು ಗ್ರಾಮ ಮಟ್ಟಗಳಲ್ಲಿ ಯೋಜಿಸಲಾಗಿದೆ ಎಂಬುದನ್ನು ಅರ್ಥ ಮಾಡಿಕೊಳ್ಳಬೇಕಾಗಿದೆ. ನಿಮ್ಮ ಶಾಲೆ / ಸಂಸ್ಥೆಗೆ ಸಂಪನ್ಮೂಲಗಳನ್ನು ಪಡೆಯಲು ಯಾರನ್ನು, ಹೇಗೆ ಸಂಪರ್ಕಿಸಬೇಕು ಎಂಬುದನ್ನು ತಿಳಿಯಲು ಇದು ನೆರವಾಗಲಿದೆ. ಈ ತಿಳುವಳಿಕೆ ನಿಮಗೆ ಶಾಲೆ ಮತ್ತು ಸ್ಥಳೀಯ ಸರ್ಕಾರದ ಹಂತದಲ್ಲಿ ಅರ್ಥಪೂರ್ಣ ತೀರ್ಮಾನ ಕೈಗೊಳ್ಳುವ ಪ್ರಕ್ರಿಯೆಯಲ್ಲಿ ಭಾಗವಹಿಸಲು ಸಹಾಯವಾಗಲಿದೆ.

### 7.1 ಕಲಿಕೆಯ ಉದ್ದೇಶಗಳು :

ಈ ಘಟಕವನ್ನು ಅಧ್ಯಯನ ಮಾಡಿದ ನಂತರ, ನೀವು –

- ವಿವಿಧ ಸಂಪನ್ಮೂಲಗಳನ್ನು ಗುರುತಿಸಿ, ಪ್ರಾಥಮಿಕ ಶಿಕ್ಷಣದ ಸಾರ್ವತ್ರೀಕರಣಕ್ಕಾಗಿ ಇರುವ ವಿವಿಧ ಯೋಜನೆಗಳ ಸೌಲಭ್ಯವನ್ನು ಪಡೆಯಲು ಇರುವ ಕ್ರಮಗಳನ್ನು ಚರ್ಚಿಸುವಿರಿ.
- ನಿಮ್ಮ ಶಾಲೆಯ ನೆರೆಹೊರೆಯಿಂದ ಬರುವ ಮಕ್ಕಳು ಎದುರಿಸುತ್ತಿರುವ ಸಮಸ್ಯೆಗಳನ್ನು ವಿಶ್ಲೇಷಿಸುವಿರಿ.

- ನಿಮ್ಮ ಶಾಲೆಯಿರುವ ಸ್ಥಳದಲ್ಲಿ ಲಭ್ಯವಿರುವ ಸಮುದಾಯ ಸಂಪನ್ಮೂಲಗಳು ಮತ್ತು ಪರಿಣಿತರ ಕುರಿತು ಚರ್ಚಿಸುವಿರಿ
- ಮಕ್ಕಳಿಗೆ ಪ್ರಾಥಮಿಕ ಶಿಕ್ಷಣವು ಆಸಕ್ತಿಯುತ, ಆನಂದಭರಿತ ಮತ್ತು ಸೂಕ್ತವಾಗಿರುವಂತೆ ವಿಶೇಷ ಚಟುವಟಿಕೆಗಳನ್ನು ಯೋಜಿಸಿ ಅನುಷ್ಠಾನಗೊಳಿಸುವಿರಿ.
- ನೀವು ಬೋಧಿಸುವಾಗ ಎದುರಾಗುವ ಸವಾಲುಗಳನ್ನು ನಿರ್ವಹಿಸಲು ಪೋಷಕರ, ಶಾಲಾ ಆಡಳಿತ ಮಂಡಳಿಯ, ಸ್ಥಳೀಯ ಸರ್ಕಾರದ, ಸ್ಥಳೀಯ ನಾಯಕರ, ಸಂಪನ್ಮೂಲ ವ್ಯಕ್ತಿಗಳ ಮತ್ತು ಇತರ ಸಂಸ್ಥೆಗಳ ಪಾತ್ರವನ್ನು ವಿವರಿಸುವಿರಿ.

ಪ್ರಾಥಮಿಕ ಶಿಕ್ಷಣದ ಸಾರ್ವತ್ರೀಕರಣಕ್ಕಾಗಿ ಅಳವಡಿಸಿಕೊಂಡಿರುವ ತಂತ್ರಗಳು ಯುಇಇ ಯ ಯೋಜನೆ ಮತ್ತು ನಿರ್ವಹಣೆಗಾಗಿ ಒಂದು ನಿರ್ಧಿಷ್ಟ ಚೌಕವನ್ನು ಒದಗಿಸುತ್ತದೆ. 'ತಂತ್ರ' (strategy) ಎಂದರೆ 'ಗುರಿಯನ್ನು ಸಾಧಿಸುವ ಸಲುವಾಗಿ ಲಭ್ಯವಿರುವ ಸಂಪನ್ಮೂಲಗಳನ್ನು ಪರಿಣಾಮಕಾರಿಯಾಗಿ ಬಳಸುವಂತಾಗಲು ಉತ್ತಮವಾಗಿ ಚಿಂತನೆ ಮಾಡಿ ರೂಪಿಸಿದ ಯೋಜನೆ'.

## 7.2 <u>ಪ್ರಾಥಮಿಕ ಶಿಕ್ಷಣದ ನಿರ್ವಹಣೆಯ ವಿಕೇಂದ್ರೀಕರಣ</u>

### 7.2.1 <u>ಕೇಂದ್ರೀಕೃತ ಮತ್ತು ವಿಕೇಂದ್ರೀಕೃತ ವ್ಯವಸ್ಥೆ :</u>

ಕೇಂದ್ರೀಕೃತ ಶಿಕ್ಷಣ ವ್ಯವಸ್ಥೆಯಲ್ಲಿ ಬಹುತೇಕ ತೀರ್ಮಾನ ಕೈಗೊಳ್ಳುವಿಕೆ, ಉಸ್ತುವಾರಿ ಮತ್ತು ನಿರ್ವಹಣಾ ಕಾರ್ಯಗಳು ರಾಷ್ಟ್ರ ಮತ್ತು ರಾಜ್ಯ ಮಟ್ಟದ ಶಿಕ್ಷಣ ಇಲಾಖೆಗಳ ಕೈಯಲ್ಲಿ ಕೇಂದ್ರೀಕೃತವಾಗಿರುತ್ತವೆ. ಕೇಂದ್ರ ಮತ್ತು ರಾಜ್ಯ ಸರ್ಕಾರಗಳು ಶಾಲಾ ಶಿಕ್ಷಣ ವ್ಯವಸ್ಥೆಯ ಎಲ್ಲಾ ಅಂಶಗಳನ್ನು ನಿಯಂತ್ರಿಸುತ್ತವೆ. ಸೇವಾಪೂರ್ವ ತರಬೇತಿ, ಸೇವಾ ನಿರತ ತರಬೇತಿ, ಸಂಬಳ ನೀಡಿಕೆ, ಪಠ್ಯಕ್ರಮ ತಯಾರಿ, ಕಲಿಕೆಯ ಕನಿಷ್ಠ ಮಟ್ಟಗಳು ಮೊದಲಾದವುಗಳ ಕುರಿತು ನೀತಿ ನಿರೂಪಣೆ ಮಾಡಿ, ತಾವೇ ನಿರ್ವಹಿಸುತ್ತವೆ. ಕೆಲವೊಮ್ಮೆ ಕೆಲವು ಅಂಶಗಳನ್ನು ಸ್ಥಳೀಯವಾಗಿ ನಿರ್ವಹಿಸಬೇಕಾಗಿರುವುದರಿಂದ, ಶಾಲೆಯ ದಿನನಿತ್ಯದ ಚಟುವಟಿಕೆಗಳ ಬಗ್ಗೆ ಶಾಲಾ ಅಧಿಕಾರಿಗಳಿಗೆ ಕೆಲವು ಅಧಿಕಾರಗಳನ್ನು ನೀಡಲಾಗಿದೆ. ಮಕ್ಕಳ ಶೈಕ್ಷಣಿಕ ಅಗತ್ಯಗಳನ್ನು ಪೂರೈಸುವ ನಿಟ್ಟಿನಲ್ಲಿ ಪಠ್ಯವಸ್ತು, ಪಠ್ಯಪುಸ್ತಕ, ಬೋಧನಾ ಮಾಧ್ಯಮ ಬದಲಾವಣೆಗೆ ಶಿಕ್ಷಕ ಅಥವಾ ಶಾಲೆಗೆ ಕಡಿಮೆ ಮಟ್ಟದ ಅಧಿಕಾರವಿದೆ.

ಇದಕ್ಕೆ ವ್ಯತಿರಿಕ್ತವಾಗಿ, ವಿಕೇಂದ್ರೀಕೃತ ವ್ಯವಸ್ಥೆಯಲ್ಲಿ ಪ್ರಾಥಮಿಕ ಶಿಕ್ಷಣದ ಅನೇಕ ಅಂಶಗಳಿಗೆ ಸಂಬಂಧಿಸಿದಂತೆ ಸ್ಥಳೀಯ / ಜಿಲ್ಲೆ / ಗ್ರಾಮ / ಶಾಲೆಯ

ಮಟ್ಟದಲ್ಲಿ ಗಣನೀಯ ಅಧಿಕಾರವಿರುತ್ತದೆ. ಆದರೆ ಕೇಂದ್ರ / ರಾಜ್ಯ / ಜಿಲ್ಲೆಯ ಹಂತಗಳಲ್ಲಿ ಕೆಲವು ಸೀಮಿತ ಅಧಿಕಾರಕ್ಕೆ ಒಳಪಟ್ಟಿರುತ್ತದೆ. ಅನೇಕ ಪ್ರಾಥಮಿಕ ಶಿಕ್ಷಣ ವ್ಯವಸ್ಥೆಗಳು ಕೇಂದ್ರೀಕೃತ ಮತ್ತು ವಿಕೇಂದ್ರೀಕೃತ ಅಂಶಗಳೆರಡನ್ನು ಹೊಂದಿವೆ.

ಈಗಾಗಲೇ ಹಲವು ರಾಜ್ಯ ಸರ್ಕಾರಗಳು ಪ್ರಾಥಮಿಕ ಶಿಕ್ಷಣದ ವಿಕೇಂದ್ರೀಕರಣ ಪ್ರಕ್ರಿಯೆಯನ್ನು ಆರಂಭಿಸಿದೆ ರಾಜ್ಯ ಸರ್ಕಾರಗಳು ಪ್ರಾಥಮಿಕ ಶಿಕ್ಷಣವನ್ನು ಒದಗಿಸುವಲ್ಲಿ ಬದಲಾದ ಈ ಕಾರ್ಯಪ್ರವೃತ್ತಿಯನ್ನು ಜಾರಿಗೆ ತರಲು ಹಾಗೂ ಜವಾಬ್ದಾರಿ, ಹೊಣೆಗಾರಿಕೆಯ ರೂಪುರೇಷೆಯನ್ನು ನೀಡಲು ಹೊಸ ಶಾಸನಗಳನ್ನು ರೂಪಿಸುತ್ತಿವೆ. ಇನ್ನು ಕೆಲವು ರಾಜ್ಯಗಳು ಜಿಲ್ಲಾ ಮಟ್ಟದಲ್ಲಿ ಸಕಾರೇತರ ಸಂಸ್ಥೆಗಳು (ಎನ್.ಜಿ.ಓ) ಮತ್ತು ಸಮುದಾಯದ ಪಾಲ್ಗೊಳ್ಳುವಿಕೆಯ ಸಹಯೋಗವನ್ನು ತಂದಿವೆ. ಒಟ್ಟಾರೆಯಾಗಿ, ಕೇಂದ್ರೀಕೃತದಿಂದ ವಿಕೇಂದ್ರೀಕತ ವ್ಯವಸ್ಥೆಗೆ ಬದಲಾಗುವುದು ಒಂದು ನಿಧಾನ ಪ್ರಕ್ರಯೆ. ದೇಶವು ವಿಕೇಂದ್ರೀಕೃತ ಪ್ರಾಥಮಿಕ ಶಿಕ್ಷಣದ ಗುರಿಯನ್ನು ಸಾಧಿಸುವ ಸಲುವಾಗಿ ತೀರ್ಮಾನ ಕೈಗೊಳ್ಳುವಿಕೆಯನ್ನು ರಾಜ್ಯದಿಂದ ಜಿಲ್ಲೆ, ತಾಲ್ಲೂಕು ಮತ್ತು ಸಮುದಾಯದ ಹಂತಗಳಿಗೆ ನೀಡುವುದಕ್ಕಾಗಿ ನಿರಂತರವಾಗಿ ಶ್ರಮಿಸಲಿದೆ.

ಜಿಲ್ಲಾ ಮತ್ತು ತಾಲ್ಲೂಕು ಹಂತದ ಅಧಿಕಾರಿಗಳಿಗೆ ಹೆಚ್ಚಿನ ಜವಾಬ್ದಾರಿಗಳನ್ನು ವಿಕೇಂದ್ರೀಕರಣವು ನೀಡಿದೆ ಮಕ್ಕಳ ಶೈಕ್ಷಣಿಕ ಅಗತ್ಯಗಳನ್ನು ಪೂರೈಸಲು ಸ್ಥಳೀಯ ಸರ್ಕಾರಗಳು, ಶಾಲೆ ಮತ್ತು ಶಿಕ್ಷಕರಿಗೆ ಹೆಚ್ಚಿನ ಅವಕಾಶ ಮಾಡಿಕೊಡಲಾಗುತ್ತಿದೆ.

ವಿಕೇಂದ್ರೀಕರಣದ ಪ್ರಮುಖ ಉದ್ದೇಶವೆಂದರೆ ಪ್ರಾಥಮಿಕ ಶಿಕ್ಷಣದ ಸಮತೆ ಮತ್ತು ಒಳಗೊಳ್ಳುವಿಕೆಯನ್ನು ಖಾತರಿಪಡಿಸುವುದಾಗಿದೆ. ಸುಧಾರಣೆಯನ್ನು ಸರಿಯಾಗಿ ಯೋಜಿಸಿ, ಅನುಷ್ಠಾನಗೊಳಿಸದಿದ್ದರೆ, ಈ ಉದ್ದೇಶವನ್ನು ಪೂರ್ಣವಾಗಿ ಈಡೇರಿಸಲು ಸಾಧ್ಯವಿಲ್ಲ. ಶಿಕ್ಷಣದ ರಾಷ್ಟ್ರೀಯ ನೀತಿ 1986ರ ಪ್ರಕಾರ ಮತ್ತು ಹಲವಾರು ಸಮಿತಿಗಳಿಮದ ಪುನರುಚ್ಚರಿಸಲ್ಪಟ್ಟಂತೆ, ಸಾಂಸ್ಥಿಕ ಸುಧಾರಣೆಗಳನ್ನು ಸಂಘಟಿಸುವ ಮತ್ತು ರಾಷ್ಟ್ರೀಯ ಮಟ್ಟದಲ್ಲಿ ಪ್ರಾಥಮಿಕ ಶಿಕ್ಷಣದ ರಾಷ್ಟ್ರೀಯ ಗುರಿಗಳನ್ನು ತಲುಪುವ ಪ್ರಗತಿಯ ಮೇಲ್ವಿಚಾರಣೆಯಲ್ಲಿ ಕೇಂದ್ರ ಸರ್ಕಾರವು ಪ್ರಮುಖ ಪಾತ್ರ ವಹಿಸುತ್ತದೆ.

ವಿಕೇಂದ್ರೀಕರಣದಲ್ಲಿ ಕೆಲವು ಮಿತಿಗಳಿವೆ. ಪ್ರಾಥಮಿಕ ಶಿಕ್ಷಣಕ್ಕೆ ಹಣಕಾಸು ನೆರವು, ಜವಾಬ್ದಾರಿ ಮತ್ತು ಅಧಿಕಾರದ ಹಂಚಿಕೆಯಿಂದ ಸ್ಥಳೀಯ ಹೊಣೆಗಾರಿಕೆ ಮತ್ತು ದಕ್ಷತೆಯ ಮೇಲೆ ಪರಿಣಾಮ ಬೀರಬಹುದು. ಪ್ರತಿ

ಪಾಲುದಾರನು ಯು.ಇ.ಇ. ನ ಉದ್ದೇಶಗಳನ್ನು ಸಾಧಿಸದಿರುವುದಕ್ಕೆ ಇತರರ ಮೇಲೆ ಆರೋಪವನ್ನು ಹೊರಿಸುತ್ತಾನೆ.

ಪ್ರಾಥಮಿಕ ಶಿಕ್ಷಣದ ವಿಕೇಂದ್ರೀಕೃತ ಯೋಜನೆ ಮತ್ತು ನಿರ್ವಹಣೆ ಪರಿಕಲ್ಪನೆಯು ಶಿಕ್ಷದ ರಾಷ್ಟ್ರೀಯ ನೀತಿ 1986ರ ಗುರಿಯನ್ನು ಹೊಂದಿದೆ. ಪ್ರಾಥಮಿಕ ಶಿಕ್ಷಣದ ನಿರ್ವಹಣೆಗಾಗಿ ಗ್ರಾಮೀಣ ಶಿಕ್ಷಣ ಸಮಿತಿಗಳು (ವಿ.ಇ.ಸಿ) ರೂಪದಲ್ಲಿ ನೇರ ಸಮುದಾಯದ ಪಾಲ್ಗೊಳ್ಳುವಿಕೆಯನ್ನು ಈ ನೀತಿಯು ಮನಗಂಡಿದೆ. ಕಾರ್ಯ ಯೋಜನೆ (POA) 1992, ಸೂಕ್ಷ್ಮ ಯೋಜನೆಯನ್ನು ಪ್ರತಿ ಮಗುವಿನ ಶೈಕ್ಷಣಿಕ ಪ್ರಗತಿಯನ್ನು ನಿಯಮಿತವಾಗಿ ಟ್ರ್ಯಾಕ್ ಮಾಡುವ ಒಂದು ಪ್ರಕ್ರಿಯೆಯಾಗಿ ಒತ್ತಿ ಹೇಳಿದೆ ಹಾಗೂ ಮಗು ತನ್ನ ಆಯ್ಕೆಯ ಸ್ಥಳದಲ್ಲಿ ಎಂಟು ವರ್ಷಗಳ ಅಥವಾ ಅದಕ್ಕೆ ಸಮಾನವಾದ ಶಾಲಾ ಶಿಕ್ಷಣವನ್ನು ಪೂರ್ಣಗೊಳಿಸುವಂತೆ ಖಾತರಿಪಡಿಸುತ್ತದೆ.

### 7.2.2. ವಿಕೇಂದ್ರೀಕರಣದೊಂದಿಗೆ ಭಾರತದ ಅನುಭವ :

ಶಿಕ್ಷಣ ವ್ಯವಸ್ಥೆಯುಯಾವ ಸಮಾಜದ ಭಾಗವಾಗಿದೆಯೋ ಅದರಿಂದ ಪ್ರತ್ಯೇಕವಾಗಿ ಕಾರ್ಯ ನಿರ್ವಹಿಸುವುದಿಲ್ಲ ಎಂಬುದನ್ನು ನೀವು ಒಪ್ಪುತ್ತೀರಿ. ವರ್ಗ, ಜಾತಿ, ಲಿಂಗ ಮತ್ತು ಧರ್ಮದ ಆಧಾರದ ಮೇಲೆ ನಮ್ಮ ಸಾಮಾಜಿಕ ವ್ಯವಸ್ಥೆಯನ್ನು ಬಹು ಪದರಗಳಾಗಿ ವಿಂಗಡಿಸಲಾಗಿದೆ. ಹೆಚ್ಚಿನ ಸಂಖ್ಯೆಯ ಜನರು ವಸತಿ, ನೀರು, ನೈರ್ಮಲ್ಯ, ವಿದ್ಯುತ್, ಆರೋಗ್ಯ ಸೇವೆಗಳು ಮತ್ತು ಶಿಕ್ಷಣವೆಂಬ ಮೂಲ ಸೌಕರ್ಯಗಳಿಂದ ವಂಚಿತರಾಗಿದ್ದಾರೆ. ಮೂಲಭೂತ ಶಿಕ್ಷಣವಿಲ್ಲದೆ, ಅವರು ಜೀವನ ನಡೆಸಲು ಹೋರಾಟ ಮಾಡುತ್ತಿದ್ದಾರೆ.

73 ಮತ್ತು 74ನೇ ಸಂವಿಧಾನಾತ್ಮಕ ತಿದ್ದುಪಡಿಗಳು ಸ್ಥಳೀಯ ಸ್ವಯಂ ಸರ್ಕಾರಳು ಹೆಚ್ಚು ಕ್ರಿಯಾತ್ಮಕ ಮತ್ತು ಪೂರ್ವಭಾವಿಯಾಗಿ ಪಾತ್ರ ವಹಿಸಲು ಒಂದು ಸಮಂಜಸವಾದ ವಾತಾವರಣವನ್ನು ಸೃಷ್ಟಿಸಿವೆ. ಈ ಬದಲಾವಣೆಯು ಮಹಿಳೆಯರಿಗೆ, ಪರಿಶಿಷ್ಟ ಜಾತಿಗಳು ಮತ್ತು ಬುಡಕಟ್ಟು ಜನಾಂಗ, ಅಲ್ಪ ಸಂಖ್ಯಾತರು ಮತ್ತು ಇತರರಿಗೆ ಧ್ವನಿ ನೀಡಿವೆ ಈ ಸಂದರ್ಭದಲ್ಲಿ ಇತರರ ಅನುಭವಗಳು ಕೆಳಗಿನವುಗಳಿಂದ ಪ್ರತಿಫಲಿಸುತ್ತದೆ :

- ಐಸಿಡಿಎಸ್ ಅನುಭವವು 0–6 ವರ್ಷ ವಯಸ್ಸಿನ ದುರ್ಬಲ ಮತ್ತು ಅನನುಕೂಲ ಮಕ್ಕಳ ಆರೋಗ್ಯ ಮತ್ತು ಪೌಷ್ಠಿಕಾಂಶದ ಸ್ಥಿತಿಯನ್ನು ಸುಧಾರಿಸಲು ಸ್ಥಳೀಯ ಜನರ ಒಳಗೊಳ್ಳುವಿಕೆ ಮುಖ್ಯವಾದುದೆಂದು ತೋರಿಸಿಕೊಟ್ಟಿದೆ.

- ಸಾಕ್ಷರತಾ ಮಟ್ಟವನ್ನು ಹೆಚ್ಚಿಸಲು ಜಿಲ್ಲಾ ಮಟ್ಟದಲ್ಲಿ ಆಂದೋಲನವನ್ನು ಹಮ್ಮಿಕೊಂಡಾಗ, ಜನಸಾಮಾನ್ಯರು ಸಕ್ರೀಯವಾಗಿ ಭಾಗವಹಿಸಿದರೆಂದು, ಅದು ಅವರ ಜೀವನದಲ್ಲಿ ಬದಲಾವಣೆ ತಂದಿದೆ ಎಂದು ರಾಷ್ಟ್ರೀಯ ಸಾಕ್ಷರತಾ ವಿಷನ್ ತೋರಿಸಿಕೊಟ್ಟಿದೆ.


- ಸಾಕ್ಷರತಾ ಮಟ್ಟವನ್ನು ಹೆಚ್ಚಿಸಲು ಜಿಲ್ಲಾ ಮಟ್ಟದಲ್ಲಿ ಆಂದೋಲನವನ್ನು ಹಮ್ಮಿಕೊಂಡಾಗ, ಜನಸಾಮಾನ್ಯರು ಸಕ್ರೀಯವಾಗಿ ಭಾಗವಹಿಸಿದರೆಂದು, ಅದು ಅವರ ಜೀವನದಲ್ಲಿ ಬದಲಾವಣೆ ತಂದಿದೆ ಎಂದು ರಾಷ್ಟ್ರೀಯ ಸಾಕ್ಷರತಾ ಮಿಷನ್ ತೋರಿಸಿಕೊಟ್ಟಿದೆ.


- ನವೆಂಬರ್ 1994 ರಲ್ಲಿ ಪ್ರಾರಂಭವಾದ ಜಿಲ್ಲಾ ಪ್ರಾಥಮಿಕ ಶಿಕ್ಷಣ ಕಾರ್ಯಕ್ರಮ (DPEP) ಯಶಸ್ವಿಯಾಗಿದ್ದು, ಇದೇ ತಂತ್ರವನ್ನು UEE ಯನ್ನು ದೇಶದಾದ್ಯಂತ ಕಾರ್ಯಗತಗೊಳಿಸಲು ಅಳವಡಿಸಿಕೊಳ್ಳಲು ಸರ್ಕಾರ ನಿರ್ಧರಿಸಿದೆ.

ಜಿಲ್ಲೆಗಳಲ್ಲಿ ಪ್ರಾಥಮಿಕ ಶಿಕ್ಷಣದ ಅಭಿವೃದ್ಧಿಗೆ ಯೋಜನೆ ರೂಪಿಸುವ ಮುಖ್ಯ ಜವಾಬ್ದಾರಿಯನ್ನು ಡಿ.ಐ.ಇ.ಟಿ.ಗೆ ನೀಡಲಾಗಿದೆ, ಆದರೆ ಪ್ರಾಥಮಿಕ ಶಿಕ್ಷಣದ ಪ್ರಗತಿಯನ್ನು ಸಂಘಟಿಸಲು ಮತ್ತು ಮೇಲ್ವಿಚಾರಣೆ ನಡೆಸಲು ರಾಜ್ಯಗಳು ಅಂತಿಮವಾಗಿ ಜವಾಬ್ದಾರಿ ಹೊಂದಿರುತ್ತವೆ.

ಯೋಜನಾ ಮತ್ತು ನಿರ್ವಹಣಾ ಕಾರ್ಯತಂತ್ರದಲ್ಲಿ ಈ ಬದಲಾವಣೆಯು ಶೈಕ್ಷಣಿಕ ವೃತ್ತಿಪರರ ಮತ್ತು ನಗರ ಸ್ಥಳೀಯ ಸರ್ಕಾರ ಮತ್ತು ಪಂಚಾಯಿತಿ ರಾಜ್ ಸಂಸ್ಥೆಗಳ ಮಟ್ಟದಲ್ಲಿ ಕಾರ್ಯ ನಿರ್ವಹಿಸುತ್ತಿರುವ ಆಡಳಿತಗಾರರಿಗೆ ನರಂತರವಾಗಿ ತರಬೇತಿ ಮತ್ತು ಬೆಂಬಲ ನೀಡಲು ಪ್ರಯತ್ನಿಸುತ್ತದೆ. ಈ ಹಂತದಲ್ಲಿ ವಿವಿಧ ರಾಜ್ಯಗಳಲ್ಲಿ ಶಿಕ್ಷಣ ಮತ್ತು ಇತರ ಕ್ಷೇತ್ರಗಳಲಿನ ಸ್ಥಳೀಯ ಮಟ್ಟದ ಸಂಸ್ಥೆಗಳು ಬಲಗೊಳ್ಳುತ್ತವೆ.

ಆರಂಬಿಕ ಬಾಲ್ಯದ ಕಾಳಜಿ ಮತ್ತು ಶಿಕ್ಷಣ (ECCE) ಮುಖ್ಯವಾಗಿರುವುದರಿಂದ, ಇ.ಸಿ.ಸಿ.ಇ. ಸ್ಥಾಪಿಸಿದ ಬುನಾಧಿಯ ಆಧಾರದ ಮೇಲೆ ನಿರ್ಮಿಸಲು ಯುಇಇ ಗುರಿ ಹೊಂದಿದೆ. ಶಾಲಾಪೂರ್ವ ಮಕ್ಕಳ ಆರೋಗ್ಯ ಮತ್ತು ಪೌಷ್ಟಿಕಾಂಶದ ಸ್ಥಿತಿಯನ್ನು ಸುಧಾರಿಸಲು ಐ.ಸಿ.ಡಿ.ಎಸ್. ಸ್ಥಳೀಯ ಸಮುದಾಯದ ಬೆಂಗಲವನ್ನು ಅವಲಂಬಿಸಿದೆ ಎಂಬುದನ್ನು ನೀವು ತಿಳಿದಿರಬಹುದು. ಸ್ಥಳೀಯ ಸಮುದಾಯದ ಪಾಲ್ಗೊಳ್ಳುವಿಕೆಯಿಂದಾಗಿ, ಐ.ಸಿ.ಡಿ.ಎಸ್. ಸ್ಥಳೀಯ ಸಮುದಾಯದ ಬೆಂಬಲವನ್ನು ಅವಲಂಬಿಸಿದೆ ಎಂಬುದನ್ನು ನೀವು ತಿಳಿದಿರಬಹುದು. ಸಥಳೀಯ ಸಮುದಾಯದ ಪಾಲ್ಗೊಳ್ಳುವಿಕೆಯಿಂದಾಗಿ,

ಐ.ಸಿ.ಡಿ.ಎಸ್. ಅತ್ಯಂತ ಯಶಸ್ವಿ ಕಾರ್ಯಕ್ರಮಗಳಲ್ಲಿ ಒಂದು ಎಂದು ಅಂತರರಾಷ್ಟ್ರೀಯವಾಗಿ ಮನ್ನಣೆಗಳಿಸಿದೆ.

ಸ್ಥಳೀಯ ಸಮುದಾಯದ ಸಕ್ರೀಯ ಪಾಲ್ಗೊಳ್ಳುವಿಕೆಗಾಗಿ ಈ ಕೆಳಗಿನವುಗಳ ಸಹಕಾರ ಅಗತ್ಯವಿದೆ :

- ಪಂಚಾಯತ್ ರಾಜ್ ಸಂಸ್ಥೆಗಳು,
- ಶಾಲಾ ನಿರ್ವಹಣಾ ಸಮಿತಿಗಳು
- ಗ್ರಾಮ ಮತ್ತು ನಗರ ವಾರ್ಡ್ / ಕೊಳಚೆ ಪ್ರದೇಶದ ಮಟ್ಟದ ಸಮಿತಿಗಳು
- ಪಾಲಕ–ಶಿಕ್ಷಕರ ಸಂಘಗಳು
- ಮಾತೃ–ಶಿಕ್ಷಕರ ಸಂಘಗಳು
- ಪ್ರಾಥಮಿಕ ಶಿಕ್ಷಣ ಮತ್ತು ಶಾಲೆಗಳ ಪಾಲುದಾರಿಕೆಯ ನಿರ್ವಹಣೆಯಲ್ಲಿ ಬುಡಕಟ್ಟು ಸ್ವಾಯತ್ತ ಅಭಿವೃದ್ಧಿ ಮಂಡಳಿಗಳು ಮತ್ತು ಇತರ ತಳಮಟ್ಟದ ಏಜೆನ್ಸಿಗಳು.

**ನಿಮ್ಮ ಪ್ರಗತಿಯನ್ನು ಪರಿಶೀಲಿಸಿ–1**

1. ವಿಕೇಂದ್ರೀಕರಣ ಎಂದರೇನು ?

2. ಯುಇಇ ಗಾಗಿ ವಿಕೇಂದ್ರೀಕೃತ ತಂತ್ರವನ್ನು ಏಕೆ ಅಳವಡಿಸಿಕೊಳ್ಳಲಾಗಿದೆ ?

## 7.3 ಸೂಕ್ಷ್ಮ ಮಟ್ಟದ ಯೋಜನೆ :

ಯೋಜನೆ ಮತ್ತು ಅನುಷ್ಠಾನದಲ್ಲಿ ಜನರ ಭಾಗವಹಿಸುವಿಕೆಯ ಕೊರತೆಯು ವಿವಿಧ ಅಭಿವೃದ್ಧಿ ಯೋಜನೆಗಳ ವಿಫಲವಾದ ಅನುಷ್ಠಾನಕ್ಕೆ ಕಾರಣವಾಗಿದೆ. ಪಂಚವಾರ್ಷಿಕ ಯೋಜನೆ ಪ್ರಾರಂಭವಾದಾಗಿನಿಂದ, ಜನರ ನಿಕಟ

ಸಹಯೋಗದೊಂದಿಗೆ ಯೋಜನೆಗಳನ್ನು ಸಿದ್ಧಗೊಳಿಸಿ, ಜಾರಿಗೊಳಿಸಬೇಕು ಎಂದು ಒತ್ತು ನೀಡಲಾಗಿದೆ. ಸ್ಥಳೀಯ ಜನರ ಸಕ್ರೀಯ ಸಹಕಾರ ಮತ್ತು ಬೆಂಬಲವಿಲ್ಲದೆ, ಸ್ಥಳೀಯ ಮಟ್ಟದಲ್ಲಿ ನಿಜವಾದ ಅವಶ್ಯಕತೆಗಳನ್ನು ಮತ್ತು ಲಭ್ಯವಿರುವ ಸಂಪನ್ಮೂಲಗಳನ್ನು ಗುರುತಿಸುವುದು ಸಾಧ್ಯವಿಲ್ಲ ಎಂದು ಭಾವಿಸಲಾಗಿತ್ತು. ಇದನ್ನು "ತಳಮಟ್ಟದ ಯೋಜನೆ" ಅಥವಾ "ಮೈಕ್ರೋ ಪ್ಲಾನಿಂಗ್" ಎಂದು ಕರೆಯಲಾಗುತ್ತದೆ. ಸೂಕ್ಷ್ಮ ಮಟ್ಟದಲ್ಲಿ ಯೋಜನೆ ಎಂದರೆ (ಎ) ಅಗತ್ಯಗಳನ್ನು ಗುರುತಿಸುವಲ್ಲಿ ಸ್ಥಳೀಯ ಜನರು, ಫಲಾನುಭವಿಗಳ ಭಾಗವಹಿಸುವಿಕೆ (ಬಿ) ಲಭ್ಯ ಸಂಪನ್ಮೂಲಗಳ ಪತ್ತೆ ಹಚ್ಚುವಿಕೆ (1) ವಸ್ತುಗಳು (2) ಸಹಕಾರ ಕ್ರಮ (3) ಸಹಕಾರ ಪ್ರಯತ್ನಗಳ ಮೂಲಕ ಹೆಚ್ಚಿನ ಸಂಪನ್ಮೂಲಗಳ ಸೃಷ್ಠಿ ಮಾಡುವುದು (ಸಿ) ಲಭ್ಯವಿರುವ ಸಂಪನ್ಮೂಲಗಳನ್ನು ಗಮನದಲ್ಲಿಟ್ಟುಕೊಂಡು ಗ್ರಾಮೀಣ ಯೋಜನೆಗಳ ತಯಾರಿಕೆ.

### 7.3.1 <u>ಯೋಜನೆ ಎಂದರೇನು ?</u>

ಸಾಮಾನ್ಯ ಅರ್ಥದಲ್ಲಿ ಯೋಜನೆ ಎಂದರೆ :

- ಅಗತ್ಯವಾದ ಉದ್ದೇಶಗಳನ್ನು ಸಾಧಿಸಲು ಅಥವಾ ಜನರ ಅಗತ್ಯಗಳನ್ನು ಪೂರೈಸುವ ಸಲುವಾಗಿ ಚಟುವಟಿಕೆಗಳು / ಕಾರ್ಯಗಳನ್ನು ಅನುಕ್ರಮವಾಗಿ ಪ್ರಸ್ತಾಪಿಸುವುದು.
- ಯೋಜನೆಯು ಒಟ್ಟಾರೆ ಗುರಿಗಳನ್ನು ಸಾಧಿಸಲು ತಂತ್ರಗಳನ್ನು ಗುರುತಿಸುವ ಮತ್ತು ವಿಕಾಸಗೊಳಿಸುವ ಪ್ರಕ್ರಿಯೆಯಾಗಿದೆ.
- ಯೋಜನೆಗಳು ಮತ್ತು ತಂತ್ರಗಳನ್ನು ಕಾರ್ಯಗತಗೊಳಿಸಲು ಸಂಪನ್ಮೂಲಗಳನ್ನು ಸಜ್ಜುಗೊಳಿಸುವುದು, ಪ್ರಗತಿಯನ್ನು ಮೇಲ್ವಿಚಾರಣೆ ಮಾಡುವುದು, ಪರಿಣಾಮವನ್ನು ಮೌಲ್ಯಮಾಪನ ಮಾಡುವುದು.

### 7.3.2 <u>ಸೂಕ್ಷ್ಮ ಯೋಜನೆ :</u>

ಒಂದು ವಾಸಸ್ಥಳದಲ್ಲಿನ ಎಲ್ಲಾ ಮಕ್ಕಳಿಗೂ ಗುಣಮಟ್ಟದ ಶಿಕ್ಷಣವನ್ನು ಶಾಲೆಗಳು ಒದಗಿಸುವುದನ್ನು ಖಚಿತಪಡಿಸಿಕೊಳ್ಳಲು, ಅಲ್ಲಿನ ಜನರು ಮಾಲೀಕತ್ವ ಮತ್ತು ಜವಾಬ್ದಾರಿಯನ್ನು ತೆಗೆದುಕೊಳ್ಳಬೇಕೆಂದು ನಿರೀಕ್ಷಿಸಲಾಗಿದೆ. ಎಲ್ಲಾ ಮಕ್ಕಳ ಅಗತ್ಯಗಳನ್ನು ಕೇವಲ ಶಿಕ್ಷಕರು ಮಾತ್ರ ಪೂರೈಸಲಾಗುವುದಿಲ್ಲ. ಮಹಿಳಾ ಗುಂಪುಗಳು, ಗ್ರಾಮ ಶಿಕ್ಷಣ ಸಮಿತಿ ಸದಸ್ಯರು ಮತ್ತು ಪಂಚಾಯತ್‌ರಾಜ್ ಸಮಿತಿಯ ಸದಸ್ಯರು ಮುಂತಾದ ಎಲ್ಲಾ ಪಾಲುದಾರರನ್ನು ಒಳಗೊಂಡಿರಬೇಕು. ಎಲ್ಲಾ ಪಾಲುದಾರರ ಸಹಾಯದಿಂದ ಸಮಾಜದ ಅನನುಕೂಲಕರ ಗುಂಪು ಸೇರಿದಂತೆ ಎಲ್ಲಾ ಮಕ್ಕಳು ಗುಣಮಟ್ಟದ ಪ್ರಾಥಮಿಕ ಶಿಕ್ಷಣವನ್ನು ಪಡೆಯುತ್ತಾರೆ.

### 7.3.3 ಸೂಕ್ಷ್ಮ ಯೋಜನೆ ಪ್ರಕ್ರಿಯೆಗಳಲ್ಲಿ ಸಮುದಾಯವನ್ನು ಒಳಗೊಳ್ಳುವ ಕ್ರಮಗಳು :

ಸೂಕ್ಷ್ಮ ಯೋಜನೆ ಪ್ರಕ್ರಿಯೆಗಳಲ್ಲಿ ಸಮುದಾಯವನ್ನು ಒಳಗೊಂಡಿರುವ ಕ್ರಮಗಳು ಕೆಳಕಂಡಂತಿವೆ :

I. **ಸಮುದಾಯದ ಸಬಲೀಕರಣ**

- ಗ್ರಾಮ ಶಿಕ್ಷಣ ಸಮಿತಿ (VEC), ಶಾಲಾ ನಿರ್ವಹಣಾ ಸಮಿತಿ (SMC) ತಾಯಂದಿರ – ಶಿಕ್ಷಕರ ಸಂಘ (MTA) ಇತ್ಯಾದಿ ಸದಸ್ಯರಿಗೆ ತರಬೇತಿ ಕಾರ್ಯಾಗಾರವನ್ನು ನಡೆಸುವುದು ಮತ್ತು ಪ್ರಾಥಮಿಕ ಶಿಕ್ಷಣದ ಮಕ್ಕಳ ಹಕ್ಕುಗಳ ಬಗ್ಗೆ ಸಮಸ್ಯೆಗಳನ್ನು ಗುರುತಿಸಲು ಮತ್ತು ಪರಿಹಾರಗಳನ್ನು ಕಂಡು ಹಿಡಿಯಲು ಅವರ ಸಾಮರ್ಥ್ಯಗಳನ್ನು ಹೆಚ್ಚಿಸುವುದು.

- ಪ್ರಾಥಮಿಕ ಶಿಕ್ಷಣವನ್ನು ಸಾರ್ವತ್ರಿಕಗೊಳಿಸಲು ಸರ್ಕಾರದ ಪ್ರಯತ್ನಗಳು RTE ಯ ಅವಕಾಶಗಳು, ಜನರ ಪಾತ್ರ ಮತ್ತು ಜವಾಬ್ದಾರಿಗಳನ್ನು ಅರಿತುಕೊಳ್ಳುವಂತೆ ಜಾಗೃತಿ ಶಿಬಿರಗಳನ್ನು ನಡೆಸಬೇಕು, ಅವುಗಳಲ್ಲಿ :

  – ಮೀನಾ ಕ್ಯಾಂಪೇನ್
  – ತಾಯಿ–ಮಗಳ ಮೇಳ
  – ಮಹಿಳಾ ಸಮ್ಮೇಳನ
  – ಕಿಶೋರಿ ಮೇಳ
  – ಬಾಲ, ಶಿಶು ಮೇಳ
  – ಪ್ರಭಾತ್ ಫೆರಿಸ್
  – ದಾಖಲಾತಿ ಆಂದೋಲನ
  – ಸಮುದಾಯ ಮಾರುಕಟ್ಟೆ / ವಾರದ ಸಂತೆಗಳಲ್ಲಿ ನಿರ್ಧಿಷ್ಟ ವಿಷಯಗಳ ಮೇಲೆ ಕಾರ್ಯಕ್ರಮಗಳನ್ನು ಹಮ್ಮಿಕೊಳ್ಳಬಹುದು – ದಾಖಲಾತಿ ಹೆಚ್ಚಿಸುವುದು, ಡ್ರಾಪ್ ಔಟ್ ಕಡಿಮೆ ಮಾಡುವುದು, ಶಾಲಾ ದಾಖಲಾತಿಗೆ ಅಗತ್ಯ ದಾಖಲೆಗಳನ್ನು ಪಡೆಯುವುದು, ಹೆಣ್ಣು ಮಗುವಿನ ಶಿಕ್ಷಣ, ಎಸ್ಸಿ/ಎಸ್ಟಿ/ಓಬಿಸಿ ಗಳಂತಹ ಅನನುಕೂಲವಾದ ವಿಶೇಷ ಗುಂಪುಗಳಿಗೆ ಉದ್ದೇಶಿತವಾದ ಅರ್ಹತೆಗಳು, ಅಲೆಮಾರಿ / ಗ್ರಾಮೀಣ ಗುಂಪುಗಳು ಇತ್ಯಾದಿ.

## II. ಯೋಜನಾ ತಂಡಗಳ ಗುರುತಿಸುವಿಕೆ :

ಸರ್ಕಾರಿ ಅಧಿಕಾರಿ ಅಥವಾ ಮುಖ್ಯ ಶಿಕ್ಷಕ ಮಾತ್ರ ಯೋಜನೆಗೆ ಅಗತ್ಯವಿರುವ ಎಲ್ಲಾ ಮಾಹಿತಿಯನ್ನು ಹೊಂದಿರಲು ಸಾಧ್ಯವಿಲ್ಲ. UEE ಯ ಪ್ರತಿಯೊಂದು ಅಂಶದ ಕುರಿತು ಆಲೋಚಿಸಲು ಒಂದು ಕೋರ್ ಯೋಜನಾ ತಂಡವನ್ನು ರಚಿಸಬೇಕಾಗಿದೆ. ಉದ್ದೇಶಗಳನ್ನು ನಿಗಧಿಗೊಳಿಸಿ, ಆದ್ಯತೆಗಳನ್ನು ನಿರ್ಧರಿಸುವಲ್ಲಿ ಪ್ರಮುಖ ಪಾಲುದಾರರು ಭಾಗಿಯಾಗುವುದರಿಂದ, ಸಮುದಾಯಕ್ಕೆ ಒಂದು ರೀತಿಯ ಮಾಲೀಕತ್ವ ಭಾವವನು ಅನುಭವಿಸುತ್ತಾರೆ. ಒಂದು ಕೋರ್ ಯೋಜನಾ ತಂಡವನ್ನು ಒಳಗೊಳ್ಳುವುದರಿಂದ ಯೋಉನೆಗೆ ನ್ಯಾಯಸಮ್ಮತತೆಯನ್ನು ನೀಡಿದಂತಾಗುತ್ತದೆ.

ಸಮುದಾಯ ಮತ್ತು ನಿರ್ಧಿಷ್ಟ ಗುಂಪುಗಳೊಂದಿಗಿನ ಸಂವಹನವು ಪ್ರತಿ ವಾಸಸ್ಥಳಕ್ಕೆ ಕೋರು ಯೋಜನಾ ತಂಡದ ಸದಸ್ಯರಾಗಲು ಅರ್ಹರಾಗಿರುವ ವ್ಯಕ್ತಿಗಳನ್ನು ಗುರುತಿಸಲು ಅವಕಾಶಗಳನ್ನು ಒದಗಿಸುತ್ತದೆ. ಕೆಲವರು ವಿದ್ಯಾವಂತರು; ಕೆಲವರು ರಾಜಕೀಯವಾಗಿ ಸಕ್ರೀಯರಾಗಿರಬಹುದು; ಕೆಲವು ಯುವಕರು ವಿಚಾರ ಮತ್ತು ಉತ್ಸಾಹಗಳಿಂದ ಕೂಡಿರಬಹುದು; ಇನ್ನು ಕೆಲವರು ತಮ್ಮ ಪರಿಣತ ಅನುಭವವನ್ನು ನೀಡುವವರಾಗಿರ–ಬಹುದು, ಮಹಿಳೆಯರು ಸಂಪನ್ಮೂಲ ವ್ಯಕ್ತಗಳಾಗಿರಬಹುದು; ಅಲ್ಪ ಸಂಖ್ಯಾತರು ವಿದ್ಯಾವಂತ ನಿರುದ್ಯೋಗಿಗಳಾಗಿರಬಹುದು. ಅವರ ಒಳಗೊಳ್ಳುವಿಕೆಯು –

- ಸಮುದಾಯ ಮತ್ತು ಶಾಲೆಯ ನಡುವೆ ಸಂಪರ್ಕ ಉಂಟುಮಾಡಿ, ಬಲಪಡಿಸುವಿಕೆಗೆ ಸಹಾಯವಾಗುತ್ತದೆ.
- ಡ್ರಾಪ್‌ಔಟ್, ವಲಸೆ, ಹೊರಗಿಡುವಿಕೆ ತಡೆಯಲು ಸಮುದಾಯದ ಬೆಂಬಲವನ್ನು ವಿಸ್ತಿಸುತ್ತದೆ.
- ಒಳಗೊಳ್ಳುವ ಶಿಕ್ಷಣದ ಪರವಾಗಿ ಪಾಲುದಾರರಲ್ಲಿ ಅಭಿಪ್ರಾಯ ರೂಪಿಸುವಲ್ಲಿ ಶಿಕ್ಷಣ ನೀಡುತ್ತದೆ.

ಕೋರ್ ಯೋಜನಾ ತಂಡದ ಸದಸ್ಯರ ಆಯ್ಕೆಯನ್ನು ಎಚ್ಚರಿಕೆಯಿಂದ ಮಾಡಬೇಕಾಗಿದೆ. ಅದರಲ್ಲಿ ಕೆಲವು ಏನು ಮಾಡಬೇಕಿದೆ ಎಂಬುದನ್ನು ಒಪ್ಪದವರೂ ಇರಬೇಕು. ಕೆಲವರು ತಮ್ಮ ಆಲೋಚನೆಗಳನ್ನು ಇತರರ ಮೇಲೆ ಹೇರಬಹುದು. ಕೆಲವು ಸದಸ್ಯರು ತಂಡದ ನಿರೀಕ್ಷೆಗೆ ಅನುಗುಣವಾಗಿಲ್ಲದಿದ್ದರೂ, ಪ್ರಾಥಮಿಕ ಶಿಕ್ಷಣವನ್ನು ಒಳಗೊಳ್ಳುವಿಕೆ ಮಾಡುವಲ್ಲಿ ಶಿಕ್ಷಕರು, ಶಾಲೆ ಮತ್ತು ಸ್ಥಳೀಯ ಅಧಿಕಾರಿಗಳಿಗೆ ಅತ್ಯುತ್ತಮ

ಬೆಂಗಳ ನೀಡುವವರಾಗಿರುತ್ತಾರೆ. ಎಲ್ಲಾ ಮಕ್ಕಳಿಗೆ ಪ್ರಾಥಮಿಕ ಶಿಕ್ಷಣವನ್ನು ನೀಡಲು ಇದು ಎಲ್ಲಾ ರೀತಿಯ ಜನರನ್ನು ಒಳಗೊಂಡಿರುತ್ತದೆ. ತಾತ್ವಿಕವಾಗಿ, ಕೋರಿ ಯೋಜನೆ ತಂಡವು ಸಮುದಾಯದ ಎಲ್ಲಾ ವಿಭಾಗಗಳ ಪ್ರತಿನಿಧಿ ಯಾಗಿರಬೇಕು.

III. **ಕೋರ್ ಯೋಜನಾ ತಂಡಗಳ ಸಾಮರ್ಥ್ಯ ಅಭಿವೃದ್ಧಿ :**

ಯೋಜನಾ ಚಟುವಟಿಕೆ ಮತ್ತು ಯೋಜನೆಗಳ ಗುಣಮಟ್ಟವು ಕೋರ್ ಯೋಉನಾ ತಂಡದ ಸಾಮರ್ಥ್ಯದ ಮೇಲೆ ಅವಲಂಬಿತವಾಗಿರುತ್ತದೆ. ಪ್ರಸ್ತಾಪಿತ ಯೋಜನೆಗಳು ಜಿಲ್ಲೆಯಲ್ಲಿ 'ಮಾಡಬಲ್ಲವು' ಆಗಿರಬೇಕು. ಶೈಕ್ಷಣಿಕ ಅಭಿವೃದ್ಧಿಯ ಎಲ್ಲಾ ಅಂಶಗಳನ್ನು ಗಣನೆಗೆ ತೆಗೆದುಕೊಂಡು, ಯಾವುದೇ ವ್ಯಕ್ತಿ ಅಥವಾ ಗುಂಪು ತಮ್ಮ ಪರವಾಗಿ ಯೋಜನಾ ಪ್ರಕ್ರಿಯನ್ನು ಅಪಹರಿಸದಂತೆ ಖಚಿತಪಡಿಸಿಕೊಳ್ಳಲು ಸಂಪೂರ್ಣ ಯೋಜನಾ ಪ್ರಕ್ರಿಯೆಯು ಪಾಲ್ಗೊಳ್ಳುವಿಕೆಯನ್ನು ಹೊಂದಿದೆ. ಯೋಜನೆಗೆ ವಿವಿಧ ಇಲಾಖೆಗಳಿಮದ ನಿರ್ವಹಿಸುವ ವಿವಿಧ ಯೋಜನೆಗಳ ಬಗ್ಗೆ ಜ್ಞಾನದ ಅಗತ್ಯವಿರುತ್ತಲ್ಲದೆ, ಅವುಗಳನ್ನು ಒಮ್ಮುಖವಾದ ರೀತಿಯಲ್ಲಿ ಬಳಸುವುದು ಹೇಗೆ ಎಂಬುದರ ಅರಿವಿರಬೇಕಾಗುತ್ತದೆ. ಯೋಜನಾ ಪ್ರಕ್ರಿಯೆ ಮತ್ತು ಯೋಜನೆಗಳಿಗೆ ಕೊಡುಗೆ ನೀಡಲು ಕೋರ್ ಯೋಉನಾ ತಂಡಗಳ ಅನೇಕ ಸದಸ್ಯರು ಅಗತ್ಯವಿರುವ ಪರಿಣಿತಿಯನ್ನು ಹೊಂದಿಲ್ಲದಿರಬಹುದು. ಅನೇಕ ಜನರು ತಮ್ಮ ಇಡೀ ಜೀವನವನ್ನು ಅದೇ ಪ್ರದೇಶದಲ್ಲಿ ಕಳೆಯುತ್ತಿದ್ದರೂ, ಸಾರ್ವಜನಿಕ ನಿರ್ಧಾರ ಕೈಗೊಳ್ಳುವ ಪ್ರಕ್ರಿಯೆಯಲ್ಲಿ ಇದೇ ಮೊದಲಬಾರಿಕೆ ಭಾಗವಹಿಸುತ್ತಿರಬಹುದು. ಕೋರ್ ಯೋಜನಾ ತಂಡವು ಗ್ರಾಮ ಶಿಕ್ಷಣ ಅಭಿವೃದ್ಧಿ ಯೋಜನೆಗಳನ್ನು ಸಿದ್ಧಪಡಿಸಿ, ಶಾಲಾ ಅಭಿವೃದ್ಧಿ ಯೋಜನೆಗಳನ್ನು ಕ್ರೋಢೀಕರಿಸುತ್ತದೆ. ಕೋರ್ ಯೋಜನಾ ತಂಡವು ಶಾಲೆಯ ಅಗತ್ಯಗಳನ್ನು ಗ್ರಾಮದಲ್ಲಿ ಪರಿಣಾಮಕಾರಿಯಾಗಿ ಪ್ರಸ್ತುತಪಡಿಸಬೇಕು, ಗ್ರಾಮದ ಅಗತ್ಯಗಳನ್ನು ಬ್ಲಾಕ್‌ನಲ್ಲಿ, ಹಾಗೆಯೇ ಬ್ಲಾಕ್‌ನ ಅಗತ್ಯಗಳನ್ನು ಜಿಲ್ಲೆಯಲ್ಲಿ ಪ್ರಸ್ತುತಪಡಿಸಬೇಕು.

ಆದ್ದರಿಂದ, SSA ಕಾರ್ಯಕ್ರಮದ ಉದ್ದೇಶಗಳು, ಗುರಿಗಳು ಮತ್ತು ಮಾನದಂಡಗಳನ್ನು ಪರಿಚಯಿಸಲು ಎರಡು–ಮೂರು ಸುತ್ತುಗಳ ಓರಿಯಂಟೇಶನ್ ಕಾರ್ಯಾಗಾರಗಳನ್ನು ನಡೆಸಬೇಕು, ಯೋಜನೆಯನ್ನು ಸಿದ್ಧಪಡಿಸಲುಜ ಮತ್ತು ಅದರ ಅನುಷ್ಠಾನಕ್ಕಾಗಿ ಮಾಹಿತಿಯನ್ನು ಕಲೆಹಾಕಬೇಕು. ಕ್ಲಸ್ಟರ್ / ಬ್ಲಾಕ್ / ಜಿಲ್ಲೆಯ ಹಂತದಲ್ಲಿ ಲಭ್ಯವಿರುವ ಪರಿಣತಿಯನ್ನು ಬಳಸಿಕೊಳ್ಳುವುದರ ಕುರಿತು ಅವರಿಗೆ ಅರಿವಿರಬೇಕು.

## IV. ಮಧ್ಯಸ್ಥಿಕೆ ಬೇಕಾಗಿರುವ ಸಮಸ್ಯೆಗಳ ಗುರುತಿಸುವಿಕೆ :

ಪ್ರವೇಶ, ದಾಖಲಾತಿ, ಉಳಿಕೆ ಮತ್ತು ಪ್ರಾಥಮಿಕ ಶಿಕ್ಷಣದ ಗುಣಮಟ್ಟಕ್ಕೆ ಸಂಬಂಧಿಸಿರುವ ಸಮಸ್ಯೆಗಳನ್ನು ಗ್ರಾಮ, ಬ್ಲಾಕ್ ಅಥವಾ ಜಿಲ್ಲೆಯಲ್ಲಿಯೇ ಪರಿಹರಿಸಿಕೊಳ್ಳಬಹುದೇ ಎಂದು ಅಂದಾಜಿಸುವುದು ಈ ಹಂತದ ಕಾರ್ಯ. ಕೆಲವು ಸಮಸ್ಯೆಗಳು/ಗಳಿಗೆ

- ಆಡಳಿತಾತ್ಮಕ ಸಮಸ್ಯೆಗಳಾಗಿರಬಹುದು
- ನೀತಿ ಬದಲಾವಣೆ ಅಗತ್ಯವಿರಬಹುದು
- ನೀಯಮಾವಳಿಗಳ ಅಪ್‌ಡೇಟ್ / ಅಪ್‌ಸ್ಕೇಲಿಂಗ್ ಅಗತ್ಯವಿರುತ್ತದೆ.
- ಸಹಯೋಗ ಕ್ರಮದಿಂದ ಬಗೆಹರಿಸಿಕೊಳ್ಳಬೇಕಾಗುತ್ತದೆ.
- ಜಿಲ್ಲಾ ಮತ್ತು ರಾಜ್ಯ ಮಟ್ಟದ ಅಧಿಕಾರಿಗಳ ಸಹಾಯ ಬೇಕಾಗಬಹುದು.

ಈ ಹಂತದಲ್ಲಿ ಲಭ್ಯವಿರುವ ಸಂಪನ್ಮೂಲಗಳನ್ನು ಪಡೆಯುವುದಕ್ಕಾಗಿ ಶಾಲೆಗಳು, ಗ್ರಾಮಗಳು, ಬ್ಲಾಕ್‌ಗಳು ಮತ್ತು ಜಿಲ್ಲೆಗಳು ಇತರರಿಗಿಂತ ತಮ್ಮ ಸಮಸ್ಯೆ ಮತ್ತು ಸವಾಲುಗಳು ಅತಿ ತುರ್ತಿನವು ಎಂದು ಬಿಂಬಿಸಲು ಸ್ಪರ್ಧೆ ಏರ್ಪಡಬಹುದು. ಆರಂಭದಲ್ಲಿ ಶಿಕ್ಷಣ ಅಭಿವೃದ್ಧಿ ಯೋಜನೆಗೆ ಒಳಗೊಳ್ಳುವ ಸಮಸ್ಯೆಗಳನ್ನು ಆಧ್ಯತೆ ನೀಡುವ ದೃಷ್ಟಿಯಿಂದ ಉತ್ತಮ ಮಾಹಿತಿ ಕಣದ ಮತ್ತು ಸ್ಪಷ್ಟ ದೃಷ್ಟಿಕೋನ ಬೇಕಾಗುತ್ತದೆ. ಕೆಲವೊಮ್ಮೆ ಅನುಭವಗಳನ್ನು ಹಂಚಿಕೊಳ್ಳುವುದಕ್ಕಾಗಿ ಅಂತರ್–ಜಿಲ್ಲಾ ಯೋಉಜನಾ ಕಾರ್ಯಾಗಾರಗಳನ್ನು ಹಮ್ಮಿಕೊಳ್ಳಬಹುದು. ಇದು ಸಮಸ್ಯೆಗಳನ್ನು ಗುರುತಿಸಲು, ಸೂಕ್ತ ವಿಧಾನಗಳ ಬಗ್ಗೆ ತಿಳಿಯಲು ಉತ್ತಮ ಮಾರ್ಗವಾಗಿದೆ.

## V. ಮಾಹಿತಿಯ ಅವಶ್ಯಕತೆ ಮತ್ತು ಮಾಹಿತಿಯ ಮೂಲಗಳು :

ಎಲ್ಲಾ ಯೋಜನೆಗಳು ಕಾಲಮಿತಿಗೊಳಪಟ್ಟಿದ್ದು, ನಿರ್ಧಿಷ್ಟ ಗುರಿಗಳನ್ನು ಸಾಧಿಸುವ ಸ್ಪಷ್ಟ ಆದೇಶ ಹೊಂದಿವೆ. ಆರ್.ಟಿ.ಇ. ಸ್ಪಷ್ಟವಾಗಿ ಹೇಳುವಂತೆ, ಎಲ್ಲಾ ಮಕ್ಕಳು ಎಂಟು ವರ್ಷದಲ್ಲಿ ಪ್ರಾಥಮಿಕ ಶಿಕ್ಷಣವನ್ನು ಪೂರ್ಣಗೊಳಿಸುತ್ತಾರೆ, ಅದರ ಬಗ್ಗೆ ಮಾಹಿತಿ ತಿಳಿಯುವುದು ಅವಶ್ಯಕ –

- 14 ವರ್ಷದವರೆಗಿನ ಎಲ್ಲ ಮಕ್ಕಳು (ಬಾಲಕರು ಮತ್ತು ಬಾಲಕಿಯರು) – ದಾಖಲಾದವರು, ದಾಖಲಾಗದವರು, ಶಾಲೆಯಿಂದ ಹೊರಗುಳಿದವರು,

- ಸರ್ಕಾರಿ, ಅನುದಾನಿತ / ಅನುದಾನಿತವಲ್ಲದ, ಮಾನ್ಯತೆ ಪಡೆದ / ಮಾನ್ಯತೆ ಪಡೆಯದ ಖಾಸಗಿ ಶಾಲೆಗಳ ಸಂಖ್ಯೆ,
- ಎನ್.ಜಿ.ಓ. ಗಳು ನಡೆಸುತ್ತಿರುವ ಅನೌಪಚಾರಿಕ ಶಾಲೆಗಳು,
- ಸಂಸ್ಥೆಗಳಿಂದ ರಕ್ಷಿಸಲ್ಪಟ್ಟ ಮಕ್ಕಳು,
- SC/ST, ಅಲೆಮಾರಿ ಬುಡಕಟ್ಟು, ಅತೀ ಹಿಂದುಳಿದ ಜಾತಿ, ಪ್ರಾಚೀನ ಬುಡಕಟ್ಟಿನ ಜನಾಂಗದ ಮಕ್ಕಳು
- ಅಂಗವೈಕಲ್ಯ ಹೊಂದಿರುವ ಮಕ್ಕಳು
- ಕೆಲಸ ಮಾಡುವ ಮಕ್ಕಳು
- ಸಾಮೂಹಿಕ ಹಿಂಸಾಚಾರ / ದೌರ್ಜನ್ಯಗಳಿಗೆ ಬಲಿಪಶುವಾದ ಮಕ್ಕಳು
- ವಲಸಿಗ ಕುಟುಂಬಗಳ ಮಕ್ಕಳು
- ಸ್ಥಳಾಂತರಿಸಿದ ಕುಟುಂಬಗಳ ಮಕ್ಕಳು
- ಬೀದಿಗಳಲ್ಲಿ / ಸಾರ್ವಜನಿಕ ಸ್ಥಳಗಳಲ್ಲಿ ವಾಸಿಸುವ ಮಕ್ಕಳು
- ಕೈದಿಗಳು / ವೇಶ್ಯೆಯರ ಮಕ್ಕಳು ಮತ್ತು
- ಇತರ ಅನನುಕೂಲಕರ ಮಕ್ಕಳು

ಈ ಮಾಹಿತಿಯಿಂದ, ಶಾಲಾವ್ಯವಸ್ಥೆಯೊಳಗೆ ತರಬಹುದಾದ ಗುರಿ – ನಿಗಧಿತ ಗುಂಪನ್ನು ಆಯ್ಕೆ ಮಾಡಲು ಸಾಧ್ಯವಿದೆ.

ಉದ್ದೇಶಿತ ವಯಸ್ಸಿನ ಗುಂಪಿನಲ್ಲಿ, ಪ್ರತಿ ಮಗುವಿನ ಮೇಲೆ ಗಮನ ಕೇಂದ್ರೀಕರಿಸುವ ಉದ್ದೇಶದಿಂದಾಗಿ, ಮಾಹಿತಿಯು ಪ್ರತಿ ಮಗುವಿನ ಪ್ರಗತಿಯನ್ನು ಟ್ರ್ಯಾಕ್ ಮಾಡುವುದನ್ನು ಯೋಜನೆ ಅನುಕೂಲಿಸುತ್ತದೆ.

ಬಹುತೇಕ ಮೇಲಿನ ಮಾಹಿತಿಯು ಶಾಲೆಗಳು / ಸರ್ಕಾರಿ ಇಲಾಖೆಗಳ ಬಳಿ ಸಹ ಇರುತ್ತದೆ. VEC ಮತ್ತು SMC ಗಳು ಗ್ರಾಮ ಶಿಕ್ಷಣ ದಾಖಲೆ ಪುಸ್ತಕದ ತಯಾರಿ ಮತ್ತು ನಿಯಮಿತವಾದ ನವೀಕರಣ ಕಾರ್ಯದಲ್ಲಿ ಗಮನಾರ್ಹ ಪಾತ್ರ ಹೊಂದಿವೆ.

ಪ್ರಸ್ತುತ ಪರಿಸ್ಥಿತಿಯನ್ನು ಬಿಂಬಿಸುವ ಮಾಹಿತಿಯ ಲಭ್ಯತೆಯ ದತ್ತಾಂಶ ಸಂಕಲನದ ಏಕೈಕ ಉದ್ದೇಶವಲ್ಲ, ಅಗತ್ಯವಾದ ಸಂಪನ್ಮೂಲಗಳನ್ನು ಅಂದಾಜು ಮಾಡಲು, ಮಧ್ಯಸ್ಥಿಕೆಗಳನ್ನು ಯೋಜಿಸುವುದಕ್ಕಾಗಿ ಮತ್ತು ಸಂಪನ್ಮೂಲಗಳ ಬೇಡಿಕೆಯ ಸಮರ್ಥನೆಗಾಗಿ, ಸವಾಲುಗಳನ್ನು ಪತ್ತೆ ಹಚ್ಚಲು ದತ್ತಾಂಶಗಳನ್ನು ಬಳಸಬೇಕು. ದತ್ತಾಂಶ ಆಧಾರಿತ ಯೋಜನೆ ಲಭ್ಯವಿರುವ ಸಂಪನ್ಮೂಲಗಳ ಪರಿಣಾಮಕಾರಿ ಮತ್ತು ಸೂಕ್ತವಾದ

ಬಳಕೆಯನ್ನು ಖಚಿತಪಡಿಸುತ್ತದೆ. ಗುರಿಯನ್ನು ಸಾಧಿಸಲೂ ಕೂಡ ದತ್ತಾಂಶ ಉಪಯುಕ್ತವಾಗಿರುತ್ತದೆ. ಬಹಳಷ್ಟು ದತ್ತಾಂಶಗಳನ್ನು ಸಂಗ್ರಹಿಸಬಹುದಾದರೂ, ಸಂಬಂಧಪಟ್ಟ ದತ್ತಾಂಶವನ್ನು ಮಾತ್ರ ಬಳಸಬೇಕಾಗಿದೆ. ಮನೆ–ಮನೆ ಸಮೀಕ್ಷೆಯ ಮೂಲಕ ಸಂಗ್ರಹವಾಗುವ ದತ್ತಾಂಶವು ವಾಸಸ್ಥಳ ಮಟ್ಟದ ಯೋಜನೆಗೆ ಆಧಾರವಾಗಬಲ್ಲದು.

ಇದಲ್ಲದೆ, ಸಂಗ್ರಹಿಸಿದ ಮನೆ–ಮನೆಯ ಮಾಹಿತಿಯು ಆವಾಸಸ್ಥಳದ ಹಂತದಲ್ಲಿ ಕ್ರೋಢೀಕರಿಸಲ್ಪಡುತ್ತದೆ. ಈ ಚಟುವಟಿಕೆಯನ್ನು ಸುಗಮಗೊಳಿಸುವುದಕ್ಕಾಗಿ ಸಲಹೆ ಮಾಡಲಾದ ಒಂದು ಸ್ವರೂಪದ ರಚನೆಯನ್ನು ಸಹ ವಿನ್ಯಾಸಗೊಳಿಸಲಾಗಿದೆ. ಆವಾಸಸ್ಥಳದ ಮಾಹಿತಿಯನ್ನು ಕ್ರೋಢೀಕರಿಸದ ನಂತರ, ಇದನ್ನು ಗಣಕೀಕೃತಗೊಳಿಸಬೇಕು ಮತ್ತು ಆವಾಸಸ್ಥಳದ ಮಟ್ಟದ ಯೋಜನೆಗೆ ಬಳಸಬೇಕು. ತುಂಬಲ್ಪಟ್ಟ ಮನೆಯ DCF ಗಳನ್ನು ವಿಲೇಜ್ / ವಾರ್ಡ್ ಎಜುಕೇಷನ್ ರಿಜಿಸ್ಟರ್ (VER / WER) ಎಂದು ಸಂಗ್ರಹಿಸಲಾಗುತ್ತದೆ, ಇದು VEC ಸದಸ್ಯರು ಪ್ರತಿ ಮಗುವಿನ ದಾಖಲಾತಿ ಮತ್ತು ಹಾಜರಾತಿಯನ್ನು ಮೇಲ್ವಿಚಾರಣೆ ಮಾಡಲು ಸೂಕ್ತವಾಗಿದೆ, ನಂತರ ಪ್ರತಿ VEC ಸಭೆಯಲ್ಲಿ ಚರ್ಚಿಸಬಹುದು.

## VI. ಸೂಕ್ಷ್ಮ–ಯೋಜನೆ ಅಭ್ಯಾಸಗಳು :

ಕೋರ್ ಯೋಜನಾ ತಂಡವನ್ನು ರಚಿಸಿ, ಅವರ ಸಾಮರ್ಥ್ಯದ ಅಭಿವೃದ್ಧಿಯನ್ನು ಕೈಗೊಂಡು, ಸಮಸ್ಯೆಗಳು ಮತ್ತು ಮಧ್ಯಸ್ಥಿಕೆ ಕಾರ್ಯ ತಂತ್ರಗಳನ್ನು ಒಪ್ಪಿಕೊಂಡು, ಅಗತ್ಯವಾದ ಮಾಹಿತಿಯನ್ನು ಪಡೆದು ನಂತರ ಸೂಕ್ಷ್ಮ ಯೋಜನಾ ಅಭ್ಯಾಸ ಆರಂಭವಾಗುತ್ತದೆ. ಆ ಅಭ್ಯಾಸ ಇವುಗಳನ್ನು ಒಳಗೊಂಡಿರುತ್ತದೆ –

- ಒಂದು ವರ್ಷದ ಅವಧಿಯಲ್ಲಿ ಸಾಧಿಸಬಹುದಾದ ಸ್ಥಳೀಯ ನಿರ್ಧಿಷ್ಟ ಉದ್ದೇಶಗಳು, ಮಕ್ಕಳ ವರ್ಗದ ಅನುಸಾರವಾಗಿ ದಾಖಲಾತಿ, ಡ್ರಾಪ್‌ಔಟ್, ಉಳಿಕೆ, ಉತ್ತೀರ್ಣದರ ಮತ್ತು ಶಿಕ್ಷಕ–ವಿದ್ಯಾರ್ಥಿ ಅನುಪಾತಗಳ ಮೇಲೆ ಗುರಿಗಳನ್ನು ನಿಗಧಿಪಡಿಸುವುದು.
- ಕೈಗೊಳ್ಳಬೇಕಾದ ಚಟುವಟಿಕೆಗಳನ್ನು ನಿರ್ಧರಿಸುವುದು.
- ಚಟುವಟಿಕೆಗಳನ್ನು ಅನುಕ್ರಮವಾಗಿ ಜೋಡಿಸುವುದು.
- ಗುರಿಗಳನ್ನು ಸಾಧಿಸಲು ಹಂತಗಳನ್ನು ನಿಗಧಿಪಡಿಸುವುದು.
- ವಿವಿಧ ಚಟುವಟಿಕೆಗಳನ್ನು ಜಾರಿಗೊಳಿಸಲು ಜವಾಬ್ದಾರಿಯುತ ಅಧಿಕಾರಿ/ಗಳನ್ನು ಮತ್ತು / ಅಥವಾ ಸಂಸ್ಥೆಯನ್ನು ನಿಗಧಿಮಾಡುವುದು.
- ಅಗತ್ಯವಾದ ಸಮಯವನ್ನು ಅಂದಾಜಿಸುವುದು

- ಪ್ರತಿ ಖರ್ಚಿನ ಅಂದಾಜು ಮಾಡುವುದು.
- ಯೋಜನೆ ಪ್ರಸ್ತಾವನೆಯನ್ನು ಸಿದ್ಧಪಡಿಸುವುದು.

ಸಂಕ್ಷಿಪ್ತವಾಗಿ, ಕ್ರಿಯ ತಾರ್ಕಿಕ ಚೌಕಟ್ಟು ಸಿದ್ಧಪಡಿಸಬೇಕಾಗಿದೆ (ನಮೂನೆಗಾಗಿ ಅನುಬಂಧ ನೋಡಿ), ಕ್ರಿಯೆಯ ತಾರ್ಕಿಕ ಚೌಕಟ್ಟು ಉದ್ದೇಶಗಳು, ಪ್ರತಿ ಉದ್ದೇಶಕ್ಕಾಗಿ ಕೈಗೊಳ್ಳಬೇಕಾದ ಚಟುವಟಿಕೆಗಳು, ಚಟುವಟಿಕೆಯನ್ನು ಕೈಗೊಳ್ಳುವ ವ್ಯಕ್ತಿಗಳು, ಅಗತ್ಯವಿರುವ ಸಮಯ, ಚಟುವಟಿಕೆಗಳ ವೇಳಾಪಟ್ಟಿ, ಬಜೆಟ್, ಹಂಚಿಕೆ ಮತ್ತು ನಿರೀಕ್ಷೆ ಹೊಂದಿರುತ್ತದೆ.

ಬೋಧನಾ–ಕಲಿಕಾ ಪ್ರಕ್ರಿಯೆಗಳ ಮತ್ತು ತರಗತಿಯ ಅಂತರ್‌ಕ್ರಿಯೆಯ ವಿಷಯದಲ್ಲಿ ಪಾಠದ ಕೊಠಡಿಗಳಲ್ಲಿ ಏನಾಗುತ್ತದೆ, ಅದು ಯೋಜಿಸಿದ ಎಲ್ಲಾ ಕಾರ್ಯತಂತ್ರಗಳ ಪರಾಕಾಷ್ಠೆಯನ್ನು ಪ್ರತಿಬಿಂಬಿಸುವ ಕಾರಣದಿಂದಾಗಿ ಅದು ಅತ್ಯಂತ ಮಹತ್ವದ್ದಾಗಿದೆ.

ಆದ್ದರಿಂದ ತರಗತಿಯ ವ್ಯವಹಾರಗಳನ್ನು ಹೇಗೆ ನಡೆಸಲಾಗುತ್ತದೆ ಮತ್ತು ಮಕ್ಕಳ ಪಾಲ್ಗೊಳ್ಳುವಿಕೆಯ ಮಟ್ಟವನ್ನು ಅರ್ಥ ಮಾಡಿಕೊಳ್ಳುವುದು ಅಗತ್ಯ. ಇದರಿಂದಾಗಿ ಅವುಗಳನ್ನು ಸುಧಾರಿಸಬಹುದು. ತರಗತಿ ಕೊಠಡಿಗಳಲ್ಲಿ ಭೋಧನಾ–ಕಲಿಕಾ ಪ್ರಕ್ರಿಯೆಯ ಕೆಲವು ಪ್ರಮುಕ ಅಂಶಗಳು :

(i) ತರಗತಿ ಪರಿಸರ (ಭೌತಿಕ ಮತ್ತು ಸಆಮಾಜಿಕ ಸೇರಿದಂತೆ)

(ii) ತರಗತಿ ಸಂಘಟನೆ ಮತ್ತು ನಿರ್ವಹಣೆ (ಆಸನ ವ್ಯವಸ್ಥೆ, ವಿನ್ಯಾಸ, ಭೋಧನೆ–ಕಲಿಕೆ ಗುಂಪುಗಳ ಸಂಘಟನೆ, ಸಾಮಗ್ರಿಗಳ ಪ್ರದರ್ಶನ ಮತ್ತು ಉಪಯುಕ್ತತೆ)

(iii) ಶಿಕ್ಷಕರ–ವದ್ಯಾರ್ಥಿಗಳ ಅನುಪಾತ

(iv) ಭೋಧನಾ ವಿಧಾನ ಮತ್ತು ತಂತ್ರಗಳು

(v) ಭೋಧನಾ–ಕಲಿಕೆ ಸಾಮಗ್ರಿಗಳು ಮತ್ತು ಸಹಾಯಗಳ ಲಭ್ಯತೆ ಮತ್ತು ಬಳಕೆ

(vi) ತರಗತಿಯ ಚಟುವಟಿಕೆಗಳಲ್ಲಿ ಮಕ್ಕಳ ಭಾಗವಹಿಸುವಿಕೆ (ಶಾಬ್ಧಿಕ / ಅಶಾಬ್ಧಿಕ)

(vii) ತರಗತಿಯೊಳಗೆ ಭೋಧನೆ–ಕಲಿಕೆಗೆ ಲಭ್ಯವಿರುವ ಸೌಲಭ್ಯಗಳು

(viii) ನವೀನ, ಸಂದರ್ಭೋಚಿತ ಭೋಧನಾ ಪದ್ಧತಿಯನ್ನು ವಿಕಾಸಗೊಳಿಸಲು ಶಿಕ್ಷಕರಿಗೆ ಅವಕಾಶ.

(ix) ಪೋಷಕರ ಪಾಲ್ಗೊಳ್ಳುವಿಕೆಯ ಕಾರ್ಯತಂತ್ರ, ಸ್ಥಳೀಯ ಶಿಕ್ಷಣ ಸ್ನೇಹಿ ಜನರ ಸಹಾಯವನ್ನು ಪಡೆದುಕೊಳ್ಳುವುದು, ಕಲಿಕೆಯ ಪಠ್ಯ ಮತ್ತು ಸಹಪಠ್ಯ ಕ್ಷೇತ್ರಗಳಿಗೆ ಸಮುಧಾಯ ಸಂಪನ್ಮೂಲ ವ್ಯಕ್ತಿಗಳನ್ನು ಬಳಸಿಕೊಳ್ಳುವುದು.

ಎಲ್ಲಾ ಭೋಧನಾ–ಕಲಿಕೆಯು ತರಗತಿಯಲ್ಲಿ ಮಾತ್ರ ನಡೆಯಬೇಕಾಗಿಲ್ಲ. ಕೆಲವೊಮ್ಮೆ ಜೈವಿಕ ವೈವಿಧ್ಯತೆಯ ಪಾಠ ಕಲಿಸಲು ಮಕ್ಕಳನ್ನು ನಿಸರ್ಗ–ನಡಿಗೆಗೆ ಕರೆದೊಯ್ಯುವುದು ಹೆಚ್ಚು ಪರಿಣಾಮಕಾರಿಯಾಗುತ್ತದೆ. ಕೆಲವೊಮ್ಮೆ ಅಂತಹ ಚಟುವಟಿಕೆಗಳಿಗೆ ಬಜೆಟ್‌ನ ಅವಕಾಶ ಬೇಕಾಗುತ್ತದೆ. ಇವುಗಳನ್ನು ಶೈಕ್ಷಣಿಕ ಯೋಜನೆಗೆ ಸೇರಿಸಿರಬೇಕು.

ಮಕ್ಕಳ ವ್ಯಕ್ತಿತ್ವ ವಿಕಾಸ ಮತ್ತು ಸಮಗ್ರ ಶಿಕ್ಷಣಕ್ಕಾಗಿ, ಶಾಲೆಗಳು ಸಾಮಾನ್ಯವಾಗಿ ಕ್ರೀಡೆ, ಯೋಗ, ಸಾಂಸ್ಕೃತಿಕ ಕಾರ್ಯಕ್ರಮಗಳು, ಯೋಜನಾ ಕಾರ್ಯಗಳು, ಚಟುವಟಿಕೆ ಆಧಾರಿತ ಕಲಿಕೆ ಆರೋಗ್ಯ, ಪೌಷ್ಠಿಕತೆ, ಉದ್ಯೋಗಗಳು – ಇತ್ಯಾದಿಗಳಿಗೆ ಸಂಬಂಧಿಸಿದಂತೆ ಜೀವನ ಕೌಶಲಗಳು – ಮುಂತಾದ ಚಟುವಟಿಕೆಗಳನ್ನು ನಡೆಸುತ್ತವೆ.ಇಂತಹವುಗಳು ಸಮುದಾಯದ ಚಟುವಟಿಕೆಗಳ ಕೇಂದ್ರವಾಗಿರುವ ಸಾಮಾಜಿಕ ಸಂಸ್ಥೆಯಾದ ಶಾಲೆಯ ಮೇಲೆ ಗಮನ ಹರಿಸುತ್ತದೆ. ಸಾಮಾಜಿಕ ಮತ್ತು ನೈಸರ್ಗಿಕ ಸನ್ನಿವೇಶವನ್ನು ಸದುಪಯೋಗ ಪಡಿಸಿಕೊಳ್ಳಲು ವೃತ್ತಿ ನಿತರರು, ರೈತರು, ಕುಶಲಕರ್ಮಿಗಳೊಂದಿಗೆ ಸೇರಿಸುವುದರಿಂದ ಮಕ್ಕಳಿಗೆ ಕೆಲಸದ ಅನುಭವವನ್ನು ಪಡೆಯಲು ಪ್ರೋತ್ಸಾಹಿಸಿದಂತಾಗುತ್ತದೆ. ಮಕ್ಕಳ ಒಟ್ಟಾರೆ ದೈಹಿಕ, ಸಾಮಾಜಿಕ, ಭಾವನಾತ್ಮಕ ಮತ್ತು ಮಾನಸಿಕ ಬೆಳವಣಿಗೆಗೆ ಭೋಧನೆ–ಕಲಿಕೆಯ ಪ್ರಕ್ರಿಯೆಯಲ್ಲಿ ಈ ಚಟುವಟಿಕೆಗಳನ್ನು ಹಮ್ಮಿಕೊಳ್ಳಬೇಕಾಗಿದೆ. ಆಟದ ಮೈದಾನ, ದೈಹಿಕ ಶಿಕ್ಷಣ, ಯೋಗ ಶಿಕ್ಷಕ, ನಾಟಕದ ಉಪಕರಣಗಳು, ಅಂತರ್–ಶಾಲಾ ಕ್ರೀಡೆಗಳು ಮತ್ತು ಇತರ ಸ್ಪರ್ಧೆಗಳಿಗೆ ಯೋಜನೆ ಮತ್ತು ಬಜೆಟ್‌ನ ಅಗತ್ಯವಿರುತ್ತದೆ.

1986ರ ರಾಷ್ಟ್ರೀಯ ಶಿಕ್ಷಣ ನೀತಿಯ ನಂತರ ಹಲವು ನವೀನ ಯೋಜನೆಗಳು ಬಂದವು. ಅವುಗಳೆಂದರೆ – ಕಪ್ಪು ಹಲಗೆ ಕಾರ್ಯಾಚರಣೆ, ಶಿಕ್ಷಕರ ಶಿಕ್ಷಣ, ಔಪಚಾರಿಕೆವಲ್ಲದ ಶಿಕ್ಷಣ, ಮಹಿಳಾ ಸಮಾಖ್ಯ, ಪ್ರಾಥಮಿಕ ಶಿಕ್ಷಣಕ್ಕೆ ಪೌಷ್ಠಿಕಾಂಶದ ರಾಷ್ಟ್ರೀಯ ಕಾರ್ಯಕ್ರಮ ಹಾಗೂ ಬಿಹಾರ, ರಾಜಸ್ಥಾನ, ಯು.ಪಿ. ಮತ್ತು ಆಂಧ್ರ ಪ್ರದೇಶದ ವಿಶೇಷ ಪ್ರಾಜೆಕ್ಟ್‌ಗಳು. ಈ ನವೀನ ಪರಿಕಲ್ಪನೆಗಳು ಮತ್ತು ಅಭ್ಯಾಸಗಳಲ್ಲಿ TLM ಗಳು ನಿರ್ಣಾಯಕ ಪಾತ್ರವನ್ನು ವಹಿಸಿರುವುದರಿಂದ, ಇವುಗಳನ್ನು ಅನುಷ್ಠಾನಗೊಳಿಸುವುದಕ್ಕಾಗಿ ಅಸ್ತಿತ್ವದಲ್ಲಿರುವ TLM ಗಳ ಪ್ರಕಾರ, ಲಭ್ಯತೆ, ಅನುಕೂಲತೆ ಮತ್ತು ಉಪಯುಕ್ತತೆಗಳನ್ನು ನಿರ್ಣಯಿಸುವುದು ಮುಖ್ಯವಾಗುತ್ತದೆ. ಕಾರ್ಯಪುಸ್ತಕಗಳು, ಶಿಕ್ಷಕರ ಮಾರ್ಗದರ್ಶಿಗಳು, ಭೋಧನಾ–ಕಲಿಕಾ ಸಾಮಗ್ರಿಗಳು, ಶೈಕ್ಷಣಿಕ ಕಿಟ್‌ಗಳನ್ನು ಖರೀದಿಸುವ ಮತ್ತು ತಯಾರಿಸುವ ಉದ್ದೇಶದಿಂದ ಪ್ರತಿ ಶಿಕ್ಷಕರಿಗೆ ವಾರ್ಷಿಕವಾಗಿ ರೂ.500/– ರಂತೆ ನೀಡುವ ಅವಕಾಶವಿದೆ.

ಇವುಗಳನ್ನು ಯೋಜನಾ ಪ್ರಸ್ತಾವನೆಯಲ್ಲಿ ಸೇರಿಸಿಕೊಳ್ಳಬಹುದು.

ಮಗು–ಸ್ನೇಹಿ ಶಾಲಾ ಪರಿಸರವನ್ನು ರಚಿಸುವುದು ನಾಗರೀಕ ಕಾರ್ಯಗಳ ಕೇಂದ್ರ ಬಿಂದುವಾಗಿದೆ. ಶಾಲೆಯ ಅಪಾಯಕಾರಿಯಲ್ಲದ (ತಗ್ಗಿನ ಪ್ರದೇಶ, ಹೆದ್ದಾರಿ, ನದಿ/ಕೊಳ್ಳದ ಹತ್ತಿರ, ಹೆಚ್ಚು ಒತ್ತಡದ ವಿದ್ಯುತ್ ಮಾರ್ಗಗಳ ಕೆಳಗೆ ಇರಬಾರದು) ಒಂದು ಭೂ ಪ್ರದೇಶದಲ್ಲಿ ಇರಬೇಕು, ಹಾಗೂ ಎಲ್ಲಾ ವರ್ಗದ ಮಕ್ಕಳಿಗೂ ಸುಲಭ ದೂರದಲ್ಲಿ ಇರಬೇಕು. ಶಾಲೆಯ ಕಟ್ಟಡದ ವಿನ್ಯಾಸವು ಕ್ರಿಯಾತ್ಮಕ ಮತ್ತು ಆಕರ್ಷಕವಾಗಿರಬೇಕು. ತರಗತಿ ಕೊಠಡಿಗಳ ಒಳಭಾಗವು ಸಾಕ್ಷು ಗಾಳಿ ಮತ್ತು ಬೆಳಕು ಹೊಂದಿದ್ದು, ಶೇಖರಣೆ, ಪ್ರದರ್ಶನ ಮತ್ತು ಕಪ್ಪು ಹಲಗೆಗೆ ಜಾಗವಿರಬೇಕು. ಒಳಗೊಳ್ಳುವ ಶಿಕ್ಷಣದ ಅಗತ್ಯಗಳನ್ನು ಪೂರೈಸುವ ಸಲುವಾಗಿ ಪ್ರತಿ ಶಾಲೆಯಲ್ಲಿ ತಡೆಗೋಡೆ ಮುಕ್ತ ವೈಶಿಷ್ಟ್ಯಗಳಾದ ರ್‍ಯಾಂಪ್, ಕೈಹಿಡಿಗಳನ್ನು (ಹ್ಯಾಂಡ್ ರೇಲ್ಸ್) ಕಡ್ಡಾಯವಾಗಿ ಹೊಂದಿರಬೇಕು. ಪ್ರತಿ ಶಾಲೆಗೂ ಶೌಚಾಲಯ ಮತ್ತು ಕುಡಿಯುವ ನೀರು, ವಿದ್ಯುತ್, ಕಾಂಪೌಂಡ್ ಮತ್ತು ಆಟದ ಮೈದಾನಗಳು ಅಗತ್ಯವಾಗಿವೆ. ಶಾಲಾ ಆವರಣದಲ್ಲಿ ಹಸಿರು ಮನೆ ಇರಬೇಕು. (ಕೊಠಡಿಗಳು, ಶೌಚಾಲಯಗಳು, ಕುಡಿಯುವ ನೀರು, ಆಸನ

ವ್ಯವಸ್ಥೆಗಳು, ಶೇಖರಣಾ ಜಾಗಗಳು, ಕಂಪ್ಯೂಟರ್‌ಗಳು ಮತ್ತು ಇತರ ಭೋಧನಾ–ಕಲಿಕಾ ಸಾಧನಗಳನ್ನು ಸ್ಥಾಪಿಸುವುದು, ಕಾಂಪೌಂಡ್ ಮುಂತಾದುವು). ಬಳಸಬಹುದಾದ, ಸಣ್ಣ / ಪ್ರಮುಖ ರಿಪೇರಿ ಅಗತ್ಯವಿರುವ ಮತ್ತು ಹೊಸ ಮೂಲ ಸೌಕರ್ಯವನ್ನು ಸರಿಯಾಗಿ ಅಂದಾಜುಮಾಡಿ, ಯೋಜನಾ ಪುಸ್ತಕದಲ್ಲಿ ಬಜೆಟ್ ಅವಶ್ಯಕತೆಗಳನ್ನು ಸೇರಿಸಬೇಕು. ನಿರ್ಮಾಣದ ತಾಂತ್ರಿಕತೆಗಳು, ಘಟಕವೆಚ್ಚ, ನಿಧಿಯ ಹರಿವು, ಸಮುದಾಯದ ಪಾತ್ರಗಳು ಮತ್ತು ಜವಾಬ್ದಾರಿ ಮತ್ತು ಆಯ–ವ್ಯಯ ದಾಖಲೆ ವ್ಯವಸ್ತೆ – ಇವು ಲಭ್ಯವಿದ್ದರೆ 'ಸಮುದಾಯ ನಿರ್ಮಾಣ ಕೈಪಿಡಿ' ಗೆ ಅನುಸಾರವಾಗಿ ಇರಬೇಕು, ಹಾಗೂ ಬಜೆಟ್‌ನಲ್ಲಿ ಅವಕಾಶಗಳನ್ನು ಮಾಡಬೇಕು.

ಯಾವ ಅವಕಾಶಗಳು ಲಭ್ಯವಿವೆ ಮತ್ತು ಅವುಗಳನ್ನು ಯೋಜನೆ ಪ್ರಸ್ತಾವನೆಯಲ್ಲಿ ಹೇಗೆ ತೋರಿಸುವುದು ಎನ್ನುವುದು ಮುಖ್ಯವಾಗಿರುತ್ತದೆ. ಕರಡು ಯೋಜನೆ ಪ್ರಸ್ತಾವನೆಯು ಹೊಂದಿರಬೇಕಾದ ಅಂಶಗಳು :

- ಸಂದರ್ಭ/ಹಿನ್ನೆಲೆ /ಜನಸಂಖ್ಯಾ ಮಾಹಿತಿ ಸೇರಿದಂತೆ ಸಮಸ್ಯೆ
- ಉದ್ದೇಶಗಳು
- ಕಾರ್ಯತಂತ್ರ
- ಸಿಬ್ಬಂದಿ ಅಗತ್ಯ
- ಮೂಲಭೂತ ಸೌಕರ್ಯಗಳ ಅವಶ್ಯಕತೆ
- ಕಾರ್ಯಕ್ರಮ / ಚಟುವಟಿಕೆಗಳು
- ಶಿಕ್ಷಕರ ತರಬೇತಿಗಾಗಿ ತಂತ್ರ, ಪಠ್ಯಪುಸ್ತಕ ಪರಿಷ್ಕರಣೆ, ಮಾಡ್ಯೂಲ್ / ಕೈಪಿಡಿಗಳ ಅಭಿವೃದ್ಧಿ.
- ಮಕ್ಕಳ ಪ್ರಗತಿಯನ್ನು ಟ್ರ್ಯಾಕ್ ಮಾಡುವುದಕ್ಕಾಗಿ ವಿವರವಾದ ಯೋಜನೆಗಳು
- ಯೋಜನೆಯ ಅವಧಿಯಲ್ಲಿ ಕೈಗೊಳ್ಳಬೇಕಾದ ಹೊಸ ಕೆಲಸ
- ದಾಖಲೆ / ಪ್ರಕಟಿಸಬೇಕಾದ ವರದಿಗಳು
- ಮೇಲ್ವಿಚಾರಣೆ, ಮೌಲ್ಯಮಾಪನ, ಸಾಮಾಜಿಕ ತಪಾಸಣೆ (ಆಡಿಟ್)
- ಪ್ರತಿ ಚಟುವಟಿಕೆಗೆ ನಿಗಧಿಮಾಡಿದ ಬಜೆಟ್ ಹಣ
- ಹಿಂದಿನ ವರ್ಷದಲ್ಲಿ ಕೇಂದ್ರ–ರಾಜ್ಯ ಪಾಲುಗಳ ಹಣ ಬಿಡುಗಡೆಯ ಸ್ಥಿತಿ.
- ಹಣಕಾಸಿನ ವರ್ಷದ ಅಂತ್ಯದಲ್ಲಿ ಖರ್ಚಾಗದೇ ಉಳಿದ ಹಣ (ಪುನರಾವರ್ತಿತ ಅನುದಾನ)
- ಹಿಂದಿನ ಯೋಜನಾ ಅವಧಿಯಿಂದ ಈ ಅವಧಿಗೆ ಬಂದ ಖರ್ಚಾಗದೇ ಉಳಿದ ಅನುದಾನ (ಪುನರಾವರ್ತಿತವಲ್ಲದ)
- ಪ್ರಸ್ತುತ ವರ್ಷಕ್ಕೆ ಬೇಕಾದ ಬಜೆಟ್‌ನ ಹೇಳಿಕೆ.

ಚಟುವಟಿಕೆಗಳ ವೆಚ್ಚವನ್ನು ನಿಗಧಿತ ಮಾನದಂಡಗಳ ಪ್ರಕಾರವೇ ಮಾಡಬೇಕು, ಅಲ್ಲದೇ, ಯೋಜನಾ ಪ್ರಸ್ತಾವನೆಯು – ಕ್ರಮ ತೆಗೆದುಕೊಳ್ಳುವ ವರದಿಗಳು, ಪ್ರತಿಬಂಧಕಗಳನ್ನು ಅರ್ಥ ಮಾಡಿಕೊಳ್ಳಲು ಮಾಡಿದ ಅಧ್ಯಯನ ವರದಿ, ರಾಜ್ಯ ಅಧಿಕಾರಿಗಳಿಂದ ಪ;ಡೆದ ಆಡಳಿತಾತ್ಮಕ ಅನುಮತಿಗಳು, ನೀತಿಗಳು–ಮುಂತಾದುವುಗಳನ್ನು ಒಳಗೊಂಡಿರುತ್ತದೆ. ರೂಢಿಬದ್ಧವಲ್ಲದ ಯಾವುದೇ ಬದಲಾವಣೆಯನ್ನು ಯೋಜನೆಯಲ್ಲಿ ಸೂಚಿಸದಲ್ಲಿ, ಅದಕ್ಕೆ ಸಂಪೂರ್ಣ ಸಮರ್ಥನೆಯನ್ನು ನೀಡಬೇಕಾಗುತ್ತದೆ. ಯೋಜನೆ ರೂಪಿಸುವ ಪ್ರಕ್ರಿಯೆ, ಯೋಜನೆ ಸಭೆಗಳು, ಕಾರ್ಯಾಗಾರಗಳು, ಸೆಮಿನಾರ್‌ಗಳು ಮುಂತಾದ ಕೋರ್ ಯೋಜನಾ ತಂಡವು ಪಾಲುದಾರರೊಂದಿಗೆ ನಡೆಸಿದ ಚಟುವಟಿಕೆಗಳನ್ನು ಅತ್ಯವಶ್ಯಕವಾಗಿ ಆರ್.ಟಿ.ಇ. ಗೆ ಶಾಸನ ಬದ್ದ ರೀತಿಯಲ್ಲಿ ಸ್ಪಷ್ಟವಾಗಿ ದಾಖಲಿಸಿರಬೇಕು.

ಬಾಟಮ್–ಅಪ (Bottom up) ವಿಧಾನವೆಂದರೆ ಪ್ರತಿ ಶಾಲೆ – ಖಾಸಗಿ ಅನುದಾನಿತ /ಅನುದಾನರಹಿತ ಮತ್ತು ಸರ್ಕಾರಿ ಶಾಲೆಗಳು ಒಂದು ಆವಾಸಸ್ಥಳ (habitation) ದ ಮಟ್ಟದಲ್ಲಿ ತಮ್ಮದೇ ಅಭಿವೃದ್ಧಿ ಯೋಜನೆಯ ಪ್ರಸ್ತಾವನೆಗಳನ್ನು ತಯಾರಿಸುವುದಾಗಿದೆ. ಪ್ರಾಥಮಿಕವಾಗಿ ಸೂಕ್ಷ್ಮ ಯೋಜನೆ ಪ್ರಕ್ರಿಯೆಗಳು ಶಾಲೆಗಳ ಯೋಜನೆಗೆ ಉತ್ತಮವಾದವು ಎಂದು ವಿವರಿಸಲಾಗಿದೆ.

ಆವಾಸ ಸ್ಥಳದ ಮಟ್ಟದಲ್ಲಿ, ಸರ್ಕಾರದ ನೆರವು ಬೇಕಿರುವ ಶಾಲಾ ಯೋಜನೆ ಪ್ರಸ್ತಾವನೆಗಳು ಕ್ರೋಢೀಕರಿಸಲ್ಪಟ್ಟಿರುತ್ತವೆ. ಏಕೆಂದರೆ UEE ಯಲ್ಲಿ ಸಮುದಾಯ ಆಧಾರಿತ ವಿಧಾನವನ್ನು ಅಳವಡಿಸಿಕೊಳ್ಳಲಾಗಿದೆ.

**ನಿಮ್ಮ ಪ್ರಗತಿಯನ್ನು ಪರಿಶೀಲಿಸಿ–2**

1. ಯೋಜನೆ ಎಂದರೇನು ? ಸೂಕ್ಷ್ಮ ಯೋಜನೆ ಎಂದರೇನು ?

2. UEE ಗಾಗಿ ಸೂಕ್ಷ್ಮ ಯೋಜನೆಗಳನ್ನು ಏಕೆ ಅಳವಡಿಸಿಕೊಳ್ಳಲಾಗಿದೆ ?

3. ಸೂಕ್ಷ್ಮ ಯೋಜನೆಯು ಒಳಗೊಂಡಿರುವ ಹಂತಗಳು ಯಾವುವು ?

## 7.3.4 DEO, DRC (DIET), BEO ಗಳು, BRC ಗಳು ಮತ್ತು CRC ಗಳ ಪಾತ್ರಗಳು ಮತ್ತು ಹೊಣೆಗಾರಿಕೆಗಳು.

DEO, DRC (DIET), BEO ಗಳು, BRC ಗಳು ಮತ್ತು CRC ಗಳ ಪಾತ್ರಗಳು ಮತ್ತು ಜವಾಬ್ದಾರಿಗಳು ಕೆಳಕಂಡಂತಿರುತ್ತವೆ :

A) **ಜಿಲ್ಲಾ ಮಟ್ಟ :**

ಜಿಲ್ಲಾ ಪ್ರಾಥಮಿಕ ಶಿಕ್ಷಣ ಅಧಿಕಾರಿ DEO) ಯೋಜನೆ, ಅನುಷ್ಠಾನ, ಸಂಯೋಜನೆ ಮತ್ತು ಮೇಲ್ವಿಚಾರಣೆ ಕಾರ್ಯಗಳನ್ನು ನಿರ್ವಹಿಸುತ್ತಾರೆ. ಅವರು ಪ್ರಾಥಮಿಕ ಶಿಕ್ಷಣದಲ್ಲಿ ಕೆಳಗಿನ ಜವಾಬ್ದಾರಿಗಳನ್ನು ನಿರ್ವಹಿಸಬೇಕು :

- ಮಕ್ಕಳ ಶಿಕ್ಷಣ ಹಕ್ಕನ್ನು ಅರಿತುಕೊಳ್ಳಲು ಒಂದು ಸಕ್ರೀಯ ವಾತಾವರಣವನ್ನು ರಚಿಸುವುದು.
- ಎಲ್ಲಾ ಆವಾಸಸ್ಥಳಗಳಲ್ಲಿ, ಪ್ರಾಥಮಿಕ ಮತ್ತು ಮೇಲ್ಮಟ್ಟದ ಶಾಲಾ ಸೌಲಭ್ಯದ ಲಭ್ಯತೆಯನ್ನು ಖಚಿತಪಡಿಸುವುದು.
- ಶಾಲಾ ವಯಸ್ಸಿನ ಎಲ್ಲಾ ಮಕ್ಕಳಿಗೆ ನೆರೆಹೊರೆಯಲ್ಲಿ ಶಿಕ್ಷಣಕ್ಕೆ ಭೌತಿಕ ಮತ್ತು ಸಾಮಾಜಿಕ ಅವಕಾಶ ಒದಗಿಸುವುದು.
- ಎಲ್ಲಾ ಮಕ್ಕಳನ್ನು ಸೇರಿಸಿಕೊಳ್ಳುವುದಕ್ಕೆ / ಉಳಿಸಿಕೊಳ್ಳುವುದಕ್ಕೆ ವಿಶೇಷವಾಗಿ PRI ಗಳನ್ನು ತೊಡಗಿಸಿಕೊಳ್ಳುವುದು.
- ಶಾಲೆಯಿಂದ ಹೊರಗುಳಿದ ಮಕ್ಕಳನ್ನು ದಾಖಲಿಸಿಕೊಳ್ಳಲು ಮತ್ತು ಉಳಿಸಿಕೊಳ್ಳಲು ಕ್ರಮ ಕೈಗೊಳ್ಳುವುದು (ಉದಾ : ವಲಸಿಗ, ಬೀದಿ ಮಕ್ಕಳು, ಎಸ್ಸಿ / ಎಸ್ಟಿ / ಅಲೆಮಾರಿ ಬುಡಕಟ್ಟಿನ ಮಕ್ಕಳು, ವಿಶೇಷ ಅಗತ್ಯವುಳ್ಳ ಮಕ್ಕಳು) – ಇವರಿಗೆ ವಸತಿ ಶಾಲೆಗಳು (ಮಹಾರಾಷ್ಟ್ರ ಮಾದರಿಯ) ಅಥವಾ ಪರ್ಯಾಯ ಶಾಲೆಗಳನ್ನು ತೆರೆದು ಶಿಕ್ಷಣದ ಅವಕಾಶ ಒದಗಿಸುವುದು.

- 18 ವರ್ಷ ವಯಸ್ಸಿನವರೆಗಿನ ಎಲ್ಲಾ ಮಕ್ಕಳ ಜನ್ಮ ನೋಂದಣಿ ಪ್ರಚಾರ ಪ್ರಾರಂಭಿಸಿ, ದಾಖಲೆ ಕಾಪಾಡುವುದು.

- ಶಾಲೆಗಳಲ್ಲಿನ ಖಾಲಿ ಶಿಕ್ಷಕ ಹುದ್ದೆಗಳನ್ನು ಮೇಲ್ವಿಚಾರಣೆ ಮಾಡಿ ಉನ್ನತ ಶಿಕ್ಷಣ ಪ್ರಾಧಿಕಾರಕ್ಕೆ ವರದಿ ಮಾಡುವುದು.

- ಶಿಕ್ಷಕರ ತರಬೇತಿಯನ್ನು ಮೇಲ್ವಿಚಾರಣೆ ಮಾಡಿ, ಅಗತ್ಯವಿರುವಡೆ ಮೂಲ ಸೌಕಯ್ಯ ಒದಗಿಸುವುದು.

- ಶಿಕ್ಷಕರ–ಮಕ್ಕಳ ಹಾಜರಾತಿ, ಶೈಕ್ಷಣಿಕ ಗುಣಮಟ್ಟ ಮತ್ತು ಟಿ.ಎಲ್.ಎಂ. ಗಳ ಲಭ್ಯತೆಯನ್ನು ಮೇಲ್ವಿಚಾರಣೆ ಮಾಡಲು ಶಾಲಾ ನಿರ್ವಹಣಾ ಸಮಿತಿಗಳ ಸಾಮರ್ಥ್ಯವನ್ನು ಹೆಚ್ಚಿಸುವುದು.

- ಶಾಲೆ ನೀಡಲಾಗದ ಪ್ರದೇಶಗಳಲ್ಲಿ ವಾಸಿಸುವ ಮಕ್ಕಳಿಗೆ ಸನಿವಾಸ ಸೌಕರ್ಯವನ್ನು ಒದಗಿಸಿ, ಅವರ ದಾಖಲಾತಿಯನ್ನು ಖಚಿತಪಡಿಸುವುದು.

- ಶಾಲಾ ಪರಿಸರವು ಮಗುಸ್ನೇಹಿಯಾಗಿರುವಂತೆ ಭೋಧನಾ–ಕಲಿಕಾ ಸಾಮಗ್ರಿಗಳು, ಸಲಕರಣೆಗಳನ್ನು ಒದಗಿಸುವುದು.

- ಎಸ್ಸಿ /ಎಸ್ಟಿ /ಅಲೆಮಾರಿ ಬುಡಕಟರಟು, ಒ.ಬಿ.ಸಿ., ಅಲ್ಪಸಂಖ್ಯಾತ ಮಕ್ಕಳು, ಬಾಲಕಿಯರು, ಬೀದಿ ಮಕ್ಕಳು, ಬಾಲ ಕಾರ್ಮಿಕರು – ಹೀಗೆ ಅನನುಕೂಲ ಗುಂಪುಗಳಿಗೆ ಸೇರಿದ ಮಕ್ಕಳ ಪ್ರವೇಶಶಾತಿಯನ್ನು ಖಚಿತಪಡಿಸಿಕೊಳ್ಳಲು ವಿವಿಧ ಇಲಾಖೆಯ ಜಿಲ್ಲಾ ಅಧಿಕಾರಿಗಳೊಂದಿಗೆ ಸಹಕರಿಸುವುದು.

- PRI ಮಂಡಳಿಯ ಅಧ್ಯಕ್ಷರ ಅಥವಾ ಸ್ಥಳೀಯ ಸ್ವಯಂ ಸರ್ಕಾರದ ಶಿಕ್ಷಣ ಸಮಿತಿಯ ಅಧ್ಯಕ್ಷರ ನೇತೃತ್ವದಲ್ಲಿ ಕುಂದು–ಕೊರತೆ ನಿವಾರಣ ಸಮಿತಿಗಳನ್ನು ಸ್ಥಾಪಿಸುವುದು.

- ಸಾಮಾಜಿಕ ಆಡಿಟ್ ಪ್ರಕ್ರಿಯೆಯಲ್ಲಿ ಲಿಂಗ ಮತ್ತು ಇತರ ಸಾಮಾಜಿಕ ಹೊರಗಿಡುವಿಕೆಯ ಸಮಸ್ಯೆಗಳನ್ನು ಬಗೆಹರಿಸುವುದು.

- ದಾಕಲಾತಿಗೆ ಮಕ್ಕಳನ್ನು ಪರೀಕ್ಷಿಸುವ ಕ್ರಮವನ್ನು ನಿಷೇಧಿಸುವ ಸಲುವಾಗಿ ಮಹಿಳಾ ಮತ್ತು ಮಕ್ಕಳ ಅಭಿವೃದ್ಧಿ ಇಲಾಖೆ, ಆರೋಗ್ಯ ಇಲಾಖೆ, ಪೋಲೀಸ್ ಇಲಾಖೆ, ಚುನಾಯಿತ ಪ್ರತಿನಿಧಿಗಳು, ತಜ್ಞರು, ಕಾರ್ಯಕರ್ತರು, ಹೆತ್ತವರು,

ಮುಖ್ಯ ಶಿಕ್ಷಕರು ಮತ್ತು ಅಧಿಕಾರಿಗಳನ್ನೊಳಗೊಂಡ ಜಿಲ್ಲಾ ಶಿಕ್ಷಣ ಸಮಿತಿಯನ್ನು ಸ್ಥಾಪಿಸುವುದು.

- ವರ್ಷಾಂತ್ಯದ ಪರೀಕ್ಷೆಗಳಿಲ್ಲದಂತೆ, ಯಾವುದೇ ದಂಡನೆ, ದೈಹಿಕ ಶಿಕ್ಷೆ ಆಗದಂತೆ ಹಾಗೂ ಮಕ್ಕಳ ಹಕ್ಕುಗಳ ಉಲ್ಲಂಘನೆಯಾಗದಂತೆ ಖಚಿತಪಡಿಸುವುದು.

ಬಹು ಮುಖ್ಯವಾಗಿ, ಶಾಲೆಗಳು, ಗ್ರಾಮಗಳು, ಬ್ಲಾಕ್‌ಗಳು ತಯಾರಿಸಿದ ಪ್ರಸ್ತಾವನೆಗಳನ್ನು ಕ್ರೋಢೀಕರಿಸಿ, DEO ಜಿಲ್ಲಾ ಯೋಜನೆಯನ್ನು ಸಿದ್ಧಪಡಿಸಬೇಕು. ಪ್ರಾಥಮಿಕ ಶಿಕ್ಷಣದ ಪ್ರಸ್ತುತ ಸ್ಥಿತಿಯ ಸ್ಪಷ್ಟ ಚಿತ್ರಣಕ್ಕಾಗಿ – ಎಲ್ಲಾ ಮಕ್ಕಳು ನಡೆದುಹೋಗುವ ದೂರದ ಅಳತೆಯಲ್ಲಿ ಶಾಲೆಯ ಲಭ್ಯತೆ ಹಾಗೂ – ಮೂರು–ನಾಲ್ಕು ವರ್ಷಗಳಿಗೊಮ್ಮೆ 'ಸ್ಕೂಲ್ ಮ್ಯಾಪಿಂಗ್' ಕೈಗೊಳ್ಳಬೇಕು. ಶಾಲೆಗಳು, ಗ್ರಾಮಗಳು ಮತ್ತು ಬ್ಲಾಕ್‌ಗಳಿಂದ ಪಡೆದ ಪ್ರಸ್ತಾವನೆಗಳನ್ನು ಕ್ರೋಢೀಕರಿಸಲು ಇದು ಸಹಾಯವಾಗುತ್ತದೆ.

**ನಿಮ್ಮ ಪ್ರಗತಿಯನ್ನು ಪರಿಶೀಲಿಸಿ–3**

1. ಮೇಲ್ವಿಚಾರಣೆ ಎಂದರೇನು ? UEE ಯ ಅನುಷ್ಠಾನವನ್ನು ಸಮುದಾಯ ಹೇಗೆ ಮೇಲ್ವಿಚಾರಣೆ ಮಾಡಬಹುದು ?

2. UEE ಅನುಷ್ಠಾನದ ಮೇಲ್ವಿಚಾರಣೆಯಲ್ಲಿ ಡಿ.ಇ.ಓ. ಪಾತ್ರವನ್ನು ಪರಿಶೀಲಿಸಿ.

## B) ಪ್ರಾದೇಶಿಕ ಮತ್ತು ಸಾಮಾಜಿಕ ಮ್ಯಾಪಿಂಗ್ :

ನೆರೆಹೊರೆಯ ಮಕ್ಕಳು ಒಂದಕ್ಕಿಂತ ಹೆಚ್ಚು ಶಾಲೆಗೆ ಹೋಗುವ ಸಾಧ್ಯತೆಯಿದೆ. ಅಂತೆಯೇ ಒಂದು ಶಾಲೆಗೆ ಹೋಗುವ ಮಕ್ಕಳು ಒಂದಕ್ಕಿಂತ ಹೆಚ್ಚಿನ ನೆರೆಹೊರೆಯಲ್ಲಿ ವಾಸಿಸುವ ಸಂಭವವಿದೆ. ಶಾಲೆಯನ್ನು ಒದಗಿಸಿದ ಮಾತ್ರಕ್ಕೆ ಎಲ್ಲಾ ಮಕ್ಕಳು ಹಾಜರಾಗುತ್ತಾರೆ ಮತ್ತು ಕಲಿಕಾ ಪ್ರಕ್ರಿಯೆಯಲ್ಲಿ ಭಾಗವಹಿಸುತ್ತಾರೆ ಎಂದು ಹೇಳಲಾಗದು. ಶಾಲೆಯು ಇರಬಹುದು, ಮಕ್ಕಳು ಭಾಗವಹಿಸಬಹುದು; ಹಲವು

ದಿನಗಳವರೆಗೆ ಇರಬಹುದು, ನಂತರ ಬಿಡಬಹುದು ಹಾಗೂ ಅವರಿಂದ ಕಲಿಕೆಯ ಹೊರೆಯನ್ನು ನಿಭಾಯಿಸಲು ಸಾಧ್ಯವಾಗದಿರಬಹುದು. ಶಾಲಾ ಮ್ಯಾಪಿಂಗ್ ಇವುಗಳಿಗೆ ಸಹಾಯವಾಗುತ್ತದೆ.

- ಸಾಮಾಜಿಕ, ಸಾಂಸ್ಕೃತಿಕ, ಆರ್ಥಿಕ ಮತ್ತು / ಅಥವಾ ಲಾಜಿಸ್ಟಿಕ್ ಕಾರಣಗಳಿಗಾಗಿ ಶಾಲೆಗೆ ಬರಲು ಸಾಧ್ಯವಾಗದ ಮಕ್ಕಳನ್ನು ಗುರುತಿಸುವುದು.

- ಮೂಲಭೂತ ಸೌಕರ್ಯಗಳು, ಶಿಕ್ಷಕರು ಮತ್ತು ಉಪಕರಣಗಳನ್ನು ಒಳಗೊಂಡಂತೆ ಶಿಕ್ಷಣ ಸೇವೆಗಳ ಕ್ರಿಯಾತ್ಮಕ ದೃಷ್ಠಿ ಕೋನವನ್ನು ನಿರ್ಮಿಸುವ ಮೂಲಕ ಜಾತಿ, ಧರ್ಮ, ಲಿಂಗ ಅಥವಾ ಅಂತರವನ್ನು ಲೆಕ್ಕಿಸದೆ ಸಮಂಜಸವಾದ ಗುಣಮಟ್ಟದ ಶಿಕ್ಷಣವನ್ನು ಎಲ್ಲಾ ಮಕ್ಕಳಿಗೂ ನೀಡುವುದು.

ಶಾಲಾ ಮ್ಯಾಪಿಂಗ್ ಪ್ರಕ್ರಿಯೆಯು ಈ ಕೆಳಗಿನ ಹಂತಗಳನ್ನು ಒಳಗೊಂಡಿದೆ :

(i) ಗ್ರಾಮದಲ್ಲಿ ಪರಿಸರ ಕಟ್ಟಡ

(ii) ವಿಶೇಷವಾಗಿ ಶಾಲಾ ಮ್ಯಾಪಿಂಗ್‌ಗಾಗಿ ಗ್ರಾಮ ಶಿಕ್ಷಣ ಸಮಿತಿಯ ರಚನೆ

(iii) ಶಾಲಾ ಮ್ಯಾಪಿಂಗ್ ನಡೆಸಲು ಗ್ರಾಮ ಸಮಿತಿ ಸದಸ್ಯರಿಗೆ ತರಬೇತಿ.

(iv) ಹಳ್ಳಿಯ ಕರಡು ನಕ್ಷೆ ತಯಾರಿ

(v) ಮನೆ–ಮನೆ ಸಮೀಕ್ಷೆ

(vi) ವಿವಿಧ ಮನೆಗಳಿರುವ ಅಂತಿಮ ನಕ್ಷೆಯ ತಯಾರಿ, ಪ್ರತಿ ಮನೆಯ ಮಕ್ಕಳ ಸಂಖ್ಯೆ ಮತ್ತು ಅವರ ದಾಖಲಾತಿ ಸ್ಥಿತಿ.

(vii) ಗ್ರಾಮ / ಶಾಲಾ ಶಿಕ್ಷಣದ ರಿಜಿಸ್ಟರ್ ತಯಾರಿ

(viii) ಜನರಿಗೆ ಮ್ಯಾಪ್‌ನ ಪ್ರಸ್ತುತಿ ಮತ್ತು ವಿಶ್ಲೇಷಣೆ

(ix) ಜನರ ಸಲಹೆಗಳನ್ನು ಪಡೆಯುವುದು.

ಶಾಲೆಯ ನಕ್ಷೆ ತಯಾರಿಸುವಲ್ಲಿ ಜಿಲ್ಲಾ ಸಂಪನ್ಮೂಲ ಕೇಂದ್ರ (DRC) ಅಗತ್ಯ ಸಹಾಯ ನೀಡುತ್ತದೆ. ಯು.ಇ.ಇ. ಗುರಿಗಳನ್ನು ಸಾಧಿಸಲು ಬೇಕಾದ ಬಜೆಟ್ ಅಂಕಿ–ಸಂಖ್ಯೆಯಾಗಲೀ, ಹಲವು ಮಧ್ಯಸ್ಥಿಕೆ ಕ್ರಮಗಳಷ್ಟೇ ಯೋಜನೆಯಲ್ಲ, ಎಂಬುದನ್ನು ಮೇಲಿನ ಅಂಶಗಳಿಂದ ಗಮನಿಸಬಹುದು. ಜಿಲ್ಲೆಯ ಮಟ್ಟದಲ್ಲಿ UEE ನ ಪ್ರಗತಿಯ ಮೇಲ್ವಿಚಾರಣೆಗಾಗಿ ಯೋಜನೆಗಳು ಮಾರ್ಗದರ್ಶಿಯಾಗಿ ಕಾರ್ಯನಿರ್ವಹಿಸುತ್ತವೆ.

## C) ಯೋಜನೆಗಾಗಿ ಸಂಪನ್ಮೂಲ ಕೇಂದ್ರಗಳು :

DIET ಮತ್ತು DPEP ಗಳು ಯೋಜನೆ ಮತ್ತು ನಿರ್ವಹಣೆ ಘಟಕವನ್ನು ಹೊಂದಿವೆ. ಜಿಲ್ಲಾ ನೋಟ ಮತ್ತು ವಾರ್ಷಿಕ ಯೋಜನೆಗಳನ್ನು ತಯಾರಿಸುವಲ್ಲಿ ಘಟಕವು ಒಂದು ಪ್ರಮುಖ ಪಾತ್ರ ವಹಿಸಿದೆ. ವಾರ್ಷಿಕ ಅಭಿವೃದ್ಧಿ ಯೋಜನೆಗಳನ್ನು ತಯಾರಿಸಲು ಶಿಕ್ಷಕರಿಗೆ, ಗ್ರಾಮಪಂಚಾಯಿತಿಯ ಸಿಬ್ಬಂದಿಗೆ, ಪಂಚಾಯಿತಿ ಸಮಿತಿಗೆ ಅಗತ್ಯ ನೆರವನ್ನು ಕ್ಲಸ್ಟರ್ & ಬ್ಲಾಕ್ ಸಂಪನ್ಮೂಲ ಕೇಂದ್ರಗಳು ನೀಡಬೇಕಾಗಿದೆ ಎಂದು ನಿರೀಕ್ಷಿಸಲಾಗಿದೆ.

## D) ಮೌಲ್ಯಮಾಪನ / ಅಪ್ರೈಸಲ್ :

ಜಿಲ್ಲೆಯ ಯೋಜನೆಯನ್ನು ಅಂತಿಮಗೊಳಿಸುವುದಕ್ಕೆ ಮುಂಚಿತವಾಗಿ "ಅಪ್ರೈಸಲ್" ಎಂಬ ಪ್ರಕ್ರಿಯೆಗೆ ಒಳಪಡುತ್ತದೆ. ಅಪ್ರೈಸಲ್ ಇವುಗಳನ್ನು ಪತ್ತೆ ಹಚ್ಚುವುದನ್ನು ಒಳಗೊಂಡಿರುತ್ತದೆ :

- ಒದಗಿಸಿದ ಮಾಹಿತಿಯು ನೈಜವಾಗಿದೆಯೋ ?
- ಅಗತ್ಯತೆಗಳ ಸಮರ್ಥನೆ ಸರಿಯೇ ?
- ಪ್ರಸ್ತುತ ಸ್ಥಿತಿ ಮತ್ತು UEE ನ ಅಂತಿಮ ಗುರಿಗಳ ನಡುವಿನ ಅಂತರವನ್ನು ತುಂಬುವ ಮೂಲಕ ಪ್ರಗತಿಯನ್ನು ಸಾಧಿಸಬಹುದೇ ?
- ಪ್ರಸ್ತಾಪಿತ ಮಧ್ಯಸ್ಥಿಕೆ ಕಾರ್ಯತಂತ್ರಗಳು ಕಾಲಮಿತಿಯಲ್ಲಿ ಮಾಡತಕ್ಕಹವೇ ?
- ಉದ್ದೇಶಿತ ಯೋಜನೆಗಳು ಆರ್ಥಿಕ, ತಾಂತ್ರಿಕ, ಸಾಮಾಜಿಕ ಮತ್ತು ರಾಜಕೀಯವಾಗಿ ಕಾರ್ಯಸಾಧ್ಯವಾಗುವವೇ?
- ಸವಾಲು ಮತ್ತು ಅವಕಾಶಗಳು ಯಾವುವು ?

ಧನಾತ್ಮಕ "ಮೌಲ್ಯಮಾಪನ" ಪಡೆಯುವುದರೊಂದಿಗೆ, ಕರಡು ಯೋಜನೆಗಳನ್ನು ರಾಜ್ಯ ಸರ್ಕಾರದ ಶಿಕ್ಷಣ, ಹಣಕಾಸು, ಮಹಿಳಾ ಮತ್ತು ಮಕ್ಕಳ ಅಭಿವೃದ್ಧಿ ಇಲಾಖೆಗಳು ತೀವ್ರವಾದ ಪರಿಶೀಲನೆಗೆ ಒಳಪಡಿಸುತ್ತವೆ. ರಾಜ್ಯ ಸರ್ಕಾರದ ಇಲಾಖೆಗಳು ಜಿಲ್ಲೆಯ ಯೋಜನೆಗಳನ್ನು ಭಾಗಶಃ ಅಥವಾ ಸಂಪೂರ್ಣ ಅನುಮೋದಿಸಬಹುದು, ಅಥವಾ ಸ್ಪಷ್ಟೀಕರಣ ಕೇಳಬಹುದು ಅಥವಾ ಗುರಿಗಳನ್ನು ತಾರ್ಕಿಕಗೊಳಿಸುವಂತೆ ಸೂಚಿಸಬಹುದು. ಬದಲಾವಣೆಗಳನ್ನು ಸೇರಿಸಿದ ನಂತರ ಜಿಲ್ಲೆಯ ಯೋಜನೆಯನ್ನು ಅಂಗೀಕರಿಸಬಹುದು ಮತ್ತು ಕಾರ್ಯಗತಗೊಳಿಸಲು ಅನುಮತಿಸಬಹುದು, ಜಿಲ್ಲಾ ವಾರ್ಷಿಕ ಯೋಜನೆ ಮತ್ತು ದೃಷ್ಟಿಕೋನ ಯೋಜನೆಯನ್ನು ಶಾಲಾ ಮ್ಯಾಪಿಂಗ್ ಆಧಾರದ ಮೇಲೆ ತಯಾರಿಸುವುದಲ್ಲದೇ, ಖಾಸಗೀ ಶಾಲೆಗಳು ಮತ್ತು ಎನ್.ಜಿ.ಓ. ಗಳ ಸಹಯೋಜದೊಂದಿಗೆ ಡಿ.ಇ.ಓ. ಯೋಜನೆಯನ್ನು ಅನುಷ್ಠಾನಗೊಳಿಸಬೇಕು.

## E) <u>ಅನುಷ್ಠಾನ :</u>

ಜಿಲ್ಲಾ ಹಂತದಲ್ಲಿ ಅಥವಾ ಅದಕ್ಕಿಂತ ಕೆಳಹಂತದಲ್ಲಿ VEE ಗಾಗಿ ಯೋಜಿಸುವುದು ಕೇವಲ ಆರಂಭ ಮಾತ್ರ. ಯೋಜನೆಗಳನ್ನು ಅನುಷ್ಠಾನಗೊಳಿಸಬೇಕು. ಜಿಲ್ಲಾ ಅಭಿವೃದ್ಧಿ ಯೋಜನೆಯ ಅನುಷ್ಠಾನ ಕಾರ್ಯವು ಜಿಲ್ಲಾ ಶಿಕ್ಷಣ ಸಮಿತಿ, ಬ್ಲಾಕ್ ಶಿಕ್ಷಣ ಸಮಿತಿ, ಶಾಲಾ ನಿರ್ವಹಣಾ ಸಮಿತಿ ಮತ್ತು ಇತರ ಸಮಿತಿಗಳು ತಮ್ಮ ಹಳೆಯ ವಿಧಾನಗಳನ್ನು ಬದಲಿಸಿಕೊಂಡು, ಪೋಷಕರು, ಶಿಕ್ಷಕರು, N.G.O ಗಳು, ಸ್ಥಳೀಯ ಸಮುದಾಯದ ಪ್ರತಿನಿಧಿಗಳನ್ನು ಹೊಂದಿರುವಂತಹ ಕ್ರಮವನ್ನು ಅಳವಡಿಸಿಕೊಂಡು ತೀರ್ಮಾನ ಕೈಗೊಳ್ಳುವಿಕೆಯ ಕಾರ್ಯದಲ್ಲಿ ಭಾಗಿಯಾಗಬೇಕಾಗುತ್ತದೆ. ಇದರಿಂದಾಗಿ ಆರ್.ಟಿ.ಇ. ಯ ಆದೇಶವನ್ನು ಪಾಲಿಸಿದಂತಾಗುತ್ತದೆ. ಅನುಷ್ಠಾನ ಮಾಡುವ ಪ್ರಕ್ರಿಯೆಯಲ್ಲಿ ಬೋಧನಾ ಸಮುದಾಯದ ಪಾಲ್ಗೊಳ್ಳುವಿಕೆಯಿಂದಾಗಿ ಶಾಲೆಗಳು UEE ಯನ್ನು ಅನುಷ್ಠಾನಗೊಳಿಸುವಲ್ಲಿ ಪ್ರಮುಖ ಸಂಸ್ಥೆಗಳಾಗಿ ಹೊರಹೊಮ್ಮಲಿವೆ.

ಕ್ಷೇತ್ರ ಶಿಕ್ಷಣ ಅಧಿಕಾರಿ (ಬಿ.ಇ.ಓ) ಮತ್ತು ಅವರ ಸಿಬ್ಬಂದಿ ಬ್ಲಾಕ್ ಸಂಪನ್ಮೂಲ ಕೇಂದ್ರವಾಗಿ ಕಾರ್ಯ ನಿರ್ವಹಿಸುತ್ತಾರೆ. ಬಿ.ಆರ್.ಸಿ. ಸಿಬ್ಬಂದಿ ಪ್ರತಿವರ್ಷ ಹೊಸ ಬೋಧನಾ – ಕಲಿಕೆಯ ವಸ್ತುಗಳನ್ನು ಸಿದ್ಧಪಡಿಸಲು ಶಾಲೆಗೆ ನೆರವು ನೀಡಬೇಕು.

ಅಲ್ಲದೇ, ಪ್ರತಿ 15 ಗ್ರಾಮಗಳಿಗೆ ಒಂದರಂತೆ ಹಲವಾರು ಸಂಪನ್ಮೂಲ ಕೇಂದ್ರಗಳಿವೆ. BRC ಮತ್ತು CRC ಸಿಬ್ಬಂದಿಗಳು :

- ಪ್ರತಿ ತಿಂಗಳು ಪ್ರತಿ ಶಾಲೆಗೆ ಭೇಟಿ ನೀಡಿ
- ಪಠ್ಯಕ್ರಮ ನೆರವನ್ನು ಶಿಕ್ಷಕರಿಗೆ ನೀಡಬಹುದು

**<u>ನಿಮ್ಮ ಪ್ರಗತಿಯನ್ನು ಪರಿಶೀಲಿಸಿ–4</u>**

1. ಶಾಲಾ ಮಟ್ಟದಲ್ಲಿ ಪ್ರಾಥಮಿಕ ಶಿಕ್ಷಣದ ಅಭಿವೃದ್ಧಿಗೆ ಪ್ರಸ್ತಾವನೆಯನ್ನು ತಯಾರಿಸಲು ದತ್ತಾಂಶ ಮೂಲಗಳು ಯಾವುವು ?

2. ಒಂದು ಯೋಜನೆಯ ಅಪ್ರೈಸಲ್ ಎಂದರೇನು ? ವಾರ್ಷಿಕ ಜಿಲ್ಲಾ ಶಿಕ್ಷಣ ಅಭಿವೃದ್ಧಿ ಯೋಜನೆಯನ್ನು ಯಾರು ಅಪ್ರೈಸ್ ಮಾಡುತ್ತಾರೆ ?

UEE ಯ ಗುರಿಗಳನ್ನು ಸಾಧಿಸಲು ಜಿಲ್ಲೆಯ ಯೋಜನೆಯನ್ನು ಅನುಷ್ಠಾನಗೊಳಿಸುವಲ್ಲಿ ಕೆಲವು ಸಂಸ್ಥೆಗಳ ಪಾತ್ರವು ತುಂಬಾ ಮುಖ್ಯವಾಗಿದೆ. ಅವುಗಳನ್ನು ಕೆಳಕಂಡಂತೆ ಚರ್ಚಿಸಲಾಗಿದೆ.

**ಸಾರ್ವಜನಿಕ ಮತ್ತು ಖಾಸಗಿ ಸಂಸ್ಥೆಗಳ ನಡುವಿನ ಸಹಭಾಗಿತ್ವ :**

ಶಿಕ್ಷಣದ ನಿರಂತರ ಬೇಡಿಕೆಯನ್ನು ಸರ್ಕಾರ ಮಾತ್ರದಿಂದಲೇ ಪರಿಣಾಮಕಾರಿಯಾಗಿ ಪೂರೈಸುವ ಕಾರ್ಯ ಕಷ್ಟ. ಸರ್ಕಾರೇತರ ಸಂಸ್ಥೆಗಳೊಂದಿಗೆ ಸಹಕಾರ ಅಗತ್ಯ. UEE ಯನ್ನು ಕಾರ್ಯಗತಗೊಳಿಸಲು ಖಾಸಗಿ ಸಂಸ್ಥೆಗಳ ಪಾಲುದಾರಿಕೆಗಾಗಿ ಸರ್ಕಾರವು ಹೆಚ್ಚು ಮುಕ್ತವಾಗಿದೆ. ಹಿಮದಿನ ದಿನಗಳಿಂದ ಇದು ಒಂದು ಬದಲಾವಣೆ ಹೊಂದಿದೆ. ಪ್ರಾಥಮಿಕ ಶಿಕ್ಷಣವನ್ನು ಪರಿಣಾಮಕಾರಿಯಾಗಿ ತಲುಪಿಸಲು ಅಗತ್ಯವಿರುವ ಬೆಂಗಲ ಸೇವೆಗಳನ್ನು ಒದಗಿಸಲು ರಾಜ್ಯ ಮತ್ತು ಸ್ಥಳೀಯ ಸರ್ಕಾರಗಳು ಪರಸ್ಪರ ಸರ್ಕಾರೇತರ ಸಂಸ್ಥೆಗಳಿಗೆ (N.G.O.s) ಕಾರ್ಪೋರೇಟ್ ಸಂಸ್ಥೆಗಳಿಗೆ ಪಾಲುದಾರರಾಗಿವೆ.

ವಿಶಾಲ ನೀತಿಯಂತೆ, ಎಲ್ಲ ಹಂತಗಳಲ್ಲಿ N.G.O ಗಳೊಂದಿಗೆ ಸಹಭಾಗಿತ್ವವನ್ನು ಉತ್ತೇಜಿಸಲು ಸರ್ಕಾರ ನಿರ್ಧರಿಸಿದೆ. ಅನೇಕ ವರ್ಷಗಳಿಂದ ಸಾಮಾಜಿಕ ಅಭಿವೃದ್ಧಿ ಕೆಲಸದಲ್ಲಿ ನಿರರಾಗಿರುವ ಹಾಗೂ ಡೇ–ಕೇರ್ ಸೆಂಟರ್, ಮೊಬೈಲ್ ಕ್ರೇಚಸ್, ಬಾಲವಾಡಿ ಚಾರ್ವಾಹ ಶಾಲೆ ಪ್ರಾಥಮಿಕ ಮತ್ತು ಪೂರ್ವ–ಪ್ರಾಥಮಿಕ ಶಾಲೆಗಳನ್ನು ನಡೆಸುತ್ತಿರುವ ಸಂಸ್ಥೆಗಳನ್ನು ಗುರುತಿಸಿ, ಪಾಲುದಾರರೆಂದು ಪಟ್ಟಿ ಮಾಡಲಾಗಿದೆ, NGO ಗಳೊಂದಿಗಿನ ಪಾಲುದಾರಿಕೆಯ ಕೆಲಸವು, ಸ್ಥಳೀಯ ಮಟ್ಟದಲ್ಲಿ ಸರ್ಕಾರವೇ ಕೆಲಸ ಮಾಡುತ್ತಿದೆ ಎಂಬ ರೀತಿಯಲ್ಲಿ ಬದಲಾಗಬೇಕು. NGO ಗಳೊಂದಿಗೆ ಸಹಭಾಗಿತ್ವವನ್ನು ಮೂರು ವಿಧಗಳಲ್ಲಿ ಕಲ್ಪಿಸಲಾಗಿದೆ :

ಕೇಂದ್ರ ಮತ್ತು ರಾಜ್ಯ ಸರ್ಕಾರಗಳ ನೇರ ಹಣದ ಮೂಲಕ; ಗುರುತಿಸಲ್ಪಟ್ಟ ರಾಷ್ಟ್ರೀಯ ಮತ್ತು ರಾಜ್ಯ ಸಂಪನ್ಮೂಲ ಸಂಸ್ಥೆಗಳ ಹಣದ ಮೂಲಕ; ಮತ್ತು ಸಮುದಾಯ ಚಟುವಟಿಕೆಗಳನ್ನು ಅನುಷ್ಠಾನಗೊಳಿಸುವುದಕ್ಕಾಗಿ ಗ್ರಾಮಶಿಕ್ಷಣ ಸಮಿತಿಯಿಂದ ಹಣದ ಮೂಲಕ.

RTE ಈ ಕೆಳಗಿನ ಕ್ಷೇತ್ರಗಳಲ್ಲಿ NGO ಗಳೊಂದಿಗೆ ಉತ್ತಮ ಸಹಭಾಗಿತ್ವ ಕಲ್ಪಿಸಲಾಗಿದೆ :

- ಅರಿವು ಹೆಚ್ಚಿಸುವುದು
- ಸಾಮರ್ಥ್ಯ ಅಭಿವೃದ್ಧಿ–ಪರಿಣಾಮಕಾರಿ ಶಿಕ್ಷಕ ತರಬೇತಿ ಕಾರ್ಯಕ್ರಮಗಳನ್ನು ಅಭಿವೃದ್ಧಿಪಡಿಸುವುದು, ಸಮುದಾಯಗಳಲ್ಲಿ ಸಾಮರ್ಥ್ಯ ಅಭಿವೃದ್ಧಿ ಮತ್ತು ಯೋಜನೆ ಮತ್ತು ಅನುಷ್ಠಾನಕ್ಕಾಗಿ ಸಂಪನ್ಮೂಲ ಸಂಸ್ಥೆಗಳಲ್ಲಿ ಸಾಮರ್ಥ್ಯ ಅಭಿವೃದ್ಧಿ.
- UEE ಯ ಸಂಶೋಧನೆ, ಮೌಲ್ಯಮಾಪನ ಮತ್ತು ಮೇಲ್ವಿಚಾರಣೆ
- ನವೀನ ಶಿಕ್ಷಣಶಾಸ್ತ್ರ (Pedagogy) ದ ಅಭಿವೃದ್ಧಿ
- ಶಾಲೆಯಿಂದ ಹೊರಗುಳಿದ ಮಕ್ಕಳನ್ನು ಮುಖ್ಯವಾಹಿನಿಗೆ ತರುವುದು.
- ಲಿಂಗ ಸಂಬಂಧಿ ಕಾಳಜಿಗಳು
- CWSN ಶಿಕ್ಷಣ
- ವಕಾಲತ್ತು, ಹೊಣೆಗಾರಿಕೆ
- ಮಧ್ಯಸ್ಥಿಕೆ ಕಾರ್ಯಕ್ರಮಗಳ ಪಾರದರ್ಶಕತೆ ಸುಧಾರಣೆ ಮತ್ತು ಸಾಧನೆಗಳ ಮೌಲ್ಯಾಂಕನ.

**7.3.4.1.** <u>ಶಾಲೆಗಳ ಉಸ್ತುವಾರಿ ಮತ್ತು ಮೇಲ್ವಿಚಾರಣೆ :</u>

**<u>ಸಮುದಾಯದ ಪಾತ್ರ :</u>**

VEC/WEC ಗಳ ಪ್ರಮುಖ ಪಾತ್ರ ಹಳ್ಳಿಯ / ವಾರ್ಡ್‌ನ ಶೈಕ್ಷಣಿಕ ಸೌಲಭ್ಯಗಳನ್ನು ಮೇಲುಸ್ತುವಾರಿ ಮತ್ತು ಮೇಲ್ವಿಚಾರಣೆ ಮಾಡುವುದು. ಸಮುದಾಯ ಆಧಾರಿತ ಉಸ್ತುವಾರಿ ಮತ್ತು ಮೇಲ್ವಿಚಾರಣೆಯು ಯೋಜನೆಯ ಅನುಷ್ಠಾನದಲ್ಲಿ ಬಹಳ ಮುಖ್ಯ. ಏಕೆಂದರೆ :

- ಎಲ್ಲಾ ಮಕ್ಕಳು ನಿಯಮಿತವಾಗಿ ಶಾಲೆಗೆ ಬರಬೇಕು.
- ಹೆಣ್ಣು ಮಕ್ಕಳು ಮತ್ತು ಇತರ ಅನನುಕೂಲ ಗುಂಪುಗಳ ಮಕ್ಕಳ ದಾಖಲಾತಿ, ಉಳಿಕೆ
- ಮಕ್ಕಳು ಗುಣಮಟ್ಟದ ಶಿಕ್ಷಣವನ್ನು ಪಡೆಯಬೇಕು
- ಮಕ್ಕಳು ತಮ್ಮ ಅರ್ಹತೆ ಗಳಿಸಬೇಕು
- ಅವಕಾಶವಿರುವೆಡೆ ಸ್ಥಳೀಯ ಶಿಕ್ಷಕರ ನೇಮಕ ಆಗಬೇಕು
- ಶಾಲಾ ಸಮಯವನ್ನು ವಿ.ಇ.ಸಿ. ಮತ್ತು ಪೋಷಕರ ಸಮಾಲೋಚನೆಯಿಂದ ನಿಧಾರ ಮಾಡಬೇಕು.
- ಶಾಲಾ ಮೂಲ ಸೌಕರ್ಯವನ್ನು ಸರಿಯಾಗಿ ಬಳಸಬೇಕು.
- ಅನುದಾನವನ್ನು ನೀಡಿದ ಉದ್ದೇಶಕ್ಕೆ ಬಳಸಬೇಕು
- ಪರ್ಯಾಯ ಶಾಲಾ ಕೇಂದ್ರಗಳನ್ನು ತೆರೆದು, ಮೇಲ್ವಿಚಾರಣೆ ಮಾಡಬೇಕು

- ಶಾಲೆಗಳಲ್ಲಿ ಟಿ.ಎಲ್.ಎಂ. ಲಭ್ಯವಿದ್ದು, ತರಗತಿ ಬೋಧನೆಗೆ ಬಳಕೆಯಾಗಬೇಕು.

**ಬಿ.ಇ.ಓ. ಪಾತ್ರ :**

ಬ್ಲಾಕ್ ಎಜುಕೇಷನ್ ಆಫೀಸರ್ (ಬಿ.ಇ.ಓ.) ಸಹಾಯಕ ಶಿಕ್ಷಣ ಅಧಿಕಾರಿಗಳ ಸಹಾಯದಿಂದ ಇವುಗಳನ್ನು ಮಾಡಬೇಕು :

- ತಮ್ಮ ವ್ಯಾಪ್ತಿಯ ಎಲ್ಲಾ ಶಾಲೆಗಳಿಗೂ (ಅನುದಾನ ರಹಿತ ಖಾಸಗಿ ಶಾಲೆಗಳೂ ಸೇರಿದಂತೆ) ಪ್ರತಿ ವರ್ಷ ಭೇಟಿ ಮಾಡುವುದು.
- ಶಾಲಾ ಕಟ್ಟಡಗಳು, ಮೂಲ ಸೌಕರ್ಯ ಮತ್ತು ವಿದ್ಯಾರ್ಥಿಗಳಿಗೆ ಆಸನ ವ್ಯವಸ್ಥೆಗಳನ್ನು ಗಮನಿಸುವುದು.
- ಕುಡಿಯುವ ನೀರಿನ ಶೌಚಾಲಯಗಳ, ಅಡುಗೆ ಮನೆಯ ಲಭ್ಯತೆ ಮತ್ತು ಸ್ವಚ್ಛತೆಯ ಕಡೆಗೆ ವಿಶೇಷ ಗಮನ ನೀಡುವುದು.
- ಶಾಲೆಯಲ್ಲಿ ಮುಖ್ಯ ಶಿಕ್ಷಕರು ಮತ್ತು ಶಿಕ್ಷಕರು ನಿರ್ವಹಿಸಬೇಕಾದ ದಾಖಲೆಗಳನ್ನು ನೋಡುವುದು.
- ಅಗತ್ಯ ವಸ್ತು–ವಿಷಯಗಳ ಬಗ್ಗೆ DEO ಗೆ ಹಿಮ್ಮಾಹಿತಿ ನಿಡುವುದು.
- ಜನಸಂಖ್ಯಾ ಮಾಹಿತಿ, ಹಳ್ಳಿಗಳ ಸಂಖ್ಯೆ, ಪಂಚಾಯಿತಿಗಳು, ಕ್ಲಸ್ಟರ್‌ಗಳು, ಎಸ್ಸಿ, ಎಸ್ಟಿ, ಓ.ಬಿ.ಸಿ. ಮಕ್ಕಳು, ಹುಡುಗಿಯರು, ಶಾಲಾ ಹೊರಗಿನ ಮಕ್ಕಳು, ವಿಶೇಷ ಅಗತ್ಯವುಳ್ಳ ಮಕ್ಕಳ ಮಾಹಿತಿ ಪಡೆಯುವುದು.
- ಶಾಲಾ ವಯಸ್ಸಿನ ಮಕ್ಕಳಿಗೆ ಸೇವೆಗಳನ್ನು ಒದಗಿಸುವ ಸಂಘಟನೆಗಳು ಮತ್ತು ಇತರ ಸಂಸ್ಥೆಗಳು.

ಮೇಲ್ವಿಚಾರಣಾ ಚಟುವಟಿಕೆಯ ಭಾಗವಾಗಿ ಸಂಗ್ರಹಿಸಲಾದ ಮೇಲಿನ ಅಂಕಗಳು ಜಿಲ್ಲೆಯ ವಾರ್ಷಿಕ ಕಾರ್ಯ ಯೋಜನೆ ಮತ್ತು ಬಜೆಟ್ ತಯಾರಿಸಲು ಆಧಾರವಾಗಿ ಕುಡ ಬಳಕೆಯಾಗುತ್ತದೆ.

**ನಿಮ್ಮ ಪ್ರಗತಿಯನ್ನು ಪರಿಶೀಲಿಸಿ–5**

1. 'ಸಾರ್ವಜನಿಕ–ಖಾಸಗಿ ಸಹಭಾಗಿತ್ವ'ದ ಅರ್ಥವೇನು? ಇದು ಏಕೆ ಅಗತ್ಯ?

2. UEE ಯಲ್ಲಿ NGO ಗಳು ಹೇಗೆ ಭಾಗವಹಿಸಬಹುದು ?

3. UEE ನ ಸೂಕ್ಷ್ಮ ಯೋಜನೆಯಲ್ಲಿ DEO ನ ಪಾತ್ರವೇನು ?

## 7.4 ಪ್ರಾಥಮಿಕ ಶಿಕ್ಷಣದಲ್ಲಿ ನಿರ್ವಹಣೆ ಮತ್ತು ಆಡಳಿತದ ವಿಷಯಗಳು

### 7.4.1 ಆಡಳಿತಕ್ಕೆ ಸಂಬಂಧಿಸಿದ ವಿಷಯಗಳು :

ಯುಇಇ ಯಲ್ಲಿನ ವಿಕೇಂದ್ರಿಕೃತ ಯೋಜನೆಗಳಲ್ಲಿ, ಕೆಲವು ಮೂಲಭೂತ ಸಮಸ್ಯೆಗಳನ್ನು ಬಗೆಹರಿಸಬೇಕು, ಮಕ್ಕಳು ಶಾಲೆಗೆ ಸೇರುವ ಹಕ್ಕನ್ನು ಖಚಿತಪಡಿಸಿಕೊಳ್ಳುವ ಒಂದು ವ್ಯವಸ್ಥೆಯನ್ನು ಸ್ಥಾಪಿಸಬೇಕು. ಪ್ರತಿ ಶಾಲೆಯು ಅದರ ಪ್ರವೇಶಾತಿ ನೀತಿಯನ್ನು ಪ್ರಕಟಿಸುವಂತೆ ಹಾಗೂ ಅಭ್ಯರ್ಥಿಗಳ ವಿವರ ಮತ್ತು ದಾಖಲಾತಿ ವಿವರಗಳನ್ನು ವಾರ್ಷಿಕ ವರದಿಯಲ್ಲಿ ಸಲ್ಲಿಸುವಂತೆ ಒಂದು ಸರಳ ವ್ಯವಸ್ಥೆ ಇರಬಹುದು. ನಿರ್ಬಂಧವಾಗಿ ನಿಧಿ ಹಾಗೂ ಮಾನ್ಯತೆಯ ಭಾಗಶಃ ತಡೆಹಿಡಿಯುವಂತಹ ಕ್ರಮಗಳನ್ನು ಪರಿಗಣಿಸಬಹುದು. ಅಗತ್ಯವಾದರೆ, ಕಾನೂನು ಈ ಸಂಬಂಧಿತ ಸಮತೆಯ ಸಮಸ್ಯೆಗಳನ್ನು ಪರಿಹರಿಸಬೇಕು. ವಿದ್ಯಾರ್ಥಿಗಳನ್ನು ಹೇಗೆ ಆಯ್ಕೆ ಮಾಡಲಾಗುತ್ತದೆ, ಹೇಗೆ ಮಾಡಬೇಕು ಮತ್ತು ಆಯ್ಕೆಯಾಗದ ವಿದ್ಯಾರ್ಥಿಗಳು ಏನಾಗುತ್ತಾರೆ ಮುಂತಾದ ಪ್ರಶ್ನೆಗಳನ್ನು ಕೇಳಬೇಕು. ಒಟ್ಟಾರೆಯಾಗಿ, ಎಲ್ಲಾ ವಿದ್ಯಾರ್ಥಿಗಳು ಕನಿಷ್ಟಪಕ್ಷ ಯಾವುದಾದರೂ ಒಂದು ಶಾಲೆಯಲ್ಲಿ ಸರಿಸುಮಾರು ಸಮತೆಯ ಆಧಾರದಲ್ಲಿ ದಾಖಲಾಗುವುದನ್ನು ಕಚಿತಪಡಿಸಿಕೊಳ್ಳಬೇಕು, ಈ ಸಮಸ್ಯೆಗಳನ್ನು ಪರಿಹರಿಸದಿದ್ದಲ್ಲಿ, ಅಸಮಾನ ಶೈಕ್ಷಣಿಕ ಅವಕಾಶಗಳಿಗೆ ಕಾರಣವಾಗುತ್ತದೆ ಮತ್ತು ಸಂವಿಧಾನದಲ್ಲಿ ನೀಡಲಾದ ಅವಕಾಶಗಳನ್ನು ಪೂರೈಸುವಲ್ಲಿ ವಿಫಲವಾದಂತಾಗುತ್ತದೆ.

ಕೆಲವು ಪ್ರಮುಖ ಆಡಳಿತ ಸಮಸ್ಯೆಗಳು ಹೀಗಿವೆ :

- ಪ್ರಾಥಮಿಕ ಶಿಕ್ಷಣಕ್ಕೆ ಸ್ಥಳೀಯ ಜವಾಬ್ದಾರಿಗಳನ್ನು ನಿಭಾಯಿಸಲು ಕೇಂದ್ರ ಸರ್ಕಾರವು ಹಣಕಾಸು ನೆರವು ಮುಮದುವರಿಸಿದರೆ, ಸ್ಥಳೀಯ ಸಂಸ್ಥೆಗಳಿಗೆ ಧನ ಸಹಾಯವು ಸುರಕ್ಷಿತ ಮತ್ತು ಮುಂದುವರಿಯುತ್ತದೆ ಎಂಬ ಯಾವ ಭರವಸೆ ಇದೆ?

- ವಿವಿಧ ಸ್ಥಳೀಯ ಸಂಸ್ಥೆಗಳಿಗೆ ಕೇಂದ್ರ ಸಂಪನ್ಮೂಲಗಳನ್ನು ಹೇಗೆ ಹಂಚಲಾಗುತ್ತದೆ?
- ಹಣದ ಬಳಕೆಯಲ್ಲಿ ಸ್ಥಳೀಯ ಅಧಿಕಾರಿಗಳಿಗೆ ಯಾವ ರೀತಿಯ ಸ್ವಾತಂತ್ರ್ಯ ನೀಡಲಾಗುತ್ತದೆ ?
- ಸ್ಥಳೀಯ ಸಂಸ್ಥೆಗಳು ಪ್ರಾಥಮಿಕ ಶಿಕ್ಷಣಕ್ಕಾಗಿ ತಾವೇ ನಿಧಿ ಸಂಗ್ರಹ ಮಾಡಬೇಕಿದ್ದರೆ, ಯಾವ ಮೂಲಗಳಿಂದ ಪಡೆಯಬಹುದು ?
- ಸ್ಥಳೀಯ ಅಧಿಕಾರಿಗಳಿಗೆ ತೆರಿಗೆ ಹಾಕುವ ಅಧಿಕಾರ ನೀಡಬೇಕಾದರೆ, ಈ ಉದ್ದೇಶಕ್ಕಾಗಿ ಸಾಕಷ್ಟು ಆದಾಯ ತಂದುಕೊಡುವ ತೆರಿಗೆ ಆಧಾರ ವಿದೆಯೇ ?
- ಸ್ಥಳೀಯ ಸಂಸ್ಥೆಗಳ ಹಣಕಾಸಿನ ಮೇಲ್ವಿಚಾರಣೆ ಮತ್ತು ಆಡಿಟ್ ಯಾರು ಮಾಡುತ್ತಾರೆ ?

### 7.4.2 ಶಿಕ್ಷಕರ ನೇಮಕಾತಿ ಮತ್ತು ನಿರ್ವಹಣೆ :

ಆರ್.ಟಿ.ಐ. ಕಾಯಿದೆಯು ಶಿಕ್ಷಕ ಹುದ್ದೆಗಳ ವಿಕೇಂದ್ರಿಕೃತ ನಿರ್ವಹಣೆಯನ್ನು ಪ್ರೋತ್ಸಾಹಿಸುತ್ತದೆ. ಪ್ರಮಾಣೀಕರಣ, ನೇಮಕ, ಉಳಿಕೆ ಮತ್ತು ಬಡ್ತಿ ಇವು ಸಂಭಾವ್ಯ ವಿವಾದಾತ್ಮಕ ಮೂಲಗಳಾಗಿವೆ. ಸಾಮಾನ್ಯವಾಗಿ ಇವುಗಳನ್ನು ಕಾನೂನಿನ ಮೂಲಕ ಪರಿಹರಿಸಲಾಗುತವುದು. ಯು.ಇ.ಇ.ಗೆ ದೊಡ್ಡ ಸಾಂಸ್ಥಿಕ ಸುಧಾರಣೆಗಳು ಅಗತ್ಯವೆಂದು ಹೇಳುವಾಗ, ನಾವು ಈ ಆಡಳಿತ ಸಮಸ್ಯೆಗಳನ್ನು ಉಲ್ಲೇಖಿಸುತ್ತೇವೆ . ಈ ಎಲ್ಲಾ ಸಮಸ್ಯೆಗಳ ಬಗೆ ಕಾಳಜಿ ವಹಿಸುವ ವ್ಯವಸ್ಥೆಯನ್ನು ಅಳವಡಿಸುವುದು ಸಮಯ ತೆಗೆದುಕೊಳ್ಳುವ ಪ್ರಕ್ರಿಯೆ.

ಎನ್.ಸಿ.ಟಿ.ಇ. ಯ ನಿಯಮಗಳಿಗೆ ಅನುಗುಣವಾಗಿ ರಾಜ್ಯಗಳು ತಮ್ಮದೇ ಆದ ರೂಢಿಗಳನ್ನು ಅನುಸರಿಸಲು ಮುಕ್ತವಾಗಿರುತ್ತವೆ. ಸ್ಥಳೀಯ ಸರ್ಕಾರವು ನೇಮಕ ಮಾಡಿಕೊಳ್ಳಬಹುದು ಹಾಗೂ ಅದರಲ್ಲಿ ಸಮುದಾಯವು ಆಯ್ಕೆಯ ಪ್ರಕ್ರಿಯೆಯಲ್ಲಿ ಪಾತ್ರ ವಹಿಸಬಹುದು ಗುಣಮಟ್ಟದಲ್ಲಿ ಯಾವುದೇ ರಾಜಿ ಇಲ್ಲ. ಆರ್.ಟಿ.ಇ. ಕಾಯದೆ ಪ್ರಕಾರ, ಏಕ ಶಿಕ್ಷಕ ಶಾಲೆಗಳಿಲ್ಲ ಎಂಬುದನ್ನು ರಾಜ್ಯ ಸರ್ಕಾರಗಳು ಖಾತರಿ ಪಡಿಸಬೇಕು. ಕನಿಷ್ಟ ಪಕ್ಷ ಶೇ.50 ರಷ್ಟು ಮಹಿಳಾ ಶಿಕ್ಷಕರನ್ನು

ಶಿಕ್ಷಕರಿಗೆ ಸಂಬಳ ಪಾವತಿಯಲ್ಲಿ ಹಲವು ವೈವಿಧ್ಯತೆಗಳಿವೆ. ಖಾಸಗಿ ಶಾಲೆಗಳು ಮತ್ತು ಎನ್.ಜಿ.ಓ. ಉಪಕ್ರಮಗಳ ಉಪಸ್ಥಿತಿಯು ಈ ಸಮಸ್ಯೆಯನ್ನು ಇನ್ನಷ್ಟು ಜಟಿಲಗೊಳಿಸಿದೆ. ಅಸ್ತಿತ್ವದಲ್ಲಿರುವ ಶಿಕ್ಷಕರ ವೇತನ ಶ್ರೇಣಿಗಳನ್ನು ತರ್ಕಬದ್ಧಗೊಳಿಸುವಿಕೆಯು ಒಂದು ಸಮಸ್ಯೆಯಾಗಿ ಪರಿಗಣಿಸಬಹುದು.

### 7.4.3 ಶಾಲಾ ನಿರ್ವಹಣಾ ಸಮಿತಿಯ ಪಾತ್ರ :

ನೀಡಿರುವ ಶಿಕ್ಷಣದ ಗುಣಮಟ್ಟವನ್ನು ಹೆಚ್ಚಿಸಲು ಶಾಲಾ ನಿರ್ವಹಣಾ ಸಮಿತಿಯು ಶಾಲಾ ಆಡಳಿತದಲ್ಲಿ ಪ್ರಮುಖ ಪಾತ್ರ ವಹಿಸುತ್ತದೆ. ವಿಭಿನ್ನ ಮಧ್ಯಸ್ಥಗಾರರ ಪ್ರತಿನಿಧಿಗಳನ್ನು ಒಗ್ಗೂಡಿಸುವಲ್ಲಿ ಇದು ವಿಸ್ತಾರವಾದ ಮತ್ತು ಸಹಭಾಗಿ ನಿರ್ಧಾರ ತೆಗೆದುಕೊಳವುವಿಕೆಗೆ ಅಡಿಪಾಯ ಹಾಕುತ್ತದೆ.

ಪ್ರತಿ ಶಾಲೆಯಲ್ಲಿ ಅನುದಾನರಹಿತ ಶಾಲೆ ಹೊರತುಪಡಿಸಿ, ಮಾನ್ಯತೆ ದಿನಾಂಕದ ಆರು ತಿಂಗಳೊಳಗೆ ಒಂದು ಶಾಲಾ ನಿರ್ವಹಣಾ ಸಮಿತಿಯನ್ನು ಸ್ಥಾಪಿಸಬೇಕು ಮತ್ತು ಪ್ರತಿ ಎರಡು ವರ್ಷಗಳಿಗೊಮ್ಮೆ ಬದಲಾಯಿಸಬೇಕು.

- ಶೇ 75 ರಷ್ಟು ಎಸ್.ಎಂ.ಸಿ. ಸದಸ್ಯರು ಮಕ್ಕಳ ಪಾಲಕರು / ಪೋಷಕರೇ ಆಗಿರಬೇಕು.
- ಎಸ್.ಎಂ.ಸಿ. ಯ ಶೇ 25 ಸದಸ್ಯರು ಈ ಕೆಳಗಿನ ವ್ಯಕ್ತಿಗಳಾಗಿರುತ್ತದೆ:
- ಮೂರನೇ ಒಂದು ಭಾಗದ ಸದಸ್ಯರು ಸ್ಥಳೀಯ ಸಂಸ್ಥೆಯ ಚುನಾಯಿತ ಸದಸ್ಯರು ಇವರನ್ನು ಆ ಸಂಸ್ಥೆ ನಿರ್ಧರಿಸುತ್ತದೆ.
- ಮೂರನೇ ಒಂದು ಭಾಗದ ಸದಸ್ಯರು, ಆ ಶಾಲೆಯ ಶಿಕ್ಷಕರು – ಇದನ್ನು ಅವರೇ ನಿರ್ಧರಿಸುತ್ತಾರೆ.
- ಉಳಿದ ಮೂರನೇ ಒಂದು ಭಾಗ – ಸ್ಥಳೀಯ ಶಿಕ್ಷಣ ತಜ್ಞರು / ಶಾಲೆಯ ಮಕ್ಕಳು ಆಗಿರುತ್ತಾರೆ. ಇದನ್ನು ಸಮಿತಿಯ ಪೋಷಕರು ನಿರ್ಧರಿಸುತ್ತಾರೆ.

**ಮಕ್ಕಳ ಹಕ್ಕುಗಳ ರಕ್ಷಣೆ :**

ಮಕ್ಕಳ ಹಕ್ಕುಗಳ ಕುರಿತು ಈಗಾಗಲೇ ಘಟಕ–3 ರಲ್ಲಿ ವಿವರವಾಗಿ ವಿವರಿಸಲಾಗಿದೆ. ಮತ್ತೇ ಹೇಳುವುದಾದರೆ, ಮಕ್ಕಳ ಹಕ್ಕುಗಳು ಈ ಹಕ್ಕುಗಳನ್ನು ಒಳಗೊಂಡಿವೆ :

- ಬದುಕುವ
- ಕುಟುಂಬ
- ಅಭಿವ್ಯಕ್ತಿ ಸ್ವಾತಂತ್ರ್ಯ
- ಆರೋಗ್ಯ ಮತ್ತು ಅಭಿವೃದ್ಧಿ
- ದುರ್ಬಳಕೆ ಮತ್ತು ಶೋಷಣೆಯಿಂದ ರಕ್ಷಣೆ
- ಶಿಕ್ಷಣ ಪಡೆಯಲು ಸಮಾನ ಅವಕಾಶ
- ಘನತೆ ಮತ್ತು ಗೌರವ

- ಸಂಸ್ಕೃತಿ ಮತ್ತು ಪರಂಪರೆ
- ವಸತ, ಶೌಚಾಲಯಗಳು, ಕುಡಿಯುವ ನೀರು, ಬೆಳಕಿರುವ ತರಗತಿ ಕೊಠಡಿಗಳು.
- ಪುಸ್ತಕಗಳು, ಕಪ್ಪು ಹಲಗೆ, ವಿಜ್ಞಾನ ಪ್ರಯೋಗಾಲಯ ಉಪಕರಣಗಳು, ಶಿಕ್ಷಕರು
- ಉಚಿತ ಸಮವಸ್ತ್ರ, ಪುಸ್ತಕಗಳು, ಮಧ್ಯಾಹ್ನದ ಊಟ
- ಗುಣಮಟ್ಟದ ಶಿಕ್ಷಣ
- ಮನರಂಜನೆ ಮತ್ತು ವಿರಾಮ

ಆರ್.ಟಿ.ಇ. ಕಾಯಿದೆಯಂತೆ, ಮೊದಲ ಹಂತದಲ್ಲಿ, ಮಕ್ಕಳ ಹಕ್ಕುಗಳನ್ನು ರಕ್ಷಿಸುವ ಜವಾಬ್ದಾರಿ – ಶಿಕ್ಷಕರು, ಮುಖ್ಯ ಶಿಕ್ಷಕರು ಮತ್ತು ಶಾಲಾ ನಿರ್ವಹಣಾ ಸಮಿತಿಯ ಮೇಲಿದೆ.

**ಎಸ್.ಎಂ.ಸಿ. ಯಿಂದ ಶಾಲಾ ಅಭಿವೃದ್ಧಿ ಯೋಜನೆ ತಯಾರಿ :**

ಆರ್ಥಿಕ ವರ್ಷಾಂತ್ಯದ ಕನಿಷ್ಟ ಮೂರು ತಿಂಗಳ ಮುಂಚೆ ಎಸ್.ಎಂ.ಸಿ. ಶಾಲಾ ಅಭಿವೃದ್ಧಿ ಯೋಜನೆಯನ್ನು ಸಿದ್ಧಪಡಿಸಬೇಕು. ಶಾಲಾಭಿವೃದ್ಧಿ ಯೋಜನೆ ಮೂರು ವರ್ಷದ ಯೋಜನೆಯಾಗಿದ್ದು, ಮೂರು ವಾರ್ಷಿಕ ಉಪಯೋಜನೆಗಳನ್ನು ಒಳಗೊಂಡಿರುತ್ತದೆ. ಶಾಲಾಭಿವೃದ್ಧಿ ಯೋಜನೆ ಈ ಅಂಶಗಳನ್ನು ಒಳಗೊಂಡಿರುತ್ತದೆ – ಪ್ರತಿ ವರ್ಷದ ತರಗತಿವಾರು ದಾಖಲಾತಿ ಅಂದಾಜು, ಅಗತ್ಯವಿರುವ ಹೆಚ್ಚುವರಿ ಶಿಕ್ಷಕರ ಸಂಖ್ಯೆ (ಮುಖ್ಯ ಶಿಕ್ಷಕರು, ವಿಷಯ ಶಿಕ್ಷಕರು ಮತ್ತು ಅರೆಕಾಲಿಕ ಶಿಕ್ಷಕರು ಸೇರಿದಂತೆ) ಯನ್ನು ಪ್ರತ್ಯೇಕವಾಗಿ ತರಗತಿ 1 ರಿಂದ 5 ಮತ್ತು 6 ರಿಂದ 8 ಕ್ಕೆ ಅನುಗುಣವಾಗಿ ರತಕ್ಕದ್ದು. ಮೂರು ವರ್ಷಗಳಿಗೆ ನಿಗಧಿತ ನಿಯಮಗಳಿಗೆ ಹೆಚ್ಚುವರಿ ಮೂಲ ಸೌಕರ್ಯ ಮತ್ತು ಸಲಕರಣೆಗಳನ್ನು ಒಳಗೊಂಡಿರಬೇಕು ಹೆಚ್ಚುವರಿ ಹಣಕಾಸಿನ ಅವಶ್ಯಕತೆ, ವಿಂಗಡಿಸಲಾದ ಮೂರು ವರ್ಷಗಳ ವಾರ್ಷಿಕ ಹಣಕಾಸಿನ ಅವಶ್ಕತೆಗಳು, ಉಚಿತ ಪಠ್ಯ ಪುಸ್ತಕಗಳು ಸಮವಸ್ತ್ರಗಳು ಮತ್ತು ಪುಸ್ತಕಗಳು ಹಾಗೂ ಶಿಕ್ಷಕರಿಗೆ ತರಬೇತಿ ಮುಂತಾದುವುಗಳನ್ನು ಅಭಿವೃದ್ಧಿಯೋಜನೆಯಲ್ಲಿ ಸ್ಪಷ್ಟವಾಗಿ ಉಲ್ಲೇಖಿಸಬೇಕು.

**ಸರ್ಕಾರಿ ಇಲಾಖೆಗಳಿಗೆ ಸಂಬಂಧಿಸಿದಂತೆ ಎಸ್.ಎಂ.ಸಿ.ಯ ಪಾತ್ರ :**

ಆರ್.ಟಿ.ಇ. ಕಾಯಿದೆಯಂತೆ ಪ್ರತಿ ಮಗುವೂ ಶಾಲೆಯಲ್ಲಿರಬೇಕು, ಬಾಲ ಕಾರ್ಮಿಕ ಪದ್ಧತಿಯನ್ನು ನಿರ್ಮೂಲಗೊಳಿಸಬೇಕು. ಆರ್.ಟಿ.ಇ. ಯಲ್ಲಿ ಒಳಗೊಳ್ಳುವ ಶಿಕ್ಷಣದಂತೆ ಎಸ್ಸಿ, ಎಸ್ಟಿ ಮತ್ತು ಹಿಂದುಳಿದ ವರ್ಗಗಳಿಗೆ ಸೇರಿದ ಮಕ್ಕಳಿಗೆ ಸಂಬಂಧಪಟ್ಟ ಇಲಾಖೆಗಳು ಮತ್ತು ಸಂಸ್ಥೆಗಳೊಂದಿಗೆ ಪಾಲುದಾರಿಕೆಯನ್ನು ಹೊಂದಬೇಕು.

ವಿಶೇಷ ಅಗತ್ಯವಿರುವ ಮಕ್ಕಳಿಗೆ ಸಮಾನ ಅವಕಾಶವನ್ನು ಕಲ್ಪಿಸಲು ವಿಕಲಾಂಗ ಮಕ್ಕಳ ಇಲಾಖೆಗಳೊಂದಿಗೆ ಎಸ್.ಎಂ.ಸಿ. ಕೆಲಸ ಮಾಡಬೇಕಾಗುತ್ತದೆ.

ಗ್ರಾಮೀಣಾಭಿವೃದ್ಧಿ ಮತ್ತು ಪಂಚಾಯತ್‌ರಾಜ್ ಇಲಾಖೆಯೊಂದಿಗೆ ಕೆಲಸ ಮಾಡಿ, ಬಡತನ ನಿರ್ಮೂಲನೆ ಕಾರ್ಯಕ್ರಮವನ್ನು ತ್ವರಿತಗೊಳಿಸಲು ಸಹಾಯ ಮಾಡಿ, ಮಕ್ಕಳು ಮನೆ ಕೆಲಸ ಮತ್ತು ಇತರ ಕೂಲಿ ಸಿಗುವ ಕೆಲಸಗಳಿಂದ ಮುಕ್ತವಾಗಿ ಶಾಲೆಗೆ ಹಾಜರಾಗುವಂತೆ ಎಸ್.ಎಂ.ಸಿ. ಮಾಡಬೇಕು.

ಮಕ್ಕಳ ಹಕ್ಕುಗಳ ರಕ್ಷಣೆಗಾಗಿ ರಾಷ್ಟ್ರೀಯ, ರಾಜ್ಯ ಆಯೋಗ, ಮಹಿಳಾ ಮತ್ತು ಮಕ್ಕಳ ಅಭಿವೃದ್ಧಿ ಇಲಾಖೆಗಳೊಂದಿಗೆ ನಿಗಟವಾಗಿ ಸಹಕಾರ ನೀಡಿ, ಮಕ್ಕಳನ್ನು ನಿಂದನೆ, ದೈಹಿಕ ಕಿರುಕುಳಗಳಿಂದ ರಕ್ಷಿಬೇಕು.

**ನಿಮ್ಮ ಪ್ರಗತಿಯನ್ನು ಪರಿಶೀಲಿಸಿ–6**

1. ಶಾಲೆಯಲ್ಲಿ ಮಕ್ಕಳ ಹಕ್ಕುಗಳ ರಕ್ಷಣೆಗಾಗಿ ಯಾರು ಹೊಣೆಗಾರರಾಗಿರುತ್ತಾರೆ ?

2. ಶಿಕ್ಷಣ ಹಕ್ಕು ಕಾಯಿದೆಯಲ್ಲಿ ಸೂಚಿಸಿರುವಂತೆ, ಶಾಲಾ ನಿರ್ವಹಣಾ ಸಮಿತಿಯ ಸದಸ್ಯರ ಸಂಯೋಜನೆ ಹೇಗಿರುತ್ತದೆ ?

3. ಶಾಲಾ ನಿರ್ವಹಣಾ ಸಮಿತಿಯ ಜವಾಬ್ದಾರಿಗಳು ಯಾವುವು ?

4. ಮಕ್ಕಳ ಹಕ್ಕುಗಳನ್ನು ರಕ್ಷಿಸಲು ಎಸ್.ಎಂ.ಸಿ. ಕೆಲಸ ಮಾಡುವ ವಿವಿಧ ಸರ್ಕಾರಿ ಇಲಾಖೆಗಳು ಯಾವುವು ?

## 7.5 ಆರ್.ಟಿ.ಇ. ಕಾಯಿದೆ 2009ಕ್ಕೆ ಸಂಬಂಧಿಸಿದಂತೆ ಶಾಲಾ ನಿರ್ವಹಣೆ :

ಆರ್.ಟಿ.ಇ. 2009ರ ಹಕ್ಕು ಕಾಯಿದೆ ಪ್ರಕಾರ, ಯು.ಇ.ಇ. ಅಡಿಯಲ್ಲಿ ಶಾಲೆಗೆ ಕೆಲವು ಜವಾಬ್ದಾರಿಗಳಿವೆ. ಈ ಕಾಯಿದೆಗೂ ಮುಂಚೆಯೇ ಸ್ಥಾಪಿತವಾದ ರಾಜ್ಯ / ಸ್ಥಳೀಯ ಸರ್ಕಾರದ ಶಾಲೆಗಳನ್ನು ಹೊರತುಪಡಿಸಿ, ಇತರ ಶಾಲೆಗಳು ಮೂರು ತಿಂಗಳ ಅವಧಿಯಲ್ಲಿ ಒಂದು ಸ್ವಯಂಘೋಷಣೆಯನ್ನು ಫಾರ್ಮ್–1 ರಲ್ಲಿ ಜಿಲ್ಲಾ ಶಿಕ್ಷಣ ಅಧಿಕಾರಿಗಳಿಗೆ ಈ ಕೆಳಗಿನ ನಿಮಾವಳಿಗಳು, ಮಾನ ದಂಡಗಳು ಮತ್ತು ಷರತ್ತುಗಳ ಅನುಸಾರವಾಗಿ ನೀಡಬೇಕಿರುತ್ತದೆ.

ಎ) 1860ರ ಸೊಸೈಟೀಸ್ ರಿಜಿಸ್ಟ್ರೇಷನ್ ಆಕ್ಟ್‌ನಡಿಯಲ್ಲಿ ನೋಂದಾಯಿತ ಸ್ಥಾಪಿಸಲಾದ ಸಾರ್ವಜನಿಕ ಟ್ರಸ್ಟ್‌ದಿಂದ ಈ ಶಾಲೆ ನಡೆಸಲ್ಪಡುತ್ತಿದೆ.

ಬಿ) ಯಾವುದೇ ವ್ಯಕ್ತಿ/ಗುಂಪು/ವ್ಯಕ್ತಿಗಳ ಸಂಘ/ ಇನ್ನಿತರೆ ವ್ಯಕ್ತಿಗಳ ಲಾಭಕ್ಕಾಗಿ ಈ ಶಾಲೆ ನಡೆಯುತ್ತಿಲ್ಲ.

ಸಿ) ಸಂವಿಧಾನಾತ್ಮಕ ಮೌಲ್ಯಗಳಿಗೆ ಶಾಲೆ ಅನುಗುಣವಾಗಿದೆ.

ಡಿ) ಶಾಲಾ ಕಟ್ಟಡ/ಗಳು ಮತ್ತು ಮೈದಾನಗಳನ್ನು ಶಿಕ್ಷಣ ಮತ್ತು ಕೌಶಲ್ಯ ಅಭಿವೃದ್ಧಿ ಉದ್ದೇಶಗಳಿಗಾಗಿ ಮಾತ್ರ ಬಳಸಲಾಗುತ್ತದೆ.

ಇ) ರಾಜ್ಯ / ಸ್ಥಳೀಯ ಪ್ರಾಧಿಕಾರದಿಂದ ಅಧಿಕಾರ ಪಡೆದ ಯಾವುದೇ ಅಧಿಕಾರಿಯ ತಪಾಸಣೆಗೆ ಶಾಲೆ ಮುಕ್ತವಾಗಿದೆ.

ಎಫ್) ಈ ನಿಯಮಗಳಿಗೆ ಅನುಸಾರವಾಗಿ ಶಾಲೆಗೆ ಅಗತ್ಯವಾದ ಮೂಲ ಸೌಕರ್ಯವಿದೆ.

ಜಿ) ಇಂತಹ ವರದಿ–ಮಾಹಿತಿಗಳನ್ನು ಶಾಲೆಯು ಕಾಲಕಾಲಕ್ಕೆ DEO ಗೆ ಒದಗಿಸಬೇಕಾಗುತ್ತದೆ. ಆಗಾಗ್ಗೆ ರಾಜ್ಯ/ಸ್ಥಳೀಯ ಸರ್ಕಾರದ ಸೂಚನೆಗಳನ್ನು ಅನುಸರಿಸಬೇಕಾಗುತ್ತದೆ. ಅದರಂತೆ ಮಾನ್ಯತೆಯ ಸಂಬಂಧಿ ಅಂಶಗಳನ್ನು ಪೂರೈಸುತ್ತದೆ.

ಡ್ರಾಫ್ಟ್ ಮಾಡೆಲ್ ನಿಯಮಗಳ ಪಾರ್ಟ್–4 ವಿಭಾಗ 7(1,2,3) ಅಡಿಯಲ್ಲಿ, ಮಾನ್ಯತೆ ಪಡೆಯುವ ಉದ್ದೇಶಕ್ಕಾಗಿ, ಸರ್ಕಾರಿ, ಅನುದಾನಿತ ಮತ್ತು ಅನುದಾನರಹಿತ ಖಾಸಗಿ ಶಾಲೆಗಳು ದುರ್ಬಲ ವರ್ಗ ಮತ್ತು ಅನನುಕೂಲಕರ ಗುಂಪಿನ ಮಕ್ಕಳನ್ನು ಸೇರಿಸಿಕೊಳ್ಳಬೇಕು. ಹಾಗೆ ಮಾಡದಿದ್ದರೆ, ಎಚ್ಚರಿಕೆ ಮತ್ತು / ಅಥವಾ ಮಾನ್ಯತೆ ಹಿಂತೆದುಕೊಳ್ಳುವಿಕೆಗೆ ಆಹ್ವಾನ ನೀಡಬೇಕಾಗುತ್ತದೆ. ಅಂತಹ ಮಕ್ಕಳನ್ನು

ತರಗತಿಯಲ್ಲಿರುವ ಇತರ ಮಕ್ಕಳಿಂದ ಬೇರ್ಪಡಿಸಬಾರದು, ಅಥವಾ ಇತರ ಮಕ್ಕಳಿಗೆ ನಡೆಯುವ ತರಗತಿಗಳಿಂದ ಭಿನ್ನವಾಗಿರುವ ಸ್ಥಳ / ಸಮಯದಲ್ಲಿ ತರಗತಿಗಳು ನಡೆಯಬಾರದು, ಯಾವುದೇ ಮಕ್ಕಳನ್ನು ತಾರತಮ್ಯದಿಂದ ನೋಡಬಾರದು, ಪಠ್ಯಪುಸ್ತಕ, ಸಮವಸ್ತ್ರ, ಗ್ರಂಥಾಲಯ, ಐ.ಸಿ.ಟಿ. ಸೌಲಭ್ಯ, ಪಠ್ಯೇತರ–ಕ್ರೀಡೆಗಳಿಗೆ ಸಂಬಂಧಿಸಿದಂತೆ ಕೂಡಾ ತಾರತಮ್ಯ ಮಾಡಬಾರದು.

NCTE, NCERT, SCERT ಗಳು ಶಿಫಾರಸು ಮಾಡಿದಂತೆ ಅರ್ಹ ತರಬೇತಿ ಪಡೆದ ಶಿಕ್ಷಕರನ್ನು ಮಾತ್ರ ನೇಮಕ ಮಾಡಿಕೊಳ್ಳಬೇಕು, ಇಲ್ಲವಾದಲ್ಲಿ, ಶಾಲೆಯು ಅಮಾನ್ಯತೆಗೊಳಪಡುವ ಸಾಧ್ಯತೆಯಿದೆ. ಶಿಕ್ಷಕ–ಶಿಕ್ಷಣ ಕೋರ್ಸ್‌ಗಳನ್ನು ನಡೆಸುವ ಸಂಸ್ಥೆಗಳು ಅಥವಾ ಅರ್ಹತೆ ಹೊಂದಿರುವ ವ್ಯಕ್ತಿಗಳನ್ನು ಅಂದಾಜಿಸಿದ ಶಿಕ್ಷಕರ ಅಗತ್ಯತೆಗೆ ಸಂಬಂಧಿಸಿದಂತೆ ಸಾಕಷ್ಟು ಸಂಖ್ಯೆಯಲ್ಲಿ ಲಭ್ಯವಿಲ್ಲದಿದ್ದರೆ, ಆರ್.ಟಿ.ಇ. ಪ್ರಾರಂಭವಾದ ಒಂದು ವರ್ಷದೊಳಗೆ ರಾಜ್ಯ ಸರ್ಕಾರವು ಮನವಿ ಮಾಡಿಕೊಳ್ಳಬೇಕಾಗುತ್ತದೆ. ಭಾರತ ಸರ್ಕಾರವು ಮೂರು ವರ್ಷಗಳ ಕಾಲಾವಕಾಸ ನೀಡಬಹುದು. ಆದರೆ, ಅದು ಆರ್.ಟಿ.ಇ. ಪ್ರಾರಂಭವಾದ ವರ್ಷದಿಂದ ಐದು ವರ್ಷ ಮೀರಬಾರದು. ಈ ಅವಧಿಯಲ್ಲಿ ತರಬೇತಿ ಪಡೆಯದ ಶಿಕ್ಷಕರು, ಸಂಬಂಧಿತ ಅರ್ಹತೆಯನ್ನು ಶೈಕ್ಷಣಿಕ ಪ್ರಾಧಿಕಾರಗಳಿಂದ ಪಡೆಯಬೇಕು. ಆರ್.ಟಿ.ಇ. ಕಾಯಿದೆ ಪ್ರಾರಂಭವಾದ ಆರು ತಿಂಗಳೊಳಗೆ ನೇಮಕವಾದ ಶಿಕ್ಷಕರು ಹೈಯರ್ ಸೆಕೆಂಡರಿ ಸ್ಕೂಲ್ ಸರ್ಟಿಫಿಕೇಟ್ / ಅದಕ್ಕೆ ಸಮಾನವಾದ ವಿದ್ಯಾರ್ಹತೆಗಿಂತ ಕಡಿಮೆಯಿಲ್ಲದ ಅರ್ಹತೆಯನ್ನು ಹೊಂದಿರಲೇಬೇಕು. ಸಂಸ್ಥೆಯ ಆಡಳಿತ ಮಂಡಳಿಯು ಅರ್ಹತೆ ಹೊಂದಿಲ್ಲದ ಶಿಕ್ಷಕರಿಗೆ ಐದು ವರ್ಷಗಳ ಅವಧಿಯಲ್ಲಿ ಗಳಿಸಿಕೊಳ್ಳುವಂತೆ ಅವಕಾಶ ಮಾಡಿಕೊಡಬೇಕು.

**ನಿಮ್ಮ ಪ್ರಗತಿಯನ್ನು ಪರಿಶೀಲಿಸಿ–7**

1. ಶಿಕ್ಷಣ ಹಕ್ಕು ಕಾಯಿದೆ ಜಾರಿಗೆ ಬಂದ ನಂತರ ಖಾಸಗಿ ಅನುದಾನಿತ ಶಾಲೆಯ ಮಾನ್ಯತೆಗಾಗಿ ಇರುವ ಸಬಂಧನೆಗಳು ಯಾವುವು ?

2. ಖಾಸಗಿ ಅನುದಾನರಹಿತ ಶಾಲೆಯು ಅನನುಕೂಲಕರ ಮಕ್ಕಳನ್ನು ಏಕೆ ಸೇರಿಸಿಕೊಳ್ಳಬೇಕು ?

3. ಒಂದು ಶಾಲೆಯು ಒಂದು ಮಗುವಿಗೆ ಪ್ರವೇಶಾತಿ ನಿರಾಕರಿಸಬಹುದೇ ?

4. ಕೇವಲ ತರಬೇತಿ ಪಡೆದ / ಅರ್ಹ ಶಿಕ್ಷಕರನ್ನು ಮಾತ್ರ ಒಂದು ಶಾಲೆಯು ಏಕೆ ನೇಮಿಸಿಕೊಳ್ಳಬೇಕು ?

## 7.6 ಪರಿಣಾಮಕಾರಿ ನಿರ್ವಹಣೆ ಮತ್ತು ಸಾಮರ್ಥ್ಯ ಅಭಿವೃದ್ಧಿಗಾಗಿ ನೆಟ್‌ವರ್ಕಿಂಗ್:

ಯು.ಎಸ್. ಡೆವೆಲಪ್‌ಮೆಂಟ್ ಪ್ರೋಗ್ರಾಮ್ (UNDP) "ಸಾಮರ್ಥ್ಯ"ವನ್ನು (Capacity) ಹೀಗೆ ವ್ಯಾಖ್ಯಾನಿಸಿದೆ – "ವ್ಯಕ್ತಿ, ಸಂಸ್ಥೆ, ಸಮಾಜಗಳ ಕಾರ್ಯ ನಿರ್ವಹಿಸುವ, ಸಮಸ್ಯೆ ಪರಿಹರಿಸುವ ಹಾಗೂ ಉದ್ದೇಶಗಳನ್ನು ರೂಪಿಸಿ, ಸಶಕ್ತ ರೀತಿಯಲ್ಲಿ ಸಾಧಿಸುವ ಸಾಮರ್ಥ್ಯ". "ಸಾಮರ್ಥ್ಯಾಭಿವೃದ್ಧಿ" ಎಂಬ ಪದವು ಮಾನವ ಮತ್ತು ಸಾಂಸ್ಥಿಕ ಸಾಮರ್ಥ್ಯವನ್ನು ಅಭಿವೃದ್ಧಿ ಪಡಿಸುವ ಕಾರ್ಯವನ್ನು ವಿವರಿಸುತ್ತದೆ.

ಅಭಿವೃದ್ಧಿಶೀಲ ರಾಷ್ಟ್ರಗಳಿಗೆ ನಿರ್ದಿಷ್ಟವಾಗಿ ಸಂಬಂಧಿಸಿದ ಉದಾಹರಣೆಗಳು – ನೀರು, ಕೃಷಿ, ಪೌಷ್ಠಿಕತೆ ಮತ್ತು ಆರೋಗ್ಯದಂತಹ ಕ್ಷೇತ್ರಗಳಲ್ಲಿ ನಿರತರಾಗಿರುವ ಸಮುದಾಯ ಕಾರ್ಯಕರ್ತರಿಗೆ ತರಬೇತಿ ನೀಡಲಾಗುತ್ತದೆ.

ಸ್ಥಳೀಯ ಸಮುದಾಯ ಗುಂಪುಗಳಂತಹ ವೈಯಕ್ತಿಕ ಸಂಘಟನೆಗಳು ಸಾಮರ್ಥ್ಯಾಭಿವೃದ್ಧಿ ಕಾರ್ಯಕ್ರಮಗಳ ನಿರ್ಣಾಯಕ ಪೂರೈಕೆದಾರರಾಗಿದ್ದು, ತಮ್ಮ ಮಿಶನ್ (Mission) ಅನ್ನು ತಾವೇ ಉಳಿಸಿಕೊಳ್ಳುವ ಸಾಮರ್ಥ್ಯ ಹೊಂದಿಲ್ಲ. ಆಂತರಿಕ ನಿರ್ವಹಣೆ ರಚನೆಗಳ ಸುಧಾರಣೆ, ಮಾಹಿತಿ–ಸಂವಹನ ತಂತ್ರಜ್ಞಾನದ ಬಳಕೆ ಹಾಗೂ ನೆಟ್‌ವರ್ಕಿಂಗ್ ಸಾಂಸ್ಥಿಕ ಸಾಮರ್ಥ್ಯ ಅಭಿವೃದ್ಧಿಗೆ ಅವಿಭಾಜ್ಯವಾಗಿವೆ.

### 7.6.1 UEE ನಿರ್ವಹಣೆಗಾಗಿ ಮಾಹಿತಿ ಮತ್ತು ಸಂವಹನ ತಂತ್ರಜ್ಞಾನಗಳು ICT):

ಮಾಹಿತಿ ಮತ್ತು ಸಂವಹನ ತಂತ್ರಜ್ಞಾನಗಳು ತಂತ್ರಜ್ಞಾನಗಳಾಗಿದ್ದು, ಯು.ಇ.ಇ. ಯ ಪರಿಣಾಮಕಾರಿ ಅನುಷ್ಠಾನಕ್ಕಾಗಿ ಮಾಹಿತಿಯನ್ನು ಸಂವಹನ ಮಾಡಲು, ಸಂಗ್ರಹಿಸಲು,

ನಿರ್ವಹಿಸಲು, ವಿತರಿಸಲು ಮತ್ತು ಬಳಸಲು ತಂತ್ರಜ್ಞಾನವನ್ನು ಉಪಯೋಗಿಸಲಾಗುತ್ತದೆ. ಆನ್‌ಲೈನ್ (online) ನಲ್ಲಿ ಸಂವಹನ ಮಾಡುವ, ಸಹಯೋಗ ಮಾಡುವ ಮತ್ತು ಮಾಹಿತಿಯನ್ನು ವಿನಿಮಯ ಮಾಡುವ ಬಳಕೆದಾರರ ಸಾಮರ್ಥ್ಯವು ಸ್ಕೂಲ್‌ನೆಟ್ (Schoolnet) ಗೆ ಬಹುಮುಖ್ಯವಾದುದು. ಈ ಸಂದರ್ಭದಲ್ಲಿ ICT ಗಳೆಂದರೆ ಕಂಪ್ಯೂಟರ್, ಕಂಪ್ಯೂಟರ್ ಜಾಲಗಳು, ಅಂತರ್ಜಾಲ, ಟೆಲಿಫೋನ್‌ಗಳು, ಟಿ.ವಿ., ರೇಡಿಯೋ, ಶ್ರವ್ಯ–ದೃಶ್ಯ ಉಪಕರಣಗಳು, ನೆಟ್‌ವರ್ಕ್ ಅಥವಾ ಇಂಟರ್ನೆಟ್ ಅವಕಾಶವಿರುವ ಇತರ ಸಾಧನಗಳು (ಉದಾಹರನೆಗೆ ಕೈಯಲ್ಲಿ ಹಿಡಿಯು PDA ಗಳು (Personal Digital Assistants), ಎಲೆಕ್ಟ್ರಾನಿಕ್ ಸಾಧನಗಳು ಮತ್ತು ಮೊಬೈಲ್ ಪೋನ್‌ಗಳು).

ICT ಮತ್ತು ಸಂವಹನ ಜಾಲಗಳ ಸುಲಭ ಮತ್ತು ಕೈಗೆಟುಕುವ ಅವಕಾಶವನ್ನು ಹೊಂದಿರುವವರು ಸಂಪೂರ್ಣವಾಗಿ ಭಾಗವಹಿಸಬಹುದು ಆದರೆ ಇಲ್ಲದವರು ಕಡಿಮೆ ಅವಕಾಶಗಳನ್ನು ಹೊಂದಿರುತ್ತಾರೆ. ITC ಮೂಲ ಸೌಕರ್ಯ ಮತ್ತು ಉಪಕರಣಗಳು ಲಭ್ಯವಿವೆ ಎಂದು ಊಹಿಸಲಾಗಿದೆ. ICT ಗಳ ವಿಭಿನ್ನ ಅವಕಾಶದ ವಿದ್ಯಮಾನವು ಸಾಮಾನ್ಯವಾಗಿ “ಡಿಜಿಟಲ್ ವಿಭಜನೆ” ಎಂದು ಕರೆಯಲ್ಪಡುತ್ತದೆ.

ICT ಬಳಕೆಯ ಮೂರು ಚಾಲಕರೆಂದರೆ ಭಾಷೆ (ಇಂಟರ್ನೆಟ್‌ನಲ್ಲಿ ವ್ಯಾಪಕವಾಗಿ ಬಳಸಲಾಗುವ ಭಾಷೆಯನ್ನು ಬಳಸುವ ಸಾಮರ್ಥ್ಯ), <u>ಸಾಕ್ಷರತೆ</u> (ನಿರ್ಧಿಷ್ಟವಾಗಿ ಓದುವ ಸಂಸ್ಕೃತಿ), ಮತ್ತು <u>ಕಲಿಕೆ</u> (ಶೈಕ್ಷಣಿಕ ಸಾಧನೆಯ ಮಟ್ಟ), ಜ್ಞಾನ ಸಮಾಜಗಳು, ಆರ್ಥಿಕ ಪ;ರಗತಿ ಮತ್ತು ಸಮೃದ್ಧಿಯನ್ನು ರೂಪಿಸುವಲ್ಲಿ ಶಿಕ್ಷಣವು ಒಂದು ಪ್ರಮುಖ ಅಂಶವಾಗಿದೆ. ಶಿಕ್ಷಣವು ಸಮಾಜ ಮತ್ತು ಆರ್ಥಿಕತೆಯಲ್ಲಿ ನುರಿತ ಭಾಗಿದಾರರನ್ನು ತಯಾರುಮಾಡುವ ಮಾಧ್ಯಮವಷ್ಟೇ ಅಲ್ಲದೇ, ICT ಬಳಕೆಯನ್ನು ವಿಸ್ತರಿಸುವ ಒಂದು ಚಾಲಕ ಶಕ್ತಿಯೂ ಔದು. ICT ಅಭಿವೃದ್ಧಿಯು ಹೆಚ್ಚಿನ ಜ್ಞಾನ / ಮಾಹಿತಿ ಹಂಚಿಕೊಳ್ಳುವ ಪರಿಸರವನ್ನು ನಿರ್ಮಿಸುತ್ತದೆ, ಮಾಹಿತಿಯ ತರರಣೆ ಹೆಚ್ಚುವುದರಿಂದ ಹೆಚ್ಚಿನ ಜ್ಞಾನ ಸೃಷ್ಠಿಯಾಗುತ್ತದೆ.

ಹೆಚ್ಚು ಒಳಗೊಳ್ಳುವ UEE ಮತ್ತು ವಿಕೇಂದ್ರೀಕೃತ ಶಿಕ್ಷಾಣ ವ್ಯವಸ್ಥೆಯ ಪರಿವರ್ತನೆ ಸಂದರ್ಭದಲ್ಲಿ ನೀಡದಾಗ, ಶಿಕ್ಷಣ ವ್ಯವಸ್ಥೆಯಲ್ಲಿ ರಚನಾತ್ಮಕ ಸಮಸ್ಯೆಗಳು ಮತ್ತು ಕೊರತೆಗಳನ್ನು ತಿಳಿಯುವುದು ಅವಶ್ಯಕ. ನಿರ್ಧಿಷ್ಟ ಪ್ರದೇಶಗಳಲ್ಲಿ (ಉದಾಹರಣೆಗೆ, ಪಠ್ಯಪುಸ್ತಕಗಳು, ಶಿಕ್ಷಕರ ಕೊರತೆ) ಸಮತೆಯ ಸಮಸ್ಯೆಗಳನ್ನು ಬಗೆಹರಿಸಲು ಅಥವಾ ಹೊಸದನ್ನು ಎದುರಿಸಲು ಇರುವ ಅಧ್ಯಾಪಕರನ್ನು ಬೆಂಗಲಿಸಲು, ಆಡಳಿತಾತ್ಮಕ ಮತ್ತು ಬೋಧನಾ ದಕ್ಷತೆಯನ್ನು ಹೆಚ್ಚಿಸಲು ICT ಗಳನ್ನು ಬಳಸುವುದು.

### 7.6.2 **ಸ್ಕೂಲ್‌ನೆಟ್ ಎಂದರೇನು ?**

ಸ್ಕೂಲ್‌ನೆಟ್‌ಗಳು ಶಾಲೆಗಳಿಗೆ ಸಂಪರ್ಕ ಕಲ್ಪಿಸುವ ಮೂಲಕ ಪ್ರಾಥಮಿಕ ಶಿಕ್ಷಣಕ್ಕಾಗಿ ನಿರ್ವಹಣಾ ಮಾಹಿತಿ ವ್ಯವಸ್ಥೆಯನ್ನು ಅಭಿವೃದ್ಧಿಪಡಿಸಲು ವಿದ್ಯಾರ್ಥಿಗಳು, ಶಿಕ್ಷಕರು, ಪೋಷಕರು, ಶಾಲೆಗಳು, ಆಡಳಿತಾತ್ಮಕ ಸಂಸ್ಥೆಗಳು, ಮಾಹಿತಿ & ಸಂಪನ್ಮೂಲಗಳನ್ನು ಹಂಚಿಕೊಳ್ಳಲು ಸಾರ್ವಜನಿಕರಿಗೆ ಸಂಪರ್ಕ ಕಲ್ಪಿಸುವುದು. ಸ್ಕೂಲ್‌ನೆಟ್ ಶಿಕ್ಷಣ ಸಂಸ್ಥೆಗಳ ಪರಿಣಾಮಕಾರಿ ನಿರ್ವಹಣೆಗೆ ಸಹಾಯ ಮಾಡುತ್ತದೆ. ಶೈಕ್ಷಣಿಕ ಅಧಿಕಾರಿಗಳು, ಶಾಲೆಗಳು, ಪೋಷಕರು, ಶಿಕ್ಷಕರು, ಸಮುದಾಯ ಮತ್ತು ವಿಶಾಲವಾದ ಶೈಕ್ಷಣಿಕ ಸಂಪನ್ಮೂಲಗಳ ಜಾಲವನ್ನು ಸ್ಕೂಲ್‌ನೆಟ್ ಎಂದು ಕರೆಯಲಾಗುತ್ತದೆ. "ಸ್ಕೂಲ್‌ನೆಟ್" ಎಂಬ ಪದವು ಶಾಲಾಶಿಕ್ಷಣ ಆಡಳಿತ ವ್ಯವಸ್ಥೆಯ ಐಸಿಟಿ ಆಧಾರಿತ ಇ–ನಿರ್ವಹಣೆಯನ್ನು ಸೂಚಿಸಲು ಅಂತರರಾಷ್ಟ್ರೀಯವಾಗಿ ಗುರುತಿಸಲ್ಪಟ್ಟ ಸಾರ್ವತ್ರಿಕ ಹೆಸರಾಗಿ ಮಾರ್ಪಟ್ಟಿದೆ.

ಸಾಂಸ್ಥಿಕವಾಗಿ, ಸ್ಕೂಲ್‌ನೆಟ್‌ಗಳು ವಿವಿಧ ಸ್ವರೂಪಗಳಲ್ಲಿ ಅಸ್ತಿತ್ವದಲ್ಲಿವೆ. ಒಂದು ಸ್ಕೂಲ್‌ನೆಟ್ ಸರ್ಕಾರದ ಇಲಾಖೆ, ಸರ್ಕಾರೇತರ ಸಂಸ್ಥೆ (ಎನ್.ಜಿ.ಒ), ಖಾಸಗಿ ಕಂಪನಿ ಅಥವಾ ಶಾಲೆಗಳಲ್ಲಿ ಇರುವ ಒಂದು ಪ್ರೋಗ್ರಾಮ್ ಆಗಿರಬಹುದು. ಪ್ರಪಂಚದಾದ್ಯಂತ ಎಲ್ಲಿ ಬೇಕಾದರೂ ಇರುವ ಪಾಲುದಾರರು UEE ಯ ಕುರಿತ ಮಾಹಿತಿಯನ್ನು ಪಡೆಯುವಂತೆ ಇದು ನೆರವಾಗುತ್ತದೆ. ಸ್ಕೂಲ್‌ನೆಟ್ ಅನ್ನು ರಾಷ್ಟ್ರೀಯ / ರಾಜ್ಯಮಟ್ಟದ ಪ್ರೋಗ್ರಾಮ್ ಆಗಿ ಅರ್ಥೈಸಿಕೊಳ್ಳಬಹುದು, ಅದು ಶಾಲೆಗಳಲ್ಲಿ ICT ಬಳಸುವಂತೆ ಮಾಡುವ ಗುರಿಯನ್ನು ಹೊಂದಿದೆ.

ಸ್ಕೂಲ್ ನೆಟ್‌ಗಳು ವಿವಿಧ ಶೈಕ್ಷಣಿಕ ಸಂಸ್ಥೆಗಳನ್ನು ಸಂಯೋಜಿಸಿ, ಶಿಕ್ಷಣ ಮಾಹಿತಿ ವ್ಯವಸ್ಥೆಯ ನಿರ್ವಹಣೆಗೆ ಅಡಿಪಾಯ ಹಾಕಿ, ಪೂರಿಣಾಮಕಾರಿ ಶೈಕ್ಷಣಿಕ ಸೇವೆಗಳ ವಿತರಣೆಗಾಗಿ ಡೇಟಾಬೇಸ್ ಇಡುತ್ತವೆ.

### 7.6.3 **ಸ್ಕೂಲ್‌ನೆಟ್‌ನ ಕಾರ್ಯಗಳು :**

ಸ್ಕೂಲ್‌ನೆಟ್ ಒದಗಿಸುವ ಕೆಲವು ಕಾರ್ಯಗಳು, ಚಟುವಟಿಕೆಗಳು ಮತ್ತು ಸೇವೆಗಳು :

**ತಂತ್ರಜ್ಞಾನ ಸೇವೆಗಳು :**

- ಕನೆಕ್ಟಿವಿಟಿ ಸೇವೆಗಳು ಶಾಲೆಗಳಿಗೆ, ಸರ್ಕಾರಿ ಅಧಿಕಾರಿಗಳು, ಸಾರ್ವಜನಿಕರು ಮತ್ತು ಸಂಘಟನೆಗಳು / ವ್ಯವಸ್ಥೆಗಳ ನಡುವೆ ಸಹಭಾಗಿತ್ವವನ್ನು ಒದಗಿಸಲು ಅಂತರ್ಜಾಲ ಸೇವಾ ಪೂರೈಕೆದಾರರಾಗಿ (ISP) ಕಾರ್ಯ ನಿರ್ವಹಿಸುತ್ತವೆ.

- ಶಾಲೆಗಳಿಗೆ ಸೂಕ್ತ ಸಲಕರಣೆಗಳನ್ನು ಸರಬರಾಜು ಮಾಡುವುದು (ಸರ್ಕಾರದ ಧನ ಸಹಾಯದ ಮೂಲಕ, ದಾನಿ / ಸಾಂಸ್ಥಿಕ ನಿಧಿ/ ದೇಣಿಗೆಗಳ ಮೂಲಕ ಖರೀದಿಸಿ)

- ಶಾಲೆಗಳಲ್ಲಿ ಶಿಕ್ಷಣ ನೀಡಲು ಸರಿಯಾದ ಸಾಫ್ಟ್‌ವೇರ್ ಸಲ್ಯೂಷನ್‌ಗಳನ್ನು ಅಭಿವೃದ್ಧಿಪಡಿಸುವುದು.

**<u>ವಿಷಯ ಸೇವೆಗಳು :</u>**

- ಆಡಳಿತಗಾರರು, ಶಿಕ್ಷಕರು ಮತ್ತು ಕಲಿಕಾರ್ಥಿಗಳನ್ನು ಸೂಕ್ತ ಇಂಟರ್ನೆಟ್ ಕಾಂಟೆಂಟ್‌ಗೆ ನಿರ್ದೇಶಿಸುವ ಪೋರ್ಟಲ್ ಸೈಟ್ಸ್ (ಹುಡುಕತಕ್ಕ ಮತ್ತು ಸಂಘಟಿಸಲ್ಪಟ್ಟ)
- ಸ್ಥಳೀಯವಾಗಿ ಅಭಿವೃದ್ಧಿಪಡಿಸಿ ಆನ್‌ಲೈನ್ ವಿಷಯ
- ವೃತ್ತಿಪರ ಮಟ್ಟದಲ್ಲಿ ವಿಷಯ ಅಭಿವೃದ್ಧಿ (ವಿಷಯ ತಜ್ಞರಿಂದ) ಅಥವಾ ಜನಸಾಮಾನ್ಯ ಮಟ್ಟ (ಕಾರ್ಯನಿರತ ಶಿಕ್ಷಕರಿಂದ).

**<u>ಸಹಕಾರ ಯೋಜನೆಗಳು :</u>**

- ಆನ್‌ಲೈನ್ ಯೋಜನೆಗಳಲ್ಲಿ ವಿವಿಧ ಸಂಪನ್ಮೂಲ ಕೇಂದ್ರಗಳ ಒಳಗೊಳ್ಳುವಿಕೆ ಮತ್ತು ಸಹಯೋಗದೊಂದಿಗೆ ಅನುಕೂಲ ಕಲ್ಪಿಸುವುದು.
- ರಾಷ್ಟ್ರ ಮಟ್ಟದಲ್ಲಿ ಸಹಯೋಗ ಯೋಜನೆಗಳನ್ನು ವಿನ್ಯಾಸ ಮಾಡಿ, ನಡೆಸುವುದು (ಮೂಲ / ಸ್ಥಳೀಕರಿಸಿದ ಅಂತರರಾಷ್ಟ್ರೀಯ ಯೋಜನೆ).

**<u>ವೃತ್ತಿಪರ ಅಭಿವೃದ್ಧಿ :</u>**

- ICT ಕೌಶಲಗಳು ಮತ್ತು ಭೋಧನೆ–ಕಲಿಕೆಯಲ್ಲಿ ICT ಬಳಕೆಯ ಕುರಿತು ಶಿಕ್ಷಕರಿಗೆ ಸೇವಾವಧಿ ತರಬೇತಿ (ಪಠ್ಯಕ್ರಮ ಏಕೀಕರಣ).

**<u>ಪ್ರಯೋಗ, ನಾವೀನ್ಯತೆ ಮತ್ತು ವಕಾಲತ್ತು :</u>**

- ಪೈಲಟ್ ಪ್ರಾಜಕ್ಟ್ ನಡೆಸುವುದು.
- ಅತ್ಯುತ್ತಮ ಅಭ್ಯಾಸ ಮಾರ್ಗಸೂಚಿಗಳನ್ನು ತಯಾರಿಸಿ, ಪ್ರಸಾರ ಮಾಡುವುದು.
- ಪೈಲಟ್ ಯೋಜನೆಗಳು ಮತ್ತು ಅತ್ಯುತ್ತಮ ಅಭ್ಯಾಸ ಅನುಭವದ ಆಧಾರದ ಮೇಲೆ ವಿವಿಧ ಹಂತಗಳಲ್ಲಿ ನೀತಿ ಬದಲಾವಣೆಗಳನ್ನು ಪ್ರತಿಪಾದಿಸುವುದು.

- ಶೈಕ್ಷಣಿಕ ತಂತ್ರಜ್ಞಾನಗಳ ಅನ್ವಯದಲ್ಲಿ ನಾವೀನ್ಯತೆಯನ್ನು ಉತ್ತೇಜಿಸುವುದು ಮತ್ತು ಬೆಂಬಲಿಸುವುದು.

**ಶಾಲೆ ಮತ್ತು ಸಂಪನ್ಮೂಲಗಳ ನಿರ್ವಹಣೆ :**

- ನಿರ್ಧಾರ ತೆಗೆದುಕೊಳ್ಳಲು ಮಾಹಿತಿ ನೆರವು ಒದಗಿಸುವುದು.
- ನೀತಿ ಯಾರಿಕೆಗಾಗಿ ಮಾಹಿತಿ ನೆರವು ಒದಗಿಸುವುದು.

### 7.6.4 ಶಿಕ್ಷಣ ನಿರ್ವಹಣಾ ಮಾಹಿತಿ ವ್ಯವಸ್ಥೆಯಾಗಿ ಸ್ಕೂಲ್‌ನೆಟ್ :

ಶಾಲೆಗಳ ದತ್ತಾಂಶ ಸಂಗ್ರಹದ ಸಾಮರ್ಥ್ಯ ಮತ್ತು ವೇಗ ಗಣನೀಯವಾಗಿ ಸುಧಾರಿಸುತ್ತದೆ, ಹಾಗೂ ಆಡಳಿತಾತ್ಮಕ ಕಾರ್ಯಗಳಿಗೆ ಬೇಕಾದ ಪ್ರಯತ್ನ ಕಡಿಮೆಯಾಗುತ್ತದೆ. ಆಡಳಿತಾತ್ಮಕ ಕೆಲಸವನ್ನು ಕಡಿಮೆ ಮಾಡಿ, ಮಾಹಿತಿಯ ಹೆಚ್ಚಿನ ಲಭ್ಯತೆಗೆ ICT ಆಡಳಿತ ನಿರ್ವಹಣಾ ಕಾರ್ಯತಂತ್ರವಾಗಿ ಕೆಲಸ ಮಾಡುತ್ತದೆ.

ಸ್ಕೂಲ್‌ನೆಟ್ ಶಾಲಾ ಪರಿಸರಕ್ಕೆ ಬಂದರೆ, ಆ ಶಾಲೆಯ ಪರಿಸರವೇ ಬದಲಾಗುವುದು. ICT ಕೌಶಲಗಳು ಇ–ಮೇಲ್ ಸಂದೇಶ ಕಳುಹಿಸುವಂತಹ ಮೂಲ ಕೌಶಲದಿಂದಿಡಿದು ಉನ್ನತ ಕೌಶಲಗಳಾದ ಮಾಹಿತಿಯನ್ನು ಪತ್ತೆ ಹಚ್ಚುವ, ಮೌಲ್ಯಮಾಪನ ಮಾಡುವ, ವಿಶ್ಲೇಷಿಸುವ ಮತ್ತು ಸಂಶ್ಲೇಷಿಸುವಂತಹ ವ್ಯಾಪ್ತಿಯನ್ನು ಹೊಂದಿದೆ (ಇದನ್ನು ಮಾಹಿತಿ ಸಾಕ್ಷರತೆ ಎನ್ನಲಾಗಿದೆ). ಈ ಉನ್ನತ ಕೌಶಲಗಳು ನಿರ್ವಹಣೆಯ ಎಲ್ಲ ಕ್ಷೇತ್ರಗಳಿಗೂ ಅನ್ವಯಿಸುತ್ತವೆ.

## 7.7 ಹಣಕಾಸು ನೀಡುವ ಕ್ರಮ (Financing Pattern) :

SSA ಅನುಷ್ಠಾನಗೊಳಿಸಲು ಭಾರತ ಸರ್ಕಾರವು ವಿಶ್ವಬ್ಯಾಂಕ್ ಮತ್ತು ಯು.ಕೆ. ಯಿಂದ ಹಣಕಾಸು ನೆರವು ಪಡೆಯಿತು. ಈ ರೀತಿ ಪಡೆಯುವಾಗ ಕಾನೂನು ಒಪ್ಪಂದಗಳಿಗೆ ಬದ್ಧವಾಗಿರಬೇಕು. ವಿದೇಶಿ ಹಣಕಾಸು ಸಂಸ್ಥೆಗಳೊಂದಿಗೆ ಸಮಾಲೋಚಿಸಬೇಕು. ಕಾಲಕಾಲಕ್ಕೆ ಅಭಿವೃದ್ಧಿಯ ಹಣಕಾಸು ನೆರವು ಪಡೆಯಲು ಶಾಲೆ, ಗ್ರಾಮ, ಬ್ಲಾಕ್, ಜಿಲ್ಲೆಯ ಮತ್ತು ರಾಜ್ಯಮಟ್ಟದ ಕಾರ್ಯ ಮತ್ತು ವೆಚ್ಚದ ವರದಿಗಳನ್ನು ಸಕಾಲಿಕವಾಗಿ ಸಲ್ಲಿಸಬೇಕು.

**ವೆಚ್ಚ ಹಂಚಿಕೆಯ ವ್ಯವಸ್ಥೆ :**

SSA ಕಾರ್ಯಕ್ರಮದ ಹಣಕಾಸು ನೆರವು ವೆಚ್ಚ ಹಂಚಿಕೆಯ ವ್ಯವಸ್ಥೆಯ ಅಧಾರದಲ್ಲಿ ದೊರೆಯಿತು. ಇದು ಕೇಂದ್ರ ಮತ್ತು ರಾಜ್ಯ ಸರ್ಕಾರಗಳ ನಡುವೆ 9ನೇ

ಯೋಉನೆಯಲ್ಲಿ 85:15, 10ನೇ ಯೋಜನೆಯಲ್ಲಿ 75:25 ಮತ್ತು ಆ ನಂತರ 50:50 ರ ಹಂಚಿಕೆಯನ್ನು ಹೊಂದಿದೆ. UEE ನ ಜಾರಿಗೆ ರಾಜ್ಯ ಸರ್ಕಾರಗಳು ಕ್ರಮೇಣ ಹೆಚ್ಚಿನ ಜವಾಬ್ದಾರಿಯನ್ನು ತೆಗೆದುಕೊಳ್ಳಬೇಕೆಂದು ನಿರೀಕ್ಷಿಸಲಾಗಿದೆ. ವೆಚ್ಚ ಹಂಚಿಕೆಯ ಬದ್ಧತೆಯನ್ನು ರಾಜ್ಯ ಸರ್ಕಾರದಿಂದ ಬರಹದಲ್ಲಿ ತೆಗೆದುಕೊಳ್ಳಲಾಗುತ್ತದೆ.

**<u>ರಾಜ್ಯ ಇಂಪ್ಲಿಮೆಂಟೇಶನ್ ಸೊಸೈಟಿ :</u>**

SSA ಅಡಿಯಲ್ಲಿ ಅನುದಾನ ಪಡೆದುಕೊಳ್ಳಲು ರಾಜ್ಯ ಅನುಷ್ಠಾನ ಸೊಸೈಟಿಯನ್ನು ಚಾರಿಟಬಲ್ ಸೊಸೈಟಿ ಎಂದು ರಾಜ್ಯ ಸರ್ಕಾರಗಳು ನೋಂಧಯಿಸಬೇಕು. ಭಾರತ ಸರ್ಕಾರವು ರಾಜ್ಯ ಸರ್ಕಾರಗಳು / ಕೇಂದ್ರಾಡಳಿತ ಪ್ರದೇಶಗಳಿಗೆ ಹಣವನ್ನು ಬಿಡುಗಡೆ ಮಾಡುತ್ತದೆ. ಕೇಂದ್ರ ಸರ್ಕಾರ ತನ್ನ ಪಾಲನ್ನು ವರ್ಗಾಯಿಸಿದ ನಂತರ ರಾಜ್ಯ ಬಿಡುಗಡೆ ಮಾಡುತ್ತದೆ. (ಮೊದಲ ಕಂತು ಹೊರತುಪಡಿಸಿ). SSA ಕಾರ್ಯಕ್ರಮದಡಿ ನೇಮಕಗೊಂಡ ಶಿಕ್ಷಕರ ಸಂಬಳಕ್ಕಾಗಿ ಕೇಂದ್ರ–ರಾಜ್ಯಗಳ ನಡುವೆ 9ನೇ ಯೋಜನೆಯಲ್ಲಿ 85:15, 10ನೇ ಯೋಜನೆಯಲ್ಲಿ 75:25, ಆ ನಂತರ 50:50ರ ಅನುಪಾತದಲ್ಲಿ ಹಂಚಿಕೆಯಾಗಿದೆ.

ಪ್ರಾಥಮಿಕ ಶಿಕ್ಷಣಕ್ಕಾಗಿ ರಾಷ್ಟ್ರೀಯ ಪೌಷ್ಠಿಕಾಂಶ ನೆರವು ಕಾರ್ಯಕ್ರಮ (Mid-Day-Meal) SSA ನ ಭಾಗವಲ್ಲ. ಪ್ರಸ್ತುತ ಕೇಂದ್ರ ಸರ್ಕಾರವು ಆಹಾರ ಧಾನ್ಯಗಳು ಮತ್ತು ನಿಗಧಿತ ಸಾರಿಗೆ ವೆಚ್ಚವನ್ನು ಭರಿಸಿದರೆ, ರಾಜ್ಯವು ಆಹಾರ ಬೇಯಿಸುವ ವೆಚ್ಚವನ್ನು ಭರಿಸುತ್ತಿದೆ. ಕೇಂದ್ರ ಸರ್ಕಾರದ ಪ್ರಾಥಮಿಕ ಶಿಕ್ಷಣದ ಎಲ್ಲಾ ಅಸ್ತಿತ್ವದಲ್ಲಿರುವ ಯೋಜನೆಗಳು (ರಾಷ್ಟ್ರೀಯ ಬಾಲ ಭವನ್ ಮತ್ತು NCTE ಹೊರತುಪಡಿಸಿ) 9ನೇ ಯೋಜನೆ ನಂತರ SSA ಗೆ ಸೇರ್ಪಡೆಗೊಂಡಿವೆ.

ಪ್ರಧಾನ ಮಂತ್ರಿ ಗ್ರಾಮೋದಯ ಯೋಜನೆ, ಜವಾಹರ್ ಗ್ರಾಮ ಸಮೃದ್ಧಿ ಯೋಜನೆ, ಪ್ರಧಾನ ಮಂತ್ರಿ ರೋಜ್‌ಗಾರ್ ಯೋಜನೆ, ಸುನಿಶ್ಚಿತ್ ರೋಜ್‌ಗಾರ್ ಯೋಜನೆ, ಸಂಸದರು / ಎಂಎಲ್‌ಎಗೆ ಲಭ್ಯವಿರುವ ನಿಧಿಗಳು / ಸಂಪನ್ಮೂಲಗಳನ್ನು ಸ್ಪಷ್ಟವಾಗಿ ಜಿಲ್ಲಾ ಯೋಜನೆಯಲ್ಲಿ ತೋರಿಸುವ ಅಗತ್ಯವಿದೆ. ಈ ಹಣವನ್ನು ಶಾಲೆಗಳ ಕಟ್ಟಡಗಳ ಅಭಿವೃದ್ಧಿ, ನಿರ್ವಹಣೆ, ದುರಸ್ತಿಗಾಗಿ, ಬೋಧನಾ–ಕಲಿಕಾ ಸಲಕರಣೆಗಳಿಗಾಗಿ, ಸ್ಥಳೀಯ ನಿರ್ವಹಣಾ ಮಂಡಳಿಯ ಸಾಮರ್ಥ್ಯಾಭಿವೃದ್ಧಿಗಾಗಿ ಬಳಸಬೇಕಾಗುತ್ತದೆ. ಗ್ರಾಮ ಶಿಕ್ಷಣ ಸಮಿತಿ / ಶಾಲಾ ನಿರ್ವಹಣಾ ಸಮಿತಿ / ಗ್ರಾಮ ಪಂಚಾಯತ್ / ವಿಕೇಂದ್ರೀಕೃತ ಅನುಷ್ಠಾನಕ್ಕಾಗಿ ಎನ್.ಜಿ.ಓ. ಸಮಯೋಚಿತವಾಗಿ ಯೋಜನೆಯ ನಿಗಧಿತ ಮಾನದಂಡದೊಳಗೆ ಉತ್ತಮ ರೀತಿಯಲ್ಲಿ ಹಣವನ್ನು ಹೇಗೆ ಬಳಸುವುದು ಎಂಬುದನ್ನು ನಿರ್ಧರಿಸಬೇಕು.

**ನಿಮ್ಮ ಪ್ರಗತಿಯನ್ನು ಪರಿಶೀಲಿಸಿ–8**

1. UEE ಯಲ್ಲಿ ಕೇಂದ್ರ ಮತ್ತು ರಾಜ್ಯ ಸರ್ಕಾರಗಳ ನಡುವೆ ಹಣಕಾಸು ನಿಧಿಯ ಹಂಚಿಗೆ ಹೇಗಿದೆ ?

2. UEE ಅನುಷ್ಠಾನದಲ್ಲಿ ವಿವಿಧ ಯೋಜನೆಗಳ ನಿಧಿಯ ಒಮ್ಮುಖವು ಹೇಗೆ ಸೂಚಿತವಾಗಿದೆ? ಉದಾಹರಣೆಗಳನ್ನು ನೀಡಿ.

**ಚಟುವಟಿಕೆ–1 :**

ನಿಮ್ಮ ಶಾಲೆಯಲ್ಲಿ ಅಲ್ಪಸಂಖ್ಯಾತ ಸಮುದಾಯಕ್ಕೆ ಸೇರಿದ ಹುಡುಗಿಯರ ದಾಖಲಾತಿ ಹೆಚ್ಚಿಸಲು ಮತ್ತು ಅವರನ್ನು ಉಳಿಸಿಕೊಳ್ಳಲು ಒಂದು ಯೋಜನೆಯನ್ನು ತಯಾರಿಸಿ:

**ಚಟುವಟಿಕೆ–2 :**

ಚಟುವಟಿಕೆ–1 ಕ್ಕೆ ಒಂದು ಬಜೆಟ್ ತಯಾರಿಸಿ:

ನೀವು ಸಿದ್ಧಪಡಿಸಿದ ಯೋಜನೆ ಮತ್ತು ಬಜೆಟ್‌ನ್ನು ಅನುಮೋದನೆಗೆಂದು ಯಾರಿಗೆ ಸಲ್ಲಿಸುತ್ತೀರಿ ?

## 7.8 ಸಾರಾಂಶ :

ಈ ಘಟಕದಲ್ಲಿ ನೀವು ಶಿಕ್ಷಣ ಹಕ್ಕು ಕಾಯಿದೆ UEE ಯನ್ನು ವಿಕೇಂದ್ರೀಕರಿಸಿದೆ ಎಂಬುದನ್ನು ಕಲಿತಿರುವಿರಿ. UEE ನ ಅನುಷ್ಠಾನವು ಏಕೆ ವಿಕೇಂದ್ರಿಕರಿಸಲ್ಪಟ್ಟಿದೆ; ಶಾಲೆ, ಆವಾಸಸ್ಥಳ, ಗ್ರಾಮ, ಬ್ಲಾಕ್ ಮತ್ತು ಜಿಲ್ಲಾಮಟ್ಟಗಳಲ್ಲಿ ಸೂಕ್ಷ್ಮ ಯೋಜನೆ ಎಂದರೇನು, ಈ ಹಂತಗಳಲ್ಲಿ ಶಿಕ್ಷಣ ಅಭಿವೃದ್ಧಿ ಯೋಜನೆಗಳನ್ನು ಸಿದ್ಧಪಡಿಸುವವರು ಯಾರು, ಶಿಕ್ಷಣ ಅಭಿವೃದ್ಧಿ ಯೋಜನೆಗಳಲ್ಲಿರುವ ವಿಷಯಗಳು ಯಾವುವು, ಅದು ಹೇಗೆ ಅನುಮೋದನೆ ಪಡೆಯುತ್ತದೆ, ಯೋಉನೆಯ ಅನುಷ್ಠಾನವನ್ನು ಮೇಲ್ವಿಚಾರಣೆ ಮಾಡುವವರು ಯಾರು;

ಪ್ರಾಥಮಿಕ ಶಿಕ್ಷಣದ ವಿಕೇಂದ್ರೀಕೃತ ವ್ಯವಸ್ಥೆಯಲ್ಲಿ ಆಡಳಿತ ಸಮಸ್ಯೆಗಳು ಯಾವುವು?ಒಂದು ಖಾಸಗಿ ಅನುದಾನಿತ / ಅನುದಾನ ರಹಿತ ಶಾಲೆಯ "ಮಾನ್ಯತೆ" ನೀಡುವ ಜವಾಬ್ದಾರಿ ಯಾರದು; ಆರ್.ಟಿ.ಇ. ಕಾಯಿದೆ ಸೂಚಿಸಿದಂತೆ, ಒಂದು ಶಾಲೆಯನ್ನು "ಮಾನ್ಯತೆಗೆ ಒಳಪಡಿಸುವ ವಿಧಾನ; ಮಗುವಿನ ಹಕ್ಕುಗಳನ್ನು ರಕ್ಷಿಸುವ ಜವಾಬ್ದಾರಿ ಯಾರದು ;

ಶಾಲೆ, ಬ್ಲಾಕ್, ಜಿಲ್ಲೆ, ರಾಜ್ಯ ಮತ್ತು ರಾಷ್ಟ್ರೀಯ ಹಂತಗಳಲ್ಲಿ ಪ್ರಾಥಮಿಕ ಶಿಕ್ಷಣದ ಸಾಮರ್ಥ್ಯಾಭಿವೃದ್ಧಿಗಾಗಿ ಪಿಸಿಟಿ.ಯನ್ನು ಹೇಗೆ ಬಳಸುವುದು ಎಂಬುದನ್ನು ಹಾಗೂ ಹಣಕಾಸಿನ ಮಾದರಿಯನ್ನು ಕಲಿತಿದ್ದೀರಿ.

## 7.9 ಹೆಚ್ಚಿನ ಓದಿಗೆ ಸಲಹೆಗಳು :

Educational Planning and Management in Small States : Concepts and Experiences – By Godfrey Baldacchino, Charles Farrugia, Common Wealth Secretariat.

A Comphrehensive Study of Education – By S. Samual Ravi

http://ssa.ap;.nic.in
http://en.wikip;edia.org/wiki/sarva-shiksha-Abhiyan
http://www.educatikonforallinindia.com/page112.html
http://scertdelhi.info/

## 7.10 ಘಟಕಾಂತ್ಯದ ಅಭ್ಯಾಸಗಳು :

1. ಸೂಕ್ಷ್ಮ ಯೋಜನೆ ಎಂದರೇನು ? ನಿಮ್ಮ ಸ್ವಂತ ಪ್ರದೇಶದಲ್ಲಿ ಸಮುದಾಯದ ಮಾಲೀಕತ್ವಕ್ಕೆ ಸಂಬಂಧಿಸಿದಂತೆ ಮೈಕ್ರೋ-ಯೋಜನೆಗಳನ್ನು (ಸೂಕ್ಷ್ಮ ಯೋಜನೆಗಳನ್ನು) ಚರ್ಚಿಸಿ.

2. ನಿಮ್ಮ ಜಿಲ್ಲೆಯಲ್ಲಿನ ಬಿ.ಆರ್.ಸಿ. ಮತ್ತು ಸಿ.ಆರ್.ಸಿ. ಗಳನ್ನು ಪಟ್ಟಿಮಾಡಿ. ಪ್ರಾಥಮಿಕ ಶಿಕ್ಷಣದಲ್ಲಿ ಬಿ.ಆರ್.ಸಿ. ಮತ್ತು ಸಿ.ಆರ್.ಸಿ. ಗಳ ಪಾತ್ರ ಮತ್ತು ಜವಾಬ್ದಾರಿಗಳನ್ನು ನಿರೂಪಿಸಿ.

**ಅನುವಾದಕರು : (ಇಂಗ್ಲೀಷ್‌ನಿಂದ ಕನ್ನಡಕ್ಕೆ)**

**ಸಿ. ಗುರುಸ್ವಾಮಿ**
ಉಪನ್ಯಾಸಕರು
ಆರ್.ವಿ. ಶಿಕ್ಷಕರ ತರಬೇತಿ ಸಂಸ್ಥೆ, ಜಯನಗರ, ಬೆಂಗಳೂರು-560 011.
c.guruswamy@yahoo.com

**ಘಟಕ : 8 ಪ್ರಾಥಮಿಕ ಶಿಕ್ಷಣಕ್ಕೆ ಶಿಕ್ಷಕರನ್ನು ತಯಾರುಗೊಳಿಸುವುದು.**

**ಸಂರಚನೆ:**

8.0 ಪೀಠಿಕೆ

8.1 ಕಲಿಕಾ ಉದ್ದೇಶಗಳು

8.2 ಪ್ರಾಥಮಿಕ ಮತ್ತು ಉನ್ನತ ಪ್ರಾಥಮಿಕ ಉಪಹಂತದ ಶಿಕ್ಷಣ ಶಾಸ್ತ್ರದ ಸಮಸ್ಯೆಗಳು

8.3 ಪ್ರಾಥಮಿಕ ಹಂತದ ಎನ್‌ಸಿಎಫ್ 2005 ರ ಶಾಲಾ ಶಿಕ್ಷಣದ ಪ್ರಮುಖ ಅಂಶಗಳು

8.3.1 ಎನ್‌ಸಿಎಫ್ 2005 ರ ಪ್ರಮುಖ ಲಕ್ಷಣಗಳು

8.3.2 ಶಿಕ್ಷಕರ ಸೇವಾ ಪೂರ್ವ ತರಬೇತಿ

8.3.3 ಶಿಕ್ಷಕರ ಸೇವಾ ಅವಧಿ ತರಬೇತಿ

8.3.4 ವಿಶೇಷ ಅಗತ್ಯತೆಗಳಿಗೆ ಶಿಕ್ಷಕರ ತರಬೇತಿ

8.3.5 ಶಿಕ್ಷಕರ ಶಿಕ್ಷಣದ ಪಠ್ಯಕ್ರಮ ಪೂರ್ವಪ್ರಾಥಮಿಕ ಹಂತದಲ್ಲಿ

8.3.6 ತರಬೇತಿಗಾಗಿ ಸಾಂಸ್ಥಿಕ ಮೂಲ ಸೌಕರ್ಯಗಳು

8.3.7 ಶಿಕ್ಷಕರ ನೇಮಕಾತಿ

8.4 ಶಿಕ್ಷಕರ ಶಿಕ್ಷಣದ ರಾಷ್ಟ್ರೀಯ ಪಠ್ಯಕ್ರಮ ಚೌಕಟ್ಟು 2009–10 ಪ್ರಾಥಮಿಕ ಶಾಲಾ ಶಿಕ್ಷಕರಿಗೆ

**ಹಂತ 1: ಪ್ರಾಥಮಿಕ ಹಂತದ ಶಿಕ್ಷಕರ ಶಿಕ್ಷಣ (ತರಗತಿ 1–5)**

8.4.1 ತಾರ್ಕಿಕ

8.4.2 ಪಠ್ಯ ವಿಷಯ

8.4.3 ತರಬೇತಿ

8.4.4 ಪಠ್ಯಕ್ರಮ ಕಾರ್ಯಚರಣೆ

8.4.5 ಪ್ರಶಿಕ್ಷಕರ ಪಾತ್ರ

8.4.6 ಮೌಲ್ಯಮಾಪನ

8.4.7 ಮೌಲ್ಯಮಾಪನದ ಸಾಧನಗಳು

**ಹಂತ 2 : ಪೂರ್ವ ಪ್ರಾಥಮಿಕ ಶಿಕ್ಷಣ ಹಂತದ ಶಿಕ್ಷಕರ ಶಿಕ್ಷಣ (ತರಗತಿ 1–8)**

8.4.8 ತಾರ್ಕಿಕ

8.4.9 ಪಠ್ಯ ವಿಷಯ

8.4.10 ತರಬೇತಿ

8.4.11 ಪಠ್ಯಕ್ರಮ ಕಾರ್ಯಚರಣೆ

8.4.12 ಪ್ರಶಿಕ್ಷಕರ ಪಾತ್ರ

8.4.13 ಮೌಲ್ಯಮಾಪನ

8.4.14 ಮೌಲ್ಯಮಾಪನದ ಸಾಧನಗಳು

8.5 ಪ್ರಾಥಮಿಕ ಶಿಕ್ಷಕರ ಶಿಕ್ಷಣದ ಅಂತರ್ಗತಗೊಳಿಸಿದ ಮಾದರಿಗಳು

8.5.1 ಪ್ರಾಥಮಿಕ ಶಿಕ್ಷಕರ ಶಿಕ್ಷಣದ ಪ್ರಸ್ತುತ ಸ್ಥಿತಿ

8.5.2 ಪ್ರಾಥಮಿಕ ಶಿಕ್ಷಕರ ಶಿಕ್ಷಣದ ಉನ್ನತೀಕರಣ

8.5.3 ಹೊಸ ಮಾದರಿಗಳ ಅಗತ್ಯತೆ

8.5.4 ಹೊಸ ಉಪಕ್ರಮಗಳು

8.6 ಪ್ರತಿಫಲಿತ ಅಭ್ಯಾಸಕಾರನಾಗಿ ಶಿಕ್ಷಕ

8.6.1 ಪ್ರತಿಫಲಿತ ಅಭ್ಯಾಸದ ಅರ್ಥ

8.6.2 ಪ್ರತಿಫಲಿತವನ್ನು ಕುರಿತಂತೆ ಶಿಕ್ಷಣ ತಜ್ಞರ ಅಭಿಪ್ರಾಯ

8.6.3 ಪ್ರತಿಫಲಿತ ಅಭ್ಯಾಸದ ಮೂಲ

8.6.4 ಪ್ರತಿಫಲಿತ ಅನುಭವದ ಜೊತೆ ಭಾವನೆಗಳು

8.6.5 ಪ್ರತಿಫಲಿತದ ಅಭ್ಯಾಸದ ಆಧುನಿಕ ಪರಿಕಲ್ಪನೆ

8.6.6 ಝ್ಯುಚನೇರ್ ಮತ್ತು ಲಿಸ್ಟನ್‌ರವರ ಪ್ರತಿಫಲಿತ ಅಭ್ಯಾಸದ ಮಾದರಿ

8.6.7 ಪ್ರತಿಫಲಿತದ ವಿಧಾನಗಳು

8.7 ಉಪಸಂಹಾರ

8.8 ಶಬ್ದಸಂಗ್ರಹ

8.9 ನಿಮ್ಮ ಪ್ರಗತಿಯನ್ನು ಪರೀಕ್ಷಿಸಲು ಮಾದರಿ ಉತ್ತರಗಳು

8.10 ಗ್ರಂಥಋಣ

8.11 ಘಟಕ : ಮುಕ್ತಾಯದ ಅಭ್ಯಾಸಗಳು

---

## 8.0 ಪೀಠಿಕೆ.

ಹಿಂದಿನ ಘಟ್ಟದಲ್ಲಿ ಭಾರತದ ಶಿಕ್ಷಣ ವ್ಯವಸ್ಥೆ ಮತ್ತು ವಿವಿಧ ಹಂತಗಳಲ್ಲಿ ಶಿಕ್ಷಣ ಪ್ರಸಾರ ಮಾಡಲು ತೊಡಗಿರುವ ಬಗ್ಗೆ ತಿಳಿದುಕೊಂಡವು. ಶಿಕ್ಷಣ ಎನ್ನುವುದು ಒಂದು ಮೂಲಭೂತ ಹಕ್ಕು ಎಂಬುದನ್ನು ಈಗಾಗಲೆ ಅಧ್ಯಯನ ಮಾಡಿರುವಿರಿ.

6 ರಿಂದ 14 ವರ್ಷದೊಳಿಗಿನ ಎಲ್ಲ ಮಕ್ಕಳಿಗೆ ಉಚಿತ ಮತ್ತು ಕಡ್ಡಾಯ ಶಕ್ಷಣವನ್ನು ಒದಗಿಸುವ ದೃಷ್ಠಿಯಿಂದ ಸಂವಿದಾನ ಅವಕಾಶದ ಮೂಲಕ ಹುಟ್ಟಿಕೊಂಡ ಕಾಯ್ದೆ ಶಿಕ್ಷಣ ಹಕ್ಕು ಕಾಯ್ದೆಯಾಗಿದೆ. ಇಲ್ಲಿ ಪ್ರಾಥಮಿಕ ಶಿಕ್ಷಣವನ್ನು ವಿಶಾಲ ಅರ್ಥದಲ್ಲಿ ತಿಳಿಸಲಾಗುತ್ತದೆ. ಪ್ರಾಥಮಿಕ ಹಂತದಲ್ಲಿನ ಶಿಕ್ಷಣದ ಸಾರ್ವತ್ರೀಕರಣದಲ್ಲಿನ ಪರಿಣಾಮಗಳನ್ನು ಚಿಂತಿಸಬೇಕಾಗಿದೆ.

ಈ ಒಂದು ಘಟಕದಲ್ಲಿ ಶಿಕ್ಷಕರ ಶಿಕ್ಷಣ ಕಾರ್ಯಕ್ರಮದ ಹಿನ್ನೆಲೆಯನ್ನು ನಾವು ಅಧ್ಯಯನ ಮಾಡಲಿದ್ದೆವೆ. ಈ ಕಾರ್ಯಕ್ರಮವನ್ನು ಅಳವಡಿಸಿಕೊಳ್ಳುವುದರ ಹಿಂದಿರುವ ಪರಿಗಣನೆಗಳೇನು? ನೀವು ಒಬ್ಬ ವ್ಯಕ್ತಿಯಾಗಿ ಪ್ರಾಥಮಿಕ ಶಿಕ್ಷಣವನ್ನು ನೀಡುವಲ್ಲಿ ರಾಷ್ಟೀಯ ಗುರಿ ಸಾಧನೆಗೆ ಹೇಗೆ ಸಹಾಯ ಮಾಡುವಿರಿ.

## 8.1 ಕಲಿಕಾ ಉದ್ದೇಶಗಳು

ಈ ಘಟಕದ ಅಧ್ಯಯನ ಮಾಡುವುದರಿಂದ ಈ ಎಲ್ಲ ಅಂಶಗಳನ್ನು

- ➢ ಪೂರ್ವ ಪ್ರಾಥಮಿಕ ಶಿಕ್ಷಣದ ಉಪಘಟ್ಟದಲ್ಲಿ ಪ್ರಾಥಮಿಕ ಮತ್ತು ಉನ್ನತ ಪ್ರಾಥಮಿಕ ಹಂತದಲ್ಲಿನ ಶಿಕ್ಷಣದ ಸಮಸ್ಯೆಗಳು ಮತ್ತು ಕಾಳಜಿಗಳನ್ನು ಗುರುತಿಸುವುದು
- ➢ ಪ್ರಾಥಮಿಕ ಶಿಕ್ಷಣಕ್ಕೆ ಸಂಬಂಧಿಸಿದ್ದಂತೆ ಎನ್‌ಸಿಎಫ್ 2005 ಪ್ರಮುಖ ಕ್ಷೇತ್ರಗಳಿಗೆ ಕಾರಣಗಳನ್ನು ನೀಡುವುದು.

- ಪ್ರಮುಖ ಕ್ಷೇತ್ರಗಳ ಸಮಸ್ಯೆಗಳಿಗೆ ಸಹಸಂಬಂಧ
- ಪೂರ್ವ ಪ್ರಾಥಮಿಕ ಶಿಕ್ಷಣಕ್ಕೆ ಸಂಬಂಧಿಸಿದಂತೆ ಎನ್‌ಸಿಎರ್ಫಟಿಇ 2009–10ರ ಪ್ರಮುಖ ದೃಷ್ಟಿಕೋನಗಳನ್ನು ವಿವರಿಸುವುದು.
- ವಿವಿಧ ಮಾದರಿಗಳನ್ನು ಹೊಂದಿರುವುದಕ್ಕೆ ಸಮರ್ಥನೆ ನೀಡುವುದು.
- ಪ್ರತಿಫಲಿತ ಅಭ್ಯಾಸಕ್ಕೆ ಸಂಬಂಧಿಸಿದ ವಿವಿಧ ಪರಿಕಲ್ಪನೆಗಳನ್ನು ವಿಶ್ಲೇಷಿಸುವುದು.
- ಪ್ರತಿಫಲಿತ ಅಭ್ಯಾಸ ಮಾಡುವವನಾಗಲು ಕ್ರಿಯಾ ಯೋಜನೆಯನ್ನು ನಿರ್ಧರಿಸುವುದು.

---

## 8:2 ಪ್ರಾಥಮಿಕ ಮತ್ತು ಉನ್ನತ ಪ್ರಾಥಮಿಕ ಉಪಹಂತದ ಹಾಗೂ ಪೂರ್ವಪ್ರಾಥಮಿಕ ಶಿಕ್ಷಣದ ಶಿಕ್ಷಣ ಶಾಸ್ತ್ರದ ಸಮಸ್ಯೆಗಳು ಮತ್ತು ಕಾಳಜಿಗಳು

---

ಈ ಘಟಕದ ಅಧ್ಯಯನದ ನಂತರ ನಿಮಗೆ ಈ ಅಂಶಗಳು ಸಾಧ್ಯವಾಗುತ್ತದೆ ಶಿಕ್ಷಣದ ಅನಾನುಕೂಲಗಳೆಂದರೆ ಜಾತಿ, ಧರ್ಮ, ಲಿಂಗ, ಭಾಷೆ ಸಂಸ್ಕೃತಿಗಳಲ್ಲಿ ಅಸಮಾನತೆಯನ್ನು ಕಾಣಬಹುದು.

**ಪಠ್ಯಕ್ರಮ ವಿನ್ಯಾಸ:–** ಪ್ರಸ್ತುತ ಸಂದರ್ಭದಲ್ಲಿ ಕೆಲವೊಂದು ಹೊಸ ಬೆಳವಣಿಗೆಗಳು ಮತ್ತು ಕಾಳಜಿಗಳಿಗೆ ನಮ್ಮ ಪಠ್ಯ ಕ್ರಮ ಪ್ರತಿ ಸ್ಪಂದಿಸಬೇಕಿದೆ. ಪ್ರಮುಖ ವಿಚಾರವೆಂದರೆ ಎಲ್ಲಾ ವಿದ್ಯಾರ್ಥಿಗಳನ್ನು ಶಾಲೆಯಲ್ಲಿ ಉಳಿಸುವ ಹಾಗೂ ಅವರಲ್ಲಿ ಕಲಿಯುವ ವಿಶ್ವಾಸವನ್ನು ಉಂಟುಮಾಡುವುದಾಗಿದೆ. ಪಠ್ಯ ಕ್ರಮವು ಕಡ್ಡಾಯವಾಗಿ ಪ್ರಾಥಮಿಕ ಶಿಕ್ಷಣದ ಸಾರ್ವತ್ರೀಕರಣದ ಬದ್ಧತೆಯನ್ನು ಪ್ರತಿಬಿಂಬಿಸಬೇಕಾಗಿದೆ. ಕೇವಲ ಸಾಂಸ್ಕೃತಿಕ ವೈವಿಧ್ಯತೆಯನ್ನು ಪ್ರತಿನಿಧಿಸುವುದಲ್ಲದೆ ವಿವಿಧ ಸಾಮಾಜಿಕ ಮತ್ತು ಆರ್ಥಿಕ ಹಿನ್ನೆಲೆಯ ವಿದ್ಯಾರ್ಥಿಗಳ ಜೊತೆಯಲ್ಲಿ ವಿವಿಧ ಭೌತಿಕ

ಮನೋವೈಜ್ಞಾನಿಕ ಹಾಗೂ ಭೌದ್ಧಿಕ ಗುಣಗಳ ಆಧಾರದ ಮೇಲೆ ಪೂರ್ವ ಪ್ರಾಥಮಿಕ ಶಿಕ್ಷಣದ ಗುರಿಯನ್ನು ಸಾಧಿಸಬಹುದಾಗಿದೆ.

**ಕ್ರಮಬದ್ದ ಸುಧಾರಣೆಗಳು:–**

ನಮ್ಮ ದೇಶದ ಶಿಕ್ಷಣ ವ್ಯವಸ್ಥೆಯು ಪ್ರಮುಖವಾಗಿ ಪಠ್ಯ ಪುಸ್ತಕದ ವಿಷಯವನ್ನು ನೆನಪಿಟ್ಟುಕೊಳ್ಳುವವರು ಕಂಠಪಾಠ ಮಾಡಿ ಉತ್ತರವನ್ನು ಬರೆಯುತ್ತಾರೋ ಅಂಥವರನ್ನು ಪ್ರೋತ್ಸಾಹಿಸುತ್ತಾ, ಯಾರ ಉತ್ತರಗಳು, ಸೃಜನಾತ್ಮಕವಾಗಿರುತ್ತದೆಯೊ ಅಂಥಹವರನ್ನು ಪ್ರೋತ್ಸಾಹಿಸುವುದಿಲ್ಲ. ಈ ಮಾರ್ಗವು ಶೈಕ್ಷಣಿಕ ವ್ಯವಸ್ಥೆಯ ಕುಸಿತಕ್ಕೆ ಕಾರಣವಾಗುತ್ತದೆ. ಪ್ರಾಥಮಿಕವಾಗಿ ಈ ಮಾರ್ಗವು ವಿದ್ಯಾರ್ಥಿ ಎಷ್ಟರ ಮಟ್ಟಿಗೆ ಕಂಠಪಾಠವನ್ನು ಮಾಡಿದ್ದಾನೆ. ಎಂಬುದನ್ನು ಪರೀಕ್ಷೆ ಮಾಡುತ್ತದೆ. ಜೊತೆಯಲ್ಲಿ ನಮ್ಮ ಸಮಾಜವು ಕೂಡ ಇಂತವರನ್ನೇ ಅಂದರೇ ಯಾರು ಕಂಠ ಪಾಠ ಮಾಡಿ ಹೆಚ್ಚು ಅಂಕಗಳನ್ನು ಗಳಿಸುತ್ತಾರೋ ಅಂತವರನ್ನು ಪೋತ್ಸಾಹಿಸುತ್ತಾ ಯಾರು ಸಹಜ ಜೀವನದಲ್ಲಿ ತಾನು ಕಲಿತ ವಿಷಯಗಳನ್ನು ಅನ್ವಯ ಮಾಡುವವರನ್ನು ಪ್ರೋತ್ಸಾಹಿಸುವುದಿಲ್ಲ. ವ್ಯಕ್ತಿಯ ಸರ್ವತೋಮುಖ ಬೆಳವಣಿಗೆಗೆ ಸಾಮಾಜಿಕ ಮತ್ತು ಭಾವನ್ಮಾಕ ಅಂಶಗಳ ಆಧಾರದ ಮೇಲೆ ಶ್ರೇಣಿಗಳನ್ನು ಕೊಡಲಾಗುತ್ತದೆ. ಶಿಕ್ಷಣವೂ ಪ್ರಮುಖವಾಗಿ ಗಮನಅರಿಸಬೇಕಾದ್ದು ಮೌಲ್ಯಗಳು ಮತ್ತು ತತ್ವಗಳನ್ನು ಎಂಬುದು ಪ್ರಮುಖ ಅಂಶವಾಗಿದೆ.

**ಪಂಚಾಯತ್ ರಾಜ್ ಸಂಸ್ಥೆಗಳು:–**

ಈ ಸಂಸ್ಥೆಗಳು ವ್ಯವಸ್ಥೆಯನ್ನು ಕಡಿಮೆ ಅಧಿಕಾರಶಾಹಿ, ಶಿಕ್ಷಕರನ್ನು ಹೆಚ್ಚು ಜವಾಬ್ದಾರಿಯುತ ವ್ಯಕ್ತಿಗಳನ್ನಾಗಿ ಮಾಡಿ ವಿದ್ಯಾರ್ಥಿಗಳ ಅಗತ್ಯತೆಗಳಿಗೆ ಸ್ಪಂದಿಸಬೇಕಾಗಿದೆ. ಸ್ಥಳೀಯ ಜೀವನ, ಸ್ಥಳೀಯ ಪರಿಸರ, ಸ್ಥಳೀಯ ಭೌತಿಕ ಆಂಶಗಳು, ಪಂಚಾಯಿತ್ ರಾಜ್ ಸಂಸ್ಥೆಗಳಲ್ಲಿ ಅತ್ಯಂತ ಪ್ರಮುಖ ಪಾತ್ರವನ್ನು ವಹಿಸುತ್ತದೆ. ನೈಸರ್ಗಿಕವಾಗಿ ವಿವಿಧ ಕೌಶಲಗಳನ್ನು ತಾವು ವಾಸಿಸುವ ಪರಿಸರದಲ್ಲಿ ಬೆಳೆಸಿಕೊಳ್ಳುತ್ತಾ ಸುತ್ತಲಿನ ಪ್ರಪಂಚವನ್ನು ಗಮನಿಸಿ ಪ್ರಶ್ನಾ ಮನೋಭಾವನೆಯನ್ನು

ಬೆಳೆಸಿಕೊಂಡಾಗ ಪಠ್ಯಕ್ರಮದ ಸಂಪದೀಕರಣಗೊಳಿಸಬೇಕಾಗಿದೆ. ಇಂತಹ ಸುಧಾರಣೆಗಳು ವ್ಯಾಪಕವಾಗಿ ಅಭ್ಯಾಸವನ್ನು ಸುಲಭಗೊಳಿಸುತ್ತವೆ.ಗೊತ್ತಿರುವುದರಿಂದ ಗೊತ್ತಿಲ್ಲದ ಕಡೆಗೆ, ಅಸ್ಪಸ್ಟತೆಯಿಂದ ಸ್ಪಷ್ಟತೆ ಕಡೆಗೆ ಮುಂದುವರೆಯುವ ಪಠ್ಯ ಕ್ರಮ ತತ್ವಗಳನ್ನು ಒಪ್ಪಿಕೊಳ್ಳಬೇಕಾಗಿದೆ.

**ವಿಮರ್ಶಾತ್ಮಕ ಶಿಕ್ಷಣ ಶಾಸ್ತ್ರ:-**

ವಿದ್ಯಾರ್ಥಿಗಳನ್ನು ಅರ್ಥಮಾಡಿಕೊಳ್ಳುವ ಹಾಗೂ ಪ್ರಜಾಪ್ರಭುತ್ವವನ್ನು ಬಲಪಡಿಸುವ ಸಾಧನಗಳನ್ನು ಹೇಗೆ ಶಿಕ್ಷಣ ಒದಗಿಸುತ್ತದೆ. ಎಂಬುದನ್ನು ವಿಮರ್ಶಾತ್ಮಕ ಶಿಕ್ಷಣಶಾಸ್ತ್ರ ತಿಳಿಸುತ್ತದೆ ಸಮಕಾಲೀನ ಸಮಾಜವನ್ನು ಸೃಷ್ಟಿಸಲು ಪ್ರಗತಿ ಪರ ಸಮಾಜಿಕ ಬದಲಾವಣೆಯ ನಿಯೋಜಕನಾಗಿ ಶಿಕ್ಷಣ ಕಾರ್ಯ ನಿರ್ವಹಿಸುತ್ತದೆ. ಶೈಕ್ಷಣಿಕ ಚಳುವಳಿಗಳು ವಿದ್ಯಾರ್ಥಿಗಳಲ್ಲಿ ಉತ್ಸಾಹವನ್ನು ತುಂಬಿ ಸ್ವತಂತ್ರದ ಬಗ್ಗೆ ಜಾಗರೂಕರಾಗುವಂತೆ ಮಾಡಿ ಸರ್ವಾಧಿಕಾರಿ ಪ್ರವೃತ್ತಿಗಳನ್ನು ಗುರುತಿಸುವ ಜ್ಞಾನವನ್ನು ನಿಡುತ್ತದೆ. ಬೋಧನೆ ಮತ್ತು ಕಲಿಕೆಯ ನಡುವಿನ ಸಂಬಂಧದ ಒಂದು ನಿರಂತರ ಪ್ರಕ್ರಿಯೆಯಾಗಿದೆ.

**ಪಠ್ಯಕ್ರಮ ಕಾಳಜಿಗಳು:-**

**ಪರಿಸರ ಸಂರಕ್ಷಣೆ:-**

ಹೊಸ ತಾಂತ್ರಿಕ ಆಯ್ಕೆಗಳು ಮತ್ತು ಜೀವನ ಶೈಲಿಗಳು ಪರಿಸರದ ಅವನತಿಗೆ ಕಾರಣವಾಗಿವೆ. ಅನುಕೂಲಕರ ಮತ್ತು ಅನಾನುಕೂಲಕರ ವ್ಯವಸ್ಥೆಯ ನಡುವೆ ವಿಶಾಲವಾದ ಅಂತರ ಉಂಟಾಗಿದೆ. ಪರಿಸರವನ್ನು ಪೋಷಿಸಿ ಸಂರಕ್ಷಿಸುವುದು ನಮ್ಮೆಲ್ಲರ ಕರ್ತವ್ಯವಾಗಿದೆ. ಪರಿಸರದ ಬಗ್ಗೆ ಅರಿವು ಮೂಡಿಸುವ ಮತ್ತು ಜಾಗೃತಿಯನ್ನು ಬೆಳೆಸಬೇಕಾಗಿದೆ. ಈ ಎಲ್ಲಾ ಆಂಶಗಳನ್ನು ಶೈಕ್ಷಣಿಕ ಪ್ರಕ್ರಿಯೆಯಲ್ಲಿ ಅಂತರ್ಗತಗೊಳಿಸುತ್ತಾ ಶಿಕ್ಷಣದ ಎಲ್ಲಾ ಹಂತಗಳಲ್ಲಿ ಸಮಾಜದ ಎಲ್ಲಾ ವರ್ಗಗಳಲ್ಲಿ ಸಂಯೋಜಿಸುವುದಾಗಿದೆ. 1986 ರ ರಾಷ್ಟ್ರೀಯ ಶಿಕ್ಷಣ ನಿತಿಯ ಪ್ರಮುಖ ಉದ್ದೇಶ ಕೂಡ ಇದ್ದಾಗಿದೆ. ವಿದ್ಯಾರ್ಥಿಗಳಲ್ಲಿ ಪರಿಸರ ರಕ್ಷಣೆಯ ಕಾರ್ಯದಲ್ಲಿ ಜಾಗೃತರನ್ನಾಗಿ

ಮಾಡುವುದು ಪ್ರಸ್ತುತದ ಪ್ರಮುಖ ಕಾಳಜಿಯಾಗಿದೆ. ಶಾಲೆಯ ವರೆಗಿನ ಜೀವನದ ಜೊತೆ ಸಂಪರ್ಕ ಕಲ್ಪಿಸುವ ಪ್ರಜ್ಞಾ ಪೂರ್ವಕ ಪ್ರಯತ್ನವಾಗಬೇಕಿದೆ,

**ಶಾಂತಿ ಶಿಕ್ಷಣ:–**

ನಾವು ಅಭೂತ ಪೂರ್ವ ಹಿಂಸಾಚಾರದ ಸಮಾಜದಲ್ಲಿ ಜೀವಿಸುತ್ತಿದ್ದೇವೆ. ಸ್ಥಳೀಯ ಪ್ರಾಧೇಶಿಕ ರಾಷ್ಟ್ರೀಯ ಹಾಗೂ ಜಾಗತಿಕ ವಾತಾವರಣವೂ ಅನೇಕ ಸಂದರ್ಭದಲ್ಲಿ ಒತ್ತಡಕ್ಕೆ ಕಾರಣವಾಗುತ್ತಿದೆ, ಶಾಂತಿಯುತ್ತ ವಾತವರಣವಿದ್ದಾಗ ಮಾತ್ರ ಪ್ರತಿಯೊಬ್ಬರಲ್ಲೂ ಸದೃಡ ಬೆಳವಣಿಗೆ ಸಾಧ್ಯ. ವ್ಯಕ್ತಿಗಳು ಶಾಂತಿಯನ್ನು ಜೀವನ ಮಾರ್ಗವಾಗಿ ಆಯ್ಕೆ ಮಾಡಲು ಮತ್ತು ಶಾಂತಿಯುತ್ತಾ ಜೀವನ ನಡೆಸುವ ಶಕ್ತಿಯನ್ನು ಶಿಕ್ಷಣ ನೀಡಬೇಕಾಗಿದೆ.

**ಪ್ರಜಾಪ್ರಭುತ್ವವು ಜೀವನದ ಒಂದು ಮಾರ್ಗವಾಗಿ:–**

ಭಾರತದ ಸಂವಿಧಾನದಲ್ಲಿ ಪ್ರತಿಯೊಬ್ಬ ನಾಗರೀಕನಿಗೂ ನ್ಯಾಯ ಸಮಾನತೆ, ಮತ್ತು ಸ್ವತಂತ್ರವನ್ನು ನೀಡುವ ನಂಬಿಕೆಯನ್ನು ನೀಡುತ್ತದೆ ಪ್ರಜಾಪ್ರಭುತ್ವವು ಒಬ್ಬ ಜವಬ್ದಾರಿಯುತ ನಾಗರೀಕನನ್ನು ನಿರ್ಮಾಣ ಮಾಡುವ ಜೊತೆಗೆ ಇತರರಿಗೆ ಗೌರವ ನೀಡುವ ಮನೋಭಾವನೆಯನ್ನು ಬೆಳೆಸುವುದಾಗಿದೆ. ವಿದ್ಯಾರ್ಥಿಗಳು ನಮ್ಮ ಸಾಂಸ್ಕೃತಿಕ ಪರಂಪರೆ ರಾಷ್ಟ್ರೀಯ ಗುರುತ್ವವನ್ನು ಬೆಳೆಸುವಂತಹ ಪ್ರತಿಯೊಬ್ಬ ನಾಗರೀಕರಿಗು ಗೌರವ ನೀಡುವ ಸಾಮಾಜಿಕ ಶ್ರೀಣಿ ವ್ಯವಸ್ಥೆಯಲ್ಲಿ ಸಮಾನತಾವಾದವನ್ನು ಪ್ರತಿಬಿಂಬಿಸುತ್ತಾ ಸಾಮಾಜಿಕ ಬದಲಾವನೆಯ ಸಾಧನವಾಗಿ ಶಿಕ್ಷಣ ಇಂದು ಕಾರ್ಯ ನಿರ್ವಹಿಸಬೇಕಾಗಿದೆ.

**ಶಿಕ್ಷಣ ಶಾಸ್ತ್ರದ ಪರಿಗಣನೆಗಳು:–**

ಶೇಕಡ 80%ರಷ್ಟು ತೂಕದ ಪ್ರಮಾಣವನ್ನು ಶಿಕ್ಷಣ ಶಾಸ್ತ್ರದ ಘಟಕಾಂಶ ಒಳಗೊಂಡಿದೆ. ಪಠ್ಯಕ್ರಮ ವಿದ್ಯಾರ್ಥಿ ಕೇಂದ್ರೀತ ಸಹಕಾರಿ ಕಲಿಕೆಗಳ ಮೂಲಕ ಹೆಚ್ಚಿನ ಒತ್ತನ್ನು ನಿಡಬೇಕಾಗಿದೆ. ಶಾಲಾ ವಿಷಯಗಳ ವಿಷಯದ ಬಗ್ಗೆ ಜ್ಞಾನವನ್ನು ಮತ್ತು ತರಬೇತಿಯನ್ನು ನೀಡಿ ಸಮೃದ್ದಗೊಳಿಸುವುದು ಪಠ್ಯಕ್ರಮದ ಪ್ರಮುಖ

ಉದ್ದೇಶವಾಗಿದೆ. ಶಿಕ್ಷಣದ ಗುಣಮಟ್ಟವು ಎಲ್ಲಾ ಆಯಾಮಗಳಿಂದ ಗುಣಮಟ್ಟದ ಜೀವನದ ಕಾಳಜಿಯನ್ನು ಒಳಗೊಂಡಿದೆ. ಗುಣಾತ್ಮಕ ಶಿಕ್ಷಣದ ಪ್ರಮುಖ ಆಂಶಗಳೆಂದರೆ ಪರಿಸರ ರಕ್ಷಣೆ ಶಾಂತಿಗಾಗಿ ಕಾಳಜಿ, ಪ್ರಜಾಸತ್ತಾತ್ಮಕ ಪೌರತ್ವ ಮುಂತಾದ ಸಾಮಾಜಿಕ ಬದಲಾವಣೆಯ ಕಡೆಗೆ ಮನೋವೃತ್ತಿಯನ್ನು ಬೆಳೆಸುವುದಾಗಿದೆ, ರಾಷ್ಟ್ರ ಎದಿರುಸುತ್ತಿರುವ ಸವಾಲುಗಳಾದ ಮಾನವೀಯತೆ ಕಡೆಗೆ ವಿಶಾಲ ದೃಷ್ಟಿಕೋನವನ್ನು ಬೆಳೆಸಿ ಪಠ್ಯಕ್ರಮದಿಂದ ಪ್ರತ್ಯೇಕವಾಗಿರಿಸಬೇಕಾಗಿರುತ್ತದೆ.

**ಚಟುವಟಿಕೆ – 1** ಈ ಕೆಳಗಿನ ಚಿತ್ರಗಳನ್ನು ನೋಡಿ ನೀವು ಈ ಚಿತ್ರದಲ್ಲಿ ಶಿಕ್ಷಕರಾಗಿದ್ದರೆ ನಿಮ್ಮ ಪ್ರತಿಕ್ರಿಯೆ ಏನು?

ನಿಮ್ಮ ಅಲೋಚನೆಯ ಪ್ರಕಾರ ಶಿಕ್ಷಕರ ಚರ್ಚೆಯನ್ನು ಬದಲಾಯಿಸಿ

ಚಿತ್ರ 1 ಚಿತ್ರ 2

ಸಂಕ್ಷಿಪ್ತವಾಗಿ ಹೇಳಬೇಕೆಂದರೆ ಈ ಕೆಳಕಂಡ ಅಂಶಗಳು ಯೋಜನೆ ಮತ್ತು ಅಗತ್ಯವಿರುವ ಕಾಳಜಿಯ ಅನುಷ್ಠಾನ

1. ವಿದ್ಯಾರ್ಥಿಗಳ ಅನುಭವಗಳ ಜೊತೆ ತರಗತಿ ಜ್ಞಾನವನ್ನು ಸಂಪರ್ಕಿಸುವುದು.
2. ಶಾಲೆಯ ಹೊರಗಿನ ಜೀವನದ ಜ್ಞಾನವನ್ನು ಸಂಪರ್ಕಿಸುವುದು,
3. ಗಿಳಿ ಪಾಠದಿಂದ ಕಲಿಕೆ ವರ್ಗಾವಣೆ ಗೊಂಡಿದೆ ಎಂಬುದನ್ನು ಖಚಿತ ಪಡಿಸುವುದು.
4. ಪಠ್ಯ ಪುಸ್ತಕ ಕೇಂದ್ರಿತ ಮನೋಭಾವದಿಂದ ಮಕ್ಕಳ ಒಟ್ಟಾರೆ ಅಭಿವೃದ್ದಿಗೆ ಪಠ್ಯಕ್ರವನ್ನು ಸಮೃದ್ದಗೊಳಿಸುವುದು.
5. ಪರೀಕ್ಷೆಗಳನ್ನು ಹೆಚ್ಚ ಸಡಿಲಗೊಳಿಸಿ ತರಗತಿಯ ವಾತಾವರಣದ ಜೊತೆ ಸಂಯೋಜಿಸುವುದು.
6. ದೇಶದ ಪ್ರಜಾಪ್ರಭುತ್ವ ರಾಜಕೀಯ ಕ್ಷೇತ್ರದಲ್ಲಿ ಕಾಳಜಿ ವಹಿಸುವ ಮೂಲಕ ರಾಷ್ಟ್ರೀಯ ಗುರುತ್ವವನ್ನು ಪೋಷಿಸುವುದು.


**8:3 ಪ್ರಾಥಮಿಕ ಹಂತದಲ್ಲಿ ಶಾಲಾ ಶಿಕ್ಷಣಕ್ಕಾಗಿ ಎನ್‌ಸಿಎಫ್ 2005 ರ ಪ್ರಮುಖ ಅಂಶಗಳು.**

ರಾಷ್ತ್ರೀಯ ಪಠ್ಯ ಕ್ರಮ ಚೌಕಟ್ಟು 2005 ಪಠ್ಯಕ್ರಮ ರೂಪಿಸಲು ಪಠ್ಯ ಪುಸ್ತಕ ಮತ್ತು ಬೋಧನ ತರಭೇತಿಯನ್ನು ರೂಪಿಸಲು ಭಾರತೀಯ ಶಿಕ್ಷಣದ ವ್ಯವಸ್ಥೆಗೆ ಅನುಗುಣವಾಗಿ ಪಠ್ಯ ವಿಷಯವನ್ನು ರೂಪಿಸುವ ಕಾರ್ಯಕ್ಕೆ ಚೌಕಟ್ಟನ್ನು ಒದಗಿಸುತ್ತದೆ.

ಹೊರೆಯಿಲ್ಲದ ಕಲಿಕೆ ಎಂಬ ತತ್ವದ ಆದಾರದ ಮೇಲೆ ಹಿಂದಿನ ಸರ್ಕಾರಗಳ ವರದಿಗಳು 1986ರ ರಾಷ್ಟ್ರೀಯ ಶಿಕ್ಷಣ ನೀತಿ 1992ರ ಕ್ರಿಯಾ ಯೋಜನೆ ಮತ್ತು ಗುಂಪು ಚರ್ಚೆಗಳ ಅಂತಿಮಫಲವಾಗಿ ದಾಖಲೆಯನ್ನು ರಚಿಸಲಾಗಿದೆ

**8.3.1 ರಾಷ್ಟ್ರೀಯ ಪಠ್ಯಕ್ರಮ ಚೌಕಟ್ಟು 2005 ರ ಪ್ರಮುಖ ಲಕ್ಷಣಗಳು:**

ಈ ದಾಖಲೆಯನ್ನು ಪ್ರಮುಖವಾಗಿ 5 ಕ್ಷೇತ್ರಗಳನ್ನಾಗಿ ವಿಂಗಡಿಸಬಹುದಾಗಿದೆ




ಚಿತ್ರ 8.1

ಪ್ರಾಥಮಿಕ ಶಿಕ್ಷಣದ ಸಾರ್ವತ್ರೀಕರಣಕ್ಕಾಗಿ ಭಾರತೀಯ ಸಂಸತ್ತು ಶಿಕ್ಷಣ ಹಕ್ಕು ಕಾಯ್ದೆ ಎಂಬ ಶಾಸನವನ್ನು ಜಾರಿಗೆ ತಂದು ಉಚಿತ ಮತ್ತು ಕಡ್ಡಾಯ ಶಿಕ್ಷಣವನ್ನು

ನೀಡುವ ವ್ಯವಸ್ಥೆಯನ್ನು ಏಪ್ರಿಲ್ – 1–2010 ರಂದು ಜಾರಿಗೆ ತಂದಿತು ಹಿಂದಿನ ಘಟಕಗಳಲ್ಲಿ ಪ್ರಮುಖ ಸಂವಿಧಾನಾತ್ಮಕ ನಿಬಂಧನೆಯನ್ನು ತಿಳಿದಿದ್ದಿರಾ.

ಪ್ರಾಥಮಿಕ ಶಿಕ್ಷಣದಲ್ಲಿ ಹೊಸ (ಒತ್ತಡಕ್ಕೆ ) ಮಹತ್ವ ನೀಡುತ್ತದೆ.

1. ಸಾರ್ವತ್ರಿಕ ಪ್ರವೇಶ ಮತ್ತು ದಾಖಲಾತಿ
2. 14 ವರ್ಷ ವಯಸ್ಸಿನವರೆಗೆ ಸಾರ್ವತ್ರಿಕ ದಾರಣೆ.
3. ಎಲ್ಲಾ ಮಕ್ಕಳನ್ನು ಸಕ್ರಿಯಗೊಳಿಸಲು ಶಿಕ್ಷಣದ ಗುಣಮಟ್ಟದಲ್ಲಿ ಗಣನೀಯ ಸುಧಾರಣೆ ತಂದು ಕಲಿಕೆಯ ಅಗತ್ಯ ಮಟ್ಟ ಸಾಧಿಸುವುದು.

ಪ್ರಾಥಮಿಕ ಶಾಲಾ ಶಿಕ್ಷಕರಾಗಿ ಎನ್.ಸಿ.ಎಫ್ 2005ರಲ್ಲಿ ತಿಳಿಸಿರುವಂತೆ ನೀವು ಈ ಮೂಲಭೂತ ಪ್ರಶ್ನೆಗಳನ್ನು ತಿಳಿದಿರಬೇಕು ಅವುಗಳೆಂದರೇ,

1. ಯಾವ ಶೈಕ್ಷಣಿಕ ಉದ್ದೇಶಗಳನ್ನು ಸಾಧಿಸಲು ಶಾಲೆಗಳು ಬಯಸುತ್ತವೆ?
2. ಈ ಉದ್ದೇಶಗಳನ್ನು ಸಾಧಿಸಲು ಯಾವ ಶೈಕ್ಷಣಿಕ ಅನುಭವಗಳನ್ನು ಒದಗಿಸಬಹುದು?
3. ಈ ಶೈಕ್ಷಣಿಕ ಅನುಭವಗಳನ್ನು ಅರ್ಥ ಪೂರ್ಣವಾಗಿ ಹೇಗೆ ಆಯೋಜಿಸಬಹುದು?
4. ಈ ಶೈಕ್ಷಣಿಕ ಉದ್ದೇಶಗಳನ್ನು ವಾಸ್ತವವಾಗಿ ಸಾಧಿಸಲಾಗುತ್ತಿದೆ ಎಂದು ನಾವು ಹೇಗೆ ಖಚಿತಪಡಿಸಿಕೊಳ್ಳುತ್ತೇವೆ?

ಪ್ರಾಥಮಿಕ ಶಿಕ್ಷಣದ ಶಿಕ್ಷಕರಾಗಿ ನಿಮಗಿರುವ ನಿಬಂಧನೆಗಳು ಮತ್ತು ಅದರಲ್ಲಿ ನೇರವಾದ ಪ್ರಸ್ತುತತೆಯನ್ನು ಈ ಕೆಳಗೆ ವಿವರಿಸಲಾಗಿದೆ.

**ಶಿಕ್ಷಕರ ತರಬೇತಿ:**

ಸೇವಾಪೂರ್ವ ಶಿಕ್ಷಕರ ತರಭೇತಿ

ವಿವಿಧ ಹಂತಗಳಲ್ಲಿ

ವಿವಿಧ ರೂಪದ ಸಂಸ್ಥೆಗಳು

ಸೇವಾವದಿ ಶಿಕ್ಷಕರ ತರಬೇತಿ

ಶಾಲಾ ಶಿಕ್ಷಕರ ಸಾಮೂಹಿಕ ತರಬೇತಿ ಕಾರ್ಯಕ್ರಮ

ಪ್ರಾಥಮಿಕ ಶಾಲಾ ಶಿಕ್ಷಕರ ವಿಶೇಷ ತರಬೇತಿ ಕಾರ್ಯಕ್ರಮ

## 8.3.2 ಶಿಕ್ಷಕರ ಸೇವಾ ಪೂರ್ವ ತರಬೇತಿ

ರಾಜ್ಯ ಶಿಕ್ಷಣ ಸಂಸ್ಥೆಗಳು ಮತ್ತು ಪರೀಕ್ಷ ಅಂಗಗಳು ನಿಗದಿಪಡಿಸಿರುವಂತೆ ಶಿಕ್ಷಕರ ವೃತ್ತಿಪರ ಸಾಮರ್ಥ್ಯವು ಎಲ್ಲಾ ವಿಭಾಗಗಳಲ್ಲೂ ಸಮನಾಗಿರಬೇಕೆಂದು ಪ್ರತಿಯೊಂದು ಸಂಸ್ಥೆಗಳು ನಿರೀಕ್ಷಿಸುತ್ತವೆ.

ಸಂಸ್ಥೆಗಳಿಗೆ ಅನುಮತಿ ಮತ್ತು ಸಂಯೋಜನೆಯನ್ನು ನೀಡಬೇಕಾದರೆ ವೃತ್ತಿಪರ ಮತ್ತು ಶೈಕ್ಷಣಿಕ ಅರ್ಹತೆಗಳನ್ನು ಗಣನೆಗೆ ತೆಗೆದುಕೊಳ್ಳಲಾಗುತ್ತದೆ. ಆದರಿಂದ ಸರ್ಕಾರಗಳು ನಿಗದಿ ಪಡಿಸಿರುವ ಮಾನದಂಡಗಳನ್ನು ವಿವಿಧ ರೀತಿಯ ಸಂಸ್ಥೆಗಳು ಅಂದರೆ ಸಾರ್ವಜನಿಕವಾಗಿ ಮತ್ತು ಖಾಸಗಿಯಾಗಿ ಸ್ಥಾಪಿಸಿರುವ ಸಂಸ್ಥೆಗಳು ನಿಯಮಗಳಿಗೆ ಒಳಪಟ್ಟಿರಬೇಕಾಗಿರುತ್ತದೆ.

ಶಿಕ್ಷಕರ ಆರಂಭಿಕ ತರಬೇತಿ ಯನ್ನು ಈ ಕೆಳಕಂಡ ಮೂರು ಹಂತಗಳಲ್ಲಿ ಸಂಘಟಿಸಲಾಗುತ್ತದೆ.

1) ಪೂರ್ವ ಪ್ರಾಥಮಿಕ ಶಿಕ್ಷಕ ಶಿಕ್ಷಣ'

2) ಪ್ರಾಥಮಿಕ ಶಿಕ್ಷಕರ ಶಿಕ್ಷಣ

3) ಪ್ರೌಢ ಶಿಕ್ಷಕರ ಶಿಕ್ಷಣ

ಪೂರ್ವ ಪ್ರಾಥಮಿಕ ಶಿಕ್ಷಕರನ್ನು ತರಬೇತಿಗೊಳಿಸಲು ಪ್ರಮುಖವಾಗಿ 10 ನೇ ತರಗತಿಯವರೆಗೆ ಭೋದಿಸುವವರಿಗೆ ಪೂರ್ವ ಪ್ರಾಥಮಿಕ ಶಿಕ್ಷಕರ ಶಿಕ್ಷಣದ ಕಾರ್ಯಕ್ರಮದ ಪ್ರವೇಶಕ್ಕೆ ಸಾಮಾನ್ಯ ಅರ್ಹತೆಯೆಂದರೇ 10 – 12 ವರ್ಷಗಳ ಶಾಲಾ ಶಿಕ್ಷಣ. ಇತ್ತೀಚೆಗೆ ಹೆಚ್ಚಿನ ರಾಜ್ಯಗಳು 12 ವರ್ಷಗಳ ಶಾಲಾ ಶಿಕ್ಷಣವನ್ನು ಶಿಫಾರಸ್ಸು ಮಾಡಿವೆ. ಬಹುಪಾಲು ರಾಜ್ಯಗಳಲ್ಲಿ ಕಾರ್ಯಕ್ರಮದ ಅವಧಿ ಎರಡು ವರ್ಷಗಳು. ಉಳಿದ ರಾಜ್ಯಗಳಲ್ಲಿ ಒಂದು ವರ್ಷದ ಪೂರ್ವ ಪ್ರಾಥಮಿಕ ಶಿಕ್ಷಕರ ತರಬೇತಿಯನ್ನು ನೀಡಲಾಗುತ್ತದೆ. ಶಿಕ್ಷಕರ ತರಬೇತಿ ಸಂಸ್ಥೆಗಳಲ್ಲಿ ಮೂರು ವಿಧ. ಸರ್ಕಾರಿ, ಅನುದಾನಿತ, ಖಾಸಗಿ ಅನುದಾನ ರಹಿತ. ಇತ್ತೀಚೆಗೆ ಎಲ್ಲಾ ರಾಜ್ಯಗಳಲ್ಲೂ

'ಡಿಐಇಟಿ' ಗಳನ್ನು ಸ್ಥಾಪಿಸಲಾಗಿದೆ. ಇವಗಳ ಮುಖ್ಯ ಲಕ್ಷಣಗಳೆಂದರೇ, ಸೇವಾ ಪೂರ್ವ ತರಬೇತಿ ಸೇವಾವಧಿ ತರಬೇತಿಯನ್ನು ನೀಡುವುದಾಗಿದೆ.

### 8.3.3 ಶಿಕ್ಷಕರ ಸೇವಾವಧಿ ತರಬೇತಿ:–

1986ರ ರಾಷ್ಟ್ರೀಯ ಶಿಕ್ಷಣ ನೀತಿಯಂತೆ ಭಾರತ ಸರ್ಕಾರವು ಪ್ರಾಥಮಿಕ ಶಾಲೆಗಳಿಗೆ ಶಿಕ್ಷಕರ ಸೇವೆಯನ್ನು ತಲುಪಿಸಲು ತರಬೇತಿ ಖಾರ್ಯಕ್ರಮಗಳನ್ನು ಯೋಜಿಸಲಾಯಿತು. ಆಯೋಜಿಸಲಾದ ತರಬೇತಿ ಕಾರ್ಯಕ್ರಮಗಳು ಈ ಕೆಳಕಂಡಂತಿವೆ.

**ಶಾಲಾ ಶಿಕ್ಷಕರ ಸಾಮೂಹಿಕ ತರಬೇತಿ ಕಾರ್ಯಕ್ರಮ:** ಈ ಯೋಜನೆಯ ಉದ್ದೇಶಗಳು ಉದಯೋನ್ಮಖ ಕಾಳಜಿಗಳ ಶಿಕ್ಷಕರನ್ನು ಸಂವೇದನೆಗೊಳಿಸುವುದು. ಪ್ರಾಥಮಿಕ ಶಿಕ್ಷಣದ ಸಾರ್ವತ್ರೀಕರಣದ ಆಶಯದಂತೆ ವಿದ್ಯಾರ್ಥಿ ಕೇಂದ್ರೀತ ಕಲಿಕ ವಿಧಾನ, ಕ್ರಿಯಾ ಸಂಶೋಧನೆ, ಉದಯೋನ್ಮಖ ಪಾತ್ರಗಳು, ಜ್ಞಾನದ ಪುಷ್ಟಿಕರಣ ಮುಂತಾದ ಆಂಶಗಳು ರಾಷ್ಟ್ರೀಯ ಶಿಕ್ಷಣ ನೀತಿಯಲ್ಲಿ ಸೇರ್ಪಡೆಯಾದವು. 1986 ರಿಂದ 1990 ರವರೆಗೆ 10ದಿನಗಳ ತರಬೇತಿ ಕಾರ್ಯಕ್ರಮಗಳು 1.8 ಮಿಲಿಯನ್ ಶಿಕ್ಷಕರನ್ನು ಒಳಗೊಂಡಿತು. ಎನ್.ಸಿ.ಇ.ಆರ್.ಟಿ ಮತ್ತು ಎಸ್.ಸಿ.ಇ.ಆರ್.ಟಿ ಯ ಜಂಟಿ ಸಹಭಾಗಿತ್ವದಲ್ಲಿ ರಾಜ್ಯಗಳು ತರಬೇತಿ ಮುದ್ರಣವನ್ನು ಒಳಗೊಂಡಿರುವ ವಿವಿಧ ಮಾಡ್ಯೂಲ್‌ಗಳಿಗೆ ಸಂಬಂಧಿಸಿದ ಚಲನಚಿತ್ರಗಳ ಪ್ಯಾಕೇಜ್‌ಅನ್ನು ರಾಷ್ಟ್ರೀಯ ಜಾಲಾತಾಣಗಳಲ್ಲಿ ಶಿಕ್ಷಕರ ಪ್ರಯೋಜನಕ್ಕಾಗಿ ಪ್ರಸಾರ ಮಾಡಲಾಯಿತು. ದೇಶದ ವಿವಿಧ ಭಾಗಗಳಲ್ಲಿ ಪ್ರತಿ ವೀಕ್ಷಣಾ ಅಧಿವೇಶನದ ಮುಂಚಿತವಾಗಿ ಮತ್ತು ಚರ್ಚೆಯ ನಂತರ ಸಂವಾದದ ಪಾಲ್ಗೊಳುವಿಕೆಯ ವಿಧಾನವನ್ನು ಅನುಸರಿಸಲಾಯಿತು.

**ಪ್ರಾಥಮಿಕ ಶಾಲಾ ಶಿಕ್ಷಕರ ವಿಶೇಷ ತರಭೇತಿ ಕಾರ್ಯಕ್ರಮ:–** 1993 – 1994 ರಿಂದ ಪ್ರಾಥಮಿಕ ಶಿಕ್ಷಣದ ಗುಣಮಟ್ಟವನ್ನು ಸಾಧಿಸುವ ತಂತ್ರದ ಭಾಗವಾಗಿ ಪ್ರಾಥಮಿಕ

ಶಿಕ್ಷಣದ ಸಾರ್ವತ್ರಿಕರಣವನ್ನು ಮಾಡಲಾಯಿತು. ಈ ಕಾರ್ಯಕ್ರಮದ ಅನುಷ್ಠಾನವನ್ನು ಮಾಡುವುದರ ಮೂಲಕ ಕನಿಷ್ಟ ಕಲಿಕ ಮಟ್ಟವನ್ನು ಗುರುತಿಸಲಾಯಿತು ಪ್ರಾಥಮಿಕ ಶಾಲಾ ಹಂತದಲ್ಲಿ ಒದಗಿಸಲಾದ ಕಪ್ಪು ಹಲಗೆ ಕಾರ್ಯಚರಣೆಯ ವಸ್ತುಗಳ ಬಳಕೆಯಲ್ಲಿ ತರಬೇತಿ, ಮಾದ್ಯಮಗಳ ಸಹಕಾರ, ವಿದ್ಯಾರ್ಥಿ ಕೇಂದ್ರೀತ ಮಾರ್ಗದ ಭೋದನೆಯನ್ನು ಪ್ರೋತ್ಸಾಹಿಸಲಾಯಿತು. ಪ್ರತಿ ವರ್ಷ ಈ ಯೋಜನೆಗೆ 0.4 ಮಿಲಿಯನ್ ಶಿಕ್ಷಕರನ್ನು ಬಳಸಿಕೊಳ್ಳುವ ಗುರಿಯನ್ನು ಹೊಂದಲಾಯಿತು.

### 8.3.4 ವಿಶೇಷ ಅಗತ್ಯಗಳಿಗಾಗಿ ಶಿಕ್ಷಕರ ತರಭೇತಿ:

ವಿಶೇಷ ಅಗತ್ಯತೆಗಳನ್ನು ಹೊಂದಿರುವ ಮಕ್ಕಳನ್ನು ನೋಡಿಕೊಳ್ಳಲು ಎನ್,ಸಿ,ಇ,ಆರ್,ಟಿ ಒಂದು ವಿಶೇಷ ಅವಕಾಶವನ್ನು ಕಲ್ಪಿಸಲಾಯಿತು. ಎಲ್ಲಾ ಮುಖ್ಯ ತರಬೇತಿ ಕಾರ್ಯಕ್ರಮಗಳಲ್ಲಿ ವಿಶೇಷ ಅಗತ್ಯತೆ ಎಂಬ ಅಂಶವನ್ನು ಸೇರಿಸಿ ಎಲ್ಲಾ ಶಿಕ್ಷಕರು ಮತ್ತು ಶಿಕ್ಷಣಾಧಿಕರಿಗಳಿಗೆ ಉತ್ತೇಜನ ನೀಡಲಾಯಿತು. ಸಾಮಾನ್ಯ ಶಿಕ್ಷಕರನ್ನು ತರಬೇತಿಗೊಳಿಸುವ ಜೊತೆಯಲ್ಲಿ ವಿಶೇಷ ಶಾಲೆಗಳ ಶಿಕ್ಷಕರನ್ನು ಗಮನದಲ್ಲಿಟ್ಟುಕೊಂಡು ವಿಶೇಷ ಅಗತ್ಯತೆಗಳನ್ನು ಪೂರೈಸುವ ಮೂಲಕ ತರಗತಿಯ ಮಕ್ಕಳ ಅಗತ್ಯತೆಯ ಕಡೆ ಗಮನ ನೀಡುವುದಾಗಿದೆ. ಎನ್,ಸಿ,ಇ,ಅರ್,ಟಿಯ ಮೂಲಕ 4 ಆರ.ಐ.ಇ ಗಳನ್ನು ಒಳಸಿಕೊಂಡು ಶಿಕ್ಷಕರಿಗೆ ತರಬೇತಿಯನ್ನು ನೀಡಿ ಅಂತಹ ಶಿಕ್ಷಕರಿಗೆ ವಿಶೇಷ ಶಾಲೆಗಳಿಗೆ ಸೇರುವ ಅವಕಾಶ ನೀಡಲಾಯಿತು. ಆದರೂ ಏಕ ವಿಕಲಾಂಗ ಶಾಲೆಗಳು ಅಥವಾ ಬಹುಮುಖ ವಿಕಲಾಂಗ ಶಾಲೆಗಳಾದ spastics, cerebral palsy ಮುಂತಾದ ಅನೇಕ ವಿಕಲಾಂಗ ಶಾಲೆಗಳ ಅಡಿಯಲ್ಲಿ ತರಬೇತಿ ನೀಡಲಾಗುತ್ತಿದೆ. ರಾಷ್ಟ್ರೀಯ ವಿಕಲಾಂಗ ಸಂಸ್ಥೆ ಮತ್ತು ಸರ್ಕಾರೇತರ ಸಂಸ್ಥೆಗಳ ಮೂಲಕ ರಾಷ್ಟ್ರೀಯ ಪುನರ್ವಸತಿ ಪರಿಷತ್ತಿನ ಮೂಲಕ ಎಲ್ಲಾ ಕೋರ್ಸ್‌ಗಳಿಗೆ ಮಾನ್ಯತೆಯನ್ನು ನಿಡಲಾಗುತ್ತಿದೆ. ಭಾರತದಲ್ಲಿ ಹಲವು ವಿಶ್ವವಿದ್ಯಾಲಯಗಳು ಈಗಾಗಲೇ ವಿಶೇಷ ಶಿಕ್ಷಣದಲ್ಲಿ ಬಿ.ಇಡಿ, ಮತ್ತು ಎಂ.ಇಡಿ ಪದವಿಗಳನ್ನು ನೀಡುತ್ತಿವೆ.

### 8.3.5 ಪ್ರಾಥಮಿಕ ಹಂತದಲ್ಲಿ ಶಿಕ್ಷಕರ ಶಿಕ್ಷಣದ ಪಠ್ಯ ಕ್ರಮ

ಪ್ರಾಥಮಿಕ ಶಿಕ್ಷಕರಿಗೆ ವಿಶೇಷವಾಗಿ ಮೊದಲ ಮೂರು ಶ್ರೇಣಿಗಳಲ್ಲಿ ಬೋಧನೆಯನ್ನು ನೀರಿಕ್ಷಿಸಲಾಗುತ್ತದೆ. ಪ್ರಮುಖವಾಗಿ ಸಾಕ್ಷರತೆ, ಸಂಖ್ಯಾಶಾಸ್ತ್ರ, ಜೀವನ ಕೌಶಲ್ಯಗಳು ಇವುಗಳಲ್ಲದೆ. ಶಿಕ್ಷಕರು ಮಗುವಿನ ಬೆಳವಣಿಗೆ ವಿಕಾಸ ಮತ್ತು ಕಲಿಕ ಪ್ರಕ್ರಿಯ ಬಗ್ಗೆ ಜ್ಞಾನವನ್ನು ಹೊಂದಿರಬೇಕಾಗುತ್ತದೆ.

ಪ್ರಾಥಮಿಕ ಶಿಕ್ಷಕರ ಶಿಕ್ಷಣದ ಪಠ್ಯಕ್ರಮದ ಶಿಕ್ಷಣದ ಪಠ್ಯಕ್ರಮವು ರಾಜ್ಯ ಸರ್ಕಾರಗಳಿಂದ ಶಿಕ್ಷಕರ ಶಿಕ್ಷಣ ಸಂಸ್ಥೆಗಳಿಂದ ರಚಿತವಾಗಿ ಸಮಯಕ್ಕೆ ಸರಿಯಾಗಿ ಪರಿಷ್ಕರಣೆಗೆ ಒಳಗಾಗಬೇಕಾಗಿದೆ. ಪ್ರಾಥಮಿಕ ಶಿಕ್ಷಣದ ಮಾದರಿ ಪಠ್ಯಕ್ರಮವನ್ನು ಎನ್.ಸಿ.ಇ.ಆರ್.ಟಿ ಅಭಿವೃದ್ದಿ ಪಡಿಸಿದೆ. ಈ ಸಂಸ್ಥೆ ಕಾಲಕಾಲಕ್ಕೆ ಪಠ್ಯಕ್ರಮವನ್ನು ಪರಿಷ್ಕರಿಸುತ್ತದೆ. ಎನ್.ಸಿ.ಇ.ಆರ್.ಟಿ ಸೂಚಿಸಿರುವ ಪಠ್ಯ ಕ್ರಮ ಚೌಕಟ್ಟನ್ನು ಮುಂದಿನ ಉಪ ಘಟಕದಲ್ಲಿ ಅಭ್ಯಸ ಮಾಡೋಣ.

### 8.3.6 ತರಬೇತಿಗಾಗಿ ಸಾಂಸ್ಥಿಕ ಮೂಲ ಸೌಕರ್ಯ

ಶಿಕ್ಷಕರಿಗೆ ತರಬೇತಿ ಸೇವೆ ಒದಗಿಸುವ ಮೂಲ ಸೌಕರ್ಯ ಕೇಂದ್ರಗಳು, ಕೇಂದ್ರ, ರಾಜ್ಯ, ಪ್ರಾದೇಶಿಕ ಜಿಲ್ಲೆ, ಮತ್ತು ಉಪಜಿಲ್ಲಾ ಮಟ್ಟದಲ್ಲಿ ನೀವು ಕೋರ್ಸ್‌ನ 4 ನೇ ಘಟಕದಲ್ಲಿ ಅದರ ಬಗ್ಗೆ ಕಲಿತಿದ್ದೀರಿ.

ರಾಷ್ಟ್ರೀಯ ಮಟ್ಟದಲ್ಲಿ  ಎನ್.ಸಿ.ಇಆರ್.ಟಿ, ಎನ್.ಯು.ಇ.ಪಿ.ಎ, ಇಂಗ್ಲೀಷ್ ಮತ್ತು ವಿದೇಶಿ ಭಾಷೆಗಳ ಕೇಂದ್ರ ಸಂಸ್ಥೆ ಹೈದರಬಾದ್, ಭಾರತೀಯ ಭಾಷೆಗಳ ಸಂಸ್ಥೆ ಮೈಸೂರು, ಪ್ರಾದೇಶಿಕ ಮಟ್ಟದಲ್ಲಿ ದೇಶದ 4 ಪ್ರದೇಶಗಳಲ್ಲಿ ಶಿಕ್ಷಣ ಸಂಸ್ಥೆಗಳಿವೆ. ಪಶ್ಚಿಮ, ಪೂರ್ವ ಮತ್ತು ದಕ್ಷಿಣ ಹಾಗೂ ಒಂದು ಪ್ರಾದೇಶಿಕ ಸಂಸ್ಥೆಯನ್ನು ಇತ್ತಿಚಿಗೆ ಭಾರತದ ಈಶಾನ್ಯ ಭಾಗದ ರಾಜ್ಯವಾದ ಶಿಲ್ಲಾಂಗ್‌ನಲ್ಲಿ ಸ್ಥಾಪಿಸಲಾಗಿದೆ. ರಾಜ್ಯ ಮಟ್ಟದಲ್ಲಿ ಎನ್.ಸಿ.ಇ.ಆರ್,ಟಿ, ರಾಜ್ಯ ಶಿಕ್ಷಣ ಸಂಸ್ಥೆ ಎ.ಎ.ಎಸ್.ಇ, ಸಿ.ಟಿ.ಇ ಎಸ್.ಐ.ಇ ಗಳು ಇವೆ. ಜಿಲ್ಲಾ ಮಟ್ಟದಲ್ಲಿ ಡಿ.ಐ.ಇ.ಟಿ ಸೇವಾ ತರಬೇತಿಯನ್ನು

ನೀಡುತ್ತಿದೆ. ಉಪ ಜಿಲ್ಲಾ ಮಟ್ಟ ಬ್ಲಾಕ್, ಕ್ಲಸ್ಟರ್, ಮಟ್ಟ, ಮುಂತಾದ ಕೇಂದ್ರಗಳು ಡಿಪಿ.ಇಪಿ ಯ ಅಡಿಯಲ್ಲಿ ಬರುತ್ತವೆ.

### 8.3.7 ಶಿಕ್ಷಕರ ನೇಮಕಾತಿ

ವಿವಿಧ ರಾಜ್ಯಗಳು ಬೇರೆ ಬೇರೆ ರೀತಿಯ ನೇಮಕಾತಿ ವಿಧಾನಗಳನ್ನು ಅನುಸರಿಸುತ್ತವೆ. ಕೆಲವು ರಾಜ್ಯಗಳು ಸ್ವರ್ಧಾತ್ಮಕ ಪರಿಕ್ಷೆಗಳ ಅಂಕಗಳ ಆಧಾರದ ಮೇಲೆ ನೇಮಕಾತಿ ಮಾಡಲಾಗುತ್ತಿದೆ. ಕೆಲವು ರಾಜ್ಯಗಳಲ್ಲಿ ಅಭ್ಯರ್ಥಿಯ ಶೈಕ್ಷಣಿಕ ಮತ್ತು ವೃತ್ತಿಪರ ಹಿನ್ನೆಲೆಯ ಮೇಲೆ, ನೇಮಕಾತಿಯನ್ನು ಮಾಡಲಾಗುತ್ತಿದೆ. ಕೆಲವು ರಾಜ್ಯಗಳಲ್ಲಿ ಈ ಮೇಲಿನ 2 ವಿಧಾನಗಳನ್ನು ಆಧಾರಿಸಿ ನೇಮಕಾತಿಯನ್ನು ಮಾಡಿಕೊಡಲಾಗುತ್ತದೆ. ಆಭ್ಯಥಿಗಳ ಸಂದರ್ಶನದ ವೇಳೆ ಅವರ ಮೌಖಿಕ ಪರೀಕ್ಷೆ ಮತ್ತು ಸಾಮಥ್ಯದ ಆಧಾರದ ಮೇಲೆ ಆಯ್ಕೆ ಮಾಡಲಾಗುತ್ತದೆ.

## 8.4: ಶಿಕ್ಷಕರ ಶಿಕ್ಷಣದ ರಾಷ್ಟ್ರೀಯ ಪಠ್ಯಕ್ರಮ ಚೌಕಟ್ಟು 2009–10 ಪ್ರಾಥಮಿಕ ಶಾಲಾ ಶಿಕ್ಷಕರಿಗೆ.

ಶಿಕ್ಷಕರ ಶಿಕ್ಷಣ ಮತ್ತು ಶಾಲಾ ಶಿಕ್ಷಣ ಪರಸ್ಪರ ಸಂಬಂಧವನ್ನು ಹೊಂದಿವೆ. ಒಂದು ಮತ್ತೊಂದರ ಮೇಲೆ ಪರಿಣಾಮ ಬೀರುತ್ತದೆ. ಉತ್ತಮ ಶಿಕ್ಷಕರ ಶಿಕ್ಷಣವು ಗುಣಮಟ್ಟದ ಶಿಕ್ಷಕರನ್ನು ಉತ್ಪಾದಿಸಲು ಕಾರಣವಾಗುತ್ತದೆ. ಇವು ಶಿಕ್ಷಕರಿಗೆ ಉತ್ತಮ ಗುಣಮಟ್ಟದ ಶಿಕ್ಷಣವನ್ನು ನಿಡುತ್ತದೆ. ಅಂತರಾಷ್ಟ್ರೀಯ ಮಟ್ಟದಲ್ಲಿ ಬದಲಾಗುತ್ತಿರುವ ಶಿಕ್ಷಣದ ಮಟ್ಟ ಮತ್ತು ಉದಯೋನ್ಮಖ ಕಾಲಾಜಿಗಳು ಮುಂತಾದ ವಿಷಯಗಳಿಗೆ ಅನುಗುಣವಾಗಿ ಸಂಪೂರ್ಣ ಶಿಕ್ಷಣದ ಗುಣಮಟ್ಟದ ಬೆಳವಣಿಗೆಯನ್ನು ಹೊಂದಲು ಸಾಧ್ಯ .

| ಹಂತ 1<br>ಪ್ರಾಥಮಿಕ ಹಂತದ ಶಿಕ್ಷಕರ ಶಿಕ್ಷಣ<br>( ತರಗತಿ 1–5) | ಹಂತ 2<br>ಪೂರ್ವಪ್ರಾಥಮಿಕ ಹಂತದ ಶಿಕ್ಷಕರ ಶಿಕ್ಷಣ( ತರಗತಿ 1–8) |
|---|---|

ಈ ಚೌಕಟ್ಟು ವಿಭಿನ್ನ ಹಂತಗಳನ್ನು ಈ ರೀತಿ ವರ್ಣಿಸುತ್ತದೆ

## ಹಂತ 1: ಪ್ರಾಥಮಿಕ ಹಂತದ ಶಿಕ್ಷಕರ ಶಿಕ್ಷಣ (1–5)

### 8.4.1 ತಾರ್ಕಿಕ

ಸಮಾಜದ ಸಂಕೀರ್ಣತೆಗೆ ಅನುಗುಣವಾಗಿ ಹಾಗೂ ಐತಿಹಾಸಿಕ ದೃಷ್ಟಿಕೋನದ ಬೆಳವಣಿಗೆ ಪ್ರಕ್ರಿಯೆಗೆ ಅನುಗುಣವಾಗಿ ಶಿಕ್ಷಕರು ಸಾಕಷ್ಟು ಸಬಲೀಕರಣ ಹೊಂದುವುದರ ಜೊತೆಗೆ ಉತ್ತಮ ತರಬೇತಿಯನ್ನು ಹೊಂದಿದವರಾಗಿರಬೇಕು. ನಿಮ್ಮಗೆಲ್ಲ ಗೊತ್ತಿರುವಂತೆ ಶಿಕ್ಷಕರ ಮೊದಲಿನ ಸ್ಥಾನ ಮಾನ ಇತ್ತೀಚಿನ ದಿನಗಳಲ್ಲಿ ಬದಲಾಗುತ್ತಿದ್ದು ಸ್ಥಳೀಯ ಪರಿಸರದ ಬದಲಾನಣೆಗೆ ತಕ್ಕಂತೆ ಶಿಕ್ಷಕ ಈಗ ಅನುಕೂಲ ಕಲ್ಪಿಸುವವನಾಗಿದಾನೆ.

### 8.4.2 ಪಠ್ಯ ವಿಷಯ:

ಎನ್.ಸಿ.ಎಫ್.ಟಿ.ಇ ತಿಳಿಸಲಾದ ಉದಯೋನ್ಮುಖ ಭಾರತೀಯ ಸಮಾಜದ ಅಗತ್ಯತೆಗಳಿಗೆ ಅನುಗುಣವಾಗಿ ಎನ್,ಸಿ,ಎಫ್ 2005 ಚೌಕಟ್ಟನ್ನು ರೂಪಿಸಿದೆ. ಮಕ್ಕಳ ಹಕ್ಕುಗಳು, ಮಾನವ ಹಕ್ಕುಗಳ ಶಿಕ್ಷಣ ಮೌಲ್ಯಗಳ ಮತ್ತು ಅದರ ವೈಶಿಷ್ಯಗಳು, ಶಿಕ್ಷಣದ ಸಾಮಾಜಿಕ ಅರ್ಥಿಕ ಅಭಿವೃದ್ದಿಯು ದೇಶದಲ್ಲಿ ಗಮನಾರ್ಹವಾಗಿದೆ. ವಿಜ್ಞಾನ ಸೇರಿದಂತೆ ವಿವಿಧ ಕ್ಷೇತ್ರಗಳಲ್ಲಿನ ಅಭಿವೃದ್ದಿ ಪ್ರಕ್ರಿಯೆಗಳ ಹೆಗ್ಗುರುತುಗಳ ಜ್ಞಾನವನ್ನು ಶಿಕ್ಷಕ ಹೊಂದಿರಬೇಕಾಗುತ್ತದೆ.

ಕಲಿಯುವವನ್ನು ಅರ್ಥ ಮಾಡಿಕೊಳ್ಳುವುದು, ವಿಶೇಷ ಅಗತ್ಯತೆಗಳ ಮಕ್ಕಳ ಅವಶ್ಯಕತೆಗಳು, ಆರೋಗ್ಯ ಮತ್ತು ದೈಹಿಕ ಶಿಕ್ಷಣ ಕಲಿಕೆ ಮತ್ತು ಬೋಧನೆಯ ಮನೋವಿಜ್ಞಾನ ಮುಂತಾದ ವಿಷಯಗಳನ್ನು ಪಠ್ಯ ಒಳಗೊಂಡಿರುತ್ತದೆ.

ಶಿಕ್ಷಕ ಉತ್ತಮವಾಗಿ ಕಾರ್ಯ ನಿರ್ವಹಿಸಲು ಶಾಲಾ ಸಂಘಟನೆ ಮತ್ತು ಪ್ರಾಥಮಿಕ ಶಾಲಾ ವಿಷಯಗಳ ಬೋಧನ ವಿಶ್ಲೇಷನೆ ಅಗತ್ಯವಾಗಿ ಸದೃಡ ತಳಹದಿಯನ್ನು ನೀಡುತ್ತದೆ.

### 8.4.3: ತರಬೇತಿ

ತರಬೇತಿ ಕಾರ್ಯಕ್ರಮಗಳಲ್ಲಿ ಸಿದ್ಧಾಂತ ಮತ್ತು ಅಭ್ಯಾಸದ ಸಂಯೋಜನೆಯನ್ನು ಮಾಡಲಾಗುತ್ತದೆ. ಇವುಗಳ ನಡುವೆ ಅರ್ಥಪೂರ್ಣ ಮತ್ತು ಸಂವಾದಾತ್ಮಕ ಬಂಧವನ್ನು ಏರ್ಪಡಿಸಬೇಕಾಗುತ್ತದೆ. ಶಿಕ್ಷಕ ತನ್ನ ವೃತ್ತಿಯಲ್ಲಿ ಸಾಕಷ್ಟು ಸಮಸ್ಯೆಗಳನ್ನು ನಿಭಾಯಿಸಬೇಕಾಗುತ್ತದೆ. ತರಬೇತಿಯಲ್ಲಿ ಕ್ರಿಯಾ ಸಂಶೋದನೆಯ ಮೂಲಕ ಸಮಸ್ಯೆಗಳಿಗೆ ಪರಿಹಾರ ಕಂಡುಕೊಳಲು ಸಾಧ್ಯ.

### 8.4.4 ಪಠ್ಯ ಕ್ರಮದ ಕಾರ್ಯಚರಣೆ

ಪಠ್ಯ ಕ್ರಮ ಕಾರ್ಯಚರಣೆಯ ಮೂರು ಘಟಕಾಂಶಗಳೆಂದರೇ ಸಿದ್ಧಾಂತ, ಶಿಕ್ಷಣ ಶಾಸ್ತ್ರ ಮತ್ತು ಪ್ರಾಯೋಗಿಕತೆಗಳನ್ನು ಸರಿಯಾಗಿ ಏಕೀಕರಿಸುವ ಅಗತ್ಯವಿದೆ ತರಬೇತಿ ಕಾರ್ಯಕ್ರಮದ ಪ್ರಮುಖ ಗುರಿಯು ವೃತ್ತಿಗೆ ಬದ್ದನಾಗಿರುವ ಪ್ರತಿಫಲಿತ ಮತ್ತು ಪರಿಣಾಮಕಾರಿ ಶಿಕ್ಷಕರನ್ನು ತಯಾರು ಮಾಡುವುದಾಗಿದೆ ಮೇಲಿನ ಮೂರು ಘಟಕಾಂಶಗಳನ್ನು ಈ ಕೆಳಕಂಡಂತೆ ನಿರೂಪಿಸಲಾಗಿದೆ.

**ಸಿದ್ಧಾಂತ:** ಸಂವಾದಾತ್ಮಕ ಪಾಲ್ಗೊಳ್ಳುವಿಕೆ ಮತ್ತು ಚಟುವಟಿಕೆ ಆಧಾರಿತ ವಿಧಾನವನ್ನು ಬಳಿಸಿ ಉಪನ್ಯಾಸ ಚರ್ಚೆ ವಿಚಾರ ಸಂಕೀರಣ ಮಾಧ್ಯಮ ಆಧಾರಿತ ಬೋಧನೆ, ಸ್ವಯಂ ಅಧ್ಯಯನ ಮತ್ತು ಪ್ರಾಯೋಗಿಕ ಚಟುವಟಿಕೆಗಳಿಗೆ ಒತ್ತು ನೀಡುವುದಾಗಿದೆ.

**ಶಿಕ್ಷಣ ಶಾಸ್ತ್ರ:** ನೀವು ಹೇಗೆ ಕಲಿಸುತ್ತೀರ ಎಂಬುದನ್ನು ತಿಳಿಸುವುದೇ ಶಿಕ್ಷಣ ಶಾಸ್ತ್ರ. ಶಿಕ್ಷಣ ಶಾಸ್ತ್ರವು ಒಂದು ಪರಿಣಾಮಕಾರಿ ವಿಜ್ಞಾನವಾಗಿದೆ. ವಿಷಯ ಮತ್ತು ಸಮಗ್ರ ಬೋಧನಾವಿಧಾನವನ್ನು ಸಂಯೋಜಿಸಿ ಭೋದಿಸುವುದಾಗಿದೆ. ಶಿಕ್ಷಣ ಶಾಸ್ತ್ರದ ಅವಶ್ಯಕ ಘಟಕಾಂಶವೆಂದರೆ ಶಾಲಾ ವಿಷಯಗಳ ಬೋಧನಾ ವಿಶ್ಲೇಷನೆ ಮಾಡುವುದಾಗಿದೆ. ಶಿಕ್ಷಣ ಶಾಸ್ತ್ರದ ವಿಶ್ಲೇಷಣೆಯು ವಿದ್ಯಾರ್ಥಿಗಳಿಗೆ ಉದ್ದೇಶಗಳು, ತರಗತಿಯ ನಿರ್ವಹಣೆ ಮೌಲ್ಯಮಾಪನ ತಂತ್ರಗಳನ್ನು ತಿಳಿಯಲು ಸಹಾಯಕ.

ತರಗತಿಯ ಬೋಧನೆಗ ಸಂಬಂಧಿಸಿದಂತೆ ಶಿಕ್ಷಕನ  ಶಾಸ್ತ್ರದ ವಿಶ್ಲೇಷಣೆ ಉತ್ತಮ ಶಿಕ್ಷಣಕ್ಕೆ ಅಡಿಪಾಯವಾಗುತ್ತದೆ.

**ಪ್ರಾಯೋಗಿಕ:** ಸಿದ್ಧಾಂತದ ಪರಿಕ್ಪನೆಗಳನ್ನು ಅಂತರಿಕಗೊಳಿಸಲು ಪ್ರಾಯೋಗಿಕ ಕೆಲಸವು ಒಂದು ಅತ್ಯಗತ್ಯ ಅಂಶವಾಗಿದೆ. ಪ್ರಾಯೋಗಿಕ ಚಟುವಟಿಕೆಗಳು ವಿಭಿನ್ನ ಶಾಲಾ ಅನುಭವಗಳು ಕಾರ್ಯ ಶಿಕ್ಷಣ, ಶಾಲೆ ಸಮುದಾಯದ ನಡುವಿನ ಅಂತರ್ ಕ್ರಿಯೆ. ಸಂಶೋಧನಾ ಯೋಜನೆಗಳು ಹೀಗೆ ಶೈಕ್ಷಣಿಕ ಚಟುವಟಿಕೆಗಳನ್ನು ಸಂಘಟಿಸಿ ವಿದ್ಯಾರ್ಥಿಗಳ ವ್ಯಕ್ತಿತ್ವದ ಬೆಳವಣಿಗೆ ಕಡೆ ಗಮನ ಹರಿಸಲು ಸಾಧ್ಯ.

**ಚಟುವಟಿಕೆ 2:**

ಕೆಳಗಿನ ಪ್ರತಿಯೊಂದು ಪಠ್ಯಕ್ರಮದ ಕಾರ್ಯಚರಣೆಗಾಗಿ ಮೂರು ಕಾದಂಬರಿಯ ಕಲ್ಪನೆಗಳನ್ನು ಸೂಚಿಸಿ.

ಸಿದ್ಧಾಂತ. . . . . . . . . . . . . . . . . . . . . . . . . . . . . .

ಶಿಕ್ಷಣ ಶಾಸ್ತ್ರ . . . . . . . . . . . . . . . . . . . . . . . . . . . .

ಪ್ರಾಯೋಗಿಕ . . . . . . . . . . . . . . . . . . . . . . . . . . . .

## 8.4.5 ಪ್ರಶಿಕ್ಷಕರ ಪಾತ್ರ:

ಪಠ್ಯ ಕ್ರಮ ಕಾರ್ಯಚರಣೆಯಲ್ಲಿ ಪ್ರಶಿಕ್ಷಕರು ಪಾತ್ರವು ಹೆಚ್ಚು ಸವಾಲಿನಿಂದ ಕೂಡಿದ್ದು ನಿರಂತರ ಯೋಜನೆ ವಿಶ್ಲೇಷಣೆ ಉಸ್ತುವಾರಿ ಮತ್ತು ಮೌಲ್ಯಮಾಪನವನ್ನು ಕೋರ್ಸ್‌ನ ಉದ್ದಕ್ಕೂ ನಿರ್ವಹಿಸಬೇಕಾಗುತ್ತದೆ. ಈ ಎಲ್ಲಾ ಅಂಶಗಳಲು ಶಿಕ್ಷಕರು ತಮ್ಮ ನ್ನು ಈ ಮೊದಲಿಗಿಂತಲೂ ಹೆಚ್ಚಿದಾಗಿ ಹುರುಪಿನಿಂದ ತೊಡಗಿಸಿಕೊಳ್ಳಲು ಸಹಾಯಕ.

### 8.4.6 ಮೌಲ್ಯ ಮಾಪನ:

ಅಪೇಕ್ಷಿತ ಗುರಿ ಮತ್ತು ಉದ್ದೇಶಗಳ ಸಾಧನೆಯನ್ನು ನಿರ್ಧರಿಸುವಲ್ಲಿ ಮೌಲ್ಯ ಮಾಪನ ಸಹಾಯ ಮಾಡುತ್ತದೆ. ಉದ್ದೇಶಗಳನ್ನು ಸಾಧಿಸುವಲ್ಲಿ ಸಹಕಾರಿಯಾಗುವ ಅಂಶಗಳನ್ನು ಗುರುತಿಸಲು ಮೌಲ್ಯ ಮಾಪನ ಸಹಾಯಕವಾಗುತ್ತದೆ. ಪ್ರಾಯೋಗಿಕತೆ ಅಭ್ಯಾಸ ಸಿದ್ಧಾಂತಗಳಿಗೆ ಸಂಬಂಧಿಸಿದಂತೆ ಅರ್ಥಪೂರ್ಣ ಪಲಿತಾಂಶವನ್ನು ತರುವುದು ತರಬೇತಿ ಮತ್ತು ಮೌಲ್ಯ ಮಾಪನದ ಉದ್ದೇಶವಾಗಿದೆ. ಸಹಜವಾಗಿ ಸಿ.ಸಿ.ಇ ಯ ಪ್ರತಿಯೊಂದು ಹಂತದಲ್ಲೂ ಇದು ನಡೆಯುತ್ತದೆ. ಪ್ರತಿಯೊಂದು ಆಂಶಗಳ ಮೌಲ್ಯಮಾಪನವನ್ನು ಎಚ್ಚರಿಕೆಯಿಂದ ಆಯೋಜಿಸಬೇಕಾಗುತ್ತದೆ. ಅಂತರಿಕ ನಿರಂತರ ಮತ್ತು ಸಮಗ್ರ ಮೌಲ್ಯ ಮಾಪನವನ್ನು ಪರಿಚಯಿಸುವ ಅವಶ್ಯಕತೆ ಇದೆ. ಬಾಹ್ಯ ಪರೀಕ್ಷೆಗಳನ್ನು ಬದಲಿಸುವ ವ್ಯವಸ್ಥೆ ಈಗಾಗಲೇ ಬಂದಿದೆ.

### 8.4.7: ಮೌಲ್ಯ ಮಾಪನದ ಸಾಧನಗಳು:

ಪ್ರತಿಯೊಂದು ಉದ್ದೇಶಗಳ ದೃಷ್ಟಿಕೋನಕ್ಕೆ ಅನುಗುಣವಾಗಿ ಸೂಕ್ತ ಅಳತೆಯ ಸಾಧನಗಳನ್ನು ಆಯ್ಕೆ ಮಾಡಿ ವಿನ್ಯಾಸಗೊಳಿಸಬೇಕು ಅವುಗಳೆಂದರೇ, ಉದ್ದೇಶಿತ ಆದಾರಿತ ಪ್ರಶ್ನೆಗಳು, ಪ್ರಬಂಧ ಮಾದರಿ ಪ್ರಶ್ನೆಗಳು, ವಸ್ತು ನಿಷ್ಟ ಮಾದರಿ ಪ್ರಶ್ನೆಗಳು, ಪೇಪರ್ ಪೆನ್ಸಿಲ್ ಪರೀಕ್ಷೆಗಳು ಮತ್ತು ಮೌಖಿಕ ಪರೀಕ್ಷೆಗಳಾಗಿವೆ, ಬೋಧನಾ ತರಬೇತಿಯ ಸಾಧನೆಯನ್ನು ತಾಳೆಪಟ್ಟಿ, ದರ್ಜಾ ಮಾಪನ, ವೀಕ್ಷಣಾ ತಂತ್ರದ ಮೂಲಕ ಅಳೆಯಲಾಗುತ್ತದೆ ಮೌಲ್ಯ ಮಾಪನ ಎನ್ನುವುದು ಅಂತರಿಕ, ಬಾಹ್ಯ ಅಥವಾ ನ್ಯಾಯಿಕ ಆಂಶಗಳ ಸಂಯೋಜನೆಯಾಗಿದೆ. ವಿದ್ಯಾರ್ಥಿಗಳನ್ನು ಅನಾರೋಗ್ಯಕರ ಸ್ಪರ್ದೆಗಳಿಂದ ಹೊರ ತಂದು ಅವರ ಅಂಕಗಳ ಆಧಾರದ ಮೇಲೆ ವರ್ಗಿಕರಿಸದೇ ಶ್ರೇಣಿಗಳನ್ನು ನೀಡುವುದರ ಮೂಲಕ ಒಂದು ಸದೃಡ ಹೆಜ್ಜೆ ಇಡಲು ಸಾಧ್ಯ. ಇದು ಒತ್ತಡ ಮುಕ್ತ ಕಲಿಕೆಗೆ ಕಾರಣವಾಗುವ ಒತ್ತಡ ರಹಿತ ಕಲಿಕಾ ಪರಿಸರವನ್ನು ರೂಪಿಸುತ್ತದೆ.

**ಚಟುವಟಿಕೆ 3:** ನೀವು ಈಗಾಗಲೇ ಮೇಲಿನ ವಿಷಯಗಳನ್ನು ಓದಿದ್ದೀರಿ ಮೂರು ಪ್ರಶ್ನೆಗಳನ್ನು ರಚಿಸಿ ಪ್ರತಿಯೊಂದಕ್ಕೂ ನೀವು ಏನು ಓದಿದ್ದೇನೆ? ಏಕೆ? ಹೇಗೆ? ಎಂದು ಕನಿಷ್ಟ 200 ಪದಗಳಲ್ಲಿ ಉತ್ತರಿಸಿ.

ಏನು 1.

2

3

ಏಕೆ. 1.

2.

3.

ಹೇಗೆ 1.

2.

3.

**ಹಂತ 2 : ಪೂರ್ವ ಪ್ರಾಥಮಿಕ ಶಿಕ್ಷಣ ಹಂತದ ಶಿಕ್ಷಕರ ಶಿಕ್ಷಣ (ತರಗತಿ 1–8)**

**8.4.8. ತಾರ್ಕಿಕ:**

14 ವರ್ಷದೊಳಗಿನ ಮಕ್ಕಳಿಗೆ ಉಚಿತ ಮತ್ತು ಕಡ್ಡಾಯ ಶಿಕ್ಷಣವನ್ನು ನೀಡುವ ಸಂವಿಧಾನ ಬದ್ದತೆಯ ಮೂಲಕ ಹೊರ ಬಂದ ಕಾಯ್ದೆಯೆ ಶಿಕ್ಷಣ ಹಕ್ಕು ಕಾಯ್ದೆ. ಅಮೂರ್ತ ಕಾರ್ಯಗಳ ಹಂತದಿಂದ ಮೂರ್ತ ಕಾರ್ಯಗಳ ಹಂತದ ಪ್ರಕ್ರಿಯವರೆಗೆ ಕಲಿಕೆ ಮತ್ತು ಬೋದಾನ ತಂತ್ರಗಳಲ್ಲಿ ಪರಿವರ್ತನೆ ನಡೆಯಬೇಕಿದೆ.

**8.4.9: ಪಠ್ಯ ವಿಷಯ:**

ಭಾರತೀಯ ಸಮಾಜದಲ್ಲಿನ ಉದಯೋನ್ಮಖ ಶಿಕ್ಷಣವೂ ಸಮಾಜದ ಬೇಡಿಕೆಗಳನ್ನು ಭಾವಿ ಶಿಕ್ಷಕರ ಮೂಲಕ ಈಡೇರಿಸುವಂತೆ ಇರಬೇಕು. ಈ ಹಂತದಲ್ಲಿ ಭಾರತದಲ್ಲಿನ ಪೂರ್ವ ಪ್ರಾಥಮಿಕ ಶಿಕ್ಷಣದ ಸ್ಥಾನ ಮಾನ, ಸಮಸ್ಯೆರಗಳು ಸವಾಲುಗಲು ಈ ಎಲ್ಲಾ ನಿರೀಕ್ಷೆಗಳನ್ನು ನಿಜವಾಗಿಯೂ ತಲುಪಲು ಸಾದ್ಯವಿಲ್ಲ.

ಕಲಿಕೆ ಮತ್ತು ಬೋದನೆಯ ಮನೋವಿಜ್ಞಾನವು ಬೋದನ ತಂತ್ರಗಳನ್ನು ವಿದ್ಯಾರ್ಥಿಗಳಿಗೆ ಹೇಗೆ ರೂಪಿಸಬೇಕು ಎಂಬುದನ್ನು ತಿಳಿಸುತ್ತದೆ. ಸದೃಡತೆಯನ್ನು ಹೇಗೆ ಬೆಳಸಬೇಕು ಎಂಬುದನ್ನು ಯೋಜಿಸಲು ಆರೋಗ್ಯ ಮತ್ತು ದೈಹಿಕ ಶಿಕ್ಷಣ ತಿಲಿಸುತ್ತದೆ, ಇದು ಕೂಡ ವಿಶೇಷ ಅಗತ್ಯಯುಳ್ಳ ಮಕ್ಕಳಗೆ ಬೋಧಸಲು ಸಹಾಯ ಮಾಡುತ್ತದೆ. ಮಾರ್ಗದರ್ಶನ ಮತ್ತು ಸಲಹೆಯು ಯಾವುದೇ ತರಹದ ಸಮಸ್ಯೆಗಳನ್ನು ಎದುರಿಸಲು ಮಕ್ಕಳಿಗೆ ಸಹಾಯ ಮಾಡುತ್ತದೆ,

**8.4.10: ತರಬೇತಿ**

ಭಾವಿ ಶಿಕ್ಷಕರು ಬೋಧನೆಯ ಪೂರ್ವದಲ್ಲಿ, ಬೋಧನೆಯ ಸಮಯದಲ್ಲಿ, ಬೋಧನೆಯ ನಂತರದ ಹಂತದಲ್ಲಿ ಉತ್ತಮ ರೀತಿಯಲ್ಲಿ ನಿರ್ವಹಣೆ ಮಾಡಲು, ಉತ್ತಮ ಶಿಕ್ಷಕರಾಗಿ ತಯರಾಗಲು ಈ ಕೆಳಕಂಡ ಸಾಮಥ್ಯಗಳನ್ನು ಬೆಳಸಿಕೊಳ್ಳಬೇಕಾಗುತ್ತದೆ.

1. ಕ್ರಿಯಾ ಸಂಶೋದನೆಯು ಸಮಸ್ಯಾ ನಿರ್ವಹಣಾ ಸಾಮರ್ಥ್ಯವನ್ನು ಬೆಳೆಸಲು ಸಾಧ್ಯವಾಗುತ್ತದೆ.
2. ಶಿಕ್ಷಣ ಶಾಸ್ತ್ರದ ವಿಶ್ಲೇಷಣೆಯು ಶೈಕ್ಷಣಿಕ ಅಧ್ಯಯನದ ಸಂಕೀರ್ಣತೆಯ ತಿಳುವಳಿಕೆಯನ್ನು ಒದಗಿಸುತ್ತದೆ.
3. ಮಾದರಿ ಫಾಠಗಳು ಮತ್ತು ಸಹಜ ತರಗತಿ ಸನ್ನಿವೇಶದಲ್ಲಿನ ಬೋಧನೆ ಹವ್ಯಾಸಗಳ ವಿಮಾರ್ಶತ್ಮಕ ವೀಕ್ಷಣೆಯು ಪರಿಣಮಕಾರಿ ಮತ್ತು ಸ್ಪರ್ಧಾತ್ಮಕ ಶಿಕ್ಷಕರಾಗಿ ತಯಾರಾಗಲು ಸಹಕಾರಿಯಾಗುತ್ತದೆ.
4. ಬೋಧನೆ ತರಬೇತಿಯ ಶಾಲೆಯಲ್ಲಿ ಹಲವಾರು ವಿಧದ ಅನುಭವಗಳನ್ನು ಶಾಲೆಯಲ್ಲಿ ಒದಗಿಸುತ್ತದೆ,
5. ಶಾಲೆ ಮತ್ತು ಸಮುದಾಯದ ನಡುವಿನ ಅಂತರ್‌ಕ್ರಿಯೆಯು ಎರಡರ ನಡುವಿನ ಸಂಬಂಧವನ್ನು ಬೆಳೆಸುವುದಲ್ಲದೆ ಮಕ್ಕಳಿಗೆ ಸೂಕ್ತ ಬೋದನ ವಿಧಾನದ ಉಗಮಕ್ಕೆ ಕಾರಣವಾಗುತ್ತದೆ.

6. ವಿದ್ಯಾರ್ಥಿಯ ವ್ಯಕ್ತಿತ್ವದ ಅಭಿವೃದ್ಧಿಗೆ ಸಹಾಯಕವಾಗುವಂತಹ ಶೈಕ್ಷಣಿಕ ಚಟುವಟಿಕೆಗಳ ಸಂಘಟನೆಯ ಸಾಮರ್ಥ್ಯ ಯೋಜನೆ ಮತ್ತು ಚಟುವಟಿಕೆಗಳನ್ನು ಕೈಗೊಳ್ಳುವ ಮನೋಭಾವವನ್ನು ಬೆಳೆಸುತ್ತದೆ.

### 8.4.11 ಪಠ್ಯಕ್ರಮ ಕಾರ್ಯಾಚರಣೆ

**ಸಿದ್ಧಾಂತ:** ಕೆಲವು ಉತ್ತಮವಾಗಿ ರೂಪಿಸಲ್ಪಟ್ಟಿರುವ ಮಾರ್ಗಗಳಾದ ಉಪನ್ಯಾಸ ಚರ್ಚೆ, ಸಹಕಾರಿ ಅಧ್ಯಯನ ಪ್ರಾಯೋಗಿಕ ಮತ್ತು ಪ್ರಾತ್ಯಕ್ಷೀಕ ತಂತ್ರಗಳಯ ಸ್ವಯಂ ಅಧ್ಯಯನ ಯೋಜನೆಗಳು ಮುತಾಂದವುಗಳನ್ನು ಅಳವಡಿಸಬೇಕಾಗಿದೆ. ಶಿಕ್ಷಕರ ವಿಭಿನ್ನ ತಂತ್ರಗಳು ಬೋಧನಾ ಸಾಮಗ್ರಿಗಳು, ಮಾಧ್ಯಮದ ಬಳಕೆ ಕಲಿಕಾ ಅನುಭವಗಳು, ಯೋಜನೆ ಕ್ಷೇತ್ರ ಪ್ರವಾಸಗಳ ಆಯೋಜನೆ ಇತ್ಯಾದಿ ಹೆಚ್ಚಿನ ಗಮನವನ್ನು ವಿಶೇಷ ಅಗತ್ಯವುಳ್ಳ ಮಗುವಿಗೆ ನೀಡಬೇಕಾಗಿದೆ. ಪಠ್ಯಕ್ರಮ ಕಾರ್ಯಚರಣೆಯು ವಿದ್ಯಾರ್ಥಿಗಳು ಅಗತ್ಯತೆಗಳು ಸ್ಥಳೀಯ ಸಂಪನ್ಮೂಲಗಳ ಲಭ್ಯತೆ ಮೆಲೆ ಹೊಂದಿಕೆಯಾಗಬೇಕಾಗುತ್ತದೆ.

**ಶಿಕ್ಷಣ ಶಾಸ್ತ್ರ:** ಬೋಧನೆ ಕಲಿಕ ಪ್ರಕ್ರಿಯೆಯ ಸಂದರ್ಭದಲ್ಲಿ ಅಸ್ಥಿತ್ವದಲ್ಲಿರುವ ಕಾರ್ಯ ತಂತ್ರಗಳು ಸ್ವಯಂ ಸಂಶೋಧನಾ ಸಾಮರ್ಥ್ಯವನ್ನು ಬೆಳೆಸುತ್ತವೆ. ಕೆಲವೇ ಸಂದರ್ಭದಲ್ಲಿ ಮಾತ್ರ ಭಾವಿ ಶಿಕ್ಷಕರ ಭಾಗವಹಿಸುವಿಕೆ, ಮತ್ತು ಏಕಮುಖ ಸಂವಹನವನ್ನು ಕಾಣಬಹುದು. ಜೊತೆಯಲ್ಲಿ ಸಹಕಾರಿ ಕಲಿಕೆ ಮತ್ತು ಉಪನ್ಯಾಸ ವಿಧಾನದ ಮೂಲಕ ಕಲಿಸಲಾಗುತ್ತದೆ. ಈ ಮೇಲಿನ ತಂತ್ರಗಳು ಭಾವಿ ಶಿಕ್ಷಕರುಗಳಿಗೆ ತರಬೇತಿಯನ್ನು ಪಡೆಯಲು ತಮ್ಮ ವಿದ್ಯಾರ್ಥಿಗಳಿಗೆ ನೇರ ಪ್ರಾತ್ಯಕ್ಷೀಕೆಗಳನ್ನು ನೀಡಲು ಸಾಧ್ಯವಾಗುತ್ತದೆ.

ಬೋಧನಾ ತರಬೇತಿಯು ಶಿಕ್ಷಕರ ಶಿಕ್ಷಣದಲ್ಲಿ ಸರಿಯಾಗಿ ಸಂಘಟಿಸಲಾಗದಿದ್ದಾಗ ಒಂದು ದುರ್ಬಲ ಕೊಂಡಿಯೆಂದು ಹೇಳಬಹುದಾಗಿದೆ, ಪಠ್ಯ ಕ್ರಮ ಕಾರ್ಯಚರಣೆಯ ಪ್ರಕ್ರಿಯೆಯು ಅಭಿವೃದ್ದಿ ಮತ್ತು ಸಂಪಧೀಕರಣದ ಅಗತ್ಯತೆಯನ್ನು ಹೊಂದಿದೆ. ಬೋಧನೆ ವಿಷಯಗಳ ವಿಶ್ಲೇಷಣೆಯು ಸಂಸ್ಕರಿಸಿದ

ಭೋದನೆ ಮತ್ತು ಕಲಿಕೆಯ ಜೊತೆ ಶಿಕ್ಷಣದ ಕಾರ್ಯ ಸಾಮರ್ಥ್ಯದ ವರ್ಗಾವಣೆ ಮತ್ತು ಸಾಮರ್ಥ್ಯಗಳ ಅಬಿವೃದ್ದಿಯನ್ನು ಹೊಂದಲು ಸಾಧ್ಯ. ಶಿಕ್ಷಣ ಶಾಸ್ತ್ರದ ವಿಶ್ಲೇಷಣೆಯ ಹಿನ್ನೆಲೆಯಲ್ಲಿ ಮಾದರಿ ಮತ್ತು ಪ್ರಾತ್ಯಕ್ಷಿಕ ಪಾಠಗಳನ್ನು ಪ್ರಶಿಕ್ಷಕರು ಕೊಡಲು ಸಾಧ್ಯ. ವಿಷಯ ಪರಿಣತರಿಂದ ತರಗತಿಯ ಭೋದನೆಯನ್ನು ಮೇಲ್ವಿಚಾರಣೆ ಮಾಡಿದಾಗ ಬೋಧನೆ ಸುದಾರಿಸಲು ಸಾಧ್ಯ.

**ಪ್ರಾಯೋಗಿಕ:** ಕಾರ್ಯ ಶಿಕ್ಷಣವು ಪ್ರಾಯೋಗಿಕ ಕೆಲಸದ ಪ್ರಮುಖ ಅಂಶವಾಗಿದೆ. ಮತ್ತು ಅದರ ಕೆಲವು ಗುಣಗಳನ್ನು ಅಭಿವೃದ್ದಿ ಪಡಿಸಲು ಶಿಕ್ಷಕರ ಶಿಕ್ಷಣದ ಸಂಭವನಿಯತೆಯನ್ನು ಬಳಸಿಕೊಳ್ಳಬೇಕು. ಶಾಲೆ ಮತ್ತು ಸಮುದಾಯದ ನಡುವಿನ ಪರಸ್ಪರ ಸಹಕಾರ ಬೋಧನೆ ತಂತ್ರಗಳ ಉಗಮಕ್ಕೆ ಕಾರಣವಾಗುತ್ತದೆ. ಶಿಕ್ಷಕರು ಶಾಲೆಗಳಲ್ಲಿ ಶೈಕ್ಷಣಿಕ ಚಟುವಟಿಕೆಗಳನ್ನು ಸಂಘಟಿಸಬೇಕಾಗುತ್ತದೆ. ವಿದ್ಯಾರ್ಥಿಗಳ ವ್ಯಕ್ತಿತ್ವದ ಬೆಳವಣಿಗೆಗೆ ಪೂರಕವಾಗಿರುವ ಮತ್ತು ಸ್ವಯಂ ಅಭಿವ್ಯಕ್ತಿ ಸಾಮರ್ಥ್ಯವನ್ನು ಬೆಳೆಸುವ ಚಟುವಟಿಕೆಗಳನ್ನು ಯೋಜಿಸುವ ಮತ್ತು ಸಂಘಟಿಸುವ ಸಾಮರ್ಥ್ಯವನ್ನು ಕಲಿಯುತ್ತಾರೆ. ವಿದ್ಯಾರ್ಥಿಗಳು ಪೂರಕ ಸಾಮರ್ಥ್ಯವನ್ನು ಅಗತ್ಯವಾಗಿ ಬೆಳೆಸಿಕೊಳ್ಳಬೇಕಾದರೆ ಅವರಿಗೆ ತರಬೇತಿ ನೀಡಿ ವಿದ್ಯಾರ್ಥಿಗಳ ನಡುವಿನ ಕಲಿಕೆಯನ್ನು ವೇಗಗೊಳಿಸಬೇಕಾಗುತ್ತದೆ.

### 8.4.12 ಪ್ರಶಿಕ್ಷಕರ ಪಾತ್ರ:

ಪ್ರಶಿಕ್ಷಕರ ಶಿಕ್ಷಣವು ಸಾಮಾಜಿಕ ಭಾವನಾತ್ಮಕ ಮತ್ತು ಸೌಂದರ್ಯಶಾಸ್ತ್ರವನ್ನು ಅನುಕೂಲಗೊಳಿಸುತ್ತದೆ. ಭಾವಿ ಶಿಕ್ಷಕರು ಅಭಿವೃದ್ದಿ ಹೊಂದಬೇಕಾದರೇ ಸೃಜನಾತ್ಮಕ ಮತ್ತು ರಚಾನಾತ್ಮಕ ಸಾವ್ಮರ್ಥ್ಯಗಳನ್ನು ಪ್ರೋತ್ಸಾಹಿಸಲು ಪ್ರಾಯೋಗಿಕ ಚಟುವಟಿಕೆಗಳು ಸಹಾಯ ಮಾಡುತ್ತವೆ. ಶಿಕ್ಷಕರ ವ್ಯಕ್ತಿತ್ವ ಮತ್ತು ವರ್ತನೆಯು ವಿದ್ಯಾರ್ಥಿಗಳ ಮೇಲೆ ಶಾಶ್ವತ ಪ್ರಭಾವವನ್ನು ಬೀರುತ್ತದೆ. ಆದರಿಂದ ಭಾವಿ ಶಿಕ್ಷಕರು ತಮ್ಮ ಭೋದನಾ ಕಲಿಕ ಅಭ್ಯಾಸಗಳಲ್ಲಿ ಬದಲಾವಣೆಯನ್ನು ತಂದು

ತಮ್ಮ ವೃತ್ತಿಪರ ಬದ್ಧತೆಯನ್ನು ಹೆಚ್ಚಿಸಿಕೊಂಡು ನಿರ್ದಿಷ್ಟ ಸನ್ನಿವೇಶಗಳನ್ನು ನಿಭಾಯಿಸುವ ಸಾಮರ್ಥ್ಯವನ್ನು ಬೆಳೆಸಿಕೊಳ್ಳಬೇಕಾಗುತ್ತದೆ.

**8.4.13 ಮೌಲ್ಯಮಾಪನ:**

ಶಿಕ್ಷಕರ ಶಿಕ್ಷಣ ಎನ್,ಸಿ,ಎಫ್,ಟಿ,ಇ. 2009 – 10 ಪ್ರಾಥಮಿಕ ಶಾಲೆಗಳಿಗೆ ಪ್ರತ್ಯೇಕ ಶಿಕ್ಷಣವನ್ನು ಶಿಫಾರಸ್ಸು ಮಾಡುತ್ತದೆ .

**8.4.14 ಮೌಲ್ಯ ಮಾಪನಕ್ಕಾಗಿ ಸಾಧನಗಳು:–**

ಪಠ್ಯಕ್ರಮ ಕಾರ್ಯಚರಣೆಯ ಯಶಸ್ಸು ಅಥವಾ ವೈಪಲ್ಯ ಮೌಲ್ಯ ಮಾಪನದಿಂದ ಕಂಡು ಹಿಡಿಯಲ್ಪಡುತ್ತದೆ. ನೀವು ಈಗಾಗಲೇ ತಿಳಿದಿರುವ ಮಾನ್ಯ ಮತ್ತು ವಿಶ್ವಾಸಾರ್ಹ ಉಪಕರಣಗಳ ಮೂಲಕ ಮಾಡಲಾಗುತ್ತದೆ.

**ಚಟುವಟಿಕೆ :4**

ಪ್ರಾಥಮಿಕ ಶಿಕ್ಷಕರ ಶಿಕ್ಷಣದ 2 ಹಂತಗಳನ್ನು ಕನಿಷ್ಟ 5 ಅಂಶಗಳಲ್ಲಿ ಹೋಲಿಸಿ

. . . . . . . . . . . . . . . . . . . . . . . . . . . . . . . . . . . .

. . . . . . . . . . . . . . . . . . . . . . . . . . . . . . . . . . . .

. . . . . . . . . . . . . . . . . . . . . . . . . . . . . . . . . . . .

## 8.5 ಪ್ರಾಥಮಿಕ ಶಿಕ್ಷಕರ ಶಿಕ್ಷಣದ ಅಂತರ್ಗತಗೊಳಿಸಿದ ಮಾದರಿಗಳು

ಶಿಕ್ಷಣ ಆಯೋಗ 1964–66) ವ್ಯಾಖ್ಯಾನದಂತೆ ಹೊಸ ಶಿಕ್ಷಣವನ್ನು ಪೂರೈಸಬೇಕಾದರೆ ವಿಶೇಷ ಅಗತ್ಯಗಳನ್ನು ಸಹ ಅಭಿವೃದ್ದಿಸಡಿಸುವ ಅಗತ್ಯತೆ ಇರುತ್ತದೆ ಪರಿಣಾಮಕಾರಿ ಶಿಕ್ಷಕ ತರಬೇತಿ ಕಾರ್ಯಕ್ರಮಗಳು ನಾವಿನ್ಯತೇಯ ಸಂಸ್ಕೃತಿಯನ್ನು ಉತ್ತೇಜಿಸಬೇಕು ಮತ್ತು ಅವಶ್ಯಕತೆಗೆ ಅನುಗುಣವಾಗಿ ಪರಿಣಾಮಕಾರಿಯಾಗಿ ಅಭ್ಯಾಸ ಮಾಡಬಹುದಾದ ಹೊಸ ಕಲ್ಪನೆಗಳ ಹೊಸ ಅವಶ್ಯಕತೆ ಇದೆ. ಶಿಕ್ಷಕರ ತರಭೇತಿಯು ಒಂದು ಸಂಕೀರ್ಣ ಸಮಸ್ಯೆಯಾಗಿದೆ.

ಪ್ರಾಥಮಿಕ ಅಂತದಲ್ಲಿ ಶಿಕ್ಷಕರ ಶಿಕ್ಷಣದ ವಿನ್ಯಾಸದ ಶಿಕ್ಷಣದಲ್ಲಿ ಮೂರು ವಿಭಿನ್ನ ಸಾಧ್ಯತೆಗಳಿವೆ:– ಅವುಗಳನ್ನು ಈ ಕೆಳಕಂಡಂತೆ ಚಿತ್ರಸಲಾಗಿದೆ.

| |
|---|
| ಪ್ರಾಥಮಿಕ ಶಾಲಾ ಹಂತ ತರಗತಿ 1–5 |

| |
|---|
| ಪೂರ್ವ ಪ್ರಾಥಮಿಕ ಶಾಲಾ ಹಂತ ತರಗತಿ 1–8 |

| |
|---|
| ವಿಶೇಷವಾಗಿ ಉನ್ನತ ಪ್ರಾಥಮಿಕ ಶಾಲಾ ಹಂತ ತರಗತಿ 6–8 |

ಚಿತ್ರ: 8.4

ಪ್ರಾಶಿಸಾ ದಂತೆ ರಾಷ್ಟ್ರೀಯ ಚೌಕಟ್ಟಿನ ಅವಶ್ಯಕತೆಗಳನನು ಪರಿಗಣಿಸಿ ಎನ್.ಸಿ.ಎಫ್.ಟಿ.ಇ 2009 – 10ರ ಶಿಫಾರಸ್ಸಿನಂತೆ ಪ್ರಾಥಮಿಕ ಮತ್ತು ಪೂರ್ವ ಪ್ರಾಥಮಿಕ ಅಂತದಲ್ಲಿ ಪ್ರತ್ಯೇಕ ಶಿಕ್ಷಣವನ್ನು ಶಿಫಾರಸ್ಸು ಮಾಡುತ್ತದೆ

ಉನ್ನತ ಪ್ರಾಥಮಿಕ ಶಾಲೆಗಳು 6 – 8 ನೇ ತರಗತಿಯವರೆಗೆ ಪ್ರಾಥಮಿಕ ಶಾಲೆಗಳಿಂದ ಕಡಿಮೆ ಸಂಖ್ಯೆಗಳಲ್ಲಿ (.176 ಲಕ್ಷ) ತುಲಾನಾತ್ಮಕವಾಗಿ ಕಡಿಮೆ( 5.98 ಲಕ್ಷ) ಶಾಲೆಗಳಿವೆ.

## 8.5.1: ಎಲಿಮೆಂಟರಿ ಶಿಕ್ಷಕ ಶಿಕ್ಷಣದ ಪ್ರಸ್ತುತ ಸ್ಥಿತಿ

### ಎಲಿಮೆಂಟರಿ ಶಿಕ್ಷಣದಲ್ಲಿ ಡಿಪ್ಲೋಮಾ (ಡಿ.ಎಲ್.ಇ.ಡಿ)

ಈ ಡಿಪ್ಲೋಮಾವನ್ನು 12 ವರ್ಷಗಳ ಶಾಲಾ ಶಿಕ್ಷಣವನ್ನು ಪೂರ್ಣಗೊಳಿಸಿದ ವಿದ್ಯಾರ್ಥಿಗಳಿಗೆ ವಿನ್ಯಾಸಗೊಳಿಸಲಾಗಿದೆ. ಈ ಕೋರ್ಸನ ಅವದೀಯು 2 ವರ್ಷದ್ದಾಗಿದ್ದು ಹೆಚ್ಚುವರಿ 6 ತಿಂಗಳ ಇಂಟರ್ನ್ ಶಿಪ್ ತರಬೇತಿಯನ್ನು ಹೊಂದಿರುತ್ತದೆ. ಪಠ್ಯಕ್ರಮವು ಪ್ರಮುಖವಾಗಿ 3 ಅಂಶಗಳನ್ನು ಒಳಗೊಂಡಿರುತ್ತದೆ.

1. ಸಿದ್ದಾಂತ. 9 ಪತ್ರಿಕೆಗಳನ್ನು ಒಳಗೊಂಡಿದು, ಮೊದಲ ವರ್ಷ 8 ಪತ್ರಿಕೆಗಳನ್ನು ದ್ವೀತಿಯ ವರ್ಷ ಪ್ರತಿಯೊಂದು ಪತ್ರಿಕೆಗಳ ಜೊತೆಯಲ್ಲಿ ಪ್ರಾಯೋಗಿಕ ಚಟುವಟಿಕೆಗಳಿರುತ್ತವೆ.

2. ಪ್ರಾಯೋಗಿಕ. ಇದರಲ್ಲಿ ಅನುಭವದ ಬೋಧನಾ ತರಬೇತಿ ಸಾಮಜಿಕ ಸೇವೆ ಸಂಗೀತಾ ಕಲೆ, ಮತ್ತು ದೈಹಿಕ ಶಿಕ್ಷಣವನ್ನು ಒಳಗೊಂಡಿರುತ್ತದೆ.

4. ತರಬೇತಿ: ಆರುತಿಂಗಳ ಅವಧಿಯ ವಿವಿಧ ಬೋಧನಾ ಕೌಶಲ್ಯಗಳು ಮತ್ತು ಅಭ್ಯಾಸವನ್ನು ರಚಿಸಲು ಸಹಾಯಕ.

**8.5.2 ಎಲಿಮೆಂಟರಿ ಶಿಕ್ಷಕರ ಶಿಕ್ಷಣದ ಉನ್ನತಿಕರಣ**

ಶಿಕ್ಷಣವೆನ್ನುವುದು ಅಂತರ ಶಾಸ್ತ್ರೀಯ ವಿಷಯವಾಗಿದ್ದು ಇದರ ಜೊತೆಯಲ್ಲಿ ಹಲವಾರು ಇತರೆ ವಿಷಯಗಳು ಸಂಯೋಜನೆಗೊಂಡಿರುತ್ತವೆ.

ಸಿದ್ದಾಂತಗಳು ಮತ್ತು ತರಬೇತಿ ಶಿಕ್ಷಕರ ಶಿಕ್ಷಣ ಸಂಸ್ಥೆಗಳಲ್ಲಿ ವಿಶ್ವವಿದ್ಯಾಲಯದ ಇಲಾಖೆಗಳಿಗೆ ಅನುಗುಣವಾಗಿ ಅಭಿವೃದ್ದಿ ಪಡಿಸಲಾಗಿದದೆ. ಪ್ರಾಥಮಿಕ ಶಿಕ್ಷಕರ ಶಿಕ್ಷಣವು ಮತ್ತು ಎಲಿಮೆಂಟರಿ ಶಿಕ್ಷಣವು ಇಂದು ನಿಲರ್ಕ್ಷ್ಯತನವನ್ನು ಹೊಂದಿವೆ. ಪಠ್ಯಕ್ರಮವನ್ನು ಈ ಕೆಳಕಂಡಂತೆ ಗಮನಿಸಬಹುದಾಗಿದೆ.

1. ತಳಹದಿಯ ಕೋರ್ಸ್
2. ವಿಷಯ ಮತ್ತು ಬೋಧನಾ ಆದಾರಿತ ಶಾಸ್ತ್ರ
3. ಶಾಲಾ ಅನುಭವದ ಕಾರ್ಯಕ್ರಮ
4. ಪ್ರಾಯೋಗಿಕ ಚಟುವಟಿಕೆಗಳು.

**8.5.3: ಹೊಸ ಮಾದರಿಗಳ ಅಗತ್ಯತೆ**

ಪ್ರಾಥಮಿಕ ಶಿಕ್ಷಣ ಮಾನವನ ಮೂಲಭೂತ ಹಕ್ಕು ಆದಾಗ, ಎಲಿಮೆಂಟರಿ ಪ್ರಾಥಮಿಕ ಶಿಕ್ಷಕ ಶಿಕ್ಷಣವು ವಿಶೇಷ ಪ್ರಾಮುಖ್ಯತೆಯನ್ನು ಹೊಂದಿದೆ. ಅನೇಕ ವಿದ್ಯಾರ್ಥಿಗಳು ಈ ಶಿಕ್ಷಣ ವ್ಯವಸ್ಥೆಯನ್ನು ತೊರೆಯಬಹುದು. ನಂತರ ವಿವಿಧ ಕಾರಣಗಳಿಂದಾಗಿ ಅವರು ಕೊಡುಗೆ ನೀಡಬೇಕಾಗುತ್ತದೆ. ಉತ್ಪಾದನ ಮತ್ತು ಆತ್ಮ ಸಾಕ್ಷಿಯನ್ನು ಹೊಂದಿರುವ ನಾಗರೀಕರು ರಾಷ್ಟ್ರೀಯ ಅಭಿವೃದ್ದಿಗೆ ತಮ್ಮದೇ ಆದ ಕೊಡುಗೆಯನ್ನು ನೀಡಬೇಕಾಗಿದೆ. +2 ಪ್ರವೇಶ ಹಂತದಲ್ಲಿ ಭಾವಿ ಶಿಕ್ಷಕರನ್ನು ಮೂಲ ಭೂತವಾಗಿ ಸಜ್ಜುಗೊಳಿಸುವುದಿಲ್ಲ ಪ್ರಾಥಮಿಕ ಹಂತದಲ್ಲಿ ಕಲಿಸಲು ವಿಷಯಗಳ ಜ್ಞಾನ ವಿಶೇಷವಾಗಿ ತರಗತಿಯ ನಿವರ್ಹಣೆಯ ಜ್ಞಾನ ಹೊಂದಿರಬೇಕಾಗುತ್ತದೆ. ಮಕ್ಕಳ ಕಲಿಕೆಗೆ ಅನುವು ಮಾಡಿಕೊಡುವುದಕ್ಕಾಗಿ ಶಿಕ್ಷಕರ ಜ್ಞಾನ ಅವುಗಳ ಬಳಕೆ ಮಾನಸಿಕ ಮತ್ತು ಸಾಮಾಜಿಕ ಕಲಿಕೆಯ ಅಗತ್ಯತೆಗಳನ್ನು

ತಿಳಿದಿರಬೇಕಾಗುತ್ತದೆ. ಪಠ್ಯಕ್ರಮ ಚೌಕಟ್ಟು ಸಾಮಾನ್ಯ ಮತ್ತು ಮಾರ್ಗದರ್ಶಿ ಸೂತ್ರಗಳನ್ನು ಒದಗಿಸುತ್ತದೆ. ಪ್ರತಿಯೊಂದು ಬೋಧನಾ ಹಂತದ ಮಾರ್ಗದರ್ಶಿ ಸೂತ್ರಗಳನ್ನು ಒದಗಿಸಿದ ಶಿಕ್ಷಣ ಸಂಸ್ಥೆಗಳು ಹಲವಾರು ಸಂಸ್ಥೆಗಳನ್ನು ಸ್ಥಾಪಿಸಲಾಗಿದೆ. ಪ್ರಾಥಮಿಕ ಶಿಕ್ಷಣದಲ್ಲಿ ವಿಶೇಷ ಅರ್ಹತೆ ಪಡೆದಿರುವ ಶಿಕ್ಷಕರ ಶಿಕ್ಷಣದ ಅಗತ್ಯವಿರುವುದಿಲ್ಲ. ಅಸ್ಥಿತ್ವದಲ್ಲಿರುವ ವ್ಯವಸ್ಥೆಗಳನ್ನು ಲಘುವಾಗಿ ತೆಗೆದುಕೊಳ್ಳದೆವಿಭಿನ್ನ ಹಂತಗಳಲ್ಲಿ ಉತ್ತಮವಾಗಿ ಕಾರ್ಯ ನಿರ್ವಹಿಸಲು ಸಹಾಯಕ. ಬಿ.ಇಡಿ ಮತ್ತು ಎಂ.ಇಡಿ ಶಿಕ್ಷಣವನ್ನು ಪಡೆಯುವುದರ ಮೂಲಕ ತಮ್ಮ ವೃತ್ತಿ ಸಾಮರ್ಥ್ಯವನ್ನು ನವೀಕರಿಸಲು ಸಾಧ್ಯ ಹೀಗೆ ಪ್ರಾಥಮಿಕ ಶಿಕ್ಷಕರ ಶಿಕ್ಷಣವನ್ನು ನವೀಕರಿಸುವ ಅವಶ್ಯಕತೆ ಇದೆ.

### 8.5.4: ಹೊಸ ಉಪಕ್ರಮಗಳು

**ಅಗತ್ಯ ಬದಲಾವಣೆಗಳಿಗೆ ಸರಿಹೊಂದುವಂತೆ ನವೀನ ಶಿಕ್ಷಣಗಳು**

ಅನೇಕ ಶಿಕ್ಷಕರಿಗೆ ಪೂರ್ವ ಪ್ರಾಥಮಿಕ ಶಿಕ್ಷಕರ ಶಿಕ್ಷಣ ಪದವಿ ಕಾರ್ಯಕ್ರಮಕ್ಕೆ ಸಮನಾಗಿರಬೇಕು ಎಂದು ಭಾವಿಸಲಾಗುತ್ತದೆ. ಪ್ರಾಥಮಿಕ ಶಿಕ್ಷಕರ ಶಿಕ್ಷಣದ ನಿರ್ವಹಣೆ ಮತ್ತು ನಿಯಂತ್ರಣವನ್ನು ವೃತ್ತಿಪರ ವಿಶ್ವವಿದ್ಯಾಲಯಗಳು ಮಾಡುತ್ತಿವೆ.

ಜಾಮಿಯಾ. ಮೀಲಿಯಾಮ ಇಸ್ಲಾಮಿಯಾ ಕೆಲವು ನವೀನ ಶಿಕ್ಷಣವನ್ನು ವಿಶೇಷವಾಗಿ ಎಂ.ಇಡಿ. ಪ್ರಾಥಮಿಕ ಶಿಕ್ಷಣದಲ್ಲಿ ನೀಡುತ್ತಿವೆ. ಟಿ.ಐ.ಎಸ್.ಎಸ್ ಸಹ ಪ್ರಾಥಮಿಕ ಶಿಕ್ಷಣದಲ್ಲಿ ಎಂ.ಇಡಿಯಲ್ಲಿ ಪದವಿಯನ್ನು ನೀಡುತ್ತಿದೆ.

ಒಂದು ವರ್ಷದ ಎಲಿಮೆಂಟರಿ ಶಾಲಾ ಭೋದನಾ ಪದವಿಧರರು

ಒಂದು ವರ್ಷದ ಡಿ.ಇಡಿ, 2 ವರ್ಷದ ಡಿಪ್ಲೋಮಾ ಕೋರ್ಸ್‌ಗೆ ಸಹಕಾರಿಯಾಗಿರುತ್ತದೆ. ಈ ಮೂಲಕ ಉನ್ನತ ಶಿಕ್ಷಣ ಮಟ್ಟಕ್ಕೆ ಪ್ರಾಥಮಿಕ ಶಾಲಾ ಶಿಕ್ಷಕೆ ತರಬೇತಿಯನ್ನು ನೀಡಲಾಗುತ್ತಿದೆ.

ಬ್ಯಾಚುಲರ್ ಆಫ್ ಎಲಿಮೆಂಟರಿ ಎಜುಕೇಶನ್ ದೆಹಲಿ ವಿಶ್ವವಿದ್ಯಾಲಯದ 4 ವರ್ಷಗಳ ಸಮಗ್ರ ವೃತ್ತಿಪರ ಪದವಿ ಕಾರ್ಯಕ್ರಮವಾಗಿದೆ. ಇದು ಮೌಲಾನ ಅಜಾದ್ ಕೇಂದ್ರದಿಂದ ನಡೆಯುವ ದ್ವಿಭಾಷಾ ಕಾರ್ಯಕ್ರಮವಾಗಿದೆ. ಶಿಕ್ಷಣ

ಇಲಾಖೆಯು ಪ್ರಾಥಮಿಕ ಮತ್ತು ಸಾಮಾಜಿಕ ಶಿಕ್ಷಣಕ್ಕೆ ಸಂಬಂಧಪಟ್ಟಂತೆ ದೆಹಲಿ ವಿಶ್ವವಿದ್ಯಾಲಯದಲ್ಲಿ 94–95 ರಲ್ಲಿ  ಮೊದಲಬಾರಿಗೆ ಕಾರ್ಯಕ್ರಮವನ್ನು ಪ್ರಾರಂಭಿಸಲಾಯಿತು ವೃತ್ತಿಪರವಾಗಿ ಅರ್ಹ ಪ್ರಥಮಿಕ ಶಿಕ್ಷಣದ ಅಗತ್ಯವನ್ನು ಪೂರೈಸುವ ಪ್ರಯತ್ನ ಶಾಲಾ ಶಿಕ್ಷಕರು ಮತ್ತು ವಿಷಯ ಶಿಕ್ಷಕರ ಅಧ್ಯನವನ್ನು ಸಂಯೋಜಿಸಲು ವಿನ್ಯಾಸಗೊಳಿಸಲಾಗಿದೆ. ಮಾನವ ಅಬಿವೃದ್ದಿ, ಶೈಕ್ಷಣಿಕ ಜ್ಞಾನ ಸಂವಹನ ಕೌಶಲಗಳ ಮೂಲಕ ಪ್ರಾಥಮಿಕ ಶಿಕ್ಷಣಗಳ ಬಗ್ಗೆ ತಿಳಿಸುವುದಾಗಿದೆ. ದೆಹಲಿ ವಿಶ್ವವಿದ್ಯಾನಿಲಯವನ್ನು ಪ್ರಾರಂಭಿಸುವ ಮೂಲಕ ವಿಶ್ವವಿದ್ಯಾನಿಲಯದಲ್ಲಿ ಏಕೀಕರಣವನ್ನು ತರಲಾಯಿತು ಇದರ ಮೂಲಕ ಪ್ರಾಥಮಿಕ ಶಾಲಾ ಶಿಕ್ಷಕರ ವೃತ್ತರಿಪರ ಸ್ಥಿತಿಯನ್ನು ಸಹ ಉನ್ನತಿಕರಿಸಬಹುದಾಗಿದೆ.  ಪ್ರಾಥಮಿಕ ಶಿಕ್ಷಣಕ್ಕಾಗಿ ವಿಶ್ವವಿದ್ಯಾಲಯ ಪದವಿದ್ಯಾಲಯ ಪದವಿಯನ್ನು ಒದಗಿಸುತ್ತದೆ. ಪ್ರಸ್ತುತ್ತ 8 ಮಹಿಳಾ ಕಾಲೇಜುಗಳಲ್ಲಿ ಈ ಕಾರ್ಯಕ್ರಮಗಳನ್ನು ನೀಡಲಾಗುತ್ತಿದೆ. ದೆಹಲಿ ವಿಶ್ವವಿದ್ಯಾನಿಲಯದಲ್ಲಿ 3000 ಕ್ಕಿಂತಲೂ ಹೆಚ್ಚು ವಿದ್ಯಾರ್ಥಿಗಳು ಈಗಾಗಲೇ ಪದವಿ ಪಡೆದಿದ್ದಾರೆ. ಅನೇಕ ಕಾಲೇಜುಗಳು 1998 ರಿಂದ ಪ್ರಾರಂಭವಾಗಿ ಇಗಲೂ ಸರ್ಕಾರದ ಅಧೀನದಲ್ಲಿದ್ದು ಅನೇಕ ಖಾಸಗಿ ಶಾಲೆಗಳು ಸಹ ಪ್ರಾಥಮಿಕ ಶಾಲಾ ಶಿಕ್ಷಣದ ಪದವಿಗಳನ್ನು ನೀಡುತ್ತಿವೆ. ಸ್ನಾತಕೋತ್ತರ ಅದ್ಯಯನಗಳು ಮತ್ತು ಶಿಕ್ಷಣ, ಭಾಷಾ ಶಾಸ್ತ್ರ ಮನಶಾಸ್ತ್ರ ಭಾಷೆ, ಇತಿಹಾಸ , ಸಾಮಾಜಿಕ ಕೆಲಸ ಸಮಾಜ ಶಾಸ್ತ್ರ, ಗಣಿತ ಶಾಸ್ತ್ರ ಮತ್ತು ರಾಜಕೀಯ ವಿಜ್ಞಾನ ಈ ವಿಷಯಗಳಿಗೆ ಸಂಬಂಧಿಸಿದಂತೆ ಅನೇಕ ಪದವೀಧರರು ಸಂಶೋಧನೆ ನಡೆಸುತ್ತಿದ್ದಾರೆ. ಕೇಂದ್ರ ವಿಶ್ವವಿದ್ಯಾನಿಲಯದಲ್ಲಿ ಕೆಲವರು ಶಿಕ್ಷಕರಾಗಿ ಕೆಲಸ ಮಾಡುತ್ತಿದ್ದಾರೆ.

ಬಿ.ಇ.ಡಿ ಕಾರ್ಯಕ್ರಮಗಳು ಹೆಚ್ಚಿನ ಪದವೀಧರರನ್ನು ಉತ್ಪಾದಿಸುವ ಗುರಿ ಹೊಂದಿದೆ ಶಿಕ್ಷಕರ ಶಿಕ್ಷಣ ವಿದ್ಯರ್ಥಿಗಳ ತರಬೇತಿ ನೀಡುವಲ್ಲಿ ಬಹಳಷ್ಟು ಶ್ರಮ ವಹಿಸಲಾಗಿದೆ.

ಪ್ರಾಥಮಿಕ ಶಾಲೆಗಳಲ್ಲಿ ಬೋಧನೆ (ತರಗತಿ 1–8)

ಎಂಸಿಡಿ/ಎನ್‌ಡಿಎಂಸಿ/ದೆಹಲಿಯ ಸರ್ವೋದಯ ವಿದ್ಯಾಲಯಗಳು ಕೇಂದ್ರಿಯ ವಿದ್ಯಾಲಯಗಳು ನವೋದಯ ವಿದ್ಯಾಲಯಗಳು ಮತ್ತು ಖಾಸಗಿ ಶಾಲೆಗಳು.

ವಿವಿಧ ಸಾಮರ್ಥಗಳಿಗೆ ತಕ್ಕಂತೆ ಪೂರ್ವಪ್ರಾಥಮಿಕ ಶಾಲಾ ವ್ಯವಸ್ಥೆಯನ್ನು ಮುನ್ನಡೆಸುವುದು.

ಸರ್ಕಾರ ಮತ್ತು ಸರ್ಕಾರೇತರ ಕ್ಷೇತ್ರಗಳಲ್ಲಿ ಪ್ರಾಥಮಿಕ ಶಿಕ್ಷಣದ ಬೋಧನೆ ಮತ್ತು ಸಂಶೋಧನೆ.

ಶಿಕ್ಷಣ ಮತ್ತು ಅದಕ್ಕೆ ಸಂಬಂಧಿಸಿದ ವಿಷಯಗಳ ಕುರಿತಂತೆ ಸಂಶೋಧನಾ ವಿಭಾಗ ಮತ್ತು ಸ್ನಾತಕೋತ್ತರ ಅಧ್ಯಯನ.

ವಿವಿಧ ರಾಜ್ಯ ಸಂಸ್ಥೆಗಳು, ವಿಶ್ವವಿದ್ಯಾಲಯಗಳು, ಕಾಲೇಜುಗಳು, ವಿಭಾಗಗಳು, ಪ್ರಾಥಮಿಕ/ಪ್ರೌಢಶಿಕ್ಷಣಕ್ಕೆ ಸಂಬಂಧಿಸಿದಂತೆ ಪ್ರಶಿಕ್ಷಕರ ಸೇವೆ.

## 8.6 ಒಬ್ಬ ಪ್ರತಿಫಲಿತ ಆಭ್ಯಾಸಕಾರನಾಗಿ ಶಿಕ್ಷಕ

ಶಿಕ್ಷಕನ ವೃತ್ತಿ ಜೀವನದಲ್ಲಿ ಅನೇಕ ಭಾರಿ ಅವನು ಒಂದು ಹಂತದಲ್ಲಿ ವೃತ್ತಿಗೆ ಆಗಮಿಸುತ್ತಾನೆ. ಅವರು ಉತ್ತಮ ಮಾರ್ಗವನ್ನು ಅನುಸರಿಸಬೇಕಾಗುತ್ತದ ಆದರೆ ಅವರು ಹೇಗೆ  ನಿರ್ಧಾರ ಕೈಗೊಳ್ಳುವರು? ನೀವು ಈಗ ನಿರ್ಧಾರ ಕೈಗೊಳ್ಳುವ ಸಂದಿಗ್ದತೆಯಲ್ಲಿದಿರಾ? ಸ್ವಲ್ಪ ಸಮಯ ಯೋಚಿಸಿ

ಇದೀಗ ನೀವು ಪ್ರತಿಫಲಿತ ಚಿಂತನೆಯಲ್ಲಿ ತೊಡಗಿಸಿಕೊಂಡಿದ್ದಿರಿ ಹೌದು ಪ್ರತಿಫಲಿತವು ನಿಮ್ಮನ್ನು ಅನುಮತಿಸುತ್ತದೆ. ಪರಿಸ್ಥಿತಿಯನ್ನು ಪರಿಣಾಮಕಾರಿಯಾಗಿ ಅಂದಾಜು ಮಾಡಿ ವಿದ್ಯಾರ್ಥಿಗಳಿಗೆ ಅನುಕೂಲವಾಗುವ ಹಾಗೇ ಉತ್ತಮ ಮಾರ್ಗವನ್ನು ಆಯ್ಕೆ ಮಾಡಿಕೊಳ್ಳಬೇಕಾಗುತ್ತದೆ. ನಿಮ್ಮ ಬೋಧನೆಯ ಬಗ್ಗೆ

ವಿಮರ್ಶಾತ್ಮಕವಾಗಿ ಯೋಚಿಸಲು ಪ್ರತಿಫಲಿತ ಅಭ್ಯಾಸ ನಿಮಗೆ ಸಹಾಯ ಮಾಡುತ್ತದೆ. ಭವಿಷ್ಯದ ಅಭ್ಯಾಸವನ್ನು ಸುಧಾರಿಸಲು ಜ್ಞಾನವನ್ನು ಬಳಸಿ ಶಿಕ್ಷಕರು ನಿರ್ಣಾಯಕರಾಗಬೇಕಾಗುತ್ತದೆ. ಸಾಂಪ್ರಾದಾಯಿಕ ಅಭ್ಯಾಸ ಮತ್ತು ನಂಬಿಕೆಗಳ ಮೇಲೆ ನಿಂತಿರುತ್ತದೆ.

## 8.6.1: ಪ್ರತಿಫಲಿತ ಅಭ್ಯಾಸದ ಅರ್ಥ

ಈ ಕೆಳಕಂಡ ಪ್ರತಿಫಲಿತ ಪದದ ವ್ಯಾಖ್ಯಾನ ಪ್ರತಿಫಲಿತ ಪದದ ಅರ್ಥ ತಿಳಿಯಲು ಸಹಾಯಕವಾಗುತ್ತದೆ. 'ಬೌಡ್ ಮತ್ತು ವಾಕರ್ ರವರ (1985) ಪ್ರಕಾರ ಪ್ರತಿಫಲಿತವು ಬೌದ್ಧಿಕ ಮತ್ತು ಪ್ರಭಾವಶಾಲಿ ಚಟುವಟಿಕೆಗಳಿಗೆ ಪ್ರತಿಫಲಿತವು ಸಾರ್ವತ್ರಿಕ ಪದವಾಗಿದೆ. ಯಾವ ವ್ಯಕ್ತಿಗಳು ತಮ್ಮ ಅನುಭವವನ್ನು ಅನ್ವೇಷಿಸಲು ತೊಡಗುತ್ತಾರೋ ಅವರು ಹೊಸ ತಿಳುವಳಿಕೆ ಮತ್ತು ಮೆಚ್ಚುಗೆಯನ್ನು ಗಳಿಸುತ್ತಾರೆ.

**ಪ್ರತಿಫಲಿತ ಅಭ್ಯಾಸ:**

1. ಇದು ಕಲಿತದ್ದನ್ನು ಸುಧಾರಿಸಿಕೊಳ್ಳಲು ಕ್ರಮ ತೆಗೆದುಕೊಳ್ಳುವ ಬಗ್ಗೆ ಸೂಚಿಸುತ್ತದೆ.
2. ಇದು ವಸ್ತುನಿಷ್ಠವಾಗಿ ಚಿಂತನೆ ಮತ್ತು ಬದಲಾವಣೆಗಳನ್ನುಮಾಡುವ ಕ್ರಿಯೆಯನ್ನು ಸಂಪರ್ಕಿಸುತ್ತದೆ.
3. ಇದು ಒಬ್ಬ ವ್ಯಕ್ತಿಯ ಕ್ರಿಯೆಗಳನ್ನು ಕುರಿತು ಮತ್ತು ಒಬ್ಬರ ವೃತ್ತಿಪರ ಅಭ್ಯಾಸಗಳನ್ನು ಸುಧಾರಿಸುವ ಗುರಿಗೆ ಸಂಬಂಧಿಸಿದಂತೆ ವಿಮರ್ಶಾತ್ಮಕವಾಗಿ ವಿಶ್ಲೇಷಿಸುತ್ತದೆ.

**ಪ್ರತಿಫಲಿತ ಅಭ್ಯಾಸಕಾರರು ಒಬ್ಬ ವ್ಯಕ್ತಿಯಾಗಿ:**

1) ಕಾರ್ಯಗಳನ್ನು ವಿಮಾರ್ಶಾತ್ಮಕವಾಗಿ ಪರೀಶೀಲಿಸುವ ಮೂಲಕ ಅನುಭವಗಳನ್ನು ಪಡೆದುಕೊಂಡು ಆ ಕಾರ್ಯಗಳ ಪರಿಣಾಮ ಏನು ಮಾಡಬೇಕೆಂದು ಭವಿಷ್ಯದ ಸನ್ನಿವೇಶಗಳನ್ನು ಕುರಿತು ಯೋಜನೆ ಮಾಡುತ್ತಾನೆ.

2) ಆಳವಾದ ಎಚ್ಚರಿಕೆ ಚಿಂತನೆಯಿಂದ ವಿಶಿಷ್ಟವಾದ ವೃತ್ತಿಯನ್ನು ಮತ್ತು ಬೋಧನೆಯನ್ನು ಉತ್ತಮ ಪಡಿಸಿಕೊಳ್ಳಲು ಪ್ರಯತ್ನಿಸುತ್ತಾನೆ.

**8.6.2: ಪ್ರತಿಫಲಿತದ ಬಗ್ಗೆ ಶಿಕ್ಷಣ ತಜ್ಞರ ಅಭಿಪ್ರಾಯ:**

ಪ್ರತಿಫಲಿತ ಅಭ್ಯಾಸದಲ್ಲಿ ಅಭ್ಯಾಸಕಾರರು ಸ್ವಸಹಾಯದಿಂದ ಸ್ವಯಂ ಮೌಲ್ಯಮಾಪನದ ನಿರಂತರ ಚಕ್ರದಲ್ಲಿ ತೊಡಗುತ್ತಾ ತಮ್ಮದೆ ಆದ ಕಾರ್ಯಗಳನ್ನು ಅರ್ಥಮಾಡಿಕೊಳ್ಳಲು ಪ್ರಯತ್ನಿಸುತ್ತಾರೆ ಹಾಗೂ ತಮ್ಮಲ್ಲಿ ಕಲಿಯುವವರನ್ನು ಉತ್ತೇಜಿಸುವ ಪ್ರತಿಕ್ರಿಯೆಯನ್ನು ಹೊಂದಿರುತ್ತಾರೆ.

ಪ್ರತಿಫಲಿತ ಅಭ್ಯಾಸದ ಗುರಿಯು ಒಂದು ನಿರ್ಧಿಷ್ಟ ಸಮಸ್ಯೆಯನ್ನು ಪರಿಹರಿಸುವುದಲ್ಲ. ಆದರೆ ವೀಕ್ಷಣೆಯನ್ನು ಮಾಡಿ ಅಭ್ಯಾಸವನ್ನು ಸಂಸ್ಕರಿಸಿ ಅದರ ಆಧಾರದ ಮೇಲೆ ನಿರ್ಧರಿಸುವುದು. ಪ್ರತಿಫಲಿತ ಅಭ್ಯಾಸದಲ್ಲಿ ತೊಡಗಿಕೊಳ್ಳುವುದರಿಂದ ವ್ಯಕ್ತಿಗಳ ದೃಷ್ಟಿಕೋನ ವನ್ನು ಊಹಿಸಬೇಕಾಗುತ್ತದೆ.

**8.6.3: ಪ್ರತಿಫಲಿತ ಅಭ್ಯಾಸದ ಮೂಲ**

ಶಿಕ್ಷಕರು ತಮ್ಮ ಅಭ್ಯಾಸಗಳನ್ನು ಪ್ರತಿಫಲಿತದ ಮೂಲಕ ಉತ್ತಮ ಪಡಿಸಿಕೊಳ್ಳಬಹುದು ಎಂಬುದನ್ನು ತೋರಿಸಿಕೊಟ್ಟ ಮೊದಲ ಶಿಕ್ಷಣ ತಜ್ಞ 'ಜಾನ್ ಡೂಯಿ; ಯಾಗಿದ್ದಾನೆ. ಪ್ರತಿಫಲಿತ ಅಭ್ಯಾಸವೆಂದರೇ ಯಾವುದೇ ಸಕ್ರಿಯ, ನಿರಂತರ ಮತ್ತು ಎಚ್ಚರಿಕೆಯಿಂದ ಪರಿಗಣಿಸಿ ಜ್ಞಾನದ ನಂಬಿಕೆ ಎಂದು ಭಾವಿಸಲಾದ ರೂಪವನ್ನು ಬೆಂಬಲಿಸುವ ಆಧಾರದ ಬೆಳಕಿನಲ್ಲಿ ಅದು ಹೇಗೆ ಉಂಟಾಗುತ್ತದೆ ಎಂಬ ಮತ್ತಷ್ಟು ತೀರ್ಮಾನಗಳನ್ನು ಪ್ರತಿಫಲಿತ ಚಟುವಟಿಕೆಯ ಪ್ರತಿಯೊಂದು ಸಂಧರ್ಭದಲ್ಲಿ ವ್ಯಕ್ತಿಗೆ ಎದುರಾಗುವ ಪರಿಸ್ಥಿತಿ ಮತ್ತು ಆ ಸಂದರ್ಭದಲ್ಲಿ ತೀರ್ಮಾನಿಸುವಿಕೆಯ ಪ್ರಕ್ರಿಯೆಯು ಈ ಮೇಲಿನ ಆಧಾರದ ಮೇಲೆ ನಿರ್ಣಾಯವಾಗುತ್ತದೆ.

ಜಾನ್ ಡ್ಯೂಯಿ ಪ್ರತಿಫಲಿತವನ್ನು ಶಿಕ್ಷಕರು ತರಗತಿಯಲ್ಲಿ ಸಂಭವಿಸುವ ಸಮಸ್ಯೆಗಳನ್ನು ಪರಿಹರಿಸುವ ಒಂದು ಸಮಗ್ರ ವಿಧಾನ ಎಂದು ತಿಳಿಸುತ್ತಾನೆ.

ಪ್ರತಿಫಲಿತ ಪ್ರಕ್ರಿಯಯ ಪ್ರಮುಖ ಅಂಶಗಳೆಂದರೆ ಮುಕ್ತ ಮನಸ್ಸು, ಹೊಣೆಗಾರಿಕೆ ಮತ್ತು ತುಂಬು ಹೃದಯದ ಮನೋಭಾವ.

**ಡೂಯಿಯ ಪ್ರಕಾರ:–**

1. ಮುಕ್ತ ಮನಸ್ಸು:– ಪ್ರತಿಯೊಂದು ವಿಷಯದಲ್ಲೂ ಶಿಕ್ಷಕನ ಸಾಮರ್ಥ್ಯವನ್ನು ಗಮನಿಸಿ ಅವನ ಬೋಧನೆಯನ್ನು ವಿಮರ್ಶಾತ್ಮಕವಾಗಿ ಪರಿಶೀಲಿಸಿ ಹೊಸ ವಿಚಾರಗಳನ್ನು ಸ್ವೀಕರಿಸಿ ಅಳವಡಿಸಿಕೊಳ್ಳುವುದಾಗಿದೆ.
2. ಹೊಣೆಗಾರಿಕೆ:– ಒಬ್ಬರ ಬೋಧನೆ ಹೊಂದಬಹುದಾದ ಪರಿಣಾಮವನ್ನು ಹೊಣೆಗಾರಿಕೆಯು ಅಥೈಸುತ್ತದೆ. ವಿದ್ಯಾರ್ಥಿಗಳ ಮೇಲೆ ತನ್ನ ಬೋಧನೆಯ ಪರಿಣಾಮವನ್ನು ಅರ್ಥಮಾಡಿಕೊಳ್ಳಬೇಕಾಗುತ್ತದೆ.
3. ತುಂಬು ಹೃದಯದ ಮನೋಭಾವನೆ: ಬಹಳ ಉತ್ಸಾಹದಿಮದ ಕೆಲಸಸವನ್ನು ನಿರ್ವಹಿಸಬೇಕು, ಕುತೂಹಲದಿಂದ ಬೋಧನೆಯನ್ನು ಮಾಡಬೇಕಾಗುತ್ತದೆ ನಮ್ಮ ಬೋಧನೆ ಉತ್ತಮವಾಗಿಲ್ಲದಿದ್ದಾಗ ಫಲಿತಾಂಶ ಉತ್ತಮವಾಗಿರುವುದಿಲ್ಲ ನಾವು ಸಾಧ್ಯವಾದಷ್ಟು ಉತ್ತಮ ಫಲಿತಾಂಶವನ್ನು ತರುವುದರ ಕಡೆಗೆ ಮನಸ್ಸು ಮಾಡಬೇಕಾಗಿದೆ.

**8.6.4: ಪ್ರತಿಫಲಿತ ಅನುಭವದ ಜೊತೆಯಲ್ಲಿ ಭಾವನೆಗಳು:**

ಫ್ರತಿಫಲಿತ ಎನ್ನುವುದು ಜನರ ಚಟುವಟಿಕೆಯಾಗಿದ್ದು ತಮ್ಮ ಅನುಭವವನ್ನು ಪುನಃ ಅದರ ಬಗ್ಗೆ ಯೋಚಿಸಿ ಮೌಲ್ಯಮಾಪನ ಮಾಡುವುದು. ಪ್ರತಿಫಲಿತ ದೃಷ್ಟಿಕೋನಕ್ಕೆ ಈ ಕೆಳಗಿನ ಅಂಶಗಳನ್ನು ಸೇರಿಸಿದ್ದಾರೆ. ಅನುಭವಕ್ಕೆ ಮರಳುವಿಕೆ ಪ್ರಮುಖ ಘಟನೆಗಳನ್ನು ನೆನೆಪಿಸಿಕೊಳ್ಳುವುದು ಅಥವಾ ವಿವರಿಸುವುದು. ಭಾವನೆಗಳೊಂದಿಗೆ ಸಂಪರ್ಕಿಸುವುದು.:– ಉಪಯುಕ್ತ ಭಾವನೆಗಳನ್ನು ಬಳಸಿ ಪ್ರತಿಬಂಧಕ ಭಾವನೆಗಳನ್ನು ತೆಗೆದು ಹಾಕುವುದು ಮೌಲ್ಯಮಾಪನದ ಅನುಭವಗಳು_ ಪರಿಕಲ್ಪನೆಯ ಚೌಕಟ್ಟಿನಡಿಯಲ್ಲಿ ಒಬ್ಬರ ಉದ್ದೇಶದ ಬೆಳಕಿನಲ್ಲಿ ಮರುಪರೀಕ್ಷೆಯ ಅನುಭವ ಮತ್ತು ಹೊಸ ಜ್ಞಾನವನ್ನು ಸಂಯೋಜಿಸುವುದು.

**8.6.5:– ಡೊನಾಲ್ಡ್ ಸ್ಟೋನ್ :–** ಈ ಕ್ರಿಯೆಯಲ್ಲಿ ಜ್ಞಾನ ಎಂಬ ಪದವನ್ನು ಪರಿಚಯಿಸಿದ್ದನ್ನು ನಾವು ಕಾರ್ಯಗಳು ಮತ್ತು ವಿಧಾನಗಳನ್ನು ಕೈಗೊಳ್ಳುವ ರೀತಿಯಲ್ಲಿ ಇವುಗಳು ಕಂಡು ಬರುತ್ತವೆ. ಈ ಲಘು ಜ್ಞಾನವನ್ನು ಸಂಶೋಧಕರ ಮತ್ತು ನಮ್ಮ  ಸ್ವಂತ ಪ್ರತಿಫಲಿತ ಅನುಭವದಿಂದ ವೃತ್ತಿಪರ ಜ್ಞಾನ ಮತ್ತು ಬೋಧನಾ ಅನುಭವಗಳನ್ನು ಹೆಚ್ಚಿಸಕೊಳ್ಳಲು ಶಿಕ್ಷಕರಿಗೆ ಅವಕಾಶ ನೀಡುತ್ತದೆ.

**ಪ್ರತಿಫಲಿತ ಅಭ್ಯಾಸ ನಿರ್ದಿಷ್ಟ ಗುಣಲಕ್ಷಣಗಳು:**

1. ಪ್ರತಿಫಲಿತ ಕ್ರಿಯೆ; ಕ್ರಿಯೆಯ ಪ್ರತಿಫಲಿತವು ಕ್ರಿಯೆಯ ಸಂದರ್ಭದಲ್ಲಿ ನಡೆಯುವ ಪ್ರತಿಬಿಂಬವನ್ನು ಸೂಚಿಸುತ್ತದೆ. ನಾವು ಏನು ಮಾಡುತ್ತಿರುತ್ತೇವೆ ಎಂಬುದನ್ನು ಕುರಿತು ಯೋಚಿಸುವುದು ಮತ್ತು ಅನ್ವಯಿಸುವುದು ಸಾಮರ್ಥ್ಯವನ್ನು ಪಡೆದುಕೊಳ್ಳುವುದು.
2. ಕ್ರಿಯೆಯ ಪ್ರತಿಫಲನ:– ಪ್ರತಿಫಲನವು ಮೊದಲು ಅನುಭವವನ್ನು ಪ್ರತಿಬಿಂಬಿಸುತ್ತದೆ. ಇದು ಪ್ರಾರಂಭವಾಗಿ ಪೂರ್ಣಗೊಂಡ ನಂತರ ಯಶಸ್ಸು ಮತ್ತು ವೈಫಲ್ಯಗಳನ್ನು ಸೂಚಿಸುತ್ತದೆ.
3. ಕ್ರಿಯೆಗಾಗಿ ಪ್ರತಿಫಲನ:– ಜ್ಞಾನ ಪ್ರತಿಬಿಂಬದಿಂದ ಪಡೆಯಲ್ಪಟ್ಟಾಗ ಕ್ರಿಯೆಗೆ ಪ್ರತಿಫಳನ ನಡೆಯುತ್ತದೆ. ಭವಿಷ್ಯದ ಕ್ರಿಯೆಯನ್ನು ಪ್ರಭಾವಿಸುತ್ತದೆ.

**ಚಟುವಟಿಕೆ 6 :**

ಅಂಕಣ ಎ ಯು ಪ್ರತಿ ಫಲಿತದ ಪ್ರಮುಖ ಅಂಶಗಳನ್ನು ಅಂಕಣ ಬಿ ಯು ಅದಕ್ಕೆ ವಿವರಣೆ ಮತ್ತು ಉದಾರಣೆಯನ್ನು ತೋರಿಸುತ್ತಿದೆ. ಅಂಕಣಗಳ ನಡುವಿನ ಹೊಂದಾಣಿಕೆ ಈ ರೀತಿ ಇದೆ.

| ಅಂಕಣ ಎ | ಅಂಕಣ ಬಿ |
|---|---|
| ಕ್ರಿಯೆಯಲ್ಲಿ ಪ್ರತಿಫಲನ | ಉತ್ತಮ ಅಭ್ಯಾಸ ಮತ್ತು ಸಂಶೋಧನೆಗಳ ಆಧಾರದ ಮೇಲೆ ಪಾಠದ ವಿನ್ಯಾಸದ ರಚನೆ |

| | |
|---|---|
| ಕ್ರಿಯೆಯ ಪ್ರತಿಫಲನ | ಪರೀಕ್ಷೆಯಲ್ಲಿ ವಿದ್ಯಾರ್ಥಿಗಳ ಉತ್ತರ ಪತ್ರಿಕೆಗಳ ಪರಿಶೀಲನೆ |
| ಕ್ರಿಯೆಗಾಗಿ ಪ್ರತಿಫಲನ | ಪ್ರಶ್ನೆಗಳ ಮೂಲಕ ಗ್ರಹಿಕೆಯನ್ನು ಪರೀಶಿಲೀಸಲಾಗುತ್ತದೆ ಮತ್ತು ಅದಕ್ಕೆ ತಕ್ಕಂತೆ ಪಾಠದ ವೇಗವನ್ನು ಸರಿ ಹೊಂದಿಸುತ್ತದೆ. |

## 8.6.6: ಝ್ಯುಚನೇರ್ ಮತ್ತು ಲಿಸ್ಟನ್‌ರವರ ಪ್ರತಿಫಲಿತ ಅಭ್ಯಾಸದ ಮಾದರಿ

ಝ್ಯುಚನೇರ್ ಮತ್ತು ಲಿಸ್ಟನ್‌ರವರ ಪ್ರತಿಫಲಿತ ಅಭ್ಯಾಸದ ಮಾದರಿ 5 ಅಂಶಗಳಿಗೆ ಮಹತ್ವ ನೀಡುತ್ತದೆ. ಪ್ರತಿಫಲಿತ ಅಭ್ಯಾಸಕಾರನಾಗಿ ಶಿಕ್ಷಕನ ಲಕ್ಷಣಗಳು ಈ ಕೆಳಕಂಡಂತಿವೆ.

1. ತರಗತಿಯ ಅಭ್ಯಾಸದ ಗೊಂದಲಗಳನ್ನು ಪರಿಹರಿಸುವ ಪ್ರಯತ್ನ ಪರೀಕ್ಷೆಗಳು ಮತ್ತು ಚೌಕಟ್ಟುಗಳು.
2. ಬೋಧನೆಯಲ್ಲಿ ತರುವ ಪ್ರಶ್ನೆಗಳು ಊಹೆಗಳು ಮತ್ತು ಮೌಲ್ಯಗಳು
3. ಬೋಧನೆಗೆ ಉತ್ತಮ ಸನ್ನಿವೇಶ
4. ಪಠ್ಯ ಕ್ರಮ ಅಭಿವೃದ್ದಿಯಲ್ಲಿ ಭಾಗವಹಿಸುವಿಕೆ.
5. ಅವನ ಸ್ವಂತ ವೃತ್ತಿಪರ ಅಭಿವೃದ್ಧಿಯ ಜವಬ್ದಾರಿಯನ್ನು ತೆಗೆದುಕೊಳ್ಳುವುದು.

ಝ್ಯುಚನೇರ್ ಮತ್ತು ಲಿಸ್ಟನ್‌ರವರು 1996:6 ಪರೀಕ್ಷಿಸಿದ ಮತ್ತು ಮುಖ್ಯ ಲಕ್ಷಣಗಳ ಬಗ್ಗೆ ಗಮನ ಹರಿಸಿದರು ಪ್ರತಿಫಲಿತ ಬೋಧನೆಯ ಸಂಪ್ರದಾಯಗಳು 5 ರೀತಿಯಲ್ಲಿದ್ದು ಬೋಧನೆ ಮತ್ತು ಶಿಕ್ಷಕರ ಶಿಕ್ಷಣದಲ್ಲಿ ಸುಧಾರಣಾ ಪ್ರಯತ್ನಗಳು ಗುರುತಿಸಲ್ಪಟ್ಟವು ಅವರ ಪ್ರಕಾರ ಪ್ರತಿಯೊಂದು ಸಂಪ್ರದಾಯಗಳು ಶಿಕ್ಷಕರ ಶಿಕ್ಷಣದ ವಿಷಯದಲ್ಲಿ ಒಂದು ನಿರ್ದಿಷ್ಟ ಮಹತ್ವವನ್ನು ಶಿಕ್ಷಕರ ಅಲೋಚನೆಯಲ್ಲಿ ಗುರುತಿಸಲು ಸಾಧ್ಯ.

ಶೈಕ್ಷಣಿಕ ಸಂಪ್ರದಾಯ : ಪಠ್ಯ ವಿಷಯವನ್ನು ಪ್ರತಿಬಿಂಬಿಸಿ ಹೇಗೆ ಕಲಿಸಲಾಗುತ್ತದೆ ಎಂಬುದರ ಬಗ್ಗೆ ಗಮನ ಹರಿಸಲಾಗುತ್ತದೆ. ವಿಷಯದ ಪ್ರಾತಿನಿಧ್ಯ ಮತ್ತು ವಿದ್ಯಾರ್ಥಿ ತಿಳುವಳಿಕೆಯನ್ನು ಉತ್ತೇಜಿಸಲಾಗುತ್ತದೆ.

ಸಾಮಾಜಿಕ ಸಾಮರ್ಥ್ಯದ ಸಂಪ್ರದಾಯವು ವೈಜ್ಞಾನಿಕವಾಗಿ ಬೇರೂರಿದ್ದ ವಿಧಾನದ ಬಳಕೆಯನ್ನು ಉಲ್ಲೇಖಿಸಿ ಭೋದನೆ ಮತ್ತು ಶಿಕ್ಷಕರು ಪ್ರತಿಫಲಿಸುವ ಮಾನದಂಡದ ಆಧಾರದ ಮೇಲೆ ಸಂಶೋಧನಾ ಕೆಲಸವನ್ನು ನಿರ್ಧಾರಿಸಲು ಸಾಧ್ಯ.

ಅಭಿವೃದ್ದಿ ಸಂಪ್ರದಾಯವು ವಿದ್ಯಾರ್ಥಿಗಳ ಹಿನ್ನಲ್ಲೆ ಆಸಕ್ತಿ, ಚಿಂತನರ ಮತ್ತು ಅಭಿವೃದ್ದಿಯನ್ನ ಆದಾರಿಸಿ ಅವರ ಶೈಕ್ಷಣಿಕ ಮಟ್ಟವನ್ನು ನಿರ್ಧರಿಸುವುದಾಗಿದೆ. ಸಾಮಾಜಿಕ ಪುನರ ರಚನಾ ಕಾರ ಸಂಪ್ರಾದಾಯವು ಸಾಮಾಜಿಕ ವಿಷಯಗಳಿಗೆ ಪ್ರತಫಲನವನ್ನು ಒತ್ತಿ ಹೇಳುತ್ತದೆ ಶಾಲಾ ಪರಿಸತಿಗಳಲ್ಲಿ ಸಮಾನತೆ ನ್ಯಾಯ ಮಾನವೀಯ ಸಂಬಂಧಗಳನ್ನು ಹೆಚ್ಚಿಸಿ ಅವುಗಳನ್ನು ವಿದ್ಯಾರ್ಥಿ ಜೀವನದಲ್ಲಿ ಅಳವಡಿಸಬೇಕು.

ಜನರಿಕ್ಸ್ ಸಂಪ್ರದಾಯವು ಸಾಮಾನ್ಯ ಪ್ರತಿಫಲಿತ ಶಿಕ್ಷಕರು ಏನು ಮಾಡುತ್ತಾರೆ ಎಂಬುದನ್ನು ಪ್ರತಿನಿಧಿಸುತ್ತದೆ. ಚಿಂತನೆಯ ಗುಣಮಟ್ಟದ ಕಡೆಗೆ ಗಮನ ಕೊಟ್ಟು ಒಳ್ಳೆಯ ಬೋಧನೆಯ ಮೂಲಕ ವಿದ್ಯಾರ್ಥಿಗಳ ಚಿಂತನೆ ಮತ್ತು ತಿಳುವಳಿಕೆಯನ್ನು ಹೆಚ್ಚಿಸುತ್ತದೆ.

ಶಿಕ್ಷಕರ ಗುರಿಗಳು, ಮೌಲ್ಯಗಗಳನ್ನು ಊಹಿಸದಿದ್ದರೆ ಅವರ ಕೆಲಸ ಮತ್ತು ಅವರ ಕಲಿಸಿದ ಸಂದರ್ಭವನ್ನು ಪರೀಕ್ಷೀಸಲಿಲ್ಲವೆಂದರೆ ಅವರು ಉತ್ತಮ ಪ್ರತಿಫಲಿತ ಬೋಧನೆಯಲ್ಲಿ ನಿರತರಾಗಿರಲು ಸಾದ್ಯವಿಲ್ಲ.

ಪ್ರತಿಫಲಿತ ಬೋಧನೆಯು ಅಭಿಪ್ರಾಯ ಬೋಧನಾ ಸಂದರ್ಭವನ್ನು ಕುರಿತಂತೆ ವಿಮರ್ಶಾತ್ಮಕ ಪ್ರಶ್ನೆಗಳನ್ನು ಒಳಗೊಂಡಿದೆ. ಉತ್ತಮ ಪ್ರತಿಫಲಿತ ಬೋಧನೆಯು ಎಲ್ಲಾ ಉನ್ನತ ವಿದ್ಯಾರ್ಥಿಗಳಿಗೆ ಬೋಧಿಸಲು ಬದ್ದರಾಗಿರಬೇಕು ಇದು ಪ್ರಜಾ ಪ್ರಭುತ್ವ ಮತ್ತು ಸ್ವಯಂ ವಿಮರ್ಶೆ ಒಳ್ಳಗಾಗುವಂತಿರಬೇಕು.

## 8.6.7 ಪ್ರತಿಫಲಿತದ ವಿಧಾನಗಳು

ನೀವು ನಿರ್ದಿಷ್ಟ ಘಟನೆ ಅಥವಾ ಸಂದರ್ಭವನ್ನು ದಾಖಲಿಸಲು ಬಯಸುತ್ತೀರಿ ಏಕೆಂದರೆ ಅದು ನಿಮಗೆ ವಿಮರ್ಶಾತ್ಮಕ ಅಥವ ಮಹತ್ವದಾಗಿರುತ್ತದೆ ನೀವು ಘಟನೆಯನ್ನು ದಾಖಲಿಸಿ ನಿಮ್ಮ ಪಾತ್ರ ಫಲಿತಾಂಶ ಕ್ರಿಯೆ ಮತ್ತು ಸಂದರ್ಭದ ಪ್ರತಿಫಲನವನ್ನು ದಾಖಲಿಸಬಹುದು ಅವು ಈ ಕೆಳಕಂಡಂತಿವೆ.

ನಿರೂಪಣೆ:– ವ್ಯಕ್ತಿ ಬರೆದ ಅನುಭವ ಅಥವಾ ಘಟನೆಯ ಕತೆಯಾಗಿದ್ದು ವೈಯಕ್ತಿಕ ಮತ್ತು ವೃತ್ತಿಪರ ನಡುವಿನ ಕೊಂಡಿಗಳನ್ನು ಉಂಟುಮಾಡಲು ಸಾಧ್ಯ.

ಪ್ರತಿಫಲಿತ ಪುಸ್ತಕ:–ಘಟನೆ ಅಥವಾ ಅನುಭವದ ಬಗ್ಗೆ ತಿಳಿಸುವ ಒಂದು ಪ್ರಕ್ರಿಯೆ ಇತರ ಅನುಭವಗಳೊಂದಿಗೆ ಮತ್ತು ತನ್ನ ಅನುಭವದೊಂದಿಗೆ ಸಂಪರ್ಕ ಮಾಡುವುದಾಗಿದೆ ವಿಭಿನ್ನ ಪರಿಸ್ಥಿತಿಗಳಿಂದ ಕಲಿತುಕೊಂಡು ಮುಂದೆ ಏನು ಮಾಡಬೇಕೆಂಬುದನ್ನು ದಾಖಲಿಸುತ್ತದೆ.

**ಚಟುವಟಿಕೆ 7**

ಪ್ರತಿಫಲಿತ ಅಭ್ಯಾಸ ಕಾರನಾಗಲು ಎಂಬ ವಿಷಯದ ಬಗ್ಗೆ ಒಂದು ಪ್ರಬಂಧವನ್ನು ಬರೆಯಿರಿ.

(15 ರಿಂದ 20 ವಾಕ್ಯಗಳು)

**ಉಪಸಂಹಾರ:**

ಈ ಘಟಕದಲ್ಲಿ ಪ್ರಾಥಮಿಕ ಉನ್ನತ ಪ್ರಾಥಮಿಕ ಮತ್ತು ಪೂರ್ವ ಪ್ರಾಥಮಿಕ ಶಿಕ್ಷಣದ ಶೈಕ್ಷಣಿಕ ವಿಷಯಗಳು ಮತ್ತು ಕಾಳಜಿಗಳನ್ನು ಅಧ್ಯಯನ ಮಾಡಿದ್ದೇವೆ.

ಶಾಲಾ ಶಿಕ್ಷಣಕ್ಕಾಗಿ ಎನ್,ಸಿ,ಎಫ್ 2005 ರ ಪ್ರಮುಖ ಕ್ಷೇತ್ರವನ್ನು ತಿಳಿಸಲಾಗಿದೆ ನಾವು ಇಲ್ಲಿ ಅದ್ಯಯನ ಮಾಡಿದ ಮುಖ್ಯ ಗಮನವು ವಿಶೇಷವಾಗಿ ಶಿಕ್ಷಕರ ತರಬೇತಿಗೆ ಸಂಬಂಧಿಸಿದೆ. ಸೇವಾ ಪೂರ್ವ ಮತ್ತು ಸೇವಾವಧಿ ಹಂತಗಳಲ್ಲಿ ಅಗತ್ಯವಾದ ಸಾಂಸ್ಥಿಕ ಮೂಲ ಸೌಕರ್ಯವನ್ನು, ಪ್ರಾಥಮಿಕ ಹಂತದಲ್ಲಿ ಶಿಕ್ಷಕರ ತರಬೇತಿ ಮತ್ತು ನೇಮಕಾತಿಗೆ ಸಂಬಂದಿಸಿದಂತೆ ಎನ್,ಸಿ,ಎಫ್.ಟಿ ಇ 2009 – 10 ರ ಚೌಕಟ್ಟಿನ ಪ್ರಮುಖ ಅಂಶಗಳ ತಿಳುವಳಿಜಕೆಯನ್ನು ಪಡೆದುಕೊಂಡು ಪ್ರಾಥಮಿಕ

ಶಿಕ್ಷಣಕ್ಕಾಗಿ ಮತ್ತು ಪ್ರಾಥಮಿಕ ಹಂತಕ್ಕೆ ತಾರ್ಕಿಕತೆ,. ಕೋರ್ಸ್ ತರಬೇತಿ ಮೌಲ್ಯಮಾಪನ ಮುಂತಾದ ವಿಷಯಗಳ ಬಗ್ಗೆ ತಿಳಿದುಕೊಂಡೆವು.

ಅಸ್ಥಿತ್ವದಲ್ಲಿರುವ ಮಾದರಿಗಳನ್ನು ಉನ್ನತೀಕರಿಸುವುದು ಮತ್ತು ಪದವಿ ಮಟ್ಟದಲ್ಲಿನ ಹೊಸ ಉಪಕ್ರಮಗಳು, ಸಮಗ್ರ ಮಾದರಿಗಳಬಗ್ಗೆ ತಿಳಿದುಕೊಂಡು ಪ್ರತಿಫಲಿತ ಅಭ್ಯಾಸದ ಅರ್ಥ ಮತ್ತು ವಿಧಾನಗಳ ಬಗ್ಗೆ ನಾವು ಅಧ್ಯಯನ ಮಾಡಿದ್ದೇವೆ.

ಶಿಕ್ಷಕರ ಅರ್ಹತಾ ಪರೀಕ್ಷೆ ಬೋಧನೆಗೆ ಪೂರ್ವ ಅವಶ್ಯವಾಗಿದೆ.

# ಘಟಕ ೯ ಅವಕಾಶವಂಚಿತ ಮಕ್ಕಳ ಶಿಕ್ಷಣ

ಸಂರಚನೆ

*9.0* ಪರಿಚಯ

*9.1* ಕಲಿಕಾ ಉದ್ದೇಶಗಳು

*9.2* ಶಾಲಾ ಲಭ್ಯತೆ ಮತ್ತು ಹಾಜರಾತಿ ಸಮಸ್ಯೆಗಳು

*9.2.1* ಪರಿಶಿಷ್ಟ ಜಾತಿ ಮಕ್ಕಳ ಶಿಕ್ಷಣ

*9.2.2* ಪರಿಶಿಷ್ಟ ಜಾತಿ ಮಕ್ಕಳ ಶಿಕ್ಷಣ

*9.2.3* ವಿಶೇಷ ಅಗತ್ಯವುಳ್ಳ ಮಕ್ಕಳು *(ಅಫಾಖಓ)*

*9.2.4* ಭೌಗೋಳಿಕವಾಗಿ ದೂರದ ಪ್ರದೇಶದಲ್ಲಿನ ಮಕ್ಕಳ ಶಿಕ್ಷಣ

*9.2.5* ನಗರಪ್ರದೇಶದಲ್ಲಿನ ಅವಕಾಶವಂಚಿತ ಮಕ್ಕಳು

*9.2.6* ಕೆಲಸಕ್ಕೆ ಹೋಗುವ ಮಕ್ಕಳು

*9.2.7* ಅಲ್ಪಸಂಖ್ಯಾತ ಮಕ್ಕಳ ಶಿಕ್ಷಣ

*9.3* ಶೈಕ್ಷಣಿಕ ಬೆಂಬಲ ವ್ಯವಸ್ಥೆ

*9.4* ಸಮಗ್ರ ಶಿಕ್ಷಣ

*9.4.1* ಅಂತರಾಷ್ಟ್ರೀಯ ಸನ್ನಿವೇಶ

*9.4.2* ಸಮಗ್ರ ಶಿಕ್ಷಣ ದ ಅನುಕೂಲಗಳು

*9.4.3* ಸಮಗ್ರವಾದ ಶಾಲೆ ಮತ್ತು ತರಗತಿ

*9.5* ಶಾಲೆಯಲ್ಲಿ ಮಕ್ಕಳ ಹಕ್ಕಯುಗಳ ರಕ್ಷಣೆ

*9.6* ಉಪ ಸಂಹಾರ

*9.7* ಓದಲು ಸಲಹೆ ಮತ್ತು ಆಕರಗಳು

*9.8* ಘಟಕದ ಕೊನೆಯಲ್ಲಿನ ಅಭ್ಯಾಸಗಳು

## 9.0 ಪರಿಚಯ

ಶಾಲಾ ಶಿಕ್ಷಣದಲ್ಲಿ ಸಮಾನತೆಯು ಬಹಳ ಪ್ರಮುಖ ವಿಷಯವಾಗಿದೆ. ಭಾರತೀಯ ಶಾಲೆಗಳಿಗೆ ಬರುವ ಮಕ್ಕಳ ಮನೆಯ ಹಿನ್ನೆಲೆಯಲ್ಲಿ ಮಹತ್ತರವಾದ ಬದಲಾವಣೆಯಿದೆ. ಒಂದು ಕಡೆ ಮನೆಯಲ್ಲಿ ಅಂತರ್ಜಾಲ ಸಂಪರ್ಕ ಹೊಂದಿರುವ ಮಕ್ಕಳನ್ನು ನಾವು ಹೊಂದಿದ್ದೇವೆ. ಮತ್ತೊಂದು ಕಡೆ ಓದಲು ದಿನಪತ್ರಿಕೆಯೂ ಸಹ ಸಿಗದಂತಹ ಮಕ್ಕಳನ್ನು ಸಹ ನಾವು ಹೊಂದಿದ್ದೇವೆ. ಇನ್ನೊಂದೆಡೆ ಶೈಕ್ಷಣಿಕ ಬೆಳವಣಿಗೆಯಲ್ಲಿ ತಮ್ಮ ಮಕ್ಕಳಿಗೆ ಸಹಾಯ ಮಾಡಬಲ್ಲ ವಿಧ್ಯಾವಂತ ಪೋಷಕರನ್ನು ಹೊಂದಿರುವಂತಹ ಮಕ್ಕಳನ್ನು ಸಹ ನಾವು ಹೊಂದಿದ್ದೇವೆ. ಹೀಗಿರುವಾಗ ಮತ್ತೊಂದೆಡೆ ಸಂಪೂರ್ಣ ಅವಿಧ್ಯಾವಂತರಾಗಿರುವ ಹಾಗು ಶಿಕ್ಷಣದ ಸೌಲಭ್ಯಗಳ ಬಗ್ಗೆ ಅರಿವು ಹೊಂದಿದಂತಹ ಪೋಷಕರನ್ನು ಹೊಂದಿರುವ ಮಕ್ಕಳನ್ನು ಸಹ ನಾವು ಹೊಂದಿದ್ದೇವೆ. ಸಂಪ್ರದಾಯಿಕವಾಗಿ ಕೆಲವು ಸಮುದಾಯಗಳು ಶಿಕ್ಷಣದ ಎಲ್ಲಾ ಸೌಲಭ್ಯಗಳನ್ನು ಪಡೆದುಕೊಂಡಿದ್ದರೆ, ಮತ್ತೆ ಕೆಲವು ಸಮುದಾಯಗಳು ಇದರಿಂದ ದೂರ ಉಳಿದಿವೆ. ಈ ಅಂತರವನ್ನು ಕಡಿಮೆ ಮಾಡುವುದೇ ಸವಾಲಿನ ವಿಷಯವಾಗಿದೆ.

ಈ ಘಟಕವು ಮೊದಲ ಜನಾಂಗದ ಕಲಿಕಾರ್ಥಿಗಳಿಗೆ/ ವಿಧ್ಯಾರ್ಥಿಗಳು ಶಾಲಾ ಶಿಕ್ಷಣದ ಪ್ರಯೋಜನ ಪಡೆಯುವಂತೆ ಮತ್ತು ಸಕಾರಾತ್ಮಕವಾದ ತಾರತಮ್ಯಗಳ ಅಭ್ಯಾಸಗಳನ್ನು ತರಗತಿ ಕೋಣೆಯಲ್ಲಿ ಪ್ರೋತ್ಸಾಹಿಸಲು ಪ್ರಯತ್ನಿಸುತ್ತದೆ.

## 9.1 ಕಲಿಕಾ ಉದ್ದೇಶಗಳು

ಈ ಘಟಕದಲ್ಲಿ ಅಧ್ಯಯನ ಮಾಡಿದ ನಂತರ ನೀವುಗಳು ಈ ಕೆಳಕಂಡ ಅಂಶಗಳಲ್ಲಿ ಸಾಮರ್ಥ್ಯರಾಗುತ್ತೀರಿ.

೧. ಶಾಲೆಗ ಬರುವ ವಿಧ್ಯಾರ್ಥಿಗಳಲ್ಲಿನ ವಿವಿಧತೆಗಳನ್ನು ಅರ್ಥೈಸಿಕೊಳ್ಳುವುದು.

೨. ಸಮಾಜದಲ್ಲಿ ಅವಕಾಶ ವಂಚಿತ ಸಮುದಾಯಗಳ ಶೈಕ್ಷಣಿಕ ಸಮಸ್ಯೆಗಳನ್ನು ದೃಶ್ಯೀಕರಿಸುವುದು.

೩. ಮೊದಲ ಜನಾಂಗದ ಕಲಿಕಾರ್ಥಿಗಳಿಗೆ ಶಾಲಾ ವಿಷಯವನ್ನು ಬೋಧಿಸಲು ಕೌಶಗಳನ್ನು ಹೊಂದುವುದು.

೪. ಶಾಲಾ ಮಕ್ಕಳ ಲಭ್ಯತೆ ಮತ್ತು ಹಾಜರಾತಿಯನ್ನು ಹೆಚ್ಚಿಸಲು ವಿವಿಧ ವಿಧಾನಗಳನ್ನು ಹುಡುಕುವುದು.

೫. ಶೈಕ್ಷಣಿಕ ಅವಕಾಶಗಳಲ್ಲಿ ಸಮಾನತೆ ಸಾಧಿಸಲು ವಿವಿಧ ಕಾರ್ಯತಂತ್ರಗಳನ್ನು ಅಳವಡಿಸಿಕೊಳ್ಳುವುದು

## 9.2 ಲಭ್ಯತೆ ಮತ್ತು ಹಾಜರಾತಿ ಸಮಸ್ಯೆ

ಭಾರತದ ಸಂವಿಧಾನದ ಪ್ರಕಾರ ಸರ್ಕಾರವು ೬-೧೪ ವರ್ಷ ವಯಸ್ಸಿನ ಎಲ್ಲಾ ಮಕ್ಕಳಿಗೂ ಉಚಿತ ಮತ್ತು ಕಡ್ಡಾಯ ಶಿಕ್ಷಣ ಒದಗಿಸಲು ಬದ್ದವಾಗಿದೆ. ಈ ಗುರಿಯನ್ನು ಸಾಧಿಸಲು ಸ್ವಾತಂತ್ರ್ಯಾನಂತರದ ಭಾರತದಲ್ಲಿ ಹಲವು ರೀತಿಯಲ್ಲಿ ಶ್ರಮವಹಿಸಲಾಗಿದ. ಪ್ರತೀ ಮಗುವೂ ತನ್ನ ಸಮೀಪದಲ್ಲಿ ಒಂದು ಶಾಲೆಯನ್ನು ಹೊಂದಲು ಸಾಧ್ಯವಾಗುವಂತೆ ದೇಶಾದ್ಯಂತ ಹಲವು ಖಾಸಗಿ ಶಾಲೆಗಳು ತೆರೆದಿವೆ. ಹಳ್ಳಿಗಳಲ್ಲಿಯೂ ಸಹ ಶೈಕ್ಷಣಿಕ ಸೌಲಭ್ಯಗಳನ್ನು ಒದಗಿಸುವ ನಿಟ್ಟಿನಲ್ಲಿ ಹಲವು ಸ್ಥಳಗಳಲ್ಲಿ ಏಕೋಪಾಧ್ಯಾಯ ಶಾಲೆಗಳನ್ನು ಪ್ರಾರಂಭಿಸಲಾಗಿದೆ. ಬೋಧನಾ ಸಾಮಗ್ರಿಗಳು, ಮಧ್ಯಾನ್ಹದ ಉಪಹಾರ, ಶಾಲಾ ಸಮವಸ್ತ್ರ ಹಂಚಿಕೆ, ಬುಡಕಟ್ಟು ಜನಾಂಗದ ಹೆಣ್ಣು ಮಕ್ಕಳ ಶಿಕ್ಷಣವನ್ನು ಪ್ರೋತ್ಸಾಹಿಸುವಂತಹ ಹಲವು ಯೋಜನೆಗಳನ್ನು ಅನುಷ್ಟಾನಗೊಳಿಸಲಾಗಿದೆ. ೨೦ನೇ ಶತಮಾನದ ಕಳೆದ ೧೦ ದಶಕದಲ್ಲಿ ರಾಷ್ಟ್ರಮಟ್ಟದಲ್ಲಿ ಹಣ್ಣು ಮಕ್ಕಳ ಸಾಕ್ಷರತೆಯಯ ಬಹಳ ಕಡಿಮೆ ಇರುವ ಜಿಲ್ಲೆಗಳಿಗಾಗಿ ಬಹಳ ನಿರೀಕ್ಷೆಯ "ಜಿಲ್ಲಾ ಪ್ರಾಥಮಿಕ ಶಿಕ್ಷಣ ಕಾರ್ಯಕ್ರಮ" ವನ್ನು ಭಾರತ ಸರ್ಕಾರದ ಮಾನವ ಸಂಪನ್ಮೂಲ ಅಭಿವೃದ್ದಿ ಸಚಿವಾಲಯವು ಅನುಷ್ಟಾನಗೊಳಿಸಿತು.

ಈ ಕಾರ್ಯಕ್ರಮದಲ್ಲಿ  ಶಾಲಾ ಲಭ್ಯತೆ ಮತ್ತು ಹಾಜರಾತಿ ಹೆಚ್ಚಿಸಲಿಕ್ಕಾಗಿ ಎಲ್ಲಾ ರೀತಿಯ ಶ್ರಮವಹಿಸಲಾಯಿತು. ಈ ಕಾರ್ಯವು ಸರ್ವ ಶಿಕ್ಷಣ ಅಭಿಯಾನದ ಮೂಲಕ ವ್ಯಾಪಕವಾಗಿ ಮುಂದುವರೆಯಿತು. ಈ ಎರಡೂ ಕಾರ್ಯಕ್ರಮಗಳು ಶಾಲಾ ದಾಖಲಾತಿ ಮತ್ತು  ಶಾಲಾ ಶಿಕ್ಷಣದಲ್ಲಿ ಮಕ್ಕಳ ಮುಂದುವರಿಕೆಯಲ್ಲಿ ಯಶಃ ಕಂಡವು . ಹೀಗಿದ್ದರೂ ಶೇ.೧೦೦ ರಷ್ಟು ಶಾಲಾ ದಾಖಲಾತಿ ಮತ್ತು ಶಾಲಾ ಲಭ್ಯತೆ ಕನಸಾಗೇ ಉಳಿದಿದೆ. ಈ ಕನಸನ್ನು ನನಸಾಗಿಸುವುದು ಒಂದು ಸವಾಲಾಗಿದೆ ಮತ್ತು ದೇಶದಲ್ಲಿನ ಪ್ರಾಥಮಿಕ ಶಿಕ್ಷಕರು ಇದರಲ್ಲಿ ಮಹತ್ತರವಾದ ಪಾತ್ರ ವಹಿಸುತ್ತಾರೆ

### 9.2.1 ಪರಿಶಿಷ್ಟ ಜಾತಿ ಮಕ್ಕಳ ಶಿಕ್ಷಣ

ಬಹಳ ಹಿಂದಿನ ಕಾಲದಿಂದಲೂ ನಡೆದುಕೊಂಡು ಬಂದಿರುವ ಜಾತಿ ಪದ್ಧತಿಯಿಂದಾಗಿ ಕೆಲವು ನಿರ್ಧಿಷ್ಟ ಗುಂಪಿನ ಜನರು ಅಸ್ಪೃಶ್ಯರೆಂದು  ವಿಂಗಡಣೆಗೊಂಡಿದ್ದರು. ಮನೆಗೆಲಸಗಳಲ್ಲಿ ತೊಡಗಿಕೊಳ್ಳುತ್ತಿದ್ದ ಈ ಗುಂಪಿನ ಜನರು ಶಿಕ್ಷಣ ವ್ಯವಸ್ಥೆಯಿಂದ ದೂರ ಉಳಿದಿದ್ದರು. ಸ್ವಾತಂತ್ರ್ಯಾನಂತರ ಅಸ್ಪೃಶ್ಯತೆ ನಿಷೇದವಾಯಿತು.  ಹೀಗಿದ್ದರೂ ಈ ಗುಂಪಿನ ಜನರು ತಮ್ಮ ಕೊರತೆಗಳನ್ನು ನೀಗಿಸಿಕೊಳ್ಳಲು ಹೆಚ್ಚುವರಿ ಸೌಲಭ್ಯಗಳನ್ನು ಪಡೆಯಲು ಸಾಧ್ಯವಾಗುವಂತೆ  ಪರಿಶಿಷ್ಟ ಜಾತಿಯು ವಿಂಗಡಣೆಯಾಯಿತು. ಪರಿಶಿಷ್ಟ ಜಾತಿಗೆ ಒಳಪಡುವ ಜನರಿಗೆ ಸಂವಿಧಾನದಲ್ಲಿ  ಖಚಿತವಾದ ಹಕ್ಕುಗಳಿವೆ. ಕೇವಲ ಉಚಿತ ಶಿಕ್ಷಣ ನೀಡುವುದಷ್ಟೇ ಅಲ್ಲದೇ ದೊಡ್ಡ ದೊಡ್ಡ ಉನ್ನತ ಶಿಕ್ಷಣ ಸಂಸ್ಥೆಗಳಲ್ಲಿ ಮೀಸಲಾತಿಯನ್ನು ಒದಗಿಸಲಾಗುತ್ತಿದೆ. ಈ ರೀತಿಯ ಬದಲಾವಣೆಯು ಶಾಲೆ ಕಾಲೇಜುಗಳಲ್ಲಿ ಪರಿಶಿಷ್ಟ ಜಾತಿಯ ಮಕ್ಕಳ ಸಂಖ್ಯೆಯನ್ನು ಹೆಚ್ಚಿಸುತ್ತದೆ. ಇದರಲಿ ಬಹುತೇಕ ವಿಧ್ಯಾರ್ಥಿಗಳು ತಮ್ಮ ಉನ್ನತ ಶಿಕ್ಷಣವನ್ನು ಪೂರ್ಣಗೊಳಿಸಿಕೊಂಡಿದ್ದಾರೆ.

ಈ ೬೦ ವರ್ಷಗಳ್ಲಲಿ ಪರಿಶಿಷ್ಟ ಜಾತಿಯ  ಸಮುದಾಯದ ಜನರಲ್ಲಿನ ಸಾಕ್ಷರತಾ ಪ್ರಮಾಣ ಗಣನೀಯವಾಗಿ ಹೆಚ್ಚಾಗಿರುವುದನ್ನಯ ಕಾಣಬಹುದು. ಹೀಗಿದ್ದರೂ  ಈ ಸಮಸ್ಯೆಗಳನ್ನು ಕೂಲಂಕುಶವಾಗಿ ತನಿಖೆ ಮಾಡಬೇಕು ಹಾಗು ಇದನ್ನು ಸಂಪೂರ್ಣವಾಗಿ ನಿವಾರಿಸಲು ಅಗತ್ಯವಾದ ಕಾರ್ಯಯೋಜನೆ ರಚಿಸಬೇಕು.

ತರಗತಿ ಕೋಣೆಗಳಲ್ಲಿ ಪರಿಶಿಷ್ಟ ಜಾತಿಯ ಮಕ್ಕಳಿಗೆ ಪ್ರತ್ಯೇಕವಾದ ಆಸನ ವ್ಯವಸ್ಥೆ ಮಾಡುವುದು ಕೆಲವು ಶಾಲೆಗಳಲ್ಲಿ ಕೆಲವು ಸಮಯದಲ್ಲಿ ನಡೆಯುತ್ತದೆ. ಮೇಲ್ವರ್ಗದ ವಿಧ್ಯಾರ್ಥಿಗಳಿಂದ ವಾಗ್ದಂಡನೆಗೆ ಒಳಗಾಗುವ ಸಂದರ್ಭಗಳು ಸಹ ಇವೆ. ಉದಾಹರಣೆಗೆ, ಮಕ್ಕಳು ಶಾಲೆಗೆ ತಡವಾಗಿ ಬರುವುದಕ್ಕೆ ಬಯ್ಯುವುದು, ತರಗತಿ ಕೋಣೆಯಲ್ಲಿ ಪರಿಶಿಷ್ಟ ಜಾತಿಯ ಮಕ್ಕಳ ಕಡೆಗೆ ಗಮನ ನೀಡದಿರುವುದು, ಅವರ ಪ್ರಶ್ನೆಗಳಿಗೆ ಉತ್ತರಿಸದಿರುವುದು–ಹಾಗು ಪ್ರಶ್ನೆ ಕೇಳದಿರುವಂತೆ ಮಾಡುವುದು ಸಮಯ ಸಮಕ್ಕೆ ವರದಿಯಾಗುತ್ತಿದೆ. ಪರಿಶಿಷ್ಟ ಜಾತಿಯ ಮಕ್ಕಳನ್ನು ಸ್ವಾತಂತ್ರ್ಯ ದಿನಾಚರಣೆಮ ಗಣರಾಜ್ಯೋತ್ಸವ ದಿನ ಅಥವಾ ಶಾಲಾ ಪ್ರಾಥನಾ ಅಧಿವೇಶನದಲ್ಲಿ ಭಾಗವಹಿಸದಂತೆ ಮಾಡುವುದು ಸುಲಭವಾಗಿ ಪತ್ತೆ ಮಾಡಲು ಸಾಧ್ಯವಿಲ್ಲ. ಪರಿಶಿಷ್ಟ ಜಾತಿಯ ಮಕ್ಕಳ ಬಗ್ಗೆ ಅವಹೇಳನಕಾರಿ ಹೇಳಿಕೆ ನೀಡುವುದು, ಶೈಕ್ಷಣಿಕ ಕೆಲಸದಲ್ಲಿ ಅವರನ್ನು ತೊಡಗಿಸುವುದನ್ನು ಅಸಾಧ್ಯವಾಗಿಸುವುದು, ಕುಡಿಯುವ ನೀರು ಸೇರಿದಂತೆ ಹಲವು ಶಾಲಾ ಸೌಲಭ್ಯಗಳನ್ನು ಬಳಸುವುದಕ್ಕೆ ತಡೆನೀಡುವಂತಹ ಹಲವು ವಿಷಯಗಳು ವಿವಿಧ ಕಡೆಯಿಂದ ಕೇಳಿಬರುತ್ತವೆ.

ಇದರ ಜೊತೆಗೆ ಪರಿಶಿಷ್ಟ ಜಾತಿಯ ಮಕ್ಕಳು ಕಸ ಗುಡಿಸುವುದು, ಶೌಚಾಲಯ ಸ್ವಚ್ಛಗೊಳಿಸುವಂತಹ ಶಾಲೆಯ ಕೆಲಸಗಳನ್ನು ಮಾಡಲು ನೇಮಕವಾಗುತ್ತಾರೆ.ಮಕ್ಕಳು ಗುಂಪಿಗಳಲ್ಲಿ ಆಟ ಆಡುವಾಗ ಪರಿಶಿಷ್ಟ ಜಾತಿಯ ಮಕ್ಕಳನ್ನು ಗುಂಪಿನಲ್ಲಿ ಸೇರಿಸಿಕೊಳ್ಳದಿರುವುದು ನಡೆಯುತ್ತದೆ. ಇದರ ಫಲಿತಾಂಶವಾಗಿ ಪರಿಶಿಷ್ಟ ಜಾತಿಯ ಮಕ್ಕಳು ತಮ್ಮ ವಸತಿ ಪ್ರದೇಶಕ್ಕೆ ತೆರಳಿ ಶಾಲೆಗೆ ಬರದ ತಮ್ಮ ನೆರೆಹೊರೆಯ ಮಕ್ಕಳೊಡನೆ ಆಟ ಆಡುತ್ತಾರೆ.

ಪರಿಶಿಷ್ಟ ಜಾತಿಯ ಮಕ್ಕಳಿಗೆ ಸಂಬಂಧಿಸಿದ ಮಧ್ಯವರ್ತನೆಗಳು ಈ ಮಕ್ಕಳ ಮೂಲ ಅವಶ್ಯಕತೆಗಳನ್ನು ಈಡೇರಿಸುವಂತಹ ಸೂಕ್ಷ್ಮ ಯೋಜನೆಗಳ ಆಧಾರದ ಮೇಲೆ ಅನುಷ್ಟಾನಗೊಳ್ಳಬೇಕು.

ಶಾಲೆಯಲ್ಲಿ ಪರಿಶಿಷ್ಟ ಜಾತಿಯ ಮಕ್ಕಳ ಒಳಗೊಳ್ಳಿಸುವಿಕೆಗೆ ಕೆಲವು ಸಲಹೆಗಳು:

1. ಶಾಲಾ ಪರಿಸರದಲ್ಲಿ ಶಿಕ್ಷಕರು ಮತ್ತಿ ಶಾಲಾ ಸಿಬ್ಬಂದಿಗಳ ನಡುವಿನ ವರ್ತನೆಗಳಿಗೆ ನಿಯಮಗಳನ್ನು ರಚಿಸುವುದು

2. ಶಾಲೆಯ ಶಿಕ್ಷಕರು ಅಥವಾ ಸಿಬ್ಬಂದಿ ಅಥವಾ ವಿಧ್ಯಾರ್ಥಿಗಳಿಂದ ನಿರ್ಧಿಷ್ಟ ಸಂದರ್ಭದಲ್ಲಿ ಉಂಟಾಗುವ ತಾರತಮ್ಯವನ್ನು ಸಮಯಕ್ಕೆ ಸರಿಯಾಗಿ ಗುರುತಿಸಿ ಕ್ರಮ ಕೈಗೊಳ್ಳುವುದು. ಹಲವು ಮಾದರಿಯ ತಾರತಮ್ಯಗಳು ಗಮನಕ್ಕೆ ಬಾರದಂತೆ ಹಾಗು

ಸವಾಲುಗಳಿಂದ ನಡೆಯುವಾಗ ಅವುಗಳನ್ನು ಗುರುತಿಸುವುದು ಸುಲಭದ ಕೆಲಸವಲ್ಲ.

3. ಮಕ್ಕಳ ಅಭಿಪ್ರಾಯಗಳನ್ನು ಕೇಳಲು ಮಾರ್ಗಗಳನ್ನು ಗುರುತಿಸುವುದು.

4. ಪ್ರಾರಂಭಿಕ ಹಂತವಾಗಿ ಶಾಲೆಗಳಲ್ಲಿ ತಾರತಮ್ಯಗಳ ಬಗ್ಗೆ ವರದಿ ಮಾಡಲು ಸಾಧ್ಯವಾಗುವಂತಹ ವ್ಯವಸ್ಥೆ ರಚಿಸುವುದು. ತಾರತಮ್ಯಗಳನ್ನು ಶಾಲಾ ಹಂತದಲ್ಲಿಯೇ ಸರಿಪಡಿಸಲು ಸಾಧ್ಯವಾಗುವಂತೆ ಆಗಾಗ್ಗೆ ಶಾಲೆಯ ದೂರು ಪೆಟ್ಟಿಗೆಯನ್ನು ಪರಿಶೀಲಿಸುವುದು.

5.ಮಕ್ಕಳು ತರಗತಿ ಕೋಣೆಯಲ್ಲಿ ಜಾತಿ, ಸಮುದಾಯ ಅಥವಾ ಲಿಂಗದ ಆಧಾರದಮೇಲೆ ಆಸನ ವ್ಯವಸ್ಥೆ ಆಗದಂತೆ ನೋಡಿಕೊಳ್ಳಲು ತರಗತಿ ಕೋಣೆಯ ನಿಯಮಗಳನ್ನು ರಚಿಸುವುದು. ಜಾತಿ, ಲಿಂಗ ಮುಂತಾದ ಆಧಾರದ ಮೇಲೆ ಮಕ್ಕಳನ್ನು ನಿರ್ವಹಿಸುವುದಕ್ಕಿಂತ ಸುಮಾರ ೯೦ ರ ದಶಕದಲ್ಲಿ ಕರ್ನಾಟಕದಲ್ಲಿ ನಲಿಕಲಿ ವಿಧಾನವ್ನನು ಅನುಸರಿಸಲಾಗಿದೆ. ಈ ವಿಧಾನದಲ್ಲಿ ಎಲ್ಲಾ ಮಕ್ಕಳು ಒಂದೇ ಗುಂಪಿನಲ್ಲಿ ಕಲಿಕಾ ಹಂತದ ಆಧಾರದಲ್ಲಿ ಕುಳಿತು ಕಲಿಯಲು ಅವಕಾಶ ನೀಡಲಾಗಿದೆ. ಇದು ಕೇವಲ ಸಾಮಾಜಿಕ ನಿರ್ಬಂಧಗಳನ್ನು ಅಳಿಸುವುದಷ್ಟೇ ಅಲ್ಲದೇ, ಕಲಿಕಾ ಗುಂಪುಗಳಲ್ಲಿ ಮಕ್ಕಳು ಒಬ್ಬರು ಮತ್ತೊಬ್ಬರೊಡನೆ ಬೆರೆಯಲು ಅವಕಾಶ ಮಾಡಿಕೊಡುತ್ತದೆ.

6.ಕ್ರೀಡೆ, ಸಂಗೀತ ಮತ್ತು ನಾಟಕದಂತಹ ಪಠ್ಯೇತಯ ಚಟುವಟಿಕೆಗಳನ್ನು ಹಮ್ಮಿಕೊಳ್ಳುವ ಮೂಲಕ ಸಾಮಾಜಿಕ ನಿರ್ಬಂಧಗಳನ್ನು ತೊಡೆದು ಹಾಕುವ ಬಗ್ಗೆ ಮಕ್ಕಳನ್ನು ಪ್ರೋತ್ಸಾಹಿಸಬೇಕು. ಅವರು ನಿರ್ಲಕ್ಷಿತ ವಲಯದಲ್ಲೇ ಉಳಿಯುತ್ತಾರೆ, ಆದ್ದರಿಂದ ವಿವಿಧ ಹಿನ್ನೆಲೆಯ ಈ ಮಕ್ಕಳ ಪ್ರತಿಭೆಯನ್ನು ಹೊರತೆಗೆಯಲು ಹಾಗು ಗುರುತಿಸಲು ಅವರ ಭಾಗವಹಿಸುವಿಕೆಯನ್ನು ಹೆಚ್ಚಿಸುವಂತಹ ಪ್ರಮುಖ ಕಾರ್ಯತಂತ್ರಗಳನ್ನು ಹುಡಕಬೇಕು.

7.ಶಾಲೆಯಲ್ಲಿ ಮಕ್ಕಳ ಒಳಗೊಳ್ಳಿಸುವಿಕೆಯನ್ನು ನೆರವೇರಿಸುವಲ್ಲಿ ಶಿಕ್ಷಕರು ಪ್ರಮುಖವಾಗಿರುತ್ತಾರೆ. ಆದರೆ ಈ ಪ್ರಕ್ರಿಯೆಯಲ್ಲಿ ಇವರ ಪಾತ್ರವನ್ನು ಇಲ್ಲಿಯವರೆಗೂ ಸಹ ನಿರ್ಲಕ್ಷಿಸಲಾಗಿದೆ. ಆದ್ದರಿಂದ, ಸೇವಾಪೂರ್ವ ತರಬೇತಿಯಲ್ಲಿ, ಶಿಕ್ಷಕರ ಶಿಕ್ಷಣದ ಮತ್ತು ಶಿಕ್ಷಕರ ತರಬೇತಿ ಕಾರ್ಯಕ್ರಮದ ವಿಶೇಷ ಮಾಡ್ಯೂಲ್‌ಗಳ ರಚನೆಯಲ್ಲಿ ಶಿಕ್ಷಕರಿಗೆ ಈ ಸಂವೇದನಾಶೀಲತೆಯನ್ನು ಉಂಟು ಮಾಡಬೇಕು. ಪರಿಶಿಷ್ಟ ಜಾತಿಯ ಮಕ್ಕಳ ನಿರ್ಧಿಷ್ಟ ಸಮಸ್ಯೆಗಳನ್ನು ಪರಿಹರಿಸುವಲ್ಲಿ ವಲಯ ಹಂತದಲ್ಲಿ ವಿಶೇಷ ಸೇವಾನಿರತ ತರಬೇತಿಗಳನ್ನು ಹಮ್ಮಿಕೊಳ್ಳುವುದು.

8.ಕಡ್ಡಾಯ ಶಿಕ್ಷಣ ಹಕ್ಕು ಕಾಯ್ದೆಯಲ್ಲಿ ಒಳಗೊಂಡಿರುವ ದೈಹಿಕ ಶಿಕ್ಷೆ ಮತ್ತು ದೌರ್ಜನ್ಯಗಳಿಗೆ ಸಂಬಂಧಿಸಿದ ನಿಯಮಗಳ ಕಟ್ಟುನಿಟ್ಟಾದ ಮಾರ್ಗದರ್ಶನ ಅಗತ್ಯವಾಗಿದೆ.

ಶಿಕ್ಷಕರ ಮತ್ತು ಶಾಲಾ ಸಿಬ್ಬಂದಿಯ ವರ್ತನೆಯನ್ನು ನಿರ್ವಹಣೆ ಮಾಡುವುದು ಶಾಲಾ ನಿರ್ವಹಣಾ ಸಮಿತಿಯ ಒಂದು ಪ್ರಮುಖ ಕರ್ತವ್ಯ. ಸಾಮಾಜಿಕ ನಿರ್ಬಂದಗಳನ್ನು ತೊಡೆದುಹಾಕುವಂತಹ ತರಗತಿ ಅಭ್ಯಾಸಗಳನ್ನು ಮತ್ತು ಭೋದನಾ ಪರಿಕರಗಳನ್ನು ಅಭಿವೃದ್ದಿಪಡಿಸಲು ಶಿಕ್ಷಕರಿಗೆ ಬಿ.ಆರ.ಸಿ ಮತ್ತು ಸಿ.ಆರ್.ಸಿ ಗಳು ಸಹಾಯ ಮಾಡಬೇಕು.

9.ಜಿಲ್ಲೆಗಳಲ್ಲಿ ಪರಿಶಿಷ್ಟ ಜಾತಿಯ ಜನಸಂಖ್ಯೆಯನ್ನು ಗಮನದಲ್ಲಿಟ್ಟುಕೊಂಡು ಸೂಕ್ತವಾದ ಮೂಲಭೂತ ಸೌಕರ್ಯಗಳನ್ನು ಒದಗಿಸುವುದು ಪರಿಶಿಷ್ಟ ಜಾತಿಯ ಮಕ್ಕಳ ಶಿಕ್ಷಣವನ್ನು ಪರಿಣಾಮಕಾರಿಗೊಳಿಸಲು ಸಹಾಯಕವಾಗುಬಹುದು.

10.ಪರಿಶಿಷ್ಟ ಜಾತಿಯ ವಿಧ್ಯಾರ್ಥಿಗಳು ಎದುರಿಸುತ್ತಿರುವ ಕಲಿಕಾ ಸಮಸ್ಯೆಗಳ ಬಗ್ಗೆ ವ್ಯವಸ್ಥಿತವಾದ ಸಂಶೋಧನೆಯನ್ನು ಕೈಗೊಳ್ಳುವ ಅವಶ್ಯಕತೆಯಿದೆ. ಇವರ ಕಲಿಕಾ ತೊಂದರೆಗಳನ್ನು ಹುಡುಕುವುದು ಮತ್ತು ಅವುಗಳಿಂದ ಹೊರಬರಲು ಪರಿಹಾರ ಹುಡುಕುವುದು ಪರಿಶಿಷ್ಟ ಜಾತಿಯ ಮಕ್ಕಳಲ್ಲಿ ಕಲಿಕೆಯನ್ನು ಮೂಡಿಸುವುದು ಮಾತ್ರವಲ್ಲದೆ ಅವರ ತಾರ್ಕಿಕ ಸಾಧನೆಯನ್ನು ಸಹ ಸುದಾರಿಸುತ್ತದೆ

ಒಳಗೊಳ್ಳಿಸುವುದರ ಸಮಸ್ಯೆಯು ಬಹುತೇಕ ಸ್ಥಳೀಯ ಮತ್ತು ನಿರ್ಧಿಷ್ಟ ಸಂದರ್ಭದ ನಿಯಮಗಳಿಗೆ ಬದ್ಧವಾಗಿರುತ್ತದೆ ಎಂಬುದನ್ನು ಗುರುತಿಸುತ್ತದೆ. ಈ ಮೇಲೆ ಪಟ್ಟಿ ಮಾಡಿದ ಅಂಶಗಳು ಸಾಮಾನ್ಯ ಪರಿಸರದೊಡನೆ ಕಾಳಜಿ ಹೊಂದಿರುತ್ತವೆ. ಇದರ ಜೊತಗೆ, ನಿರ್ಧಿಷ್ಟ ಪ್ರದೇಶ ಮತ್ತು ನಿರ್ಧಿಷ್ಟ ಸಮುದಾಯ ಸಮಸ್ಯೆಗಳು ಪರಿಶಿಷ್ಟ ಜಾತಿಯ ಮಕ್ಕಳು ಸಮಸ್ಯೆಗಳನ್ನು ಗುರುತಿಸುವಂತಿರಬೇಕು.

**ಚಟುವಟಿಕೆ –1**

ಭಾರತದಲ್ಲಿನ ಪರಿಶಿಷ್ಟ ಜಾತಿಯ ವಿಧ್ಯಾರ್ಥಿಗಳ ಪ್ರಗತಿ ಮತ್ತು ಮಾಹಿತಿಯನ್ನು ನೋಡಿ ಮತ್ತು  ಈ ಕೆಳಗಿನ ಪ್ರಶ್ನೆಗಳಿಗೆ ಉತ್ತರಿಸಿ.

1. ೧೯೫೦ ರಲ್ಲಿ ಈ ಸಮುದಾಯಕ್ಕೆ ಸೇರಿದ ಜನರ ಸಾಕ್ಷರತಾ ಪ್ರಮಾಣ ಎಷ್ಟು?

.................................................................................

.................................................................................

.................................................................................

2. ಪ್ರಸ್ತುತ ಇರುವ ಸಾಕ್ಷರತಾ ಪ್ರಮಾಣ ಎಷ್ಟು?

.................................................................................

.................................................................................

.................................................................................

3. ಈ ಪ್ರಗತಿಯು ಸಾಕ್ಷರತೆಯ ಸಾಮಾನ್ಯ ಪ್ರಗತಿಯೊಂದಿಗೆ ಹೊಂದಿಕೆಯಾಗುತ್ತಿದೆಯೇ ?

.................................................................................

.................................................................................

.................................................................................

4. ಪರಿಶಿಷ್ಟ ಜಾತಿ ಸಮುದಾಯದ ಪುರುಷ ಮತ್ತು ಮಹಿಳೆಯ ಸಾಕ್ಷರತಾ ಹಂತದಲ್ಲಿ ಯಾವುದಾದರೂ ವ್ಯತ್ಯಾಸವನ್ನು ನೀವು ಗುರುತಿಸಿದಿರಾ ?

.................................................................................

.................................................................................

.................................................................................

## 9.2.2 ಪರಿಶಿಷ್ಟ ಪಂಗಡದ ಮಕ್ಕಳ ಶಿಕ್ಷಣ

ರಾಜ್ಯಗಳು ಪರಿಶಿಷ್ಟ ಪಂಗಡದ ಮಕ್ಕಳ ಶೈಕ್ಷಣಿಕ ಮತ್ತು ಆರ್ಥಿಕ ಬೆಳವಣಿಗೆಯನ್ನು

ಪ್ರತ್ಯಾಹಿಸುವುದುನ್ನು ನಿರ್ದೇಶಿಸುವಂತಹ ಭಾರತದ ಕಾಳಜಿಯು ಸಂವಿಧಾನದ ೪೬ನೇ ವಿಧಿಯಲ್ಲಿ ವಿವರಿಸಲಾಗಿದೆ. ಇದೇ ರೀತಿ ಪರಿಶಿಷ್ಟ ಜಾತಿ ಮತ್ತು ಪರಿಶಿಷ್ಟ ಪಂಗಡಗಳು ರಚಿಸಲಾಯಿತು. ಪರಿಶಿಷ್ಟ ಪಂಗಡಕ್ಕೆ ಸೇರಿದ ಜನರಿಗೆ ಶಾಲೆಗಳಲ್ಲಿ ಹಾಗು ಉನ್ನತ ಶಿಕ್ಷಣದಲ್ಲಿ ವಿಶೇಷವಾದ ಪ್ರಯೋಜನಗಳನ್ನು ನೀಡಲಾಗುತ್ತಿದೆ. ಪರಿಶಿಷ್ಟ ಪಂಗಡದ ಜನರು ಬಹುತೇಕ ಎಲ್ಲಾ ರಾಜ್ಯಗಳಲ್ಲಿಯೂ ವಿಂಗಡಣೆಯಾಗಿದ್ದಾರೆ. ಪರಿಶಿಷ್ಟ ಪಂಗಡದ ಸಮುದಾಯಗಳು ಏಕರೂಪವಾಗಿಲ್ಲ ಬದಲಾಗಿ ಸಾಮಾಜಿಕ ಆರ್ಥಿಕ ಹಾಗು ಶೈಕ್ಷಣಿಕ ಬೆಳವಣಿಗೆಯಲ್ಲಿ ವಿವಿಧ ಹಂತದಲ್ಲಿವೆ. ಸಾಮಾನ್ಯವಾಗಿ ಪರಿಶಿಷ್ಟ ಪಂಗದ ಜನರು ಬಹುತೇಕವಾಗಿ ಶೈಕ್ಷಣಿಕವಾಗಿ ಹಿಂದುಳಿದವರಾಗಿರುತ್ತಾರೆ. ಸ್ವಾತಂತ್ರಾನಂತರದ ದಿನಗಳಿಂದಲೂ ಈ ಜನರನ್ನು ಶಿಕ್ಷಣದ ಮುಖ್ಯವಾಹಿನಿಗೆ ತರಲು ಹಲವು ಪ್ರಯತ್ನಗಳು ನಡೆಯುತ್ತಲೇ ಇವೆ. ಜಿಲ್ಲಾ ಪ್ರಾಥಮಿಕ ಶಿಕ್ಷಣ ಕಾರ್ಯಕ್ರಮವು ಪರಿಶಿಷ್ಟ ಪಂಗಡದ ಮಕ್ಕಳನ್ನು ಹತ್ತಿರದ ಶಾಲೆಗೆ ದಾಖಲಿಸಲು ಹಾಗು ಆ ಮಕ್ಕಳನ್ನು ಶಾಳೆಯಲ್ಲಿ ನಿಮಿತ ವಯಸ್ಸಿನ ವರೆಗೂ ಉಳಿಸಿಕೊಳ್ಳಲು ಹಲವು ಕ್ರಮಗಳನ್ನು ಕೈಗೊಂಡಿದೆ. ಇದೇ ರೀತಿಯ ಕಾರ್ಯಕ್ರಮಗಳನ್ನು ಸರ್ವ ಶಿಕ್ಷಣ ಅಭಿಯಾನವು ಮುಂದುವರೆಸುತ್ತಿದೆ. ಹೀಗಿದ್ದರೂ ಇದುವರೆಗೂ ಸಾಧಿಸಿರುವುದು ತೃಪ್ತಿಕರವಾಗಿಲ್ಲ. ಆದ್ದರಿಂದ ಈ ಸಮಸ್ಯೆಯು ವಿಶೇಷ ಗಮನವನ್ನು ಬಯಸುತ್ತದೆ.

ಪರಿಶಿಷ್ಟ ಪಂಗಡದ ಜನರು ದೇಶದ ವಿವಿಧ ಭಾಗಗಳಲ್ಲಿ ಹಲವು ಸಮಸ್ಯೆಗಳೊಡನೆ ವಿವಿಧ ರೀತಿಯ ಜೀವನಶೈಲಿಯಲ್ಲಿ ಬದುಕುತ್ತಿದ್ದಾರೆ. ಪರಿಶಿಷ್ಟ ಪಂಗಡದ ಜನರ ಬಹುತೇಕ ಸಮಸ್ಯೆಗಳು ಅವರುಗಳು ಪ್ರತ್ಯೇಕವಾಸಿಸುತ್ತಾ ಮುಖ್ಯವಾಹಿನಿಯಿಂದ ದೂರ ಉಳಿದಿರುವುದೇ ಕಾರಣವಾಗಿದೆ. ಅವರುಗಳು ಸಾಮಾನ್ಯವಾಗಿ ದೂರದ ಗುಡ್ಡಗಾಡು ಪ್ರದೇಶಗಳಲ್ಲಿ ವಾಸಿಸುತ್ತಾರೆ. ಅವರ ಆರ್ಥಿಕ ಪರಿಸ್ಥಿತಿಯು ಮಕ್ಕಳನ್ನು ಶಾಲೆಗೆ ಕಳುಹಿಸುವುರಿಂದ ಹಿಂದುಳಿಯಲು ಮುಖ್ಯ ಕಾರಣವಾಗಿದ್ದು , ಮಕ್ಕಳನ್ನು ಕುಡುಂಬದ ಆದಾಯದ ಮೂಲವಾಗಿ ಪರಿಗಣಿಸಿರುತ್ತಾರೆ. ಪರಿಶಿಷ್ಟ ಪಂಗಡದ ಜನರು ತಮ್ಮ ಸಂಭಾಷಣೆಗಳಲ್ಲಿ ತಮ್ಮ ಸ್ಥಳೀಯ ಉಪಭಾಷೆಯನ್ನು ಬಳಸುತ್ತಾರೆ. ಇದರಿಂದ ಪರಿಶಿಷ್ಟ ಪಂಗಡದ ಮಕ್ಕಳು ಶಾಲೆಗಳಲ್ಲಿ ಪ್ರಾದೇಶಿಕ ಭಾಷೆಯನ್ನು ಬಳಸಲು ಸೂಕ್ತವಾದ ಸಾಮರ್ಥ್ಯವನ್ನು ಹೊಂದಿರುವುದಿಲ್ಲ. ಅವರು ವಾಸಿಸುವ ಪ್ರದೇಶವು ಶಾಲೆಗೆ ಹತ್ತಿರವಾಗಿರುವುದಿಲ್ಲ. ಈ ಸಮುದಾಯದವರ ಅಲೆಮಾರಿ ಜೀವನದ ಲಕ್ಷಣವು ಇವರು ಒಂದು ಕಡೆಯಿಂದ ಮತ್ತೊಂದು ಕಡೆಗೆ ಹಾಗು ಅಕ್ಕಪಕ್ಕದ ರಾಜ್ಯಗಳಿಗೆ ವಲಸೆ ಹೋಗುವುದಕ್ಕೆ ಕಾರಣವಾಗಿದೆ. ಈ ಕಾರಣದಿಂದಾಗಿ ಮಕ್ಕಳು ಇಡೀ ವರ್ಷದಲ್ಲಿ ನಿರ್ಧಿಷ್ಟವಾದ ಒಂದು ಸಾಲೆಗೆ ಹೋಗಲು ಸಾಧ್ಯವಾಗದೆ ಇರುವಂತಹ ಗಂಭೀರ

ಸಮಸ್ಯೆಯನ್ನು ಎದುರಿಸುತ್ತಿರುತ್ತಾರೆ. ಆದ್ದರಿಂದ ಶಾಲೆಯಲ್ಲಿ ಪರಿಶಿಷ್ಟ ಪಂಗಡದ ಮಕ್ಕಳನ್ನು ದಾಖಲಿಸಲು ಹಾಗು ಶಾಲೆಯಲ್ಲಿ ಉಳಿಸಲು ವಿಶೇಷ ಮಧ್ಯವರ್ತನೆಗಳ ಅವಶ್ಯಕತೆ ಇದೆ. ಆ ರೀತಿಯ ಕೆಲವು ಮಧ್ಯವರ್ತನೆಗಳು ಇಲ್ಲಿವೆ :

- ಮಕ್ಕಳು ಪ್ರಾದೇಶಿಕ ಭಾಷೆಯನ್ನು ಅರ್ಥ ಮಾಡಿಕೊಳ್ಳಲು ಕಷ್ಟವಾದಾಗ ಪ್ರಾಥಮಿಕ ಶಿಕ್ಷಣದ ಆರಂಭದಲ್ಲಿ ಅವರದೇ ಮಾತೃಭಾಷೆಯಲ್ಲಿ ಪಠ್ಯಪುಸ್ತಕ ದೊರಕಿಸುವುದು.
- ಶಿಕ್ಷಕರ ಬಳಕೆಗಾಗಿ ಭಾಷಾ ಪಟ್ಟಿಗಳನ್ನು ರಚಿಸುವುದು
- ಪರಿಶಿಷ್ಟ ಪಂಗಡದ ಜನ ವಾಸಿಸುವ ಪ್ರದೇಶದಲ್ಲಿನ ಶಾಲೆಗಳಲ್ಲಿ ಅಂಗನವಾಡಿ ಮತ್ತು ಬಾಲವಾಡಿಗಳನ್ನು ತೆರೆದು ಹೆಣ್ಣು ಮಕ್ಕಳು ಮನೆಯಲ್ಲಿ ಚಿಕ್ಕಮಕ್ಕಳನ್ನು ನೋಡಿಕೊಂಡು ಶಾಲೆಯಿಂದ ಹೊರಗುಳಿಯುವುದನ್ನು ತಪ್ಪಿಸುವುದು.
- ಬುಡಕಟ್ಟು ಪ್ರದೇಶದಲ್ಲಿ ಕೆಲಸ ಮಾಡಲು ಸಾಧ್ಯವಾಗುವಂತೆ ಇತರೇ ಶಿಕ್ಷಕರಿಗೆ ಆ ಪಂಗಡಗಳ ಜ್ಞಾನ ಮತ್ತು ಉಪಭಾಷೆಗಳ ಬಗ್ಗೆ ತರಬೇತಿ.
- ಪರಿಶಿಷ್ಟ ಪಂಗಡದದ ಪ್ರದೇಶಗಳ ಒಂದು ಕಿಲೋಮೀಟರ್ ವ್ಯಾಪ್ತಿಯಲ್ಲಿ ಶಾಲೆ ಮತ್ತು ಇತರೆ ಪರ್ಯಾಯ ಸೌಲಭ್ಯಗಳು.
- ಶಿಕ್ಷಣ ಮುಂದುವರಿಕೆ ಕೇಂದ್ರಗಳನ್ನು ಶಾಲೆಗಳಾಗಿ ಉನ್ನತೀಕರಣ.
- ಪರ್ಯಾಯ ಮತ್ತು ಸೃಜನಶೀಲ ಶಿಕ್ಷಣದ ಅಂಶಗಳ ಅಡಿಯಲ್ಲಿ ಶಾಲೆಯಿಂದ ಹೊರಗುಳಿದ ಮಕ್ಕಳಿಗಾಗಿ ವಿಶೇಷ ಮುಖ್ಯವಾಹಿನಿ ಶಿಬಿರ .
- ನಾವಿನ್ಯಯುತ ಅನುದಾನಗಳಿಂದ ಮಹಿಳಾ ಸಮಖ್ಯದಂತಹ ಮಧ್ಯವರ್ತನೆ.
- ಮಹಿಳೆಯುರು ಹಾಗು ಎಸ್.ಸಿ/ಎಸ್.ಟಿ ಪೋಷಕರು ಭಾಗವಹಿಸಲು ಅವಕಾಶ ನೀಡುವಂತಹ ಪ್ರಕ್ರಿಯೆಯಾಧಾರಿತ ಸಮುದಾಯ ಭಾಗವಹಿಸುವಿಕೆಯ ಅವಕಾಶಗಳು.
- ಹೆಣ್ಣು ಮಕ್ಕಳ ಮತ್ತು ಎಸ್.ಸಿ/ಎಸ್.ಟಿ ಮಕ್ಕಳ ಶಿಕ್ಷಣಕ್ಕಾಗಿ ನಿರ್ಧಿಷ್ಟ ಸಂದರ್ಭಗಳ ನಾವಿನ್ಯಯುತ ಮಧ್ಯವರ್ತನೆಗಳಿಗೆ ಹಣಕಾಸಿನ ಅವಕಾಶಗಳು. ದಾಖಲಾತಿ ಮತ್ತು ಹಾಜರಾತಿ ಆಂದೋಲನ, ವಿಶೇಷ ಶಿಭಿರ ಹಾಗು ಸೇತುಬಂಧ ಕೋರ್ಸ್,

ಪರ್ಯಾಯ ಶಾಲೆಗಳ ವಿಶೇಷ ಮಾದರಿ ರಚಿಸುವುದು , ಸಮುದಾಯ ಕ್ರೋಢೀಕರಣ , ಹಾಜರಾರಿ ಮಾರ್ಗದರ್ಶನ, ಪರಿಹಾರ ತರಗತಿಗಳು, ಶಾಲೆಗಳಲಿ ಸ್ನೇಹಪರ ಕಲಿಕಾ ವಾತಾವರಣ ನಿರ್ಮಿಸುವಂತಹ ಚಟುವಟಕೆಗಳು ಈ ನಾವಿನ್ಯಯುತ ಕಾರ್ಯಕ್ರಮದಲ್ಲಿ ಒಳಗೊಂಡಿರುತ್ತವೆ.

- ಶಾಲಾ ನಿರ್ವಹಣೆಯ ಸಾಮರ್ಥ್ಯಗಳನ್ನು ವೃದ್ದಿಸಲು ಸಮುದಾಯ ನಾಯಕರಿಗೆ ತರಬೇತಿ ಕಾರ್ಯಕ್ರಮಗಳು, ಪರಿಣಾಮಕಾರಿ ಶೈಕ್ಷಣಿಕ ಮಾರ್ಗದರ್ಶನಕ್ಕಾಗಿ ವಲಯ ಮತ್ತು ಸಮೂಹ ಸಂಪನ್ಮೂಲ ಕೇಂದ್ರ ಸ್ಥಾಪನೆ.
- ೮ನೇ ತರಗತಿಯವರೆಗು ಎಲ್ಲಾ ಮಕ್ಕಳಿಗೂ ಉಚಿತ ಪಠ್ಯಪುಸ್ತಕ, ವಸತಿ ಸೌಲಭ್ಯ, ಶೌಚಾಲಯ, ನೋಟ್‌ಪುಸ್ತಕ, ಸಮವಸ್ತ್ರ ಮುಂತಾದವುಗಳನ್ನು ಒದಗಿಸುವುದು,
- ಎಲ್ಲಾ ಕಿರಿಯ ಮತ್ತು ಹಿರಿಯ ಪ್ರಾಥಮಿಕ ಶಾಲೆಗಳಿಗೆ ಸೂಕ್ತವಾದ ಬೋಧನಾ ಕಲಿಕಾ ಸಾಮಗ್ರಿ ಒದಗಿಸುವುದು.
- ಎಲ್ಲಾ ಶಿಕ್ಷಕರಿಗೂ ಶಾಲೆ ಮತ್ತು ಶಿಕ್ಷಕರ ಅನುದಾನ, ಸಮುದಾಯಾಧಾರಿತ ಮಾರ್ಗದರ್ಶನ, ಸಂಶೋಧನೆ ಮತ್ತು ಸಂಪನ್ಮೂಲ ಸಂಸ್ಥೆಗಳೊಡನೆ ಪಾಲುದಾರಿಕೆ ಮತ್ತು ಮಧ್ಯವರ್ತನೆಗಳ ಬಗ್ಗೆ ನಿಯಮತಿವಾದ ಹಿಮ್ಮಾಹಿತಿ ನೀಡುವಿಕೆಗೆ ಅವಕಾಶ.

ಆಶ್ರಮ ಶಾಲೆಗಳ ಗುಣಮಟ್ಟ ಸುದಾರಣೆಗೆ ಕಾರ್ಯಕ್ರಮಗಳು

ಮಹಾರಾಷ್ಟ್ರ ಸರ್ಕಾರದ ಬುಡಕಟ್ಟು ಅಭಿವೃದ್ದಿ ಇಲಾಖೆಯ ಕೋರಿಕೆಯ ಮೇರೆಗೆ ಆಶ್ರಮ ಶಾಲೆಗಳಲ್ಲಿ ವಿಜ್ಞಾನ ಮತ್ತು ಗಣಿತ ಶಿಕ್ಷಣದ ಗುಣಮಟ್ಟ ಸುಧಾರಿಸಲು ಒಂದು ಕಾರ್ಯಕ್ರಮ ಕೈಗೊಂಡಿತು. (ನಿರ್ಲಕ್ಷಿತ ಬುಡಕಟ್ಟು ಜನಾಂಗದ ಮಕ್ಕಳಿಗಾಗಿ ಭಾರತೀಯ ಗುರುಕುಲ ಮಾದರಿಯಲ್ಲಿ ವಸತಿ ಶಾಲೆಗಳನ್ನು ರಚಿಸಲಾಯಿತು). ಈ ಕಾರ್ಯಕ್ರಮವು ಮಹಾರಾಷ್ಟ್ರದ ಸಹ್ಯಾದ್ರಿ ಜಿಲ್ಲೆಗಳಲ್ಲಿ ಹೋಮಿ ಭಾಬಾ ವಿಜ್ಞಾನ ಶಿಕ್ಷಣ ಕೇಂದ್ರದ ಮೂಲಕ ೧೯೯೩-೯೭ ರ ವರೆಗೂ ಮುಂದುವರೆಯಿತು. ಇದು ಮೂರು ಅಂಶಗಳನ್ನು ಗಮನಿಸುತ್ತದೆ

1. ಸಾಮರ್ಥ್ಯ ಅಭಿವೃದ್ದಿ
2. ಶಿಕ್ಷಕರ ತರಬೇತಿ
3. ಮಗು ಮತ್ತು ಮಗುವಿನ ಭಾಗವಹಿಸುವಿಕೆಯನ್ನು ವೃದ್ದಿಸುವುದು

1. ಸಾಮರ್ಥ್ಯ ಅಭಿವೃದ್ಧಿ

ಶಾಲೆಗಲ ಸಾಮರ್ಥ್ಯ ಅಭಿವೃದ್ಧಿಯ ಸಂದರ್ಭದಲ್ಲಿ ಗಮನವನ್ನು ಗ್ರಂಥಾಲಯ ಮತ್ತು ಪ್ರಯೋಗಾಲಯ ಇಲಾಖಗೆ ಕೊಡಲಾಗಿತ್ತು. ಸೂಕ್ತವಾದ ಪುಸ್ತಕಗಳನ್ನು ಗ್ರಂಥಾಲಯದಲ್ಲಿ ವ್ಯವಸ್ಥೆ ಮಾಡಲಾಯಿತು ಹಾಗು ಅವುಗಳ ಬಳಕೆ ವಿಧಾನ ರೂಪಿಸಲಾಯಿತು. ಇದೇ ರೀತಿ ವಿಜ್ಞಾನ ಪ್ರಯೋಗಾಲಯವನ್ನು ಸಹ ಸೂಕ್ತ ಪರಿಕರಗಳ ಲಭ್ಯತೆಯ ಮೂಲಕ ಸಜ್ಜುಗೊಳಿಸಲಾಯಿತು. ಹಾಗೆಯೇ ಇದರ ಜೊತೆಗೆ ಗಣಿತ ಪ್ರಯೋಗಾಲಯ ಅಭವೃದ್ದಿಗೆ ಗಮನ ನೀಡಲಾಯಿತು.

2. ಶಿಕ್ಷಕರ ತರಬೇತಿ

ವಿಜ್ಞಾನ ಮತ್ತು ಗಣಿತ ಶಿಕ್ಷಕರಿಗಾಗಿ ಮೂರು ವರ್ಷಗಳ ಅವಧಿಯಲ್ಲಿ ೬ ತರಬೇತಿ ಕೋರ್ಸ್‌ಗಳನ್ನು ಹಮ್ಮಿಕ್ರೊಳ್ಳಲಾಯಿತು. ಈ ಕೋರ್ಸ್‌ನಲ್ಲಿ ಶಿಕ್ಷಕರಿಗೆ ಪರಿಶಿಷ್ಟ ಪಂಗಡದ ಮಕ್ಕಳು ಎದುರಿಸುತ್ತಿರುವ ಕಲಿಕಾ ನ್ಯೂನತೆಗಳನ್ನು ಸರಿಪಡಿಸಲು ಸೂಕ್ತವಾದ ಮಾರ್ಗಸೂಚಿಗಳನ್ನು ನೀಡಲಾಯಿತು. ಪರಿಶಿಷ್ಟ ಪಂಗಡದ ಮಕ್ಕಳಿಗಾಗಿ ವಿಶೇಷ ಸಾಮ್ರಗ್ರಿಗಳನ್ನು ರಚಿಸಲಾಯಿತು ಹಾಗು ಇವುಗಳನ್ನು ಶಿಕ್ಷಕರಿಗೆ ಹೆಚ್ಚುವರಿ ಸಂಪನ್ಮೂಲವಾಗಿ ಲಭ್ಯವಾಗಿಸಲಾಯಿತು.

3. ಮಕ್ಕಳ ನುಡವಿನ ಚರ್ಚೆಯನ್ನು ವೃದ್ದಿಗೊಳಿಸುವುದು

ಆಶ್ರಮ ಶಾಲೆಯಲ್ಲಿನ ಮಕ್ಕಳು ಶಾಲೆಯ ನಂತರ ಒಟ್ಟಿಗೆ ವಾಸಿಸುತ್ತಾರೆ. ಈ ಸಮಯವನ್ನು ಪರಿಣಾಮಕಾರಿಯಾಗಿ ಬಳಸಿಕೊಳ್ಳಲು ಮಕ್ಕಳ ನಡುವೆ ಚರ್ಚೆಯ ಪ್ರಯತ್ನ ನಡೆಸಲಾಯಿತು. ಅವರಿಗೆ ಹಲವು ರೀತಿಯ ಚಟುವಟಿಕೆಗಳನ್ನು ಹಮ್ಮಿಕ್ರೊಳ್ಳಲು ಪ್ರೋತ್ಸಾಹಿಸಲಾಯಿತು. ದಿನಪತ್ರಿಕೆಯನ್ನು ನೋಟಿಸ್ ಬೋರ್ಡ್‌ನಲ್ಲಿ ಪ್ರದರ್ಶಿಸುವುದು, ವಿವಿಧ ಸಸ್ಯವರ್ಗಗಳ ಪಟ್ಟಿ ಮಾಡುವುದು ಮುಂತಾದವು. ಈ ಚುಟವಟಿಕೆಗಳು ಮಕ್ಕಳಿಗೆ ತಮ್ಮ ಬಿಡುವಿನ ಸಮಯವನ್ನು ಪರಿಣಾಮಕಾರಿಯಾಗಿ ಬಳಸಿಕೊಳ್ಳಲು ಸಾಧ್ಯವಾಗಿಸಿತು.

### 9.2.3 ವಿಶೇಷ ಅಗತ್ಯವುಳ್ಳ ಮಕ್ಕಳು (CWSN)

ಪ್ರಾಥಮಿಕ ಶಿಕ್ಷಣದಲ್ಲಿ ವಿಶೇಷ ಅಗತ್ಯವುಳ್ಳ ಮಕ್ಕಳು ಸೇರಿದಂತೆ ಎಲ್ಲಾ ಮಕ್ಕಲೂ ಸಹ ಒಳಗೊಳ್ಳುವ ಮೂಲಕ ಸರ್ವಶಿಕ್ಷಣ ಅಭಿಯಾನದ ಉದ್ದೇಶವು ಸಾಧನೆಯಾಗುವುದು. ವಿಶೇಷ ಅಗತ್ಯವುಳ್ಳ ಮಕ್ಕಳು ಸಾಮಾನ್ಯ ಶಾಲೆಗಳಲ್ಲಿ ಗುಣಮಟ್ಟದ ಶಿಕ್ಷಣ ಪಡೆಯುವುದನ್ನು ಜಿಲ್ಲಾ ಪ್ರಾಥಮಿಕ ಶಿಕ್ಷಣ ಕಾರ್ಯಕ್ರಮವು ಸೂಕ್ತವಾದ ಬೆಂಬಲದೊಡನೆ ಸಾಧ್ಯವಾಗಿಸಿದೆ. ವಿಶೇಷ ಅಗತ್ಯವುಳ್ಳ ಮಕ್ಕಳು ಅವರ ನ್ಯೂನತೆ ಮತ್ತು ಅವರಿವಿನ ಲಭ್ಯತೆಯಿಂದಾಗಿ ನಿರ್ಲಕ್ಷ್ಯಕ್ಕೆ ಒಳಗಾಗಿದ್ದಾರೆ. ಈ ರೀತಿಯ ಮಕ್ಕಳಿಗೆ ಬೋಧಿಸುವ ಶಿಕ್ಷಕರಲ್ಲಿನ ಕೆಲವು ಆಂತಕಗಳು ಅವರ ಶಿಕ್ಷಣದ ಹಕ್ಕನ್ನು ದೂರವಾಗಿಸಿವೆ. ಈ ಮಕ್ಕಳ ಮೇಲಿನ ಸಾಮಾನ್ಯ ಅನುಕಂಪವು ಅವರುಏನು ಮಾಡಲಾಗುವುದಿಲ್ಲ ಅನ್ನುವುದಕ್ಕಿಂತ ಈ ಮಕ್ಕಳು ಏನೆಲ್ಲಾ ಮಾಡಲು ಸಾಧ್ಯವ ಎನ್ನುವ ಬಗೆಗೆ ಚಿಂತಿಸುವಲ್ಲಿಯೂ ಕೆಲವು ಅಡೆತಡೆಗಳಿವೆ. ವಿಶೇಷ ಅಗತ್ಯವುಳ್ಳ ಮಕ್ಕಳನ್ನು ಸಾಮಾನ್ಯ ಶಾಲೆಗೆ ಒಳಗೊಳ್ಳಿಸುವ ಪ್ರಾಮುಖ್ಯತೆಯನ್ನು ಮನಗಂಡು ಸರ್ವ ಶಿಕ್ಷಣ ಅಭಿಯಾನವು ವಿಶೇಷ ಅಗತ್ಯವುಳ್ಳ ಮಕ್ಕಳ ಶಿಕ್ಷಣಕ್ಕಾಗಿ ಕೆಲವು ಅವಕಾಶಗಳನ್ನು ಮಾಡಿಕೊಟ್ಟಿದೆ. ವಿಶೇಷ ಅಗತ್ಯವುಳ್ಳ ಪ್ರತೀ ಮಕ್ಕಳೂ ಯಾವುದೇ ಜಾತಿ, ಮಾನದಂಡಗಳ ಮಿತಿಯಿಲ್ಲದೇ ಗುಣಮಟ್ಟದ ಶಿಕ್ಷಣ ಪಡೆಯಬೇಕು ಎಂಬುದನ್ನು ಸರ್ವ ಶಿಕ್ಷಣ ಅಭಿಯಾನದ ಉದ್ದೇಶವಾಗಿದೆ. ವಿಶೇಷ ಅಗತ್ಯವುಳ್ಳ ಯಾವುದೇ ಮಗುವೂ ಸಹ ಶಿಕ್ಷಣದ ಹಕ್ಕನ್ನು ಪಡೆಯುವುದರಿಂದ ವಂಚಿತರಾಗಬಾರದು ಎಂಬ ನಿಯಮವನ್ನು ಸರ್ವ ಶಿಕ್ಷಣ ಅಭಿಯಾನ ಹೊಂದಿದೆ.

ವಿಶೇಷ ಅಗತ್ಯವುಳ್ಳ ಮಗುವು ತನ್ನ ಕಲಿಕಾ ನ್ಯೂನತೆಗಳಿಗೆ ಸೂಕ್ತವಾದ ಪರಿಸರದಲ್ಲಿ ಶಿಕ್ಷಣ ಪಡೆಯಬೇಕು ಎಂಬ ವಿಕಲಾಂಗ ವ್ಯಕ್ತಿಗಳ ಕಾಯ್ದೆ ೧೯೯೫ ರ ಚೌಕಟ್ಟನ್ನು ಸರ್ವ ಶಿಕ್ಷಣ ಅಭಿಯಾನವು ಹೊಂದಿದೆ. ಇದು ವಿಶೇಷ ಶಾಲೆಗಳನ್ನು, ಪರ್ಯಾಯ ನಾವಿನ್ಯಯುತ ಶಿಕ್ಷಣ ಮತ್ತು ಮಗುವಿನ ಗೃಹಾಧಾರಿತ ಶಿಕ್ಷಣವನ್ನು ಒಳಗೊಂಡಿರಬಹುದು.

ಆದ್ದರಿಂದ ಹಳ್ಳಿಗಳು, ವಲಯಗಳು ಅಥವಾ ಜಿಲ್ಲಾ ಮಟ್ಟದಲ್ಲಿ ಶಿಕ್ಷಣದ ಯೋಜನೆಗಳನ್ನು ರೂಪಿಸುವಾಗ ವಿಶೇಷ ಅಗತ್ಯವುಳ್ಳ ಮಕ್ಕಳನ್ನು ಸಹ ಗಮನದಲ್ಲಿಟ್ಟುಕೊಳ್ಳಬೇಕು. ವಿಶೇಷ ಅಗತ್ಯವುಳ್ಳ ಮಕ್ಕಳಿಗೆ ಸಂಬಂಧಿಸಿದಂತೆ ಕೆಲವು ನಿರ್ಧಿಷ್ಟ ಅವಶ್ಯಕತೆಗಳಿಗೆ, ಅವುಗಳೆಂದರೆ ಸಂಪನ್ಮೂಲ ಸಹಾಯ, ವಿಶೇಷ ಶಿಕ್ಷಕರ ತರಬೇತಿ, ಸಾಮಗ್ರಿಗಳ ಲಭ್ಯತೆ. ಮತ್ತು ಸಮುದಾಯದಲ್ಲಿ ಅರಿವು, ಗ್ರಾಮ ಶಿಕ್ಷಣ ಸಮಿತಿಯ ಸಾಮರ್ಥ್ಯ ಅಭಿವೃದ್ಧಿ, ಸೇವಾನಿರತ ಶಿಕ್ಷಕರ ತರಬೇತಿ, ಶಾಲಾ ಪರಿಸರವನ್ನು ವಿಕಲಾಂಗರ ಸ್ನೇಹಪರವಾಗಿಸುವುದು, ಬಾಲ್ಯ

ಪೂರ್ವ ರಕ್ಷಣೆ ಮತ್ತು ಶಿಕ್ಷಣ ಹಾಗು ಹೆಣ್ಣುಮಕ್ಕಳ ಶಿಕ್ಷಣದಂತಹ ಹಲವು ಸೌಲಭ್ಯಗಳೊಡನೆ ವಿಶೇಷ ಅಗತ್ಯವುಳ್ಳ ಮಕ್ಕಳ ಸೌಲಭ್ಯಗಳನ್ನು ಸಂಪರ್ಕಿಸಬಹುದು.

ವಿಶೇಷ ಅಗತ್ಯವುಳ್ಳ ಮಕ್ಕಳಿಗೆ ಸೂಕ್ತವಾದ ರೀತಿಯಲ್ಲಿ ಶಿಕ್ಷಣದ ಹಕ್ಕನ್ನು ಒದಗಿಸಬೇಕಾದರೆ ವಿಶೇಷ ಅಗತ್ಯವುಳ್ಳ ಮಕ್ಕಳ ಸಮೀಕ್ಷೆಯಲ್ಲಿ ವರ್ಗದ ಆಧಾರದ ಮೇಲೆ ಗುರುತಿಸಬೇಕು. ಜಿಲ್ಲೆಯಲ್ಲಿನ ಮತ್ತು ಶಾಲೆಯಲ್ಲಿ  ಒಟ್ಟು ಮಕ್ಕಳ ಜನಸಂಖ್ಯೆಯಲ್ಲಿ ವಿಶೇಷ ಅಗತ್ಯವುಳ್ಳ ಮಕ್ಕಳ ದತ್ತಾಂಶವು ಪ್ರತ್ಯೇಕವಾಗಿ ಸಂಗ್ರಹವಾಗಬೇಕು. ಜಿಲ್ಲೆಯಲ್ಲಿ ವಿಶೇಷ ಅಗತ್ಯವುಳ್ಳ ಮಕ್ಕಳಿಗೆ ದೊರೆಯಬಹುದಾದ ಸೌಲಭ್ಯಗಳನ್ನು ಗುರುತಿಸಬೇಕು, ವಿಶೇಷ ಅಗತ್ಯವುಳ್ಳ ಮಕ್ಕಳ ಮೌಲ್ಯಮಾಪನವು ನಡೆಯಬೇಕು. ಶಾಲೆಯಿಂದ ಹೊರಗುಳಿದ ವಿಶೇಷ ಅಗತ್ಯವುಳ್ಳ ಮಕ್ಕಳನ್ನು ಶಾಲೆಗೆ ಕರೆತರಲು ಸೂಕ್ತವಾದ ಸಾರಿಗೆ ವ್ಯವಸ್ಥೆ ಇರಬೇಕು.  ಮಕ್ಕಳ ಸಮೀಕ್ಷೆಯಲ್ಲಿನ ಎಲ್ಲಾ ವಿಶೇಷ ಅಗತ್ಯವುಳ್ಳ ಮಕ್ಕಳಿಗೂ ಜಿಲ್ಲಾ ಹಂತದಲ್ಲಿ ರಾಜ್ಯ ಸರ್ಕಾರ, ಸ್ವಯಂಸೇವಾ ಸಂಸ್ಥೆ ಅಥವಾ ಇತರೇ ಯೋಜನೆಗಳ ಮೂಲಕ ಸೂಕ್ತ ಪರಿಕರ ಹಾಗು ಸಾಧನಗಳನ್ನು ಒದಗಿಸಬೇಕು.

ವಿಶೇಷ ಶಿಕ್ಷಣ ಶಿಕ್ಷಕರ ತರಬೇತಿ, ಪಿಸಿಯೋಥೆರಪಿಯ ಧೀರ್ಘಾವದಿ ತರಬೇತಿಗಳು, ವೃತ್ತಿಪರ ಥೆರಪಿಸ್ಟ್, ತರಬೇತಿ, ಮೌಲ್ಯಮಾಪನ ಹಾಗು ಅನುಷ್ಠಾನಕ್ಕಾಗಿ ವಿಶೇಷ ಶಾಲೆಗಳ ಬಳಕೆ ಹಾಗು ಸ್ವಯಂಸೇವಾ ಸಂಸ್ಥೆಗಳ ಬಳಕೆಗೆ ಬೇಕಾದ ಅನುದಾನವನ್ನು ಒದಗಿಸಬೇಕು. ಪರ್ಯಾಯವಾಗಿ ಕಡಿಮೆ ಅವಧಿಯಲ್ಲಿನ ಸಂಪನ್ಮೂಲ ಸಹಾಯ ಹಾಗು ಶಿಕ್ಷಕರನ್ನು ಸಜ್ಜುಗೊಳಿಸುವಂತಹ ಸಾಮೂಹಿತ ತರಬೇತಿಗಳನ್ನು ಗುರುತಿಸಬೇಕು. ವಿಶೇಷ ಅಗತ್ಯವುಳ್ಳ ಮಕ್ಕಳನ್ನು ಗಮನದಲ್ಲಿರಿಸಿಕೊಂಡು ಸಮುದಾಯ ಕ್ರೋಢೀಕರಣ ಮತ್ತು ಪೋಷಕರ ಕಾರ್ಯಕ್ರಮಗಳನ್ನು ಹಮ್ಮಿಕೊಳ್ಳಬೇಕು. ಈ ಮಕ್ಕಳ ಕಲಿಕೆಯನ್ನು ಸುಗಮಗಾರಿಕೆಗೊಳಿಸುವಂತಹ ಪಠ್ಯಕ್ರಮವನ್ನು ಅನುಸರಿಸಬೇಕು.

ವಿಶೇಷ ಅಗತ್ಯವುಳ್ಳ ಮಕ್ಕಳ ಕಲಿಕೆಯನ್ನು ಮೌಲ್ಯಮಾಪನ ಮಾಡುವಾಗ ಕೆಲವು ರೀತಿಯ ವಿಶೇಷ ರಿಯಾಯಿತಿಗಳನ್ನು ನೀಡಬೇಕು. ದೃಷ್ಟಿದೋಷವುಳ್ಳವರಿಗೆ ಅವರಿಗೆ ಸೂಕ್ತವಾದ ಪರಿಕರ ನೀಡುವುದು, ಮನೋ ನ್ಯೂನತೆಯುಳ್ಳವರಿಗೆ ಹೆಚ್ಚುವರಿ ಸಮಯ ನೀಡುವುದು, ಜಿಲ್ಲಾ ಆಡಳಿತವು ಸಮುದಾಯದ ಸಹಾಯದೊಂದಿಗೆ ಶಾಲೆಗಳ ಪರಿಸರವನ್ನು ವಿಶೇಷ ಅಗತ್ಯವುಳ್ಳ ಮಕ್ಕಳಸ್ನೇಹಿಯಾಗಿಸುವುದು. (ರಾಂಪುಗಳು, ವಿಶೇಷ ಶೌಚಾಲಯ ಮುಂತಾದವು). ವಿಶೇಷ ಅಗತ್ಯವುಳ್ಳ ಮಕ್ಕಳ ದಾಖಲಾತಿ ಮತ್ತ ಹಾಜರಾತಿಯನ್ನು ಮಾರ್ಗದರ್ಶನ ಮಾಡಲು ಸಹಾಯಕವಾಗುವಂತೆ ಪೋಷಕರು, ಸ್ವಯಂಸೇವಾ ಸಂಸ್ಥೆಗಳು ಮತ್ತು ಗ್ರಾಮ ಸಮಿತಿಗಳನ್ನು ಒಳಗೊಳ್ಳಿಸಿಕೊಳ್ಳಬೇಕು.

### 9.2.4 ಭೌಗೋಳಿಕವಾಗಿ ದೂರ ಉಳಿದಿರುವ ಮಕ್ಕಳ ಶಿಕ್ಷಣ

ಸೌಕರ್ಯವಂಚಿತ ವಸತಿಪ್ರದೇಶದಲ್ಲಿ ಶಿಕ್ಷಣ ಖಾತರಿ ಶಾಲೆಗಳು, ಶಾಲೆಯಿಂದ ಹೊರಗುಳಿದ ಮಕ್ಕಳಿಗಾಗಿ ಮತ್ತು ಕ್ಲಿಷ್ಟಕರ ಪರಿಸ್ಥಿತಿಯಲ್ಲಿರುವ ಮಕ್ಕಳಿಗಾಗಿ ಪರ್ಯಾಯ ಮತ್ತು ನಾವಿನ್ಯಯುತ ಶಾಲೆಗಳು ಸರ್ವಶಿಕ್ಷಣ ಅಭಿಯಾನದ ಚೌಕಟ್ಟಿನಲ್ಲಿ ಬರುತ್ತವೆ. ಈ ಶಾಲೆಗಳನ್ನು ನಿರ್ವಹಣೆ ಮಾಡುವ ರೀತಿಯು ಶೈಕ್ಷಣಿಕ ಯೋಜನೆಯಲ್ಲಿ ಒಳಗೊಳ್ಳಬೇಕು. ಇದು ವಿವಿಧ ಕಾರ್ಯತಂತ್ರಗಳನ್ನು ಮತ್ತು ಬದಲಾಗುವಂತಹ ಹಣಕಾಸಿನ ಮಾನದಂಡಗಳನ್ನು ಬಯಸುತ್ತವೆ.

ನಾಲ್ಕು ವ್ಯಾಪಕ ಅಂಶಗಳ ಕಡೆ ಇಲ್ಲಿ ಗಮನವಹಿಸಲಾಗುವುದು.

೧. ಸೌಕರ್ಯ ವಂಚಿತ ಸಣ್ಣ ವಸತಿಪ್ರದೇಶಗಳಿಗಾಗಿ ಪೂರ್ಣ ಸಮಯದ ಸಮುದಾಯ ಶಾಲೆ

೨. ಸೇತುಬಂಧ ಕಾರ್ಯಕ್ರಮಗಳ ಮೂಲಕ ಮಕ್ಕಳನ್ನು ಮುಖ್ಯವಾಹಿನಿಗೆ ತರುವುದು

೩. ಬಾಲಕಾರ್ಮಿಕರು, ಬೀದಿ ಮಕ್ಕಳು, ಹದಿಹರೆಯದ ಮಕ್ಕಳು, ಹಿಂದುಳಿದ ವರ್ಗಗಳ ಹೆಣ್ಣುಮಕ್ಕಳು ಗುಂಪುಗಳಿಗೆ ವಿಶೇಷ ನಿರ್ಧಿಷ್ಟ ಕಾರ್ಯತಂತ್ರಗಳು.

೪. ನಾವಿನ್ಯಯುತ ಕಾರ್ಯಕ್ರಮಗಳು – ಬೋಧನಾ ಅಭ್ಯಾಸಗಳಲ್ಲಿ, ಪಠ್ಯಕ್ರಮದಲ್ಲಿ, ಕಾರ್ಯಕ್ರಮ ನಿರ್ವಹಣೆಯಲ್ಲಿ, ಪಠ್ಯಪುಸ್ತಕ ಮತ್ತು ಬೋಧನಾ ಸಾಮಗ್ರಿ ಮುಂತಾದವುಗಳಲ್ಲಿ ನಾವಿನ್ಯತೆ

ಒಂದು ಕಿಲೋಮೀಟರ್ ವ್ಯಾಪ್ತಿಯಲ್ಲಿ ಶಾಲೆ ಹೊಂದಿರದ ಹಾಗು ಶಾಲೆಗೆ ಹೋಗುವಂತಹ ವಯಸ್ಸಿನ ಮಕ್ಕಳಿರುವ ಪ್ರತೀ ಪ್ರದೇಶದಲ್ಲಿ ಶಿಕ್ಷಣ ಖಾತರಿ ಯೋಜನೆ ಮಾದರಿಯ ಶಾಲೆಯಿರಬೇಕು. ಶಾಲೆಯಿಂದ ಹೊರಗುಳಿದ ಮಕ್ಕಳಿಗೆ ಸೇತುಬಂಧ ಕಾರ್ಯಕ್ರಮದ ಮೂಲಕ ಮುಖ್ಯವಾಹಿನಿಗೆ ಬರುವ ಅವಕಾಶ ದೊರೆಯಬೇಕು. ಶಿಕ್ಷಣ ಖಾತರಿ ಯೋಜನೆ ಮತ್ತು ಪರ್ಯಾಯ ಹಾಗು ನಾವಿನ್ಯಯುತ ಶಿಕ್ಷಣವನ್ನು ಪ್ರಾಥಮಿಕಶಿಕ್ಷ ಣವನ್ನು ಸಾರ್ವತ್ರಿಕರಣಗೊಳಿಸುವುದೇ ಇದರ ಉದ್ದೇಶವಾಗಿದೆ. CRC/BRC/DIET/SCERT ನಡುವೆ ಸಂಪರ್ಕವು ಶಿಕ್ಷಣ ಖಾತರಿ ಯೋಜನೆ ಮತ್ತು ಪರ್ಯಾಯ ಹಾಗು ನಾವಿನ್ಯಯುತ ಶಿಕ್ಷಣಕ್ಕೆ ಅವಶ್ಯಕವಾದುದು

ಶಾಲೆಯಿಂದ ಹೊರಗುಳಿದ ಮಕ್ಕಳಲ್ಲಿ ಹಲವು ರೀತಿಗಳಿವೆ. ಇವರುಗಳು ದೂರದ ಶಾಲೆರಹಿತ ಪ್ರದೇಶದವರು, ಬಾಲಕಾರ್ಮಿರು, ಬೀದಿ ಮಕ್ಕಳು, ನಗರಪ್ರದೇಶದ ಕೊಳಚೆ ಪ್ರದೇಶದವರು, ಲೈಂಗಿಕ ಕಾರ್ಯಕರ್ತರ ಮಕ್ಕಳು, ಹಿಂದುಳಿದ ವರ್ಗದ ಹೆಣ್ಣುಮಕ್ಕಳು,

ಕುಟುಂಬ ನಿರ್ವಹಣೆಯಲ್ಲಿ ತೊಎಗಿರುವ ಹೆಣ್ಣಮಕ್ಕಳು ಆಗಿರಬಹುದಾಗಿದೆ. ಈ ರೀತಿಯ ವಿವಿಧತೆಯು ವಿಭಿನ್ನ ಕಾರ್ಯತಂತ್ರಗಳನ್ನು ಮತ್ತು ವಿಧಾನಗಳನ್ನು ಬಯಸುತ್ತದೆ.

ಶಿಕ್ಷಣ ಖಾತರಿ ಯೋಜನೆ ಮತ್ತು ಪರ್ಯಾಯ ಹಾಗು ನಾವಿನ್ಯಯುತ ಶಿಕ್ಷಣವು ಒಂದು ಕಿಲೋಮೀಟರ್ ವ್ಯಾಪ್ತಿಯಲ್ಲಿ ಶಾಲೆ ಇರದ ಕಡೆ ಶಿಕ್ಷಣ ಖಾತರಿ ಶಾಲೆಗಳನ್ನು ತೆರೆಯಲು ಪ್ರೋತ್ಸಾಹಿಸುತ್ತದೆ. ಶಾಲೆಯಿಂದ ಹೊರಗುಳಿದ ಮಕ್ಕಳನ್ನು ಮುಖ್ಯವಾಹಿನಿಗೆ ತರಲು ವಿಶೇಷ ಸೇತುಬಂಧ ಕಾರ್ಯಕ್ರಮ ವಿನ್ಯಾಸಗೊಳಿಸಬಹುದು. ಬಾಲಕಾರ್ಮಿರು, ಬೀದಿ ಮಕ್ಕಳಂತಹ ವಿಭಿನ್ನ ಗುಂಪಿನ ಮಕ್ಕಳಿಗೆ ನಿರ್ಧಿಷ್ಟ ನಾವಿನ್ಯಯುತ ಕಾರ್ಯತಂತ್ರಗಳನ್ನು ಹಮ್ಮಿಕೊಳ್ಳಬಹುದು.

## 9.2.5 ನಗರ ಪ್ರದೇಶದಲ್ಲಿನ ಅವಕಾಶವಂಚಿತ ಮಕ್ಕಳು

ನಗರದ ಪ್ರದೇಶದಲ್ಲಿನ ಅವಕಾಶ ವಂಚಿತ ಮಕ್ಕಳ ಶಿಕ್ಷಣದ ಕಡೆ ಗಮನವಹಿಸಬೇಕಾದ ಅವಶ್ಯಕತೆ ಇದೆ. ಇತ್ತೀಚಿನ ಅಧ್ಯಯನಗಳು ನಗರ ಪ್ರದೇಶದಲ್ಲಿನ ಬಡಮಕ್ಕಳ ಸಮಸ್ಯೆಗಳನ್ನು ತೋರಿಸಿವೆ. ನಗರ ಪ್ರದೇಶದಲ್ಲಿನ ಶಾಲೆಗಳ ನಿರ್ವಹಣೆಯ ವಿವಿಧ ಆಢಳಿತ ವ್ಯವಸ್ಥೆಯು ಇದ್ದರೂ ಸಹ ಪ್ರಾಥಮಿಕ ಶಿಕ್ಷಣದ ಸಾರ್ವತ್ರಿತರಣವು ನಗರ ಪ್ರದೇಶದಲ್ಲಿನ ಅವಕಾಶ ವಂಚಿತ ಮಕ್ಕಳನ್ನು ತಲುಪಿಲ್ಲ. ಸರ್ಕಾರದೊಡನೆ ಕೆಲವು ಸ್ವಯಂ ಸೇವಾ ಸಂಸ್ಥೆಗಳು ಈ ನಿಟ್ಟಿನಲ್ಲಿ ಶ್ರಮವಹಿಸುತ್ತಿವೆ. ಸರ್ವ ಶಿಕ್ಷಣ ಅಭಿಯಾನದ ಎಲ್ಲಾ ನಿಯಮಗಳು ನಗರ ಪ್ರದೇಶಗಳಿಗೆ ಅನ್ವಯಿಸುತ್ತವೆ ವಾರ್ಡ್ ಗಳ ಜೊತಗೆ ನಗರ ಪ್ರದೇಶದ ಕೊಳಚೆ ಪ್ರದೇಶಗಳು ಸಹ ಈ ಯೋಜನೆಯ ವ್ಯಾಪ್ತಿಗೆ ಒಳಪಡುತ್ತವೆ. ನಗರ ಪ್ರದೇಶಗಳು ಬೀದಿ ಮಕ್ಕಳ ಶಿಕ್ಷಣ, ಚಿಂದಿ ಆಯುವ ಮಕ್ಕಳ ಶಿಕ್ಷಣ, ಮನೆಗೆಲಸಗಳಲ್ಲಿ ನಿರತರಾಗಿರುವ ಪೋಷಕರ ಮಕ್ಕಳ ಶಿಕ್ಷಣ, ಕೈಗಾರಿಕೆಗಳಲ್ಲಿ ದುಡಿಯುವ ಮಕ್ಕಳ ಶಿಕ್ಷಣ, ಮನೆಗಳಲ್ಲಿ ಹಾಗು ಟೀ ಅಂಗಡಿಗಳಲ್ಲಿ ದುಡಿಯಿವ ಮಕ್ಕಳ ಶಿಕ್ಷಣದಂತಹ ಹಲವು ಸಮಸ್ಯೆಗಳನ್ನು ಹೊಂದಿವೆ. ಈ ರೀತಿಯ ಮಕ್ಕಳ ಶೈಕ್ಷಣಿಕ ಸಮಸ್ಯೆಗಳನ್ನು ಎದುರಿಸಲು ವಿವಿಧ ವಿಧಾನಗಳು ಹಾಗು ಕಾರ್ಯತಂತ್ರಗಳ ಅವಶ್ಯಕತೆ ಇದೆ. ನಗರ ಪ್ರದೇಶದಲ್ಲಿನ ಶಾಲೆಗಳ ಪ್ರತ್ಯೇಕಆಡಳಿತದ ಜೊತೆಗೆ ವಿವಿಧ ಇಲಾಖೆಗಳು ಹಾಗು ಸ್ಥಳೀಯ ಸಂಸ್ಥೆಗಳೊಡನೆ ಸಂಯೋಜನೆ ಅವಶ್ಯಕವಾದುದು.

ಸಣ್ಣ ನಗರ ಪ್ರದೇಶಗಳಲ್ಲಿ ಪ್ರತ್ಯೇಕ ಯೋಜನೆ ಅಥವಾ ಜಿಲ್ಲಾ ಯೋಜನೆಗಳಲ್ಲಿ ಈ ರೀತಿಯ ಮಕ್ಕಳ ಶಿಕ್ಷಣಕ್ಕೆ ಯೋಜನೆ ರೂಪಿಸಬೇಕು. ಈ ಸಂದರ್ಭಗಳಲ್ಲಿ ಸ್ವಯಂ ಸೇವಾ ಸಂಸ್ಥೆಗಳು ಮತ್ತು ಮುನಿಸಿಪಲ್ ಸಂಸ್ಥೆಗಳ ಪಾಲುದಾರಿಕೆ ಅಗತ್ಯವಾಗಿರುತ್ತದೆ. ನಗರದ ಪ್ರದೇಶದಲ್ಲಿನ ಕಡಿಮೆ ಆದಾಯದ ಪ್ರದೇಶದಲ್ಲಿ ವಾಸಿಸುವ ಮಕ್ಕಳಿಗೆ ವಿಶೇಷ ಮಧ್ಯವರ್ತನೆಗಳ ಅವಶ್ಯಕತೆ ಇದೆ. ಇವರನ್ನು ನಗರ ಪ್ರದೇಶದ ಬಡವರು ಎಂದು ಕರೆಯಲಾಗುತ್ತದೆ. ನಗರ ಪ್ರದೇಶದ ಬಡ ಮಕ್ಕಳು ಕೇವಲ ಆರ್ಥಿಕವಾಗಿ ಮಾತ್ರವೇ ಬಡವರಾಗಿರದೇ  ಶಿಕ್ಷಣದಲ್ಲಿಯೂ ಸಹ ಹಿಂದುಳಿದವರಾಗಿರುತ್ತಾರೆ. ಈ ಮಕ್ಕಳಿಗೆ ಪ್ರಾಥಮಿಕ ಶಿಕ್ಷಣ ತಲುಪಿಸುವುದು ಒಂದು ಸವಾಲಾಗಿ ಉಳಿದಿದೆ.

ನಗರ ಪ್ರದೇಶದ ಅವಕಾಶ ವಂಚಿತ ಮಕ್ಕಳಿಗೆ ಶಿಕ್ಷಣ ನೀಡುವಲ್ಲಿ ಸೂಕ್ತ ದತ್ತಾಂಶ, ಮೂಲಭೂತ ಸೌಕರ್ಯಗಳ ಸಮಸ್ಯೆ ಇದೆ. ಹೀಗಿದ್ದರೂ ಬಹಳಷ್ಟು ಸಂಖ್ಯೆಯ ಸಂಸ್ಥೆಗಳು ಈ ಕ್ಷೇತ್ರದಲ್ಲಿ ಕೆಲಸ ಮಾಡುತ್ತಿವೆ. ಹೀಗಿದ್ದರೂ ಸಹ ಬಹಳಷ್ಟು ಮಕ್ಕಳು ಈ ಸೌಲಭ್ಯದಿಂದ ಹೊರಗುಳಿದಿದ್ದಾರೆ. ಈ ಮಕ್ಕಳಲ್ಲಿ ಬಹುತೇಕರು ವಲಸೆ ಕುಟುಂಬಗಳಿಗೆ ಸೇರಿದವರಾಗಿರುತ್ತಾರೆ. ನಗರ ಪ್ರದೇಶದ ಸರ್ಕಾರಗಳು ಈ ಮಕ್ಕಳಿಗೆ ಪ್ರಾಮುಥಮಿಕ ಶಿಕ್ಷಣ ನೀಡುವಲ್ಲಿ ಸವಾಲು ಎದುರಿಸುತ್ತಿವೆ. ನಗರ ಪ್ರದೇಶದ ಬಡ ಮಕ್ಕಳನ್ನು ಈ ರೀತಿಯಾಗಿ ವಿಂಗಡಣೆ ಮಾಡಲಾಗುತ್ತದೆ.

1. ಪುನರ್ವಸತಿ ಕಾಲೋನಿಗಳಲ್ಲಿ ಮತ್ತು ಕೊಳಚೆ ಪ್ರದೇಶದಲ್ಲಿ ವಾಸಿಸುವ ಮಕ್ಕಳು
2. ಮನೆಗೆಲಸ ಮಾಡುವ ಮಕ್ಕಳೂ ಸೇರಿದಂತೆ ಬಾಲ ಕಾರ್ಮಿಕರು
3. ಬೀದಿ ಮಕ್ಕಳು
4. ಲೈಂಗಿಕ ಕಾರ್ಯಕರ್ತರ ಮಕ್ಕಳು
5. ವಲಸೆ ಕಾರ್ಮಿಕರ ಮಕ್ಕಳು
6. ಬಾಲ ಮಂದಿರದ ಮಕ್ಕಳು, ಬಾಲಾಪರಾಧಿಗಳು
7. ಬಾಲ ಬಿಕ್ಷುಕರು
8. ನಗರ ಪ್ರದೇಶದ ಬಡ ಅಂಗವಿಕಲ ಮಕ್ಕಳು

ಈ ಗುಂಪಿನ ಮಕ್ಕಳು ದೀರ್ಘಾವದಿ  ಸಹಾಯವನ್ನು ಹಾಗು ವೈಯುಕ್ತಿಕ ಗಮನವಹಿಸುವಿಕೆಯನ್ನು ಬಯಸುತ್ತವೆ ಈ ಗುಂಪಿನ ಮಕ್ಕಳಿಗೆ ಯೋಜನೆ ರೂಪಿಸುವಾಗ, ವಿವಿಧ ಕಾರ್ಯತಂತ್ರಗಳು ಬಹಳ ಪ್ರಮುಖವಾದುವು ಸರ್ವಶಿಕ್ಷಣ ಅಭಿಯಾನವು ಸಹ ವಿವಿಧ ಯೋಜನೆಗಳ ಮೂಲಕ ಈ ಗುಂಪಿನ ಮಕ್ಕಳ ಶಿಕ್ಷಣಕ್ಕ್ಆಗಿ ಶ್ರಮಿಸುತ್ತಿದೆ

## 9.2.6 ಕೆಲಸ ಮಾಡುವ ಮಕ್ಕಳು

ಬಾಲ ಕಾರ್ಮಿಕರನ್ನು ಭಾರತದಲ್ಲಿ ನಿಷೇದಿಸಲಾಗಿದೆ. ಚಿಕ್ಕ ಮಕ್ಕಳನ್ನು ಕೆಲಸಕ್ಕೆ ತೆಗೆದುಕೊಳ್ಳುವವರನ್ನು ಸಹ ಶಿಕ್ಷಿಸಲಾಗುವುದು. ಹೀಗಿದ್ದರೂ ಮನೆಯಲ್ಲಿನ ಬಡತನವು ಮಕ್ಕಳನ್ನು ಕಾರ್ಮಿಕರನ್ನಾಗಿಸಲು ಪ್ರೋತ್ಸಾಹಿಸುತ್ತಿದೆ. ಆದ್ದರಿಂದ ಈ ಮಕ್ಕಳು ಶಾಲಾ ಸಮಯದಲ್ಲಿ ಶಾಲೆಗೆ ಬರಲು ಸಾಧ್ಯವಾಗುವುದಿಲ್ಲ. ಈ ,ಮಕ್ಕಳನ್ನು ಕೆಲಸದಿಂದ ಬಿಡಿಸಿ ಶಾಲಗೆ ಸೇರಿಸುವುದು ಒಂದು ಪರಿಹಾರವಾದರೆ, ಇದು ಪೋಷಕರಿಗೆ ಸ್ವಲ್ಪ ಮಟ್ಟಿನ ಹಣಕಾಸಿನ ಪರಿಹಾರ ನೀಡುವುದು ಸವಾಲಾಗುತ್ತದೆ.  ಈ ಮಕ್ಕಳನ್ನು ರಾತ್ರಿ ಶಾಲೆಗಳಿಗೆ ಸೇರಿಸುವ ಮೂಲಕ ಇದಕ್ಕೆ ಪರಿಹಾರ ಕಾಣಬಹುದು.

ಸಧ್ಯದ ಸಂದರ್ಭದಲ್ಲಿ ನಗರ ಪ್ರದೇಶದಲ್ಲಿ ಬಹಳಷ್ಟು ರಾತ್ರಿ ಶಾಲೆಗಳಿವೆ. ಮಹಾನಗರಗಳಲ್ಲಿ ಈ ಶಾಳೆಗಳಿಗೆ ದಾಖಲಾಗುವ ಮಕ್ಕಳ ಸಂಖ್ಯೆಯು ಸಹ ಹೆಚ್ಚಾಗಿದೆ. ಈ ಶಾಲೆಗಳಲ್ಲಿನ ಸಮಸ್ಯೆಯೆಂದರೆ ಇಲ್ಲಿ ಸಾಮಾನ್ಯ ಶಾಲೆಗಳ ಪಠ್ಯಕ್ರಮವನ್ನೇ ಬೋಧಿಸಲು ಒತ್ತಾಯಪಡಿಸಲಾಗುತ್ತಿದೆ. ಆದ್ದರಿಂದ ಈ ಶಾಲೆಗಳಿಗಾಗಿ ವಿಶೇಷ ಪಠ್ಯಕ್ರಮ ಯೋಜಿಸುವುದು ಅಗತ್ಯವಾಗಿದೆ. ಅವರು ಸಾಮಾನ್ಯ ಶಾಲೆಯ ಮಕ್ಕಳಿಗಿಂತ ದೊಡ್ಡವರಾಗಿರುತ್ತಾರೆ ಆದ್ದರಿಂದ ಅವರಿಗೆ ವಿಭಿನ್ನವಾಗಿ ಬೋಧಿಸಬೇಕಾಗುತ್ತದೆ. ಈ ಪಠ್ಯಕ್ರಮು ಆವರಿಗೆ ಜೀವನ ಕೌಶಲಗಳನ್ನು ಕಲಿಸುವಂತೆ ಇರಬೇಕು.

### 9.2.7 ಅಲ್ಪಸಂಖ್ಯಾತ ಮಕ್ಕಳ ಶಿಕ್ಷಣ

ಸಾಮಾನ್ಯವಾಗಿ ಸಮಾಜದಲ್ಲಿನ ಬಹುಸಂಖ್ಯಾತ ಕುಟುಂಬದ ಮಕ್ಕಳ ಅವಶ್ಯಕತೆಗಳಿಗೆ ಅನುಗುಣವಾಗಿ ಶಿಕ್ಷಣವನ್ನು ಯೋಜಿಸಲಾಗುತ್ತದೆ. ಇದರ ಪರಿಣಾಮವಾಗಿ ಅಲ್ಪ ಸಂಖ್ಯಾತ ಸಮುದಾಯದ ಮಕ್ಕಳು ಶಾಲಾ ಪರಿಸರದಿಂದ ಹೊರಗುಳಿದಂತೆ ಭಾಸವಾಗುತ್ತಾರೆ. ಇದಕ್ಕೆ ಕೆಲವು ಕಾರಣಗಳನ್ನು ಇಲ್ಲಿ ನೀಡಲಾಗಿದೆ.

1. ಪಠ್ಯಪುಸ್ತಕದಲ್ಲಿ ಬಳಸಿದ ಮತ್ತು ತರಗತಿಯಲ್ಲಿ ಬೋಧಿಸುವ ಭಾಷೆ ವಿಧ್ಯಾರ್ಥಿಗಳ ಮಾತೃಭಾಷೆಯಿಂದ ಭಿನ್ನವಾಗಿರುವುದು

2. ಪಠ್ಯ ಪುಸ್ತಕದಲ್ಲಿ ಬಳಸುವ ಅನುಭವ ಮತ್ತು ಉದಾಹರಣೆಗಳು ಈ ಮಕ್ಕಳಿಗೆ ಪರಿಚಿತವಾಗಿರುವುದಿಲ್ಲ.

3. ಮಕ್ಕಳು ವಿಷಯವು ತಮಗೆ ಸೂಕ್ತವಾದುದಲ್ಲ ಎಂದು ಭಾವಿಸಬಹುದು

## 9.3 ಶೈಕ್ಷಣಿಕ ಬೆಂಬಲ ವ್ಯವಸ್ಥೆ

ಶಿಕ್ಷಕರ ಬಲವರ್ಧನೆಯು ಶಾಲಾ ಶಿಕ್ಷಣದಲ್ಲಿ ತುಂಬಾ ಕ್ಲಿಷ್ಟಕರವಾದುದು. ಶಿಕ್ಷಕರನ್ನು ವಿವಿಧ ರೀತಿಯಲ್ಲಿ ಬಲವರ್ಧನೆಗೊಳಿಸಬಹುದು. ವೇತನ ಹೆಚ್ಚಳ, ಶಾಲಾ ಸೌಲಭ್ಯಗಳ ಹೆಚ್ಚಳ, ತರಗತಿ ಬೋಧನೆಯಲ್ಲಿ ಸ್ವಾತಂತ್ರ್ಯ ಮುಂತಾದವು. ಕೆಲವು ದೇಶಗಳು ಶಿಕ್ಷಕ ಬೆಂಬಲ ವ್ಯವಸ್ಥೆಯನ್ನು ಜಾರಿಗೊಳಿಸಿವೆ. ಶಿಕ್ಷಕರು ತಮಗೆ ಬೇಕಾದ ರೀತಿಯ ಸಹಾಯವನ್ನು ಈ ಸಂಸ್ಥೆಗೆ ಬೇಡಿಕೆ ಸಲ್ಲಿಸಬಹುದು ಹಾಗು ಈ ಸಂಸ್ಥೆಯು ಉಚಿತವಾಗಿ ತಡ ಮಾಡದೇ ಸಹಾಯ ಮಾಡುತ್ತದೆ. ಭಾರತದಲ್ಲಿ ನಾವು ಈ ರೀತಿಯ ವ್ಯವಸ್ಥೆ ಹೊಂದಿಲ್ಲ. ಜಿಲ್ಲಾ ಹಂತದಲ್ಲಿ ಡಯಟ್‌ಗಳನ್ನು , ತಾಲೂಕು ಮಟ್ಟದಲ್ಲಿ ಬಿ.ಆರ್.ಸಿ ಗಳನ್ನು ಹಾಗು ಸಿ.ಆರ್.ಸಿಗಳನ್ನು ಸ್ಥಾಪಿಸಲಾಗಿದ್ದು ಈ ಮೂಲಕ ಶಿಕ್ಷಕರಿಗೆ ಸಹಾಯ ಮಾಡಲಾಗುತ್ತದೆ. ಸೇವಾ ಶಿಕ್ಷಕರು ಈ ಸ್ಥಳಗಳಲ್ಲಿನ ಸಂಪನ್ಮೂಲ ಶಿಕ್ಷಕರನ್ನು ಸಂಪರ್ಕಿಸುವ ಮೂಲಕ ಸಹಾಯ ಪಡೆಯಬಹುದು.

ಇದರಲ್ಲಿ ತಂತ್ರಜ್ಞಾನ ಬಳಕೆಯು ಸಹ ತುಂಬಾ ಅಭಿವೃದ್ದಿಗೊಂಡಿದೆ ಸಮಾಜದ ಪ್ರಮುಖವಾದ ಶಾಲೆಯು ಈ ತಂತ್ರಜ್ಞಾನ ಬಳಕೆಯಿಂದ ಹೊರಗುಳಿಯಬಾರದು. ಕಂಪ್ಯೂಟರ್ ಹಾಗು ಪ್ರೊಜೆಕ್ಟರ್ ಗಳು ಶಾಲೆಗೆ ಆಗಮಿಸಿವೆ. ಇದು ಶಿಕ್ಷಕರು ಶಾಲಾ ವಿಷಯಗಳನ್ನು ಪರಿಣಾಮಕಾರಿಯಾಗಿ ಭೋದಿಸಲು ಸಹಾಕರಿಯಾಗಿದೆ.

ಇಸ್ರೋ ಸಂಸ್ಥೆಯು ಶೈಕ್ಷಣಿಕ ಕ್ಷೇತ್ರಕ್ಕೆ ಸಹಾಯ ಮಾಡಲು ಮುಂದೆ ಬಂದಿದ್ದು ಅಕ್ಟೋಬರ್ ೨೦೦೧ ರಲ್ಲಿ ಎಜ್ಯುಸಾಟ್ ಸಾಟಲೈಟ್‌ನ್ನು ಉಡಾವಣೆ ಮಾಡಿದೆ. ಈ ಸಾಟ್‌ಲೈಟ್ ಶೈಕ್ಷಣಿಕ ಉದ್ದೇಶಗಳಿಗಾಗಿ ಬಳಕೆ ಯಾಗುತ್ತಿದೆ. ಇದರ ಮೂಲಕ ಶಿಕ್ಷಕರು ಒಟ್ಟಾಗಿ ಕಲಿಯಬಹುದಾಗಿದೆ, ವೀಡಿಯೋ ಕಾನ್ಫರೆನ್ಸ್ ನಡೆಸಬಹುದು ಹಾಗು ತಮ್ಮ ಸಂಪನ್ಮೂಲ ಹಂಚಿಕೊಳ್ಳಬಹುದು.

ಮಾಹಿತಿ ತಂತ್ರಜ್ಞಾನ ಅಭಿವೃದ್ಧಿಯು ಜಗತ್ತನ್ನು ಕಿರಿದಾಗಿಸಿದೆ. ಇದರ ಮೂಲ ಇಬ್ಬರು ವೃತ್ತಿಪರರು ವೆಬ್ ಸೈಟ್ ಮೂಲಕ ವಿವಿಧ ಮಾಹಿತಿ ಹಂಚಿಕೊಳ್ಳಬಹುದು. ದೂರದ ಪ್ರದೇಶಗಳಲ್ಲಿ ಕೆಲಸ ಮಾಡುವ ಶಿಕ್ಷಕರು ಸಹ ಪ್ರಪಂಚದ ಯಾವುದೇ ಮೂಲೆಯಿಂದ ಮಾಹಿತಿ ಪಡೆಯಬಹುದಾಗಿದೆ. ಮುಕ್ತ ಶೈಕ್ಷಣಿಕ ಸಂಪನ್ಮೂಲಗಳು ಉಚಿತವಾಗಿ ಲಭ್ಯವಿದ್ದು ಶಿಕ್ಷಕರು ಮುಕ್ತವಾಗಿ ಬಳಸಬಹುದಾಗಿದೆ. ಅಂತರ್ಜಾಲ ಸೌಲಭ್ಯವು ಸಹ ಭಾರತದಲ್ಲಿ ವೇಗವಾಗಿದೆ. ಈ ಒ ಊಲಕ ಶಿಕ್ಷಕರು ವಿವಿಧ ಸಂಪನ್ಮೂಲಗಳನ್ನು ತರಗತಿಯಲ್ಲಿ ಬಳಸಬಹುದು.

ಶಾಲೆಗಳಿಗಾಗಿ ಮುಕ್ತ ಶೈಕ್ಷಣಿಕ ಸಂಪನ್ಮೂಲಗಳ ಬಗೆಗಿನ ಯೋಜನೆ (**OER4S**)

ಟಾಟಾ ಇನ್ಸ್‌ಟಿಟ್ಯೂಟ ರವರ ಗಣಿತ ವಿಜ್ಞಾನ ಸಂಶೋಧನಾ ಕೇಂದ್ರದ ಹೋಮಿಬಾಬಾ ವಿಜ್ಞಾನ ಶಿಕ್ಷಣ ಕೇಂದ್ರವು ಇತ್ತೀಚೆಗೆ ಉಚಿತ ಜ್ಞಾನ ಹಂಚಿಕೆಯನ್ನು ಪ್ರೋತ್ಸಾಹಿಸಿತು. (http://www.hbcse.tifr.res.in). ಇದರ ಮುಂದಿನ ಹಂತದಲ್ಲಿ ಇದು ಮುಕ್ತ ಶೈಕ್ಷಣಿಕ ಸಂಪನ್ಮೂಲಗಳನ್ನು ವಿನ್ಯಾಸಗೊಳಿಸಿತು. ಈ ಯೋಜನೆಗೆ ಮಹಾರಾಷ್ಟ್ರ ಸರ್ಕಾರದ ರಾಜೀವ್ ಗಾಂಧಿ ವಿಜ್ಞಾನ ಮತ್ತು ತಂತ್ರಜ್ಞಾನ ಸಮಿತಿಯು ಅನುದಾನ ಒದಗಿಸುತ್ತಿದೆ. ಈ ಯೋಜನೆಯ ಮೂಲಕ ಗಣಿತ ಮತ್ತು ವಿಜ್ಞಾನ ವಿಷಯದಲ್ಲಿ ಹಲವು ಸಂಪನ್ಮೂಲಗಳನ್ನು ರಚಿಸಿ MKCL ವೆಬ್ ಸೈಟ್ ಮೂಲಕ ಉಚಿತವಾಗಿ ಲಭ್ಯವಾಗಿಸಲಾಯಿತು.

ಶಿಕ್ಷಕರು, ಮಕ್ಕಳು ಮತ್ತು ಪೋಷಕರು ಶಾಲಾ ಶಿಕ್ಷಣದಲ್ಲಿ ಪ್ರಮುಖ ಭಾಗೀದಾರರೆಂದು ಗುರುತಿಸಲಾಗಿದೆ. ಸಾಮಗ್ರಿಗಳನ್ನು ಮರಾಠಿಯಲ್ಲಿ ರಚಿಸಲಾಗಿದ್ದು, ಮಹಾರಾಷ್ಟ್ರ ರಾಜ್ಯದ ಈ ಭಾಗೀದಾರರ ಅವಶ್ಯಕತೆಗೆ ಅನುಗುಣವಾಗಿ ಸಾಮಗ್ರಿಗಳನ್ನು ಅಭಿವೃದ್ಧಿಪಡಿಸಲಾಗಿದೆ. ಈ ಸಾಮಾಗ್ರಿಗಳನ್ನು ರಚಿಸಲು ವಿಶೇಷ ಸಂಪನ್ಮೂಲ ವ್ಯಕ್ತಿಗಳ ಕಾರ್ಯಾಗಾರವನ್ನು ನಡಸಲಾಗಿದೆ. ಈ ಎಲ್ಲಾ ಸಾಮಗ್ರಿಗಳನ್ನು MKCL (www.mkcl.org/mahadnyan) ವೆಬ್ ಸೈಟ್‌ನಲ್ಲಿ ಸೇರಿಸಲಾಗಿದೆ.

## 9.4 ಸಮಗ್ರ ಶಿಕ್ಷಣ

ಶಾಲಾ ವ್ಯವಸ್ಥೆಯು, ಯೋಜನಾ ತಂಡ, ನೀತಿ ನಿಯಮಗಳು ಬೋಧನಾ ಕಾರ್ಯತಂತ್ರಗಳನ್ನು ವಿವಿಧ ಹಿನ್ನೆಲೆಯ ಎಲ್ಲಾ ಮಕ್ಕಳಿಗೂ ತಲುಪುವ ರೀತಿಯಲ್ಲಿ ವಿನ್ಯಾಸಗೊಳಿಸುವುದೇ ಸಮಗ್ರ ಶಿಕ್ಷಣವಾಗಿದೆ. ಸಮಗ್ರ ಶಿಕ್ಷಣವು ಮುಖ್ಯವಾಗಿ ಮಕ್ಕಳ ಕಲಿಕಾ ಶೈಲಿಯನ್ನು ಗುರುತಿಸುವುದು ಹಾಗು ಇದಕ್ಕೆ ಪೂರಕವಾಗಿ ತರಗತಿ ಮತ್ತು ಬೋಧನಾ ಕಾರ್ಯತಂತ್ರಗಳನ್ನು ಹಮ್ಮಿಕೊಂಡು ಎಲ್ಲಾ ಮಕ್ಕಳಲ್ಲಿಯೂ ಗುಣಮಟ್ಟದ ಶಿಕ್ಷಣ ಸಾಧಿಸುವುದಾಗಿದೆ. ಶಾಲೆಗೆ ಕೊಡುಗೆ ನೀಡುವಲ್ಲಿ ಪ್ರತಿಯೊಬ್ಬರೂ ಮುಖ್ಯ, ವಿಶೇಷ ಮತ್ತು ಮೌಲ್ಯವುಳ್ಳವರು.

ಪ್ರತಿಯೊಬ್ಬ ಮಕ್ಕಳೂ ತಮಗೆ ಸ್ವಾಗತ ಸಿಗುತ್ತಿದೆ ಹಾಗು ನಮ್ಮ ಕಲಿಕಾ ಅವಶ್ಯಕತೆಗಳನ್ನು ಪೂರೈಸಲಾಗುತ್ತಿದೆ ಎಂದು ಭಾವಿಸುವಂತೆ ಮಾಡುವುದೇ ಸಮಗ್ರ ಶಿಕ್ಷಣವಾಗಿದೆ.

### ಯಾಕೆ ಸಮಗ್ರ ಶಿಕ್ಷಣವು ನಮ್ಮ ಶಾಲೆಯ ನಿಯಮವಾಗಿಲ್ಲ

ಹಲವು ವರ್ಷಗಳ ಹಿಂದೆ, ವಿಶೇಷ ಅಗತ್ಯವುಳ್ಳ ಮಕ್ಕಳಿಗಾಗಿ ವಿಶೇಷ ತರಗತಿಗಳು ರಚನೆಯಾದವು. ವಿಶೇಷ ಶಿಕ್ಷಕರು ಈ ಮಕ್ಕಳಿಗೆ ಸಾಮಾನ್ಯ ಶಾಲೆಯ ಮಕ್ಕಳ ಜೊತೆ ಬೋಧಿಸುವುದಕ್ಕಿಂತ ಪ್ರತ್ಯೇಕವಾಗಿ ಭೋಧಿಸುವುದು ಸೂಕ್ತ ವೆಂದು ಅಭಿಪ್ರಾಯಪಟ್ಟರು. ಆದರೆ ಕಾಲಕ್ರಮೇಣ ಸಮಗ್ರ ಶಿಕ್ಷಣವು ಎಲ್ಲಾ ಮಕ್ಕಳಿಗೂ ಸಹಾಯಕವಾಗಬಲ್ಲ ಸಾಧನವೆಂದು ತಿಳಿಯಿತು.

### ಸಮಗ್ರ ಶಿಕ್ಷಣ ಎಂದರೇನು ?

ಯುನೆಸ್ಕೋ ಪ್ರಕಾರ “ಎಲ್ಲಾ ಕಲಿಕಾರ್ಥಿಗಳ ಅವಶ್ಯಕತೆಗೆ ಅನುಗುಣವಾಗಿ ಬೋಧಿಸುವು ಮೂಲಕ ಅವರು ಕಲಿಕೆಯಲ್ಲಿ , ಸಂಸ್ಕೃತಿಯಲ್ಲಿ, ಸಮುದಾಯದಲ್ಲಿ ಸಕ್ರಿಯವಾಗಿ ಭಾಗವಹಿಸುವುದು, ಶಿಕ್ಷಣದಲ್ಲಿ ಹೊರಗುಳಿಯುವುದನ್ನು ಕಡಿಮೆ ಮಾಡುವುದು ಹಾಗು ಶಿಕ್ಷಣದ ಒಳಗೇ ಎಲ್ಲಾ ಸಾಧಿಸುವಂತೆ ಮಾಡುವುದೇ ಸಮಗ್ರ ಶಿಕ್ಷಣ ವಾಗಿದೆ. ಇಡೀ ಶಿಕ್ಷಣ ವ್ಯವಸ್ಥೆಯು ಶಿಕ್ಷಕರು ಮತ್ತು ಮಕ್ಕಳು ಸವಾಲುಗಳನ್ನು ಎದುರಿಸುವಂತಹ ಕಲಿಕಾ ವಾತಾವರಣ ರೂಪಿಸುವುದೇ ಇದರ ಗುರಿಯಾಗಿದೆ. ಈ ವಿಧಾನದ ಮೂಲಕ ಪ್ರತಿಯೊಬ್ಬರ ಕಲಿಕಾ ಅವಶ್ಯಕತೆಗಳಿಗೆ ಪೂರಕವಾದ ವಾತಾವರಣ ರೂಪಿಸುವುದಾಗಿದೆ.

### 9.4.1 ಅಂತರಾಷ್ಟ್ರೀಯ ಸನ್ನಿವೇಶ

ಸಮಗ್ರ ಶಿಕ್ಷಣವು ಇತ್ತೀಚಿನ ವರ್ಷಗಳಿಂದ ಪ್ರಾಮುಖ್ಯತೆ ಪಡೆದುಕೊಂಡಿತು. ಇದರ ನೈಜತೆಯನ್ನು ಅಂತರಾಷ್ಟ್ರೀಯ ಸನ್ನಿವೇಶದ ಶಿಕ್ಷಣದ ಇತಿಹಾಸದಲ್ಲಿ ಹುಡುಕಬಹುದಾಗಿದೆ.

ಸಮಗ್ರ ಶಿಕ್ಷಣವು ಈಗ ಅಂತರಾಷ್ಟ್ರೀಯ ವಿದ್ಯಾಮಾನವಾಗಿದೆ. ಇದರ ಮೂಲವು ಅಭಿವೃದ್ಧಿ ಹೊಂದಿದ ರಾಷ್ಟ್ರಗಳಲ್ಲಿದೆ. ಈ ರಾಷ್ಟ್ರಗಳು ವಿಶೇಷ ಅಗತ್ಯವುಳ್ಳ ಮಕ್ಕಳಿಗೆ ವಿಶೇಷ ಶಾಲೆಗಳನ್ನು ನಡೆಸುವ ಪದ್ಧತಿಯನ್ನು ಕೈಬಿಟ್ಟು ಸಾಮಾನ್ಯ ಶಾಲೆಯಲ್ಲಿಯೇ ಎಲ್ಲರೀಗೂ ಸಮಾನ ಶಿಕ್ಷಣ ನೀಡುತ್ತಿವೆ. ಇದರಿಂದ ಸಾಮಾನ್ಯ ತರಗತಿಗಳ್ಲಿಯೂ ಸಹ ಸಮಗ್ರ ಶಿಕ್ಷಣ ನೋಡಬಹುದಾಗಿದೆ. ಹಲವು ಅಂತರಾಷ್ಟ್ರೀಯ ನಿರ್ಧಾರಗಳಲ್ಲಿ ಮಕ್ಕಳ ಶಿಕ್ಷಣ ಹಕ್ಕು ಪ್ರತಿಬಿಂಬಿಸುವುದನ್ನು ಕಾಣಬಹುದು.

### 9.4.2 ಸಮಗ್ರ ಶಿಕ್ಷಣದ ಅನುಕೂಲಗಳು

ಹಲವು ಅಭಿವೃದ್ದಿಪರ ರಾಷ್ಟ್ರಗಳಲ್ಲಿ ರಾಷ್ಟ್ರದ ಅಭಿವೃದ್ದಿಗಾಗಿಯೇ ಸಮಗ್ರ ಶಿಕ್ಷಣವನ್ನು ಅಭಿವೃದ್ದಿಪಡಿಸಲಾಗುತ್ತದೆ. ಸಮಗ್ರ ಶಿಕ್ಷಣವನ್ನು ಅಭ್ಯಾಸ ಮಾಡುವುದು ಈ ಕೆಳಗಿನಅಂಶಗಳಿಗೆ ಫಲಪ್ರದವಾಗಿರುತ್ತದೆ. ಸಂಪನ್ಮೂಲಗಳ ಪರಿಣಾಮಕಾರಿ ಬಳಕೆ; ಶಿಕ್ಷಣವು ಸಂಪನ್ಮೂಲ ಉದ್ದೇಶಿತ ಉದ್ದಿಮೆಯಾಗಿದೆ ಮತ್ತು ಇದು ಇತರೇ ಬೇಡಿಕೆಗಳ ವಿರುದ್ಧ ಸ್ಪರ್ಧಿಸಬೇಕರುತ್ತದೆ. ಆದ್ದರಿಂದ ಬಹುತೇಕ ಅಭಿವೃದ್ದಿ ಹೊಂದಿದ ರಾಷ್ಟ್ರಗಳಲ್ಲಿ ಶಿಕ್ಷಣವು ನಿರ್ಣಾಯಕ ಸಂಪನ್ಮೂಲವಾಗಿರುತ್ತದೆ. ವಿಶೇಷ ಗುಂಪಿನ ಮಕ್ಕಳಿಗೆ ಶಾಳೆಗಳನ್ನು ಸ್ಥಾಪಿಸುವುದು ಈ ರಾಷ್ಟ್ರಗಳಿಗೆ ಸಾಧ್ಯವಾಗುದಿರಬಹುದು. ಆದ್ದರಿಂದ ನಿಯಮಿತ ಸಂಪನ್ಮೂಲಗಳನ್ನು ಎಲ್ಲಾ ಮಕ್ಕಳಿಗೂ ಬಳಸುವುದೇ ಇದಕ್ಕೆ ಪರಿಹಾರವಾಗಿರುತ್ತದೆ.

ವೆಚ್ಚ ಪರಿಣಾಮಕಾರಿತ್ವ : ಸಮಗ್ರ ಶಿಕ್ಷಣವು ವೆಚ್ಚ ಪರಿಣಾಮಕಾರಿತ್ವದಿಂದ ಕೂಡಿರುವುದು ಆಗಿದೆ. ಸಮಗ್ರತೆಯು ಅಂಗವಿಕಲರಿಗೆಮಾತ್ರ ವಲ್ಲದೇ ಇತರೇ ಕಲಿಕಾರ್ಥಿಗಳಿಗೂ ಸಹ ಅನ್ವಯಿಸುತ್ತದೆ. ವಿವಿಧ ಕಲಿಕಾರ್ಥಿಗಳ ನಡುವೆ ವಿಭಿನ್ನವಾದನರೀತಿಯಲ್ಲಿ ಉತ್ತಮ ಶಿಕ್ಷಣವನ್ನು ಸಾಧಿಸಿದೆ.

ವಿಕೇಂದ್ರೀಕರಣ ; ಸಮಗ್ರ ಶಿಕ್ಷಣದ ಅಭ್ಯಾಸವು ವಿಕೇಂದ್ರೀಕರಣವನ್ನು ಪ್ರೋತ್ಸಾಹಿಸುತ್ತದೆ. ವಿಕೇಂದ್ರೀಕರಣವು ಸ್ಥಳೀಯ ಮತ್ತು ರಾಷ್ಟ್ರ ಮಟ್ಟದ ಸರ್ಕಾರಗಳು ಖರ್ಚು ಮಾಡುವ ಕೇಂದ್ರ ನಿರ್ವಹಣೆ ಮತ್ತು ಆಡಳಿತ ವೆಚ್ಚವನ್ನು ಕಡಿಮೆ ಮಾಡುವುದಕ್ಕೆ ಒಂದು ಉದಾಹರಣೆಯಾಗಿದೆ. ಇದು ಸ್ಥಳೀಯ ಮಟ್ಟದಲ್ಲಿ ಸ್ಥಳೀಯ ಸಮುದಾಯಗಳ ಭಾಗವಹಿಸುವಿಕೆಯ ಮೂಲಕ ನಿರ್ಧಾರ ತೆಗೆದುಕೊಳ್ಳುವುದನ್ನು ಸಹ ಪ್ರೋತ್ಸಾಹಿಸುತ್ತದೆ.

### 9.4.3 ಸಮಗ್ರ ಶಾಲೆ ಮತ್ತು ತರಗತಿ :

ಸಮಗ್ರ ಶಾಲೆಯ ಮುಖ್ಯ ಉದ್ದೇಶವೇ ಎಲ್ಲರೂ ಸಮಾನವಾಗಿ ಅವಕಾಶಗಳನ್ನು ಪಡೆಲಯ ಸಾಧ್ಯವಾಗುವಂತಹ ಸಮಗ್ರ ಸಮುದಾಯದ ಅಭಿವೃದ್ಧಿಯನ್ನು ಸಾಧಿಸುವುದೇ ಆಗಿದೆ. ಈ ಉದ್ದೇಶವನ್ನು ಸಾಧಿಸಲು ವಿವಿಧ ಕಲಿಕಾರ್ಥಿಗಳ ನಡುವೆ ವೈವಿಧ್ಯತೆ ಇರಬೇಕು. ಎಲ್ಲರಿಗೂ ಶಾಲೆಯನ್ನು ಒದಗಿಸುವುದು ಈ ಸಮಗ್ರ ಶಿಕ್ಷಣದ ಕೇಂದ್ರ ಪರಿಕಲ್ಪನೆಯಾಗಿದೆ. ಇದು ಶಾಲೆಯ ಮನೋಸಾಮಾಜಿಕ ಹಾಗು ಭೌತಿಕ ಪರಿಸವನ್ನು ಒಳಗೊಂಡಂತೆ ಪಠ್ಯಕ್ರಮ ಬೋಧನೆಯನ್ನು ಒಳಗೊಂಡಿದೆ. ಈ ಎಲ್ಲಾ ಅಂಶಗಳನ್ನು ಪರಿಗಣಿಸಿದಾಗ, ಶಾಲೆಯು ವಿಭಿನ್ನ ನ್ಯೂನತೆಯುಳ್ಳ ಮತ್ತು ಸಮಾಜಿಕ ಹಿನ್ನೆಲೆಯುಳ್ಳ ಕಲಿಕಾರ್ಥಿಗಳಿಗೆ ಲಭ್ಯವಿರಬೇಕು. ಶಾಲೆಯು ಸಮಗ್ರ ಕಲಿಕಾ ಪರಿಸರವನ್ನು ಹೊಂದಿರಬೇಕು ಹಾಗು ಈ ಮೂಲಕ ವಿಧ್ಯಾರ್ಥಿಗಳ ಶೈಕ್ಷಣಿಕ, ವೃತ್ತಿಪರ ಮತ್ತು ವೈಯುಕ್ತಿಕ ಬೆಳವಣಿಗೆಯಾಗಬೇಕು.

ಸಮಗ್ರ ಶಿಕ್ಷಣ ದ ಬಹುಮುಖ್ಯ ಅಂಶವೆಂದರೆ ಶಿಕ್ಷಕರ ಮನೋಭಾವ. ಶಿಕ್ಷಕರು ಯಾವು ರೀತಿಯ ಮಕ್ಕಳನ್ನು ಬೇಕಾದರೂ ಅಭಿವೃದ್ಧಿ ಪಡಿಸಬಹುದು ಎಂಬ ಮನೋಭಾವ ಹೊಂದಿದ್ದರೆ, ಅವರಿದಂದ ಎಲ್ಲಾ ಬೆಳವಣಿಗೆಯೂ ಸಾಧ್ಯವಾಗುತ್ತದೆ. ಶಿಕ್ಷಕರು ಪ್ರತಿಯೊಬ್ಬ ಕಲಿಕಾರ್ಥಿಯಲ್ಲಿನ ವಿವಿಧ ನ್ಯೂನತೆಗಳನ್ನು ಅರ್ಥೈಸಿಕೊಳ್ಳಬೇಕು.

ಸರ್ವ ಶಿಕ್ಷಣ ಅಭಿಯಾಣವು ಪ್ರತಿಯೊಂದು ವಿಕಲಾಂಗ ಮಗುವಿಗೆ ವರ್ಷಕ್ಕೆ ೧೨೦೦ ರೂಗಳನ್ನು ನೀಡುತ್ತದೆ. ಈ ಹಣವನ್ನುನ ಕೇವಲ ಈ ವಿಶೇಷ ಅಗತ್ಯವುಳ್ಳ ಮಕ್ಕಳ ಅವಶ್ಯಕತೆಗಳಿಗೆ ಮಾತ್ರವೇ ಬಳಸುವುದಷ್ಟೇ ಅಲ್ಲದೇ ಸಮಗ್ರ ಶಿಕ್ಷಣದ ಗ್ರಾಮ ಮಟ್ಟದ/ಶಾಲಾ ಮಟ್ಟ ಚಟುವಟಿಕೆಗಳಿಗೂ ಸಹ ಬಳಸಬೇಕು. ಸರ್ವ ಶಿಕ್ಷಣ ಅಭಿಯಾನದ ಸಮಿತಿಯು ಜಿಲ್ಲಾ ಮಟ್ಟದಲ್ಲಿರುವ ಒಟ್ಟಾರೆ ವಿಕಲಾಂಗ ಮಕ್ಕಳ ಸಂಖ್ಯೆಗೆ ಅನುಗುಣವಾಗಿ ಅನುದಾನ ಬಿಡುಗಡೆ ಮಾಡುತ್ತದೆ. ಇದರಲ್ಲಿ ಕೆಲವು ಮಕ್ಕಳಿಗೆ ವಿಶೇಷ ಶಿಕ್ಷಕರ ಅವಶ್ಯಕತೆ ಇದ್ದರೆ, ಮತ್ತೆ ಕೆಲವು ಮಕ್ಕಳಿಗೆ ವಿಶೇಷ ಪರಿಕರಗಳ ಅಗತ್ಯ ವಿರುತ್ತದೆ.

ಈ ಹಣವನ್ನು ಮೌಲ್ಯಮಾಪನ ಶಿಭಿರಗಳು, ತರಬೇತಿ ಸಾಮಗ್ರಿ ರಚನೆ, ಸಮುದಾಯ ಅರಿವು ಶಿಭಿರ, ೪೫ ದಿನಗಳ ರಿಹ್ಯಾಬಿಲಿಟೇಷನ್ ಕೌನ್ಸಿಲ್ ಆಫ್ ಇಂಡಿಯಾದವರಿಂದ ಅಂಗೀಕೃತ ಶಿಕ್ಷಕರ ತರಬೇತಿ, ಅಗತ್ಯವಿರುವ ಸೇವೆಗಳಿಗೆ ಎನ್.ಜಿ.ಓ ಬಳಕೆ ಗಳಿಗೂ ಸಹ ಬಳಸಬಹುದಾಗಿದೆ. ಸಾಧ್ಯವಾದಷ್ಟು ವಿಶೇಷ ಅಗತ್ಯವುಳ್ಳ ಮಕ್ಕಳು ಅವರ ಕುಡುಂಬದೊಡನೆ ವಾಸವಿರಬೇಕು, ಈ ಮಕ್ಕಳಿಗೆ ಪ್ರತೀ ಜಿಲ್ಲೆಯು ಸದಾ ಸಂಪನ್ಮೂಲ ಗಳುನಲಭ್ಯವಿರುವಂತೆ ನೋಡಿಕೊಳ್ಳಬೇಕು. ಈ ಶಿಕ್ಷಣವು ಸಾಮಾನ್ಯ ಶಾಲೆಗಳಲ್ಲಿಯೇ ನಡೆಯುವಂತೆ ಮಾಡುವ ಕಡೆಗೆ ಹೆಚ್ಚು ಒತ್ತು ನೀಡಬೇಕು.

## 9.5 ಶಾಲೆಯಲ್ಲಿ ಮಕ್ಕಳ ಹಕ್ಕುಗಳ ರಕ್ಷಣೆ

ಮಕ್ಕಳ ಹಕ್ಕುಗಳ ರಕ್ಷಣೆಯ ರಾಷ್ಟ್ರೀಯ ಸಮಿತಿಯು ಮಾರ್ಚ್ ೨೦೦೭ ರಲ್ಲಿ ಮಕ್ಕಳ ಹಕ್ಕುಗಳ ರಕ್ಷಣೆಯ ಹಕ್ಕು ಕಾಯ್ದೆ ಮತ್ತ ಸಂಸತ್ತಿನ ಕಾಯ್ದೆಯ ಪ್ರಕಾರ ಜಾರಿಗೆ ಬಂತು. ಈ ಆಯೋಗವು, ಕಾನೂನು, ಪೋಲಿಸ್, ಕಾರ್ಯಕ್ರಮಗಳು ಹಾಘು ಆಡಳಿತಗಳು ಮಕ್ಕಳ ಹಕ್ಕುಗಳ ರಕ್ಷಣೆಯ ಕಾಯ್ದೆಯ ವ್ಯಾಪ್ತಿಗೆ ಒಳಪಡಬೇಕು ಎಂದು ಸೂಚಿಸಿತು. ಅಂತರಾಷ್ಟ್ರೀಯ ಕಾನೂನಿನ ಪ್ರಕಾರ ೧೮ ವರ್ಷದ ಒಳಗಿನ ಎಲ್ಲರೂ ಮಕ್ಕಳು. ಇದು ಸಾರ್ವತ್ರಿಕವಾಗಿ ಒಪ್ಪಿಕೊಂಡಿರುವ ವ್ಯಾಖ್ಯಾನವಾಗಿದ್ದು ಸಂಯುಕ್ತ ರಾಷ್ಟ್ರಗಳ ಮಕ್ಕಳ ಹಕ್ಕು ರಕ್ಷಣೆಯ ಅಡಿಯಲ್ಲಿ ಬರುತ್ತದೆ. (UNCRC). ಭಾರತವೂ ಸಹ ಈಗಾಗಲೇ ೧೮ ವರ್ಷ ವಯಸ್ಸಿನ ಒಳಗಿನ ವ್ಯಕ್ತಿಗಳನ್ನು ಮಕ್ಕಳೆಂದು ಪರಿಗಣಿಸಿದೆ. ಆದ್ದರಿಂದ ಜನರು ೧೮ ವರ್ಷ ಪೂರೈಸಿದ ನಂತರವಷ್ಟೇ ಚಾಲಾನ ಪರವಾನಗಿ ಪಡೆಯಲು, ಹಾಗು ಕಾನೂನು ದಾಖಲೆಗಳನ್ನು ಹೊಂದಲು ಸಾಧ್ಯವಾಗುತ್ತಾರೆ.

ಈ ರೀತಿ ಇರುವಾಗ, ಎಲ್ಲಾ ಮಕ್ಕಳು ಸಹ ರಕ್ಷಣೆ ಹೊಂದಿರಬೇಕು. ಕಾರಣ ಅವರ ಸಾಮಾಜಿಕ, ಆರ್ಥಿಕ, ಹಾಗು ಭೌಗೋಳಿಕ ಸ್ಥಳಗಳು. ಕೆಲವು ಮಕ್ಕಳು ಬಹಳ ಕಷ್ಟದ ಪರಿಸ್ಥಿತಿಯಲ್ಲಿದ್ದು ಅವರ ಕಡೆ ಹೆಚ್ಚಿನ ಗಮನ ನೀಡಬೇಕಾಗುತ್ತದೆ. ಅವರುಗಳೆಂದರೆ :

ನಿರ್ಗತಿಕ ಮಕ್ಕಳು, ವಲಸೆ ಮಕ್ಕಳು, ಬೀದಿ ಮಕ್ಕಳು, ಅನಾಥಾಶ್ರಮದ ಮಕ್ಕಳ;, ಕೆಲಸ ಮಾಡುವ ಮಕ್ಕಳು, ಬಿಕ್ಷೆ ಬೇಡುವ ಮಕ್ಕಳು, ಲೈಂಗಿಕ ಕಾರ್ಯಕರ್ತೆಯರ ಮಕ್ಕಳು, ಅಪಹರಿಸಲಾದ ಮಕ್ಕಳು, ಅಪರಾಧ ಪ್ರಕರಣದಲ್ಲಿ ಭಾಗಿಯಾದ ಮಕ್ಕಳು, ಪ್ರಕೃತಿ ವಿಕೋಪಕ್ಕೆ ತುತ್ತಾದ ಮಕ್ಕಳು, ಹೆಚ್.ಐ.ವಿ ಹೊಂದಿರುವ ಮಕ್ಕಳು, ಕಾಯಿಲೆಯಿಂದ ನರಳುತ್ತಿರುವ ಮಕ್ಕಳು, ವಿಕಲಾಂಗ ಮಕ್ಕಳು, ಪರಿಶಿಷ್ಟ ಜಾತಿ ಮತ್ತು ಪಂಗಡದ ಮಕ್ಕಳು.

೧೮ ವರ್ಷದ ಒಳಗಿನ ಎಲ್ಲಾ ವ್ಯಕ್ತಿಗಳು ಕಾನೂನಿನ ಎಲ್ಲಾ ರೀತಿಯ ಸಲಹೆ ಮಹಾಗು ಸಹಾಯ ಪಡೆಯಲು ಶಕ್ತರಾಗಿರುತ್ತಾರೆ. ಭಾರತದ ಸಂವಿದಾನವು ಸಹ ಎಲ್ಲಾ ಮಕ್ಕಳಿಗೂ ನಿರ್ಧಿಷ್ಟವಾದ ಹಕ್ಕುಗಳನ್ನು ಸೂಚಿಸಿದೆ. ಅವುಗಳೆಂದರೆ ;

1. ೬–೧೪ ವರ್ಷ ವಯಸ್ಸಿನ ಎಲ್ಲಾ ಮಕ್ಕಳಿಗೂ ಉಚಿತ ಮತ್ತು ಕಡ್ಡಾಯ ಪ್ರಾಥಮಿಕ ಶಿಕ್ಷಣ (Article 21 A).

2. ೧೪ ವರ್ಷದ ತನಕ ಯಾವುದೇ ಉದ್ದಿಮೆಯಲ್ಲಿ ಭಾಗವಹಿಸದಿರುವ ಹಕ್ಕು (Article 24).

3. ಅವರ ವಯಸ್ಸಿಗೆ ವಿರುದ್ಧವಾಗಿ ಯಾವುದೇ ಆರ್ಥಿಕ ಉದ್ದೇಶಕ್ಕಾಗಿ ದೌರ್ಜನ್ಯಕ್ಕೆ ಒಳಗಾಗದಂತೆ ತಡೆಯುವ ಹಕ್ಕು (Article 39(e).

4. ಸಮಾನ ಅವಕಾಶಗಳನ್ನು ಪಡೆಯುವ ಹಕ್ಕು (Article 39 (f)).

**ಇವುಗಳ ಜೊತೆಗೆ ಭಾರತದ ಸಮಾನ ನಾಗರೀಕರಾಗಿರುವ ಹಕ್ಕನ್ನು ಇವರು ಹೊಂದಿರುತ್ತಾರೆ.**

1. ಸಮಾನತೆಯ ಹಕ್ಕು (Article 14).

2. ನಿರ್ಬಂದಿಸುವುದರ ವಿರುದ್ಧದ ಹಕ್ಕು (Article 15).

3. ವೈಯುಕ್ತಿಕ ಘನತೆ ಮತ್ತು ಕಾನೂನು ಪ್ರಕ್ರಿಯೆಯ ಹಕ್ಕು (Article 21).

4. ಆರ್ಥಿಕವಾಗಿ ಹಿಂದುಳಿದವರು ಸಾಮಾಜಿಕ ಅನ್ಯಾಯ ಮತ್ತು ದೌರ್ಜನ್ಯದಿಂದ ರಕ್ಷಣೆ ಪಡೆಯುವ ಹಕ್ಕು (Article 46).

ಸಂಶೋಧನೆಗಳು, ದಾಖಲೆಗಳು ಹಾಗು ಮಧ್ಯವರ್ತನೆಗಳು ಹಲವು ರೀತಿಯ ಮಕ್ಕಳ ಹಕ್ಕಿನ ವಿಷಯಗಳನ್ನು ಗಮನಕ್ಕೆ ತಂದಿವೆ. ಅದರಲ್ಲಿ ಕೆಲವು ಶಾಲಾ ಶಿಕ್ಷಣದ, ಲಿಂಗ ತಾರತಮ್ಯದ, ಜಾತಿ ಪದ್ಧತಿಯ, ನ್ಯೂನತೆ, ಶಾಲೆಯಲ್ಲಿ ದೈಹಿಕ ಶಿಕ್ಷೆ, ಪರೀಕ್ಷಾ ಭಯ, ವಿಧ್ಯಾರ್ಥಿಗಳ ಆತ್ಮಹತ್ಯೆಯಂತಹ ವಿಷಯಗಳ ಮೇಲೆ ಕಾಳ ಹೊಂದಿವೆ. ಶಾಲೆಯಲ್ಲಿನ ಪ್ರತಿಯೊಂದು ಮಗುವ ಯಾವುದೇ ರೀತಿಯ ಅನ್ಯಾಯಕ್ಕೆ ಶಾಲಾ ಪರಿಸರದಲ್ಲಿ ತುತ್ತಾಗದಂತೆ ನೋಡಿಕೊಳ್ಳುವುದು ಶಾಲಾ ಶಿಕ್ಷಕಕರ ಜವಾಬ್ದಾರಿಯಾಗಿರುತ್ತದೆ.

## 9.6 ಉಪ ಸಂಹಾರ

ಭಾರತೀಯ ಸಮಾಜವು ಪ್ರತಿಯೊಬ್ಬ ವ್ಯಕ್ತಿ, ಸೌಲಭ್ಯ, ಸಮುದಾಯಗಳ, ಜಾತಿಗಳನ್ನೊಳಗೊಂಡ ಸಾಮಾಜಿಕ ಸಂಸ್ಥೆಯಾಗಿದೆ. ಸಮಾಜದಲ್ಲಿ ಅತೀ ಕೆಟ್ಟದಾಗಿ ಮೂಲ ಸೌಲಭ್ಯಗಳು ಹಾಗು ಬದುಕುವ ಅವಕಾಶಗಳಿಂದ ವಂಚಿತರಾದ ಸಾಮಾಜಿಕ ಗುಂಪುಗಳಿವೆ. ಜಾತಿ, ಲಿಂಗ ಹಾಗು ಸಾಮಾಜಿಕ/ಆರ್ಥಿಕವಾಗಿ ಅವಕಾಶ ವಂಚಿತ ಜನರು ಇದ್ದಾರೆ ಈ ರೀತಿಯ ಜನರು ಮಕ್ಕಳನ್ನು ಅವಕಾಶವಂಚಿತ ಮಕ್ಕಳೆಂದು ಕರೆಯಲಾಗುತ್ತದೆ. ಏಕೆಂದರೆ ಇವರು ಆರ್ಥಿಕವಾಗಿ, ಶೈಕ್ಷಣಿಕವಾಗಿ ಸೌಲಭ್ಯಗಳನ್ನು ಪಡೆಯುವಲ್ಲಿ ಅವಕಾಶಹೊಂದಿಲ್ಲದರಾಗಿರುತ್ತಾರೆ. ಇರಲ್ಲಿ ಕೆಲವು ಮಕ್ಕಳನ್ನು ವಿಶೇಷ ಅಗತ್ಯವುಳ್ಳ ಮಕ್ಕಳೆಂದು ಸಹ ಕರೆಯುತ್ತೇವೆ. ಈ ಘಟಕವು ಭಾರತದಲ್ಲಿ ಇರುವ ಅವಕಾಶ ವಂಚಿತ

ಮಕ್ಕಳ ಶಿಕ್ಷಣದ ಬಗ್ಗೆ ಗಮನವಹಿಸುತ್ತದೆ.

ಈ ಘಟಕದಲ್ಲಿ ನಾವು ಈ ವಿಶೇಷ ಗುಂಪಿನ ಮಕ್ಕಳ ದಾಖಲಾತಿ ಹಾಗು ಹಾಜರಾತಿಯ ಬಗ್ಗೆ ಚರ್ಚಿಸಿದ್ದೇವೆ. ಪರಿಶಿಷ್ಟ ಜಾತಿ / ಪಂಗಡದ ಮಕ್ಕಳು, ವಿಶೇಷ ಅಗತ್ಯವುಳ್ಳ ಮಕ್ಕಳ ಶಿಕ್ಷಣದ ಬಗೆಗೂ ಮತ್ತು ಭೌಗೋಳಿಕವಾಗಿ ದೂರದ ಪ್ರದೇಶದಲ್ಲಿರುವ ಮಕ್ಕಳ ಶಿಕ್ಷಣದ ಬಗೆಗೂ  ನಾವು ಚರ್ಚಿಸಿದ್ದೇವೆ. ಈ ಮಕ್ಕಳಿಗೆ ಶಿಕ್ಷಣ ನೀಡುವುದು ಹೇಗೆ ಎಂಬುದನ್ನು ಸಹ ನಾವು ಚರ್ಚಿಸಿದ್ದೇವೆ.

ಸಮಗ್ರ ಶಿಕ್ಷಣದ ಪರಿಕಲ್ಪನೆ ಮತ್ತು ಸೂಕ್ತತೆಯ ಬಗ್ಗೆ ವಿಸ್ತೃತವಾಗಿ ಚರ್ಚಿಸಲಾಗಿದೆ. ಈ ಘಟಕದಲ್ಲಿ ಬೇರೆ ಪ್ರದೇಶದಲ್ಲಿ ಬಾಲ ಕಾರ್ಮಿಕರಾಗಿ ದುಡಿಯುತ್ತಿರುವ ಮಕ್ಕಳನ್ನು ಹೇಗೆ ಮುಖ್ಯವಾಹಿನಿಗೆ ತರುವುದು ಎಂಬುದರ ಬಗೆಗೂ ಚರ್ಚಿಸಿದ್ದೇವೆ.

## 9.7 ಓದಲು ಸಲಹೆಗಳು ಮತ್ತು ಆಕರಗಳು

www.oecd.org/

www.wpi.edu/News/Conf/ISTAS/Presentations/iteducation.pdf

Center for Research on Effective Schooling for Disadvantaged ...

www.csos.jhu.edu/otherlinks/cds/cds.html

nvpie.org/inclusive.html

www.ibe.unesco.org/.../Interview_Clementina_Eng13Nov.p df

## 9.8 ಘಟಕದ ಕೊನೆಯ ಅಭ್ಯಾಸಗಳು

1. ಅವಕಾಶ ವಂಚಿತ ಮಕ್ಕಳ ದಾಖಲಾತಿ, ಹಾಜರಾತಿ ಬಗ್ಗೆ ವಿವರಿಸಿ
2. ಶಾಲೆ ಮತ್ತು ತರಗತಿ ಕೋಣೆ ಸಿಕ್ಷಣದಲ್ಲಿ ಸಮಗ್ರ ಶಿಕ್ಷಣವನ್ನು ವ್ಯಾಖ್ಯಾನಿಸಿ
3. ಸಮಗ್ರ ಶಿಕ್ಷಣದ ಅನುಕೂಲಗಳೇನು ?